ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಅಧ್ಯಕ್ಷರೇ, ೧೯೮೧ನೇ ಇಸವಿಯ ಕರ್ನಾಟಕ ಕಾನೂನು ನೆರವು ಮಂಡಳಿ ಶಾಸನದ ೨೨ (೪)ನೇ ಕಲಮಿನ ಮೇರೆಗೆ—

ಕರ್ನಾಟಕ ಕಾನೂನು ನೆರವು ಮಂಡಳಿಯ ೧೯೮೪-೮೫ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಗಿದೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಹಾಗೂ ಮೀನುಗಾರಿಕೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯(ಎ) ಕಲಮಿನ ಮೇರೆಗೆ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದವರ ೧೯೮೬-೮೭ನೇ ಸಾಲಿನ ಪ್ರಗತಿ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಯ ಮುಂದಿಡಲಾಗಿದೆ.

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೫೦ನೇ ಇಸವಿಯ ಸಾರಿಗೆ ನಿಗಮದ ಶಾಸನದ ೩೫ (೩) ನೇ ಕಲಮಿನ ಮೇರೆಗೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೧೯೮೫-೮೬ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಗಿದೆ. ಇನ್ನು ಅರ್ಜಿಗಳನ್ನು ಒಪ್ಪಿಸುವುದು.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಶ್ರೀ ಕೆ. ಕುಶಾಲ ಅವರ ಪರವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಪಂಗಡಕ್ಕೆ ಕೋಟೆಗಾರ, ಸೇರೆಗಾರ್ ಹಾಗೂ ಇತರ ಪಂಗಡಗಳನ್ನು ಸೇರಿಸಿರುವುದರಿಂದ ಅನ್ಯಾಯವಾಗಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ. ಹಾಗೆಯೇ ಶ್ರೀ ಬಿ. ಸ್ವಾಮಿರಾವ್ ಅವರ ಪರವಾಗಿ, ಶಿವಮೊಗ್ಗ ತಾಲ್ಲೂಕಿನ ಶೆಟ್ಟಿಹಳ್ಳಿ-ಪುರದಾಳು ಗ್ರಾಮದ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಶ್ರೀ ಜಿ. ಎಸ್. ಆಚಾರ್ ಅವರ ಪರವಾಗಿ ಕೆಳಕಂಡ ಅರ್ಜಿಗಳನ್ನು ಒಪ್ಪಿಸುತ್ತೇನೆ

ಅ) ಕುಂದಾಪುರ ತಾಲ್ಲೂಕಿನ ಖಾಸಗಿ ಸ್ಥಳಗಳಲ್ಲಿ ಮರ ಕಡಿಯುವ ಕುರಿತು ಸರ್ಕಾರವು ವಿಧಿಸಿದ ಷರತ್ತುಗಳ ಪರಿಷ್ಕಾರದ ಬಗ್ಗೆ

ಆ) ಕುಂದಾಪುರ ತಾಲ್ಲೂಕಿನ ಕಾಲ್ತೋಡು ಹಾಗೂ ಹೆರಂಜ ಗ್ರಾಮಗಳ ಮಧ್ಯದಲ್ಲಿ ಮೊಟ್ಟಿನ ಹೊಳೆ ಎಂಬಲ್ಲಿ ಕಾಲುಸಂಕದ ಬದಲಿಗೆ ಸೇತುವೆ ನಿರ್ಮಿಸುವ ಬಗ್ಗೆ.

ಅಧ್ಯಕ್ಷರು.—ಅರ್ಜಿಗಳನ್ನು ಒಪ್ಪಿಸಲಾಗಿದೆ. ಇನ್ನು ಮುಂದೆ ಬೇಡಿಕೆಗಳ ಮೇಲೆ ಚರ್ಚೆ.

ವಿತ್ತೀಯ ಕಾರ್ಯಕಲಾಪಗಳು

೧೯೮೭-೮೮ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ

†**ಶ್ರೀಮತಿ ಕೆ. ಎಸ್. ನಾಗರತ್ನಮ್ಮ** (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಎಲ್ಲಾ ಬೇಡಿಕೆಗಳ ಮೇಲೆ ನಾನು ಹಲವಾರು ಸೂಚನೆಗಳನ್ನು ಮತ್ತು ಅವುಗಳ ವಿಷಯದಲ್ಲಿ ನಾಲ್ಕಾರು ಮಾತುಗಳನ್ನು ಆಡಲಿಚ್ಛಿಸುತ್ತೇನೆ. ಅಧ್ಯಕ್ಷರೇ, ನಾನು ಮಾತನಾಡುವಾಗ ನನ್ನ ಅದ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಷ್ಟವೋ ದುರಾದೃಷ್ಟವೋ ಗೊತ್ತಿಲ್ಲ, ಗವರ್ನರ್ ಸ್ಪೀಚ್ ಬಗ್ಗೆ ಮಾತನಾಡುವಾಗ ಅದಕ್ಕೆ ಜವಾಬು ಕೊಡತಕ್ಕಂಥ ವೇಳೆಯಲ್ಲಿ ಮುಖ್ಯಮಂತ್ರಿಗಳು ಹೆಲಿಕಾಪ್ಟರ್ ವಾಪಾಸಾಗುವುದಕ್ಕೆ ಆಗಲಿಲ್ಲ. ಎರಡನೇ ಸಲ ಯಾರೋ ಡೆಲಿಗೇಶನ್ ಬಂದರು ಎಂದು ಅವರಿಗೆ ಜವಾಬು ಕೊಡಲಿಕ್ಕೆ ಆಗಲಿಲ್ಲ. ಈಗ ಮೂರನೇ ಸಲ ಮುಖ್ಯಮಂತ್ರಿಗಳು ಆ ಮನೆಯಲ್ಲಿ ಇದ್ದಾರೆ ಎಂದು ಕಾಣುತ್ತದೆ. ನನ್ನ ಭಾಷಣವನ್ನು ಅವರು ಕೇಳಲಿಲ್ಲ. ಮೊದಲನೆಯ ಸಲ ಶ್ರೀ ದೇವೇಗೌಡರು ರಿಪ್ಲೈ ಕೊಡುತ್ತಾ, ನೀವು ಹೇಳಿದ ವಿಷಯಗಳನ್ನೆಲ್ಲಾ ಆಯಾ ಡಿಪಾರ್ಟ್‌ಮೆಂಟ್‌ಗಳಿಗೆ ಕಳುಹಿಸಿ ನಾವು ನಿಮ್ಮ ಸೂಚನೆಯನ್ನೆಲ್ಲಾ ಗ್ರಹಿಸುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ನನ್ನ ಭಾಷಣದ ಪ್ರತಿಯನ್ನು ತೋರಿಸಿದರು. ಮಾನ್ಯ ಮುಖ್ಯಮಂತ್ರಿಗಳು ಕೊನೆಯಲ್ಲಿ ನನ್ನ ವಿಚಾರದಲ್ಲಿ ಹೇಳುತ್ತಾ ಶ್ರೀಮತಿ ನಾಗರತ್ನಮ್ಮ, ಅವರದ್ದೇ ಆದ ಭಾಷೆಯಲ್ಲಿ ಹೆಣ್ಣುಮಕ್ಕಳ ಟಾಯ್‌ಲೆಟ್ ಬಿಟ್ಟರೆ ಬೇರೆ ಏನೂ ಹೇಳಲಿಲ್ಲ ಎಂದು ಹೇಳಿದರು, ಮೂರನೇ ಸಲ ಏನು ಹೇಳುತ್ತಾರೋ ಕಾದು ನೋಡಬೇಕಾಗಿದೆ. ಈ ಸಲ ಹೀಗೆ ಮಾಡುವುದಕ್ಕೆ ಹೋಗಬೇಡಿ, ಒಂದು ಸಲ ಕುಚಾಯಿತು, ಒಂದು ಸಲ ಮಿಂಚಾಯಿತು, ಈ ಸಲ ಏನು ಮಾಡುತ್ತೀ? ಎಂದು ಕೇಳುವುದು ಬೇಡ. ನಾನೇನು ನಾಲ್ಕಾರು ಮಾತುಗಳನ್ನು ಆಡುತ್ತೇನೆ, ಅದಕ್ಕೆ ಜವಾಬು ಕೊಡಿಸಬೇಕು ಎಂದು ಮೊದಲು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಸರ್ಕಾರ ನಡೆಯಬೇಕಾದರೆ ಇದರಲ್ಲಿ ಹೇಳಿದ ಹಾಗೆ ಡಿಸಿಪ್ಲಿನ್, ಹಾನೆಸ್ಟಿ, ಎಫಿಶಿಯೆನ್ಸಿ–ಮೂಲಭೂತವಾದ ಈ ಮೂರು ಪ್ರಿನ್ಸಿಪಲ್ಸ್ ಬೇಕು. ಇದರ ಮೇಲೆ ಯಾವ ಪ್ರೋಗ್ರಾಂ ಆಗಲಿ ಅದು ಸಕ್ಸಸ್ ಆಗಬೇಕಾದರೆ ಇವುಗಳು ಚೆನ್ನಾಗಿರಬೇಕೆಂದು ಇವರುಗಳ ರಿಪೋರ್ಟ್‌ನಲ್ಲಿ ಹೇಳಿದ್ದಾರೆ, ಹಾಗೆಯೇ ನಡೆಯಬೇಕಾದದ್ದು ಬಹಳ ಅಗತ್ಯ. ಇದು ನಡೆಯಬೇಕಾದರೆ ಸರ್ಕಾರ ಎಲ್ಲಾ ಭಾಗದ ಜನಗಳಿಂದ ಸಲಹೆಗಳನ್ನು ತೆಗೆದುಕೊಂಡು, ಯಾವುದೇ ಪ್ರೆಸ್ಟೀಜ್ ಮೇಲೆ ನಿಂತುಕೊಳ್ಳದೆ ಆಡಳಿತವನ್ನು ನಡೆಸಿಕೊಂಡು ಹೋದರೆ ಮಾತ್ರ ಅಡ್ಮಿನಿಸ್ಟ್ರೇಶನ್ ಚೊಕ್ಕಟವಾಗಿ ನಡೆಯುತ್ತದೆ ಎಂಬುದು ನನ್ನ ಭಾವನೆ. ತಾವೇ ಹೇಳಿ ಅಧ್ಯಕ್ಷರೇ, ಈ ಆಡಳಿತದಿಂದ ತಮಗೆ ಸಮಾಧಾನ ಆಗಿದೆಯೆ? ಮಂತ್ರಿಗಳಿಗೆ ಸಮಾಧಾನ ಆಗಿದೆಯೇ? ಅಡ್ಮಿನಿಸ್ಟ್ರೇಶನ್ ರಿಪೋರ್ಟ್ ಬರುತ್ತಿರುವ ಲಕ್ಷಣವೇ ಇದು? ಇಂದು ಡಿಮಾಂಡ್ ಇಡುತ್ತಾರೆ, ಆಮೇಲೆ ವರದಿಯನ್ನು ಸಪ್ಲೈ ಮಾಡುತ್ತಾರೆ. ಒಂಭತ್ತು ತಿಂಗಳ ರಿಪೋರ್ಟ್ ಕೊಡುತ್ತಾರೆ. ಮೂರು ತಿಂಗಳದ್ದು ಗಾಳಿಗೆ ಹೊರಟುಹೋಗಿರುತ್ತದೆ. ಇದು ನ್ಯಾಯವೇ ಸರಿಯೆ? ಬಜೆಟ್ ಪುಸ್ತಕ ಕೊಡುವಾಗಲೇ ಈ ರಿಪೋರ್ಟ್ ಏಕೆ ಕೊಡಬಾರದು? ಇವರು ಸರ್ವಜ್ಞರು ಇರಬಹುದು, ಆಫೀಸರ್‌ಗಳು ಸರ್ವಜ್ಞರಿರಬಹುದು. ಚಂದನೆಯ ಪುಸ್ತಕವನ್ನು ನೋಡಿದ ತಕ್ಷಣ ಒಳಗಡೆ ಏನಿದೆ ಎಂದು ತಿಳಿದುಕೊಳ್ಳುವುದಕ್ಕೆ ಅವರಿಗೆ ಬರಬಹುದು. ನಾವು ಅಷ್ಟು ಬುದ್ಧಿವಂತರಲ್ಲ. ಅದನ್ನು ಓದಿ, ಅಭ್ಯಾಸ ಮಾಡಿ ಹೇಳಬೇಕಾಗುತ್ತದೆಯೇ ಹೊರತು, ಲಕ್ಷಣವಾದ ಪುಸ್ತಕವನ್ನು ತೋರಿಸಿಬಿಟ್ಟು ಹೇಳುವುದನ್ನು ಹೇಳಿ ಎಂದರೆ ನಾನಂತೂ ಅಷ್ಟು ಬುದ್ಧಿವಂತಳಲ್ಲ. ಶ್ರೀ ಲಕ್ಷ್ಮೀಸಾಗರ್ ಆಗಲಿ, ಮುಖ್ಯಮಂತ್ರಿಗಳಾಗಲೀ, ರಾಚಯ್ಯನವರಾಗಲೀ, ವೀರಣ್ಣನವರಾಗಲೀ ಅವರ ಆಫೀಸರ್‌ಗಳಾಗಲೀ ಬುದ್ಧಿವಂತರು ಇರಬಹುದು.

ಅವರುಗಳು ಬುದ್ಧಿವಂತರು ಇರಬಹುದು. ನಮ್ಮ ಕೈಲಿ ಅಷ್ಟು ಸಾಧ್ಯವಾಗುವುದಿಲ್ಲ. ಅದ್ದರಿಂದ ಮೊದಲೇ ರಿಪೋರ್ಟ್‌ನ್ನು ಏಕೆ ಕಳುಹಿಸಬಾರದು? ಮುಂದಿನ ಸಲ ಯಾವಾಗ ಬಜೆಟ್ ಪ್ರಸೆಂಟ್ ಮಾಡುತ್ತೀರಿ, ಆ ದಿವಸವೇ ಈ ವರದಿಯನ್ನು ಕೊಡಿಸುವುದಕ್ಕೆ ತಾವು ಅಪ್ಪಣೆ ಮಾಡಬೇಕು.

ಮೊದಲನೆಯದಾಗಿ ಈ ರಿಪೋರ್ಟ್‌ನಲ್ಲಿ ಮಾಹಿತಿ ಕೊಡುವಾಗ, ಹಿಂದಿನ ವರ್ಷಗಳಲ್ಲಿ, ಹಿಂದಿನ ಎರಡು ವರ್ಷಗಳಲ್ಲಿ ಈ ಬಗ್ಗೆ ಕಂಪಾರಿಟೀವ್ ಸ್ಟೇಟ್‌ಮೆಂಟ್ ಕೊಡುತ್ತಾರೆಯೇ ಏನೋ ಮಕ್ಕಳು ಬರೆಯುತ್ತಾರಲ್ಲ ಹಾಗೆ ಒಂದು ರಿಪೋರ್ಟ್ ಕೊಡುತ್ತಾರೆ. ಈ ರಿಪೋರ್ಟ್‌ನಲ್ಲಿ ಹಿಂದೆ ಇಲ್ಲ, ಮುಂದೆ ಇಲ್ಲ. ಹಿಂದೆ ಏನು ಮಾಡಿದ್ದೇವೆ, ಅದನ್ನೇ ಏಕೆ ಮುಂದುವರಿಸುವುದಕ್ಕಾಗುವುದಿಲ್ಲ ಎಂಬ ಬಗ್ಗೆ ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್ ಇಲ್ಲ. ಯಾವ ತರಹ ಮಾಹಿತಿಯೂ ಇಲ್ಲ, ಆದ್ದರಿಂದ ದಯಮಾಡಿ

ಈ ಮಾಹಿತಿಗಳನ್ನು ಕೊಡಿಸುವುದಕ್ಕೆ ತಾವು ಅನುವು ಮಾಡಿಕೊಡಬೇಕು. ಇವರು ಮೊದಲನೆಯ ಪುಟದಲ್ಲಿ ಹೇಳುತ್ತಾರೆ,

> "The Administrative Reforms Wing of Department looks after various aspects concerning the improvement in administration with a view to increase the work satisfaction and suggest measures for improvement in quality of working in every field of administration."

Morale in service including administrative vigilance ಎಂದು ಹೇಳಿದ್ದೀರಿ. ಡಿಸಿಪ್ಲೀನ್ ಬಗ್ಗೆ ಹೇಳಿದ್ದೀರಿ.

ಅಧ್ಯಕ್ಷರೇ, ಇವರಿಗೆ ಏನಾದರೂ, ಯಾರ ಮೇಲಾದರೂ ಕಂಟ್ರೋಲ್ ಇದೆಯೋ ? ಆಫೀಸರುಗಳ ಮೇಲೆ ಕಂಟ್ರೋಲ್ ಇದೆಯೋ ? ಇನ್ನು ಅಡ್ಮಿನಿಸ್ಟ್ರೇಷನ್ ಸಬ್ಜೆಕ್ಟ್. ಕರ್ನಾಟಕ ಲೋಕಾಯುಕ್ತ, ರೆಕ್ರೂಟ್‌ಮೆಂಟ್ ಕಮಿಟಿ, ಕರ್ನಾಟಕ ಹೈಕೋರ್ಟ್ ಅಡ್ಮಿನಿಸ್ಟ್ರೇಷನ್, ಅದರ ಮೇಲೂ ಡೀಲ್ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಈಗ ಕರ್ನಾಟಕ ಲೋಕಾಯುಕ್ತಕ್ಕೆ ಬರೋಣ. ಯಾವುದಾದರಾಗಲೀ ಲೋಕಾಯುಕ್ತಕ್ಕೆ ಕಳುಹಿಸೋಣ ಎಂದು ಮುಖ್ಯ ಮಂತ್ರಿಗಳು, ಹೇಳುವುದು, ಹೋಮ್ ಮಿನಿಸ್ಟರ್ ಹೇಳುವುದೂ ಸ್ವಾಭಾವಿಕವಾಗಿ ಹೋಗಿದೆ. ಈಗ ಅದಕ್ಕೆ ಎಷ್ಟು ಕೇಸ್ ಕೊಟ್ಟಿದ್ದಾರೆ, ಅದರಲ್ಲಿ ಎಷ್ಟು ಸಾಬೀತಾಗಿವೆ ಎಷ್ಟು ಜನಕ್ಕೆ ಪನಿಷ್‌ಮೆಂಟ್ ಮಾಡಿದ್ದಾರೆ. ಇದುವರೆಗೂ ಕಳುಹಿಸಿರುವ ಅರ್ಜಿಗಳಲ್ಲಿ ಎಲ್ಲವೂ ಸಾಬೀತಾಗದೇ ಹೋದರೆ, ಅವೆಲ್ಲಾ ಸುಳ್ಳೇ ? ಯಾವ ಮಾಹಿತಿಯೂ ಇಲ್ಲ, ಯಾವ ತರಹದ ರಿಪೋರ್ಟ್ ಇಲ್ಲ.

ಇನ್ನು ರೆಕ್ರೂಟ್‌ಮೆಂಟ್ ಕಮಿಟಿಗಳ ವಿಚಾರಕ್ಕೆ ಬರೋಣ. ಇದರ ಬಗ್ಗೆ ಇಲ್ಲಿಯೇ ಚರ್ಚೆ ಯಾಯಿತು. ಇದು ನಿಮ್ಮ ಜನಗಳಿಗೆ ರಿಹಾಬಿಲಿಟೇಷನ್ ಕಮಿಟಿ ಆಗಿ ಹೋಯಿತು. ಮಾನ್ಯ ಜೆ. ಹೆಚ್. ಪಟೇಲರೂ ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಕಮಿಟಿಯಲ್ಲಿ ಅವರನ್ನೇ ಹಾಕುತ್ತೇವೆ ನು. ರಾಜಕೀಯ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಬೇಕಾದರೆ ಬೇರೆ ಬಜೆಟ್ ಇಟ್ಟುಕೊಳ್ಳಿ. ಅಧ್ಯಕ್ಷರೇ ತಮಗೆಲ್ಲಾ ಗೊತ್ತಿದೆ. ತಾವೂ ಬಹಳ ದಿವಸದಿಂದ ಇದ್ದೀರಿ, ನಾನೂ ಇದ್ದೇನೆ. ಾವು ಎಲೆಕ್ಟ್ ಆಗಿ ಬಂದಕೂಡಲೇ ನಮ್ಮ ಊರಿನಲ್ಲಿ ಒಂದು ಕೆಲಸ ಆಗಬೇಕಾದರೆ ಜನ ನಮಗೆ ಸ್ಕೂಲ್ ಮಾಡಿಸಿಕೊಡಿ, ಕೆರೆ ಮಾಡಿಸಿಕೊಡಿ, ದಾರಿ ಮಾಡಿಸಿಕೊಡಿ ಎಂದು ಕೇಳುತ್ತಿದ್ದರು, ಆದರೆ ಈಗ ನಮ್ಮನ್ನು ಒಂದು ಕಮಿಟಿಗೆ ಹಾಕಿಸಿ, ಎಂದು ಕೇಳುತ್ತಾರೆ. ಏಕೆ ದುಡ್ಡು ಬರುತ್ತದೆಯಲ್ಲ ಎಲ್ಲಾದರೂ ಒಂದು ಕಮಿಟಿಗೆ ಹಾಕಿಸಿ ಕಮಿಟಿಗೆ ಹಾಕಿಸಿ ಎಂದು ಹಿಂದೆ ಧರಣಿ ಕೂಡ ನಡೆಯಿತು. ಹಿಂದೆ ಕಾಂಗ್ರೆಸ್ ಗವರ್ನಮೆಂಟ್ ಇದ್ದಾಗ, ದೇವರಾಜ ಅರಸ್ ಕಾಲದಲ್ಲಿ ನೀವೂ ಪಾಲು ಮಾಡಿಕೊಳ್ಳಿ ಅವರೂ ಪಾಲು ಮಾಡಿಕೊಳ್ಳಿ ಎಂದು ಇಬ್ಬರನ್ನೂ ಹಾಕಿದರು, ದೋಸೆ ಅವರಿಗೂ ಸಿಗುತ್ತಿತ್ತು ಇವರಿಗೂ ಸಿಗುತ್ತಿತ್ತು. ಈಗ ಆಗುವುದಿಲ್ಲ, ಎಲ್ಲಾ ನಮಗೆ ಎನ್ನುವಂತಾಗಿದೆ. ಆದ್ದರಿಂದ ಕಮಿಟಿ ಎನ್ನುವುದಕ್ಕೆ ಬದಲಾಗಿ Rehabilitation of the power-party people. ಎಂದು ಹೇಳಿಬಿಟ್ಟು, ಬಜೆಟ್ ಇಡಬೇಕೆಂದು ನಾನಾದರೂ ಸಲಹೆ ಮಾಡುತ್ತೇನೆ Why do you call it as a Committee ? ಏತಕ್ಕೆಂದರೆ ಈ ಕಮಿಟಿಯಿಂದ ಆದ ಅನಾಹುತ ತಮಗೆ ಗೊತ್ತಿದೆ, ಟೈಪಿಸ್ಟ್ ಅಂಡ್ ಸ್ಟೆನೋಗ್ರಾಫರ್ಸ್ ಸೆಲೆಕ್ಷನ್ ಕಮಿಟಿಯ ಬಗ್ಗೆ ಇವರೇ ಒಪ್ಪಿಕೊಂಡರು, ಕಾನಡೆಯವರು ಇದರ ವಿಚಾರ ಪ್ರಸ್ತಾಪ ಮಾಡಿದ್ದರು. ಇವರು ಇದನ್ನು ಸ್ಕ್ರ್ಯಾಪ್ ಮಾಡುತ್ತೇವೆ ಎಂದರು. ಇದೆಲ್ಲಾ ತಮಗೇ ಗೊತ್ತಿದೆ. ನನ್ನ ಸಜೆಷನ್ ಇವರು ತೆಗೆದುಕೊಳ್ಳುವುದಾದರೆ, ಏತಕ್ಕೆ ಇದನ್ನೆಲ್ಲಾ ರೋಸ್ಟರ್ ಪ್ರಕಾರ ಕಂಪ್ಯೂಟರೈಸ್ ಮಾಡಬಾರದು ? There will be no influence. Only deserving and best people will get it ನಾನು ನಿಮಗೆ ಕಾಗದ ಬರೆದುಕೊಡುವುದು, ನಿಮಗೆ ಫೋನ್ ಮಾಡುವುದು, ಹೇಳುವುದು, ಇವೆಲ್ಲಾ ಆಗ ನಿಂತು ಹೋಗುತ್ತದೆ. ಇದನ್ನು ಕಂಪ್ಯೂಟರೈಸ್ ಏತಕ್ಕೆ ಮಾಡಬಾರದು ? It should be done. ನಿಮ್ಮ ಕಮಿಟಿ ಮಾಡಿಕೊಂಡು ಅವರಿಗೆ ಹಂಚುವ ಬದಲು ಈ ರೀತಿ ಮಾಡಿ. ಅದಕ್ಕೆ ಬೇಕಾದರೆ ಬೇರೆ ಬಜೆಟ್ ಇಟ್ಟುಬಿಡಿ. ಹೌದು,

ನಿಮಗೆ ಬಲ ಇದೆ ಅಧಿಕಾರ ಇದೆ, ನೀವು ಅವರಿಗೆಲ್ಲಾ ಒಂದು ಬಜೆಟ್ ಇಟ್ಟುಬಿಟ್ಟು ರಿಹ್ಯಾಬಿಲಿಟೇಟ್ ಮಾಡಿಬಿಡಿ, But you get this computerised. This is my suggestion ಇದು ನನ್ನದೊಂದು ಸಲಹೆ, ತೆಗೆದುಕೊಳ್ಳುವುದಿದ್ದರೆ ತೆಗೆದುಕೊಳ್ಳಲಿ, ಅವರಿಗೆ ಬಲ ಇರುವುದರಿಂದ ನಾವು ಬಲವಂತ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರೇ, ಇನ್ನು ಹೈಕೋರ್ಟ್ ವಿಚಾರ, ಹೈಕೋರ್ಟ್ ವಿಚಾರದಲ್ಲಿ ಯಾರಿಗಾದರೂ ಮರ್ಯಾದೆ ಇದೆಯೇ ? ಕೋರ್ಟ್ ವರ್ಡಿಕ್ಟ್‌ಗೆ ಏನಾದರೂ ಮರ್ಯಾದೆ ಇದೆಯೇ ? ಅವರು ಪಾಸ್ ಮಾಡಿರತಕ್ಕ ಸ್ಟ್ರಿಕ್ಚರ್ಸ್‌ಗೆ ಏನಾದರೂ ಬೆಲೆ ಅಥವಾ ಚಾರ ಇದೆಯೇ? ಯಾರಾದರೂ ಸ್ವಲ್ಪ ಅಭಿಮಾನ ಇರುವವರು ಇಂತಹ ಕೆಲಸ ಮಾಡುತ್ತಾರೆಯೇ? ಇವರಿಗೆ ಯಾವುದಕ್ಕೂ ಲಕ್ಷ್ಯ ಇಲ್ಲ, ಯಾವ ಕೋರ್ಟ್ ಆಜ್ಞೆಗೂ ಲಕ್ಷ್ಯ ಇಲ್ಲ. ಮಾತೆತ್ತಿದರೆ ಜ್ಯುಡಿಷಿಯಲ್ ಎನ್‌ಕ್ವೈರಿ. ಏತಕ್ಕೆ ಯಾವ ಪುರುಷಾರ್ಥಕ್ಕೆ ಈ ಜ್ಯುಡಿಷಿಯಲ್ ಎನ್‌ಕ್ವೈರಿ ? ಇದಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್ ಏನಾದರೂ ಈ ಹೌಸ್ ಕೊಡುತ್ತದೆಯೇ ? ಜ್ಯುಡಿಷಿಯಲ್ ಎನ್‌ಕ್ವೈರಿಗೆ ಟೈಮ್ ಹೋಗುತ್ತದೆ. Is public memory so short ? ಜ್ಯುಡಿಷಿಯಲ್ ಎನ್‌ಕ್ವೈರಿಗೆ ಆಜ್ಞೆ ಆದತಕ್ಷಣ ನಾವು ಮಾಡಿಬಿಟ್ಟೆವು ಎಂದು ಬೆನ್ನು ತಟ್ಟಿಕೊಳ್ಳುತ್ತಾರೆ. ಮೋಸ ಮಾಡಿದ್ದೇವೆ, ಜ್ಯುಡಿಷಿಯಲ್ ಎನ್‌ಕ್ವೈರಿ ಎಂದು ಆಯಿತು, ಅದು ಯಾವತ್ತೋ ಏನೋ ನೋಡಿಕೊಳ್ಳೋಣ ಎಂದು ಹೇಳುತ್ತಾರೆ. ಇದರಿಂದ ಜನಗಳಿಗೆ ಸಿಗುವ ಲಾಭವಾದರೂ ಏನು ? ಜ್ಯುಡಿಷಿಯಲ್ ಎನ್‌ಕ್ವೈರಿಯಿಂದ ಎಕ್ಸ್‌ಚೆಕ್ಕರ್‌ಗೆ ಖರ್ಚಾಗುವುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಎಷ್ಟು ಎನ್‌ಕ್ವೈರಿಗಳಾಗಿದ್ದಾವೆ, ಎಷ್ಟು ರಿಪೋರ್ಟ್ ಕಳುಹಿಸಿದ್ದಾರೆ, ಎಷ್ಟು ಕೇಸ್‌ಗಳಲ್ಲಿ ಶಿಕ್ಷೆ ಮಾಡಿರುತ್ತೀರಿ ? ಕುದುರೆಮೋತಿ ಪ್ರಸಂಗ ಎಷ್ಟು ದೂರದಲ್ಲಿ ನಿಂತಿದೆ ? ಎತ್ತರಕ್ಕೆ ಮನೆ ಕಟ್ಟಬಾರದು ಎಂದು ಸುಪ್ರೀಂಕೋರ್ಟ್ ಆರ್ಡರ್ ಮಾಡಿ ಕಳುಹಿಸಿದ್ದಾರೆ. ಅಂತಹ ಮನೆಗಳನ್ನು ಎಷ್ಟು ಕಟ್ಟುತ್ತಿದ್ದಾರೆ ? ಕೆ. ಆರ್. ಹಾಸ್ಪಿಟಲ್‌ದು ಎನ್‌ಕ್ವೈರಿ ಆಗಬೇಕಾಗಿತ್ತು, ಅದು ಎಷ್ಟು ದೂರದಲ್ಲಿ ನಿಂತಿದೆ ? ಒಂದು ಸಾರಿ ಅವರನ್ನೆಲ್ಲಾ ಅಮಾನತ್ತಿನಲ್ಲಿ ಇಟ್ಟುಬಿಡುವುದು, ಸಸ್ಪೆಂಡ್ ಮಾಡುವುದು, ಜನಗಳ ಹಾಹಾಕಾರ ಕಡಿಮೆಯಾದ ಮೇಲೆ, ಅದು ನಿಂತಮೇಲೆ, ಅವರನ್ನು ರೀಇನ್‌ಸ್ಟೇಟ್ ಮಾಡುವುದು, ಇದು ಎನ್‌ಕ್ವೈರಿ, ಇದು ಎಷ್ಟು ಹಾಸ್ಯಾಸ್ಪದ ? ಗಂಗಾರಾಮ್ ಬಿಲ್ಡಿಂಗ್ ಎನ್‌ಕ್ವೈರಿ ಏನಾಯಿತು ? ಪಾವಗಡ ಎನ್‌ಕ್ವೈರಿ ಎಷ್ಟು ದೂರಕ್ಕೆ ನಿಂತಿದೆ ? ಒಂದೇ ಎರಡೇ, ನೂರಾರು ಎನ್‌ಕ್ವೈರಿಗಳು. ಹೈಕೋರ್ಟ್‌ನವರು ದಾಸಪ್ಪ ಕೇಸ್‌ನಲ್ಲಿ ಸ್ಟ್ರಿಕ್ಚರ್ಸ್ ಪಾಸ್ ಮಾಡಿದರು. ಮಾನ್ಯ ಕೃಷ್ಣಪ್ಪನವರು ಪೋಟಿ ಮಾಡಿಸುವುದಕ್ಕೆ ಹೊರಟರಂತೆ, ಪೋಟಿ ಮಾಡಿಸುವುದಕ್ಕೆ ಹೋಗಿ, ೯ ಕೋಟಿ ರೂಪಾಯಿ ಸರಕಾರಕ್ಕೆ ಬಾಕಿ ಕೊಡಬೇಕಾಗಿರುವವರಿಗೆ ತಿರುಗಿ ಕೊಟ್ಟಿದ್ದೀರಿ. ಲೈಸೆನ್ಸ್ ಇಲ್ಲದವರಿಗೆ, ಬ್ಯಾಂಕ್‌ನಲ್ಲಿ ದುಡ್ಡಿಲ್ಲದಿರುವವರಿಗೆ ಕೊಟ್ಟಿದ್ದೀರಿ. ಹೈಕೋರ್ಟಿನಲ್ಲಿ ಗೌರ್ನಮೆಂಟ್ ಮೇಲೆ ಕ್ಲಿಯರ್ ಆಗಿ ಸ್ಟ್ರಿಕ್ಚರ್ ಪಾಸ್ ಮಾಡಿದ್ದಾರೆ. ತಿರುಗಿ ಅವರಿಗೇ ಕಂಟ್ರ್ಯಾಕ್ಟ್ ಕೊಟ್ಟಿದ್ದೀರಿ, ಇದನ್ನು ಕಂಟೆಂಪ್ಟ್ ಆಫ್ ಕೋರ್ಟ್ ಎಂದು ಕೇಸ್ ಹಾಕುವುದಕ್ಕೆ ಯಾರಿಗೂ ಪುರಸೊತ್ತು ಇಲ್ಲವೇ ? ಯಾರಿಗೆ ಬೇಕಾಗಿದೆ ಈ ತಲೆನೋವು, ಗೌರ್ನಮೆಂಟ್‌ಗೇ ಬೇಕಾಗಿಲ್ಲ ಯಾರು ಹಾಕಿಕೊಂಡು ಹೋಗುತ್ತಾರೆ ಕೋರ್ಟುಗಳಿಗೆ ಇವರು ತೋರಿಸತಕ್ಕಂಥ ಮರ್ಯಾದೆ ಇಷ್ಟೆಯೇ ? ಕೋರ್ಟ್‌ನಲ್ಲಿ ಇವರ ಗೌರ್ನಮೆಂಟ್ ಅಡ್ವೋಕೇಟ್ಸ್ ಏನು ಮಾಡುತ್ತಿದ್ದಾರೆ ? ಸಾವಿರಾರು ಲ್ಯಾಂಡ್ ಅಕ್ವಿಜಿಷನ್ ಕೇಸ್‌ಗಳು ಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ಹಳ್ಳಿಗಳಲ್ಲಿ ಸೈಟ್‌ಗೋಸ್ಕರ ಹಂಚಿರುವಂತಹ ಭೂಮಿ ಇವತ್ತು ಕೋರ್ಟ್‌ನಲ್ಲಿ ಬಿದ್ದಿದೆ. ಒಂದಾದರೂ ಸ್ಟೇಯನ್ನು ವೆಕೇಟ್ ಮಾಡಿಸುವುದಕ್ಕೆ ಪ್ರಯತ್ನ ಪಡುತ್ತಾರೆಯೇ ? ಅಲ್ಲಿ ಸೈಟ್ ಕೊಡಿಸುತ್ತೇವೆ ಎಂದು ಮೂಗಿಗೆ ತುಪ್ಪಹಚ್ಚುವುದು, ಇಲ್ಲಿ ನಮಗೆ ಲೆಕ್ಕ ಹೇಳುವುದು, ಯಾರೂ ಕೊಟ್ಟಿರದಷ್ಟು ಸೈಟ್ ಕೊಟ್ಟಿದ್ದೇವೆ, ಯಾರೂ ಮಾಡದಿರುವಷ್ಟು ಕೆಲಸ ಮಾಡಿದ್ದೇವೆ ಎಂದು ಹೇಳುವುದು, ಲ್ಯಾಂಡ್ ಅಕ್ವಿಜಿಷನ್ ಕೇಸ್ ಎಲ್ಲಾ ಕೋರ್ಟ್‌ನಲ್ಲಿ ಬಿದ್ದಿದೆ. ಕೋರ್ಟ್‌ನಲ್ಲಿ ಸ್ಟೇ ಮಾಡಿಸಿದ್ದಾರೆ. ಒಂದು ಕೇಸ್‌ನಲ್ಲಾದರೂ ಸ್ಟೇ ವೆಕೇಟ್ ಮಾಡಿಸುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆಯೇ. ಸುಮ್ಮನೆ ಗೌರ್ನಮೆಂಟ್ ಪ್ಲೀಡರ್ಸ್‌ಗೆ ದುಡ್ಡು ಕೊಡುತ್ತಿರುವುದಾಗಿದೆ, ಇದೆಲ್ಲಾ ಯಾವ ಪುರುಷಾರ್ಥಕ್ಕೆ, ಕೆಲಸ ಮಾಡದಿರುವವರಿಗೆ ಏತಕ್ಕೆ ಅನ್‌ನೆಸೆಸರಿಯಾಗಿ ದುಡ್ಡು ಕೊಡುತ್ತೀರಿ? ಈ ವಿಚಾರದಲ್ಲಿ ಇವರಿಗೆ ಯಾವ ವಿಧವಾದ ಅಕ್ಕರೆಯೂ ಇಲ್ಲ.

ಇಷ್ಟು ಕೋರ್ಟ್‌ಗಳ ವಿಚಾರವಾಯಿತು. ಇನ್ನು ಆಡಳಿತದ ಬಗ್ಗೆ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಾದರೆ ನಾನು ಒಂದೇ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಅದೇನೆಂದರೆ ಒಬ್ಬ ಹೆಲ್ತ್ ಸೆಕ್ರೆಟರಿ ಐ.ಎ.ಎಸ್. ಅಧಿಕಾರಿ ಇದ್ದಾರೆ. ಅವರೇನು ಮನುಷ್ಯರೇ? ಅವರಿಗೆ ಸ್ವಲ್ಪವಾದರೂ ಮನುಷ್ಯತ್ವ ಇದೆಯೋ? ಅವರಿಗೇನಾದರೂ ಜ್ಞಾನವಿದೆಯೋ? ನಾನು ಒಬ್ಬ ಮೂಕ ಮಗುವನ್ನು ಮುಖ್ಯ ಮಂತ್ರಿಗಳ ಬಳಿ ಕರೆದುಕೊಂಡು ಹೋಗಿ ನೋಡಿ ಇವರು ಈ ಡಾಕ್ಟರ್ ಮಗ. ಈ ಡಾಕ್ಟರ್ ಅನ್ನು ಬೇರೆ ಕಡೆ ವರ್ಗಾವಣೆ ಮಾಡಿದ್ದಾರೆ. ಇದರಿಂದ ಈ ಮಗುವಿಗೆ ಅವರು ಸರಿಯಾದ ಟ್ರೀಟ್‌ಮೆಂಟ್ ಕೊಡಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇವರನ್ನು ಬೆಂಗಳೂರಿನಲ್ಲಿ ಎಲ್ಲಿಯಾದರೂ ಒಂದು ಕಡೆ ಪೋಸ್ಟ್ ಮಾಡಿ ಎಂದು ಅವರಲ್ಲಿ ನಾನು ಮನವಿ ಮಾಡಿಕೊಂಡೆ. ಪಾಪ ಮಾನ್ಯ ಮುಖ್ಯ ಮಂತ್ರಿಗಳು ಒಂದು ಪತ್ರ ಬರೆದು ಈ ಡಾಕ್ಟರ್ ಅನ್ನು ಬೆಂಗಳೂರಿನಲ್ಲಿ ಎಲ್ಲಿಯಾದರೂ ಪೋಸ್ಟ್ ಮಾಡಿ ಎಂದು ಹೆಲ್ತ್ ಸೆಕ್ರೆಟರಿಗೆ ಹೇಳಿದರು. ಆದರೆ ಆ ಡಾಕ್ಟರ್ ದುರಾದೃಷ್ಟವೋ ನನ್ನ ದುರಾದೃಷ್ಟವೋ ಅವರನ್ನು ಕೆಂಗೇರಿಗೆ ಪೋಸ್ಟ್ ಮಾಡಿದರು. ಅವರು ಮೊದಲು ಕೆಂಗೇರಿಯಲ್ಲಿಯೇ ಇದ್ದರು. ಆ ಡಾಕ್ಟರ್ ನನಗೆ ಮೊದಲಿನಿಂದಲೂ ಪರಿಚಯ. ಕಾರಣ ಅವರು ನಮ್ಮ ಮನೆಯ ಹತ್ತಿರವೇ ಇದ್ದರು. ಆ ಡಾಕ್ಟರ್‌ಗೆ ಈ ಹೆಲ್ತ್ ಸೆಕ್ರೆಟರಿಯಿಂದ ಒಂದು ಎಕ್ಸ್‌ಪ್ಲನೇಶನ್ ಕೇಳಿ ಒಂದು ಪತ್ರ ಬಂತು. ಅದೇನೆಂದರೆ ನೀವು ರಾಜಕೀಯ ಒತ್ತಡ ಏತಕ್ಕೆ ತರುತ್ತಿದ್ದೀರಿ? ತಾವೇತಕ್ಕೆ ಮುಖ್ಯ ಮಂತ್ರಿಗಳನ್ನು ನೋಡಿದಿರಿ? ಇತ್ಯಾದಿ ಬಗ್ಗೆ. ಆದರೆ ಈ ಐ.ಎ.ಎಸ್. ಅಧಿಕಾರಿ ರಾಜಕೀಯ ಒತ್ತಡ ತರುವುದಿಲ್ಲವೇನು? ಆಮೇಲೆ ಈ ಕೆಂಗೇರಿಯಲ್ಲಿ ಇರುವಂತಹ ಒಬ್ಬ ಡಾಕ್ಟರ್ ಬಹಳ ನಿಪುಣ. ಈ ಹಿಂದೆ ಇದ್ದಂತಹ ಡಾಕ್ಟರ್ ಹೊಸದಾಗಿ ಹೋಗಿರುವ ಡಾಕ್ಟರ್ ಮೇಲೆ ಬೇಕಾದಷ್ಟು ಚಾಡಿ ಮಾತನ್ನು ಇವರಿಗೆ ಹೇಳಿದ್ದಾನೆ. ಆ ಡಾಕ್ಟರ್ ಒಂದು ದಿವಸ ಕೂಡ ಕೆಂಗೇರಿಯಲ್ಲಿ ವಾಸವಾಗಿರುವುದಿಲ್ಲ. ನಾವು ಯಾವಾಗಲಾದರೂ ಆಸ್ಪತ್ರೆಗೆ ನಮ್ಮ ಆಳುಕಾಳುಗಳನ್ನು ಕಳುಹಿಸಿದರೆ ಆ ಡಾಕ್ಟರ್ ಅಲ್ಲಿ ಇರುವುದೇ ಇಲ್ಲ. ಆ ಡಾಕ್ಟರ್ ಯಾವಾಗಲೂ ದೀಪಕ್ ನರ್ಸಿಂಗ್ ಹೋಮ್‌ನಲ್ಲಿ ಇರುತ್ತಾನೆ. ಅಂತಹವನು ಈ ಹೊಸ ಡಾಕ್ಟರ್ ಮೇಲೆ ಚಾಡಿ ಮಾತು ಹೇಳುತ್ತಾನೆ. ಇನ್ನೊಂದು ವಿಶೇಷವೆಂದರೆ ಹಿಂದೆ ಅಲ್ಲಿದ್ದಂತಹ ಡಾಕ್ಟರ್‌ಗೆ ಮದುವೇ ಆಗಿಲ್ಲ. ಅವನು ಏನು ಬರೆಯುತ್ತಾನೆಂದರೆ ನನ್ನನ್ನು ವರ್ಗಾವಣೆ ಮಾಡಿದರೆ ನನ್ನ ಮಕ್ಕಳಿಗೆ ತೊಂದರೆಯಾಗುತ್ತದೆ. ನಮ್ಮ ಮನೆಯವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ನನ್ನನ್ನು ವರ್ಗಾವಣೆ ಇಲ್ಲಿಂದ ಮಾಡಬೇಡಿ ಎಂದು ಪತ್ರ ಬರೆಯುತ್ತಾನೆ. ಎಷ್ಟು ಧೈರ್ಯವಿರಬೇಕು ಆ ಡಾಕ್ಟರ್‌ಗೆ. ಏತಕ್ಕೆ ಈ ರೀತಿ ಮಾಡುತ್ತಾರೋ ನನಗೆ ಅರ್ಥವಾಗುವುದಿಲ್ಲ. ಈ ರೀತಿ ಆದರೆ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ ಆರ್ಡರ್‌ಗೆ ಏನು ಬೆಲೆ ಬರುತ್ತದೆ? ಇವರೇನೇ ಆರ್ಡರ್ ಮಾಡಿದರೂ ಕೂಡ ಅಲ್ಲಿರುವ ಒಬ್ಬ ಅಂಡರ್ ಸೆಕ್ರೆಟರಿ ಆರ್ಡರ್ ಮಾಡಿ ಕಳುಹಿಸಿಕೊಡಬೇಕು. ಈ ಅಂಡರ್ ಸೆಕ್ರೆಟರಿ ಏನು ಮಾಡುತ್ತಾನೆಂದರೆ ಎಲ್ಲಾ ವರ್ಗಾವಣೆಗಳಿಗೂ ಎಲ್ಲಾ ಕೆಲಸ ಕಾರ್ಯಗಳಿಗೂ ೪ ಸಾವಿರ ರೂಪಾಯಿಗಳಿಂದ ೮ ಸಾವಿರ ರೂಪಾಯಿಗಳವರೆವಿಗೂ ಹಣ ಪಡೆದು ಕೆಲಸ ಮಾಡುತ್ತಾನೆ. ಈ ಹಣದಲ್ಲಿ ಆ ಇಲಾಖೆಯವರಿಗೆ ಎಲ್ಲರಿಗೂ ಶೇರು ಹೋಗುತ್ತದೆ. ಇಂತಹವರು ಅಂಡರ್ ಸೆಕ್ರೆಟರಿಗಳು. ಇವರು ಮನುಷ್ಯರೇ? ಮತ್ತು ಇವರು ಸೆಕ್ರೆಟರಿಗಳೇ? ಇವರೊಬ್ಬ ದೊಡ್ಡ ಆಫೀಸರ್ಸ್? ಇಂತವುಗಳಿಗೆಲ್ಲಾ ಒಂದು ರೀತಿ ನೀತಿ ಇರಬೇಕು. ಇನ್ನು ನ್ಯಾಷನಲ್ ಸ್ಕೀಮ್‌ನಲ್ಲಿ ಫ್ಯಾಮಿಲಿ ಪ್ಲಾನಿಂಗ್ ಅನ್ನು ಒಬ್ಬ ಪ್ರವೇಟ್ ಪ್ರಾಕ್ಟೀಷನರ್ ಸುಮಾರು ಎರಡು ಮೂರು ವರ್ಷಗಳಿಂದ ಕೆಲಸ ಮಾಡಿಕೊಂಡು ಬರುತ್ತಿದ್ದು ಅವರಿಗೆ ನ್ಯಾಷನಲ್ ಅವಾರ್ಡ್ ಸಹ ಬಂದಿದೆ. ಅವರಿಗೆ ಒಂದು ಆಪರೇಷನ್‌ಗೆ ಇಂತಿಷ್ಟು ಹಣವೆಂದು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಈ ನಿಗದಿತ ಹಣವನ್ನು ಬೆಳಗಾಂನಲ್ಲಿ ಕೊಟ್ಟಿದ್ದಾರೆ. ಮೈಸೂರಿನಲ್ಲಿ ಕೊಟ್ಟಿದ್ದಾರೆ. ಆದರೆ ಬೆಂಗಳೂರಿನಲ್ಲಿ ಕೊಡುವಾಗ ೫೦ ಪರ್ಸೆಂಟ್‌ನಷ್ಟು ಹಣವನ್ನು ನಮಗೆ ಕೊಡಬೇಕೆಂದು ಇಲ್ಲಿನ ಒಬ್ಬ ಅಧಿಕಾರಿ ಕೇಳುತ್ತಿದ್ದಾರಂತೆ. ಈ ಬಗ್ಗೆ ನಾನು ಮಾನ್ಯ ಮಾಜಿ ಸಚಿವರಾದಂಥ ಶ್ರೀಮಾನ್ ತಿಮ್ಮೇಗೌಡರ ಗಮನಕ್ಕೂ ಕೂಡ ತಂದಿದೆ. ಅವರು ಆಗ ಆ ಫೈಲ್ ಮೇಲೆ ಸಂಬಂಧಪಟ್ಟ ಅಧಿಕಾರಿ ಬಂದು ಸ್ಟ್ರೀಕ್ ಎಂದು ಬರೆದಿದ್ದರು. ಆದರೆ ಅಧಿಕಾರಿಗಳು ಆ ಫೈಲ್ ಮೇಲೆ ಸ್ಟ್ರೋಕ್ ಎಂದು ಬರೆದಿಟ್ಟುಕೊಂಡಿದ್ದಾರೆ. ಇದುವರೆವಿಗೂ ಅದು ಸೆಟಲ್‌ಮೆಂಟ್ ಆಗಿಲ್ಲ. ತಾವು ಯಾರಾದರೂ ಬೇಕಾದರೆ ಆ ಫೈಲ್ ತರಿಸಿ ನೋಡಿ. ಈ ರೀತಿಯಾದರೆ ಮಂತ್ರಿಗಳು, ಮುಖ್ಯ ಮಂತ್ರಿಗಳು ಏನು ಮಾಡುವುದು? ಆಮೇಲೆ ನಾನು ಈ ವಿಚಾರವನ್ನು ಮುಖ್ಯ

ಮಂತ್ರಿಗಳಿಗೂ ಹೋಗಿ ಹೇಳಿದ್ದೇನೆ. ಅವರು ಕೂಡ ತಕ್ಷಣ ಸೆಟಲ್‌ಮೆಂಟ್ ಮಾಡಿ ಎಂದು ಹೇಳಿದರು. ಆದರೆ ಇದುವರೆವಿಗೂ ಸೆಟಲ್‌ಮೆಂಟ್ ಮಾಡಿಲ್ಲ. ಪಾಪ ಮುಖ್ಯ ಮಂತ್ರಿಗಳೇನು ಮಾಡುವುದು? ಮುಖ್ಯ ಮಂತ್ರಿಗಳ ಮಾತು ಸೆಕ್ರೆಟರಿಗಳು ಕೇಳುವುದಿಲ್ಲವೆಂದು ತಿಳಿದುಕೊಳ್ಳಬೇಕೇನು? ಅದೇ ಆಗಲೇ ನಾನು ಹೇಳಿದೆನಲ್ಲ ಸ್ಟ್ರೀಕ್ ಎಂದು ಮಂತ್ರಿಗಳು ಬರೆದರೆ ಅಧಿಕಾರಿಗಳು ಸ್ಟ್ರೋಕ್ ಎಂದು ಬರೆದಿಟ್ಟುಕೊಂಡಿದ್ದಾರೆ. ಆಮೇಲೆ ಆ ಡಾಕ್ಟರ್ ಮುಖ್ಯ ಮಂತ್ರಿಗಳ ಸೆಕ್ರೆಟರಿಯವರನ್ನು ಹೋಗಿ ಕೇಳಿದರಂತೆ, ಅದಕ್ಕೆ ಅವರು ಹೇಳಿದರಂತೆ ಅವರು ಕೊಡದಿದ್ದರೆ ನಾವೇ ಕೊಡುತ್ತೇವೆಂದು ಅವರೇತಕ್ಕೆ ಕೊಡಬೇಕು. ಈ ಹಣ ಕೇಂದ್ರ ಸರ್ಕಾರದಿಂದ ಕೊಡುವ ಹಣ. ಇದೊಂದು ರೀತಿ ತಮಾಷೆಯಲ್ಲವೇ? ಆ ಹೆಲ್ತ್ ಆಫೀಸ್ ಅಧಿಕಾರಿಗಳು ಹೇಳುತ್ತಾರಂತೆ ಇನ್ನು ಮುಂದೆ ನಿಮಗೆ ಕ್ಯಾಂಪ್ ಕೊಡುವುದಿಲ್ಲವೆಂದು.

೯-೩೦ ಎ.ಎಂ.

ಏಕೆಂದರೆ ಇವರುಗಳಿಗೆ ಐವತ್ತು ಪರ್‌ಸೆಂಟ್ ಕಮಿಷನ್ ಸಿಗುವುದಿಲ್ಲವಲ್ಲಾ. ಅದಕ್ಕೆ ಅವರಿಗೆ ಕ್ಯಾಂಪ್ ಕೊಡಬೇಡಿ ಎಂದು ಹೇಳಿದ್ದಾರೆ. ಅದು ನ್ಯಾಷನಲ್ ಪ್ರೋಗ್ರಾಮ್. ಇದರಲ್ಲಿ ಇರುವಂಥ ಅವಲಕ್ಷಣ, ಹೊಲಸು ಎಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ಆಮೇಲೆ ಅಧ್ಯಕ್ಷರೇ, ಆಪರೇಷನ್ ಮಾಡುವಾಗ ಮಾಸ್ಕ್ ಕೊಡುತ್ತಾರೆ, ಅವುಗಳನ್ನು ಇಲ್ಲಿಗೆ ತಂದಿದ್ದೇನೆ. ಅವುಗಳನ್ನು ತಮಗೆ ತೋರಿಸುತ್ತೇನೆ (ಮಾಸ್ಕ್‌ಗಳನ್ನು ಸದನದಲ್ಲಿ ತೋರಿಸಿದರು) ಈ ಮಾಸ್ಕ್‌ಗಳಿಗೆ ಎಷ್ಟಗಲ ಬಟ್ಟೆ ಇದೆ ಎಂಬುದನ್ನು ನೋಡಿ ಹೌ ಮಚ್ ದಿಸ್ ಮಾಸ್ಕ್ ಕಾಸ್ಟ್? ಈ ಮಾಸ್ಕ್‌ಗೆ ೫೫ ರೂಪಾಯಿಗಳು ಆಗುತ್ತದೆಯೇ? ಈ ವೈಟ್ ಬೆಡ್‌ಶೀಟ್‌ಗೆ ಎಷ್ಟು ರೂಪಾಯಿಗಳು ಆಗಬಹುದು? (ಒಂದು ವೈಟ್ ಬೆಡ್‌ಶೀಟ್‌ನ್ನು ಸದನಕ್ಕೆ ತೋರಿಸಿದರು. ಇದಕ್ಕೆ ೫೨ ರೂಪಾಯಿಗಳು. ಐ ವಿಲ್ ಸೆಂಡ್ ದೀಸ್ ಥಿಂಗ್ಸ್ ಟು ಯೂ ಮೋಸ ಮಾಡುವುದಕ್ಕೊ ಒಂದು ಮಿತಿ ಬೇಡವೇ? ಇವುಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಇದನ್ನು ಓದಿದರೆ ತಮಗೆ ಗೊತ್ತಾಗುತ್ತದೆ (ಇಲಾಖೆಯವರು ಬೆಡ್‌ಶೀಟ್ ಮತ್ತು ಮಾಸ್ಕ್‌ಗಳನ್ನು ಪರ್ಚೇಸ್ ಮಾಡಿದ ಆರ್ಡರ್ ಕಾಪಿಗಳನ್ನು ಸದನಕ್ಕೆ ತೋರಿಸಿದರು) ಸೆಕ್ರೆಟರಿಗಳು ಏನು ಮಾಡುತ್ತಿದ್ದಾರೆ? ಚೇಂಬರ್‌ನಲ್ಲಿ ಕುಳಿತುಕೊಂಡರೆ ಕೆಲಸ ಆಗಿ ಹೋಯಿತೆ? ಆಮೇಲೆ ಒಂದು ಬೋರ್ಡ್‌ನ್ನು ಬರೆಸಿದ್ದಾರೆ. ಅದನ್ನು ಇಲ್ಲಿಗೆ ತರುವುದಕ್ಕಾಗಲಿಲ್ಲ. ಆ ಬೋರ್ಡ್ ಬರೆಸುವುದಕ್ಕೆ ೧೫೦ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ೧೫ ರೂಪಾಯಿಗಳಿಗೆ ಬೇಕಾದರೆ ಈ ಬೋರ್ಡ್‌ನ್ನು ಬರೆಸಬಹುದು. ೧೫ ರೂಪಾಯಿಗಳಿಗೆ ಈ ತರಹ ಎಷ್ಟು ಡಜನ್ ಬೇಕಾದರೂ ಬೋರ್ಡ್‌ಗಳನ್ನು ಬರೆಸಬಹುದು. ಈ ರೀತಿ ಆದರೆ ಸರ್ಕಾರವನ್ನು ನಡೆಸುವುದಕ್ಕಾಗುತ್ತದೆಯೇ? ಇದು ನನಗೆ ಅರ್ಥವಾಗುವುದಿಲ್ಲ ಅಧ್ಯಕ್ಷರೇ. ಆಮೇಲೆ ನಾವು ಯಾವಾಗ ಫೋನ್ ಮಾಡಿದರೂ ಸೆಕ್ರೆಟರಿಗಳು ಆಫೀಸ್‌ನಲ್ಲಿ ಇರುವುದಿಲ್ಲ. ಯಾವಾಗ ನೋಡಿದರೂ they will be in committee meeting ಯಾರೂ ಸಿಗುವುದಿಲ್ಲ. ಕಮಿಟಿ ಮೀಟಿಂಗ್‌ನಲ್ಲಿ ಅವರಿಗೆ ನಾವುಗಳು ಡಿಸ್ಟರ್ಬ್ ಮಾಡುವ ಹಾಗಿಲ್ಲ. ನಾಳೆ ನೋಡೋಣ ಎಂದರೆ ಅವರು ಇರುವುದಿಲ್ಲ. ಈ ಆ್ಯನ್ಯುಯಲ್ ರಿಪೋರ್ಟ್‌ನ ಎಂಟನೇ ಪೇಜ್‌ನಲ್ಲಿ ಇವರು ಎಲೆಕ್ಷನ್ ಮಾಡಿರುವ ಬಗ್ಗೆ ಹೇಳಿದ್ದಾರೆ. The first ever elections to Zilla Parishads and Mandal Panchayats were held in January 1987. Beautiful elections ever held. ಒಂದು ಹೇಳಲೇ? ಎರಡು ಹೇಳಲೇ? ಬೇಕಾದಷ್ಟು ಹೇಳಬೇಕಾಗುತ್ತದೆ. ಆದರೆ, ನನ್ನ ತಾಲ್ಲೂಕಿನದು ಮಾತ್ರ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಜನರುಗಳು ಒಂದು ನಾಟಕವನ್ನೂ ಆಡುವ ಹಾಗಿಲ್ಲ. ಸುಗ್ಗಿ ಆದ ಮೇಲೆ ಜನ ಸಾಮಾನ್ಯವಾಗಿ ನಾಟಕಗಳನ್ನು ಆಡುತ್ತಾರೆ. ಈಗ ನಾಟಕಗಳನ್ನು ಆಡಬೇಕಾದರೆ ಮಾನ್ಯ ರಾಚಯ್ಯನವರು ಎರಡು ವ್ಯಾನ್ ತುಂಬಾ ಪೋಲೀಸರುಗಳನ್ನು ಕಳುಹಿಸಬೇಕಾಗುತ್ತದೆ. ಈಗ ಎಲ್ಲಾ ಕಡೆ ಎರಡು ಗುಂಪುಗಳಾಗಿ ನಾವೇ ನಾಟಕ ಆಡುತ್ತೇವೆ ನೀವು ಬೇಡ ಎಂದು ಒಂದು ಗುಂಪು ಹೇಳಿ ಗಲಾಟೆ ಮಾಡುತ್ತಾರೆ. ನನ್ನದು ಮುಖ್ಯ ಪಾತ್ರ ಇರುತ್ತದೆ ನನ್ನ ಬಿಟ್ಟು ಹೇಗೆ ನಾಟಕ ಆಡುತ್ತೀರೆಂದು ಇನ್ನೊಂದು ಗುಂಪಿನವರು ಗಲಾಟೆ ಮಾಡುತ್ತಾರೆ. ಈ ಗಲಾಟೆಯನ್ನು ಕಡಿಮೆ ಮಾಡುವುದಕ್ಕೆ ಮಧ್ಯೆ ಪೋಲೀಸಿನವರು ಪ್ರವೇಶ ಮಾಡಬೇಕಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಕಗ್ಗಳಗೊಂಡಿ ಎಂದು ಒಂದು ಊರು ಇದೆ. ಆ ಊರಿನಲ್ಲಿ ಮಾರಮ್ಮನ ಪೂಜೆಯನ್ನು ಮಾಡುತ್ತಾರೆ. ಸಾಮಾನ್ಯವಾಗಿ

ಹರಿಜನರೇ ಈ ಮಾರಮ್ಮನ ಪೂಜೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಇವರುಗಳಲ್ಲೇ ಎರಡು ಗುಂಪುಗಳಾಗಿ ಮಾರಮ್ಮನ ಪೂಜೆ ಮಾಡುವ ಬಗ್ಗೆ ಜಗಳ ಮಾಡುತ್ತಿದ್ದಾರೆ. ಈ ಮಾರಮ್ಮ ಗಲಾಟೆ ಮಾಡುವವರ ಮನೆಯ ಸ್ವತ್ತೆ? ನೀವು ಪೂಜೆ ಮಾಡಿದರೆ ನಾವು ಹೊಡೆಯುತ್ತೇವೆಂದು ಒಂದು ಗುಂಪಿನವರು ಹೆದರಿಸುತ್ತಿದ್ದಾರೆ. ಈಗ ಮಾರಮ್ಮನ ಪೂಜೆ ಮಾಡುವ ಹಾಗೇ ಇಲ್ಲ. ಆಮೇಲೆ, ನಮ್ಮ ತಾಲ್ಲೂಕಿನಲ್ಲಿ ಬಾವಿಗಳನ್ನು ತೋಡಿಸಿ ಸಬ್‌ಸ್ಟ್ಯಾಂಡರ್ಡ್ ಪಂಪುಗಳನ್ನು ಹಾಕಿರುತ್ತಾರೆ. ಈ ರೀತಿ ಸಬ್‌ಸ್ಟ್ಯಾಂಡರ್ಡ್ ಪಂಪುಗಳನ್ನು ಹಾಕಿರುವುದರಿಂದ ನೀರು ಬರುತ್ತಿಲ್ಲ.
ಆದರೆ ನೀರು ಬರಲಿಲ್ಲ. ಅಲ್ಲಿಂದ ನಮ್ಮ ಜನ ಪುನಃ ಪಾಪ ಎಂದುಕೊಂಡು ಮನೆಗೆ ಹೋದರು. ಮರುದಿವಸ ಇನ್ನೊಂದು ಪಂಪ್ ಹಾಕಿದರು, ನೀರು ಬಂತು. ಅಲ್ಲಿಯ ಮಂಡಲ ಪಂಚಾಯತ್‌ನ ಚುನಾವಣೆಯಲ್ಲಿ ಗೆದ್ದವರು ಕಾಂಗ್ರೆಸ್ ಪಕ್ಷದವರು. ಅದಕ್ಕಾಗಿ ಮರುದಿವಸವೇ ಈ ವ್ಯವಸ್ಥೆಯನ್ನು ಮಾಡಿದ ಇಂಜಿನೀಯರ್‌ರವರನ್ನು ಅಲ್ಲಿಯ ದೊಡ್ಡವರು ಎನಿಸಿಕೊಂಡವರು ಕರೆದು ಹೀನಾಮಾನವಾಗಿ ಬೈದು, ಹೀಯಾಳಿಸಿ, ಕನಿಷ್ಟ ಮಾಡಿ ಬಿಟ್ಟರು. ಅದರ ಪರಿಣಾಮವಾಗಿ, ಆ ಅಧಿಕಾರಿ ಇವೊತ್ತು ಹೃದ್ರೋಗಕ್ಕೆ ಬಲಿಯಾಗಿ ಇಲ್ಲಿಯ ಬಸಪ್ಪ ಮೆಮೋರಿಯಲ್ಲಿ ಆಸ್ಪತ್ರೆಯಲ್ಲಿ ಸೇರಿಸಲ್ಪಟ್ಟಿದ್ದಾರೆ. ಒಂದು ವೇಳೆ ಅವನು ಸತ್ತು ಹೋದರೆ ಇದಕ್ಕೆ ಯಾರು ಹೊಣೆ? ಯಾರು ಅವರ ಹೆಂಡತಿ ಮಕ್ಕಳನ್ನು ಕಾಪಾಡುವವರು? ಹಾಗೆಯೇ ಆಕ್ಷನ್‌ಪ್ಲಾನ್‌ನಲ್ಲಿ ಮನೆಗಳನ್ನು ಯಾರಿಗೆ ಕೊಡಬೇಕೆಂಬುದು ಈಗಾಗಲೇ ತೀರ್ಮಾನ ಆಗಿದೆ. ಆದರೆ ಈಗ ಪಕ್ಷದ ಕೆಲವು ಜನರು, ಅವರಿಗೆ ಕೊಡಕೂಡದು ಇವರಿಗೆ ಕೊಡಬೇಕು, ಅವರು ನಮ್ಮವರು, ಇವರು ಅವರವರು, ಎಂದೆಲ್ಲಾ ಮಾಡಿಕೊಂಡು ಏನೇನೋ ಬದಲಾವಣೆ ಮಾಡುತ್ತಿದ್ದಾರೆ. ಇಂತಹ ಒಂದು ಏರ್ಪಾಡನ್ನು ಮಾಡುತ್ತಿದ್ದಾರೆ. ಡಿ.ಡಿ ಸಿಯವರು ಮಾಡಿದ ತೀರ್ಮಾನಕ್ಕೆ ಮಾನ್ಯತೆ ಇಲ್ಲವಾಗಿದೆ. ಇದೆಂತಹ ನ್ಯಾಯ?

ಇನ್ನು ನ್ಯಾಯಬೆಲೆ ಅಂಗಡಿಗಳ ಬಗ್ಗೆ ಹೇಳುವುದಾದರೆ, ಇದು ಮಾನ್ಯ ಲಕ್ಷ್ಮೀಸಾಗರ್‌ರವರ ಇಲಾಖೆ. ಈ ನ್ಯಾಯಬೆಲೆ ಅಂಗಡಿಗಳನ್ನು ಕೊಡಬೇಕಾದರೆ ಒಂದು ಲೆಕ್ಕ ಇದೆ. ೫೦೦ ಕಾರ್ಡ್‌ಗಳು ಇದ್ದರೆ ಕೊಡಬೇಕೆಂದು ನಿಯಮ ಇದೆ. ಆದರೆ ಇವರ ಜನರೇ ಕೇಳಿದರೆ ಆಗ ೧೦೦–೫೦ ಕಾರ್ಡ್‌ಗಳಿದ್ದರೂ ಸಾಕಾಗುತ್ತದೆ. ಅಂಗಡಿಗಳನ್ನು ಕೊಡುತ್ತಾರೆ. ಹೀಗೆ ಮಾಡುವುದಕ್ಕೆ ಇದೇನು ನಿಮ್ಮ ತಾತನ ಮನೆಯ ಗಂಟೇ? ಇಂತಹವರಿಗೆಲ್ಲ ಕೊಟ್ಟುಬಿಟ್ಟು, ಜನ ಅಲ್ಲಿಗೆ ಹೋದರೆ ಹಂಚಿಕೆ ಸರಿಯಾಗಿ ಆಗುತ್ತಿಲ್ಲ. ಹಾಗೆ ಆಗಿದೆ, ನಮಗೆ ಧಾನ್ಯಗಳು ಸಿಕ್ಕಿಲ್ಲ ಎಂದು ದೂರು ಕೊಡಲು ಹೋದರೆ, ನಮ್ಮ ರಾಚಯ್ಯನವರ ಇಲಾಖೆಯ ತುದಿಯ ಬಾಲ ಇದೆಯಲ್ಲ? ಪೋಲೀಸ್ ಸ್ಟೇಶನ್ ಅಲ್ಲಿ ಹೇಳಿಕೊಂಡರೆ ಮತ್ತಷ್ಟು ಕಷ್ಟ ಎದುರಾಗುತ್ತದೆ. ಯಾರು ಕಂಪ್ಲೇಂಟ್ ಕೊಡುತ್ತಾರೆಯೋ ಅವರಿಗೇ ಏಟು ಬೀಳುವ ಪರಿಸ್ಥಿತಿ. ಯಾರು ಅನ್ಯಾಯ ಮಾಡುತ್ತಾರೆ ಅವರಿಗೆ ಏಟು ಇಲ್ಲ. ಇದು ಸುಳ್ಳು ಅಲ್ಲ. ದೇವರಾಣೆಯಾಗಿ ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನಖರ್ಗೆ.— ಮಾನ್ಯ ಸದಸ್ಯೆಯವರು ಅಷ್ಟು ಸರಿಯಾಗಿ ಹೇಳುತ್ತಿದ್ದಾರೆ ಮಾನ್ಯ ಗೃಹಸಚಿವರು...

ಅಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಿ. ಶಿಸ್ತಿನಿಂದ ಹೋಗೋಣ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ–ಇನ್ನು ಗುಂಡ್ಲುಪೇಟೆಯಲ್ಲಿದ್ದ ಲಿಂಗಾಯತ ಆಫೀಸರ್ಸ್‌ಗಳು ಚುನಾವಣೆಯಲ್ಲಿ ಕಾಂಗ್ರೆಸ್‌ನವರಿಗೆ ಸಹಾಯ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿತ್ತು. ಅದನ್ನೆ ನೋಡಿಕೊಂಡು ಅಂತಹ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ. ಅವರನ್ನು ಆ ತಾಲೂಕಿನಿಂದ ಹೊರಗೆ ಹಾಕುತ್ತಿದ್ದಾರೆ. ಹಾಗೆಂದ ಮೇಲೆ ಇವರ ಆಫೀಸರ್ಸ್ ಯಾರೂ ಇವರಿಗೆ ಸಹಾಯ ಮಾಡಿಲ್ಲವೇ? ವಿಲೇಜ್ ಅಕೌಂಟ್ಸೆಂಟ್ಸ್‌ಗಳು, ಇತರರು ಇವರಿಗೆ ಬೇಕಾದ ಹಾಗೆ ಸಹಾಯ ಸಹಕಾರ ಮಾಡಲಿಲ್ಲವೇ? ಕಾರಿನಲ್ಲಿ ಓಡಾಡಲಿಲ್ಲವೇ? ಸರಕಾರಿ ವಾಹನಗಳನ್ನು ಬೇಕಾದ ಹಾಗೆ ಉಪಯೋಗ ಮಾಡಲಿಲ್ಲವೇ? ಸ್ಪೆಷಲ್ ಡೆಪ್ಯುಟಿ ಕಮಿಶನರ್‌ರವರ ಕಾರು ಅಲ್ಲಿಯೇ ಇರಲಿಲ್ಲವೇ? ಸರಕಾರಿ ವಾಹನ ಎಂಟು ದಿವಸಗಳ ಕಾಲ ಅಲ್ಲಿ ಓಡಾಡುತ್ತಾ ಜನರನ್ನು ತುಂಬಿಕೊಂಡು ಹೋಗಿಲ್ಲವೇ? ಅದರ ಬಗ್ಗೆ ನಮ್ಮಲ್ಲಿ ಪುರಾವೆಗಳು ಇಲ್ಲವೇ? ಇದು ಯಾರಿಗೆ ಗೊತ್ತಿಲ್ಲವೇ? ಒಟ್ಟಿನಲ್ಲಿ ಇವರು ಮಾಡಿದ ಕೆಲಸಗಳಿಗೆ ನಾವು ಶಹಬಾಸ್ ಎಂದು ಬಿಟ್ಟುಬಿಡಬೇಕು ಅಷ್ಟೇ. ಅನುದಾನವನ್ನು ಕೊಟ್ಟಿದ್ದಾರೆ ಎಂದು ಇವರನ್ನು

ಹೊಗಳಬೇಕು. ಇವರು ಮಾಡುವ ಎಲ್ಲ ಕೆಲಸವನ್ನು ಡಂಗುರ ಹಾಕುತ್ತಾರೆ. ಮೈಸೂರಿನಲ್ಲಿ ಕುಡಿಯುವ ನೀರಿನ ಬಗ್ಗೆ ಮಾನ್ಯ ತಿಮ್ಮೇಗೌಡರು ಒಂದು ರೆಸಲ್ಯೂಷನ್ ಮೂವ್ ಮಾಡಿದರು. ಅದು ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಆದುದು. ೨೦ ಲಕ್ಷ ರೂಪಾಯಿಗಳು ಕುಡಿಯುವ ನೀರಿನ ಸರಬರಾಜಿಗಾಗಿ ಬೇಕೆಂದಿದ್ದಾರೆ. ಅನುದಾನವನ್ನು ಕೊಟ್ಟಿದ್ದೇವೆ, ನಿಮ್ಮ ಕೆಲಸ ನೀವೇ ಮಾಡುವುದು ಎಂಬುದು ಸರಕಾರದ ನೀತಿ, ೫ ಕೋಟಿ ರೂಪಾಯಿಗಳಷ್ಟು ಚುನಾವಣೆಗಾಗಿ ಆಗಿದೆ.

ಇಷ್ಟು ಡಂಗೂರ ಹೊಡೆದುಬಿಟ್ಟು ಕೊನೆಗೆ ನಮಗೆ ಕುಡಿಯುವ ನೀರಿಗಾಗಿ ೨೫ ಲಕ್ಷ ಕೊಡಿ ಎಂದು ರೆಸಲ್ಯೂಷನ್ ಮಾಡುತ್ತದೆ. ಜಿಲ್ಲಾಪರಿಷತ್ತು, ಇಂಥ ಎಲೆಕ್ಷನ್ ಏತಕ್ಕಾಗಿ ಮಾಡಬೇಕು ? ನಮ್ಮ ಜೆ. ಹೆಚ್. ಪಟೇಲರು ನೇರವಾಗಿ ಒಪ್ಪಿಕೊಂಡರು. ಹೌದು ಇದು ರಾಜಕೀಯದ ಕಾಯಿದೆ, ಇಂಥಿಂಥವರನ್ನು ನಾವು ನಾಮಿನೇಟ್ ಮಾಡುತ್ತೇವೆ ಎಂದು. ಹಾಗೇ ಇವರೂ ಇಲ್ಲಿ ಹೇಳಬಹುದಾಗಿತ್ತು. ಆದರೆ ಹಾಗೆ ಮಾಡದಿರುವುದು ಸ್ವಲ್ಪವೂ ಸರಿಯಲ್ಲ. ಜಿಲ್ಲಾಪರಿಷತ್ತಿನ ಎಲೆಕ್ಷನ್ನು ಆಯಿತು. ಇವರ ಥಿಂಕ್ ಟ್ಯಾಂಕ್‌ಗೆ ಬರೋಣ. ಅದು ಬಂತು. ಏನೇನು ಮಾಡಿತು ಎಂಬ ಯಾವ ರಿಪೋರ್ಟೂ ಇಲ್ಲ, ಯಾವ ತರಹ ಅನುಕೂಲ ಆಗಿದೆ, ಏನೇನು ಸಜೆಷನ್ ಮಾಡಿದೆ ಎಂಬುದೂ ಗೊತ್ತಿಲ್ಲ. ಇದರ ಮೇಲೆ ಇನ್ನೊಂದು ಎಕ್ಸ್‌ಪರ್ಟ್‌ನ ಕಮಿಟಿ prospective plan ಮಾಡಿದ್ದಾರೆ. ಹಾಗಿದ್ದರೆ ಅದು ಏತಕ್ಕೆ, ಮತ್ತೆ ಇದು ಏತಕ್ಕೆ ? ಒಂದೂ ನನಗೆ ಅರ್ಥವಾಗುವುದಿಲ್ಲ. ಥಿಂಕ್ ಟ್ಯಾಂಕ್ ಮತ್ತು ಎಕ್ಸ್‌ಪರ್ಟ್ ಕಮಿಟಿಗಳು ಏನೇನು ಮಾಡುತ್ತವೆ ಒಂದೂ ಅರ್ಥವಾಗುತ್ತಿಲ್ಲ. ಒಂದು ಪಕ್ಷ ಇವರ ಥಿಂಕ್ ಟ್ಯಾಂಕ್ ಸಿಮೆಂಟ್ ಟ್ಯಾಂಕ್ ಆಗಿತ್ತು ಎಂದರೆ ಅದನ್ನು ಖಾಲಿ ಮಾಡಿಸಬೇಕಾಗಿತ್ತು, ಇಲ್ಲ ಎಕ್ಸ್‌ಪರ್ಟ್ ಕಮಿಟಿ ಪ್ರಯೋಜನಕ್ಕೆ ಬರದಿದ್ದರೆ ಅದನ್ನು ರದ್ದು ಮಾಡಬೇಕಾಗಿತ್ತು. ಅದನ್ನು ಮಾಡದೆ ಸರ್ಕಾರದ ಹಣ ಖರ್ಚು ಮಾಡಲು ಅದೇಕೆ ಇವರು ಕುಣಿಯುತ್ತಿದ್ದಾರೋ ನನಗೆ ಅರ್ಥವಾಗುವುದಿಲ್ಲ.

ಐಎಎಸ್ ಆಫೀಸರ್‌ಗಳನ್ನು ನಾವು ಸರ್ವಜ್ಞರು ಎಂದು ಭಾವಿಸಿಕೊಂಡಿದ್ದೇವೆ. ಅವರನ್ನು ಬಿಟ್ಟರೆ ಕೆಲಸ ನಡೆಯುವುದಿಲ್ಲ ಎಂದು ಶಂಕೆ ಇದೆ. ಅಧ್ಯಕ್ಷರೆ, ಈ ಐಎಎಸ್ ಅಧಿಕಾರಿಗಳನ್ನು ಟೆಕ್ನಿಕಲ್ ಡಿಪಾರ್ಟ್‌ಮೆಂಟ್‌ಗಳಿಗೆ ಏಕೆ ಹಾಕಬೇಕು ? ಅವರಿಗೆ ಬದನೇಕಾಯಿಗೂ ಬಾಳೇಕಾಯಿಗೂ ವ್ಯತ್ಯಾಸ ಗೊತ್ತಿರುವುದಿಲ್ಲ, ರಾಗಿಗೂ ಜೋಳಕ್ಕೂ ವ್ಯತ್ಯಾಸ ಗೊತ್ತಿರುವುದಿಲ್ಲ. ಟೆಕ್ನಿಕಲ್ ಡಿಪಾರ್ಟ್‌ಮೆಂಟ್‌ಗಳಿಗೆ ಇವರನ್ನು ಹಾಕಿದರೆ ಅವರೆಲ್ಲ ಏನು ಬ್ರಹ್ಮನ ಮರಿಗಳೇ ? ಅವರಲ್ಲೇ 'ಯಾರು ಎಕ್ಸ್‌ಪರ್ಟ್ ಇದ್ದರೆ ಕೊಡಿ ಆದರೆ ಎಲ್ಲರನ್ನೂ ತಂದು ಹಾಕಬೇಡಿ. ಇದು ಸ್ವಲ್ಪವೂ ಸರಿಯಲ್ಲ.

ಅಧ್ಯಕ್ಷರೇ ಈ ಮಂತ್ರಿಗಳು ಈ ಸದನದಲ್ಲಿ ತಮ್ಮ ಎದುರುಗಡೆ ಎಂಥೆಂಥ ಮಾತುಗಳನ್ನು ಆಡುತ್ತಾರೆ. ಹೇಳಿದ್ದರ ಬಗ್ಗೆ ಏನಾದರೂ ನಿಗಾ ಇದೆಯೋ? ದೇವೇಗೌಡರು ತಪ್ಪಿದ್ದರೆ ಪ್ರಿವಿಲೇಜ್‌ಗೆ ಹಾಕಿ, ಅಲ್ಲಿಗೆ ಕಳಿಸಿ, ಇಲ್ಲಿಗೆ ಕಳಿಸಿ ಎನ್ನುತ್ತಾರೆ. ನಮಗೇನು ಬೇರೆ ಉದ್ಯೋಗ ಇಲ್ಲವೇ ? ಅವರ ಹಿಂದೆ ಓಡಾಡಿಕೊಂಡಿರುವುದು ನಮ್ಮ ಕೆಲಸವೇ ? ಅಶ್ಯೂರೆನ್ಸ್ ಕೊಟ್ಟ ಮೇಲೆ ಅವನ್ನು ಮಾಡುವ ನಿಗಾ ಇಲ್ಲವೇ ? ಹಿಂದೆ ಮಾನ್ಯ ರಘುಪತಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಗುಂಡ್ಲುಪೇಟೆಗೆ ಬಂದು ಸ್ಕೂಲಿಗೆ ಬಿಲ್ಡಿಂಗ್ ಇಗೋ ಮಾಡಿಸಿಕೊಡುತ್ತೇನೆ ಎಂದು ಹೇಳಿ ಹೋದರು, ಇದುವರೆಗೂ ಬರಲಿಲ್ಲ, ಕೆಲಸ ಆಗಲಿಲ್ಲ. ಆಮೇಲೆ ತಿಮ್ಮೇಗೌಡರು ರೆಡ್ಡಿ ಕೇಸಿನಲ್ಲಿ ಭರವಸೆ ಕೊಟ್ಟರು, ಯಾವುದೂ ನಡೆಯಲಿಲ್ಲ ಆ ಮೇಲಿಂದ ಬಸವಣ್ಣಪ್ಪನವರು ಅಂಗನವಾಡಿ ತೆಗೆಸಿಕೊಡುತ್ತೇನೆ ಎಂದು ಭರವಸೆ ಕೊಟ್ಟರು ಇದುವರೆಗೂ ಆಗಿಲ್ಲ. ನಾನು ಏಕೆ ಎಂದು ಅವರನ್ನು ಕೇಳಿದರೆ ಜನವರಿ ಒಳಗೆ ಮಾಡಿಸಿಕೊಡುತ್ತೇನೆ ಎಂದರು. ಈಗಾಗಲೇ ಮಾರ್ಚಿ ಆಗಿ ಹೋಯಿತು. ಇವರುಗಳಿಗೆ ಹೌಸ್‌ನಲ್ಲಿ ಮೆಂಬರ್ಸ್‌ಗೆ ಕೊಟ್ಟಿರುವ ಅಶ್ಯೂರೆನ್ಸ್‌ಗಳೇ ಜ್ಞಾಪಕ ಇಲ್ಲದಿದ್ದರೆ ಇನ್ನು ಅದೇನು ಅಡ್ಮಿನಿಸ್ಟ್ರೇಷನ್ ಮಾಡುತ್ತಾರೋ ನೀವೇ ಹೇಳಿ ?

ಮೊನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಹೆಣ್ಣು ಮಕ್ಕಳ ಬಗ್ಗೆ ಒಂದು ಹಾಸ್ಯದ ಚಟಾಕಿಯನ್ನು ಹಾರಿಸಿಬಿಟ್ಟರು, ಶ್ರೀಮತಿ ನಾಗರತ್ನಮ್ಮನವರು ಅವರ ಶೈಲಿಯಲ್ಲಿ ಹೇಳಿಬಿಟ್ಟರು ಟಾಯ್‌ಲೆಟ್ಸ್ ಬಿಟ್ಟು ಹೆಣ್ಣು ಮಕ್ಕಳಿಗೆ ಇನ್ನೇನೂ ಇಲ್ಲ ಈ ಬಡ್ಜೆಟ್ಟಿನಲ್ಲಿ ಎಂದು. ಈ ಬಡ್ಜೆಟ್ಟಿನಲ್ಲಿ ನಿಜವಾಗಲೂ ಏನೂ ಇಲ್ಲ ಹೆಣ್ಣು ಮಕ್ಕಳಿಗೆ ಏನು ಮಾಡಿದ್ದಾರೆಂದು ಹಾಸ್ಟೆಲ್ ಫಾರ್

ವಿಮೆನ್ ಎಂಪ್ಲಾಯಿಸ್, ಇದನ್ನು ಬಿಟ್ಟರೆ ಇನ್ನೇನೂ ನಾನೂ ನೋಡಲಿಲ್ಲ, ನಿಮಗೆ ಬೇಕೋ ಬೇಡವೋ ನಾವು ೫೧ ಪರ್ಸೆಂಟ್ ಇದ್ದೇವೆ ನಿಮಗೆ ಬೇಡದೇ ಇರಬಹುದು ಅದರೂ ನಾವು ಕೇಟಗರಿಗೆ ಸೇರುತ್ತೇವೆ ? ಈ ೫೧ ಪರ್ಸೆಂಟ್ ಜನ. ನಾವೇನು ಅನ್‌ಟಚಬಲೇ, ಅಡಿಗೆಯವರೇ ಅಥವಾ ದೋಭಿಗಳೇ ಅಥವಾ ಸ್ವೀಪರ್‌ಗಳೇ ಅಥವಾ ಪುರುಷರ ಕೈಯ್ಯಲ್ಲಿನ ಅಟಿಗೆ ಸಾಮಾನುಗಳೇ ಇಲ್ಲವೇ ಬಾಂಡೆಡ್ ಲೇಬರ್‌ಗಳೇ, ಇದರಲ್ಲಿ ನಮ್ಮನ್ನು ಯಾವ ಕೇಟಗರಿಗೆ ಸೇರಿಸುತ್ತೀರಿ ?

ಶ್ರೀ ಬಿ. ರಾಚಯ್ಯ.—ಅವರು ಹೇಳಿದ ಗುಣಗಳೆಲ್ಲಾ ತಾಯಿಯಾದವರಲಿ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನ್ನನ್ನು ಯಾವ ಕೇಟಗರಿಗೆ ಸೇರಿಸುತ್ತೀರಿ, ನಾವು ೫೧ ಪರ್ಸೆಂಟ್ ಇದ್ದೇವೆ. ಈ ಹೆಣ್ಣು ಮಕ್ಕಳನ್ನು ಮೇಲಕ್ಕೆ ತರುವುದಕ್ಕೆ ಪ್ಲಾನ್ ಬೇಡವೇ, ಯಾವ ತರಹದ ಪ್ಲಾನ್ ಇದೆ ? You cannot make 51% people idle. You cannot make them a national waste. Can you ? What they say is, there are large number of women employees working in Government offices, they are coming from far away places. Therefore, it is proposed to set up a hostel. The Government have sanctioned a hostel for them at Mangalore at an estimated cost of Rs. 94 lakhs. Is this enough ? I want to ask the Government, is this programme enough for 51% of the poupulation ? ಇವರಿಗೆ ಎಜುಕೇಷನ್ ನೀಡಲಿಕ್ಕೆ ಏನಾದರೂ ಮಾಡಿದ್ದೀರಾ ? ಎಲ್ಲರಿಗೂ ಗೊತ್ತು ನಾವು ಹಳ್ಳಿಯಿಂದ ಬಂದಿರುವವರು ಹೆಣ್ಣು ಮಕ್ಕಳು ಶಾಲೆಗೆ ಹೋಗುವುದು ಎಷ್ಟು ಕಷ್ಟ ಓದುವುದಕ್ಕೆ ಹಳ್ಳಿಯಿಂದ ಹಳ್ಳಿಗೆ ಬಂದು ಎಷ್ಟು ಕಷ್ಟಪಡುತ್ತಾರೆ ಎಂದು. ಅವರಿಗೋಸ್ಕರ ರೆಸಿಡೆನ್ಸಿಯಲ್ ಶಾಲೆಗಳನ್ನೇನಾದರೂ ಮಾಡಿದ್ದೀರಾ ? ವೊಕೇಷನಲ್ ಟ್ರೈನಿಂಗ್ ಏನಾದರೂ ನೀಡುತ್ತೀರಾ ? ಇವರ ಟ್ರೈನಿಂಗ್‌ಗೆ ಏನಾದರೂ ಹಣವನ್ನು ಇಟ್ಟಿದ್ದೀರಾ ? ಸೆಲ್ಪ್ ಎಂಪ್ಲಾಯ್‌ಮೆಂಟ್ ಸ್ಕೀಮಿಗೆ ಏನಾದರೂ ದುಡ್ಡು ಇಟ್ಟಿದ್ದೀರಾ ? ಮೊನ್ನೆ ದಿವಸ ಒಬ್ಬ ಹೆಣ್ಣು ಮಗಳು ಬಂದು ಹೇಳಿದಳು ಸೆಲ್ಪ್ ಎಂಪ್ಲಾಯ್‌ಮೆಂಟ್ ಸ್ಕೀಮಿಗೆ ಅರ್ಜಿ ಹಾಕಿ ಮನೆ ಮನೆ ಬಾಗಿಲಿಗೆ ಹೋಗಿ ಇದ್ದ ಬದ್ದದ್ದನ್ನೆಲ್ಲಾ ಮಾರಿ ಎರಡು ಸಾವಿರ ರೂಪಾಯಿ ಲಂಚ ಕೊಟ್ಟಳು ಇಂಟರ್‌ವ್ಯೂ ತೆಗೆದುಕೊಳ್ಳಲು, ಇಂಟರ್‌ವ್ಯೂ ಅವಳಿಗೆ ಬರಲಿಲ್ಲ ಎರಡು ಸಾವಿರ ರೂಪಾಯಿ ಕೂಡ ಹೋಯಿತು. Just as you keep some money a part for SCs/STs so also you keep some money for women. These people should be kept in mind, they are weaker then men. Physically they may be weak I agree, but mentally they are very strong and basicically honest. ದೈಹಿಕವಾಗಿ ಹೆಣ್ಣು ಮಕ್ಕಳು ವೀಕ್ ಆಗಿರುತ್ತಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ they are strong mentally and honest. ಇದನ್ನು ಕನ್‌ಸಿಡರ್ ಮಾಡದೇ ೫೧ ಪರ್ಸೆಂಟ್ ಪಾಪ್ಯುಲೇಷನ್ ಅನ್ನು ಕೆಳಗೆ ಹಾಕಿಕೊಂಡು ಕಾಲಿನಲ್ಲಿ ತುಳಿದುಕೊಂಡು ರಾಜ್ಯವಾಳುತ್ತೇವೆಂದು ಹೇಳಿದರೆ ಎಷ್ಟು ದಿವಸ ನೀವು ಅಧಿಕಾರದಲ್ಲಿ ಉಳಿಯುವುದಕ್ಕಾಗುತ್ತದೆ, ಇವರು ಮಾಡುತ್ತಿರುವುದು ಬಹಳ ಅನ್ಯಾಯ. You have further stated in your Annual Report that the balance which were classified as grievance petitions were forwarded to different departments for necessary action. You have said that during this period, reply for 9,649 cases have been received of which 1266 cases have been settled in favour of the petitioners. ಇನ್ನು ಬಾಕಿಯುವರದು ಕಥೆ ಏನು ? ೯೬೪೯ ರಲ್ಲಿ ೧೨೬೬ ಸೆಟ್ಲ್ ಆಗಿ ಹೋಯಿತು. ಇನ್ನುಳಿದ ಬಾಕಿಯುವರದು ನಿಮ್ಮ ಲೆಕ್ಕದ ಪ್ರಕಾರ ದಾಖಲಾತಿ, ಫಿರ್ಯಾದಿ ಏನೂ ಇಲ್ಲವೇ ?

ಇನ್‌ಫರ್ಮೇಷನ್ ಅಂಡ್ ಪಬ್ಲಿಸಿಟಿ ವಿಚಾರದಲ್ಲಿ ಹೇಳಬೇಕೆಂದರೆ ೧೯೮೫–೮೬ರಲ್ಲಿ ೨೯.೫೭ ಲಕ್ಷ, ೧೯೮೭–೮೮ರಲ್ಲಿ ೧೨೨.೪೪ ಲಕ್ಷ ಅಂದರೆ ಅಲ್ಲಿಗೆ ೪೦೦ ಪರ್‌ಸೆಂಟ್ ಜಾಸ್ತಿ. ಇಷ್ಟೊಂದು ಜಾಸ್ತಿ ಏತಕ್ಕೆ ? ಇಲ್ಲಿ ಕೆಲವು ಕಡೆ ಏನೇನು ಪುಸ್ತಕಗಳನ್ನು ಅಚ್ಚು ಮಾಡಿಸಿದ್ದೇವೆ ಎಂದು ಹೇಳಿದ್ದಾರೆ. ಜಿಲ್ಲಾ ಪರಿಷತ್ತಿಗೆ ಏನೇನು ಅಚ್ಚು ಮಾಡಿಸಿದ್ದಾರೆ ಎಂದು ಎಲ್ಲವನ್ನೂ ತಂದು ಇಲ್ಲಿ ಹೇಳಿದ್ದಾರೆ. ಭಿತ್ತಿ

ಪತ್ರಗಳು ಮೂರು ವರ್ಷ ತಲಾ ೫೦ ಸಾವಿರ ಪತ್ರ, ಹ್ಯಾಂಡ್ ಬಿಲ್ಸ್ ೫ ಲಕ್ಷ, ಕರಪತ್ರ, ಕಿರುನುಡಿಗಳ ಪ್ರತಿ ವಿಷಯದ ಮೇಲೆ ಹತ್ತು ಸಾವಿರ ಪ್ರತಿಗಳು ಸಿನಿಮಾ ಸ್ಲೈಡ್ಸ್‌ಗಳು ಒಂದು ಸಾವಿರ, ಜಿಲ್ಲಾ ಪರಿಷತ್ತು ಪಂಚಾಯಿತ್‌ರಾಜ್ ಕುರಿತ ಸಚಿತ್ರ ಪತ್ರ ೫೦ ಸಾವಿರ ಪ್ರತಿಗಳು, ಹೆದ್ದಾರಿ ಫಲಕಗಳು ೪೦ ನಿರ್ಮಾಣ ಮಾಡಲಾಗಿದೆ, ಟಿನ್ ಬೋರ್ಡ್‌ಗಳು ೫೦ ಸಾವಿರ ಇದೆಲ್ಲಾ ಏನು ? ನಮ್ಮ ಬೊಕ್ಕಸದಲ್ಲಿ ಬೇರೆ ಕೆಲಸಕ್ಕೆ ಏನೂ ದುಡ್ಡು ಬೇಡ. ಇವರ ಎಲೆಕ್ಷನ್ ಮಾಧ್ಯಮಕ್ಕೆ ಇದು ಬೇಕು. ಪ್ರಚಾರ, ಡಂಗೂರ ಹೊಡೆಸುವುದಕ್ಕೆ ಇಷ್ಟು ದುಡ್ಡು ಖರ್ಚಾಗಬೇಕೆ ? ೨೪ ಲಕ್ಷ ಇದ್ದದ್ದು ೧೨೨ ಲಕ್ಷ ಇವತ್ತಿನ ಅಂದಾಜು. ಈ ಸಪ್ಲಿಮೆಂಟರಿ ಡಿಮ್ಯಾಂಡ್ ಏನು ಬರುತ್ತದೆಯೋ ಗೊತ್ತಿಲ್ಲ, ಇದೆಲ್ಲವನ್ನೂ ಸರಿ ಮಾಡುವುದಕ್ಕೆ ಬರಬಹುದು. ಇದು ಒಂದು ರೀತಿಯಲ್ಲಿ ನಡೆಯಿತು. ಜೀರೋ ಬಜೆಟ್ ಬಗ್ಗೆ ಹೋದಸಾರಿ ಹೇಳಿದ್ದರು. ಉಳಿಸುತ್ತೇವೆ, ಉಳಿಸುತ್ತೇವೆ ಎಂದು ಹೇಳಿ ಯಾವುದರಲ್ಲಿ ಉಳಿಸುವುದು? ಚೀಫ್‌ಮಿನಿಸ್ಟರ್ ಬಜೆಟ್‌ನಲ್ಲಿ ಮತ್ತೆ ಹೇಗೆ ದುಡ್ಡು ಖರ್ಚಾಗುತ್ತಿದೆ ಎನ್ನುವುದನ್ನು ಸ್ವಲ್ಪ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಬಜೆಟ್ ಮೆಮೊರಾಂಡಮ್‌ನಲ್ಲಿ ೧೪೫ನೇ ಪುಟದಲ್ಲಿ ಇದೆ. ಅದು ಏನೆಂದರೆ ೧೯೮೫–೮೬ರಲ್ಲಿ ೮ ಲಕ್ಷ ರೂಪಾಯಿ ಖರ್ಚು ಇದ್ದರೆ ೧೯೮೭–೮೮ನೇ ಸಾಲಿನಲ್ಲಿ ೨೪೫ ಲಕ್ಷ ತೋರಿಸಿದೆ. ಅಂದರೆ ಶೇಕಡ ಮೂರು ಸಾವಿರ ಪರ್‌ಸೆಂಟ್ ಅಷ್ಟು ಹೆಚ್ಚಾಯಿತು. ಇದೇನು? ಇದಕ್ಕೆ ಕಾರಣ ಏನೂ ಇಲ್ಲವೇ? ಅಚ್ಚು ಹಾಕಿಸಿದರು, ಕೊಟ್ಟರು. ಯೆಸ್ ಯೆಸ್ ಎಂದು ಹೇಳಿಬಿಟ್ಟರು. ಇದಕ್ಕೆ ಹೇಳುವವರು. ಕೇಳುವವರು ಏನೂ ಬೇಡವೇ ?

ಇದು ನೀವು ಹಣವನ್ನು ಯಾವ ತರಹ ಖರ್ಚು ಮಾಡಿದ್ದೀರಿ ಎಂದು ತೋರಿಸುತ್ತದೆ. ೩,೦೦೦ ಪರ್ಸೆಂಟ್ ಜಾಸ್ತಿ ಆಗಿದೆ. ಇದು ಬಹಳ ಜಾಸ್ತಿ ಆಯಿತು. ಇದನ್ನು ಜನ ಬಹಳ ದಿವಸ ಸಹಿಸಿಕೊಳ್ಳುವುದಿಲ್ಲ. ಜನಗಳಿಗೆ ಎಷ್ಟು ಸರ್ತಿ ಫೂಲ್ ಮಾಡಬಹುದು, ಒಂದು ಸಾರಿ, ಎರಡು ಸಾರಿ. ಆದರೆ ಯಾವಾಗಲೂ ಮಾಡುವುದಕ್ಕಾಗುವುದಿಲ್ಲ: ದಿನವೆಲ್ಲಾ ಇದೇ ಉದ್ಯೋಗ ಆಯಿತು ಅಂದರೆ ಜನ ಇದೆಲ್ಲಾ ಏನು ನಡೆಯುತ್ತಾ ಇದೆ ಎಂದು ಯೋಚನೆ ಮಾಡುತ್ತಾರೆ. ಹೀಗೆ ಮಾಡುವುದರಿಂದ ನೀವು ಯಾರೂ ಬುದ್ಧಿವಂತರಾಗುವುದಿಲ್ಲ ಅಥವಾ ಪ್ರವೀಣರೂ ಆಗುವುದಿಲ್ಲ.

ಮಾನ್ಯ ಮುಖ್ಯಮಂತ್ರಿಗಳ ಬೇಡಿಕೆಗಳ ವಿವರ ಹೇಗೆ ಇದೆ ಅಂದರೆ ಡಿಮ್ಯಾಂಡ್ ನಂಬರ್ ೪೦ರಲ್ಲಿ, ಸೆಕ್ರೆಟೆರಿಯೇಟ್ ಐಟೆಮ್ಸ್‌ನಲ್ಲಿ. ಪೇಜ್ ೨೦ ರಿಂದ ೫೨ರಲ್ಲಿ ೧೯೮೫–೮೬ರಲ್ಲಿ ೪೪೮.೯ ಇದ್ದರೆ, ಈ ಸರ್ತಿ ಅಂದರೆ ೧೯೮೭–೮೮ರಲ್ಲಿ ೬೬೦.೦೦ ಇದೆ, ಇದರಲ್ಲಿ ೪೮.೩ ಪರ್ಸೆಂಟ್ ಜಾಸ್ತಿ ಆಗಿದೆ.

ವಿಜಿಲೆನ್ಸ್‌ಗೆ ೧೯೮೫–೮೬ರಲ್ಲಿ ೧೦೦.೩೬ ಇದ್ದರೆ, ೧೯೮೭–೮೮ರಲ್ಲಿ ೧೬೦.೨೩ ಇದೆ. ಅಂದರೆ ಶೇಕಡ ೬೦ ಜಾಸ್ತಿ ಆಯಿತು.

ಹೋಮ್ ಗಾರ್ಡ್ಸ್‌ಗಳ ಬಗ್ಗೆ ೧೯೮೫–೮೬ರಲ್ಲಿ ೧೩೭.೮೩ ಇದ್ದರೆ, ೧೯೮೭–೮೮ರಲ್ಲಿ ೨೨೧.೭೪ ಇದೆ. ಇದರಿಂದ ೬೦.೯ ಪರ್ಸೆಂಟ್ ಜಾಸ್ತಿ ಆಗಿದೆ.

ಗೆಸ್ಟ್ ಹೌಸ್‌ಗೆ ಹೋದ ವರ್ಷ ೭೮.೮೪ ಇದ್ದರೆ, ಈ ವರ್ಷ ೧೧೩.೩೮ ಇದೆ. ಅಂದರೆ ೪೪.೧ ಪರ್ಸೆಂಟ್ ಜಾಸ್ತಿ ಆಗಿದೆ.

ಆದರೆ ಎಕ್ಸ್‌ಪೆನ್ಸಸ್ ಕಳೆದ ವರ್ಷ ೭.೯೭ ಇದ್ದರೆ, ಈ ವರ್ಷ ೨೪೫.೨೭ ಇದೆ. ಅಂದರೆ ೨,೯೭೭.೪ ಪರ್ಸೆಂಟ್ ಜಾಸ್ತಿ ಆಯಿತು. ಇತರೆ ಎಕ್ಸ್‌ಪೆನ್ಸಸ್ ಎಂದರೆ ಕಮಿಟಿಗಳು, ರಿಹ್ಯಾಬಿಲಿಟೇಷನ್ ಇತ್ಯಾದಿ ಇದೆ.

ಎಕನಾಮಿಕ್ ಸರ್ವೀಸ್‌ನಲ್ಲಿ ಹೋದ ವರ್ಷ ೨೭೬.೬೩ ಇದ್ದರೆ ಈಗ ೪೯೮.೬೦ ಇದೆ, ಇದರಿಂದ ೮೦.೩ ಪರ್ಸೆಂಟ್ ಜಾಸ್ತಿ ಆಗಿದೆ.

ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಹೋದ ವರ್ಷ ೧೯೫೯.೦೦ ಇದ್ದರೆ, ಈಗ ಅಲ್ಲಿ ೪೯ ೨ ಪರ್ಸೆಂಟ್ ಜಾಸ್ತಿ ಆಗಿದೆ. ಬಹಳ ಚೆನ್ನಾಗಿದೆ ನಿಮ್ಮ ಖರ್ಚುಗಳು. ಇದೆ ಏನು ನಿಮ್ಮ ಜೀರೋ ಬಜೆಟ್. ಎಷ್ಟು ಚೆನ್ನಾಗಿದೆ ನೋಡಿ. ಇದೆಲ್ಲಾ ಚೀಫ್ ಮಿನಿಸ್ಟರ್ ಅವರ ಅಡ್ಮಿನಿಸ್ಟ್ರೇಷನ್ ವೈಖರಿ.

ಕಲ್ಚರಲ್ ಆಸ್ಪೆಕ್ಟ್ಸ್‌ಗೆ ಹೋದರೆ ನಮ್ಮ ಚಿತ್ರಕಲಾ ಪರಿಷತ್ ವಿಚಾರದಲ್ಲಿ ಒಂದು ಬಹಳ ಚೆನ್ನಾಗಿ ಮಾತು ಆಡಿದ್ದಾರೆ. The financial assistanceis being givingfor various schemes of the Karnataka Chitrakala Parishat. ನಾನು ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಬಹಳ ಆಭಾರಿ ಆಗಿದ್ದೇನೆ As a President of the Chitrakala Parishat ಕೃತಜ್ಞತೆ ಹೇಳಬೇಕಾದದ್ದು ನನ್ನ ಕರ್ತವ್ಯ. ಈ ಚಿತ್ರಕಲಾ ಪರಿಷತ್ ಬಗ್ಗೆ ಎಲ್ಲಾ ಸರ್ಕಾರಗಳು ಮೊದಲಿನಿಂದ ಇದರ ಬಗ್ಗೆ ಬಹಳ ವಿಶೇಷವಾದ ಗಮನ ತೆಗೆದುಕೊಂಡು ಅದನ್ನು ನಿರ್ವಹಿಸಿಕೊಂಡು ಬರುವುದಕ್ಕೆ ಮತ್ತು ಬಿಲ್ಡ್ ಅಪ್ ಮಾಡುವುದಕ್ಕೆ ಸಹಾಯ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ವಿಶೇಷವಾದ ಇನ್‌ಟರೆಸ್ಟ್ ತೆಗೆದುಕೊಂಡಿದ್ದಾರೆ ಈ ಸರ್ತಿ ನಾವು ೨ ವರ್ಷದಲ್ಲಿ ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್‌ನಲ್ಲಿ, ಪೋಸ್ಟ್ ಗ್ರಾಜುಯೇಷನ್ ಕೋರ್ಸ್‌ಗೆ ಅಪ್ಲೈ ಮಾಡಿದ್ದೇವೆ. ಪರ್ಮಿಷನ್ ಸಿಕ್ಕಬಹುದು. ಇದು ಒಂದು ವಿಶಿಷ್ಟವಾದ ಕಾಲೇಜ್. ಇದು ನಮ್ಮ ಕರ್ನಾಟಕದಲ್ಲಿ ಇರಬಹುದು. ಅಥವಾ ಸೌತ್ ಈಸ್ಟ್ ಏಶಿಯಾ ಅಥವಾ ಬಾಕಿ ಕಡೆ ಇರಬಹುದು, ಅಲ್ಲಿ ಬರತಕ್ಕಂಥ, ತಯಾರಾಗತಕ್ಕ ಸ್ಟೂಡೆಂಟ್ಸ್‌ಗಳು ಮತ್ತು ಹೇಳಿಕೊಟ್ಟಿರುವಂಥ ಟೀಚರ್ಸ್ ಬಹಳ ಚೆನ್ನಾಗಿ ಆರ್ಟಿಸ್ಟಿಕ್ ಸಾಮಾನು ಮತ್ತು ಪೇಯಿಂಟಿಂಗ್ಸ್ ಮಾಡುತ್ತಾರೆ. ಈ ವೈಖರಿ ನಮ್ಮ ಹನುಮಂತಯ್ಯನ ಕಾಲದಲ್ಲಿ ಇದ್ದಂತಹ ವೈಖರಿ. ಅವರು ಒಂದು ಕಾನೂನು ಅಲ್ಲ. ಅವರಿಗೆ ಇಷ್ಟ ಇತ್ತು ಅವರು ಅನೇಕ ಸರ್ತಿ ಈ ಬಗ್ಗೆ ಹೇಳಿದ್ದಾರೆ. ಕನ್‌ಸ್ಟ್ರಕ್ಷನ್ ಬಿಲ್ಡಿಂಗ್ ಅಥವಾ ಐ. ಬಿ. ಆಗಲಿ ಅಥವಾ ಮುಖ್ಯವಾದಂತಹ ಆಫೀಸ್ ಆಗಲಿ ಇದರ ಹತ್ತು ಪರ್ಸೆಂಟ್ ದುಡ್ಡನ್ನು ಅಸ್ಥೆಟಿಕ್ ವ್ಯಾಲ್ಯೂಸ್‌ಗೆ ಕೊಡುಕೊಳ್ಳುವುದಕ್ಕೆ ರಿಸರ್ವ್ ಮಾಡತಕ್ಕದ್ದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

೧೦-೦೦ ಎ. ಎಂ.

ಹಿಂದೆ ರಾಜಮಹಾರಾಜರುಗಳ ಕಾಲದಲ್ಲಿ ಕಲಾವಿದರಿಂದ ಪೈಂಟಿಂಗ್‌ನ್ನು ತೆಗೆದುಕೊಂಡ ಸಹಾಯ ಮಾಡುತ್ತಿದ್ದರು ಮತ್ತು ಸಾಕುತ್ತಿದ್ದರು. ಈಗ ರಾಜ್ಯ ಸರ್ಕಾರ ಸಿಮೆಂಟ್, ಕಲ್ಲು, ಮಣ್ಣುಗಳಿಂದ ಸುಂದರವಾಗುವುದಿಲ್ಲ. ಈ ಕಲಾವಿದರಿಂದ ತೆಗೆದುಕೊಂಡು ಬೇರೆಯವರಿಗೆ ಮಾರ ತಕ್ಕಂಥ ವ್ಯವಸ್ಥೆ ಮಾಡಿದರೆ ಸಹಾಯವಾಗುತ್ತದೆ. ನಮ್ಮ ದೇಶದಲ್ಲಿ ಯಾವ ತರಹ ಈಗ ಇದೆ ಎನ್ನುವುದು ಈಗ ಗೊತ್ತಾಗುತ್ತದೆ. ನಮ್ಮಲ್ಲಿ ಟ್ರೆಡಿಷನಲ್ ಆರ್ಟ್ ಇದೆ ಈ ಟ್ರೆಡಿಷನಲ್ ಆರ್ಟ್ ನಮ್ಮ ಮೈಸೂರಿನಲ್ಲಿ ಮಾತ್ರವಲ್ಲ, ತಂಜಾವೂರಿನಲ್ಲಿಯೂ ಈ ಕಲಾಚಿತ್ರ ಮಾಡತಕ್ಕಂಥದ್ದು ಇದೆ. ನಾನು ಏನು ಹೇಳಿದರೂ ಈ ಸರ್ಕಾರದವರು ಮಾಡುವುದಿಲ್ಲ. ಇಂಥದ್ದನ್ನೆಲ್ಲಾ ದೊಡ್ಡ ದೊಡ್ಡ ಸರ್ಕಾರಿ ಹೋಟೆಲ್‌ಗಳಲ್ಲಿ ಪ್ರದರ್ಶಿಸಿದರೆ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಆರ್ಟಿಸ್ಟ್‌ಗಳಿಗೆಲ್ಲಾ ಬ್ಯಾಂಕಿನವರು ಸಾಲ ಕೊಡುತ್ತಾರೆ. ಬ್ಯಾಂಕಿನವರಿಗೆ ಕಾಲೋನಿ ಕೊಡು ತ್ತಾರೆ. ಫ್ಯಾಕ್ಟರಿಯವರಿಗೆ ಸೈಟ್ ಕೊಡುತ್ತಾರೆ. ಶ್ರೀ ಬಿ. ಟಿ. ಸೋಮಣ್ಣನವರು ಬಿ. ಡಿ. ಎ. ಅಧ್ಯಕ್ಷರಾಗಿದ್ದಾಗ ಕಲಾವಿದರಿಗೆ ಸೈಟುಗಳನ್ನು ಕೊಡಲು ಒಪ್ಪಿಕೊಂಡಿದ್ದರು. ಒಂದು ಅಗ್ರಹಾರ ಮಾಡಿ ಒಂದು ಕಮ್ಯೂನಿಟಿ ಹಾಲ್ ಮಾಡಿಕೊಡುತ್ತೇನೆಂದು ಒಪ್ಪಿದ್ದರು. ಅವರು ಹೋದರು. ನಂತರ ಬಂದ ಮೂರ್ತಿ ಅವರ ಕಿವಿಗೆ ಇದು ಬೀಳಲಿಲ್ಲ. ಮಾನ್ಯ ಬಸವಯ್ಯನವರ ಕಿವಿಗೆ ಹೋಗಲಿಲ್ಲ. ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಈ ವಿಚಾರ ತೆಗೆದುಕೊಂಡು ಹೋದಾಗ ಹೆಸರಘಟ್ಟದಲ್ಲಿ ಕಲಾವಿದರಿಗೆ ಸೈಟ್ ಕೊಡುವ ಆಲೋಚನೆ ಇದೆಯೆಂದು ಹೇಳಿದರು. ಈ ಕಲಾವಿದರು ಬಡವ ರಾಗಿದ್ದು, ಅವರ ಮಕ್ಕಳು ಶಾಲಾ ಕಾಲೇಜಿಗೆ ಹೋಗಲು ಹೆಸರಘಟ್ಟದಿಂದ ಬಹಳ ದೂರವಾಗುತ್ತದೆ. ಮತ್ತು ಬಹಳ ತೊಂದರೆಯಾಗುತ್ತದೆ. ಬಾಕಿ ವ್ಯವಹಾರ ಮಾಡಬೇಕಾದರೂ ಅನಾನುಕೂಲವಾಗು ತ್ತದೆ. ಬೆಂಗಳೂರು ಯೂನಿವರ್ಸಿಟಿ ಹತ್ತಿರ ಜಾಗ ಇದೆ. ಅಲ್ಲಿ ಜಾಗ ಕೊಟ್ಟರೆ ಮನೆಗಳನ್ನು ಕಟ್ಟಿ ಕೊಳ್ಳುತ್ತಾರೆ ಶಾಲಾ ಕಾಲೇಜಿಗೆ ಅವರ ಮಕ್ಕಳುಮರಿ ಹೋಗುವುದಕ್ಕೆ ಅನುಕೂಲಕರವಾಗುತ್ತದೆ. ಆದಕಾರಣ, ಕಲಾವಿದರ ಪರವಾಗಿ ನನ್ನ ವಿನಂತಿ ಏನೆಂದರೆ ಮಾನ್ಯ ಮುಖ್ಯಮಂತ್ರಿಯವರು ಮನಸ್ಸು ಮಾಡಿ ಇಲ್ಲಿ ನಿವೇಶನಗಳನ್ನು ಕೊಡಬೇಕೆಂದು ನಾನಾದರೂ ಸೂಚನೆಯನ್ನು ಕೊಡುವುದಕ್ಕೆ ಇಷ್ಟ ಪಡುತ್ತೇನೆ.

ಅಧ್ಯಕ್ಷರೆ, ನಮ್ಮ ಮಾನ್ಯ ಮಂತ್ರಿಗಳಾದ ರಾಚಯ್ಯನವರ ಇಲಾಖೆಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀ ರಾಚಯ್ಯನವರು ತುಂಬಾ ಒಳ್ಳೆಯ ವ್ಯಕ್ತಿ. ತುಂಬಾ ಗೌರವ ಮತ್ತು ಮರ್ಯಾದೆಯುಳ್ಳವರು. ಈ ಇಲಾಖೆಗೆ ಇವರ ಒಳ್ಳೆಯತನ ಏನೂ ಪ್ರಯೋಜನವಾಗುವುದಿಲ್ಲ. ಯಾರೂ ಇವರ ಮಾತು ಕೇಳುವುದಿಲ್ಲ. ಇವರ ಒಳ್ಳೆಯತನವನ್ನು ಅಧಿಕಾರಿಗಳು ಬಳಸಿಕೊಂಡಿದ್ದಾರೆ. ಇವರ ಒಳ್ಳೆಯತನದಿಂದ ಮಾನಭಂಗ, ದರೋಡೆ, ಡಕಾಯಿತಿ ಜಾಸ್ತಿಯಾಗಿದೆ. ಡಿ.ವೈ. ಎಸ್. ಪಿ. ಅಧಿಕಾರಿಗಳವರೆಗೆ ಪರವಾಗಿಲ್ಲ. ಅದಕ್ಕಿಂತ ಕೆಳಗಿನ ಅಧಿಕಾರಿಗಳು ಮಾತನಾಡುವ ಭಾಷೆ ಕೇಳಿದರೆ ಭಯವಾಗುತ್ತದೆ. ಎಲ್ಲರೂ ಕೆಟ್ಟವರೆಂದು ನಾನು ಹೇಳುವುದಿಲ್ಲ. ಪೋಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳಲ್ಲಿ ಕೆಲವರು ನಾವು ಆಯ್ಕೆಯಾಗಲು ೫೦ ಸಾವಿರ ರೂಪಾಯಿಗಳು ಮತ್ತು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಬಂದಿದ್ದೇವೆ. ನಮ್ಮನ್ನು ಯಾರು ಕೇಳುತ್ತಾರೆ ? ಮಾನ್ಯ ರಾಚಯ್ಯನವರ ಒಳ್ಳೆಯತನಕ್ಕೆ ಬೆಲೆಯನ್ನು ಪೋಲೀಸರು ಕೊಡುವುದಿಲ್ಲ. ಆದ್ದರಿಂದ ಇವರಿಗೆ ಬೇರೆ ಖಾತೆ ಕೊಡಲು ತಾವು ಶಿಫಾರಸ್ಸು ಮಾಡಬೇಕೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಇನ್ನೊಂದು ವಿಷಯ. ಅದು ಹೆಣ್ಣು ಮಕ್ಕಳಿಗೆ ಮಾನಭಂಗವಾದರೆ ಅವರು ಅದನ್ನು ಎಲ್ಲಿ ಹೇಳಿಕೊಳ್ಳಬೇಕು. ಇದನ್ನು ಪೋಲೀಸ್ ಸ್ಟೇಷನ್‌ಗೆ ಹೋದರೆ ಏನಾಗುತ್ತದೆಯೋ ಎಂಬುದು ಗೊತ್ತಿಲ್ಲ.

ನಾನು ಒಂದು ಸಲ ಹುಬ್ಬಳ್ಳಿಗೆ ಹೋದಾಗ ಕೆಲವಾರು ಪೇಪರ್‌ನವರು ಈ ಬಗ್ಗೆ ಕೇಳಿದರು. ಆದ್ದರಿಂದ ಇದಕ್ಕೆ ಏನಾದರೂ ಮಾಡಬೇಕೆಂದು ನಾನು ನಮ್ಮ ಅಧ್ಯಕ್ಷರನ್ನೂ ಮತ್ತು ಸರ್ಕಾರವನ್ನೂ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ನನ್ನದೊಂದು ಸಲಹೆ ಇದೆ, ಅದೇನೆಂದರೆ ಈ ಲೆಜಿಸ್ಲೇಚರ್‌ನಲ್ಲಿರುವ ಹೆಂಗಸರನ್ನೆಲ್ಲಾ ಸೇರಿಸಿ ಒಂದು ಹೌಸ್ ಕಮಿಟಿಯನ್ನು ಗೃಹ ಸಚಿವರ ಅಥವಾ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಾಡಿ ನಮ್ಮ ಹೆಣ್ಣುಮಕ್ಕಳಿಗೆ ಪ್ರೊಟೆಕ್ಷನ್ ಕೊಟ್ಟು ಅವರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಈ ಒಂದು ಹೌಸ್ ಕಮಿಟಿಯನ್ನು ಮಾಡಿದರೆ ಅನೇಕ ಹೆಣ್ಣುಮಕ್ಕಳ ಮಾನವನ್ನು ಕಾಪಾಡಬಹುದು. ಆದ್ದರಿಂದ ನೀವು ಕೂಡಲೇ ಹೌಸ್ ಕಮಿಟಿಯನ್ನು ಮಾಡಬೇಕೆಂದು ತಮ್ಮಲ್ಲಿ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ ಹಾಗೂ ಮುಖ್ಯಮಂತ್ರಿಗಳೂ ಇದರ ಬಗ್ಗೆ ಸೂಚನೆ ಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವೀರಣ್ಣನವರ ಟ್ರಾನ್ಸ್‌ಪೋರ್ಟ್ ವಿಚಾರದ ಬಗ್ಗೆ ಮಾತನಾಡುತ್ತೇನೆ. ಈಗ ಟ್ರಾನ್ಸ್‌ಪೋರ್ಟ್ ಕಮಿಷನರ್ ಏನು ಇದ್ದಾರೆ, ಇವರು ಬಂದವರಿಗೆಲ್ಲಾ ಲೈಸನ್ಸ್ ಕೊಡುತ್ತಿದ್ದಾರೆ. ಕೆಲವರಿಗೆ ಬ್ರೇಕ್ ಎಟುಕುವುದಿಲ್ಲ, ಇನ್ನು ಕೆಲವರಿಗೆ ಕ್ಲಚ್ ಎಟುಕುವುದಿಲ್ಲ. ಹೀಗಾಗಿ ನೂರಾರು ಜನರ ಪ್ರಾಣವನ್ನು ಆತನ ಕೈಯಲ್ಲಿ ಕೊಟ್ಟಿದ್ದಾರೆ. ಇನ್ನು ಪೋಲೀಸರು ಮತ್ತು ಬಸ್ಸಿನವರು ಇಬ್ಬರು ಸೇರಿಕೊಂಡು ಫುಟ್‌ಬೋರ್ಡ್ ಮೇಲೆ ನೇತಾಡುತ್ತಿರುತ್ತಾರೆ. ಇದನ್ನು ಯಾರು ನೋಡುವುದಿಲ್ಲ. ಏತಕ್ಕೆ ಇವರಿಗೆ ಸಂಬಳ ಕೊಡಬೇಕು ? ನಾವು ಇದನ್ನು ನೋಡಿಕೊಂಡು ಸುಮ್ಮನೆ ಇರಬೇಕೆ ? ಇಷ್ಟು ನೋಡಿಕೊಳ್ಳುವುದಕ್ಕೆ ಇವರಿಗೆ ಆಗದಿದ್ದರೆ ಇವರು ಏತಕ್ಕಾಗಿ ಇರಬೇಕು ? ಇನ್ನೊಂದು ಮಾತು ಅಧ್ಯಕ್ಷರೇ, ಈಗ ಕಾರು, ಫೋನ್ ಯಾರ ಹತ್ತಿರ ಇರುತ್ತದೆಯೋ ಅವರು ಲಕ್ಷಾಧೀಶ್ವರರೆಂದು ಭಾವಿಸುತ್ತಿದ್ದಾರೆ. ಆದರೆ ನಾನು ಹೇಳುತ್ತೇನೆ ಇವರೆಡು ಈಗಿನ ಕಾಲಕ್ಕೆ ಅತ್ಯಂತ ಮುಖ್ಯವಾದುದೆಂದು, ಏಕೆಂದರೆ ಇವೆರಡು ಇಲ್ಲದಿದ್ದರೆ ನಮ್ಮ ಕೆಲಸಗಳು ನಡೆಯುವುದಿಲ್ಲ.

ಇನ್ನು ಒಂದು ವಿಷಯ, ಈಗ ಕೆಲವು ಕಡೆ ನಮ್ಮ ದೇವೇಗೌಡರು ರಸ್ತೆಗಳನ್ನು ಮಾಡಿಸಿದ್ದಾರೆ. ಆ ರಸ್ತೆಗಳ ಮೇಲೆ ಕಾರುಗಳು ಬಸ್ಸುಗಳು ಹೋದರೆ ಅದರ ಶಾಕ್ ಅಬ್ಸರಾಬರ್ ಮತ್ತು ಟೈರುಗಳು ಉಳಿಯುವುದಿಲ್ಲ. ನಾವು ನಮ್ಮ ಹಳ್ಳಿಗಳ ಕಡೆಯಿಂದ ಇಲ್ಲಿಗೆ ಬರುವುದರೊಳಗೆ ಎಲ್ಲಾ ಪಾರ್ಟ್‌ಗಳನ್ನು ಬಿಚ್ಚಿಕೊಂಡು ಬರಬೇಕಾಗುತ್ತದೆ. ಹೀಗಾಗಿದೆ ನಮ್ಮ ಈ ರಸ್ತೆಗಳ ಪರಿಸ್ಥಿತಿ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡುವುದೇನೆಂದರೆ ಇವರಿಗೆ ಏನು ಲಾಭ ಬರುತ್ತದೆ ಅದನ್ನು ಮತ್ತು ಅವರಿಗೆ ಏನು ಅನುದಾನ ಕೊಡುತ್ತೀರಿ ಎರಡನ್ನೂ ಸೇರಿಸಿ ರೋಡ್ ಮೈಂಟೆನೆನ್ಸ್‌ಗೋಸ್ಕರ ಕೊಡಬೇಕು. ಇದರಿಂದ ಬಸ್ಸುಗಳು ಮತ್ತು ಕಾರುಗಳು ಉಳಿಯುತ್ತವೆ. ನಮ್ಮ ಕೆಲಸ ಸುಗಮವಾಗಿ ಸಾಗುತ್ತದೆ. Therefore I sincerely suggest that this Road Transport and Road Maintenance should be combined.

ಅಧ್ಯಕ್ಷರೇ, ಇನ್ನು ಟೂರಿಸಂ ವಿಚಾರದಲ್ಲಿ ಮಾತನಾಡುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇತ್ತೀಚೆಗೆ ನಮ್ಮ ಮುಖ್ಯಮಂತ್ರಿಗಳು ಇದ್ದಕ್ಕಿದ್ದ ಹಾಗೆ ಗೋಪಾಲಸ್ವಾಮಿ ಬೆಟ್ಟಕ್ಕೆ ಹೋಗಿಬಿಟ್ಟು ಬಂದರು. ಅದನ್ನು ನಮಗೆ ಯಾರಿಗೂ ಹೇಳಲಿಲ್ಲ. ಇದನ್ನು ನಾನು ತಮಾಷೆಗೆ ಹೇಳಿದೆ. ಅವರು ಅಲ್ಲಿಗೆ ಹೋಗಿ ಬಂದ ವಿಚಾರವನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಗೋಪಾಲಸ್ವಾಮಿ ಬೆಟ್ಟದಲ್ಲಿ ನೀವು ಯಾವ ಬೇಸಿಗೆಯಲ್ಲೂ ಹೋದರೂ ಮಂಜು ಬೀಳುತ್ತಿರುತ್ತದೆ. ಇದು ಅಲ್ಲಿನ ಒಂದು ಪ್ರಕೃತಿ ಸೌಂದರ್ಯ. ಆದ್ದರಿಂದ ಅಲ್ಲಿ ಒಂದು ಟೂರಿಸ್ಟ್ ಡೆವಲಪ್‌ಮೆಂಟ್‌ನ ಮಾಡಿ ಈಗ ಅಲ್ಲಿ ಫಾರೆಸ್ಟ್‌ನ ಡಿಪಾರ್ಟ್‌ಮೆಂಟ್ ಏನು ಇದೆ ಅದಕ್ಕೆ ಸರಿಯಾಗಿ ನೀರು ಮತ್ತು ವಿದ್ಯುತ್‌ನ್ನು ಪೂರೈಸಬೇಕೆಂದು ಹೇಳುತ್ತೇನೆ. ಈ ಬಂಡೀಪುರ ಮತ್ತು ಗೋಪಾಲಸ್ವಾಮಿ ಬೆಟ್ಟ ಎರಡನ್ನೂ ಸೇರಿಸಿಬಿಟ್ಟರೆ ಬಹಳ ದೊಡ್ಡ ಟೂರಿಸ್ಟ್ ಸೆಂಟರ್ ಆಗುತ್ತದೆ ಅಲ್ಲದೆ ಈ ಗೋಪಾಲಸ್ವಾಮಿ ಬೆಟ್ಟದಲ್ಲಿ ಕಾಫಿ ಬೆಳೆಯಲು ಮತ್ತು ಹರ್ಬಲ್‌ಗಳನ್ನು ಬೆಳೆಯಲು ಬಹಳ ಅನುಕೂಲವಿದೆ. ಆದ್ದರಿಂದ ಈ ಗೋಪಾಲಸ್ವಾಮಿ ಬೆಟ್ಟವನ್ನು ಟೂರಿಸ್ಟ್ ಸೆಂಟರ್ ಆಗಿ ಮಾಡಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷರೇ, ಇನ್ನು ಈ ಬಿ.ಡಿ.ಎ. ನವರು ಸೈಟುಗಳನ್ನು ಕೊಡುತ್ತಿದ್ದಾರೆ. ಇವರು ಸೈಟ್‌ಗಳನ್ನು ಕೊಡುವಾಗ ಡಿಫೆನ್ಸ್ ಸರ್ವಿಸ್‌ನಲ್ಲಿ ಇರುವವರಿಗೆ ಸ್ವಲ್ಪ ಆದ್ಯತೆಯನ್ನು ಕೊಡಬೇಕಾಗಿದೆ. ಏಕೆಂದರೆ ಇವರು ದೇಶವನ್ನು ರಕ್ಷಣೆ ಮಾಡುವ ಸಲುವಾಗಿ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟಿರುತ್ತಾರೆ. ಇನ್ನು ಕೆಲವರು ತಮ್ಮ ಕೈ ಕಾಲುಗಳನ್ನು ಕಳೆದುಕೊಂಡಿರುತ್ತಾರೆ. ಇವರಿಗೆ ಎಲ್ಲಾ ಕಡೆಯೂ ಪ್ರಿಯಾರಿಟಿ ಇದೆ. ಇಲ್ಲಿ ಏತಕ್ಕೆ ಇಲ್ಲ ? ಆದ್ದರಿಂದ ಡಿಫೆನ್ಸ್ ಸರ್ವಿಸ್‌ನಲ್ಲಿರುವವರಿಗೂ ಸೈಟು ಕೊಡುವ ವಿಚಾರದಲ್ಲಿ ಪ್ರಿಯಾರಿಟಿ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ಕಾಂಪೆನ್ಸೇಷನ್ ಕೊಡುವುದಕ್ಕೋಸ್ಕರ ದುಡ್ಡನ್ನೆ ಇಟ್ಟಿಲ್ಲ. ಮಾತೆತ್ತಿದರೆ ಪರಿಹಾರ ನಿಧಿಯಿಂದ ಹಣ ಕೊಡುತ್ತೀರಿ. ಅಧ್ಯಕ್ಷರೇ, ಈ ಕಾಂಪೆನ್ಸೇಷನ್‌ಗೆ ಬಜೆಟ್‌ನಲ್ಲಿ ಬೇರೆ ಹಣವಿಟ್ಟಿಲ್ಲ, ಆದ್ದರಿಂದ ಇದಕ್ಕೆ ಹೆಚ್ಚು ಹಣವನ್ನು ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಒಂದು ಮನೆ ಬಿದ್ದು ಹೋದರೆ ಪರಿಹಾರ ಕೊಡುತ್ತೀರಿ. ಗಂಗಾರಾಂ ಕಟ್ಟಡ ಬಿದ್ದಾಗ ಪರಿಹಾರ ಕೊಟ್ಟಿದ್ದೀರಿ, ಯಾರಾದರೂ ರೇಪ್ ಆದರೆ ಪರಿಹಾರ ಕೊಡುತ್ತೀರಿ, ಯಾವುದಾದರೂ ಮನೆಗಳು ಸುಟ್ಟು ಹೋದರೂ ಪರಿಹಾರ ಕೊಡುತ್ತೀರಿ ಮತ್ತು ಬಿ. ಡಿ. ಎ., ನವರು ಕಟ್ಟಡಗಳನ್ನು ಬುಲ್ಡೋಜರ್ ಮಾಡಿದಾಗಲೂ ಕೂಡ ಪರಿಹಾರ ಕೊಡುತ್ತೀರಿ. ಆದರೆ ತಾವು ಇದನ್ನು ಬಜೆಟ್‌ನಲ್ಲಿ ತೋರಿಸಿಲ್ಲ. ಆದ್ದರಿಂದ ಈ ಕಾಂಪೆನ್ಸೇಷನ್ ಫಂಡ್‌ಗೆ ಸುಮಾರು ೧೦ ಕೋಟಿ ರೂಪಾಯಿಗಳನ್ನಾದರೂ ತಾವು ದಯಮಾಡಿ ಇಡಬೇಕೆಂದು ಸೂಚಿಸುತ್ತೇನೆ. ಈ ೧೦ ಕೋಟಿ ರೂಪಾಯಿಗಳು ಕೂಡ ಬಹಳ ಕಮ್ಮಿ, ಏಕೆಂದರೆ ನೀವು ಇಷ್ಟ ಬಂದಂತೆ ಪರಿಹಾರವನ್ನು ಕೊಡುತ್ತೀರಿ. ಆದ್ದರಿಂದ ಸ್ವಲ್ಪ ಜಾಸ್ತಿ ಹಣವನ್ನಾದರೂ ಇದಕ್ಕೆ ಇಡಬೇಕೆಂದು ಹೇಳುತ್ತೇನೆ. ಅಧ್ಯಕ್ಷರೇ ಇನ್ನು ಅನೇಕರು ಮಾತನಾಡುವವರು ಇದ್ದಾರೆ ಮತ್ತು ಇಲ್ಲಿ ಇನ್ನು ಅನೇಕ ಡಿಮ್ಯಾಂಡ್ಸ್ ಮೇಲೆ ಕೂಡ ಮಾತನಾಡಬೇಕು. ಆದಕ್ಕಾಗಿ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಪಿ. ಎಂ. ಚಿಕ್ಕ ಬೋರಯ್ಯ (ಚಾಮರಾಜ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಸಚಿವರು ಮಂಡಿಸಿರತಕ್ಕಂಥ ಮುಂಗಡಪತ್ರವನ್ನು ಸ್ವಾಗತಿಸುತ್ತಾ ಆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ಈಗತಾನೇ ಮಾನ್ಯ ವಿರೋಧ ಪಕ್ಷದ ನಾಯಕಿಯವರು ತಮ್ಮಲ್ಲಿ ಅರಿಕೆ ಮಾಡಿಕೊಂಡರು, ಹೆಣ್ಣು ಮಕ್ಕಳಿಗೆ ಯಾವ ರೀತಿಯ ಸೌಲಭ್ಯವನ್ನು ಕೊಟ್ಟಿಲ್ಲ, ಯಾವ ರೀತಿಯ ಅನುಕೂಲಗಳನ್ನು ಈ ಬಜೆಟ್‌ನಲ್ಲಿ ಅಳವಡಿಸಿಕೊಂಡಿಲ್ಲ. ಆದುದರಿಂದ ಬಹಳ ಅನ್ಯಾಯ ಮಾಡಿದ್ದಾರೆಂದು ಹೇಳಿದರು. ಈಗಾಗಲೇ ನಮ್ಮ ಅವಗಾಹನೆಗೆ ಬಂದಿರುವ ಹಾಗೆ, ಮುನಿಸಿಪಲ್ ಕಾರ್ಪೊರೇಷನ್ ಜಿಲ್ಲಾ ಪರಿಷತ್, ಮಂಡಲ ಪಂಚಾಯಿತಿ ಈ ಎಲ್ಲಾ ಸಂಸ್ಥೆಗಳಲ್ಲೂ ಕೂಡ ೨೦ ಪರ್ಸೆಂಟ್ ಪ್ರಾತಿನಿಧ್ಯವನ್ನು ಅವರಿಗೆ ಕೊಟ್ಟಿದ್ದಾರೆ. ಅವರಿಗೆ ಏನೇನೂ ಅನುಕೂಲಗಳು ಬೇಕೋ ಅದನ್ನು ಮಾಡಿಕೊಳ್ಳಲು ಅವಕಾಶಗಳನ್ನು ಒದಗಿಸಿಕೊಟ್ಟಿದ್ದಾರೆ. ಇಷ್ಟನ್ನು ಹೇಳುತ್ತಾ ಇನ್ನು ಒಂದೆರಡು ವಿಷಯಗಳನ್ನು ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನನಗಾದರೂ ಅನ್ನಿಸುತ್ತದೆ ಈ ಪೋಲೀಸ್ ಇಲಾಖೆ ಒಂದು ಹದ್ದು ಬಸ್ತಿನಲ್ಲಿ ಇಲ್ಲದೆ ಇರತಕ್ಕ ಪರಿಸ್ಥಿತಿಯಲ್ಲಿ ಜನಕ್ಕೆ ಬಹಳ

ಅನ್ಯಾಯವಾಗುತ್ತಿದೆ ಎಂದು. ಒಂದು ತಾಲ್ಲೂಕ್ ಆಫೀಸ್‌ಗೆ ಒಂದು ಅರ್ಜಿಯನ್ನು ಕೊಟ್ಟರೆ ಅದಕ್ಕೆ ಒಂದು ದಾಖಲೆ ಸಿಕ್ಕುತ್ತದೆ. ಆದರೆ ಪೋಲೀಸ್ ಇಲಾಖೆಯವರು ಯಾವ ಒಬ್ಬ ಪ್ರಜೆಯನ್ನು ಎಳೆದು ಕೊಂಡು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಕೂಡಿ ಹಾಕಿದರೆ ಅದಕ್ಕೆ ಏನೂ ದಾಖಲೆ ಇಲ್ಲ. ಕೆಲವಾರು ಸುಮಾರು ೮-೧೦ ದಿವಸಗಳು ವ್ಯಕ್ತಿಯನ್ನು ಅಲ್ಲಿಯೇ ಕೂಡಿ ಹಾಕಿರುತ್ತಾರೆ. ಇಲ್ಲಿ ಅವನ ತಂದೆ ತಾಯಿಗಳು ಅವನನ್ನು ಹುಡುಕುತ್ತಿರುತ್ತಾರೆ. ಹೀಗೆ ಯಾವ ರೀತಿಯ ದಾಖಲೆಯೂ ಇಲ್ಲದೆ ಅವನನ್ನು ಪೋಲೀಸ್ ಸ್ಟೇಷನ್‌ನಲ್ಲಿ ಕೂಳಿಹಾಕಿರುತ್ತಾರೆ. ನಮ್ಮ ಕಾನೂನಿನ ಪ್ರಕಾರ ಯಾವುದೇ ಕಾರಣದಿಂದ ಒಬ್ಬ ವ್ಯಕ್ತಿಯನ್ನು ಅರೆಸ್ಟ್ ಮಾಡಿದರೆ, ಅವನನ್ನು 24 ಗಂಟೆಯೊಳಗೆ ಕೋರ್ಟ್ ಮುಂದೆ ಹಾಜರು ಪಡಿಸಬೇಕು. ಈ ರೀತಿಯ ಒಂದು ಕಾನೂನು ಇದೆ. ಆದರೆ ಪೋಲೀಸ್ ಇಲಾಖೆಯವರು ಮಾತ್ರ ಅರೆಸ್ಟ್ ಮಾಡಿದ ವ್ಯಕ್ತಿಯನ್ನು ಕೋರ್ಟ್ ಮುಂದೆ ಹಾಜರುಪಡಿಸದೆ ಅವನನ್ನು ತೆಗೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟುಕೊಂಡು, ಲಾಕಪ್‌ನಲ್ಲಿ ಕೂಡಿಹಾಕುವ ಒಂದು ಪರಿಸ್ಥಿತಿಯನ್ನು ನಾವು ಇಂದು ನೋಡುತ್ತಿದ್ದೇವೆ. ಇದಕ್ಕೆ ಯಾವುದಾದರೂ ಒಂದು ಕ್ರಮವನ್ನು ಮಾನ್ಯ ಗೃಹ ಸಚಿವರು ತೆಗೆದುಕೊಂಡು ಈ ರೀತಿ ಅನ್ಯಾಯಗಳು ನಡೆಯದಂತೆ ನೋಡಿಕೊಳ್ಳಬೇಕೆಂದು ತಮ್ಮ ಮೂಲಕ ನನ್ನ ಮನವಿಯನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ಸಮಾಜದಲ್ಲಿ ನಡೆಯುತಕ್ಕಂಥ ಅನೇಕ ದುಷ್ಕೃತ್ಯಗಳನ್ನು ಅನ್ಯಾಯಗಳು ಪೋಲೀಸ್ ಇಲಾಖೆಯವರ ಒಂದು ಸಹಕಾರದಿಂದ, ಅವರ ಒತ್ತಾಸೆ ಯಿಂದ ನಡೆಯುತ್ತಿರುವುದನ್ನು ಅನೇಕ ವೇಳೆ ನಾವು ನೋಡುತ್ತಿದ್ದೇವೆ. ಈ ರೀತಿ ನಡೆಯುತ್ತಿರುವು ದಕ್ಕೆ ಒಂದೆರಡು ನಿದರ್ಶನಗಳನ್ನು ಕೊಡಬೇಕೆಂದರೆ, ಕಳ್ಳಭಟ್ಟಿ, ತಯಾರಿಕೆ, ಜೂಜುಗಾರಿಕೆ ಕಟ್ಟೆಗಳು ನಡೆಯುವುದು. ಹಾಗೂ ಬ್ರಾಥಲ್ ಹೌಸ್‌ಗಳನ್ನು ನಡೆಸುವುದು ಇವುಗಳಿಗೆಲ್ಲಾ ಪ್ರಾತಿನಿಧ್ಯವನ್ನು ಕೊಡುತ್ತಿದ್ದಾರೆ. ಇವುಗಳನ್ನು ನಿಲ್ಲಿಸುವುದಕ್ಕೆ ಪೋಲೀಸರು ಕೆಲವು ಬಂದೋಬಸ್ತ್ ಅಥವಾ ಏನಾದರೂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೆ, ಅವುಗಳಿಗೆ ಸಪೋರ್ಟ್ ಕೊಡತಕ್ಕ ಕೆಲಸ ಮಾಡುವುದನ್ನು ನೋಡಿದರೆ, ಇದರಿಂದ ನಿಜಕ್ಕೂ ಬಹಳ ಅನ್ಯಾಯವಾಗುತ್ತಿದೆ. ಈ ರೀತಿಯ ಅತ್ಯಾಚಾರ ಮತ್ತು ಅನಾಚಾರ ನಮ್ಮ ಸಮಾಜದಲ್ಲಿ ಹೆಚ್ಚಾಗಲು ಪೋಲೀಸ್ ಇಲಾಖೆಯೇ ಕಾರಣವೆಂದು ನನಗಾದರೂ ಅನ್ನಿಸುತ್ತದೆ.

ಎರಡನೆಯದಾಗಿ ಯಾವುದಾದರೂ ಒಂದು ಪೋಲೀಸ್ ಫಿರ್ಯಾದು ಕೊಟ್ಟ ಪಕ್ಷದಲ್ಲಿ ಪೋಲೀಸಿನವರ ತನಿಖೆ ಬಹಳಷ್ಟು ಕಾಲ ನಡೆಯುತ್ತದೆ. ಈ ಒಂದು ವಿಳಂಬದಿಂದಲೇ ಅಲ್ಲಿ ಯಾವ ದೌರ್ಜನ್ಯಗಳು ಆಗಿವೆಯೋ ಅದು ಮತ್ತೆ ಅನ್ಯಾಯಗಳಾಗುವುದಕ್ಕೆ ಅನೇಕ ರೂಪದಲ್ಲಿ ಕಾರಣಗಳಾಗಿವೆ ಎಂದು ಹೇಳಿದರೆ ತಪ್ಪಾಗಲಾರದು. ಒಂದು ಪೋಲೀಸ್ ಇನ್‌ವೆಸ್ಟಿಗೇಷನ್ ತೆಗೆದುಕೊಂಡ ಪಕ್ಷದಲ್ಲಿ ಇದನ್ನು ಕನಿಷ್ಟಪಕ್ಷ ಎರಡು ತಿಂಗಳಾದರೂ ಪೂರ್ತಿ ಮಾಡಿ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಛಾರ್ಜ್‌ಷೀಟ್ ಮಾಡಿ ದಾಖಲೆ ಮಾಡಬೇಕೆನ್ನುವ ಕಾನೂನು ಇದ್ದರೂ ಸಹ ಇಲ್ಲಿಯವರೆಗೂ ಆ ಕಾನೂನನ್ನು ಪರಿಪಾಲಿಸುವಂಥ ಹವ್ಯಾಸವನ್ನು ನಾನು ನೋಡಿರುವುದು ವಿರಳ ಬಹಳ ಕಡಿಮೆ. ತಾತ್ಕಾಲಿಕವಾಗಿ ಅವರು ತನಿಖೆಪೂರ್ತಿ ಮಾಡಿ ಬೇಗನೆ ಚಾರ್ಜ್‌ಷೀಟ್ ಹಾಕದೇ ಇದ್ದ ಪಕ್ಷದಲ್ಲಿ ಅದರಿಂದ ಅನೇಕ ವಿಧವಾದ ಲಂಚಕೋರತನಕ್ಕೆ ಮತ್ತು ಅಪರಾಧಿ ಇಲ್ಲದೆ ಇದ್ದವರನ್ನು ಅಪರಾಧಿ ಸ್ಥಾನಕ್ಕೆ ಸೇರಿಸುವ ಒಂದು ಹವ್ಯಾಸಕ್ಕೆ ಆಸ್ಪದ ಕೊಟ್ಟಂತಾಗುತ್ತದೆ ಎಂದು ನಾನಾದರೂ ಅಂದುಕೊಂಡಿದ್ದೇನೆ. ಆದುದರಿಂದ ನಾನು ಹೇಳುವುದೇ ನೆಂದರೆ ಆದಷ್ಟು ಬೇಗನೆ ಇನ್‌ವೆಸ್ಟಿಗೇಷನ್ ಕೆಲಸ ಪೂರ್ತಿ ಮಾಡಿ ಕೋರ್ಟಿಗೆ ಛಾರ್ಜ್‌ಷೀಟ್ ಸಲ್ಲಿಸಿದರೆ ಮಾತ್ರ ಈ ಅನ್ಯಾಯವನ್ನು ತಡೆಗಟ್ಟಬಹುದು ಎಂದು ನಾನಾದರೂ ಅಂದುಕೊಂಡಿದ್ದೇನೆ.

ಮೂರನೆಯದಾಗಿ, ಧರ್ಮವೀರ ಪೋಲೀಸ್ ಕಮಿಷನರ್ ರಿಪೋರ್ಟ್ ಏನು ಇದೆ ಅದು ಪಂಡಿತ ನೆಹರೂರವರೂ ಇದ್ದ ಕಾಲದಲ್ಲೇ ಬಂತು. ಅದರಲ್ಲಿ ಅನೇಕ ವಿಧವಾದ ಸಲಹೆಗಳನ್ನು ಅವರು ಕೊಟ್ಟಿ ದ್ದಾರೆ. ಯಾವರೀತಿಯಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟ್ ರೀಫಾರಂಸ್ ಆಗಬೇಕು ಎನ್ನುವುದು ಇದೆ. ಅದರಿಂದ ಒಳ್ಳೆಯ ರೀತಿಯಲ್ಲಿ ಸಮಾಜಕ್ಕೆ ಸೇವೆಯನ್ನು ಸಲ್ಲಿಸಬಹುದು ಎನ್ನುವ ದೃಷ್ಟಿಯಿಂದ ಅವರು ಕೊಟ್ಟಿದ್ದಾರೆ. ಆದರೆ ಇಲ್ಲಿಯವರೆವಿಗೂ ಅದರ ಬಗ್ಗೆ ಏನೊಂದು ಕಾರ್ಯಕ್ರಮವನ್ನೂ ತೆಗೆದು ಕೊಳ್ಳದೇ ಇರುವುದು ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲಿ ಅದರ ಮೇಲೆ ಯಾವ ಕ್ರಮ ವನ್ನೂ ತೆಗೆದುಕೊಳ್ಳದೆ ಅದನ್ನು ಒಂದು ಕೋಲ್ಡ್ ಸ್ಟೋರೇಜ್‌ನಲ್ಲಿ ಹಾಗೆಯೇ ಇಟ್ಟಿದ್ದಾರೆಂದು ಹೇಳಿ ದರೆ ತಪ್ಪಾಗಲಾರದು. ಆ ಒಂದು ವರದಿಗೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆ ತಜ್ಞರ ರಿಪೋರ್ಟ್‌ನಲ್ಲಿ ಇದನ್ನು ರೀಫಾರಂಸ್ ಮಾಡುವ ಬಗ್ಗೆ ಅನೇಕ ಸಲಹೆ

ಗಳನ್ನು ಕೊಟ್ಟಿದ್ದರೂ ಸಹ ಅದನ್ನು ಇವರು ಸರಿಯಾಗಿ ಪರಿಪಾಲಿಸದೇ ಹೋದ ಪಕ್ಷದಲ್ಲಿ ನಿಜವಾಗಿಯೂ ಅದಕ್ಕೆ ಕೋಟ್ಯಾಂತರ ರೂಪಾಯಿಗಳು ಏನು ಖರ್ಚಾಗಿದಯೋ ಅದು ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ?. ಆ ವರದಿಯಿಂದ ಲಾಭ ಏನಾಗಬಹುದು ಅದನ್ನು ಕಳೆದುಕೊಂಡಂತಾಗುವುದಿಲ್ಲವೇ? ಆದುದರಿಂದ ಮಾನ್ಯ ಗೃಹ ಮಂತ್ರಿಗಳಲ್ಲಿ ನಾನು ಬೇಡಿಕೊಳ್ಳುವುದೇನೆಂದರೆ, ಧರ್ಮವೀರರು ತಮ್ಮ ವರದಿಯಲ್ಲಿ ಕೊಟ್ಟಿರತಕ್ಕಂಥ ಹಲವಾರು ಸಲಹೆಗಳನ್ನು ಜಾರಿಗೆ ತರದೇ ಇದ್ದ ಪಕ್ಷದಲ್ಲಿ ಪೋಲೀಸ್ ಇಲಾಖೆಯಲ್ಲಿ ಒಂದು ಅನಿಶ್ಚಿತ ಅನ್ಯಾಯಗಳು ಕಂಡು ಬರುವುದನ್ನು ನೋಡಬಹುದು. ಅಲ್ಲದೆ ಅದರಿಂದ ಸಮಾಜಕ್ಕೆ ಕಷ್ಟನಷ್ಟಗಳೂ ಸಹ ಸಂಭವಿಸುತ್ತದೆ. ಆದುದರಿಂದ ಆ ವರದಿಯನ್ನು ಜಾರಿಗೆ ತಂದರೆ ಇವೆಲ್ಲವೂ ಕಡಿಮೆ ಆಗುವ ಸಂಭವ ಕಂಡುಬರುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಪೋಲೀಸ್ ಇಲಾಖೆಯನ್ನು ದುರಸ್ತಿ ಮಾಡುವ ರೀತಿಯಲ್ಲಿ ಇದನ್ನು ಸರಿಮಾಡದೆ ಹೋದ ಪಕ್ಷದಲ್ಲಿ ಪೋಲೀಸ್ ಇಲಾಖೆಯಲ್ಲಿರತಕ್ಕಂಥ ಲಂಚಕೋರತನವನ್ನು ಕಡಿಮೆಯಾಗದೇ ಹೋದ ಪಕ್ಷದಲ್ಲಿ ಇದರಿಂದ ಬಹಳಷ್ಟು ಮಟ್ಟಿಗೆ ಆಂಟಿ ಕರಪ್ಷನ್ ಆಕ್ಟ್ ಜಾರಿಗೆ ಬರಲಾರದು ಎಂದು ಹೇಳಬೇಕಾಗಿದೆ. ಇದರ ಬಗ್ಗೆ ನಿಮಗೆ ಮನಸ್ಸು ಇದ್ದರೆ ಈ ವರದಿಯನ್ನು ಜಾರಿಗೆ ತರುತ್ತೀರಾ? ಇದನ್ನು ಜಾರಿಗೆ ತರದೇ ಹೋದರೆ ನಿಮಗೆ ಇದರ ಬಗ್ಗೆ ಮನಸ್ಸಿಲ್ಲ ಎನ್ನುವ ಸಂದೇಹ ನನಗೆ ಕಂಡು ಬರುತ್ತದೆ. ಆದುದರಿಂದ ಮಾನ್ಯ ಅಧ್ಯಕ್ಷರೆ ತಮ್ಮ ಮುಖಾಂತರ ಮಾನ್ಯ ಗೃಹ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಯಾರು ಸಮಾಜಕ್ಕೆ ಸಹಾಯ ಮಾಡಬೇಕೋ, ಸಮಾಜದಲ್ಲಿ ಯಾರಿಗೆ ರಕ್ಷಣೆ ದೊರಕಬೇಕೋ ಅದು ಈವೊತ್ತಿನ ದಿವಸ ಕಾಣುತ್ತಾ ಇಲ್ಲ, ಅದಕ್ಕೆ ಬದಲಾಗಿ ಅನ್ಯಾಯ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಿಜವಾಗಿಯೂ ಹೇಳುವುದಾದರೆ ಈ ಇಲಾಖೆ ಈ ರೀತಿಯಾಗಿ ನಡೆದುಕೊಂಡು ಬಂದಲ್ಲಿ ಅದರಿಂದ ಏನೂ ಪ್ರಯೋಜನವಾಗಲಾರದು ಅದರಿಂದ ಯಾವ ರೀತಿಯಾಗಿಯೂ ಅನುಕೂಲವಾಗಲಾರದು ಅದರಿಂದ ಯಾವರೀತಿಯೂ ಸಮಾಜಕ್ಕೆ ಲಾಭ ದೊರಕಲಾರದು ಎನ್ನುವುದು ನನ್ನ ಅಭಿಪ್ರಾಯ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ)— ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಅನೇಕ ಇಲಾಖೆಗಳ ಮೇಲಿನ ಬೇಡಿಕೆಗಳನ್ನು ಇಲ್ಲಿ ಮಂಡಿಸಿದ್ದಾರೆ. ಈ ಎಲ್ಲಾ ಇಲಾಖೆಗಳ ಬೇಡಿಕೆಗಳ ಮೇಲೆ ನಾವು ಮಾತನಾಡಬೇಕಾಗಿದೆ. ಹಲವಾರು ದಿನಗಳಿಂದ ಬಿಟ್ಟಂಥ ಕೆಲವು ಇಲಾಖೆಗಳ ಬೇಡಿಕೆಗಳ ಮೇಲೆ ಈ ದಿನ ಒಟ್ಟಿಗೆ ಸೇರಿಸಿ ಮಾತನಾಡಬೇಕೆಂದರೆ ಅದು ಅಷ್ಟು ಸುಲಭವಲ್ಲವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇವೊತ್ತು ಮೊದಲನೆಯದಾಗಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುವುದು ಏನೆಂದರೆ, ನಮಗೆ ಬೇಕಾದಂಥ ವರದಿಗಳನ್ನು ಸಕಾಲದಲ್ಲಿ ಒದಗಿಸಬೇಕು ಎಂದು. ಈಗ ನಮಗೆ ವಾರ್ಷಿಕ ವರದಿಗಳು ಮತ್ತು ಇತರೇ ವರದಿಗಳು ಸರಿಯಾಗಿ ಮತ್ತು ಸಕಾಲದಲ್ಲಿ ಬರುತ್ತಿಲ್ಲ. ನಾವು ಮಾತನಾಡುವ ದಿವಸ ವಾರ್ಷಿಕ ವರದಿಗಳನ್ನು ಕೊಡುತ್ತಾರೆ. ಇದು ಸರಿಯಲ್ಲ. ಮೊದಲೇ ಕೊಡುವ ವ್ಯವಸ್ಥೆ ಆಗಬೇಕು. ಕೆಲವು ವರದಿಗಳನ್ನು ಈ ಸಭೆಯ ಮುಂದೆ ಇಟ್ಟಿದ್ದೇವೆಂದು ಕೇಳಿದಾಗ ಹೇಳುತ್ತಾರೆ. ಆದರೆ ಅದು ನಮಗೆ ತಿಳಿಯುವುದೇ ಇಲ್ಲ. ಐದಾರು ವರ್ಷಗಳ ಹಿಂದಿನ ವರದಿಗಳನ್ನು ಈಗ ನಮಗೆ ಒದಗಿಸುತ್ತಾರೆ. ಯಾವುದೇ ಕಾರ್ಪೊರೇಷನ್‌ಗಳ ವರದಿಗಳಾಗಲೀ ಅಥವಾ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್‌ಗಳ ವರದಿಗಳಾಗಲೀ ನಮಗೆ ಸಕಾಲದಲ್ಲಿ ಬರುವುದಿಲ್ಲ. ಮುಖ್ಯವಾದ ಭಾಗದ ವರದಿಗಳನ್ನು ಬಹಳ ತಡವಾಗಿ ಒದಗಿಸುತ್ತಾರೆ. ಇವೊತ್ತು ಕೆ.ಎಸ್.ಆರ್.ಟಿ.ಸಿ.ಯ ೧೯೮೫–೮೬ನೇ ಸಾಲಿನ ವಾರ್ಷಿಕ ವರದಿಯನ್ನು ನಮಗೆ ಒದಗಿಸಿದ್ದಾರೆ ೧೯೮೪–೮೫ನೇ ಸಾಲಿನ ಕೆಲವು ವರದಿಗಳನ್ನು ಸಹ ನಮಗೆ ಒದಗಿಸಿದ್ದಾರೆ. ಇದಕ್ಕೆ ಕಾರಣ ಕೇಳಿದರೆ, ಇಲಾಖೆಯವರು ಒದಗಿಸಿದಾಗ ನಾವು ನಿಮಗೆ ಕೊಡುತ್ತೇವೆಂದು ಹೇಳುತ್ತಾರೆ. ಇದು ಈ ಸರ್ಕಾರದ ಅದಕ್ಷತೆಯನ್ನು ತೋರಿಸುತ್ತದೆ. ಇತ್ತೀಚಿನ ವರದಿಗಳನ್ನು ನಮಗೆ ಸಕಾಲದಲ್ಲಿ ಒದಗಿಸಿದರೆ ನಾವು ಅದರ ಬಗ್ಗೆ ಅಧ್ಯಯನ ಮಾಡಿ ಇಲ್ಲಿ ಈ ಸರ್ಕಾರದ ಕೆಲಸ ಕಾರ್ಯಗಳ ಬಗ್ಗೆ ಶ್ಲಾಘನೆ ಮಾಡಬಹುದು ಇಲ್ಲವೇ ಟೀಕೆ ಮಾಡಬಹುದು. ಆದರೆ ಇದಕ್ಕೆಲ್ಲಾ ಅವಕಾಶ ಮಾಡಿಕೊಡಬಾರದೆಂದುಕೊಂಡು ನಮಗೆ ವರದಿಗಳನ್ನು ಸಕಾಲದಲ್ಲಿ ಒದಗಿಸುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ಆರೋಪಣೆ ಮಾಡುತ್ತಿದ್ದೇನೆ. ಈ ನನ್ನ ಆರೋಪಣೆಗೆ ಈ ದಿನ ಕೊಟ್ಟಿರುವ ವರದಿಗಳೇ ಸಾಕ್ಷಿ ಆಗಿವೆ. ಈ ದಿನ ಹಲವಾರು ವಿಷಯಗಳ ಬಗ್ಗೆ ಮಾತನಾಡಬೇಕಾಗಿದೆ.

ಮುಖ್ಯಮಂತ್ರಿಗಳ ಇಲಾಖೆ ಮೇಲೆ ಮಾತನಾಡುವಾಗ ಅವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಅವರು ಮೇಲ್ಮನೆಯಲ್ಲಿ ಮಾತನಾಡುತ್ತಿದ್ದಾರೆಂದು ತಿಳಿದುಬಂದಿದೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಹಲವಾರು ಪತ್ರಿಕಾ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಇವರ ಇಂಟರ್‌ವ್ಯೂಗಳು ಸಹ ಒಂದಾದ ಮೇಲೆ ಒಂದರಂತೆ ಪತ್ರಿಕೆಗಳಲ್ಲಿ ಬರುತ್ತಿವೆ. ಇವರ ಈ ಹೇಳಿಕೆಗಳಿಂದ ಒಂದು ರೀತಿಯ ಗೊಂದಲಮಯ ವಾತಾವರಣ ಉಂಟಾಗಿದೆ. ಈ ಹಿಂದು ನಾನು ಇಲ್ಲಿ ಮಾತನಾಡಬೇಕಾದರೆ ಒಂದು ವಿಷಯದ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆದಿದ್ದೆ. ಅದೇನೆಂದರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಮ್ಮ ದೇಶದಲ್ಲಿ ಅಧ್ಯಕ್ಷೀಯ ಆಡಳಿತ ಪದ್ಧತಿ ಜಾರಿಯಲ್ಲಿ ಬರಬೇಕೆಂದು ಎಲ್ಲಾ ಕಡೆ ಒತ್ತಾಯ ಮಾಡುತ್ತಿದ್ದಾರೆ ಎಂದು. ಆದರೆ ಇವರೇ ಮತ್ತೊಂದು ಕಡೆ ಆ ರೀತಿ ನಾನು ಹೇಳಿಲ್ಲ ಎಂದು ಹೇಳಿಕೊಂಡಿದ್ದಾರೆ. ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಜನವರಿ ೨೮ರಂದು ಇವರು ಇದರ ಬಗ್ಗೆ ಏನು ಹೇಳಿದ್ದಾರೆಂದರೆ.—

> "Karnataka Chief Minister Ramakrishna Hegde has described the present political system as a failure and called for a change in the Constitution of the country to usher in a presidential form of Government.
>
> Delivering the presidential address at an awards Ceremoney organised by the Indian Merchants Chamber today, Mr. Hegde said that in the light of experience gained in 40 years of independence and 37 years of working of the Constitution, it was imperative to hold an urgent debate on how to change the Constitution. The present system, Mr. Hegde said, had led not only to one-party rule, but what is even more dangerous, it has led or is leading to one-party system, " We have to save the country from this danger," the Chief Minister said.
>
> In this context, he said the lacuna could be made up by "providing an alternative in terms of an individual"

ಅಂದರೆ ನಮ್ಮ ದೇಶದಲ್ಲಿ ಅಧ್ಯಕ್ಷೀಯ ಆಡಳಿತ ಪದ್ಧತಿಯನ್ನು ಜಾರಿಯಲ್ಲಿ ತರಬೇಕೆಂಬುದು ಇವರ ಅಭಿಪ್ರಾಯವಾಗಿದೆ. ಇದರ ಬಗ್ಗೆ ನಾವು ಏನಾದರೂ ಹೇಳಲು ಹೊರಟರೆ, ಇವರು ಕಮ್ಯುನಿಸ್ಟ್ ಪಕ್ಷದವರು, ಆದ್ದರಿಂದ ಆ ರೀತಿ ಹೇಳುತ್ತಾರೆ ಎಂದು ಹೇಳುತ್ತಾರೆ, ಆದರೆ ಇದಕ್ಕಿಂತ ಪುರೋಗಾಮಿ ನೀತಿ ಯಾವುದು ಇದೆ ? ಈ ಹಿಂದೆ ಕೂಡ ಇದರ ಬಗ್ಗೆ ಡಿಬೇಟ್ ನಡೆದಿದೆ. ಶ್ರೀಮತಿ ಇಂದಿರಾಗಾಂಧಿ ಅವರ ಕಾಲದಲ್ಲಿ ಈ ವಿಚಾರ ಪ್ರಸ್ತಾಪಕ್ಕೆ ಬಂದಾಗ ಇವರು ಅವರನ್ನು ಸಿಕ್ಕಾಪಟ್ಟೆ ತೆಗಳಿದರು. ಆದರೆ ಈಗ ಅದೇ ಬಾಯಿಯಲ್ಲಿ ಅಧ್ಯಕ್ಷೀಯ ಆಳ್ವಿಕೆಯನ್ನು ಯಾವ ರೀತಿ ಹೊಗಳುತ್ತಾರೆ ? ನಮ್ಮ ದೇಶದಲ್ಲಿ ಒಬ್ಬರು ಅಧ್ಯಕ್ಷರು ಇದ್ದರೆ ನಮ್ಮ ಪ್ರಜಾಪ್ರಭುತ್ವ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವೇ ? ಇದರಿಂದ ನಮ್ಮ ಪ್ರಜಾಪ್ರಭುತ್ವ ಪದ್ಧತಿಗೆ ಪಾರ್ಲಿಮೆಂಟರಿ ಪದ್ಧತಿಗೆ ತಿಲಾಂಜಲಿ ಕೊಟ್ಟಂತೆ ಆಗುವುದಿಲ್ಲವೇ? ಇದಕ್ಕಿಂತ ಪ್ರತಿಗಾಮಿ ಯೋಚನೆ ಬೇರೆ ಯಾವುದೂ ಇಲ್ಲ ಎಂದು ಹೇಳಬಹುದು. ಇದಕ್ಕೆ ಪಂಡಿತ್ ಜವಹರಲಾಲ್ ನೆಹರೂರವರು ಒಪ್ಪಿಕೊಳ್ಳಲಿಲ್ಲ, ಚರ್ಚೆ ನಡೆಸಿದ್ದಾರೆ, ನನ್ನ ಹತ್ತಿರ ಕಟಿಂಗ್ಸ್ ಇದೆ. ಅಂಬೇಡ್ಕರ್‌ರವರು ಕಾನ್‌ಸ್ಟಿಟ್ಯೂಷನ್ ಬಗ್ಗೆ ಮಾತನಾಡುವಾಗ ಇದನ್ನು ವಿರೋಧ ಮಾಡಿದ್ದಾರೆ, ಇದು ಕೂಡದು ಎಂದು ಹೇಳಿದ್ದಾರೆ. ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರು ಇದರ ಬಗ್ಗೆ ಮಾತನಾಡುತ್ತಾ ಇದು ಸರಿಯಾದುದಲ್ಲ ಎಂದು ಹೇಳಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಚರ್ಚೆ ನಡೆದು ಇದು ಬೇಡ ಎಂದು ಹೇಳಿ ನಮ್ಮ ದೇಶ ಪಾರ್ಲಿಮೆಂಟರಿ ಪದ್ಧತಿಯನ್ನು ಒಪ್ಪಿಕೊಂಡಿದೆ. ಪಾರ್ಲಿಮೆಂಟನ್ನು ಎಲೆಕ್ಟ್ ಮಾಡುವುದು.

ಸ್ಟೇಟ್ ಲೆಜಿಸ್ಲೇಚರನ್ನು ಎಲೆಕ್ಟ್ ಮಾಡುವುದು, ಅದರ ಮೂಲಕ ಕೌನ್ಸಿಲ್ ಆಫ್ ಮಿನಿಸ್ಟರ್ಸ್‌ನ್ನು ಎಲೆಕ್ಟ್ ಮಾಡುವುದು, ಅವರು ಇವತ್ತಿನ ದಿವಸ ರಾಜ್ಯಭಾರ ಮಾಡುವುದು ಪದ್ಧತಿ ಇದೆ. ಅಧ್ಯಕ್ಷರಿಗೆ ಕೆಲವು ಅಧಿಕಾರ ಕೊಟ್ಟಿದ್ದಾರೆ. ಪೂರ್ತಿ ಅಧಿಕಾರ ಕೊಟ್ಟಿಲ್ಲ. ನೆರೆ ರಾಷ್ಟ್ರಗಳಲ್ಲಿ ಏನಾಗಿದೆ ಎಂದು ನಾವು ತಿಳಿದುಕೊಳ್ಳಬೇಕಾಗಿದೆ. ಪಾಕಿಸ್ತಾನದಲ್ಲಿ ಏನಾಗಿದೆ ಎಂದು ತಿಳಿದುಕೊಳ್ಳಬೇಕಾಗಿದೆ, ಅಮೆರಿಕದಲ್ಲಿ ಏನಾಗಿದೆ ಫ್ರಾನ್ಸ್‌ನಲ್ಲಿ ಏನಾಗಿದೆ ಎಂದು ತಿಳಿದುಕೊಳ್ಳಬೇಕಾಗಿದೆ, ತಿಳಿದುಕೊಂಡು ಈ ದಿನ ಈ ರೀತಿ ಮಾತನಾಡಿದರೆ ನನಗನ್ನಿಸುತ್ತದೆ ನಾವು ಪುನಃ ಕೊಶ್ಚನ್ ಮಾಡಬೇಕಾಗಿ ಬರುತ್ತದೆ, ನಿಮ್ಮ ಪ್ರಜಾಪ್ರಭುತ್ವ ಮೌಲ್ಯಾಧಾರಿತ ರಾಜಕೀಯ ಎಲ್ಲಿ ಹೋಗಿದೆ ಎಂದು. ಡಿಕ್ಟೇಟರ್‌ಶಿಪ್ ಸರಿಯಾದುದಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇತ್ತೀಚೆಗೆ ಚುನಾವಣೆ ನಡೆದಿರುವುದನ್ನು ನೋಡಿದಿರಿ. ಪಶ್ಚಿಮ ಬಂಗಾಳದಲ್ಲಿ ಎಡ ಪಕ್ಷಗಳು ಗೆದ್ದಿವೆ, ಯುನೈಟೆಡ್ ಫ್ರಂಟ್ ಕೇರಳದಲ್ಲಿ ಗೆದ್ದಿದ.

ಶ್ರೀ ಬಿ. ಗಂಗಣ್ಣ.— ಮಾನ್ಯ ಕೃಷ್ಣನ್‌ರವರೇ ಇದು ಈ ಸನ್ನಿವೇಶಕ್ಕೆ ಹೇಗೆ ಹೊಂದಿಕೊಳ್ಳುತ್ತದೆ ಎನ್ನುವುದನ್ನು ಹೇಳಬೇಕು.

ಶ್ರೀ ಎಂ. ಎಸ್. ಕೃಷ್ಣನ್,— ನಾನು ಅದನ್ನೇ ಹೇಳುತ್ತಿದ್ದೇನೆ. ಈ ರೀತಿ ಗೆದ್ದಿರುವುದು ನಮಗೆ ಏನು ತೋರಿಸುತ್ತದೆ ಎಂದರೆ ಒಂದೇ ಒಂದು ಪಕ್ಷ ಆಳಬೇಕಾಗಿಲ್ಲ. ಸಂಯುಕ್ತರಂಗ, ಅಂದರೆ ಹಲವಾರು ಪಕ್ಷಗಳು ಸೇರಿ ಒಂದು ತೀರ್ಮಾನ ಮಾಡಿ, ಒಂದು ಪ್ರೋಗ್ರಾಂ ಇಟ್ಟುಕೊಂಡು ನಡೆಸಿದರೆ ಅಂತಹವರಿಗೆ ಜನ ಮಾನ್ಯತೆ ಕೊಡುತ್ತಾರೆ ಎಂದು, ಅದನ್ನೇ ನಾನು ಹೇಳುತ್ತಾ ಇದ್ದೇನೆ, ಆ ರೀತಿ ಕಾರ್ಯಕ್ರಮ ಇಟ್ಟುಕೊಂಡು ವೆಸ್ಟ್‌ಬೆಂಗಾಲ್‌ನಲ್ಲಿ ಗೆದ್ದಿರುವುದು.

ಶ್ರೀ ಬಿ. ಗಂಗಣ್ಣ.— ಆಯವ್ಯಯಕ್ಕೂ ಇದಕ್ಕೂ ಏನು ಸಂಬಂಧ ?

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಗಂಗಣ್ಣನವರಿಗೆ ಕಳ್ಳುಂಬೆಳ್ಳದ ವಿಷಯ ಗೊತ್ತಿರಬಹುದು ನಾನೇನು ಮಾಡಲಿ ಹೇಳಿ. ಆದುದರಿಂದ ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಲಂಬಿಸುವುದಕ್ಕೆ ಹೋಗುವುದಿಲ್ಲ, ಇದನ್ನು ಕೈಬಿಡಬೇಕು ಎಂದು ಹೇಳುತ್ತೇನೆ. ಎಡಪಕ್ಷಗಳ ಸರ್ಕಾರ ಯಾವ ರೀತಿ ಇದೆ ಎನ್ನುವುದು ಗೊತ್ತಿದೆ. ಇವರೂ ಕೂಡ ನ್ಯಾಷನಲ್ ಕಾನ್‌ಫರೆನ್ಸ್ ಕಾಂಗ್ರೆಸ್--ಐ ಎಂದು ಮಾಡಿಕೊಂಡಿದ್ದಾರೆ. ಯು.ಡಿ.ಎಫ್. ಇದೆ. ಹೊಸ ರೀತಿಯ ವ್ಯವಸ್ಥೆ ಇದೆ. ನಮ್ಮ ದೇಶದಲ್ಲಿ ಆಲ್ಟರ್ನೇಟೀವ್ ಬರುತ್ತಿದೆ. ಡೆಮಾಕ್ರಟಿಕ್ ಫ್ರಂಟ್ ಇದೆ. ಹೀಗೆಲ್ಲಾ ಇದೆ. ಆದುದರಿಂದ ಇವರು ಇದಕ್ಕಾಗಿ ಪ್ರಯತ್ನ ಮಾಡುವುದನ್ನು ಕೈಬಿಡಬೇಕು. ಮಾನ್ಯ ಮುಖ್ಯಮಂತ್ರಿಗಳಿಗೆ ತಾವು ಒತ್ತಾಯ ಮಾಡಬೇಕು. ಅವರು ಇದ್ದರೆ ಹೇಳುತ್ತಿದ್ದೆ, ಅವರ ಪರವಾಗಿ ತಾವು ಕುಳಿತಿದ್ದೀರಿ. ಇದನ್ನು ಕೈಬಿಡದೇಹೋದರೆ ದೇಶಕ್ಕೇ ಅಪಾಯ, ರಾಜ್ಯಕ್ಕೆ ಅಪಾಯ. ಜನಗಳಿಗೆ ಅಪಾಯ ಮಾನ್ಯ ಅಧ್ಯಕ್ಷರೆ, ಇನ್ನೊಂದು ಈ ಸರ್ಕಾರದ ವೈಖರಿ ಏನೆಂದರೆ, ಇವರು ಮೌಲ್ಯಾಧಾರಿತ ರಾಜಕೀಯದ ಬಗ್ಗೆ ಮಾತನಾಡುತ್ತಾ ಮುಖ್ಯವಾಗಿ ಕರಪ್ಷನ್ ಬಗ್ಗೆ ಮಾತನಾಡುತ್ತಾರೆ, ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ. ನಾನಾದರೂ ಈ ಸಂದರ್ಭದಲ್ಲಿ ಎಷ್ಟು ದೂರ ಭ್ರಷ್ಟಾಚಾರ ನಿರ್ಮೂಲವಾಗಿದೆ ರಾಜ್ಯದಲ್ಲಿ ಎಂದು ಪ್ರಶ್ನೆ ಮಾಡಬೇಕಾಗಿದೆ. ನಾವು ಹೋದ ಕಡೆಯೆಲ್ಲಾ ಏನು ಹೇಳುತ್ತಾರೆ ಗೊತ್ತೇನು ? ಮೊದಲಿದ್ದ ಸರ್ಕಾರ ದುಡ್ಡು ಕೊಟ್ಟರೆ ದುಡ್ಡು ತೆಗೆದುಕೊಂಡು ಕೆಲಸ ಮಾಡಿಕೊಡುತ್ತಿದ್ದರು, ಈಗಿರುವ ಸರ್ಕಾರ ದುಡ್ಡೂ ತೆಗೆದುಕೊಳ್ಳುತ್ತಾರೆ. ಕೆಲಸವನ್ನೂ ಮಾಡುವುದಿಲ್ಲ. ದಾನಿಕಿ ದಾನಿ ಪೋಯಿ, ದೀನಿಕಿ ದೀನಿ ಪೋಯಿ ಎಂದು. ನಾವು ಲೋಕ ಅದಾಲತ್ ಮಾಡಿದ್ದೇವೆ. ಲೋಕಾಯುಕ್ತ ಮಾಡಿದ್ದೇವೆ ನೀವು ಪ್ರೂಫ್ ಮಾಡಿ ಎಂದು ಹೇಳುತ್ತಾರೆ. ಅದಲ್ಲ ಪಾಯಿಂಟ್. ಪಾಯಿಂಟ್ ಏನೆಂದರೆ, ಕರಪ್ಷನ್ ನಿಲ್ಲಿಸುವುದಕ್ಕೆ ವಿಲ್ ಇರಬೇಕು. ಇವತ್ತು ರೆಕ್ರೂಟ್‌ಮೆಂಟ್‌ನಲ್ಲಿ ಕರಪ್ಷನ್ ಪ್ರೊಮೋಷನ್‌ನಲ್ಲಿ ಕರಪ್ಷನ್, ಟ್ರಾನ್ಸ್‌ಫರ್‌ನಲ್ಲಿ ಕರಪ್ಷನ್ ಇದೆ. ಉದಾಹರಣೆಗೆ ಹೇಳುವುದಾದರೆ ನನ್ನ ಹತ್ತಿರ ತಮ್ಮ ಇಲಾಖೆಗೆ ಸೇರಿದಂಥ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಪ್ರಮೋಷನ್‌ಗೋಸ್ಕರ ನಮ್ಮ ಹತ್ತಿರ ಬಂದಿದ್ದರು. ನಾನು ಅವರಿಗೆ ಹೇಳಿದೆ, ನಮ್ಮ ಕೈಯಲ್ಲಿ ಆಗುವುದಿಲ್ಲ ಸರ್ಕಾರವನ್ನು ಕೇಳಬೇಕು ಎಂದು. ಅವರು ಸರ್ಕಾರವನ್ನು ಕೇಳಿ ಮಾಡಿಸಿಕೊಂಡಿದ್ದಾರೆ. ನಾನು ೧೦ ಸಹಸ್ರ ರೂಪಾಯಿಗಳನ್ನು ಕೊಟ್ಟೆ ಎಂದು ಹೇಳಿದರು. ೧೦ ಸಹಸ್ರ ರೂಪಾಯಿ

ಕೊಟ್ಟಿದ್ದಾರೆ, ಪ್ರಮೋಷನ್ ಆಗಿದೆ. ಈ ರೀತಿ ಆಡುಂತ್ತಾ ಇದ್ದರೆ, ಇವತ್ತು ಏನು ಪರಿಸ್ಥಿತಿ ಇದೆಯೆಂದು ಹೇಳಿ. ಇದೊಂದು ನಿದರ್ಶನ ಇದೆ. ಮತ್ತೆ ಹೈರೈಸ್ ಬಿಲ್ಡಿಂಗ್ಸ್ ಬೆಂಗಳೂರಿನಲ್ಲಿ ಬಂದಿದೆ. ನಿಮಗೆ ಗೊತ್ತಿರಬಹುದು. ಹೈರೈಸ್ಟ್ ಬಿಲ್ಡಿಂಗ್ಸ್ ೮ ಮಹಡಿ, ೧೨ ಮಹಡಿಗಳು ಇವೆ. ೮–೧೦–೧೨ ಮಹಡಿಗಳ ಬಗ್ಗೆ ಮೊನ್ನೆ ದಿವಸ ಸುಪ್ರೀಂ ಕೋರ್ಟ್ ಒಂದು ತೀರ್ಮಾನವನ್ನು ಕೊಟ್ಟಿತು.

10-30 ಎ.ಎಂ.

ಮಾನ್ಯ ಮುಖ್ಯಮಂತ್ರಿಗಳ ಮನೆ ಪಕ್ಕದಲ್ಲಿ ೧೨ ಅಂತಸ್ತಿನ ಮನೆಗಳನ್ನು ಕಾರ್ಪೊರೇಷನ್ ನಿಯಮಾವಳಿಗಳನ್ನು ಡೀವಿಯೇಷನ್ ಮಾಡಿ ಕಟ್ಟಿದ್ದಾರೆ. ಕಟ್ಟಕೂಡದೆಂದು ಕಾರ್ಪೊರೇಷನ್ ಹೇಳ ಬೇಕಾದದ್ದು ನ್ಯಾಯ. ನಾವು ಕಟ್ಟೋದು ಕಟ್ಟುತ್ತೇವೆ, ನೀವು ಬೇಕಾದರೆ ಸುಪ್ರೀಂಕೋರ್ಟಿಗೆ ಹೋಗಿ, ಸುಪ್ರೀಂಕೋರ್ಟಿನಲ್ಲಿ ಯಾವರೀತಿ ತೀರ್ಮಾನವಾಗುತ್ತದೆಯೋ ಅದೇರೀತಿ ಒಪ್ಪಿಕೊಳ್ಳು ತ್ತೇವೆಂದು ಹೇಳಿದ್ದಾರೆ. ಸುಪ್ರೀಂಕೋರ್ಟು ತೀರ್ಮಾನ ಅವರಿಗೆ ವಿರುದ್ಧವಾಗಿ ಆದಮೇಲೆ ಬಂದಿರುವ ತೀರ್ಮಾನ ಏನಾಗಿದೆ ಅಂದರೆ.—

I am reading form the Editorial of Deccan Herald dt : 24–2–1987 "Pull them down :

"T...the BCC recently Published a list of 15 such buildings which have been given occupation certificates only for the lower floors which do not contravene the zoning regulations–there is justice in pleading that declaring the upper floors illegal now would cause hardship to buyers or even to builders. But no such plea can be sustained for the RMVE buildings, since timely legal action was taken in full public knowledge. Yet, last month Revenue Minister Bommai, speaking in Hubli, hinted that the Government was looking at the possibility of taking over the buildings, saying that it was studying such an action of the Maharashtra Government in a similar case. This possibility was apparently on the mind of a senior BCC official who spoke to a Deccen Herald staffer for an article that appeared on Sunday last. We quote. "He (the official) also felt that since this was a case involving human distress, the Government might intervene,"

There is nothing more shameful than this, ನಿಯಮಾವಳಿಗಳನ್ನು ವಾಯಿ ಲೇಷನ್ ಮಾಡಿ, ೧೨ ಅಂತಸ್ತಿನ ಮನೆಗಳನ್ನು ಕಟ್ಟಿದಮೇಲೆ ಸುಪ್ರೀಂಕೋರ್ಟು ತೀರ್ಮಾನ ಬಂದ ಮೇಲೆ ಸರ್ಕಾರದವರು ಕೊಂಡುಕೊಳ್ಳುತ್ತಾರೆಂದರೆ ಇದರಲ್ಲಿ ಅರ್ಥ ಇದೆಯೇ ಒಂದು ಕಡೆ ಗುಡಿಸಲು ಗಳನ್ನು ಹೊಡೆದು ಹಾಕುತ್ತಿದ್ದಾರೆ. ಒಂದು ಕಡೆ ಸಾಹುಕಾರರು ಕಟ್ಟಿರುವ ಮನೆಗಳನ್ನು ಕಾರ್ಪೊರೇಷನ್, ಸರ್ಕಾರ ಕೊಂಡುಕೊಳ್ಳುತ್ತದೆಂದರೆ--it is negating even the Supreme Court decision and also accepting whatever the BCC official is supposed to have stated for the tears of the richer people. ಇದಕ್ಕಿಂತ ಮೋಸ ಬೇರೆ ಯಾವುದೂ ಇಲ್ಲ. ಬೆರಳಚ್ಚುಗಾರರಿಗೆ ಸಂಬಂಧಪಟ್ಟಂತೆ ರೆಕ್ರೂಟ್‌ಮೆಂಟ್ ಕಮಿಟಿ

ಯಲ್ಲಿ ಭ್ರಷ್ಟಾಚಾರ ನಡೆಯಿತು ಎನ್ನುವ ಸುದ್ದಿ ಬಂತು. ಅದರಲ್ಲಿ ನಾನ್ ಅಫಿಷಿಯಲ್ ಹಾಕಿಕೊಂಡಿದ್ದರಿ. ನಮ್ಮ ಪಾರ್ಟಿಯವರು ಯಾರೂ ಇಲ್ಲ. ಯಾವ ಯಾವ ಪಾರ್ಟಿಯವರು ಇದ್ದಾರೋ ಗೊತ್ತಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮ್ಮ ಪಾರ್ಟಿಯವರು ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ದುಡ್ಡು ತೆಗೆದುಕೊಳ್ಳುತ್ತಾರೆನ್ನುವ ವಿಷಯ ನಮ್ಮ ಗಮನಕ್ಕೂ ಬಂದಿದೆ. ಅದನ್ನು ನಿಲ್ಲಿಸಿಬಿಟ್ಟಿದ್ದೇವೆನ್ನುವ ಅಭಿಪ್ರಾಯವನ್ನು ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಹೇಳಿದರು. ಒಂದು ಮಾತನ್ನು ನಾವು ಒಪ್ಪಬೇಕಾಗಿದೆ. ಇವತ್ತು ನಾವು ಬಂಡವಾಳಶಾಹಿ ಸಮಾಜದಲ್ಲಿರುವುದರಿಂದ ಭ್ರಷ್ಟಾಚಾರ ಸುಲಭವಾಗಿ ಹೋಗುವುದಿಲ್ಲ.

ಶ್ರೀ ವೈ. ಕೆ. ರಾಮಯ್ಯ.—ವೆಸ್ಟ್ ಬಂಗಾಳದಲ್ಲಿಯೂ ಇದೆ.

SRI M. S. KRISHNAN.—West Baugel is not a socialist soaiety. You are a learned person. You make a distinction between that.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರ ಭಾಷಣವನ್ನು ಬಹಳ ಗಂಭೀರವಾಗಿ ಕೇಳುತ್ತಿದ್ದೇನೆ. ಇವತ್ತು ಕರಪ್ಷನ್ ವೆಸ್ಟ್ ಬಂಗಾಳದಲ್ಲಿಯೂ ಇದೆ. ಅದನ್ನು ತೆಗೆದು ಹಾಕುವ ಬಗ್ಗೆ ಕನ್‌ಸ್ಟ್ರಕ್ಟೀವ್ ಸಜೆಷನ್ ಏನಾದರೂ ಇದ್ದರೆ ತಿಳಿಸಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಸಮಿತಿಯ ಕೆಲಸಗಳನ್ನು ಕಂಪ್ಯೂಟರೈಸ್ ಮಾಡಿ ಎಂದು ಹೇಳಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಭ್ರಷ್ಟಾಚಾರ ವೆಸ್ಟ್ ಬಂಗಾಳದಲ್ಲಿಯೂ ಇದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಪ್ರಶ್ನೆ ಏನೆಂದರೆ, ನಮ್ಮಲ್ಲಿ ಬಂಡವಾಳಶಾಹಿ ಸಮಾಜದ ವ್ಯವಸ್ಥೆ ಎಲ್ಲಿಯತನಕ ಇರುತ್ತದೆ, ಅಲ್ಲಿಯವರೆವಿಗೂ ಕರಪ್ಷನ್ ಕೂಡ ಅದರ ಅಂಗವಾಗಿಯೇ ಇರುತ್ತದೆ. Corruption is a part of the capitalist society. You are not prepared to fight capitalist society. You want to retain capitalist society and fight corruption which is impossible within the framework. ಇದರ ಚೌಕಟ್ಟಿನೊಳಗೆ ಭ್ರಷ್ಟಾಚಾರ ನಿರ್ಮೂಲನ ಮಾಡಬೇಕು. ಯಾವಾಗ ರೂಲಿಂಗ್ ಪಾರ್ಟಿ ನಾಯಕರು, ಮೇಲ್ಮಟ್ಟದಲ್ಲಿರುವ ಜನ, ಟಾಪ್ ಪೀಪಲ್ ಯಾವಾಗ ಮನಸ್ಸು ಮಾಡುತ್ತಾರೆ ಆಗ ಹಿಡಿಯಬಹುದು. ಶ್ರೀ ಜಿ. ಎಲ್. ನಂದ ಅವರು ಇದ್ದರು, ಅವರು ಇದರ ಬಗ್ಗೆ ಮಾತನಾಡಿ,

"Will must come from the top and not from the bottom."

ಎಂದು ಹೇಳಿದರು. He tried to practise it out and it costs him his Ministry. ಇನ್ನು ನಮ್ಮ ರಾಜ್ಯಕ್ಕೆ ಬನ್ನಿ. ಇದೇ ಮನೆಯಲ್ಲಿ ಮಾನ್ಯ ಹೆಚ್. ಎಂ. ಚನ್ನಬಸಪ್ಪನವರು ಕುಳಿತುಕೊಳ್ಳುತ್ತಿದ್ದರು. ಅವರನ್ನು ನಾವು ಇವೊತ್ತು ನೆನಸಿಕೊಳ್ಳಬೇಕಾಗುತ್ತದೆ. ಬೇರೆ ವಿಷಯದ ಬಗ್ಗೆ ಇರಲಿ, ಕರಪ್ಷನ್ ವಿಷಯದಲ್ಲಿ ಅಂದರೆ ಎಲ್ಲರೂ ಅವರನ್ನು ಕಂಡರೆ ಹೆದರುತ್ತಿದ್ದರು ಅವರನ್ನು ಕಂಡರೆ ಐ. ಎ. ಎಸ್. ಆಫೀಸರ್ ಆಗಲಿ, ಚೀಫ್ ಸೆಕ್ರೆಟರಿಯವರು ಆಗಲಿ, ಹೆದರುತ್ತಿದ್ದರೆ. ಅವರು ಯಾವಾಗಲೂ ಅವರ ಸಬ್ಜೆಕ್ಟ್ ಬಗ್ಗೆ ಥರೋ ಇರುತ್ತಿದ್ದರು. ಕರಪ್ಷನ್ ಬಗ್ಗೆ ಕಂಪ್ಲೆಂಟ್ ಕೊಟ್ಟರೆ, ತಾವೇ ಹೋಗಿ ಇನ್‌ವೆಸ್ಟಿಗೇಷನ್ ಮಾಡಿ ಹಿಡಿಯುತ್ತಿದ್ದರು. ಪ್ರೈವೇಟ್ ಆಗಿ ಹೇಳಿದರು ಸರಿಯೇ, ಪಬ್ಲಿಕ್ ಆಗಿ ಹೇಳಿದರು ಸರಿಯೇ, ಅವರು ಕ್ರಮ ತೆಗೆದುಕೊಳ್ಳುತ್ತಿದ್ದರು. ಎರಡು ಕೇಸುಗಳ ಬಗ್ಗೆ ಇಂಜಿನಿಯರ್ಸ್ ಹಿಡಿದು ಆ ಬಗ್ಗೆ ಈ ಮನೆಯಲ್ಲಿ ಅವರು ಹೇಳಿದಮೇಲೆ, ಅವರನ್ನು ಕಂಡರೆ ಎಲ್ಲರೂ ಹೆದರುತ್ತಿದ್ದರು. Tell me one instance of one Minister right from the Chief Minister down to Sri Rachaiah or anybody. ಈಗ ಇರುವ ಒಕ್ಕ ಮಿನಿಸ್ಟರ್ ಒಂದು ಕರಪ್ಷನ್ ಕೇಸ್ ಹಿಡಿದಿರುವುದನ್ನು ಹೇಳಲಿ ನೋಡೋಣ. ಪೊಲಿಟಿಕಲ್ ವಿಲ್ ನಿಮ್ಮ ಹತ್ತಿರ ಇಲ್ಲ. You may yourself not be corrupt. I don't accuse you to be corrupt but corruption is there. ಕರಪ್ಷನ್ ಹಿಡಿಯು

ವಂಥ ವಿಲ್ ನಿಮ್ಮ ಹತ್ತಿರ ಇಲ್ಲ. ತಾವು ಅದರ ಬಗ್ಗೆ ಸರಿಮಾಡಿಕೊಳ್ಳದೇ ಹೋದರೆ, ಲೋಕಾಯುಕ್ತ ಮುಖಾಂತರ ಕರಪ್ಷನ್ ರಿಮೂವ್ ಮಾಡುವುದು ಇರಲಿ, ಆ ಕರಪ್ಷನ್ ಕಡಿಮೆ ಮಾಡಲಿಕ್ಕೂ ಕೂಡಾ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಬಡ್ಜೆಟ್ ಸ್ಪೀಚ್‌ನಲ್ಲಿ ಡಿಸ್‌ಇನ್ ವೆಸ್ಟ್‌ಮೆಂಟ್ ಕೈಗಾರಿಕೆಗಳ ನೀತಿಯು ಬಗ್ಗೆ ಮಾತನಾಡುತ್ತಾ ನಾವು ಸರ್ಕಾರದವರು ಹಾಕಿರತಕ್ಕ ಹಣವನ್ನು ವಾಪಸ್ಸು ತೆಗೆದುಕೊಳ್ಳುವುದು, ಮತ್ತೆ ಡಿಸ್‌ಇನ್‌ವೆಸ್‌ಮೆಂಟ್ ಎನ್ನುವ ಪದ ಉಪಯೋಗಿಸಿದ್ದಾರೆ. ಡಿಸ್‌ಇನ್‌ವೆಸ್ಟ್‌ಮೆಂಟ್ ಮಾಡುತ್ತೇವೆ, ಹೌದು.

"Hegde defends Government's move for disinvestment"
ಇದರ ಬಗ್ಗೆ ದಪ್ಪ ಅಕ್ಷರದಲ್ಲಿ ಡೆಕ್ಕನ್‌ಹೆರಾಲ್ಡ್‌ನಲ್ಲಿ ಬಂದಿದೆ. ಇದರಲ್ಲಿ ಏನು ಬರೆದಿದ್ದಾರೆ ಎಂದರೆ

> "He pointed out that Prime Minister Rajiv Gandei had also bеen talking of denationalising public sector undertaking and advited Communist Party members against a dogmatic appoach to Scorialism approach when Soviet and Chinese leaders had changed their outlook on the issue and were allowing US investment in their countries."

I am only sorry for the poor knowledge of the Chief Minister as far as socialist countries are concerned. ಸಮಾಜವಾದಿ ರಾಷ್ಟ್ರಗಳಲ್ಲಿ ಅವೊತ್ತು ಚರ್ಚೆ ಮಾಡಲಿಲ್ಲ, ಇವೊತ್ತು ಹೇಳತ್ತಿದ್ದೇನೆ. ಸೋವಿಯತ್ ರಷ್ಯಾ ಆಗಲಿ, ಚೈನಾದಲ್ಲಿ ಆಗಲಿ, ಅಲ್ಲಿರತಕ್ಕ ವ್ಯವಸ್ಥೆಯೇ ಬೇರೆ ಪ್ರೈವೇಟ್ ಸೆಕ್ಟರ್ ಯಾರೂ ಇಲ್ಲ, ಖಾಸಗಿ ಬಂಡವಾಳಗಾರರೂ ಇತ ಖಾಸಗಿ ಮಾಲೀಕರುಗಳು ಇಲ್ಲ. ಎಲ್ಲಾ ಕೈಗಾರಿಕೆಗಳಲ್ಲೂ ಸಮಾನ ನಿಷ್ಟೆ ಇದೆ. ಅಂಥಾದ್ದರಲ್ಲಿ ಟೆಕ್ನಲಜಿ ಕೊಂಡುಕೊಂಡು ಚೈನಾ ಹಿಂದುಳಿದಿದೆ. ಸೋವಿಯತ್ ರಷ್ಯಾ ಅಮೆರಿಕಾ ಅಷ್ಟು ಮುಂದೆ ಹೋಗಿಲ್ಲ. ಟೆಕ್ನಲಜಿ ಕೊಂಡುಕೊಂಡು ಇವೊತ್ತಿನ ದಿವಸ ಅದರ ಆಧಾರದ ಮೇಲೆ ಕಾರು ಮತ್ತೊಂದು ಬೇರೆ ಮ್ಯಾನುಫ್ಯಾಕ್ಚರ್ ಮಾಡಿದರೆ ಅದು ಡಿಸ್‌ಇನ್‌ವೆಸ್ಟ್‌ಮೆಂಟ್ ಆಗುವುದಿಲ್ಲ. it does not amount to entry of multi-national companies in your countries to hold your economies to ransom. On the other hand it is purchasing of the technology to improve you own economy. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಇವರು ಕಮ್ಯುನಿಸ್ಟ್ ಪಕ್ಷದ ಮೇಲೆ ಗೂಬೆ ಕೂರಿಸಬೇಕೆಂದು ಹೇಳುತ್ತಿದ್ದಾರೆ, ಅದು ಸರಿಯಲ್ಲ.

ಈ ಬಗ್ಗೆ ಅವರೂ ಕೂಡ ಸ್ವಲ್ಪಮಟ್ಟಿಗೆ ಯೋಚನೆ ಮಾಡಬೇಕು. ಇವತ್ತು ಚೈನಾ, ರಷ್ಯಾ, ಇವುಗಳ ಮಾತು ಬೇಡ. ಇಲ್ಲಿ ಡಿಸ್ಟಿಂಗ್ವಿಷ್ ಮಾಡಿದ್ದಾರೆ. ಇಲ್ಲಿ ನನಗೆ ಒಂದು ದುಃಖ ಏನೆಂದರೆ, ಈ ಸರ್ಕಾರದ ಕೈಗಾರಿಕಾ ನೀತಿ ಎಷ್ಟೊಂದು ಮೋಸದ್ದಾಗಿದೆ ಎಂದರೆ ಈಗಾಗಲೇ ಇವರು ಡಿಸ್‌ಇನ್‌ವೆಸ್ಟ್‌ಮೆಂಟ್ ಮಾಡಿದ್ದಾರೆ. ಇನ್ನೂ ಹೆಚ್ಚು ಹೆಚ್ಚು ಮಾಡುತ್ತಿದ್ದಾರೆ. ಇವರ ಪಾಲಿಸಿಯು ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಕೆ. ಎಸ್. ಅಂಡ್ ಡಿ. ಎಲ್. is the standing example of the total bankruptcy of the industrial policy of the Government. ಏಕೆಂದರೆ, ಕೆ.ಎಸ್. ಅಂಡ್ ಡಿ ಎಲ್,ನವರು ಮೈಸೂರು ಸ್ಯಾಂಡಲ್ ಸೋಪನ್ನು ತಯಾರು ಮಾಡುತ್ತಿದ್ದಾರೆ. ಇದು ಬಹಳ ಹೆಸರುವಾಸಿಯಾದಂಥ ಸೋಪು. ಈಗ ಸಾಕಷ್ಟು ಕೆಪ್ಯಾಸಿಟಿ ಇದೆ. ಆದರೆ ಇನ್ನೂ ಹೆಚ್ಚಿನ ಕೆಪ್ಯಾಸಿಟಿ ಬೇಕೆಂದು ೨೬ ಸಹಸ್ರ ಟನ್‌ನ ಕೆಪ್ಯಾಸಿಟಿಯನ್ನು ಮಾಡಿಕೊಂಡರು. ಆಮೇಲೆ ಈ ಕೆಪ್ಯಾಸಿಟಿಯನ್ನು ಯೂಸ್ ಮಾಡುವುದಕ್ಕಾಗುವುದಿಲ್ಲ ಎಂದು ಹಿಂದೂಸ್ಥಾನ್ ಲಿವರ್ಸ್ ಲಿಮಿಟೆಡ್‌ನವರು ತಯಾರು ಮಾಡುತ್ತಿರುವ ಕ್ಲಿಯರ್‌ಸಿಲ್ ಸೋಪನ್ನು ಇವರು ಈಗ ಮಾರಾಟ ಮಾಡುತ್ತಿದ್ದಾರೆ. ಯಾವುದೋ ಪ್ರೈವೇಟ್ ಕಂಪೆನಿಯವರು ತಯಾರುಮಾಡಿದಂಥ ಈ ಸೋಪನ್ನು ಇವರು ತಮ್ಮ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ತಾವು ಬೇಕಾದರೆ ಇದನ್ನು ಪರಿಶೀಲಿಸಿನೋಡಿ. ಈರೀತಿ ಮಾರಾಟ ಮಾಡುವುದಕ್ಕೆ ತಾವು ಏತಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ? ಇದರ ಉದ್ದೇಶ ಏನೆಂಬುದು ನನಗೆ ಸ್ವಲ್ಪಮಟ್ಟಿಗ

ತಿಳಿದುಬಂದಿದೆ. ಈ ಸೋಪಿನ ಮಾರಾಟದಿಂದ ೧ ಟನ್‌ಗೆ ೩೬೦೦ ರೂಪಾಯಿಗಳ ಲಾಭ ಬರುತ್ತದಂತೆ. ನಾನಾದರೂ ಸರ್ಕಾರದವರನ್ನು ಕೇಳುತ್ತೇನೆ, ನಿಮ್ಮಲ್ಲಿ ೨೬ ಸಾವಿರ ಟನ್ ಕೆಪ್ಯಾಸಿಟಿಯನ್ನು ಇಟ್ಟುಕೊಂಡು ವಿಶ್ವವಿಖ್ಯಾತವಾದ ಮೈಸೂರು ಸ್ಯಾಂಡಲ್ ಸೋಪನ್ನು ಫುಲ್ ಕೆಪ್ಯಾಸಿಟಿಯಲ್ಲಿ ಏತಕ್ಕೆ ತಯಾರು ಮಾಡುತ್ತಿಲ್ಲ? ಇದರಲ್ಲಿ ಏನು ತೊಂದರೆಯಾಗಿದೆ? ಈ ಬಗ್ಗೆ ನಮ್ಮ ಯೂನಿಯನ್ ಮತ್ತು ಮೈಖೇಲ್ ಫರ್ನಾಂಡಿಸ್‌ರವರ ಯೂನಿಯನ್‌ನವರು ಇಬ್ಬರೂ ಸೇರಿ ನೀವು ನಿಮ್ಮ ೨೬ ಸಾವಿರ ಟನ್ ಕೆಪ್ಯಾಸಿಟಿ ಏನಿದೆ ಅದನ್ನು ಪೂರ್ತಿಯಾಗಿ ಮಾಡುವುದಕ್ಕೆ ಪ್ರಾರಂಭ ಮಾಡಿ, ನಾವು ಹಗಲೂ, ರಾತ್ರಿ ಕೆಲಸಮಾಡಲು ಸಿದ್ಧವಿದ್ದೇವೆಂದು ಬರೆದುಕೊಟ್ಟಿದ್ದೇವೆ. ಆದರೆ ಈರೀತಿ ನಿಮ್ಮ ಕೆ.ಎಸ್. ಅಂಡ್ ಡಿ.ಎಲ್.ನವರು ಮಾಡುವುದಕ್ಕೆ ತಯಾರಿಲ್ಲ. ಸ್ವಾಮಿ. They accuse them that they are in collusion with the private sector persons like Hindustan Lever, Godrej and Tatas probably. ಇವರು ಏನು ಮಾಡುತ್ತಿದ್ದಾರೆಂದರೆ, ನಮ್ಮ ಸೋಪನ್ನು ತೆಗೆದುಕೊಂಡುಹೋಗಿ ಕೊಟ್ಟುಬಂದರೆ ಅದನ್ನು ಅವರು ಮಾರಾಟ ಮಾಡುವುದಿಲ್ಲ. ಇದು ಸರಿಯಾಗಿಲ್ಲ, ಇದು ಚೆನ್ನಾಗಿಲ್ಲ ಎಂದು ಬಹಳ ದಿವಸಗಳವರೆಗೆ ಸ್ಟಾಕ್ ಇಟ್ಟು ರೀ ಪ್ರೊಸೆಸ್‌ಗೆ ವಾಪಸು ಕಳುಹಿಸಿಕೊಡುತ್ತಾರೆ. ಆದರೆ ಗಾಡ್ರೆಜ್ ಕಂಪನಿಯವರ ಸೋಪನ್ನು ಮಾರಾಟ ಮಾಡುವುದಕ್ಕೆ ಇವರಿಗೆ ಆಗುತ್ತದೆ, ಕ್ಲಿಯರ್‌ಸಿಲ್ ಸೋಪನ್ನು ಮಾರಾಟ ಮಾಡುವುದಕ್ಕೆ ಆಗುತ್ತದೆ, ಇನ್ನೂ ಬೇರೆ ಬೇರೆ ಸೋಪುಗಳನ್ನು ಮಾರಾಟ ಮಾಡುವುದಕ್ಕೆ ಇವರಿಗೆ ಆಗುತ್ತದೆ. ಆದರೆ ನಮ್ಮ ಸೋಪನ್ನು ಮಾತ್ರ ಇವರು ಮಾರಾಟ ಮಾಡುವುದಕ್ಕಾಗುವುದಿಲ್ಲ. They want to sabotage the public sector. What action the Government has taken in regard to MSIL ? They are making a conspiracy ? What action have you taken ? No action. ಇವರು ಏನನ್ನೂ ಮಾಡಿಲ್ಲ. ಇವತ್ತಿನ ದಿವಸ ಬೇರೆಬೇರೆ ಕೈಗಾರಿಕೆಗಳೂ ಇದೇರೀತಿ ಆಗಿವೆ. ಈಗಾಗಲೇ ಡಿಸ್ ಇನ್‌ವೆಸ್ಟ್‌ಮೆಂಟ್ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ೬ ಯೂನಿಟ್ಸ್ ಡಿಸ್ ಇನ್‌ವೆಸ್ಟ್‌ಮೆಂಟ್ ಆಗಿದೆ. ಕರ್ನಾಟಕ ಸ್ಕೂಟರ್ಸ್ ೨೬ ಪರ್ಸೆಂಟ್, ಕೆ.ಎಸ್.ಐ.ಐ.ಡಿ.ಸಿ.ಯವರದ್ದು ಹಣ ಇತ್ತು. ಅದನ್ನು ಬ್ರೂಕ್ ಬಾಂಡ್ ಇಂಡಿಯಾ ಲಿಮಿಟೆಡ್‌ಗೆ ಕೊಟ್ಟರು. Brooke Bond is one of the important national and multi-mational companies. ಇವರಿಗೂ ಹಿಂದೂಸ್ಥಾನ್ ಲಿವರ್ಸ್‌ನವರಿಗೂ ಸಂಬಂಧ ಇದೆ. ಅವರಿಗೆ ಕೊಟ್ಟಿದ್ದಾರೆ. ಮೀನಾಕ್ಷಿ ಸುಂದರಂ ಟೆಕ್ಸ್‌ಟೈಲ್ ಚೆನ್ನಾಗಿ ರನ್ ಆಗುತ್ತಿದೆ. It is a very well running company. ಮೊದಲು ಸ್ವಲ್ಪ ಮಟ್ಟಿನ ತೊಂದರೆಯಾಯಿತು. ದುಡ್ಡು ಬರಲಿ ಎಂದು ಮಾಡಿದರು. ೨೦ ಪರ್ಸೆಂಟ್ ರಿಟರ್ನ್ on the ಈಕ್ವಿಟಿ ಇದೆ. ಈ ಮೀನಾಕ್ಷಿ ಸುಂದರಂ ಟೆಕ್ಸ್‌ಟೈಲ್ಸ್‌ನಲ್ಲಿದ್ದಂಥ ಹಣವನ್ನೂ ಕೂಡ ವಾಪಸು ಕೊಟ್ಟಿದ್ದಾರೆ. ಯಾರೋ ವೆಳ್ಳಿಯಪ್ಪ ಚೆಟ್ಟಿಯಾರ್ ಎನ್ನುವವರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ವಾಪಸ್ಸು ಕೊಟ್ಟಿದ್ದಾರೆ. ಇದು ಏನು ಅನ್ಯಾಯ ಸ್ವಾಮಿ. ಈಗ ಕರ್ನಾಟಕ ಆಕ್ಸಿಜನ್ ಲಿಮಿಟೆಡ್‌ನಲ್ಲೂ ಡಿಸ್ ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ಹೊರಟಿದ್ದಾರೆ. Karnataka oxygen is a running concern and not a losing concern. Mysore Petro-Chemicals Ltd., ಇದು ಚೆನ್ನಾಗಿ ನಡೆಯುತ್ತಿದೆ. ಇಲ್ಲೂ ಕೂಡ ಡಿಸ್ ಇನ್‌ವೆಸ್ಟ್‌ಮೆಂಟ್ ಮಾಡಿ ಕೊಲೂಕ ಎನ್ನುವವರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಈ ೨೬ ಪರ್ಸೆಂಟನ್ನೂ ಅವರಿಗೆ ಕೊಡುತ್ತಿದ್ದಾರೆ. ಪ್ರೈವೇಟ್ ೨೫ ಪರ್ಸೆಂಟ್, ಪಬ್ಲಿಕ್ ೪೯ ಪರ್ಸೆಂಟ್, ಕೆ.ಎಸ್.ಐ.ಐ.ಡಿ.ಸಿ. ೨೫ ಪರ್ಸೆಂಟ್. That means, they have control over the Board.

ತುಂಗಭದ್ರಾ ಫೈಬರ್ ಲಿಮಿಟೆಡ್ ಒಂದೊಂದು ಇಂಡಸ್ಟ್ರಿಯೂ ಬಹಳ ನಷ್ಟದಲ್ಲಿ ನಡೆಯುತ್ತಿದೆ. ಎಲ್ಲ ಇಂಡಸ್ಟ್ರೀಸ್ ಬಗ್ಗೆ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಏತಕ್ಕೆಂದರೆ ಹೆಚ್ಚಿನ ಸಮಯವಿಲ್ಲ. The way in which the Government thinking, they are not for repair. ಇಲ್ಲಿ ಒಂದು ಕಡೆ ಲಾಸ್ ಆಗಿದ್ದರೆ, ಆ ಲಾಸ್ ಏತಕ್ಕೆ ಆಗಿದೆ ಎನ್ನುವುದನ್ನು ಕಂಡುಹಿಡಿದು, ಅದಕ್ಕೆ ಸರಿಯಾದ ಮದ್ದು ಕೊಟ್ಟು ಲಾಸ್ ಆಗದಂತೆ ನೋಡಿಕೊಳ್ಳಬೇಕಾಗಿತ್ತು. ಅದನ್ನು ಮಾಡುವುದನ್ನು ಬಿಟ್ಟು ಅವುಗಳನ್ನು ಮಾರಾಟ ಮಾಡುವುದಕ್ಕೆ ಹೊರಟಿದ್ದೀರಿ. ಈ ರೀತಿ ಮಾರಾಟ ಮಾಡತಕ್ಕಂಥ

ಮನೋಭಾವನೆ ಏನು ಇದೆ ಇದು ಬಹಳ ಕೆಟ್ಟ ಮನೋಭಾವನೆ. ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಉಳಿಸಿಕೊಳ್ಳತಕ್ಕಂಥ ಮನೋಭಾವನೆಯಿಲ್ಲ. ಹನ್ನೊಂದು ಸಾವಿರ ಕೈಗಾರಿಕೆಗಳಲ್ಲಿ ಇವತ್ತಿನ ದಿವಸ ೬ ಸಾವಿರ ಕೈಗಾರಿಕೆಗಳು ಈ ಸ್ಥಿತಿಯಲ್ಲಿವೆ. This will lead to more unemployment more concentration of wealth in a few people's hands, more closure of factories and more crises. ಆದ್ದರಿಂದ ನಾನು ಹೇಳುವುದೇನೆಂದರೆ ಮಾನ್ಯ ಅಧ್ಯಕ್ಷರೇ ನಾನು ಇದನ್ನೆಲ್ಲ ಅನಲೈಸ್ ಮಾಡಿದಾಗ ಏನು ಗೊತ್ತಾಯಿತೆಂದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಬ್ರಾಂದಿ, ವಿಸ್ಕಿ ಮಾರಾಟ ಮಾಡತಕ್ಕಂಥ ಖೋಡೆ ಮತ್ತು ಯುನೈಟೆಡ್ ಬ್ರುವರಿಸ್ ಅಂಥವರ ಮೇಲೆ ಬಹಳ ವಿಶ್ವಾಸ, ಪ್ರೇಮ ಪ್ರೀತಿ ಇದೆ ಎಂದು ತಿಳಿಯುತ್ತದೆ. ಇವರು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೊರಟಿರುವಂತೆ ಕಾಣುತ್ತದೆ. ಏತಕ್ಕೆ ಅವರಿಗೆ ಅನುಕೂಲ ಮಾಡಿಕೊಡಬೇಕು? ಅವರಿಗೆ ದುಡ್ಡು ಇಲ್ಲವೇ? ಕೊಳ್ಳೇಗಾಲದಲ್ಲಿರತಕ್ಕಂಥ ಸಕ್ಕರೆ ಕಾರ್ಖಾನೆಯನ್ನು ಏತಕ್ಕೆ ಅವರಿಗೆ ಕೊಡುವುದಕ್ಕೆ ಹೊರಟಿದ್ದೀರಿ? ಖೋಡೆ ಕಂಪನಿಯವರಿಗೆ ಏತಕ್ಕೆ ಕೊಡಬೇಕು. ಏನು ರೀಸನ್ಸ್? ರೀಸನ್ಸ್ ಕೇಳಿದರೆ ಆ ತಾಲ್ಲೂಕಿನಲ್ಲಿ ಶುಗರ್ ಕೇನ್ ಸಪ್ಲೆ ಸರಿಯಾಗಿಲ್ಲ. ಶುಗರ್ ಕೇನ್ ಸಿಗುತ್ತಿಲ್ಲವೆಂದು ಹೇಳುತ್ತೀರಿ. ಇವರಿಗೆ ಕೊಟ್ಟರೆ ರೈತರು ಕಬ್ಬನ್ನು ಬೆಳೆದು ಬಿಡುತ್ತಾರೆಯೇ? ಇದರಿಂದ ಏನು ಅರ್ಥವಾಗುತ್ತದೆಂದರೆ ಪ್ರವೈಟ್ ಸೆಕ್ಟರ್‌ವರಿಗೆ ಅನುಕೂಲ ಮಾಡಿಕೊಡಬೇಕು, ಅವರು ಕೆ.ಎಸ್.ಐ.ಡಿ.ಸಿ.ಯಿಂದ ಹಣವನ್ನು ಪಡೆದು ದುಡ್ಡು ಮಾಡಿಕೊಳ್ಳಬೇಕು ಇದೇ ನಿಮ್ಮ ಮೂಲ ಉದ್ದೇಶವಾಗಿರಬೇಕು. ಇದಕ್ಕೆ ನೀವು ಅನುಕೂಲ ಮಾಡಿಕೊಡುತ್ತಿದ್ದೀರಿ. ಕೊಳ್ಳೇಗಾಲದಲ್ಲಿ ನಡೆಯುತ್ತಿರತಕ್ಕಂಥ ಶುಗರ್ ಫ್ಯಾಕ್ಟರಿ, ಗೌರಿಬಿದನೂರು ಶುಗರ್ ಫ್ಯಾಕ್ಟರಿ ಇದನ್ನು ಕೂಡ ಕೊಯಮತ್ತೂರಿನ ಶಕ್ತಿ ಗ್ರೂಪ್ ಕಂಪನಿಯವರಿಗೆ ಕೊಡಬೇಕೆಂದು ಹೊರಟಿದ್ದೀರಿ. ಅದೇನು ಕೊಟ್ಟಿಬಿಟ್ಟಿದ್ದೀರೋ ಏನೋ ಗೊತ್ತಿಲ್ಲ. ಲೇಟೆಸ್ಟ್ ಪೊಜಿಷನ್ ನನಗೆ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ.—ಅದನ್ನು ಯಾರೂ ಕೊಳ್ಳುವುದಕ್ಕೆ ಬರುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರಾದ ಬೈರೆಗೌಡರಿಗೆ ವಿಷಯ ಗೊತ್ತಿದೆ ಎಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ.—ಅಲ್ಲಿ ಕಬ್ಬು ಬೆಳೆಯುತ್ತಿಲ್ಲ ವರ್ಷೇ ವರ್ಷೇ ನಷ್ಟವಾಗುತ್ತಿದೆ. ಸುಮಾರು ನಾಲ್ಕು ಕೋಟಿ ರೂಪಾಯಿಗಳವರೆಗೆ ನಷ್ಟವಾಗಿದೆ. ಆ ತಾಲ್ಲೂಕಿನ ಹಳ್ಳಿ ಹಳ್ಳಿಗೂ ಹೋಗದೆ ಇದ್ದರೂ ತಾಲ್ಲೂಕಿನ ಮಾಹಿತಿ ನನಗೆ ಇದೆ. ಸಾಕಷ್ಟು ಕಬ್ಬು ಬೆಳೆಯದಿರುವುದರಿಂದ ಇದು ನಷ್ಟದಲ್ಲಿ ನಡೆಯುತ್ತಿದೆ ಈ ಕಾರಣಕ್ಕೋಸ್ಕರವಾಗಿ ಶುಗರ್ ಫ್ಯಾಕ್ಟರಿಗಳನ್ನು ಮಾರಾಟ ಮಾಡುವುದಕ್ಕೆ ೨-೩ ಸಲ ಟೆಂಡರನ್ನು ಕರೆದಿದ್ದರೂ ಯಾರು ಕೊಂಡುಕೊಳ್ಳುವುದಕ್ಕೆ ಬರುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಹಾಗಿದ್ದರೆ ಏತಕ್ಕೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದಿರಿ?

ಶ್ರೀ ಸಿ. ಬೈರೇಗೌಡ.—೨೦-೨೫ ಸಾವಿರ ಬೋರ್ ವೆಲ್‌ಗಳನ್ನು ತೆಗೆಸಿದ್ದರೂ ಕೂಡ ಸಾಕಷ್ಟು ಕಬ್ಬು ದೊರೆಯುತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕಬ್ಬನ್ನು ಬೆಳೆದು ಸಕ್ಕರೆ ಕಾರ್ಖಾನೆಯನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡಬೇಕು.

ಶ್ರೀ ಸಿ. ಬೈರೇಗೌಡ.—ಬೋರ್‌ವೆಲ್‌ಗಳನ್ನು ತೆಗೆದಾಗ ಸಾವಿರ ಗ್ಯಾಲನ್ ನೀರು ಬರುತ್ತಿದ್ದುದು ಈಗ ಇನ್ನೂರು ಗ್ಯಾಲನ್ ನೀರು ಬರುತ್ತಿಲ್ಲ. ಇದು ನನಗೆ ಗೊತ್ತಿರತಕ್ಕಂಥ ವಿಚಾರ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಲ್ಲಿ ಕುಳಿತು ಸತ್ಯವನ್ನು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಎಲ್ಲಿ ಕುಳಿತರೂ ಕೂಡ ಸತ್ಯವನ್ನೇ ಹೇಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಯು ಬಿ ಅವರಿಗೆ ಈ ಸಕ್ಕರೆ ಕಾರ್ಖಾನೆಯನ್ನು ಕೊಡುವುದಕ್ಕೆ ಹೊರಟಿದ್ದೀರಿ. ಇಲ್ಲ ಕೊಡುವುದಿಲ್ಲವೆಂದು ಹೇಳಿ ಅದನ್ನು ಒಪ್ಪಿಕೊಳ್ಳುತ್ತೇನೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಿಮ್ಮ ಧೋರಣೆ ಸರಿಯಿಲ್ಲ. ನಾಲ್ಕು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ ಒಂದೇ ಒಂದು ಕೋಟಿ ರೂಪಾಯಿಗಳ ಮಾತ್ರ ಬರುತ್ತಿದೆ ಎಂದು ಮಾನ್ಯ ಮುಖ

ಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಹೇಳುತ್ತಿದ್ದಾರೆ. It is a travesty of truth. ಏಕೆಂದರೆ ಪಬ್ಲಿಕ್ ಸೆಕ್ಟರ್ ಎಂಟರ್‌ಪ್ರೈಸಸ್ ಬಹಳಷ್ಟು ನಷ್ಟದಲ್ಲಿವೆ. ಅವರ ಇನ್‌ವೆಸ್ಟ್‌ಮೆಂಟ್ ಒಂದೊಂದು ಕಂಪನಿಯದನ್ನು ತೆಗೆದು ನೋಡಿ. ಅವರು ಲೆಕ್ಕಾಚಾರ ಹಾಕಿಕೊಟ್ಟಿರುವುದು ತಪ್ಪು ಇದೆ. ಅಧಿಕಾರಿಗಳು ಮುಖ್ಯ ಮಂತ್ರಿಗಳನ್ನು ಮಿಸ್ ಗೈಡ್ ಮಾಡಿದ್ದಾರೆ. ಉದಾಹರಣೆಗೆ ಎ.ಐ.ಎಸ್.ಎಲ್. ಅನ್ನು ಸೇರಿಸಿದ್ದಾರೆ. ಅದು ಸಿಕ್ಕಾಬಟ್ಟೆ ಲಾಸ್ ಆಗುತ್ತಿದೆ. ಗೇಯಿನ್ ಆಗುತ್ತಿರುವ ಫ್ಯಾಕ್ಟರಿ ಒಂದು ಇದೆ. ಎಲ್ಲವನ್ನು ಒಟ್ಟಿಗೆ ಸೇರಿಸಿ ಒಂದು ಪರ್ಸೆಂಟ್ ಲಾಭ ಬರುತ್ತಿದೆ ಎಂದು ಹೇಳಿದ್ದಾರೆ. ಅದು ಅಲ್ಲ. ಒಂದೊಂದನ್ನು ಅನಲೈಸ್ ಮಾಡಿದರೆ ಪೊಜಿಷನ್‌ನಲ್ಲಿ ಬಹಳ ವ್ಯತ್ಯಾಸ ಇದೆ ನಾನು ಪೇಪರ್ ಕಟಿಂಗ್ ಇಟ್ಟಿದ್ದೆ ಅದರಲ್ಲಿ ಒಂದೊಂದು ಕೈಗಾರಿಕೆಯ ಬಗ್ಗೆಯೂ ಹೇಳಿದ್ದಾರೆ It is not so bad as all that ಎಂದು ಹೇಳಿದ್ದಾರೆ. ಮತ್ತೆ ಒಂದು ಸೆಮಿನಾರ್ ಮಾಡಿದ್ದಾರೆ "Seminar on Management problem of Karnataka State Public Sector Enterprises" Key-note address by Sro Md. Moienudin, an Hon. Member of this House. ಅವರೂ ಕೂಡ ಇದರಲ್ಲಿ ಹೇಳಿದ್ದಾರೆ. ಅವರು ಏನು ಹೇಳುತ್ತಾರೆಂದರೆ, ಇದೇ ರಾಗದಲ್ಲಿ ಹೇಳಿದ್ದಾರೆ. ಏಕೆಂದರೆ ರಾಗ ಎಲ್ಲಾ ಒಂದೇ ಅವರು ನಿಮ್ಮ ಪಕ್ಷಕ್ಕೆ ಸೇರಿದವರಾದ್ದರಿಂದ ಲಾಸ್‌ನಲ್ಲಿ ರನ್ ಆಗುತ್ತಿದೆ ಎಂದು ಹೇಳಿದ್ದಾರೆ. ಇದರ ಬಗೆ ಸ್ಪಷ್ಟವಾಗಿ ಏನು ಮಾಡಬೇಕೆಂದು ಹೇಳದೆ ಇಂಡಿಕೇಷನ್ ಕೊಟ್ಟು ಹಾಗೆ ಪ್ರೈವೇಟ್‌ನವರಿಗೆ ಕೊಡ ಬಹುದೆಂದು ಹೇಳಿದ್ದಾರೆ. ಈ ರೀತಿ ಅಭಿಪ್ರಾಯಪಟ್ಟು ಸೆಮಿನಾರ್ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದು ಯಾವ ಪುರುಷಾರ್ಥಕ್ಕೆ ? This is not the concept which Nebru had. This is not the concept which the other people in the country had. What Rajiv Gandhi says there, you are also doing here. ನಿಮಗೂ ಅವರಿಗೂ ಏನು ವ್ಯತ್ಯಾಸ ? ಅವರು ಪ್ರೈವೇಟ್‌ನವರಿಗೆ ಕೊಡು ಬೇಕೆನ್ನುತ್ತಾರೆ. ನೀವು ಕೊಡುವುದಕ್ಕೆ ಹೊರಟಿದ್ದೀರಿ. ಆದನ್ನಾದರೂ ಸ್ವಲ್ಪ ಬದಲಾವಣೆ ಮಾಡಿ. ಜನವರಿಯಲ್ಲಿ 20 ಲಕ್ಷ ಮಂದಿ ಕಾರ್ಮಿಕರು ಮುಷ್ಕರ ನಡೆಸಿದ ಮೇಲೆ ಎಂ.ವಿ. ತಿವಾರಿಯವರು ಮತ್ತು ರಾಜೀವ್ ಗಾಂಧಿಯವರು ಬೇರೆ ಬೇರೆ ರೀತಿ ಮಾತನಾಡಿದ್ದಾರೆ. At least he has changed Imust say honestly. They have said 'We do not want to finish the public sector. It is not our intention. We want to see that it is improved.' ಅಂಥ ಹೇಳಿದ್ದಾರೆ. ಒಂದೊಂದು ಕೈಗಾರಿಕೆಯನ್ನು ಯಾವ ರೀತಿ ನೋಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಆ ರೀತಿ ನೀವು ಮಾಡಿ. ಅದನ್ನು ಹೇಳೋಣವೆಂದರೆ ಪಟೇಲರು ಇಲ್ಲ, ರಾಚಯ್ಯನವರು ಎದ್ದು ಹೋದರು, ಇನ್ನು ಯಾರಿಗೆ ಹೇಳಬೇಕೋ ಗೊತ್ತಿಲ್ಲ. ಮಾಡಬೇಕಾಗಿರುವ ಕೆಲಸಗಳನ್ನು ಒಂದೊಂದಾಗಿ ಮಾಡಿ. ನನ್ನ ಅಭಿಪ್ರಾಯದಲ್ಲಿ there is no professional management. There are no committed people. ನೀವು ಬೇಕಾದರೆ ತೆಗೆದು ನೋಡಿ. ನಮ್ಮ ರಾಜ್ಯದಲ್ಲಿ ಎಲ್ಲಾ ಐ.ಎ.ಎಸ್. ಅಧಿಕಾರಿಗಳೇ ಇರುವುದು. Professional management and committed people are more important, not IAS Officers. One person is the Chairman of 5 Companies, 10 Companies. The same person is rotating. Are they omnipotent ? Do they knew everything about the industry ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ನೀತಿ ಏನೆಂದರೆ, ನೆಗಡಿಯಾದರೆ ಮೂಗು ಕೊಯ್ದುಕೊಳ್ಳಬೇಕೆಂದು. ಅದಕ್ಕೆ ಔಷಧಿ ಹುಡುಕುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಮೂಗು ಕೊಯ್ದುಕೊಳ್ಳುವುದಕ್ಕೆ ನಾವು ಬಿಡಕೂಡದು. ಮೂಗು ಕೊಯ್ಯುವುದಕ್ಕೆ ಹೋದರೆ ಮೂಗು ಕೊಯ್ಯಬೇಡಿ ಎಂದು ಹೇಳುತ್ತೇವೆ. ಬರೀ ಐ.ಎ.ಎಸ್. ಅಧಿಕಾರಿಗಳನ್ನು ಕರೆದುಕೊಂಡು ಮಾಡುತ್ತೇವೆಂದರೆ ತಪ್ಪು. ಪ್ರತಿಯೊಂದು ಕಾರ್ಖಾನೆಯಲ್ಲೂ Financial Managers ಇರುವುದಕ್ಕೆ ಅವಕಾಶ ಮಾಡಿಕೊಡಿ There have been persons who know about the finance.

ಎಂ.ಎ.ಎಲ್. ಕೈಗಾ. ಕಂಪ್ನೀ ಅನೇಕ ಕಡೆಗಳಲ್ಲಿ ಇಲ್ಲ. ಸೆಪರೇಟ್ ಮಾರ್ಕೆಟಿಂಗ್ ಆರ್ಗನೈಸೇಷನ್ ಇರಬೇಕೆಂದು ಸೂಚನೆ ಇದೆ. ಒಂದೇ ತರಹದ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳಿಗೆ ಒಂದು ಮಾರ್ಕೆಟಿಂಗ್ ಕಂಪನಿ ಮಾಡಿದರೆ ಕೋಆರ್ಡಿನೇಟ್ ಮಾಡಿ ಹೆಚ್ಚಿನ ರೀತಿಯಲ್ಲಿ ಉತ್ಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. Then you can make the public enterprise from the red to the green. ಖಾಯಿಲೆ ಬರುವುದಕ್ಕೆ ಮುಂಚೆ ರೆಮಿಡಿಯಲ್ ಮೆಷರ್ಸ್ ತೆಗೆದುಕೊಳ್ಳಬೇಕು. ಅದನ್ನು ನೀವು ಮಾಡುವುದಿಲ್ಲ. ಖಾಯಿಲೆ ಬಂದು ಸತ್ತುಹೋಗುತ್ತಾನೆ. ಅಂದಾಗ ಆಕ್ಸಿಜನ್ ಕೊಡುತ್ತಾರೆ. ಅದು ಕೂಡ ಪೂರ್ತಿ ಆಕ್ಸಿಜನ್ ಕೊಡುವುದಿಲ್ಲ. ಒಂದು ಕೋಟಿ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲ್ ಕೊಡಿ ಎಂದರೆ, ಈಗ ಹತ್ತು ಲಕ್ಷ ತೆಗೆದುಕೊಳ್ಳಿ ೬ ತಿಂಗಳು ಬಿಟ್ಟು ೨೦ ಲಕ್ಷ ತೆಗೆದುಕೊಳ್ಳಿ. ಒಂದು ವರ್ಷದ ನಂತರ ಮತ್ತೆ ೨೦ ಲಕ್ಷ ಕೊಡುತ್ತೇವೆಂದು ಹೇಳುತ್ತಾರೆ. ಒಂದು ಕೋಟಿ ರೂಪಾಯಿಗಳನ್ನು ಈಗಲೇ ಕೊಟ್ಟರೆ ರವೈವ್ ಮಾಡಿ, ಪ್ಲಾನ್ ಮಾಡಿ, ಪ್ರಾಜೆಕ್ಟ್ ಮಾಡಿ ಮುಂದೆ ತೆಗೆದುಕೊಂಡು ಹೋಗಬಹುದು. ಬರೀ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟರೆ ವ್ಯರ್ಥವಾಗುತ್ತದೆ.

ಮುಕ್ಕಾಲು ಭಾಗ ಕೈಗಾರಿಕೆಗಳಲ್ಲಿ ಇರುವ ಧೋರಣೆಯಿಂದ ಈ ತರಹ ಆಗುತ್ತಿದೆ. ಅದನ್ನು ಸರಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ತಕ್ಷಣ ಎಷ್ಟು ಬೇಕೋ ಅಷ್ಟು ಹಣ ಕೊಟ್ಟು ಕೈಗಾರಿಕೆಗಳನ್ನು ಮುಂದುವರಿಸುವ ಜವಾಬ್ದಾರಿ ಇದೆ. ಅದನ್ನು ಮಾಡಬೇಕು. ಕಂಪೆನಿ ಬ್ಯಾಲನ್ಸ್ ಷೀಟ್ ಏನಾಗುತ್ತಿದೆ ಎಂಬುದು ತಮಗೆ ಗೊತ್ತು. ಏಕೆಂದರೆ ತಾವು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿ ಛೇರ್ಮನ್ ಆಗಿದ್ದಿರಿ. ತಾವು ಕೊಟ್ಟಿರುವ ರಿಪೋರ್ಟ್ ಓದಿದ್ದೇನೆ. ವಿಚಾರಪೂರಿತವಾದ ಅನೇಕ ವಿಚಾರಗಳನ್ನು ಅವರಲ್ಲಿ ಹೇಳಿದ್ದೀರಿ. ಒಂದು ಮಾತು ಏನು ಹೇಳಿದ್ದೀರಿ ಎಂದರೆ "MD must be made directly responsible for preparing the balance-sheet every month in the company and see that it is placed before the Board of Directors." ಆಗ ತಿಂಗಳು, ತಿಂಗಳು ಏನಾಗುತ್ತಿದೆ ಎಂಬುದು ಗೊತ್ತಾಗುತ್ತದೆ ಎಂದು ಹೇಳಿದ್ದೀರಿ. ಆ ಅಭಿಪ್ರಾಯ ಕೊಟ್ಟಿದ್ದೀರಿ, ಅದನ್ನು ಎಷ್ಟು ಕಂಪನಿಗಳು ಮಾಡುತ್ತಿವೆ ? ಮಾಡುತ್ತಿದ್ದಾರೆಯೋ ಇಲ್ಲವೇ ಎಂಬುದನ್ನು ಕಂಡುಹಿಡಿದಿದ್ದಾರೆಯೋ ? ಅಕ್ಕರೆಯಾದರೂ ಇದೆಯೆ ಅದರ ಬಗ್ಗೆ ? ಮಾನ್ಯ ಜೆ. ಎಚ್. ಪಟೇಲರು ಅದರ ಕಡೆ ಗಮನ ಕೊಟ್ಟಿದ್ದಾರೆಯೋ ಅವರು ಬೆಳಗ್ಗೆ ಏಳುವುದೇ ೮ ಗಂಟೆಯಾದರೆ, ನೋಡುವುದೇ ನಮ್ಮನ್ನು ೧೨ ಗಂಟೆಯಾದರೆ ೬ ಗಂಟೆಗೆ ಆಫೀಸ್ ಮುಗಿದರೆ ಏನಾಗುತ್ತದೆ? ಪಬ್ಲಿಕ್ ಸೆಕ್ಟರ್ ಸರ್ಕಾರಿ ಕಂಪನಿಗಳ ಪರಿಸ್ಥಿತಿ ಏನಾಗುತ್ತದೆ ? ಇದರ ಕಡೆ ಮಂತ್ರಿಗಳಿಗೆ ಯೋಚನೆಯೇ ಇಲ್ಲ. Particularly the Industries Minister, I should say, is the most incompetent Minister. ಅವರು ಕೈಗಾರಿಕೆ ಖಾತೆಗೆ ಲಾಯಕ್ಕಿಲ್ಲ. ದಯುವಿಟ್ಟು ಅವರನ್ನು ಕಿತ್ತುಹಾಕಿ ಬೇರೆಯವರನ್ನು ಮಾಡಿ. ಅವರಿಗೆ ಫುಲ್ ಯುಟಿಲೈಸೇಷನ್ ಆಫ್ ಕೆಪಾಸಿಟಿ ಇಲ್ಲ. ಅದನ್ನು ಮಾಡಬಹುದು. ಎಂ.ಇ.ಐ. ಕಾರ್ಖಾನೆ ಒಳ್ಳೆಯ ಕಾರ್ಖಾನೆ. ನಾನು ಅದರಲ್ಲಿದ್ದೇನೆ. ಅದಕ್ಕೆ ೨೫ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಆ ೨೫ ಲಕ್ಷ ರೂಪಾಯಿಗಳಿಂದ ಆ ಕಾರ್ಖಾನೆಯನ್ನು ಉಳಿಸುವುದಕ್ಕಾಗುತ್ತದೆಯೆ? ಆಕ್ಚುಯಲ್ಲಾಗಿ ಒಂದು ಕೋಟಿ ರೂಪಾಯಿ ಬೇಕು. ಅದನ್ನು ತಕ್ಷಣ ಕೊಡಿ. ಅದನ್ನು ಕೊಟ್ಟು ಐದು ವರ್ಷಗಳ ಕಾಲ ಕಮಿಟೆಡ್ ಪರ್ಸನ್ಸ್‌ಗೆ ಜವಾಬ್ದಾರಿ ಕೊಡಿ. ಸರಿಯಾಗಿ ನಡೆಸಬೇಕು, ಇಲ್ಲದೇಹೋದರೆ ಮನೆಗೆ ಕಳುಹಿಸುತ್ತೇವೆ, ಡಿಸ್‌ಮಿಸ್ ಮಾಡುತ್ತೇವೆ ಎಂದು ಹೇಳಿದರೆ ಏತಕ್ಕೆ ಆಗುವುದಿಲ್ಲ. ನಾನು ವರ್ಕರ್ಸ್ ಸಪೋರ್ಟ್ ಕೊಡುತ್ತೇನೆ. ಯಾವ ಕಂಡೀಷನ್ ಇಲ್ಲದೆ ಕೊಡುತ್ತೇನೆ. ಆ ರೀತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತ್ರ ಕೈಗಾರಿಕೆಗಳ ಬಗ್ಗೆ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, dis investment policy ಇದನ್ನು ಕೈಬಿಡಿ. ಇಲ್ಲದೇ ಹೋದರೆ ತಪ್ಪಾಗುತ್ತದೆ. ದೇಶಕ್ಕೂ ಹಾನಿ, ನಿಮಗೂ ಹಾನಿ. ಆದ್ದರಿಂದ ಇದನ್ನು ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಟ್ಯಾಕ್ಸೇಷನ್ ಪ್ರೊಪೋಸಲ್ಸ್ ಅನೇಕ ಮಾಡಿದ್ದೀರಿ. ಟ್ಯಾಕ್ಸೇಷನ್ ಬಿಲ್ ಬಂದಾಗ ಅದರ ಬಗ್ಗೆ ಮಾತನಾಡುತ್ತೇನೆ, ಈಗ ಹೆಚ್ಚು ಹೇಳುವುದಿಲ್ಲ. ಆದರೂ ಎರಡು ಮೂರು ವಿಷಯಗಳನ್ನು ಮಾತ್ರ ತಮ್ಮನ್ನು ಕೇಳಿಕೊಳ್ಳುತ್ತೇನೆ. ನೀವೇ ಯಾವುದರ ಬಗ್ಗೆ ಕಮಿಟ್ ಮಾಡಿಕೊಂಡಿದ್ದೀರೋ ಅದನ್ನೇ ಮತ್ತೆ ತರುವುದು ಸರಿಯಾದುದಲ್ಲ. ಉದಾಹರಣೆಗೆ ಪ್ರೊಫೆಷನಲ್ ಟ್ಯಾಕ್ಸ್. ಮೊದಲು ೧,೨೦೦ ರೂಪಾಯಿ ಬೇಸಿಕ್

ಎಂದು ಇತ್ತು. ಅದನ್ನು ಈಗ ಎರಡು ಸಾವಿರ ರೂಪಾಯಿಗಳ ಗ್ರಾಸ್ ಸ್ಯಾಲರಿ ಎಂದು ಮಾಡಿದ್ದೀರಿ. ಗ್ರಾಸ್ ಎಂದರೆ ಬೇಸಿಕ್ ಪೇ, ಡಿಯರ್‌ನೆಸ್ ಅಲೋಯನ್ಸ್, ಹೌಸ್ ರೆಂಟ್ ಅಲೋಯೆನ್ಸ್, ಸಿಟಿ ಕಾಂಪೆನ್‌ಸೆಟರಿ ಅಲೊಯೆನ್ಸ್, ಇನ್‌ಸೆಂಟೀವ್ ಬೋನಸ್, ಓವರ್‌ಟೈಂ ಅಲೋಯನ್ಸ್ ಎಲ್ಲಾ ಸೇರಿಸಿದ್ದಾರೆ. ಇದರಿಂದ ಹೆಚ್ಚು ಜನ ಇದನ್ನು ಕೊಡುವುದಕ್ಕೆ ಅವಕಾಶವಾಗಿದೆ. ಹೆಚ್ಚು ಜನರ ಮೇಲೆ ತೆರಿಗೆ ಹೊರಿಸಿದ್ದೀರಿ. ಜನತಾ ಪಾರ್ಟಿ ಪ್ರಣಾಳಿಕೆಯಲ್ಲಿ ಪ್ರೊಫೆಷನಲ್ ಟ್ಯಾಕ್ಸ್ ಅವೈಜ್ಞಾನಿಕ ವಾದುದು, ಇದು ಬೇರೆ ರಾಜ್ಯಗಳಲ್ಲಿಲ್ಲ, ಆದ್ದರಿಂದ ಇದನ್ನು ತೆಗೆದುಹಾಕುತ್ತೇವೆ ಎಂದು ಹೇಳಿದ್ದೀರಿ. ಪ್ರತಿಯೊಂದು ಸಾರಿ ಈ ಪ್ರಶ್ನೆ ಈ ಮನೆಯಲ್ಲೂ ಬರುತ್ತಿದೆ. ಇದರಿಂದ ಆರೂವರೆ ಕೋಟಿ ರೂಪಾಯಿಗಳ ಆದಾಯ ಬರುತ್ತದೆಂದು ಹೇಳಿಕೊಂಡಿದ್ದೀರಿ. ಇದಕ್ಕೋಸ್ಕರ ಜನರನ್ನು ಏತಕ್ಕೆ ವಿರೋಧ ಕಟ್ಟಿಕೊಳ್ಳುತ್ತೀರಿ ? ಅದರಲ್ಲೂ Middle Class people, working class people in the cities have voted for you and they are going to vote for you. If you want their vote, please scrap it. If you do not want their vote you carry on in your own manner. ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇದೇ ಸಂದರ್ಭದಲ್ಲಿ ಅವರ ಎರಡು ಮೂರು ಬೇಡಿಕೆಗಳಿವೆ. ಅದರ ಬಗ್ಗೆ ತಾವು ಯೋಚನೆ ಮಾಡಬೇಕು. ಬೇರೆ ಟ್ಯಾಕ್ಸ್ ಬಗ್ಗೆ ಲಿಸ್ಟ್‌ನಲ್ಲಿ ಕೊಟ್ಟಿದ್ದೀರಿ. ಅದೆಲ್ಲವನ್ನೂ ಸಹ ನಾನು ಓದುವುದಕ್ಕೆ ಹೋಗುವುದಿಲ್ಲ. ಇಟು ಮಾತ್ರ ಹೇಳುತ್ತೇನೆ.

೧೧-೦೦ ಎ. ಎಂ.

ಅದರಲ್ಲಿ ತಮ್ಮ ಬಜೆಟ್‌ನ ಪೇಜ್ ೫೪ರಲ್ಲಿ ಸೂಚಿಸಿರುವಂತೆ, ಐಟಂ ನಂ. ೧, ೨, ೪, ೭, ೯, ೧೦,೧೫, ೧೬, ೧೮, ಹಾಗೂ ೨೧ ಈ ಐಟಂಗಳ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ಇದೆಲ್ಲಾ ಸಾಮಾನ್ಯ ಜನತೆ ಉಪಯೋಗಿಸುವಂತಹ ವಸ್ತುಗಳು. ಸಾಮಾನ್ಯ ಜನತೆಗೆ ಸಂಬಂಧಪಟ್ಟಂತಹ ವಸ್ತುಗಳು. ಆದ್ದರಿಂದ ಇಂತಹ ವಸ್ತುಗಳ ಮೇಲೆ ತೆರಿಗೆಯನ್ನು ಜಾಸ್ತಿ ಮಾಡುವುದರಿಂದ ಅವರಿಗೆ ಹೆಚ್ಚು ಹೊರೆಯಾಗುತ್ತದೆ, ಜೊತೆಗೆ ಹಣದುಬ್ಬರ ಕೂಡ ಜಾಸ್ತಿಯಾಗುತ್ತದೆ ಈಗ ಇರುವಷ್ಟೇ ಇದ್ದು ಕೊಂಡು ಹೋಗಲಿ, ಸಾಮಾನ್ಯ ಜನತೆ ಉಪಯೋಗಿಸುವಂತಹ ಕಾಫೀ ಟೀ ಟಾಯ್‌ಲೆಟ್ ಸೋಪು, ಇವುಗಳ ವಿವರಗಳನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಅದರ ವಿವರ ಬಂದಾಗ ಮಾತನಾಡುತ್ತೇನೆ. ಮತ್ತೆ ಕೆಲವಕ್ಕೆ ತೆರಿಗೆಯಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದೀರಿ. reduction in tax need not be done in the case of motor vehicle chasis...ಮೋಟಾರು ವೆಹಿಕಲ್ ಚಾಸಿಸ್‌ಗಳ ಮೇಲೆ ೪ ಪರ್ಸೆಂಟ್ ಇದ್ದುದನ್ನು ೩ ಪರ್ಸೆಂಟ್‌ಗೆ ಏಕೆ ಇಳಿಸಬೇಕು ? ಮೋಟಾರು ವೆಹಿಕಲ್‌ನ್ನು ಎಷ್ಟು ಜನ ಕೊಂಡುಕೊಳ್ಳುತ್ತಾರೆ ? ಇದರಿಂದ ರಿಡಕ್ಷನ್ ಮಾಡಿದ್ದುದು ಸರಿಯಾದುದಲ್ಲ. ನಂತರ ಎಗ್ಸಂಶನ್ ಕೊಟ್ಟಿರುವ ಬಗ್ಗೆ ಹೇಳುವುದಾದರೆ, ತೆರಿಗೆ ಹಾಕಿರುವ ಐಟಂ ನಂ. ೧೮-ಲಾಟರಿ ಟಿಕೆಟ್. ಲಾಟರಿ ಟಿಕೆಟ್‌ಮೇಲೆ ತೆರಿಗೆಯನ್ನು ಕೊಟ್ಟರೆ ತಪ್ಪು ಏನು? ಸ್ಟೇಜ್ ಕಾರೇಜಸ್ ಬಗ್ಗೆ ಟ್ಯಾಕ್ಸೇಸನ್ ಮಾಡಿದ್ದೀರಿ. ಎಲ್ಲದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವಿಮ್ನ ಬಸ್ ೧೨೧ ಸೀಟರ್ಸ್ ಇರತಕ್ಕಂತಹದ್ದು. ಆಲ್ ಇಂಡಿಯಾ ಟೂರಿಸಂ ಕ್ಯಾರೇಜಸ್ ನವರು ಸ್ಟ್ರೈಕ್ ಮಾಡಿಕೊಂಡು ಬರುತ್ತಿದ್ದಾರೆ. ಅವರಿಗೆ ಮೊದಲು Rs. 500/- per seat per quarter ಇದ್ದುದ್ದನ್ನು Rs. 2,500/- per seat per quarter......ಎಂದು ಮಾಡಿದ್ದೀರಿ. ಅವರೆಲ್ಲಾ ಶ್ರೀಮಂತರು ಕೊಡುವುದಕ್ಕೆ ಆಗುತ್ತದೆ, ನೀವು ಅವರ ಬಗ್ಗೆ ಏಕೆ ಸಪೋರ್ಟ್ ಮಾಡು ತ್ತಿದ್ದೀರೆಂದು ಮಾನ್ಯ ರಾಚಯ್ಯನವರು ಹೇಳಬಹುದು. ಆ ದೃಷ್ಟಿಯಿಂದ ನಾನು ನೋಡುತ್ತಿಲ್ಲ. ಪ್ರವಾಸೋದ್ಯಮ ಈಗ ರಾಷ್ಟ್ರೀಯ ನೀತಿಯಾಗಿದೆ. ನಮ್ಮ ರಾಜ್ಯದಲ್ಲೂ ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕು, ಪ್ರವಾಸಕ್ಕೆ ಹೋಗುವಂತಹವರು ಶ್ರೀಮಂತರು ಇದ್ದರೆ ಅವರು ಏರೋಪ್ಲೇನ್‌ನಲ್ಲಿ ಹೋಗುತ್ತಾರೆ. ಅವರಿಗೇನೂ ತೊಂದರೆ ಇಲ್ಲ. One of the most best is bus transport. It is more flexible, more viable. ಅದಕ್ಕೆ ತಾವು ಅನುಕೂಲ ಮಾಡಿಕೊಡಬೇಕೇ ವಿನಃ ತೊಂದರೆ ಕೊಡುವುದು ಸರಿಯಲ್ಲ. ಅದನ್ನು ಬಿಟ್ಟು ಎಲ್ಲವನ್ನೂ ಕೆ. ಎಸ್. ಆರ್. ಟಿ. ಸಿ. ಯವರೇ ತೆಗೆದುಕೊಂಡು ನಡೆಸುವುದಾದರೆ ನಡೆಸಿ. ಅದಕ್ಕೆ ನಮ್ಮ ಅಬ್ಜಕ್ಷನ್ ಏನೂ ಇಲ್ಲ. ಆದರೆ ಅದನ್ನು ಮಾಡುವುದಕ್ಕೆ ನಿಮಗೆ ಶಕ್ತಿ ಇಲ್ಲ, ಮಾಡುವುದಕ್ಕಾಗುವುದಿಲ್ಲ. ನಿಮಗೆ

ಧೈರ್ಯ ಇಲ್ಲ. ನಿಮಗೆ ಆ ತಾಕತ್ತು ಇಲ್ಲ. ಶರ್ಮ ಟ್ರಾನ್ಸ್‌ಪೋರ್ಟ್ ಕಂಪನಿಯವರು, ಬೇರೆಯವರು ಇದ್ದಾರೆಂಬುದು ನನಗೂ ಗೊತ್ತಿದೆ. ಆದರೆ ಒಂದು ಸೀಟಿಗೆ ಒಂದು ಕ್ವಾರ್ಟರ್‌ಗೆ ೫೨೦ ರೂಪಾಯಿಗಳು ಇದ್ದುದನ್ನು ಈಗ ಒಂದೇ ಸಾರಿ ಒಂದು ಸೀಟಿಗೆ ಒಂದು ಕ್ವಾರ್ಟರ್‌ಗೆ ೨೫೦೦ ರೂಪಾಯಿಗಳನ್ನು ಹೆಚ್ಚು ಮಾಡಿ ಅವರಿಗೆ ಸ್ಲೋಪಾಯಿಸನ್ ಕೊಟ್ಟು ಸಾಯಿಸುವಂತಥದ್ದು ಸರಿ ಯಾದುದಲ್ಲ. ಯಾವ ರಾಜ್ಯದಲ್ಲೂ ಇಷ್ಟು ಜಾಸ್ತಿ ಇಲ್ಲ. ಕಂಪ್ಯಾರಿಟೀವ್ ಆಗಿ ನೋಡೋಣ ತಮಗೆ ನಾನು ಅಂಕಿ ಅಂಶಗಳನ್ನು ಕೊಡಿ ಎಂದು ಕೇಳಿದ್ದೆ. ಅದರ ಪ್ರಕಾರ ಅಂದರೆ ಸರ್ಕಾರದವರೇ ನಮಗೆ ಸರಬರಾಜು ಮಾಡಿದ ಅಂಕಿ ಅಂಶಗಳ ಪ್ರಕಾರವೇ ಹೇಳುವುದಾದರೆ ಆಂಧ್ರದಲ್ಲಿ ಒಂದು ಸೀಟಿಗೆ ಒಂದು ಕ್ವಾರ್ಟರ್‌ಗೆ ೧೨,೦೭೫ ರೂಪಾಯಿ ಇವೆ. ಕೇರಳದಲ್ಲಿ ಒಂದು ಸೀಟಿಗೆ ಒಂದು ಕ್ವಾರ್ಟರ್‌ಗೆ ೭,೭೦೦ ರೂ. ಇದೆ. ಪಾಂಡಿಚೇರಿಯಲ್ಲಿ ಒಂದು ಸೀಟಿಗೆ ಒಂದು ಕ್ವಾರ್ಟರ್‌ಗೆ ೬,೩೦೦ ರೂ. ಇದೆ. ಅದೇ ರೀತಿ ತಮಿಳುನಾಡಿನಲ್ಲಿ ಒಂದು ಸೀಟಿಗೆ ಒಂದು ಕ್ವಾರ್ಟರ್‌ಗೆ ೪,೭೬೦ ರೂ. ಇದೆ. ಆದರೆ ಕರ್ನಾಟಕದಲ್ಲಿ ಒಂದು ಸೀಟಿಗೆ ಒಂದು ಕ್ವಾರ್ಟರ್‌ಗೆ ೧೭,೫೦೦ ರೂ. ಆಗುತ್ತದೆ ಈಗಿನಂತೆ ತೆರಿಗೆಯನ್ನು ಹೆಚ್ಚು ಮಾಡಿದ ರೀತಿಯಲ್ಲಿ. Besides this, there is a Supreme Court decision, I think hon. Minister for Law is aware of that decision. They say that this Motor Vehicles taxation should not become fine or tax. It is a compensation, it must be collected by way of compensation for maintenance of roads which are being used by these transport operators, This from SC 1975 (1) SLC, page 382...ದಕ್ಷಿಣದಲ್ಲಿ ಪರ್ಮಿಟ್ ತೆಗೆದುಕೊಂಡಿರುವವರು ಸುಮಾರು ೩೦೦ ಜನ ಇದ್ದಾರೆ. ಇವರೆಲ್ಲರೂ ಕೇಂದ್ರ ಸರ್ಕಾರದಿಂದ ಪರ್ಮಿಟ್‌ನ್ನು ತೆಗೆದುಕೊಂಡಿರುವವರು, ಇದನ್ನು ಮಾಡಲೇ ಬೇಡಿ ಎಂದು ನಾನು ಹೇಳುವುದಿಲ್ಲ. ಕೊಡುವವರು ಇದ್ದಾರೆ. ಶಕ್ತಿ ಇರುವವರು ಕೊಡಲಿ ಬೇಡ ಎಂದು ಹೇಳುವುದಿಲ್ಲ. ಇದರಿಂದ ಪ್ರವಾಸೋದ್ಯಮಕ್ಕೆ ತೊಂದರೆಯಾಗುತ್ತದೆ. ಪ್ರವಾಸೋದ್ಯಮಕ್ಕೆ ತೊಂದರೆಯಾಗದ ಹಾಗೆ ನೋಡಿಕೊಳ್ಳಿ ಎಂದು ಮತ್ತೆ ನಾನು ಹೇಳುತ್ತೇನೆ.

ಅಧ್ಯಕ್ಷರೇ, ನಮಗೆ ಸಾರಿಗೆ ಕಾರ್ಪೊರೇಷನ್ ವಾರ್ಷಿಕ ವರದಿ ೧೯೮೪-೮೫ರದ್ದು ಮಾತ್ರ ಬಂದಿದೆ. ೧೯೮೭ರಲ್ಲಿ ನಾನು ಇದರ ಬಗ್ಗೆ ಮಾತನಾಡಿದರೆ ಎಷ್ಟು ಸಮಂಜಸವಾಗುತ್ತದೆ? ನಾನು ಈ ಬಗ್ಗೆ ನೋಟೀಸ್ ಆಫೀಸ್‌ನಲ್ಲಿ ಕೇಳಿದೆ. ಲೇಟೆಸ್ಟ್ ರಿಪೋರ್ಟ್ ನನಗೆ ಸಿಗಲಿಲ್ಲ. ಆದ್ದರಿಂದ ೧೯೮೪-೮೫ರದ್ದು ಇಟ್ಟುಕೊಂಡು ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಇನ್ನು ಮುಂದಾದರೂ ಸರಿಯಾಗಿ ಲೇಟೆಸ್ಟ್ ರಿಪೋರ್ಟ್‌ನ್ನು ಒದಗಿಸಿಕೊಡಲು ತಾವು ಸೂಕ್ತ ವ್ಯವಸ್ಥೆ ಮಾಡಿ ಎಂದು ಹೇಳುತ್ತೇನೆ. ಇದಕ್ಕಿಂತ ಮುಖ್ಯವಾಗಿ The performance of the KSRTC has improved. ನನ್ನ ಅಭಿಪ್ರಾಯದಲ್ಲಿ there is a vast scope for improvement. ಅದಕ್ಕೆ ಯಾರು ಯಾರಿಗೆ ಮೆಚ್ಚುಗೆ ವ್ಯಕ್ತಪಡಿಸಬೇಕೋ ಅವರಿಗೆ ಮೆಚ್ಚುಗೆ ವ್ಯಕ್ತಪಡಿಸಬೇಕಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ, ಮಾನ್ಯ ವೀರಣ್ಣನವರಿಗೆ ಮತ್ತು ಮಿಂಕ್ಕವರಿಗೆ ಮೆಚ್ಚುಗೆ ವ್ಯಕ್ತಪಡಿಸುವುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಏಕೆಂದರೆ, ಹೆಚ್ಚು ಹೊಸ ಬಸ್‌ಗಳನ್ನು ಹಾಕಿದ್ದಾರೆ. ಆದರೆ ಕೆಲವು ಬಸ್‌ಗಳಿಗೆ ಡ್ರೈವರ್ ಮತ್ತು ಕಂಡಕ್ಟರ್ಸ್ ಇಲ್ಲ. ೪೦ ಬಸ್‌ಗಳಿಗೆ ಡ್ರೈವರ್ ಮತ್ತು ಕಂಡಕ್ಟರ್ಸ್ ಇಲ್ಲ. ಇದನ್ನು ಆದಷ್ಟು ಬೇಗ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ ಈ ಸಂಸ್ಥೆಯನ್ನು ಉತ್ತಮ ಪಡಿಸಬೇಕಾದರೆ ಮೊದಲು ನ್ಯಾಷನಲೈಸೇಷನ್ ಆಫ್ ರೂಟ್ಸ್ ಬಗ್ಗೆ ಹೆಚ್ಚು ಗಮನ ಕೊಡಬೇಕು. ನ್ಯಾಷನಲೈಸೇಷನ್ ಮಾಡುತ್ತಾ ಹೋದರೆ ನಿಮ್ಮ ಅರ್‌ನಿಂಗ್ಸ್ ಹೆಚ್ಚು ಆಗುತ್ತದೆ. ಎಲ್ಲಿ ನೀವು ನ್ಯಾಷನಲೈಸ್ ಮಾಡಿದ್ದೀರಿ ಅಲ್ಲಿ ಹೆಚ್ಚು ವರಮಾನ ಬಂದಿದೆ. ಇವೊತ್ತು ರಾಷ್ಟ್ರೀಕರಣ ಮಾಡಲು ಅಡ್ಡಿ ಆತಂಕಗಳು ಹೆಚ್ಚು ಬರುತ್ತವೆ. ತಾವು ಅದಕ್ಕೆ ಮಣಿಯಬಾರದು. ಈ ಬಗ್ಗೆ ಸಿಂಧ್ಯ ಅವರು ಒಳ್ಳೆಯ ಕೆಲಸ ಮಾಡಿದರು ಹಾಗೂ ಪುಣ್ಯ ಕಟ್ಟಿಕೊಂಡರು. ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಯನ್ನು ನ್ಯಾಷನಲೈಸ್ ಮಾಡಿದರು. ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಮಂಡ್ಯ, ತುಮಕೂರು ಬಗ್ಗೆ ಹೇಳಿದ್ದೀರಿ.

ರಾಯಚೂರು ಜಿಲ್ಲೆಯನ್ನು ಏಕೆ ರಾಷ್ಟ್ರೀಕರಣ ಮಾಡಲಿಲ್ಲವೋ ನನಗೆ ಗೊತ್ತಾಗಲಿಲ್ಲ. ಈ ಬಗ್ಗೆ ತಾವು ಉತ್ತರದಲ್ಲಿ ಹೇಳಬೇಕು. ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ, ಮಂಡ್ಯಾ ತುಮಕೂರು ಜಿಲ್ಲೆಗಳನ್ನು ಎಷ್ಟು ದಿವಸಗಳಲ್ಲಿ ರಾಷ್ಟ್ರೀಕರಣ ಮಾಡುತ್ತೀರೋ ನನಗೆ ಗೊತ್ತಿಲ್ಲ. ಇವನ್ನು ರಾಷ್ಟ್ರೀಕರಣ ಮಾಡಿಲ್ಲ ಎಂದರೆ ನಾವು ಬೇರೆ ಅಭಿಪ್ರಾಯ ಕೊಡಬೇಕಾಗುತ್ತದೆ. ತಾವು ರಾಷ್ಟ್ರೀಕರಣ ಮಾಡಿದರೆ ಶಹಬಾಸ್‌ಗಿರಿ ಕೊಡುತ್ತೇವೆ.

ಶ್ರೀ ಎಂ. ಎಂ. ಖಾರ್ಗೆ.—ರಾಯಚೂರಿನಲ್ಲಿ ಸಾಹುಕಾರರ ಒತ್ತಡ ಇದೆ. ಅಲ್ಲಿ ನೋಟಿಫಿಕೇಷನ್ ಮಾಡಿ ನಂತರ ವಿತ್‌ಡ್ರಾ ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಬಗ್ಗೆ ಮಂತ್ರಿಗಳು ಉತ್ತರದಲ್ಲಿ ಹೇಳಲಿ. ಸಾಹುಕಾರರ ಒತ್ತಡಕ್ಕೆ ಮಣಿದರೆ ಕಾರ್ಪೊರೇಷನ್ ಹಾಳಾಗುತ್ತದೆ, ಅದು ಉಳಿಯುವುದಿಲ್ಲ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ವೀರಣ್ಣನವರು "ವೀರ'' ಎಂದು ಹೆಸರು ಇಟ್ಟುಕೊಂಡಿದ್ದಾರೆ. ಅವರು ಸಾಹುಕಾರರ ಒತ್ತಡಕ್ಕೆ ಮಣಿಯುವುದಿಲ್ಲವೆಂದು ನಾನು ಭಾವಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ನ್ಯಾಷನಲೈಸೇಷನ್ ಥಿಯರಿ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅದು ತಮಗೇ ಗೊತ್ತಿದೆ. ಸ್ವಲ್ಪ ಹಿಂದಿನಿಂದಲೂ ಒಂದು ಯೋಚನೆ ಮಾಡುತ್ತಿದ್ದೀರಿ. ಕೆ.ಎಸ್.ಆರ್.ಟಿ.ಸಿ.ಯನ್ನು ೩ ಭಾಗಗಳಾಗಿ ಮಾಡಬೇಕೆಂದು ಹೇಳಿ. ಈ ಬಗ್ಗೆ ನಿಮ್ಮ ಅಧ್ಯಕ್ಷರು ಎಲ್ಲೋ ಒಂದು ಹೇಳಿಕೆಯನ್ನು ಸಹ ಕೊಟ್ಟಿದ್ದಾರೆ. ಅದೂ ಅಲ್ಲದೇ ಬಿ.ಟಿ.ಎಸ್.ಗೇ ಬೇರೆ ಕಾರ್ಪೊರೇಷನ್ ಮಾಡಬೇಕೆಂದು ಬಹಳ ಕಡೆ ಅದರ ಅಧ್ಯಕ್ಷರೇ, ಹೇಳಿದ್ದಾರೆ. ಇದು ಸರಿಯಾದ ನಿರ್ಧಾರ ಅಲ್ಲ, ಸರಿಯಾದ ಧೋರಣೆ ಅಲ್ಲ ಎಂದು ನನಗನ್ನಿಸುತ್ತದೆ. ತಾವು ಈ ಇಲಾಖೆ ಬಗ್ಗೆ ಪಿ.ಯು.ಸಿ. ಕಮಿಟಿಯ ಅಧ್ಯಕ್ಷರಾಗಿದ್ದಾಗ ಒಂದು ವರದಿಯನ್ನೂ ಸಹಾ ಕೊಟ್ಟಿದ್ದೀರಿ. ಆಗ ನಾನೂ ಕೂಡಾ ಇದ್ದೆ. ನಾವು ದೇಶವೆಲ್ಲಾ ಸುತ್ತಿ ಒಂದು ವರದಿಯನ್ನು ಕೊಟ್ಟಿದ್ದೇವೆ ಅದರಲ್ಲಿ ತಾವು ೩ ಭಾಗ ಮಾಡಬಾರದು ಎಂದು ಹೇಳಿದ್ದೀರಿ. ಹಾಗೆ ಮಾಡುವುದರಿಂದ ಓವರ್ ಹೆಡ್ ಛಾರ್ಜಸ್ ಹೆಚ್ಚು ಆಗುತ್ತದೆ. ಮತ್ತು ಒಂದೊಂದು ಕಡೆ, ಕಾರ್ಪೊರೇಷನ್ ಅಧ್ಯಕ್ಷರು, ಸದಸ್ಯರು ಹೀಗೆ ವೆಸ್ಟೆಡ್ ಇಂಟರೆಸ್ಟ್‌ಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ತಾವು ೩ ಭಾಗಗಳನ್ನು ಮಾಡುವ ಬದಲು ಡಿವಿಜನ್‌ಗಳನ್ನು ಹೆಚ್ಚು ಮಾಡಿ ಅವಕ್ಕೆ ಹೆಚ್ಚು ಅಧಿಕಾರವನ್ನು ಕೊಡಿ ಅಧಿಕಾರ ವಿಕೇಂದ್ರೀಕರಣ ಮಾಡಿ ಇವತ್ತು ೩ ಡಿವಿಜನ್ ಮಾಡಿ ಹೆಗ್ಗಣಗಳಿಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ದಯವಿಟ್ಟು ಆ ವಾದ ಸರಿಯಲ್ಲವೆಂದು ಹೇಳಬೇಕಾಗುತ್ತದೆ ಇದರಿಂದ ವರಮಾನ ಹೆಚ್ಚು ಆಗುವುದಿಲ್ಲ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ತಮಿಳುನಾಡಿನಲ್ಲಿ ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತಮಿಳುನಾಡಿನಲ್ಲಿ ೩ ಭಾಗ ಮಾಡಿದ್ದು ಅವುಗಳು ಸರಿಯಾಗಿ ನಡೆಯುತ್ತಾ ಇಲ್ಲ ಎಂದು they want to get back to the original position That is my information. ನಮ್ಮ ಸ್ನೇಹಿತರ ಜೊತೆ ನಾನು ಮಾತನಾಡುವಾಗ ಅವರು ಹೇಳಿದರು. Their experience is bad. Initially it was good but lateron it has not worked well. ಇನಿಶಿಯಲ್ಲಾಗಿ ಪರ್ವಾಯಿಲ್ಲ ಈಗ ಸರಿಯಾಗಿಲ್ಲ ಎಂದು ಹೇಳುತ್ತಿದ್ದಾರೆ. ಗುಜರಾತಿನಲ್ಲಿ ಬಹಳ ಚೆನ್ನಾಗಿ ನಡೆಯುತ್ತಿದೆ. ಅಲ್ಲಿ ಒಂದೇ ಕಾರ್ಪೊರೇಷನ್ ಇದೆ. ಅಲ್ಲೂ ಕೂಡ ನಾನು ಚರ್ಚೆ ಮಾಡಿದ್ದೇನೆ. ಅಲ್ಲಿಯ ಮಂತ್ರಿಗಳು ಸಪರೇಟ್ ಮಾಡಿದರೆ ಸರಿಯಾಗುವುದಿಲ್ಲವೆಂದು ಹೇಳಿದರು. ಬಿ.ಟಿ.ಎಸ್. ಬಗ್ಗೆ ಹೇಳುವುದಾದರೆ Transport is a losing proposition. It is the position everywhere in the world. ನಾನು ಮಾಸ್ಕೋ, ಫ್ರಾನ್ಸ್, ಪ್ಯಾರೀಸ್ ಜರ್ಮನ್ ದೇಶಗಳಿಗೆ ಹೋಗಿದ್ದೇನೆ. ನ್ಯೂಯಾರ್ಕ್‌ಗೆ ಹೋಗಿಲ್ಲ. ಅಲ್ಲಿನ ಅಧಿಕಾರಿಗಳ ಜೊತೆ, ಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಅವರು ಏನು ಹೇಳುತ್ತಾರೆಂದರೆ Any city concern, it will always run under loss. ಏಕೆಂದರೆ ಅರ್ನಿಂಗ್ ಪರ್ ಕಿಲೋಮೀಟರ್ ಕಡಿಮೆಯಾಗುತ್ತದೆ. ನಿಧಾನವಾಗಿ ಹೋಗಬೇಕಾಗುತ್ತದೆ. ಲಾಂಗ್ ಡಿಸ್ಟೆನ್ಸ್ ರೂಟ್ಸಿನ ಹಾಗೆ ಅಲ್ಲ. ಆದ್ದರಿಂದ ಬೇರೆ ಕಡೆ ಅರ್ನಿಂಗ್ಸ್ ಬಂದರೆ ಸರ್ಕಾರದವರು

ಸಬ್ಸಿಡೈಸ್ ಮಾಡುತ್ತಾರೆ. ಬಿ.ಟಿ.ಎಸ್. ಮತ್ತು ಲಾಂಗ್ ರೂಟ್ಸ್ ಸಪರೇಟ್ ಮಾಡುವುದು ತಪ್ಪು. ಇವತ್ತು ಸಪರೇಟ್ ಮಾಡಿರುವ ಕಡೆ ಏನಾಗಿದೆ? ಡೆಹಲಿ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಇವತ್ತು ಏನಾಗಿದೆ? Delhi Road Transport Corporation ಹಣ ಕೊಟ್ಟರೂ ಸಹ ಏನಾಗಿದೆ ಎನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ. right under the nose of the Government of India, ಅದನ್ನು ತಾವು ಯೋಚನೆ ಮಾಡಿ. ಅಷ್ಟು ಮಾತ್ರವಲ್ಲ ಇನ್ನೊಂದು ಏನೆಂದರೆ ಕೆಎಸ್‌ಆರ್‌ಟಿಸಿಗೆ ಇರುವಷ್ಟು ಸೋಷಿಯಲ್ ಆಬ್ಲಿಗೇಷನ್ಸ್ ಬೇರೆ ಯಾವ ಸಂಸ್ಥೆಗೂ ಇಲ್ಲ. ನನಗೆ ತಿಳಿದಮಟ್ಟಿಗೆ ಬಿ. ಟಿ. ಎಸ್. ಒಂದರಿಂದಲೇ ೪ ಕೋಟಿ ರೂಪಾಯಿಗಳ ಸೋಸಿಯಲ್ ಆಬ್ಲಿಗೇಷನ್‌ಗೋಸ್ಕರ ಹೋಗುತ್ತಿದೆ. ೬ ಕೋಟಿ ರೂಪಾಯಿಗಳಷ್ಟು ಸ್ಟೂಡೆಂಟ್ಸ್ ಪಾಸ್‌ಗಳನ್ನು ಕೊಡುತ್ತಿದ್ದಾರೆ. ವಯಸ್ಸಾದವರಿಗೆ ಪಾಸಸ್‌ಗಳನ್ನು ಕೊಡುತ್ತಿದ್ದಾರೆ. ಅದನ್ನು ಕೊಡುವುದು ಬೇಡವೆಂದು ನಾನು ಹೇಳುವುದಿಲ್ಲ. ಕೊಡುತ್ತಿರುವುದು ಬಹಳ ಒಳ್ಳೆಯದು, ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಕೊಟ್ಟಿರುವ ಲೆಕ್ಕವನ್ನು ತೆಗೆದುಕೊಂಡು ನೀವು ಇವತ್ತಿನ ದಿವಸ ಬೇರೆ ಕಡೆಯಿಂದ ಲಾಭವನ್ನು ಜಾಸ್ತಿಮಾಡಿಕೊಳ್ಳಬೇಕು. ಎಫಿಶಿಯನ್ಸಿಯನ್ನು ಇಂಪ್ರೂವ್ ಮಾಡಿಕೊಂಡು ಅದನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಅದನ್ನು ಮಾಡದೇ ಬರೀ ಇದನ್ನೆ ಮಾಡಿದರೆ ಇನ್ನೂ ಪರಿಸ್ಥಿತಿ ವರ್ಸ್ಟ್ ಆಗುತ್ತದೆ. ೧೦೫ ಕೋಟಿ ರೂಪಾಯಿ ನಮ್ಮ ಕ್ಯಾಪಿಟಲ್, ಅದರಲ್ಲಿ ೭೪ ಕೋಟಿ ರೂಪಾಯಿಗಳು ಕೇಂದ್ರದ್ದು, ೩೧ ಕೋಟಿ ರಾಜ್ಯದ್ದು. ನಾನು ಕೇಳುವುದು ೧೦೫ ಕೋಟಿ ರೂಪಾಯಿ ಕ್ಯಾಪಿಟಲ್ ಅನ್ನು ಲೋನ್ ಎಂದು ಏತಕ್ಕೆ ಟ್ರೀಟ್ ಮಾಡುತ್ತೀರಿ? they are pumping in so much money it is running under loss it cannot be run under profit at all ಹಾಗೆ ಮಾಡಿದರೆ ನಮಗೆ ೧೦ ಕೋಟಿ ರೂಪಾಯಿ ಬರುತ್ತದೆ. ೧೦ ಕೋಟಿ ರೂಪಾಯಿ ಬಂದರೆ ಅದರಿಂದ ಸೋಷಿಯಲ್ ಆಬ್ಲಿಗೇಷನ್ಸ್ ಮೀಟ್ ಮಾಡುವುದಕ್ಕಾಗುತ್ತದೆ. ಆಗ ಲೋನ್ ಎಂದು ರನ್ ಮಾಡುವುದಕ್ಕೆ, ಸಾಧ್ಯವಾಗುವುದಿಲ್ಲ, ನಮಗೆ ಇನ್ನು ಲಾಭ ಬರುತ್ತದೆ. ಇನ್ನೊಂದು ವಿಚಾರದಲ್ಲಿ ಮಾನ್ಯ ವೀರಣ್ಣನವರು ಧೈರ್ಯ ಮಾಡಬಹುದು ಡೀಸಲ್ ಮತ್ತು ಪೆಟ್ರೋಲ್ ಅನ್ನು ಯಾವ ರೇಟಿಗೆ ಕೊಡಬೇಕೆನ್ನುವುದು ಕೇಂದ್ರ ಸರ್ಕಾರದ ನೀತಿಯಿದೆ. ಡೀಸಲ್ ಮತ್ತು ಪೆಟ್ರೋಲ್ ಅನ್ನು ಬೇರೆಯವರಿಗೆ ಯಾವರೀತಿ ಬೆಲೆ ಇದೆ ಅದೇ ಬೆಲೆಯಲ್ಲಿ ನಮಗೂ ಕೊಡಬೇಕೆಂದು ಅವರು ಹೇಳುತಾರೆ. ಹಿಂದೆ ಫ್ಯೂಯಲ್ ಪ್ರೈಸಿಂಗ್ ಪಾಲಿಸಿ ಎಂದು ಇತ್ತು ಅದರಲ್ಲಿ ಸಾರ್ವಜನಿಕ ಕೈಗಾರಿಕೆಗಳಿಗೆ ಒಂದು ರೇಟು, ಖಾಸಗಿ ಕೈಗಾರಿಕೆಗಳವರಿಗೆ ಒಂದು ರೇಟು ಆತರಹ ಖಾಸಗಿಯವರಿಗೆ ರೇಟು ಜಾಸ್ತಿ ಮಾಡುವುದಕ್ಕೆ ಅವಕಾಶಮಾಡಿಕೊಟ್ಟಿದ್ದಾರೆ. ಅದರಿಂದಾಗಿ ಸಾರ್ವಜನಿಕ ಉದ್ದಿಮೆಗಳಿಗೆ ಕಡಿಮೆ ರೇಟಿನಲ್ಲಿ ಪೆಟ್ರೋಲ್ ಮತ್ತು ಡೀಸಲ್ ಸಿಗುತ್ತಿತ್ತು. Why not convert it intoequity. I suggest it must be converted into equity ಅದನ್ನು ಗಣನೆಗೆ ತೆಗೆದುಕೊಂಡು Fual pricing policy ಜಾರಿಗೆ ತನ್ನಿ. ಇಲ್ಲ ಲಾರಿ ಒನರ್ಸ್ ಕೊಡುವುದಕ್ಕೂ ನಮಗೆ ಕೊಡುವುದಕ್ಕೂ ವ್ಯತ್ಯಾಸವಿದೆ. ನ್ಯಾಷನಲ್ ಪಾಲಿಸಿಗಾಗಿ ನೀವು ಫೈಟ್ ಮಾಡಿ. ಇವೊತ್ತಲ್ಲ ನಾಳೆಯಾದರೂ ಇದು ಆಗಬಹುದು. ಬಸ್ ಬಾಡಿ ಕಟ್ಟತಕ್ಕ ಕೆಲಸವನ್ನು ಕಿಮ್‌ಕೋದವರಿಗೆ ಕೊಟ್ಟಿದ್ದಾರೆ. ಅದು ಬಹಳ ಒಳ್ಳೆಯದು. ನಮ್ಮದೇ ಆದ ಕಂಪನಿ. ಕಿಮ್‌ಕೋಗೆ ಈ ಕೆಲಸವನ್ನು ಕೊಡಿ. ಕೆಂಗೇರಿಯ ಹತ್ತಿರ ಒಂದು ಫ್ಯಾಕ್ಟರಿಯನ್ನು ಕೊಂಡು ಕೊಂಡಿದ್ದಾರೆಂದು ಕೇಳಿದ್ದೇನೆ. ಆ ಫ್ಯಾಕ್ಟರಿ ಹಾಗೆಯೇ ಇದೆ. ಅಲ್ಲಿ ಬಸ್ ಬಾಡಿ ಕಟ್ಟತಕ್ಕ ಕೆಲಸ ಮಾಡುತ್ತೇವೆಂದು ಹೇಳಿದ್ದರು, ಇದುವರೆಗೆ ಏನೂ ಮಾಡಿಲ್ಲ. ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸದಸ್ಯರೊಬ್ಬರು ಅದನ್ನು ಮಾನ್ಯ ಸಿಂಧ್ಯಾರವರು ಇಟ್ಟುಕೊಂಡಿದ್ದಾರೆಂದು ಹೇಳುತ್ತಿದ್ದಾರೆ, ಅದು ನನಗೆ ಗೊತ್ತಿಲ್ಲ. ಅದಕ್ಕೆ ಅವರೇ ಆನ್ಸರ್ ಮಾಡುತ್ತಾರೆ. ಇಷ್ಟೆಲ್ಲಾ ಚೆನ್ನಾಗಿ ನಡೆಯುತ್ತಿದ್ದರೂ ಒಂದು ಹೊಸ ರೀಟ್ರೇಡಿಂಗ್ ಮಿಷನ್ ತರುತ್ತಿದ್ದಾರೆಂದು ಹೇಳುತ್ತಾರೆ. ಅದನ್ನು ತಂದರೆ ಒಳ್ಳೆಯದಾಗುತ್ತದೆ. ಅದನ್ನು ತಂದರೆ ಚಾಸೀಸ್, ಸ್ಪೇರ್ ಪಾರ್ಟ್ಸ್ ರೀಟ್ರೇಡಿಂಗ್ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದು ಎಲ್ಲದಕ್ಕೂ ಅನುಕೂಲವಾಗುತ್ತದೆ.

ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಏಕೆ ಮಾಡುವುದಕ್ಕೆ ಆಗುವುದಿಲ್ಲ? ಕೆಂಗೇರಿಯ ಫ್ಯಾಕ್ಟರಿ ಇದೆ. ಪ್ರಯತ್ನಪಟ್ಟರೆ ಮಾಡುವುದಕ್ಕೆ ಆಗುತ್ತದೆ. ಬೇರೆ ಫೈನಾನ್ಸಿಯರ್‌ನ್ನು ನೋಡಿ ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಎಲ್. ಐ. ಸಿ. ಯಿಂದ ಹಣ

ಪಡೆದು ಮಾಡಿದರೆ you will not be dictated by the multi-national if not at the national level, at least in Karnataka. ಕರ್ನಾಟಕದಲ್ಲಿ ಮಾಡಿ ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ಮಾತು, ಎಲ್ಲದಕ್ಕಿಂತಲೂ ಮುಖ್ಯವಾಗಿ ಏನೇ ಮಾಡಿದರೂ ಕಾರ್ಮಿಕರ ಸಹಕಾರ ಪಡೆಯದೇ ಹೋದರೆ, ಡ್ರೈವರ್ಸ್, ಕಂಡಕ್ಟರ್ಸ್ ಇವರುಗಳ ಸಹಕಾರ ಪಡೆಯದೇ ಹೋದರೆ ಖಂಡಿತವಾಗಿಯೂ ಇದು ನಡೆಯುವುದಿಲ್ಲ. ಡ್ರೈವರ್ ಒಬ್ಬ ರಾಕ್ಷಸ, ಕಂಡಕ್ಟರ್ ಇನ್ನೊಬ್ಬ ರಾಕ್ಷಸ ಎಂಬ ಭಾವನೆಯಿಂದ ಅವರನ್ನು ಟರ್ಮಿನೇಟ್ ಮಾಡಿದರೆ ಡಿಸ್‌ಮಿಸ್ ಮಾಡಿದರೆ ಸರಿಹೋಗುತ್ತದೆ ಎಂಬ ಮಾತನ್ನು ಈ ಮನೆಯಲ್ಲಿ ನಾನು ಕೇಳಿದ್ದೇನೆ. ನನಗೆ ಬಹಳ ವಿಷಾದ ಆಗುತ್ತದೆ. ಇವೊತ್ತು ಏನಾದರೂ ನಾವು ಮುಂದುವರಿದಿದ್ದರೆ ಅದು ಈ ಕಾರ್ಮಿಕರಿಂದ. ಅವರ ಟೆನ್‌ಶನ್ ನಿಮಗೆ ಗೊತ್ತಿಲ್ಲ. ಒಬ್ಬ ಡ್ರೈವರ್ ಬೆಳಿಗ್ಗೆಯಿಂದ ಸ್ಟೇರಿಂಗ್ ಹಿಡಿದು ದಣಿದು ಸಾಯಂಕಾಲ ಮನೆಗೆ ಹೋಗುವಾಗ ಅವನು ಮನುಷ್ಯನೇ ಆಗಿರುವುದಿಲ್ಲ. ನಿಮ್ಮ ದೃಷ್ಟಿಕೋನ ಬಹಳ ಬದಲಾಗಬೇಕು. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನೀವು ಅವರನ್ನು ಟರ್ಮಿನೇಟ್ ಮಾಡುತ್ತೀರಿ, ಡಿಸ್‌ಮಿಸ್ ಮಾಡುತ್ತೀರಿ, ಯಾವ ಆಧಾರದಮೇಲೆ ಮಾಡುತ್ತೀರಿ ? ಕೆಲವು ಟಿಪಿಕಲ್ ಕೇಸ್‌ಗಳು ಇವೆ. ಅದರಲ್ಲೂ ಬಿ. ಟಿ ಎಸ್, ನಲ್ಲಿ ಒಬ್ಬರು ಮಹಾ ಕಂಟ್ರೋಲರ್ ಇದ್ದಾರೆ. ಶ್ರೀಮಾನ್ ವಿಶ್ವನಾಥ ಡಿ. ಸಿ. ಇನ್ನೊಬ್ಬರು ಎಂ. ವಿಶ್ವನಾಥ್ ಇದ್ದಾರೆ. ಅವರ ಹೆಸರನ್ನು ಇವರಿಗೆ ಸೇರಿಸಬೇಡಿ. ಈ ಮನುಷ್ಯನ ಕೆಲಸ ಏನು ಎಂದರೆ ಹೆಚ್ಚೆಚ್ಚು ಜನರನ್ನು ಕೆಲಸದಿಂದ ಕಿತ್ತು ಹಾಕುವುದು. ಶಿಸ್ತಿನ ಕ್ರಮ ತೆಗೆದುಕೊಂಡುಬಿಟ್ಟರೆ ಎಲ್ಲಾ ಸರಿಹೋಗಿ ಬಿಡುತ್ತದೆ. ಎಂದು ಇವರು ತಿಳಿದುಕೊಂಡಿದ್ದಾರೆ. ಐದು ಸಾವಿರಕ್ಕಿಂತಲೂ ಹೆಚ್ಚು ಕೇಸ್‌ಗಳು ರಿಡಕ್ಷನ್ ಆಫ್ ಇನ್‌ಕ್ರೀಮೆಂಟ್ ಡಿಸ್‌ಮಿಸ್‌ನ ನೂರು ಕೇಸುಗಳು ಇವೆ. ಎಂಪ್ಲಾಯಿಸ್ ಯೂನಿಯನ್ ಜೊತೆ ಇವರು ಚರ್ಚೆ ಮಾಡುವುದಿಲ್ಲ. ಅವರ ಸಪೋರ್ಟನ್ನು ತೆಗೆದುಕೊಳ್ಳುವುದಿಲ್ಲ. He is like a dictator and because of is highnandedness we see wild cat strike in BTS. ಇದನ್ನು ನಾವು ತಮ್ಮ ಗಮನಕ್ಕೆ ತಂದಿವು. ಸಿಂಧ್ಯಾ ಅವರ ಗಮನಕ್ಕೂ ತಂದೆವು. ಎಲ್ಲಾ ದೇವರಿಗೂ ತೆಂಗಿನಕಾಯಿ ಒಡೆದಿದ್ದೇವೆ. ಇನ್ನೂ ಕೂಡ ತಾವು ಧೈರ್ಯ ಮಾಡಲಿಲ್ಲ. ಇಷ್ಟು ಮಾತ್ರವಲ್ಲ ಎಂತಹ ರೀತಿಯಲ್ಲಿ ಟರ್ಮಿನೇಷನ್ ಮಾಡುತ್ತಾರೋ ಗೊತ್ತೇ ? ಒಂದೇ ಒಂದು ಓದುತ್ತೇನೆ.

KARNATAKA STATE ROAD TRANSPORT CORPORATION BANGALORE TRANSPORT SERVICE

Thise is a notice issued by the same gentleman. It reads:

"It is reported that on 21-10-1986 at about 6.05 hours you Sri Ramu, Driver, Token No. 1586 attached to Depot No. 8 found selling the Weekly Magazine namely "Kempu Bauta" at the gate of Depot No. 8 to the employees at the rate of 50 paise per copy, and you being a regular employee of the corporation you are not suppose to engage youreself in any other business governing under Conduct and Discipline Regulation clause Part II and III IV which reads as "No corporation servant shall exeept with the previous sanction of the corporation engage directly or indirectly in any trade or business or undertake any other employment."

Further by means of your business you have ereated an unlawful gathering near the gate and also created ohaos in the minds of

duty chaos in the minds of duty conscious employees which is highly unbecoming of corporation servant. ಏನು ಸ್ವಾಮಿ ಇದು ?

ಅಧ್ಯಕ್ಷರು.—ಒಂದು ಗಂಟೆ ಆಯಿತು. ಬೇಗ ಮುಗಿಸಿ.

ಶ್ರೀ ಎಂ. ಎಸ್. ಕೃಷ್ಣನ್.—ಮುಗಿಸಿಬಿಡುತ್ತೇನೆ. ಇನ್ನೊಂದು ಕೇಸ್ ಇದೆ ನೋಡಿ. This is also a typical case.

"That you Sri Nagaraju, Conductor T. No. 4359 (OOD), along with Sriyuths : Abdul Wazid, Driver, T No. 1431 D. No. 1 Joseph, Conductor, T. No. 344 of D. No. V., Revanasiddappa, Artisan, 819 of D. No. I. Premakumar, Junior Assistant, Accounts Section, Revappa, Ex-Conductor of D. No. 4, B. M. Urs, Conductor, T. No. 3982 of D. No. 6 formed into an unlawful assembly in the Divisional office permisson 8-10-86 at about 11-00 hours and staged a dharana along with others and started shouting the slogans in the manner reproduced below :

"ಇನ್‌ಕಿಲಾಬ್ ಜಿಂದಾಬಾದ್, ಎಐಟಿಯುಸಿ ಜಿಂದಾಬಾದ್, ವಚನಭ್ರಷ್ಟ ಅಧಿಕಾರಿಗಳಿಗೆ ಧಿಕ್ಕಾರ, ತಲೆಹಿಡುಕ ಅಧಿಕಾರಿಗಳಿಗೆ ಧಿಕ್ಕಾರ, ಬೇಕೇಬೇಕು ನ್ಯಾಯ ಬೇಕು.."

ಇತ್ಯಾದಿ ಘೋಷಣೆಗಳನ್ನು ಕೂಗಿದರು. ಅವರು ಘೋಷಣೆ ಕೂಗಿದ್ದೇ ತಪ್ಪು ಎಂದು ಹೇಳುವುದಕ್ಕೆ ಆಗುವುದಿಲ್ಲ.

ಘೋಷಣೆಯನ್ನು ಅವರ ಇಷ್ಟಬಂದ ಹಾಗೆ ಕೂಗುತ್ತಾರೆ. ಅದಕ್ಕೆ ಡಿಸ್‌ಮಿಸ್ ಮಾಡುವುದೇ ? ಹಾಗಾದರೆ ಎಲ್ಲರನ್ನೂ ಡಿಸ್‌ಮಿಸ್ ಮಾಡಬೇಕಾಗುತ್ತದೆ. ನಮ್ಮನ್ನು ಡಿಸ್‌ಮಿಸ್ ಮಾಡಬೇಕಾಗುತ್ತದೆ. ಆದುದರಿಂದ ಇದರಲ್ಲಿ ಪರ್ಸನಲ್ ಪಾಲಿಟಿಕ್ಸ್ ಮಾಡಬೇಡಿ. ದಯಮಾಡಿ ಬೆಂಗಳೂರು ಡಿವಿಜನಲ್ ಕಂಟ್ರೋಲರ್ ಅವರನ್ನು ತೆಗೆಯಿರಿ. ಇದು ಬಹಳ ಮುಖ್ಯ. ಇಲ್ಲದೇ ಹೋದರೆ ಖಂಡಿತವಾಗಿಯೂ ನಿಮಗೂ ಮರ್ಯಾದೆ ಬರುವುದಿಲ್ಲ. ಯಾರಿಗೂ ಮರ್ಯಾದೆ ಬರುವುದಿಲ್ಲ.

ಇನ್ನೊಂದು ಬ್ಯಾಲೆಟ್ ಸಿಸ್ಟಂ ತರುವುದಕ್ಕೆ ಮೊನ್ನೆ ಒಪ್ಪಿಕೊಂಡಿದ್ದೀರಿ. ಇದನ್ನು ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದೇ ಹೋದರೆ ಖಂಡಿತವಾಗಿಯೂ ಅಪಚಾರವಾಗುತ್ತದೆ. ಇವೊತ್ತು ನಾಳೆ, ನಾಡಿದ್ದು ಎಂದು ಹೇಳದೆ ಬಹಳ ಬೇಗ ಇದನ್ನು ಮಾಡಬೇಕಾಗುತ್ತದೆ. ಇನ್ನು ಮಾನ್ಯ ರಾಚಯ್ಯನವರು ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ವರದಿ ಕೊಟ್ಟಿದ್ದಾರೆ. ಇದರಲ್ಲಿ ಏನು ಗೊತ್ತಾಗುತ್ತದೆ, ನಾವು ಈಗಾಗಲೇ ಎಲ್ಲವನ್ನೂ ಚರ್ಚೆ ಮಾಡಿದ್ದೇವೆ. ಪಾವಗಡದಲ್ಲಿ ಫೈರಿಂಗ್, ಅಲ್ಲಿ ಫೈರಿಂಗ್, ಕೋಮುಭಾವನೆಗಳದ್ವೇಶ ಜಾಸ್ತಿಯಾಗುತ್ತಿದೆ. ಪೋಲೀಸಿನವರು

ಇದನ್ನೆಲ್ಲಾ ಕಂಟ್ರೋಲ್ ಮಾಡುವ ಪರಿಸ್ಥಿತಿಯಲ್ಲಿದ್ದಾರೆ ಎಂಬುದನ್ನೂ ಹೇಳಿದ್ದಾರೆ. ೧೯೮೫ ಮತ್ತು ೧೯೮೬ರ ಪಿಕ್ಚರ್ ಇಲ್ಲಿದೆ.

			೧೯೮೫	೧೯೮೬
೧.	ಕೊಲೆ	...	೧೦೦೨	೧೦೭೧
೨.	ದರೋಡೆ	...	೧೭೫	೨೩೯
೩.	ಸುಲಿಗೆ	...	೪೭೧	೪೭೫
೪.	ಗೃಹಾತಿಕ್ರಮಣ ಮತ್ತು ಕಳ್ಳತನ	...	೬೯೭೮	೭೨೦೬
೫.	ಸಾಧಾರಣ ಕಳ್ಳತನಗಳು	...	...	...
೬.	ಜಾನುವಾರು ಕಳ್ಳತನ	...	೩೬೮	೪೬೧
೭.	ಗಲಭೆ (ದೊಂಬಿ)	...	೫೮೨೧	೬೦೦೯
೮.	ಮಕ್ಕಳನ್ನು ಕದ್ದುಕೊಂಡು ಹೋಗುವುದು ಮತ್ತು ಅಪಹರಣ	...	೩೭೦	೩೨೯

ಇದೊಂದು ಕಡಿಮೆಯಾಗಿದೆ: ಮಿಕ್ಕಿದ್ದೆಲ್ಲಾ ಜಾಸ್ತಿಯಾಗಿದೆ. ಇವತ್ತು ಇವರು ೯೮ ಕೋಟಿ ರೂಪಾಯಿಗಳು ಎಂದು ಹೇಳಿಕೊಳ್ಳುತ್ತಾರೆ. ಏನು ಪ್ರಯೋಜನ ? ಇವತ್ತು ಇದನ್ನೆಲ್ಲಾ ಡಿಟೆಕ್ಟ್ ಮಾಡುವುದಕ್ಕೆ ಶಕ್ತಿ ಇಲ್ಲ. ಫೈರಿಂಗ್‌ನ್ನು ಬಿಟ್ಟು ಕೋಮು ಘರ್ಷಣೆಗಳು ಆಗದ ರೀತಿಯಲ್ಲಿ ಮೊದಲೇ ಎಚ್ಚರಿಕೆ ವಹಿಸಬೇಕು. ಇತ್ತೀಚಿಗೆ ಜನಗಳನ್ನು ಕೊಲ್ಲುವುದು ಜಾಸ್ತಿಯಾಗುತ್ತಿದೆ. ನೀವು ಈ ಬಗ್ಗೆ ಬೇಕಾದ ಮಿಷನರಿ ತಯಾರು ಮಾಡಿ, ಕೋಮು ಘರ್ಷಣೆಗಳನ್ನು ತಡೆಯಿರಿ. ಮುಂಜಾಗ್ರತಾ ಕ್ರಮವಾಗಿ, ಇದಕ್ಕೆ ಬೇಕಾದಂಥ ಸಿಬ್ಬಂದಿಯನ್ನು ಬೇಕಾದರೆ ಮಾಡಿ, ಬೆಂಗಳೂರಿನಲ್ಲಿ ಅಶ್ಲೀಲ ಸಾಹಿತ್ಯದ ಪುಸ್ತಕಗಳನ್ನು ಪಬ್ಲಿಷ್ ಮಾಡುತ್ತಾರೆ. ಒಂದು ರತಿ ವಿಜ್ಞಾನ, ಇನ್ನೊಂದು ಸುರತಿ ಎಂದು. ಈ ತರಹ ಯಾವುದೋ ಒಂದು ಪತ್ರಿಕೆಯನ್ನು ಮಾನ್ಯ ಎಂ. ಪಿ. ಪ್ರಕಾಶ್‌ರವರು ಉದ್ಘಾಟನೆ ಮಾಡಿದರು. ನೀವು ಇವುಗಳ ಬಗ್ಗೆ ಕ್ರಮ ತೆಗೆದುಕೊಳ್ಳಿ, ಬೇಡ ಎಂದು ಹೇಳುವುದಿಲ್ಲ. ಆದರೆ ಇವುಗಳ ಬಗ್ಗೆ ಒಬ್ಬರಮೇಲೆ ೫೫೨ ಕೇಸ್, ಇನ್ನೊಬ್ಬರ ಮೇಲೆ ೭೯-೮೦ ಕೇಸ್ ಕೋರ್ಟಿನಲ್ಲಿವೆ. ಸ್ವಾಮಿ ಒಂದು ಸಲ ಕೇಸ್ ಹಾಕಲಿ, ಅದನ್ನು ತೀರ್ಮಾನ ಮಾಡಲಿ ಅದನ್ನು ಮೆಚ್ಚುತ್ತೇನೆ. ದಯವಿಟ್ಟು ಅವರಿಗೆ ಸೂಚನೆ ಕೊಡಿ. ಈಗಾಗಲೇ ಹಾಕಿರತಕ್ಕ ಕೇಸುಗಳು ಇತ್ಯರ್ಥ ಆಗದೇ, ಮತ್ತೆ ಕೇಸ್ ಹಾಕುವುದಕ್ಕೆ ಹೋಗುವುದು ಬೇಡ.

ಇದು ಸರಿಯಲ್ಲ, ಅವರ ದುಡ್ಡನ್ನು ಮತ್ತು ಪುಸ್ತಕಗಳನ್ನು ಕಿತ್ತುಕೊಂಡು ಹೊರಟ ಹೋಗುತ್ತಾರೆ. ಬೆಂಗಳೂರಿನಲ್ಲಿ ನಡೆಯುತ್ತಿರುವ ವಿಷಯವನ್ನು ನಾನು ಹೇಳುತ್ತಿರುವುದು.

ಅದೇ ಸಮಯದಲ್ಲಿ ಕಾರ್ಮಿಕರ ಮೇಲೆ ನಿಮ್ಮ ಮನೋಭಾವನೆ ಏನಿದೆ ಅದು ಸರಿಯಾಗಿಲ್ಲ. ಕಾರ್ಮಿಕರು ಸಿಕ್ಕಿದರೆ ಸಾಕು ಅವರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಸದೆ ಬಡೆಯುವುದು, ಟಾರ್ಚರ್ ಮಾಡುವುದು ನಡೆದಿದೆ, ಪೀಣ್ಯದಲ್ಲಿರುವ ಸಬ್ ಇನ್‌ಸ್ಪೆಕ್ಟರ್ ಸುಬ್ಬಣ್ಣ ಎನ್ನುವವರು ಮಾಡದಿರುವ ಕೆಲಸವೇ ಇಲ್ಲ. ಅವರಿಗೆ ನೀವು ಏನೂ ಮಾಡಿಲ್ಲ. ಅವರನ್ನು ಏತಕ್ಕೆ ಕಿತ್ತು ಹಾಕುವುದಿಲ್ಲ ನೀವು ಎಷ್ಟು ದಿವಸದಿಂದ ನಿಮ್ಮನ್ನು ನಾವು ಕೇಳುತ್ತಿಲ್ಲ. ಎನ್. ಟಿ. ಟಿ. ಎಫ್. ಫ್ಯಾಕ್ಟರಿಯಲ್ಲಿ ಸ್ಟ್ರೈಕ್ ಆಯಿತು. ಪೀಣ್ಯ ಪೋಲೀಸ್ ಸ್ಟೇಷನ್‌ನ ಸಬ್ ಇನ್‌ಸ್ಪೆಕ್ಟರ್, ಇದೇ ಸುಬ್ಬಣ್ಣ ಎಂಬುವವರು, ಆ ಯೂನಿಯನ್ ಸೆಕ್ರೆಟರಿ ರಾಮಕೃಷ್ಣ ಎಂಬುವವರನ್ನು ಹಿಡಿದುಕೊಂಡು ಹೋಗಿ, ಪೋಲೀಸ್ ಸ್ಟೇಷನ್ ಒಳಗಡೆ ಕರೆದುಕೊಂಡು ಹೋಗಿ, ಪೋಲೀಸ್ ಲಾಕಪ್‌ನಲ್ಲಿ ರಾತ್ರಿಯೆಲ್ಲಾ ಚೈನ್ ಹಾಕಿ, ಕೈಗೆ ಕಾಲಿಗೆ ಬೇಡಿ ಹಾಕಿ ಇಟ್ಟಿದ್ದಾರೆ. ರಾತ್ರಿ ಒಂದು ಗಂಟೆಗೆ ಬಂದು ಹೊಡೆದಿದ್ದಾರೆ. ಚಿತ್ರಹಿಂಸೆ ಕೊಟ್ಟಿದ್ದಾರೆ. ಬೇಡಿ ಹಾಕಿ ಮೆಜೆಸ್ಟಿಕ್ ಕರೆದುಕೊಂಡು ಹೋಗಿ ಕೋರ್ಟಿಗೆ ಹೋಗಿದ್ದಾರೆ. ಕೋರ್ಟಿಗೆ ಹೋಗುವಾಗ ಬೇಡಿ ಹಾಕಕೂಡದು ಎಂದು ಸುಪ್ರೀ ಕೋರ್ಟ್ ತೀರ್ಮಾನ ಇದೆ. ಅದನ್ನು ಇವರು ವಯಲೇಟ್ ಮಾಡುತ್ತಿದ್ದಾರೆ, ಇವರು ಮಾಲೀಕರ ಪರವಾಗಿ ಇದ್ದಾರೆ. ರೆಕ್ರೂಟಿಂಗ್ ಏಜೆಂಟ್ ಆಗಿದ್ದಾರೆ. ಆದರೆ ಅವನನ್ನು ತಾವು ಏನು ಮಾಡಿಲ್ಲ. ಅವನನ್ನು ಕಿತ್ತು ಹಾಕಿ, ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಿ, ತಾವು ಯಾರನ್ನು ಟಾರ್ಚರ್ ಮಾಡಿದರೂ ಅದನ್ನು ಒಪ್ಪುವುದಿಲ್ಲ,

ಆ ರೀತಿ ತಮ್ಮ ಮನೋಭಾವನೆ ಇದೆ, ಅವರೂ ಮಾಡಿದ್ದಾರೆ ಎಂದು ತಾವು ಹೇಳಿದಿರಿ, ಇದು ಯಾವಾಗ ಆಯಿತೋ ನನಗೆ ಗೊತ್ತಿಲ್ಲ. ಅವರೂ ಮಾಡಿದ್ದಾರೆ, ಇವರೂ ಮಾಡಿದ್ದಾರೆ ಎಂದು ಹೇಳಿದಿರಿ, ಇದು ಯಾವಾಗ ಆಯಿತೋ ಗೊತ್ತಿಲ್ಲ, ಅವರೂ ಬೇಜಾರುಪಟ್ಟುಕೊಂಡು ಮಾಡಿರಬಹುದು, ಅವರ ವಯಲೆನ್ಸ್ ನಾನು ಅಕ್ಸೆಪ್ಟ್ ಮಾಡಿಕೊಳ್ಳುತ್ತೇನೆ ಎಂದು ಅಲ್ಲ.

ಇವರು ಇನ್ನೊಂದು ಮಾಡಿದ್ದಾರೆ ಅಧ್ಯಕ್ಷರೇ, ಅಲ್ಲಿ ೨೦೦–೩೦೦ ಜನ ವರ್ಕರ್ಸ್ ಇದ್ದಾರೆ, ಅಲ್ಲಿ ಕನ್ನಡದವರೂ ಇದ್ದಾರೆ, ತಮಿಳಿನವರೂ ಇದ್ದಾರೆ, ಇದಕ್ಕೆ ಏತಕ್ಕೆ ಆ ಸಬ್ ಇನ್‌ಸ್ಪೆಕ್ಟರ್ ಬೆಂಬಲ ಕೊಡಬೇಕು ? ೪೦ ಜನ ತಮಿಳ್ ವರ್ಕರ್ಸ್‌ನ್ನು ಐಸೋಲೇಟ್ ಮಾಡಿ ವ್ಯಾನ್‌ನಲ್ಲಿ ಕರೆದುಕೊಂಡು ಹೋಗಿ ಒಳಕ್ಕೆ ಬಿಡುತ್ತಿದ್ದಾರೆ. ಮಾಲೀಕರ ಪರವಾಗಿ ಈ ಕೆಲಸವನ್ನು ಇವರು ಮಾಡುತ್ತಿದ್ದಾರೆ, ಇದನ್ನು ಇವರು ಏತಕ್ಕೆ ಮಾಡಬೇಕು ? ಇದು ಬಹಳ ಅವಮಾನಕರವಾದುದು ಮತ್ತು ಬಹಳ ಹೀನಾಯವಾದುದು ಎಂದು ನಾನು ಹೇಳುತ್ತೇನೆ. ಈ ಮನೋಭಾವನೆ ಬಿಟ್ಟುಬಿಡಿ, ಇದು ಬೇಡ. ೧೯೮೩ರಲ್ಲಿ ಲೇಬರ್ ಮಿನಿಸ್ಟರ್ ಆಗಿದ್ದಂಥವರು ಒಂದು ಒಳ್ಳೆಯ ಮಾತನ್ನು ಇಲ್ಲಿ ಹೇಳಿದ್ದರು. ಆಗ ಲೇಬರ್ ಮಿನಿಸ್ಟರ್ ಆಗಿ ಯಾರಿದ್ದರೋ ಗೊತ್ತಿಲ್ಲ. ಅವರು ಏನು ಹೇಳಿದ್ದರು ಎಂದರೆ, ಕಾರ್ಮಿಕ ವಿವಾದಗಳು ಬಂದು ಪೋಲೀಸರು ಮಧ್ಯೆ ಪ್ರವೇಶ ಮಾಡುವುದಿಲ್ಲ. ಲಾ ಅಂಡ್ ಆರ್ಡರ್ ಪ್ರಾಬ್ಲಂ ಇದ್ದರೆ ಮಾತ್ರ ಬರುತ್ತಾರೆ ಎಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಕಾರ್ಮಿಕ ವಿವಾದಗಳು ಬಂದಾಗ ಹೆಚ್ಚು ಕಂಪ್ಯಾಷನ್ ಕಾರ್ಮಿಕರ ಕಡೆ ಇರುತ್ತದೆ, ಮಾಲೀಕರ ಕಡೆ ಇರುವುದಿಲ್ಲ, ಮಾಲೀಕರು ಏನಾದರೂ ಕಾನೂನನ್ನು ವಯಲೇಟ್ ಮಾಡಿದರೆ, ಅದಕ್ಕೆ ಯಾವ ರೀತಿಯಲ್ಲೂ ಸಹಕಾರ ಕೊಡುವುದಿಲ್ಲ ಎಂದು ಹೇಳಿದ್ದರು. ಅದನ್ನು ಫಾಲೋ ಮಾಡಿ. ಅದನ್ನು ಫಾಲೋ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತನ್ನು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೇ. ಈ ಜನರಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡ್ಸ್ ಬಗ್ಗೆ ಡಿಸ್ಕಸ್ ಮಾಡುವಾಗ ಕೆಲವು ಬೇಸಿಕ್ ಕೊಶ್ಚನ್ಸ್‌ನ್ನು ನಾವು ರೈಸ್ ಮಾಡಬೇಕಾಗುತ್ತದೆ. ಅದರಲ್ಲಿ ಮುಖ್ಯವಾಗಿ ನಮ್ಮ ಆಡಳಿತದ ವೈಖರಿ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ನಾನು ಇಲ್ಲಿ ಜನರಲ್ ಆಗಿ ಎಲ್ಲರೂ ಕರಪ್ಟ್, ಎಲ್ಲರೂ ಇನ್‌ಎಫಿಷಿಯಂಟ್ ಎಂದು ಹೇಳುವುದಿಲ್ಲ. ಅನೇಕರ ಬಗ್ಗೆ ನನಗೆ ಗೌರವ ಇದೆ, ಆದರೆ ಜಾಸ್ತಿ ಏನಾಗುತ್ತಿದೆ ಎಂದರೆ ಕೆಲವು ಐ ಎ.ಎಸ್ ಆಫೀಸರ್ಸ್ ಆಗಲೀ, ಕೆ.ಎ.ಎಸ್ ಆಫೀಸರ್ಸ್ ಆಗಲಿ, ನಮ್ಮ ಜನತೆಯ ಬಗ್ಗೆ, ನಮ್ಮ ರಾಜ್ಯದ ಬಗ್ಗೆ ಮಾನವೀಯವಾದ ದೃಷ್ಟಿಯನ್ನು ಇಟ್ಟುಕೊಂಡಿಲ್ಲ. ಇವರು ಏನು ತಿಳಿದುಕೊಂಡಿದ್ದಾರೆ ಎಂದರೆ, ನಾವೇ ಸರ್ವಜ್ಞರು, ನಾವು ಹೇಳಿದ್ದೇ ಕಾನೂನು, ನಾನು ತಪ್ಪಿತಸ್ಥನಾದರೂ ಕೂಡಾ ನನ್ನ ಮೇಲ್ಪಟ್ಟು ಒಬ್ಬ ಐ.ಎ.ಎಸ್. ಅಧಿಕಾರಿಯೇ ಇರುತ್ತಾನೆ. ಅವನು ನಮ್ಮನ್ನು ಕಾಪಾಡುತ್ತಾನೆ ಎಂಬ ಮನೋಭಾವನೆಯನ್ನು ಈ ಅಧಿಕಾರಿಗಳು ಇಟ್ಟುಕೊಂಡಿದ್ದಾರೆ.

(ಮಾನ್ಯ ಶ್ರೀ ವೈ. ಕೆ. ರಾಮಯ್ಯ ಅವರು ಅಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ನಿಜವಾಗಲೂ ಕೂಡಾ ಸರಕಾರಕ್ಕೆ ಇವರ ಮೇಲೆ ಕಂಟ್ರೋಲ್ ಇಲ್ಲ. ಈ ಬ್ಯೂರಾಕ್ರಸಿ ಮೇಲೆ ಈ ಸರಕಾರಕ್ಕೆ ಪೂರ್ತಿ ಕಂಟ್ರೋಲ್ ತಪ್ಪಿಹೋಗಿದೆ. ಶ್ರೀಮಾನ್ ಗುಂಡೂರಾಯರ ಕಾಲದಲ್ಲಿ ಫೈಲ್ ಕ್ಲಿಯರೆನ್ಸ್ ಎಂದು ಇತ್ತು. ಕೆಲವು ಭ್ರಷ್ಟ ಆಫೀಸರ್ಸ್‌ನ್ನು ಹಿಡಿದು ಕೇಸ್ ಹಾಕಿದ್ದರು. ನಮ್ಮ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಅದೂ ಬಿಟ್ಟುಹೋಗಿದೆ. ಆದುದರಿಂದ ಜಿಲ್ಲಾ ಮಟ್ಟದಲ್ಲಿ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ. ಆಗಲೇ ತಾವು ಹೇಳಿದಿರಿ, ಲಂಚ ಎಲ್ಲಿ ಇಲ್ಲ, ವೆಸ್ಟ್ ಬೆಂಗಾಲದಲ್ಲಿ ಇಲ್ಲವೇ ಎಂದು ಕೇಳಿದಿರಿ. ಎಲ್ಲಾ ಕಡೆ ಇದೆ, ಆದರೆ ಇದೇ ನ್ಯಾಷನಲ್ ಫೆನಾಮಿನಾ ಆಗಿ, ದುರಾದೃಷ್ಟವಶಾತ್ ಹೀಗೆಯೇ ಕಂಟಿನ್ಯೂ ಆದರೆ ನಾವು ನಿಜವಾಗಲೂ ಎಲ್ಲಿಗೆ ಹೋಗುತ್ತಿದ್ದೇವೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

೧೧-೩೦ ಎ.ಎಂ.

ಇವರು ಒಂದು ಗ್ರೇಡ್‌ಗೆ ಬಂದಿದ್ದಾರೆ. ಇದನ್ನು ತಾವು ಗಮನಿಸಬೇಕು. ನಮ್ಮ ಮಾನ್ಯ ಸದಸ್ಯರಾದಂಥ ಹಾಗೂ ಗೆಳೆಯರಾದಂಥ ಶ್ರೀರಂಗದೇವರಾಯಲು ಒಂದು ಪತ್ರವನ್ನು ಗಂಗಾವತಿಯ ಬಿ.ಡಿ.ಒ.ಗೆ ಬರೆದರು. ಅವರು ತಮ್ಮ ಪತ್ರದಲ್ಲಿ ಏನು ಬರೆದಿದ್ದಾರೆಂದರೆ ಮಾನ್ಯರೇ, ಎ.ಸಿ.ಯವರು ನನಗೆ ತಿಳಿಸಿದ ಪ್ರಕಾರ ಐ ಆರ್.ಡಿ.ಪಿ ಯೋಜನೆಯಲ್ಲಿ ನರಸಾಪುರ ವೆಟ್ಟನಕಲ್ಲು ಎತ್ತಿನಟ್ಟಿ, ಮುನ್ನಟ್ಟಿ ರಾಮದುರ್ಗ ಇವುಗಳನ್ನು ಸೇರಿಸಿಕೊಳ್ಳಲು ನಾನು ತಿಳಿಸಿದ್ದೆ ಆದರೆ ಆ ಕೆಲಸ ಇನ್ನೂ ಆಗಿಲ್ಲ. ಆದ್ದರಿಂದ ನನಗೆ ಬಹಳ ನೋವಾಗಿದೆ. ತಾವೇತಕ್ಕೆ ಆ ಗ್ರಾಮಗಳನ್ನು ಸೇರಿಸಿಕೊಳ್ಳಲಿಲ್ಲವೋ ನನಗೆ ಅರ್ಥವಾಗುತ್ತಿಲ್ಲ. ನಾನು ಮೀಟಿಂಗ್‌ಗೆ ಬಂದಿದ್ದಾಗ ಆ ಮೀಟಿಂಗ್‌ನಲ್ಲಿ ಜನತಾ ಮನೆಗಳಿಗೆ ಭಾಗ್ಯಜ್ಯೋತಿ ಸ್ಕೀಮ್‌ನಲ್ಲಿ ಕರೆಂಟ್ ಕೊಡಬೇಕೆಂದು ಹೇಳಿದ್ದೆ. ಆದರೆ ತಾವು ರಾಜಕೀಯ ಮಾಡುತ್ತಿದ್ದೀರಿ. ನಾವು ಮೀಟಿಂಗ್‌ಗೆ ಬಂದು ಹೇಳಿದರೂ ಏನು ಪ್ರಯೋಜನವಿಲ್ಲ. That fellow has the audacity to write this letter. ಎಂದು ಅವರು ಪತ್ರ ಬರೆದಿದ್ದಾರೆ. ಆದರೆ ಆ ಪತ್ರಕ್ಕೆ ಉತ್ತರವಾಗಿ ಅಲ್ಲಿನ ಬಿ.ಡಿ.ಒ. ಏನು ಬರೆದಿದ್ದಾರೆಂದರೆ ತಿರುಗಿ ಕಳುಹಿಸಲಾಗಿದೆ, ಬರೆಯುವುದನ್ನು ತಾವು ರೂಢಿಸಿಕೊಳ್ಳಿ ಎಂದು ಬರೆದು ಸೀಲು ಹಾಕಿ ಸಹಿ ಮಾಡಿ ಕಳುಹಿಸಿಕೊಟ್ಟಿದ್ದಾನೆ. ಆದರೆ ನಮ್ಮ ಶಾಸಕ ಮಿತ್ರರು ಪತ್ರ ಬರೆಯುವಾಗ ಮಾನ್ಯರೇ ಎಂದು ಪದ ಪ್ರಯೋಗ ಮಾಡಿದ್ದಾರೆ. ಆ ಸೌಜನ್ಯ ಕೂಡ ಆ ಅಧಿಕಾರಿ ತೋರಿಸಲಿಲ್ಲ. ಶಾಸಕರು ಬರೆದ ಪತ್ರದ ಮೇಲೆ ಈ ರೀತಿ ಆ ಅಧಿಕಾರಿ ಬರೆಯಬೇಕಾದರೆ ಅವನಿಗೆ ಇನ್ನೆಷ್ಟು ಗರ್ವವಿರಬೇಕು ! ಇಂತಹ ಅಧಿಕಾರಿಗಳು ಇದ್ದರೆ ಎಂ.ಎಲ್.ಎ.ಗಳು ಏನು ಮಾಡಬೇಕು ?

ಶ್ರೀ ಪಂಪಾಪತಿ.—ಆ ಅಧಿಕಾರಿಯನ್ನು ತಕ್ಷಣ ಸಸ್ಪೆಂಡ್ ಮಾಡುವುದಕ್ಕೆ ಅಧ್ಯಕ್ಷರೇ ತಾವೇ ಹೇಳಬೇಕು.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಅಂತಹ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಿರಲಿ ಅವರನ್ನು ಡಿಸ್‌ಮಿಸ್ ಮಾಡಬೇಕು.

ಶ್ರೀ ಪಂಪಾಪತಿ.—ಶಾಸಕರ ಪತ್ರಕ್ಕೆ, ಶಾಸಕರಿಗೆ ಗೌರವ ಕೊಡದಿರುವ ಅಧಿಕಾರಿಯನ್ನು ಏತಕೆ ತಾವಿಟ್ಟುಕೊಂಡಿರಬೇಕು ?

ಶ್ರೀ ಪಟ್ಟಮಕ್ಕಿ ರತ್ನಾಕರ್.— ಮಾನ್ಯ ಅಧ್ಯಕ್ಷರೇ ಇದು ಬಹಳ ಗಂಭೀರವಾದುದು. ಸರ್ಕಾರದವರು ದಯಮಾಡಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲೇಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಈ ಪತ್ರವನ್ನು ನಾನು ಮಾನ್ಯ ಗೃಹ ಸಚಿವರಿಗೆ ಕಳುಹಿಸಿ ಕೊಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ವಿಷಯವನ್ನು ಸನ್ಮಾನ್ಯ ಹಿರಿಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ.......

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆ ಅಧಿಕಾರಿಗೆ ಸರ್ಕಾರದ ಇನ್‌ಫ್ಲೂಯೆನ್ಸ್ ಇರಬೇಕು.

ಶ್ರೀ ಪಂಪಾಪತಿ.—ಸರ್ಕಾರ ಆ ಅಧಿಕಾರಿಯನ್ನು ತಕ್ಷಣ ಸಸ್ಪೆಂಡ್ ಮಾಡಬೇಕು. ಶಾಸಕರಿಗೆ ಗೌರವ ಕೊಡದಿದ್ದ ಮೇಲೆ ಮಂತ್ರಿಗಳಿಗೆ ಗೌರವ ಕೊಡುತ್ತಾರೇನು ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿರುವಂತಹ ವಿಚಾರಗಳನ್ನು ನಾನು ಇಲ್ಲಿ ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಆ ಪತ್ರವನ್ನು ಸಂಪೂರ್ಣವಾಗಿ ಓದಿ ಹೇಳಿದ್ದಾರೆ. ಆ ಪತ್ರದ ಮೇಲೆ ಬಿ. ಡಿ. ಒ. ಏನು ಬರೆದಿದ್ದಾರೆಂದು ಸಹ ಹೇಳಿದ್ದಾರೆ. ಇದರಿಂದ ಆ ಶಾಸಕರಿಗೆ ಎಷ್ಟು ಆ ಗೌರವ ತೋರಿಸಿದ್ದಾರೆ, ಎಷ್ಟು ಅವಮಾನ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರು ತಿಳಿದುಕೊಳ್ಳುವುದು ಬಹಳ ಮುಖ್ಯವಾದಂಥ ವಿಚಾರ. ಅದು ಬಿಟ್ಟು ಬರೆದು ಕೊಳ್ಳುತ್ತಿದ್ದೇನೆಂದು ಹೇಳು ವುದು ಸರಿಯಲ್ಲ: ತಾವಿಲ್ಲಿ ಯಾರ ಹಣೆಬರಹ ಬರೆಯುತ್ತಿದ್ದೀರಿ ಒಬ್ಬ ಶಾಸಕರ ಬಗ್ಗೆ ಒಬ್ಬ ಅಧಿಕಾರಿ ತೋರಿಸಿರುವ ಗೌರವದ ಪ್ರಶ್ನೆ ಇಲ್ಲಿದೆ, ಆದರೂ ಸಹ ತಾವಿಲ್ಲಿ

ಯಾರ ಹಣೆಬರಹ ಬರೆದುಕೊಳ್ಳುತ್ತಿದ್ದೀರಿ ? ತಾವು ಏತಕ್ಕೆ ಬರೆದುಕೊಳ್ಳಬೇಕು, ಒಬ್ಬ ಹಿರಿಯ ಶಾಸಕರು ಆ ಪತ್ರವನ್ನು ಓದಿ ಹೇಳಿದ್ದಾರೆ. ಇವತ್ತು ಸಂಜೆವೇಳೆಗಾದರೂ ಆ ಬಗ್ಗೆ ಸರ್ಕಾರ ಉತ್ತರ ತರಿಸಿ ಈ ಸದನಕ್ಕೆ ತಿಳಿಸಬೇಕು. ಆ ಅಧಿಕಾರಿಯ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕು. Can we call it an insense Government or this Government has no nerve ? when such type of letter was written by an Officer, you should take immediate action to suspend him.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ತಮಗೆ ಗೊತ್ತಿದೆ, ಆ ಅಧಿಕಾರಿ ಒಬ್ಬ ಶಾಸಕರಿಗೆ ಸರಿಯಾಗಿ ಬರೆಯುವುದನ್ನು ರೂಢಿಸಿಕೊಳ್ಳಿ ಎಂದು ಹೇಳುವುದು ಸೌಜನ್ಯವೇ ? ಸಾಮಾನ್ಯವಾಗಿ ಆ ಶಾಸಕರು ತಮ್ಮ ಕೆಲಸ ಏನಾದರೂ ಮಾಡಿಸಿಕೊಳ್ಳಬೇಕಾದರೆ ಎಷ್ಟು ಸೌಜನ್ಯದಿಂದ ವರ್ತನೆ ಮಾಡುತ್ತಾರೆಂದು ಮತ್ತು ಅವರ ಬಗ್ಗೆ ಇದುವರೆವಿಗೂ ಯಾವ ದೂರು ಸಹ ಇಲ್ಲ. ಆ ಕ್ಷೇತ್ರದಿಂದ ಅವರ ತಂದೆ, ಅವರ ತಾತನವರು ಗೆದ್ದು ಬರುತ್ತಿದ್ದಾರೆ. ಅಂತಹ ಒಬ್ಬ ಶಾಸಕರಿಗೆ ಈ ರೀತಿ ಉತ್ತರ ಬರೆದರೆ ಹೇಗೆ ?

ಶ್ರೀ ಪಂಪಾವತಿ.—ಮೊದಲು ತಾವು ಆ ಅಧಿಕಾರಿಯನ್ನು ಸಸ್‌ಪೆಂಡ್ ಮಾಡಿ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ತಾವು ಈ ಬಗ್ಗೆ ವರದಿಯನ್ನು ತರಿಸಿಕೊಳ್ಳಿ. ಇಲ್ಲದಿದ್ದರೆ ಶಾಸಕರಿಗೆ ಮರ್ಯಾದೆ ಇರುವುದಿಲ್ಲ. ಅವರು ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ನಮಗೆ ಆಗಿರಬಹುದು. ನಾಳೆ ನಿಮಗೆ ಆಗಬಹುದು. ಒಬ್ಬಶಾಸಕರು ಬಿ. ಡಿ. ಒ, ಗೆ ಪತ್ರ ಬರೆದು ಐ, ಆರ್. ಡಿ, ಪಿ. ಯೋಜನೆ ಮೂಲಕ ಸ್ವಲ್ಪ ಕೆಲಸ ಮಾಡಿ ಕೊಡಿ ಎಂದು ಪ್ಲಬಿಕ್ ಗ್ರಿವೆನ್ಸ್ ಹೇಳಿಕೊಂಡರೆ ಅವರು ಈ ರೀತಿ ವರ್ತನೆ ಮಾಡಿರುವುದು ಸರಿಯಲ್ಲ, ಅವರು ಯಾವ ರೀತಿ ಕೆಲಸ ಮಾಡುತ್ತಾರೆಂದು ಇದರಿಂದ ಗೊತ್ತಾಗುತ್ತದೆ. ನನಗನಿಸಿದ ಪ್ರಕಾರ ಗಂಗಾವತಿಯಲ್ಲಿ ಅವರ ಹಿಂದೆ ಪ್ರಭಾವಿ ವ್ಯಕ್ತಿಯ ಬೆಂಬಲ ಇರಬೇಕು. ಇಲ್ಲದಿದ್ದರೆ ಈ ರೀತಿ ವರ್ತನೆ ಮಾಡುವುದಕ್ಕಾಗುತ್ತಿರಲಿಲ್ಲ. ಯಾರಾದರೂ ಒಬ್ಬರ ಮಂತ್ರಿಯವರ ಬೆಂಬಲ ಈ ಅಧಿಕಾರಿಗೆ ಇದೆ ಎಂದು ಹೇಳಬೇಕಾಗುತ್ತದೆ,

ಶ್ರೀ ಕೆ. ಹೆಚ್, ಶ್ರೀನಿವಾಸ್.—ಪ್ರಭಾವಿ ವ್ಯಕ್ತಿ ಈ ಅಧಿಕಾರಿಯ ಹಿಂದೆ ಇರದಿದ್ದರೆ ಈ ರೀತಿ ಬೇಜವಾಬ್ದಾರಿಯಾಗಿ ಬರೆಯುತ್ತಿರಲಿಲ್ಲ. ನೀವು ಹೀಗೇ ಬರೆದುಕೊಂಡು ಏನು ಹರಿಯುತ್ತೀರೋ ನೋಡೋಣ ಎಂದು ಆ ಅಧಿಕಾರಿ ಬರೆದಿರಬಹುದು. ಇದರಿಂದ ಸರ್ಕಾರಕ್ಕೆ ಮರ್ಯಾದೆ ಬರಬೇಕೆಂದು ಆ ಅಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು,

(ಗೊಂದಲ)

ಶ್ರೀ ಶ್ರೀರಂಗದೇವರಾಯಲು,—ನಾನು ಬಿ. ಡಿ, ಓ. ಅವರಿಗೆ ಏನಾದರೂ ಕೆಲಸ ಹೇಳಿದರೆ ಮಾಡುವುದಿಲ್ಲ. ನಾನು ಎಂ. ಎಲ್. ಎ. ಆಗಿ ಕೆಲಸಗಳನ್ನು ಸಾರ್ವಜನಿಕರಿಗೆ ಮಾಡಿಸಬೇಕಾಗಿರುತ್ತದೆ ಸಾರ್ವಜನಿಕರ ಕೆಲಸವನ್ನು ಮಾಡಿಸುವುದಕ್ಕೆ ಬಿ, ಡಿ. ಓ. ಅವರಿಗೆ ಏನಾದರೂ ಹೇಳಿದರೆ ಅವರು ಕೆಲಸವನ್ನೇ ಮಾಡುವುದಿಲ್ಲ, ಈ ಬಿ. ಡಿ. ಓ. ಅವರು ಒಂದು ಪೈಸೆಯಷ್ಟು ಕೆಲಸವನ್ನು ಮಾಡುತ್ತಿಲ್ಲ ಹಾಗೂ ಶಾಸಕರಿಗೆ ಒಂದು ಪೈಸೆಯಷ್ಟು ಮರ್ಯಾದೆಯನ್ನು ಕೊಡುವುದಿಲ್ಲ. ಡಿ. ಸಿ. ಯವರು, ಏನಾದರೂ ಕೆಲಸ ಇದ್ದರೆ ನನ್ನ ಹತ್ತಿರ ಬಂದು ಹೇಳಿ ಮಾಡಿಸಿಕೊಂಡು ಹೋಗಿ ಎಂದು ಹೇಳಿದ್ದಾರೆ. ಎಂ. ಎಲ್. ಎ. ಆಗಿ ನನಗೆ ಮರ್ಯಾದೆ ಕೊಡಬಿಲ್ಲ ಎಂದರೆ ಹೇಗೆ ? ಇದನ್ನು ನಾನು ಬಹಳ ನೋವಿನಿಂದ ಮಾತನಾಡುತ್ತಿದ್ದೇನೆ ಆದ್ದರಿಂದ, ದಯಮಾಡಿ ಈ ಬಿ. ಡಿ. ಒ. ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕು ಆ್ಯಕ್ಷನ್ ತೆಗೆದುಕೊಂಡರೆ ನನ್ನ ಮನಸ್ಸಿಗೆ ಸಮಾಧಾನವಾಗುತ್ತದೆ.

ಶ್ರೀ ಜಿ. ಬಸವಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಿ. ಡಿ. ಒ. ವರ್ತನೆ ಬಗ್ಗೆ ಹೇಳಿರುವುದನ್ನು ನಾನು ನೋಟ್ ಮಾಡಿಕೊಂಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳವರೆಗೆ ಈ ವಿಷಯದ ಬಗ್ಗೆ ಗಮನಕ್ಕೆ ತರುತ್ತೇನೆ. ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಇದರ ಬಗ್ಗೆ ಹೇಳುತ್ತಾರೆ.

ಶ್ರೀ ಪಟವಾಕ್ಕಿ ರತ್ನಾಕರ.—ಸಂಬಂಧಪಟ್ಟ ಡಿ. ಸಿ. ಯವರನ್ನು ಕಾಂಟ್ಯಾಕ್ಟ್ ಮಾಡಿ, ಆ ಬಿ. ಡಿ. ಒ. ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಡಬೇಕು, ಇದು ಸದನದ ಗೌರವದ ಪ್ರಶ್ನೆ ಇದಾಗಿದೆ.

ಶ್ರೀ ಜಿ. ಬಸವಣ್ಣಪ್ಪ.—ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾಳೆ ಮುಖ್ಯ ಮಂತ್ರಿಗಳವರು ಈ ವಿಷಯದ ಬಗ್ಗೆ ಉತ್ತರ ಹೇಳುವಾಗ ಹೇಳಬಹುದಾಗಿತ್ತು. ಆದರೆ ಮಾನ್ಯ ಸದಸ್ಯರು ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿಬಿಟ್ಟಿದ್ದಾರೆ. ಆದ್ದರಿಂದ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಇವೊತ್ತೇ ಹೇಳಬೇಕು. ನಾಳೆ ಪತ್ರಿಕೆಗಳಲ್ಲಿ ಈ ವಿಷಯ ಬರುತ್ತದೆ. ಎಂ. ಎಲ್. ಎ. ಗಳಿಗೆ ಅಧಿಕಾರಿಗಳು ಈ ರೀತಿ ಉತ್ತರ ಬರೆದರೆ ಸಾರ್ವಜನಿಕರಲ್ಲಿ ಎಂ. ಎಲ್. ಎ ಗಳ ಮೇಲೆ ಯಾವ ರೀತಿ ರಿಫ್ಲೆಕ್ಷನ್ ಬರುತ್ತದೆ ? ಇಲ್ಲೇ ಚೀಫ್ ಸೆಕ್ರೆಟರಿಯವರು ಇದ್ದಾರೆ, ಎಲ್ಲಾ ಅಧಿಕಾರಿಗಳು ಇದ್ದಾರೆ. ಇಟ್ ವಿಲ್ ಗೋ ಆನ್ ರೆಕಾರ್ಡ್ ಸಾರ್ವಜನಿಕರಲ್ಲಿ ಒಂದು ತುಚ್ಛ ಭಾವನೆ ಜನತಾ ಪ್ರತಿನಿಧಿಗಳ ಮೇಲೆ ಬರುತ್ತದೆ. ಈ ಸದನದ ಸದಸ್ಯರಿಗೆ ಗೌರವ ಸಿಗದಿದ್ದರೆ ಸಾಮಾನ್ಯ ಜನರಿಗೆ ಗೌರವ ಎಲ್ಲಿ ಸಿಗುತ್ತದೆ ?

ಶ್ರೀ ವೇದಾಂತ ಹೆಮ್ಮಿಗೆ.—ಬಿ. ಡಿ. ಒ. ಗಳು ಶಾಸಕರುಗಳ ಜೊತೆ ಸರಿಯಾದ ರೀತಿ ವರ್ತನೆ ಮಾಡುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಸಾಮಾನ್ಯವಾಗಿ ಆಡಳಿತಾತ್ಮಕವಾಗಿ ಚರ್ಚೆ ಮಾಡಿದ ಸಂದರ್ಭದಲ್ಲಿ ಈ ವಿಷಯ ಬಂದಿದ್ದರೆ, ಮುಖ್ಯ ಮಂತ್ರಿಗಳು ನಾಳೆ ಕೊಡುವ ಉತ್ತರದಲ್ಲಿ ಹೇಳಬಹುದಾಗಿತ್ತು. ಆದರೆ, ಸದಸ್ಯರು ಇದನ್ನು ಪ್ರಸ್ತಾಪ ಮಾಡಿಬಿಟ್ಟಿದ್ದಾರೆ. ಪ್ರಸ್ತಾಪ ಮಾಡಿದ ಮೇಲೆ ಇಟ್ ವಿಲ್ ಗೋ ಆನ್ ರೆಕಾರ್ಡ್. ಮತ್ತು ಪತ್ರಿಕೆಗಳಲ್ಲೂ ಇದರ ಬಗ್ಗೆ ಬರುತ್ತದೆ. ಈ ಸಂಜೆಯ ಒಳಗೆ ವರದಿಯನ್ನು ತರಿಸಿ ಸದನಕ್ಕೆ ಹೇಳಿ ಆ್ಯಕ್ಷನ್ ತೆಗೆದುಕೊಳ್ಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ಕಳಕಳಿ ಏನೆಂದರೆ ಈ ರೀತಿ ಎಂಎಲ್ಎಗಳಿಗೇ ಆದರೆ ನಾವು ಕೆಲಸ ಮಾಡುವುದು ಹೇಗೆ? ಹೇಗೋ ಸದಸ್ಯರು ಆ ಲೆಟರನ್ನು ಸಭೆಯ ಗಮನಕ್ಕೆ ತಂದಿದ್ದಾರೆ ಮಂತ್ರಿಗಳು ಆ ಬಗ್ಗೆ ಮುಖ್ಯ ಮಂತ್ರಿಗಳ ಗಮನಕ್ಕೂ ತರಲಿ, ಒಟ್ಟಿನಲ್ಲಿ ಇಮ್ಮಿಡಿಯೇಟಾಗಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವೀರಣ್ಣ (ಸಾರಿಗೆ ಸಚಿವರು).—ಅಧ್ಯಕ್ಷರೇ, ಶ್ರೀನಿವಾಸ್‌ರವರು ಮಾತನಾಡುವಾಗ ಹರಿದುಕೊಳ್ತಾರೆ ಎಂಬ ಪದ ಬಳಸಿದರು ದಯವಿಟ್ಟು ಅದನ್ನು ಡಿಲೀಟ್ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದೇನೂ ಅನ್‌ಪಾರ್ಲಿಮೆಂಟರಿ ಅಲ್ಲ. ಅಲ್ಲದೆ ನೀವು ತಿಳಿದುಕೊಂಡ ಅರ್ಥ ನಮ್ಮ ಕಡೆಯಲ್ಲಿ ಅದಕ್ಕಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಅಧ್ಯಕ್ಷರೇ, ಉತ್ತರವನ್ನು ಇವತ್ತು ಸಂಜೆಯೊಳಗೆ ಕೊಡುವುದಕ್ಕೆ ಆಗುವುದಿಲ್ಲ, ನಾಳೆ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆಗಬಹುದು.

ಶ್ರೀ ಆರ್ ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಾನು ಅಧಿಕಾರಿಗಳ ಮನೋಭಾವನೆ ಏನಿದೆ ಅವನ್ನು ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಒಬ್ಬ ಎಂಎಲ್ಎಗೇ ಆ ರೀತಿ ಮನೋಭಾವ ಸೂಚಿಸುವ ಪರಿಸ್ಥಿತಿ ಬಂದರೆ ನಮ್ಮ ಪರಿಸ್ಥಿತಿ ಏನಾಗುತ್ತದೆ ಎಂದು ಯೋಚನೆ ಮಾಡಬೇಕಾಗುತ್ತದೆ.

ಐಎಎಸ್ ಮತ್ತು ಕೆಎಎಸ್ ಆಫೀಸರ್‌ಗಳು ಎಫಿಶಿಯೆಂಟ್ ಇರಬಹುದು. ಅದಕ್ಕಾಗಿಯೇ ನಾವು ನೂರಕ್ಕೆ ನಲವತ್ತರಷ್ಟು ಆದಾಯದ ಸಂಬಳ ಕೊಟ್ಟು ಅವರನ್ನು ಕೂಡಿಸಿದ್ದೇವೆ. ಮಾನ್ಯ ಬಣಕಾರ್ ಅವರು ಇದರ ಬಗ್ಗೆ ಡಿಟೇಲ್ಸ್ ಕೊಟ್ಟಿದ್ದಾರೆ. ಅದರಲ್ಲಿ ಪೇಜ್ ೭೧ರಲ್ಲಿ ಸರ್ಕಾರಿ ನೌಕರರ ಸಂಬಳ, ಕೂಲಿ, ಪ್ರವಾಸ ಭತ್ಯೆ ವಿವರಗಳೆಲ್ಲ ಕೊಟ್ಟಿದ್ದಾರೆ. ಇದಕ್ಕೆಲ್ಲಾ ನಮ್ಮ ಬಜೆಟ್‌ನಲ್ಲಿ ಒಟ್ಟು ೪೦ರಷ್ಟು ಖರ್ಚಾಗುತ್ತದೆ. ಉದ್ದೇಶವೇನೆಂದರೆ ಇವರು ಜನರ ಸೇವಕರಾಗಬೇಕೇ ಹೊರತು ಊಳಿಗದ

ವರಾಗಬೇಕೆಂದು ಅಲ್ಲ. ಅವರಿಗೆ ಬೇಕಾದಷ್ಟು ಸಂಬಳ ಕೊಡುತ್ತೇವೆ, ಕೊಡುವುದನ್ನು ನಾನೂ ಕೂಡ ಅನುಮೋದಿಸುತ್ತೇನೆ. ಅದರ ಬಗ್ಗೆ ಎರಡಭಿಪ್ರಾಯ ಇಲ್ಲ. ಆದರೆ ಲಂಚಾವತಾರ ಏನು ತಾಂಡವವಾಡುತ್ತಿದೆ ಅದು ನಿಲ್ಲಬೇಕು. ನಮ್ಮ ಚೀಫ್ ಸೆಕ್ರೆಟರಿ ಒಳ್ಳೆಯವರಿರಬಹುದು, ಆದರೆ ಕೆಳಗಿನ ಆಫೀಸರ್‌ಗಳನ್ನು ಅವರು ಕಂಟ್ರೋಲ್ ಮಾಡದಿದ್ದರೆ ಆಗುವುದಿಲ್ಲ. ಪ್ರತಿಯೊಬ್ಬ ಭ್ರಷ್ಟರ ಮೇಲೂ ಆಕ್ಷನ್ ತೆಗೆದುಕೊಳ್ಳುವಂತಿರಬೇಕು. ಇವತ್ತು ದೊಡ್ಡ ಅಧಿಕಾರಿಗಳ ಮನೆಗಳ ಮೇಲೆ ರೇಡ್ ಮಾಡಿದರೆ ೨೦೦-೩೦೦ ಕೋಟಿ ಹಣ ಸಿಕ್ಕಬಹುದು. ಆಗ ಕಾಮನ್ ಮ್ಯಾನ್‌ಗೆ ಕೂಡ ಪರವಾಗಿಲ್ಲ ಇವರು ಸ್ಪಷ್ಟ ನಿಲುವು ಹೊಂದಿದ್ದಾರೆ, ಆಕ್ಷನ್ ತೆಗೆದುಕೊಳ್ಳಲು ರೆಡಿ ಇದ್ದಾರೆ ಎಂದು ತಿಳಿದುಕೊಳ್ಳುತ್ತಾರೆ. ಇಲ್ಲದಿದ್ದರೆ ನಿಮ್ಮನ್ನು ಶಪಿಸಲು ಅವಕಾಶ ಕೊಟ್ಟ ಹಾಗಾಗುತ್ತದೆ,

ಆಮೇಲೆ ಟ್ಯಾಕ್ಸ್ ಬಗ್ಗೆ ಹೇಳುತ್ತೇನೆ. ನನ್ನ ಮಿತ್ರ ಕೃಷ್ಣನ್‌ರವರು ಆಗಲೇ ಹೇಳಿರುವುದರಿಂದ ನಾನು ರಿಪೀಟ್ ಮಾಡಲು ಹೋಗುವುದಿಲ್ಲ. ಕೆಲವು ಟ್ಯಾಕ್ಸ್‌ಗಳಂತೂ ಬಹಳ ಅನ್ಯಾಯ. ಅದರಲ್ಲೂ ಮೋಟಾರ್ ವೆಹಿಕಲ್ ಬಗ್ಗೆ ಜಾಸ್ತಿ. ವೀರಣ್ಣನವರಿಗೆ ಎಲ್ಲಾ ಗೊತ್ತಿದೆ, ಟ್ಯಾಕ್ಸ್ ಜಾಸ್ತಿ ಹಾಕಿದ್ದಾರೆ Comparatively it should be equal to the other States. ತಮಿಳ್ನಾಡಿನಲ್ಲಿ ೫೪೦೧ ರೂಪಾಯಿ ಆಂಧ್ರದಲ್ಲಿ ೧೨,೦೭೫ ಇದೆ, ಗೋವಾದಲ್ಲಿ ೩೪೦ ಇದೆ, ಕೇರಳದಲ್ಲಿ ೭೭೦೦, ಮಹಾರಾಷ್ಟ್ರದಲ್ಲಿ ೯ ಸಾವಿರ ಮಾತ್ರ ಇದೆ, ಆದರೆ ನಾವು ೮೫ ಸಾವಿರ ಹಾಕಿದ್ದೇವೆ. ಇದನ್ನೆಲ್ಲಾ ನೋಡಿದರೆ ನೀವು ಈ ಓಮ್ನಿ ಬಸ್‌ಗಳು ಇರುವುದೇ ಬೇಡ ಎಂದು ತೆಗೆದುಹಾಕಿಬಿಡಿ. ಅದರಿಂದ ಕೇವಲ ೨ ಕೋಟಿ ನಮಗೆ ನಷ್ಟವಾಗಬಹುದು. You are killing the golden goose. ಈಗಿರುವ ಟ್ಯಾಕ್ಸ್ ೫೦೦ ಇದ್ದದ್ದು ೨೫೦೦ ಮಾಡಿದ್ದೀರಿ, ಇದು ನ್ಯಾಯವಲ್ಲ. ಇದಕ್ಕೆ ಒಂದು ಮಿತಿ ಇರಬೇಕು. ಅವರ ಸೇವೆ ನಿಮಗೆ ಬೇಡ ಎಂದಾದರೆ ಅದನ್ನು ಸ್ಪಷ್ಟವಾಗಿ ಅವರಿಗೆ ಹೇಳಿಬಿಡಿ. ಅದನ್ನು ಬಿಟ್ಟು ಅವರನ್ನು ಕಂಟ್ರೋಲ್ ಮಾಡಬೇಕು ಎಂದು ಈ ರೀತಿ ಮಾಡುವುದಲ್ಲ. ನೀವು ಹಾಕಿರುವುದು ಏರೋ ಪ್ಲೇನ್ ಚಾರ್ಜಿಗಿಂತ ಜಾಸ್ತಿ ಹಾಕಿದ್ದೀರಿ.

ಇನ್ನು ಕೆಎಸ್‌ಆರ್‌ಟಿಸಿ ಬಗ್ಗೆ ದಾಖಲೆಯನ್ನು ಈಗ ಕೊಟ್ಟಿದ್ದೀರಿ. ಮುಂಚೆ ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ನಿಜವಾಗಿಯೂ ಅಂಥ ಕ್ರೆಡಿಟಬಲ್ ಸಾಧನೆ ಅಲ್ಲ ನಿಮ್ಮದು. ಈ ವರ್ಷ ಕೇವಲ ೧೨೭ ಬಸ್‌ಗಳನ್ನು ಮಾತ್ರ ಜಾಸ್ತಿ ಮಾಡಿದ್ದೀರಿ. ಯುಟಿಲೈಜೇಷನ್ ಜಾಸ್ತಿ ಆಗಿದೆ ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಐಟಂ ಡಿ ನಲ್ಲಿ ಜಾಸ್ತಿ ಆಗಿಲ್ಲ. ಒಂದು ಲೀಟರ್‌ಗೆ ಅವರೇಜ್ ಕಿಲೋಮೀಟರ್ ಇರುವುದು ಪೂರ್ ಪರ್‌ಫಾರ್ಮೆನ್ಸ್ ಹೇಳಿಕೊಳ್ಳುವಂಥದ್ದೇನೂ ಅಲ್ಲ. ದಯವಿಟ್ಟು ಅವರ ಎಫಿಶಿಯನ್ಸಿಯನ್ನು ಜಾಸ್ತಿ ಮಾಡಿ. ಜೊತೆಗೆ ಕೆಎಸ್‌ಆರ್‌ಟಿಸಿಯಲ್ಲಿ ಲಾಸಾದರೆ ನಿಜಕ್ಕೂ ನಮಗೆ ಅವಮಾನ. ನಿಮ್ಮಲ್ಲಿ ಬಾಡಿ ಬಿಲ್ಡಿಂಗ್ ಕೆಲಸವನ್ನು ಪ್ರೈವೇಟ್‌ನವರಿಗೆ ಕೊಡಲಾಗುತ್ತಿದೆ. ನೀವೇ ಆ ಕೆಲಸ ರೀಜನಲ್ ವರ್ಕ್‌ಷಾಪ್‌ನಲ್ಲಿ ಮಾಡಿಸಿದರೆ ಒಂದಕ್ಕೆ ೯೫ ಸಾವಿರ ಆಗುತ್ತದೆ. ಆದರೆ ನಿಮ್ಮ ಸಂಸ್ಥೆ ಪ್ರೈವೇಟ್‌ನವರಿಗೆ ಈ ಕೆಲಸವನ್ನು ಕೊಡುತ್ತಿರುವುದು ಒಂದು ಲಕ್ಷ ನಲವತ್ತೈದು ಸಾವಿರ ರೂಪಾಯಿಗಳಲ್ಲಿ ಏನಿಲ್ಲ ಎಂದರೂ ೫೦ ಸಾವಿರ ಪ್ರಾಫಿಟ್ ಹೊಡೆಯುತ್ತಿದ್ದಾರೆ. ನಿಮ್ಮಲ್ಲಿರುವ ರೀಜನಲ್ ವರ್ಕ್‌ಷಾಪ್‌ಗಳಲ್ಲಿ ಬಾಡಿ ಬಿಲ್ಡರ್ಸ್‌ಗೆ ಹೊಸದಾಗಿ ರೆಕ್ರೂಟ್ ಮಾಡಿ ಈ ಕೆಲಸಗಳನ್ನು ನೀವೇ ಮಾಡಿಸಿ ಸೂರಿ ಮುಂತಾದ ಕಂಪೆನಿಗಳವರು ಈ ಫೀಲ್ಡ್‌ನಲ್ಲಿ ಮೊನಾಪಲಿ ಮಾಡಿಕೊಂಡು ಕೋಟ್ಯಾಧೀಶರಾಗಿದ್ದಾರೆ. ಇದರಲ್ಲೆಲ್ಲಾ ಯಾರ ಕೈವಾಡ ಇದೆಯೋ ಗೊತ್ತಿಲ್ಲ. ನಿಮ್ಮಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇಲ್ಲದಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ, ಅದೆಲ್ಲಾ ಇದೆ, ಆದರೆ ಕೆಲಸ ಮಾಡಲು ಮನಸ್ಸಿಲ್ಲ.

ಮೊನ್ನೆ ದಿವಸ ಯಾವುದೋ ಪ್ರೈವೇಟ್ ಕಂಪೆನಿಯವರು ಒಂದು ದೊಡ್ಡ ಹೋಟೆಲ್‌ನಲ್ಲಿ ಡಿನ್ನರ್ ಕೊಟ್ಟಿದ್ದಾರೆ. ಅದಕ್ಕೆ ನಿಮ್ಮ ಕೆಎಸ್‌ಆರ್‌ಟಿಸಿ ಆಫೀಸರ್ಸ್ ಎಲ್ಲಾ ಹೋಗಿದ್ದರು. ಅಲ್ಲಿ ಒಂದೆರಡು ಲಕ್ಷ ಖರ್ಚಾಗಿರಬಹುದು. ಆದರೆ ಇದರಿಂದ ಕೆಎಸ್‌ಆರ್‌ಟಿಸಿಗೆ ನಾಲ್ಕು ಕೋಟಿ ನಷ್ಟವಾಗುವ ವ್ಯವಹಾರ ನಡೆಯುತ್ತದೆ. ಆ ಪ್ರೈವೇಟ್‌ನವರೇನು ಸುಮ್ಮನೆ ಖರ್ಚು ಮಾಡುವುದಕ್ಕೆ ಬುದ್ಧಿ ಇಲ್ಲದವರಲ್ಲ ಅವರು ಇವರ ಕೈಗೆಲ್ಲ ಒಂದೊಂದು ಫಾರಿನ್ ವಿಸ್ಕಿ ಬಾಟಲನ್ನು ಕೊಟ್ಟು ಇವರನ್ನೆಲ್ಲಾ ಖುಷಿಪಡಿಸುತ್ತಾರೆ, ಇವರು ಅಷ್ಟಕ್ಕೆ ಉಬ್ಬಿಹೋಗಿ ಸಂಸ್ಥೆಯ ಹಿತ ಮರೆತು ಕೆಲಸ ಮಾಡುತ್ತಾರೆ. ಆದ್ದರಿಂದ ದಯವಿಟ್ಟು ಇನ್ನು ಮುಂದೆಯಾದರೂ ಪ್ರೈವೇಟ್‌ನವರು ಕೊಡುವ ಡಿನ್ನರ್‌ಗಳಿಗೆ ನಿಮ್ಮ ಆಫೀಸರ್ಸ್ ಹೋಗದಂತೆ ಬಂದೋಬಸ್ತು ಮಾಡಬೇಕು. ಕೆಎಸ್‌ಆರ್‌ಟಿಸಿ ಕಮರ್ಷಿಯಲ್ ಆರ್ಗನೈಜೇಷನೇನಲ್ಲ, ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು.

ನಮ್ಮ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಮುಖ್ಯಮಂತ್ರಿಗಳೂ ಇಲ್ಲದಿದ್ದರೆ ಚೆನ್ನಾಗಿರುತ್ತಿತ್ತು. ಅವರಿಂದ ೩೩ ಕೋಟಿ ನಮಗೆ ವರಮಾನ ಬರುತ್ತದೆ. ೬೨ ಕೋಟಿಯನ್ನು ಸರ್‌ಚಾರ್ಜ್‌ನಲ್ಲಿ ವಸೂಲು ಮಾಡುತ್ತೇವೆ. ಅದರ ಉದ್ದೇಶ ಏನೆಂದರೆ ಆ ಹಣವನ್ನು ಸಿನಿಮಾ ಇಂಡಸ್ಟ್ರಿಗೆಂದೇ ಖರ್ಚು ಮಾಡಬೇಕೆಂಬುದು ಬೆಂಗಳೂರಿನಲ್ಲಿ ಸಿನಿಮಾ ಇಂಡಸ್ಟ್ರಿ ಹೇಗಿದೆ ಎಂದು ಗೊತ್ತು. ಸಿನಿಮಾಗಳನ್ನು ನಾನು ಆಗಾಗ್ಗೆ ನೋಡುತ್ತಿರುತ್ತೇನೆ. ಯಾವಾಗಲೂ ಹೋಗುವುದಿಲ್ಲ, ನಿಜವಾಗಿಯೂ ಕೂಡ ಮನರಂಜನೆ ನಮಗೆ ಇರುವುದು ಇದೊಂದೇ ಎಂದು ನಾನು ಅಂದುಕೊಂಡಿದ್ದೇನೆ. ಇದರ ಬಗ್ಗೆ ನೀವು ಮಾಡುತ್ತಿರುವುದಾದರೂ ಏನು ? ಆರು ಸಿನಿಮಾ ಥಿಯೇಟರ್‌ಗಳನ್ನು ಹೊಡೆದುಹಾಕಿದ್ದಾರೆ ಹತ್ತು ಹೊಡೆಯುವುದರಲ್ಲಿದ್ದಾರೆ, ಕೆಲವನ್ನು ಹೊಡೆದು ನೆಲಸಮ ಮಾಡಿದ್ದಾರೆ. ನಮ್ಮ ಕರ್ನಾಟಕದಲ್ಲಿ ೬೦ ಸಿನಿಮಾಗಳನ್ನು ಪ್ರೊಡ್ಯೂಸ್ ಮಾಡುತ್ತಾರೆ ಬೇರೆ ರಾಜ್ಯಗಳಾದ ತಮಿಳುನಾಡು, ಆಂಧ್ರದಲ್ಲಿ ೧೫೦ ಸಿನಿಮಾಗಳನ್ನು ಪ್ರೊಡ್ಯೂಸ್ ಮಾಡುತ್ತಾರೆ. ನಮ್ಮಲ್ಲಿ ಪ್ರೊಡ್ಯೂಸ್ ಮಾಡಿದ ೬೦ರಲ್ಲಿ ೧೦–೧೫ ಮಾತ್ರ ಸಕ್ಸಸ್ ಆಗುತ್ತವೆ. ಕಲೆಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿಲ್ಲ ಸಿನಿಮಾದ ಮೇಲೆ ಹೆಚ್ಚು ಟ್ಯಾಕ್ಸ್ ಹಾಕಿದ್ದಾರೆ. ಹೆಚ್ಚು ಹಾಕಿದ್ದಾರೆಂದು ೨೭ನೇ ತಾರೀಖು ಆ ಜನರು ಸ್ಟ್ರೈಕ್ ಮಾಡುತ್ತೇವೆಂದು ನೋಟೀಸ್ ಕೊಟ್ಟಿದ್ದಾರೆ ಹತ್ತು ಲಕ್ಷ ರೂಪಾಯಿಗಳು ಇದರಿಂದ ಬರುತ್ತದೆ. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಕನ್ನಡ ಚಿತ್ರಗಳಿಗೆ ತೆರಿಗೆಯನ್ನು ತೆಗೆದುಹಾಕುತ್ತೇವೆ ತೆಲುಗು, ಹಿಂದಿ, ತಮಿಳು, ಮಲೆಯಾಳಂ ಚಿತ್ರಕ್ಕೆ ತೆಗೆಯುವುದಿಲ್ಲವೆಂದು ಇದೆ. ಇದರಿಂದಾಗಿ ೩–೪ ಲಕ್ಷ ರೂಪಾಯಿಗಳ ಲಾಭ ಬರುತ್ತದೆ. ಈಗ ನಾಲ್ಕು ಪರ್ಸೆಂಟ್ ಏನು ತೆರಿಗೆ ಹಾಕಿದ್ದಾರೆ ಅದನ್ನು ತೆಗೆಯಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಿನಿಮಾ ಇಂಡಸ್ಟ್ರೀಗೆ ೬೦ ಕೋಟಿ ಖರ್ಚು ಮಾಡುತ್ತೇವೆಂದು ಹೇಳುತ್ತಾರೆ ಅಷ್ಟನ್ನು ಸರಿಯಾಗಿ ಖರ್ಚು ಮಾಡುತ್ತಿಲ್ಲ, ಅದನ್ನು ಮಾಡಬೇಕು. ಇನ್ನು ಕೆಲವು ಕಡೆಗಳಲ್ಲಿ ಯೂತ್ ವೆಲ್‌ಫೇರ್‌ನವರು ನಾಟಕಗಳನ್ನು ಮಾಡುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಕಾರ್ಯಕ್ರಮಗಳಿಂದಲೂ ಜನರಿಗೆ ಮನರಂಜನೆ ಸಿಗುತ್ತಿಲ್ಲ. ೩೩ ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದೀರಿ, ಇವೊತ್ತು ನಾಟಕ ಕಲೆ ಹೋಗುತ್ತಿದೆ, ಡ್ರಾಮಾ ಕಲೆ ಹೋಗುತ್ತಿದೆ. ಡ್ರಾಮ, ನಾಟಕ ಆಡಿದರೆ ಸ್ವಲ್ಪ ದುರುಪಯೋಗವಾದರೂ ಆಗಬಹುದು ಆದರೂ ಕೂಡ ಅವರಿಗೆ ಒಂದು ಸಾವಿರ ರೂಪಾಯಿಗಳನ್ನಾದರೂ ಕೊಟ್ಟು ಹಳ್ಳಿಗಳಲ್ಲಿ ಈ ಕಲೆಗೆ ಪ್ರೋತ್ಸಾಹ ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಒಂದು ಅನುಕೂಲವೂ ಇಲ್ಲ. ಯೋಜನಾ ಇಲಾಖೆ ಇದೆ ಅದು ಏನು ಮಾಡುತ್ತದೆಂದರೆ ಬೆಂಗಳೂರಿನಲ್ಲಿ ಸ್ಟೇಡಿಯಂ ಮಾಡಿದ್ದೇವೆ ಕೋಲಾರದಲ್ಲಿನ ಸ್ಟೇಡಿಯಂಗೆ ೫೨ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಇವರು ಮಾಡುತ್ತಿರುವುದು ತುಂಬಾ ಅನ್ಯಾಯ ಗ್ರಾಮಾಂತರ ಪ್ರದೇಶದಲ್ಲಿ ನಾಟಕವಾಡಿದರೆ ೫ ಸಾವಿರ ರೂಪಾಯಿಗಳು ಖರ್ಚಾಗುತ್ತದೆ ನೀವು ಒಂದು ಸಾವಿರ ರೂಪಾಯಿ ಕೊಟ್ಟರೆ ನಾಲ್ಕು ಸಾವಿರ ರೂಪಾಯಿಯನ್ನು ಅವರು ಕಲೆಕ್ಟ್ ಮಾಡಿಕೊಳ್ಳುತ್ತಾರೆ. ಇನ್ನು ತೆರಿಗೆ ಬಗ್ಗೆ ಹೇಳುವುದಾದರೆ ೧೪೫ ಕೋಟಿ ರೂಪಾಯಿ ಹಾಕಿದ್ದೀರಿ, ಸೇಂದಿ, ಸಾರಾಯಿಯಲ್ಲಿ ೨೦೦ ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ ಸೆಕೆಂಡ್ಸ್ ಎಂದು ಇನ್ನೂ ಏನೇನೋ ಹೇಳಿ ೧೦೦ ಕೋಟಿ ರೂಪಾಯಿಯಾದರೂ ಆಗಬಹುದು, ಅದನ್ನು ವಸೂಲು ಮಾಡುವುದನ್ನು ಬಿಟ್ಟು ಬಡವರ ಮೇಲೆ ಏಕೆ ತೆರಿಗೆ ಹಾಕುತ್ತೀರಿ ? ೧೪೫ ಕೋಟಿ ರೂಪಾಯಿಗಳ ತೆರಿಗೆ ಹಾಕಿದ್ದೀರಿ, ದಿನಬಳಕೆ ವಸ್ತುಗಳಾದ ಕಾಫಿ ಮುಂತಾದ ವಸ್ತುಗಳ ಮೇಲೆ ಕೂಡ, ಏನು ತೆರಿಗೆ ಹಾಕಿದ್ದೀರಿ ಅದನ್ನು ತಪ್ಪಿಸಿ. ದಿನಾಂಕ ೨೨ನೇ ತಾರೀಖಿನಂದು ಪ್ರಜಾವಾಣಿ, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ನ್ಯೂಸ್ ಬಂದಿದೆ ಅದನ್ನು ಇಲ್ಲಿ ಓದುತ್ತೇನೆ.

"Centre neglecting State.

The Centre has "discriminated" against Karnataka in the gross transfer of resources, especially discretionary resources, according to a study by the Indian Institute of Socio-Economic Studies here.

Though total resources transfer effected by the Centre to the State Governments had increased by nearly 37 times in the said period, Karnataka's share worked out to Rs. 805

per capita much below the national average of Rs. 1,520, the study pointed out.

Despite Karnataka being the seventh-biggest State in area and eighth-largest in population, it stood 15th in per capita gross transfer of resources, the study observed."

ನಾನು ಅಂದುಕೊಂಡಿರುವುದು ಇದರಲ್ಲಿ ೩೦೦–೪೦೦ ಕೋಟಿ ರೂಪಾಯಿಗಳು ಸೆಂಟ್ರಲ್‌ನಿಂದ ಬರಬೇಕಾಗುತ್ತದೆ ಹೋರಾಟ ಮಾಡಿ ನ್ಯಾಯಯುತವಾಗಿ ನಮಗೆ ಬರಬೇಕಾದ ಹಣವನ್ನು ತೆಗೆದುಕೊಳ್ಳಬೇಕು. It is further observed thus :

"Absence of clear cut criteria, political considerations outweighing economic ones, the Centre's policy of retaining "as much control as possible" over the States coupled with Karnataka's "inadequate political will" at the national level were contributory for the State being denied its legitimate share, it added."

ಇನ್ನು ನಮಗೆ ಸೆಂಟ್ರಲ್‌ನವರು ಡಿಸ್ಕ್ರಿಮಿನೇಟ್ ಮಾಡುತ್ತಾರೆ, ನಮಗೆ ೩೦೦–೪೦೦ ಕೋಟಿ ರೂಪಾಯಿಗಳು ಅನ್ಯಾಯವಾಗುತ್ತಿರುವಾಗ ಇದರ ಬಗ್ಗೆ ನಾವು ಹೋರಾಟ ಮಾಡಿ ನಮಗೆ ನ್ಯಾಯವಾಗಿ ಬರಬೇಕಾದ್ದನ್ನು ಬರುವಂತೆ ಮಾಡಿಕೊಳ್ಳಬೇಕು. ಇನ್ನು ಪ್ರೈಸ್ ಕಂಟ್ರೋಲ್ ಬಗ್ಗೆ ಹೇಳುವುದಾದರೆ ನಮ್ಮ ಅಡ್ಮಿನಿಸ್ಟ್ರೇಷನ್‌ನಲ್ಲಿ ಎಲ್ಲಿ ತಪ್ಪಾಗಿದೆಯೋ ಗೊತ್ತಿಲ್ಲ. ಯಾರ ಮೇಲೂ ಕಂಟ್ರೋಲ್ ಇಲ್ಲ. ಅಂಗಡಿಗಳ ಮೇಲೆ ಕಂಟ್ರೋಲ್ ಇಲ್ಲವೇ ಇಲ್ಲ.

ಛೇರ್ಮನ್.—೨೫ ನಿಮಿಷ ಆಯಿತು.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನು ಸಿಗರೇಟ್ ಬಗ್ಗೆ ಬಂದಾಗ ಐದು ರೂಪಾಯಿ ಇದ್ದಿದ್ದು ಈಗ ಏಳು ರೂಪಾಯಿಗೆ ಒಂದು ಪ್ಯಾಕೆಟ್ ಮಾರುತ್ತಿದ್ದಾರೆ. ಎನ್‌ಲೈಟೆನ್ಡ್ ಪೀಪಲ್ ಎಂದು ಅವರಿಗೆ ಹಾಕುತ್ತಾರೆ. ನಾವು ಮತ್ತು ನಮ್ಮ ಸ್ನೇಹಿತರು ನಾಗರಾಜು ಎಂದು ಇಬ್ಬರೂ ಹೋಗಿದ್ದೆವು. ೪–೯೦ ಇದ್ದಿದ್ದು ಸಿಗರೇಟನ್ನು ೫–೯೦ ಕೊಡಿ ಎಂದು ತೆಗೆದುಕೊಂಡನು ನಮಗೆ ಈ ಅಂಗಡಿಯವನೇ ಟೋಪಿ ಹಾಕುತ್ತಿದ್ದಾನೆಯೋ ? ಅಥವಾ ಈ ಹೋಲ್‌ಸೇಲ್‌ನವರು ನಮಗೆ ಟೋಪಿ ಹಾಕುತ್ತಿದ್ದಾರೆಯೋ ಏನೋ ನನಗಂತೂ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ನಾನು ಹೇಳುವುದು ಎಂದರೆ ಒಂದು ಸ್ವಲ್ಪ ಜನರನ್ನು ಬುಕ್ ಮಾಡಿ ಅವರನ್ನು ಬೇಡಿ ಗೇಡಿ ಹಾಕಿ ಜೈಲಿಗೆ ಕಳುಹಿಸಿದರೆ ಆಗ ಸ್ವಲ್ಪ ಕಂಟ್ರೋಲ್‌ಗೆ ಇದು ಬರುತ್ತದೆ ಎಂದು ನನ್ನ ಭಾವನೆ. ನಿಜವಾಗಿ ಇದರ ಬಗ್ಗೆ ಸರ್ಕಾರ ಕಂಟ್ರೋಲ್ ಮಾಡಬೇಕು. ಇದನ್ನು ಹೀಗೆಯೇ ಬಿಟ್ಟುಬಿಟ್ಟರೆ ಬಹಳ ಕಷ್ಟವಾಗುತ್ತದೆ. ನೀವು ಸಿಗರೇಟಿನ ಕಂಟ್ರೋಲನ್ನೇ ಮಾಡದೇ ಹೋದರೆ ಬೇರೆ ಯಾವುದನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತದೆ ? ಪ್ರೈಸ್ ಬಗ್ಗೆ ಕಂಟ್ರೋಲನ್ನು ಇಟ್ಟುಕೊಳ್ಳಬೇಕು. ಇನ್ನು ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಜಾಸ್ತಿ ಮಾತನಾಡುವುದಿಲ್ಲ. ಈವರೆಗೆ ಮಾತನಾಡಿದ್ದೇವೆ. ಆ ರೀತಿ ಮಾತನಾಡಿದರೆ ರಾಚಯ್ಯನವರಿಗೆ ಕೋಪ ಬರುತ್ತದೆ......

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ರಾಚಯ್ಯನವರಿಗೆ ಕೋಪ ಬರುವುದಿಲ್ಲ ಎಂದು ನಮ್ಮ ಸಂಕಟ. ನೋಡೋಣ ಅವರಿಗೆ ಕೋಪ ಬರಿಸಿ.

ಶ್ರೀ ಆರ್. ಎನ್. ನಾಯಕ್.—ಅವರಿಗೆ ಕೋಪ ಬಂದರೆ ಅದನ್ನು ಹೇಗೆ ಪತ್ತೆ ಹಚ್ಚುತ್ತೀರಿ ?

ಶ್ರೀ ಆರ್. ವೆಂಕಟರಾಮಯ್ಯ.—ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಗುಂಪುಗಾರಿಕೆ ಇದೆ ಎಂದು ನನಗೆ ಗೊತ್ತಿದೆ. ಮೂರು ನಾಲ್ಕು ಗುಂಪು ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಒಬ್ಬರ ಮೇಲೆ ಒಬ್ಬರು ಅಪಪ್ರಚಾರ ಮಾಡಿಕೊಂಡು ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಟಾಪ್ ಲೆವೆಲ್‌ನಲ್ಲಿಯೇ ಗುಂಪುಗಾರಿಕೆಯಾಗಿದೆ. ಇದು ನಿಜವಾಗಲೂ ನಾಚಿಕೆಗೇಡು. ಇದರ ಬಗ್ಗೆ ಕೊ-ಆರ್ಡಿನೇಟೆಡ್ ಎಫರ್ಟ್ ಇರಬೇಕಾಗಿತ್ತು. ಮಾನ್ಯ ರಾಚಯ್ಯನವರು ಇಂಥವರನ್ನು ಬಲಿ ಹಾಕಬೇಕು, ಪುಲ್-ಅಪ್

ಮಾಡಬೇಕು, ಇನ್ನು ಜಾಸ್ತಿ ಹೇಳುವುದಕ್ಕೆ ನನಗೆ ಇಲ್ಲಿ ಸಮಯ ಇಲ್ಲ. ಎರಡು ಮುಖ್ಯವಾದ ಇಲಾಖೆಗಳು ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿವೆ. ಸಿ.ಓ.ಡಿ. ಡಿಪಾರ್ಟ್‌ಮೆಂಟ್‌ನಲ್ಲಿ ಭ್ರಷ್ಟ ಅಧಿಕಾರಿಗಳನ್ನು, ಬೇಡವಾದವರನ್ನು ಅಲ್ಲಿಗೆ ಹಾಕುತ್ತೀರಿ. ಇನ್ನು ಪೋಲೀಸ್ ಟ್ರೈನಿಂಗ್ ಕಾಲೇಜು, ಪೋಲೀಸ್ ಟ್ರೈನಿಂಗ್ ಸ್ಕೂಲ್ ಇದೆ. ಅಲ್ಲಿಯೂ ಸಹಾ ಬೇಡವಾದವರನ್ನು, ಯೂಸ್‌ಲೆಸ್ ಎಂದು ಹೇಳುವವರನ್ನು ಅಲ್ಲಿಗೆ ಹಾಕುತ್ತೀರಿ. ಇದು ವಾಡಿಕೆಯಾಗಿದೆ. ಅಲ್ಲಿಗೆ ಟ್ರೈನಿಂಗ್‌ನವರನ್ನು ಕಳುಹಿಸಿದರೆ ಅವರು ಏನು ಮಾಡುತ್ತಾರೆ ? ಆದ್ದರಿಂದ ಅಲ್ಲಿ ಒಳ್ಳೆಯ ಅಧಿಕಾರಿಗಳನ್ನು ಕಳುಹಿಸಿ ಅವರಿಗೆ ಇನ್‌ಸೆಂಟೀವ್ ಕೊಡಿ. ಪೋಲೀಸ್ ಟ್ರೈನಿಂಗ್ ಕಾಲೇಜು ಮತ್ತು ಸ್ಕೂಲ್‌ನಲ್ಲಿ ಮಾಮೂಲು ಈಗ ಶುರುವಾಗಿದೆ. ಅಲ್ಲಿಂದ ಬರುತ್ತಲೇ ಅಲ್ಲಿನ ಪ್ರಿನ್ಸಿಪಾಲರು ಹೇಗೆ ಹಣವನ್ನು ಸಂಪಾದಿಸಬೇಕು ಎಂದು ಹೇಳಿಕೊಡುತ್ತಾರೆ.

೧೨-೦೦ ಪಿ ಎಂ.

ನಮ್ಮ ಸ್ನೇಹಿತರು ಹೇಳುತ್ತಾರೆ ಗೋಲೀಬರ್‌ನಲ್ಲಿ ಸಸ್ಪೆಂಡ್ ಆದವರನ್ನು ಅಲ್ಲಿಗೆ ಕಳುಹಿಸುತ್ತಾರೆ ಇದು ಆಗಬಾರದು. ಸಿ.ಓ.ಡಿ ಗೆ ಎಫಿಷಿಯಂಟ್ ಆಫೀಸರ್ಸ್‌ಗಳನ್ನು ಹಾಕಬೇಕು. ಇವರಿಂದ ನಿಮ್ಮ ಇಲಾಖೆಗೆ ಕೆಟ್ಟ ಹೆಸರು ಬರುವುದು ತಪ್ಪುತ್ತದೆ. ಆದುದರಿಂದ ಒಳ್ಳೆಯ ಯೋಗ ಅಧಿಕಾರಿಗಳನ್ನು ಅಲ್ಲಿ ಹಾಕಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಪೋಲೀಸ್ ಕಾನ್ಸ್‌ಟೇಬಲ್‌ಗಳು ಮತ್ತು ಹೆಡ್ ಕಾನ್ಸ್‌ಟೇಬಲ್‌ಗಳು ಅವರನ್ನು ಕೂಡ ಮನುಷ್ಯರೆಂದು ಟ್ರೀಟ್ ಮಾಡಿ. ಒಬ್ಬೊಬ್ಬ ಆಫೀಸಿಗೆ 3–4 ಜನ ಆಡಳಿತ ಸಿಬ್ಬಂದಿಗಳು ಇರುತ್ತಾರೆ. ಅವರಿಂದ ಎಲ್ಲಾ ಕೆಲಸವನ್ನು ಮಾಡಿಸುತ್ತಾರೆ. ಬಟ್ಟೆ ಒಗೆಸುತ್ತಾರೆ, ಪಾತ್ರೆ ತೊಳೆಸುತ್ತಾರೆ. ಇವೊತ್ತು ಅವರಿಗೆ ಎಲ್ಲಾ ತರಹದ ಕೆಲಸಗಳನ್ನು ಮಾಡಲು ಹೇಳಿ ಮಾಡಿಸಿಕೊಳ್ಳುತ್ತಾರೆ. ಬೇರೆಯವರಿಗೆ 12 ಗಂಟೆ ಕೆಲಸ ಆದರೆ ಇವರು 24 ಗಂಟೆ ಕೆಲಸ ಮಾಡುತ್ತಾರೆ. ಇಷ್ಟು ಕೆಲಸ ಮಾಡಿದರೂ ಅವರನ್ನು ಬಯ್ಯುತ್ತಾರೆ. ಪೋಲೀಸ್ ಠಾಣೆಗಳಲ್ಲಿ 420 ನೀನು ಬಾ, ಯೂ ಗೆಟ್ ಔಟ್ ಎಂದು ಹೊಲಸಾಗಿ ಕೀಳು ಮಟ್ಟದಲ್ಲಿ ನಡೆದುಕೊಳ್ಳುತ್ತಿದ್ದಾರೆ. ಇದು ಬಹಳ ಅನ್ಯಾಯ ಆಯಿತು. ಇದುದರಿಂದ ನಾನು ಮಾನ್ಯ ರಾಚಯ್ಯನವರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ಪೋಲೀಸ್ ಫೋರ್ಸ್ ಅನ್ನು ಜಾಸ್ತಿ ಮಾಡಿ. ಅವರನ್ನು ಹೆಚ್ಚು ಪ್ರಮಾಣದಲ್ಲಿ ರಿಕ್ರೂಟ್ ಮಾಡಿ ಮತ್ತು ರೆಗ್ಯುಲೇಟ್ ಮಾಡಿ. ಅವರಿಗೆ ೮ ಗಂಟೆ ಅಥವಾ ೧೦ ಗಂಟೆ ಕೆಲಸ ಕೊಡಿ, ಆದರೆ ಅವರನ್ನು ಮನುಷ್ಯರೆಂದು ಟ್ರೀಟ್ ಮಾಡಿ ಜಾಸ್ತಿ ತಕರಾರು ಮಾಡದೇ ಅವರನ್ನು ಸ್ವಲ್ಪ ಮರ್ಯಾದೆಯಿಂದ ನಡೆಸಿಕೊಂಡು ಹೋಗಬೇಕು. ಈ ಮೂಲಕ ಮಾನ್ಯ ಗೃಹ ಮಂತ್ರಿಗಳನ್ನು ಪ್ರಾರ್ಥಿಸಿಕೊಂಡು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ಹೊಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಕಳೆದ ೬–೭ ದಿವಸದ ಈ ಸದನದಲ್ಲಿ ಅತ್ಯಂತ ಅಹಿತಕರವಾದ ಘಟನೆಯಿಂದ ಅನೇಕ ಬೇಡಿಕೆಗಳ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೊಡತಕ್ಕಂಥ ಅವಕಾಶ ನಮಗೆ ಸಿಗಲಿಲ್ಲ. ಇವೊತ್ತು ಬಹಳ ಪ್ರಮುಖವಾದಂತಹ ಅನೇಕ ಬೇಡಿಕೆಗಳನ್ನು ಇಟ್ಟಿದ್ದಾರೆ. ಒಂದೊಂದೇ ಬೇಡಿಕೆ ಬಗ್ಗೆ ಅಥವಾ ಎಲ್ಲಾ ಬೇಡಿಕೆಗಳ ಬಗ್ಗೆ 3–4 ದಿವಸ ಸತತವಾಗಿ ಚರ್ಚೆ ಆದರೂ ಸಹ ಪೂರ್ಣವಾಗಿ ಈ ವಿಷಯದ ಮೇಲೆ ಎಲ್ಲಾ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಮಯ ಇಲ್ಲ, ಅವಕಾಶ ಇಲ್ಲ,

ಸ್ವಾಮಿ, ನಾನು ಈ ಸದನದಲ್ಲಿ ಶಾಸಕನಾಗಿ ನಿಂತುಕೊಂಡಾಗ ಈ ರಾಜ್ಯದ ಜನತೆ ಬಗ್ಗೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತೇನೆಂದು ನನಗೆ ನಾನೇ ಪ್ರಶ್ನೆ ಮಾಡಿಕೊಂಡಾಗ ನಿಜವಾಗಿಯು ಅದು ನನಗೆ ಸಮಾಧಾನ ತರುತ್ತಾ ಇಲ್ಲ. ಅಧಿಕಾರಿಗಳನ್ನು ಈ ಸದನದಲ್ಲಿ ನಿಂತುಕೊಂಡು ಛೀಮಾರಿ ಮಾಡಬೇಕೋ ಅಥವಾ ಶಾಸಕನಾಗಿ ಸರ್ಕಾರದ ಕಡೆಯಿಂದ ಆಡಳಿತ ವರ್ಗದಲ್ಲಿರುವ ಈ ಆಡಳಿತ ಕುಸಿದು ಬಿದ್ದಿರುವುದಕ್ಕೆ ಟೀಕೆ ಟಿಪ್ಪಣಿಗಳನ್ನು ಮಾಡಬೇಕೋ ಗೊತ್ತಾಗುತ್ತಿಲ್ಲ. ಅಥವಾ ಎಲ್ಲಾ ಕಛೇರಿಗಳಲ್ಲಿರುವ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳ ಬಗ್ಗೆ ಅಂದರೆ ದೊಡ್ಡ ಅಧಿಕಾರಿಗಳ ಬಗ್ಗೆ ಅಂಕಿ ಅಂಶಗಳನ್ನು ಇದರ ಬಗ್ಗೆ ದಾಖಲೆಗಳನ್ನು ಕೊಡುವುದರ ಜೊತೆಗೆ ಈ ನಾಲ್ಕೈರು ಪತ್ರಗಳನ್ನು ಕೊನೆಯ ಪಕ್ಷ

ಉನ್ನತ ಅಧಿಕಾರಿಗಳ ನಿಷ್ಟುರ ಆದರೂ ಸಹ ಪರವಾಗಿಲ್ಲ ಕೊಡಬೇಕೋ ಎಂಬುದು ತಿಳಿಯುತ್ತಿಲ್ಲ. ಅವರ ಒಂದು ಪಟ್ಟಿಯನ್ನು ಈ ಸದನದಲ್ಲಿ ಓದಬೇಕೋ ಏನೋ ಎಂಬುದಾಗಿ ನನ್ನ ಅನಿಸಿಕೆ ಏನೆಂದರೆ ಇಂತಹ ಪರಿಸ್ಥಿತಿಯಲ್ಲಿ ದೇಶದಲ್ಲಿ ಯಾವ ರಾಜ್ಯದಲ್ಲಿನ ಅಧಿಕಾರಿಗಳ ಬಗ್ಗೆ ಮಾತನಾಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಆದರೆ ಒಂದು ಮಾತು ಮಾತ್ರ ನಿಶ್ಚಿತ, ಇವೊತ್ತಿನ ದಿನ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದೆ. ಹಿಂದೆ ಎಂದೂ ಇಲ್ಲದಂತಹ ಒಂದು ವಿಚಿತ್ರವಾದ ವಾತಾವರಣದ ಮಧ್ಯೆ ನಾವು ಇವೊತ್ತು ಈ ಸದನದಲ್ಲಿ ಕೆಲಸ ಮಾಡುತ್ತಿದ್ದೇವೆ. ಅಧಿಕಾರಿಗಳ ಮೇಲೆ ಸಂಪೂರ್ಣ ಹತೋಟಿಯನ್ನು ಸರ್ಕಾರ ಕೈಬಿಟ್ಟಿದೆಯೇನೋ ಎಂಬ ಭಯ ಸಹ ನನಗೆ ಆಗುತ್ತಿದೆ.

ಸ್ವಾಮಿ, ಈ ಸದನಲ್ಲಿ ನಿಂತುಕೊಂಡು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರ ಮನವಿಗಳು, ಸರ್ಕಾರದಿಂದ ಆದ ಲೋಪದೋಷಗಳು ಇದರ ಬಗ್ಗೆ ಮಾಹಿತಿ ಕೊಟ್ಟರೆ ಅಥವಾ ಪ್ರಾಮಾಣಿಕವಾದ ರೀತಿಯಲ್ಲಿ ವ್ಯವಹಾರ ಮಾಡಿದ ಅಧಿಕಾರಿಗಳ ಹೆಸರನ್ನು, ಕೆಲವು ಸಂಖ್ಯೆಗಳನ್ನು ನಿಮಗೆ ಕೊಟ್ಟಾಗ ಅಲ್ಲಿ ಏನು ಕೆಲಸ ಆಗಬೇಕೆಂದು ಹಾಗೂ ಅವ್ಯವಹಾರ ಆಗಿರತಕ್ಕ ಕಡೆ ಒಂದು ತಿದ್ದುಪಡಿಯನ್ನು ಅಥವಾ ಮಾರ್ಪಾಡನ್ನು ಮಾಡಬೇಕೆಂದು ನಾವು ಪ್ರಸ್ತಾಪ ಮಾಡಿದಾಗ ಅನೇಕ ಬಾರಿ ನಿಯಮ 310ರ ಬಗ್ಗೆ ಇರಬಹುದು ಇಲ್ಲವೇ ಕಾಲಿಂಗ್ ಅಟೆನ್ಷನ್ ಬಗ್ಗೆ ಇರಬಹುದು, ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದಾಗ ಸರಕಾರದ ಕಡೆಯಿಂದ ಸಚಿವರು ಪ್ರಶ್ನೆ ಕೇಳುತ್ತಾರೆ. ನಿಮ್ಮ ಹತ್ತಿರ ಮಾಹಿತಿ ಇದೆಯೋ ದಾಖಲೆ ಇದೆಯೊ ಅಥವಾ ಪ್ರೂಫ್ ಇದೆಯೋ ನಾವು ತನಿಖೆಗೆ ಏರ್ಪಾಡು ಮಾಡುತ್ತೇವೆ, ಈ ರೀತಿಯಾದ ಒಂದು ಉತ್ತರವನ್ನು ಸಚಿವರು ಕೊಡುತ್ತಿರುವುದನ್ನು ನಾನು ಗಮನಿಸುತ್ತಿದ್ದೇನೆ. ನಾನು ನಿಮ್ಮ ಮೂಲಕ ಅಧಿಕಾರಿಗಳ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡಿದಾಗ ಒಬ್ಬ ಸಾಮಾನ್ಯ ಶಾಸಕನಾಗಿ ನಾನು ಎಷ್ಟರಮಟ್ಟಿಗೆ ದಾಖಲೆಗಳನ್ನು ನಿಮಗೆ ಒದಗಿಸಿ ಕೊಡಬಹುದು. ಎಲ್ಲೋ ಒಂದು ಇಲಾಖೆಯಲ್ಲಿ ಅನ್ಯಾಯ ಆಗುತ್ತಿದೆ ಎಂದು ಪ್ರಸ್ತಾಪ ಮಾಡಿದಾಗ ಹಾಗೂ ಅದರ ಬಗ್ಗೆ ತಿಳಿವನ್ನು ಕೊಡತಕ್ಕಂಥ ಪ್ರಯತ್ನ ಮಾಡಿದರೂ ಅದನ್ನು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡಿಲ್ಲ. ಈ ತಿಳಿವು ಎಷ್ಟರಮಟ್ಟಿಗೆ ಸತ್ಯ ಎಂಬುದನ್ನು ನೋಡಿ ಅಧಿಕಾರಿಗಳ ಒಂದು ಸಭೆಯನ್ನು ಸೇರಿಸಿ ಅನ್ಯಾಯವನ್ನು ತಡೆಗಟ್ಟಿ ಈ ರಾಜ್ಯದ ಜನತೆಗೆ ಪ್ರಾಮಾಣಿಕವಾದ ರೀತಿಯಿಂದ ಸೇವೆ ಮಾಡಲು ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೆ ನಾವು ಏನು ಬದಲಾವಣೆಗಳನ್ನು ಮಾಡುವುದಕ್ಕಾಗುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಈ ಸದನದಲ್ಲಿ ನಾನು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ನಿಯಮ ಓಓರ ಪ್ರಕಾರ ಗಮನ ಸೆಳೆಯುವ ಸೂಚನೆಯನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿದೆ. ಮಾನ್ಯ ಅಧ್ಯಕ್ಷರು ಮಾನ್ಯ ಯಡಿಯೂರಪ್ಪನವರೇ ಈ ಬಗ್ಗೆ ನೀವು ಚಿಂತೆ ಮಾಡುವುದು ಬೇಡ, ಸಚಿವರು ಕ್ರಮ ತೆಗೆದುಕೊಂಡಿದ್ದಾರೆ, ಎಂದು ಹೇಳಿದ್ದಾರೆ. ಅಧಿಕಾರಿಗಳನ್ನು ಭೇಟಿ ಮಾಡಿದರೆ ಅವರಿಗೆ ಈ ವಿಚಾರವೇ ಗೊತ್ತಿರುವುದಿಲ್ಲ. ಅವರಿಗೆ ಭಯವೂ ಇರುವುದಿಲ್ಲ. ಅವರಿಗೆ ಇಂತಹ ಗುರುತರವಾದ ಆಪಾದನೆ ಬಗ್ಗೆ ಸಹ ಯಾವ ಭಯವಿಲ್ಲ ಅದನ್ನು ತಿದ್ದಿಕೊಳ್ಳುತ್ತಾರೆಂದು ನನಗೆ ಅನ್ನಿಸುತ್ತಿಲ್ಲ. ಉದಾಹರಣೆಗೆ ಸನ್ಮಾನ್ಯ ಮುಖ್ಯ ಮಂತ್ರಿಯವರಿಗೆ ಸಂಬಂಧಪಟ್ಟಂತೆ ಒಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದೆ. ಅದೇನೆಂದರೆ, ಕೆ.ಪಿ.ಎಸ್.ಸಿ.ಗೆ ಸೇರಿದ್ದ. ಶ್ರೀ ಎನ್. ಎಲ್. ಕುಲಕರ್ಣಿಯವರು ಸೆಕ್ರೆಟೇರಿಯೆಟ್‌ನಲ್ಲಿ ಅಧೀನ ಕಾರ್ಯದರ್ಶಿಯಾಗಿದ್ದವರು. He was able to utilise the Encashment of Surrender Leave benefit twice in the same Block Period in the year 1983-84, against all the Rules.

ಅದರ ವಿವರ ಕೊಟ್ಟಿದೆ. ಇದರ ಬಗ್ಗೆ ಉತ್ತರವನ್ನು ಈ ಸದನದಲ್ಲಿ ನೀಡಬೇಕೆಂದು ಅಪೇಕ್ಷೆ ಪಡುತ್ತೇನೆ. ನಮ್ಮನ್ನು ಜನರು ಯಾವ ರೀತಿ ಆರಿಸಿ ಕಳುಹಿಸಿದ್ದಾರೋ, ಅದೇ ರೀತಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಸಹ ಆರಿಸಿ ಕಳುಹಿಸಿದ್ದಾರೆ. ಈ ಸದನದ ಗೌರವವನ್ನು ಕಾಪಾಡಿಕೊಂಡು ರಾಜ್ಯದ ಜನತೆಯ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಈ ರೀತಿ ಮಾಡುವುದಕ್ಕೆ ಈ ಸಂದರ್ಭದಲ್ಲಿ ಅನ್ಯಾಯದ ಬಗ್ಗೆ ಅನೇಕ ವಿವರಗಳನ್ನು ಕೊಟ್ಟಿದೆ. ನೀವು ಉದ್ದೇಶ

ಪೂರ್ವಕವಾಗಿ ಉತ್ತರವನ್ನು ಕೊಡದೆ ಮುಚ್ಚಿಡುತ್ತಿದ್ದೀರಿ. ಅಧಿಕಾರಿಗಳ ಭ್ರಷ್ಟಾಚಾರವನ್ನು ಕಂಡಾಗ ಅವರಿಗೆ ಶಿಕ್ಷೆ ಕೊಡಲೇಬೇಕಾಗುತ್ತದೆ. ನಾನು ಈ ಒಬ್ಬ ಅಧಿಕಾರಿ ಬಗ್ಗೆ ಹೇಳುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.--ಈಗಾಗಲೇ ಈ ಬಗ್ಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.--ಸ್ವಾಮಿ, ನಾನು ಕುಲಕರ್ಣಿ ಅವರ ಬಗ್ಗೆ ಉತ್ತರ ಅಪೇಕ್ಷೆ ಪಡುತ್ತೇನೆ. ಇದು ಬೇರೆ ವಿಷಯವಲ್ಲ ನನ್ನ ಆರೋಪ ತಪ್ಪಾಗಿದ್ದರೆ ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ಈ ಉನ್ನತ ಅಧಿಕಾರಿ ತಪ್ಪು ಮಾಡಿದ್ದರೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು. ನನ್ನ ಆಪಾದನೆ ತಪ್ಪಾಗಿದ್ದರೆ ನನ್ನ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನನಗೆ ಗೊತ್ತಿರುವ ಮಾಹಿತಿಗಳ ಪ್ರಕಾರ ಇವರು ಸರ್ಕಾರಿ ಹಣವನ್ನು ಅಕ್ರಮವಾಗಿ ದುರುಪಯೋಗ ಮಾಡಿಕೊಂಡಿದ್ದಾರೆ. ಶ್ರೀ ಎನ್. ಎಲ್. ಕುಲಕರ್ಣಿಯವರ ವಿವರಗಳು ಕೊಡುವುದಕ್ಕೆ ಬಯಸುತ್ತೇನೆ. ಇವರು ೧೯೮೩ರಲ್ಲಿ ಡಿ.ಪಿ.ಎ.ಆರ್. ಅಕೌಂಟ್ಸ್‌ನಿಂದ ರೂ. ೨,೨೫೪.೯೦ನ್ನು ದಿನಾಂಕ ೩-೬-೧೯೮೩ ರಂದು ಆರ್ಥ್ಯಪರ್ಣೆ ರಜೆಯನ್ನು ಪಡೆದು ದಿನಾಂಕ ೨೧ ೫-೮೪ರ ಚೆಕ್ ನಂ. ೭-೯೬೩೩೨೫ನಲ್ಲಿ ಡ್ರಾ ಮಾಡಿದರು. ಅದೇ ವ್ಯಕ್ತಿ ೧೯೮೪ರಲ್ಲಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ನಿಯೋಜನೆ ಹೋದಾಗ ೧-೬-೧೯೮೪ ರಿಂದ ಮತ್ತೆ ಸರೆಂಡರ್ ಲೀವ್ ಸೌಲಭ್ಯವನ್ನು ದಿನಾಂಕ ೭-೬-೧೯೮೭ರ ಚೆಕ್ ನಂ. ೯೪೨೦೮೬ರಲ್ಲಿ ೨,೫೧೨.೯೦ ರೂಪಾಯಿಗಳನ್ನು ಡ್ರಾ ಮಾಡಿದರು. ಈ ರೀತಿ ಸರ್ಕಾರಿ ಸೌಲಭ್ಯವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ನನಗೆ ತಿಳಿದ ಮಟ್ಟಿಗೆ ಒಂದು ಬ್ಲಾಕ್ ಪಿರಿಯಡ್‌ನಲ್ಲಿ ಒಮ್ಮೆ ಮಾತ್ರ ಸರೆಂಡರ್ ಲೀವ್ ಸೌಲಭ್ಯವಿದೆ. ಆದರೆ ಈ ಉನ್ನತ ಅಧಿಕಾರಿ ಸಾವಿರಾರು ರೂಪಾಯಿಗಳನ್ನು ಪಡೆದಿರುವುದರಿಂದ ಇಂತಹ ಅಧಿಕಾರಿಗಳನ್ನು ನೇರವಾಗಿ ಮನೆಗೆ ಕಳುಹಿಸುವಂತೆ ಕ್ರಮ ತೆಗೆದು ಕೊಳ್ಳಬೇಕು. ಕಳೆದ ಸಲ ಈ ಸದನದಲ್ಲಿ ಈ ರೀತಿ ಭ್ರಷ್ಟಾಚಾರ ಮಾಡತಕ್ಕಂಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹ ಮಾಡಿದ್ದೇನೆ. ಅದು ಏನೂ ಪ್ರಯೋಜನವಾಗಿಲ್ಲ.

ಸ್ವಾಮಿ ಇನ್ನೊಂದು ವಿಷಯ. ತಾವು ನೋಟ್ ಮಾಡಿಕೊಳ್ಳಬೇಕು. ಕರ್ನಾಟಕ ಲೋಕ ಸೇವಾ ಆಯೋಗದವರು ೧೯೮೫ರಲ್ಲಿ ಗೆಜೆಟೆಡ್ ಪ್ರೊಬೇಷನರ್ಸ್ ಪರೀಕ್ಷೆಯನ್ನು ನಡೆಸಿದರು. ಅದರಲ್ಲಿ ರಿ.ನಂ. ೧೨೪೫ ಮತ್ತು ೧೮೪೫೮ ಇಬ್ಬರು ಅಭ್ಯರ್ಥಿಗಳು ಈ ಪರೀಕ್ಷೆಗೆ ಕುಳಿತುಕೊಂಡಿದ್ದರು. ಗುಲ್ಬರ್ಗಾ ಕೇಂದ್ರವನ್ನು ಇವರಿಗೆ ನೀಡಿ ವಿಜಯ ವಿದ್ಯಾಲಯವನ್ನು ನೀಡಿದ್ದರು. ಕೊನೆಯ ಗಳಿಗೆಯಲ್ಲಿ ಕೇಂದ್ರವನ್ನು ಬದಲಾಯಿಸಿ ಸರ್ಕಾರಿ ಜ್ಯೂನಿಯರ್ ಕಾಲೇಜಿಗೆ ವರ್ಗಾಯಿಸಿದರು. ನನಗೆ ತಿಳಿದ ಮಟ್ಟಿಗೆ ಒಮ್ಮೆ ನೀಡಲಾದ ಪರೀಕ್ಷಾ ಕೇಂದ್ರವನ್ನು ಕಾನೂನು ರೀತ್ಯಾ ಬದಲಾಯಿಸಬಾರದು. ಆಯಾ ಪರೀಕ್ಷಾ ಕೇಂದ್ರಗಳಿಗೆ ಎಷ್ಟು ಬೇಕೋ ಅಷ್ಟು ಪ್ರಶ್ನೆ ಪತ್ರಿಕೆಗಳನ್ನು ಮಾತ್ರ ಪೂರೈಕೆ ಮಾಡಿರುತ್ತಾರೆ. ಎರಡು ಪ್ರಶ್ನೆ ಪತ್ರಿಕೆ ಹೇಗೆ ಹೆಚ್ಚಾಗಿ ಕಳುಹಿಸಿದಿರಿ ಮತ್ತು ಕೊನೆಯ ಗಳಿಗೆಯಲ್ಲಿ ಸೆಂಟರ್ ಏತಕ್ಕಾಗಿ ಚೇಂಜ್ ಮಾಡಿದಿರಿ? ತಮಗೆ ಹೇಳಬೇಕೆಂದರೆ ಇನ್ನೂ ಇಂಥ ಅನೇಕ ಉದಾ ಹರಣೆಗಳು ಇವೆ. ಡೈರೆಕ್ಟೋರೇಟ್ ಆಫ್ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ೧೪೨ ಜನ ಸೆಕೆಂಡ್ ಗ್ರೇಡ್ ಆಫೀಸರ್‌ನ ರೆಕ್ರೂಟ್‌ಮೆಂಟ್ ಮಾಡಿದ್ದಾರೆ. ಬಿಸಿಎಸಿ ಸರ್ಟಿಫಿಕೇಟ್ ಇಲ್ಲಾ ಎಂದು ಹೇಳಿ ಯಾವುದೋ ಒಂದು ಕಾರಣಕ್ಕೋಸ್ಕರ ಅವರ ಹೆಸರು ಸೆಲೆಕ್ಷನ್ ಲಿಸ್ಟ್‌ನಲ್ಲಿ ಬರಲಿಲ್ಲ. ಇದರ ಬಗ್ಗೆ ಬೇಕಾದರೆ ನಾನು ಡೀಟೈಲ್ಸ್ ಕೊಡುತ್ತೇನೆ. ಇನ್ನು ಮುಂದೆ ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಪಬ್ಲಿಕ್ ಸರ್ವಿಸ್ ಕಮಿಷನ್ ಬಗ್ಗೆ ಏಕೆ ಮಾತನಾಡಿದೆ ಎಂದರೆ ರಾಜ್ಯದ ವಿದ್ಯಾವಂತ ತರುಣರಿಗೆ ನ್ಯಾಯ ಸಿಗಬೇಕಾದ ಸ್ಥಳಗಳಲ್ಲಿ ಅಲ್ಲಿರುವ ಅಧಿಕಾರಿಗಳು ಒಳವ್ಯವಹಾರ ಮಾಡುತ್ತಿದ್ದಾರೆ ಮತ್ತು ಕಾನೂನು ಬಾಹಿರ ಕೆಲಸಗಳನ್ನು ಮಾಡುತ್ತಿದ್ದಾರೆ ಹೀಗಾದರೆ ನಮ್ಮ ವಿದ್ಯಾವಂತ ತರುಣರಿಗೆ ನ್ಯಾಯ ಸಿಕ್ಕುತ್ತದೆಯೆ? ದಯಮಾಡಿ ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಈ ಆಪಾದನೆಯ ಬಗ್ಗೆ ಉತ್ತರ ಬರಬೇಕೆಂದು ನಾನು ಅಪೇಕ್ಷಿಸುವುದಿಲ್ಲ. ಆದರೆ ಇದರ ಬಗ್ಗೆ ಸರ್ಕಾರ ಇನ್ನು ಮುಂದೆಯಾದರೂ ಈ ರೀತಿ ಆಗದಂತೆ ಸೂಕ್ತವಾದ ಕಾರ್ಯಕ್ರಮ ವನ್ನು ತೆಗೆದುಕೊಳ್ಳುತ್ತದೆಂದು, ಸರಿಯಾದಂತಹ ಒಂದು ಆಶ್ವಾಸನೆ ಸಿಕ್ಕರೆ ನನಗೆ ಅದಕ್ಕಿಂತ ಹೆಚ್ಚಾಗಿ ತಮ್ಮಿಂದ ಏನನ್ನೂ ಅಪೇಕ್ಷಿಸುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಟ್ಯಾಕ್ಸೇಷನ್ ಬಗ್ಗೆ ಹಿಂದೆ ನಮ್ಮ ಮುಖ್ಯಮಂತ್ರಿಗಳು ಟರ್ನ್ ಓವರ್ ಟ್ಯಾಕ್ಸನ್ನು ೫ ಲಕ್ಷದಿಂದ ೧೫ ಲಕ್ಷಕ್ಕೆ ಹೆಚ್ಚು ಮಾಡಿ ಸಣ್ಣವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡುವ ಬಗ್ಗೆ

ಒಂದು ತೀರ್ಮಾನವನ್ನು ತೆಗೆದುಕೊಂಡರು. ಆದರೆ ಈ ವರ್ಷ ಏನು ಮಾಡಿದ್ದಾರೆ ಎಂದರೆ ೧೫ ಲಕ್ಷ ಇದ್ದಂತಹ ಟರ್ನ್‌ಓವರ್ ಟ್ಯಾಕ್ಸನ್ನು ೫ ಲಕ್ಷಕ್ಕೆ ಇಳಿಸಿದ್ದಾರೆ. ಕಾರಣ ಇದರಲ್ಲಿ ಹಣ ದುರುಪಯೋಗ ವಾಗುತ್ತಿದೆಯೆಂದು. ಈಗ ನಾನು ಹೇಳುವುದೇನೆಂದರೆ ನೀವು ಒಂದು ಕಾನೂನು ಮಾಡಿದ ಮೇಲೆ ಅಲ್ಲಿರುವ ಸಾವಿರಾರು ಜನ ಅಧಿಕಾರಿಗಳಿಗೆ ಕೊಟ್ಯಾಂತರ ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದೀರಿ. ಇದಕ್ಕೆ ತಾವು ಹೇಳಿರುವ ಕಾರಣವೇನೆಂದರೆ ಭ್ರಷ್ಟಾಚಾರ ತಾಂಡವಾಡುತ್ತಿದೆಯೆಂದು. ಎಷ್ಟರ ಮಟ್ಟಿಗೆ ಇದು ಸರಿಯೆಂದು ತಾವು ಸ್ವಲ್ಪ ಯೋಚನೆ ಮಾಡಿ ನೋಡಿ. ಆದ್ದರಿಂದ ಇದರ ಬಗ್ಗೆ ಯಾವುದೇ ಒಂದು ಕಾರಣವನ್ನು ಒಡ್ಡದೆ ಹಿಂದೆ ಯಾವ ರೀತಿ ಇತ್ತೋ ಅದನ್ನೇ ಅನುಸರಿಸಿ ಕೊಂಡು ಹೋಗಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸಣ್ಣ ವರ್ತಕರಿಗೆ ಮತ್ತು ವ್ಯಾಪಾರಸ್ಥರಿಗೆ ವಾಣಿಜ್ಯ ಇಲಾಖೆಯಲ್ಲಿ ಲೈಸೆನ್ಸ್‌ಗಳನ್ನು ಕೊಡುವುದರಲ್ಲಿ ಬಹಳ ವಿಳಂಬವಾಗುತಿದೆ. ಹಿಂದೆ ಗುಂಡೂರಾಯರ ಸರ್ಕಾರವಿದ್ದಾಗ ಲೈಸೆನ್ಸ್‌ಗಳನ್ನು ರಿನೀವಲ್ ಮಾಡುವುದಕ್ಕೆ ೧೫೦ ರೂಪಾಯಿಗಳು ಇತ್ತು, ಆದರೆ ನೀವು ಅದನ್ನು, ಈಗ ೨೦೦ ರೂಪಾಯಿಗೆ ಏರಿಸಿದ್ದೀರಿ. ಇದು ತಾವು ಬಡವರನ್ನು ಉದ್ಧಾರ ಮಾಡುವ ನೀತಿಯೇ? ಆದ್ದರಿಂದ ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಬಡವರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಷಯವೇನೆಂದರೆ, ಕೊನೆಯ ಪಕ್ಷ ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಮತ್ತು ವರ್ತಕರಿಗೆ ೧ ಲಕ್ಷದವರೆಗೂ ಲೈಸನ್ಸನ್ನು ತೆಗೆದುಕೊಳ್ಳುವ ಅಗತ್ಯವಿಲ್ಲ ವೆಂದು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ ಅನೇಕ ಭ್ರಷ್ಟಾಚಾರಿಗಳಿಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಈಗ ಕ್ಷಣ ಕ್ಷಣಕ್ಕೂ ರಿನೀವಲ್‌ಗಳನ್ನು ಮಾಡುವಾಗ ಬಡವರಿಗೆ ಬಹಳ ಕಿರುಕುಳ ಕೊಡುತ್ತಿದ್ದಾರೆ, ಹಣವನ್ನು ವಸೂಲು ಮಾಡುತ್ತಿದ್ದಾರೆ. ಆದರೆ ವಾಣಿಜ್ಯ ಇಲಾಖೆಯಲ್ಲಿರುವ ಅಧಿಕಾರಿಗಳೆಲ್ಲ ಭ್ರಷ್ಟರೆಂದು ಹೇಳುವುದಕ್ಕೆ ನಾನು ಸಿದ್ಧನಿಲ್ಲ. ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಿರೆಂದು ನಂಬುತ್ತೇನೆ.

ಇತ್ತೀಚೆಗೆ ಈ ಹಲ್ಲುಪುಡಿ ವ್ಯಾಪಾರಸ್ಥರು ನನಗೊಂದು ಲೆಟರ್‌ನ್ನು ಬರೆದಿದ್ದಾರೆ. ಅವರು ಹೇಳಿರುವುದೇನೆಂದರೆ, ಆಂಧ್ರ, ಮಹಾರಾಷ್ಟ್ರ ಮತ್ತು ಕೇರಳದಲ್ಲಿ ೮ ಪರ್ಸೆಂಟ್ ಮತ್ತು ತಮಿಳು ನಾಡಿನಲ್ಲಿ ೭ ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಇದೆ. ಆದರೆ ನಮ್ಮ ಕರ್ನಾಟಕದಲ್ಲಿ ೧೬ ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಇದೆ. ಹೀಗಾದರೆ ಹಳ್ಳಿಯ ಬಡ ಜನರ ಗತಿ ಏನು? ಹಿಂದಿನ ಕಾಲದಲ್ಲಿ ಬಡ ಜನರು ಮತ್ತು ರೈತರು ಬೇವಿನ ಸೊಪ್ಪಿನಿಂದ ಹಲ್ಲನ್ನು ಉಜ್ಜುತ್ತಿದ್ದರು, ಇವರು ಉಪಯೋಗಿಸುತ್ತಿದ್ದ ಹಲ್ಲುಪುಡಿಯ ಮೇಲೂ ತಾವು ಈಗ ಟ್ಯಾಕ್ಸ್ ಹಾಕಿದ್ದೀರಿ. ಬಹುಶಃ ನಿಮ್ಮ ಅಧಿಕಾರಿಗಳ ತಪ್ಪು ಅಭಿಪ್ರಾಯದಿಂದ ಇದನ್ನು ಜಾಸ್ತಿ ಮಾಡಿದ್ದೀರಿ ಎಂದು ಕಾಣುತ್ತದೆ. ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗದುಕೊಂಡರೆ ಬಡ ರೈತರಿಗೆ ಅನುಕೂಲವಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ,

ಸ್ವಾಮಿ ನಮ್ಮ ಮುಖ್ಯಮಂತ್ರಿಗಳು ಎಲ್ಲಾ ಮಂತ್ರಿಗಳಿಗೆ ಸಂಬಂಧಪಟ್ಟಂತೆ ಕೆಲವು ಸಲಹಾ ಸಮಿತಿಗಳನ್ನು ಮಾಡಿದರು. ಶಾಸಕರುಗಳನ್ನು ಸೇರಿಸಿಕೊಂಡು ಕೆಲವು ಸಮಿತಿಗಳನ್ನು ಮಾಡಿದರು. ಆ ಸಮಿತಿಗಳು ಏನು ಆಯಿತು ? ಒಂದೊಂದು ಸಲಹಾ ಸಮಿತಿಗೆ ೪-೫ ಜನ ಎಂ.ಎಲ್.ಎ ಗಳನ್ನು ಸೇರಿಸಿಕೊಂಡು ಈ ಸಮಿತಿಗಳನ್ನು ಮಾಡಿದಿರಿ, ಸ್ವಾಮಿ ಇದು ನಿಜಕ್ಕೂ ಒಳ್ಳೆಯ ಉದ್ದೇಶ. ಎಷ್ಟೋ ಸಂಗತಿಗಳನ್ನು ನಾವು ಇಲ್ಲಿ ಬಹಿರಂಗವಾಗಿ ಮಾತನಾಡುವುದಕ್ಕೆ ಆಗುವುದಿಲ್ಲ ಅಲ್ಲಿ ನಾವು ಅವುಗಳ ಬಗ್ಗೆ ಚರ್ಚೆ ಮಾಡಬಹುದಿತ್ತು, ತೀರ್ಮಾನ ತೆಗೆದುಕೊಳ್ಳಬಹುದಿತ್ತು: ಆದರೆ ಈ ಸಮಿತಿ ಗಳಲ್ಲಿ ಎಷ್ಟು ಸಭೆಗಳು ನಡೆದಿವೆ? ಮಂತ್ರಿಗಳನ್ನು ಕೆಳಗಿಳಿಸುವ ಗೊಂದಲ ಆಯಿತು. ಅದು ಹೋಗಲಿ ತಾವುಗಳು ಇರುವವರು ಮೀಟಿಂಗ್‌ಗಳನ್ನು ಕರೆಯಬಹುದಿತ್ತು. ನೀವು ಎಷ್ಟು ಸಭೆಗಳನ್ನು ಮಾಡಿದಿರಿ ? ನಿಮಗೆ ಖುಷಿ ಬಂದಾಗ ಕಮಿಟಿ ಮಾಡುತ್ತೀರಿ ? ಖುಷಿ ಬಂದಾಗ ರದ್ದು ಮಾಡುತ್ತೀರಿ? ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ನಾನು ಹೇಳುತ್ತೇನೆ ಈ ಕಮಿಟಿಗಳನ್ನು ತಾವು ಮುಂದು ವರಿಸಿಕೊಂಡು ಹೋಗುವುದು ಒಳ್ಳೆಯದು ಇನ್ನು ನನಗೆ ಯಾವ ಇಲಾಖೆಯ ಬಗ್ಗೆ ಮಾತನಾಡ ಬೇಕೆಂಬ ಬಗ್ಗೆ ತಿಳಿಯುತ್ತಿಲ್ಲ. ಈಗ ಕೆ.ಎಸ್.ಆರ್.ಟಿ.ಸಿ ಬಗ್ಗೆ ಹೇಳುವುದಾದರೆ, ಈ ಬಗ್ಗೆ ನನಗೆ

ಸನ್ಮಾನ್ಯ ಮಂತ್ರಿಯವರಲ್ಲಿ ಗೌರವ ಇದೆ. ಸಣ್ಣ ಉಳಿತಾಯ ಯೋಜನೆಯಲ್ಲಿ ನಿಜಕ್ಕೂ ನೀವು ಕರ್ನಾಟಕ ರಾಜ್ಯದಲ್ಲಿ ಒಂದು ಇತಿಹಾಸವನ್ನು ನಿರ್ಮಾಣ ಮಾಡಿದ್ದೀರಿ ಇದರಿಂದ ನಿಮ್ಮ ಬಗ್ಗೆ ನನಗೆ ಗೌರವ ಇದೆ. ಈ ಸಣ್ಣ ಉಳಿತಾಯ ಯೋಜನೆಯ ಸಂಬಂಧದಲ್ಲಿ ನೀವು ಚಿಕ್ಕಮಗಳೂರಿಗೆ ನೀವು ಹೋಗಿದ್ದೀರಿ. ಅಲ್ಲಿಯ ಜನ ನಿಮಗೆ ಕೋ ಅಪರೇಟಿವ್ ಮಾಡಿ ಮ್ಯಾಕ್ಸಿಮಂ ಹಣವನ್ನು ಸಂಗ್ರಹ ಮಾಡಿಕೊಟ್ಟರು. ನೀವು ಅವರಿಗೆ ಕುಡಿಯುವ ನೀರಿನ ಅನುಕೂಲಗಳನ್ನು ಒದಗಿಸುವ ಬಗ್ಗೆ ಆಶ್ವಾಸನೆಗಳನ್ನು ಕೊಟ್ಟಿದ್ದೀರಿ ಅದನ್ನು ನೀವು ಇನ್ನು ಮಾಡಿಲ್ಲ. ಈಗ ಮತ್ತೊಮ್ಮೆ ನೀವು ಅಲ್ಲಿಗೆ ಹೋದರೆ ಜನ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ. ಬೇಕಾದರೆ ನೀವೇ ಒಮ್ಮೆ ಅಲ್ಲಿ ಹೋಗಿ ನೋಡಿ ಆದುದರಿಂದ ಈ ಸಮಯದಲ್ಲಿ ಹಣ ಸಂಗ್ರಹ ಮಾಡಿದ್ದನ್ನು ವಾಪಸ್ಸು ನೀರಿನ ಅನುಕೂಲ ಒದಗಿಸುವುದಕ್ಕಾಗಿ ವಿನಿಯೋಗಿಸಬೇಕೆಂದು ಹೇಳುತ್ತೇನೆ. ಅಲ್ಲಿ ನೀವು ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದೀರೋ ಅವುಗಳನ್ನು ಆದಷ್ಟು ಜಾಗ್ರತೆ ಪೂರೈಸಬೇಕೆಂದು ಹೇಳುತ್ತೇನೆ. ಬೇಕಾದರೆ ಶಿಕಾರಿಪುರಕ್ಕೆ ಹೋಗಿ ನೋಡಿ ಅಲ್ಲಿ ಎಷ್ಟು ನೀರಿನ ತೊಂದರೆ ಇದೆಯೆಂದು ಆದ್ದರಿಂದ ತಾವು ಕೊಟ್ಟಿರ ತಕ್ಕಂಥ ಆಶ್ವಾಸನೆಗಳನ್ನು ಕಾರ್ಯಗತಗೊಳಿಸಿದರೆ ತುಂಬಾ ಅನುಕೂಲವಾಗುತ್ತದೆ. ಸ್ವಾಮಿ ಈ ಸಣ್ಣ ಉಳಿತಾಯ ಯೋಜನೆಯಲ್ಲಿ ಇಷ್ಟೊಂದು ಯಶಸ್ವಿಯಾಗಿರುವವರು ಈ ಕೆ ಎಸ್ ಆರ್. ಟಿಸಿ ಯಲ್ಲಿ ಏಕೆ ವಿಫಲರಾಗುತ್ತಿದ್ದೀರೆಂದು ನನಗೆ ಅರ್ಥವಾಗುತ್ತಿಲ್ಲ. ಅಲ್ಲಿ ಹಾವು ಚೇಳುಗಳು ಇರುತ್ತವೆ, ನಿಮ್ಮಂಥ ಪ್ರಾಮಾಣಿಕ ಮಂತ್ರಿಗಳು ಕೆಲಸ ಮಾಡುವುದಕ್ಕೆ ತೊಂದರೆಯಾಗುತ್ತದೆಂದು ನನಗೆ ಗೊತ್ತು ಆದರೆ ಈ ಸಂದರ್ಭದಲ್ಲಿ ಅಂದರೆ ಸಿಂಧ್ಯರವರು ಇರತಕ್ಕ ಕಾಲದಲ್ಲಿ ಈ ಕೆ. ಎಸ್. ಆರ್. ಟಿ. ಸಿ ಯ ಚೇರ್ ಮೆನ್‌ರವರು ಮಂತ್ರಿಗಳಾಗಬೇಕೆಂದು ಹಠ ಹಿಡಿದರು ಅದು ಆಯಿತು ಆಮೇಲೆ ಬದಲಾವಣೆ ಮಾಡಿದಿರಿ ಈಗ ಚೇರ್‌ಮನ್ ಬೇರೆ ಇದ್ದಾರೆ. ಮಂತ್ರಿಗಳನ್ನು ಒಂದು ಸಾರಿ ಮಾಡಿದಿರಿ ಒಂದು ಸಾರಿ ತೆಗೆದು ಹಾಕಿದಿರಿ ಇದಕ್ಕೆ ಕಾರಣ ಏನು ? ಇದರ ಫಲಿತಾಂಶ ಏನಾಯಿತು ? ಇದಕ್ಕೆ ವೈಜ್ಞಾನಿಕ ಕಾರಣ ಏನಾದರೂ ಇದೆಯೆ ? ತುಲನಾತ್ಮಕವಾದಂಥ ಕಾರಣವನ್ನು ಹೇಳಲು ನಿಮಗೆ ಸಾಧ್ಯವೆ ? ಖುಷಿ ಬಂದಾಗ ಕಮಿಟಿಗಳನ್ನು ಮಾಡುತ್ತೀರಿ, ಮಂತ್ರಿಗಳನ್ನು ಮಾಡುತ್ತೀರಿ, ಮತ್ತೆ ಖುಷಿ ಬಂದಾಗ ಅದನ್ನು ರದ್ದು ಮಾಡುತ್ತೀರಿ, ಇದರ ಪರಿಣಾಮ ಮಂತ್ರಿಗಳ ಮೇಲಾಗಿದೆ, ಚೇರ್‌ಮೆನ್‌ರವರ ಮೇಲಾಗಿದೆ. ಜನ ಇದರ ಬಗ್ಗೆ ಮಾತನಾಡುತ್ತಿದ್ದಾರೆ. ಇಲಾಖೆಯ ಸಿಬ್ಬಂದಿಗಳು ಮಾತನಾಡುತ್ತಿದ್ದಾರೆ. ಇದು ನಿಜವೆ ? ದಯೆವಿಟ್ಟು ಇದರ ಬಗ್ಗೆ ತಾವು ಹೇಳಬೇಕು ಇನ್ನು ಕೆ. ಎಸ್. ಆರ್. ಟಿ. ಸಿ. ಈ ಪಾಲಿಸಿ ಡಿಸಿಷನ್ ಬಗ್ಗೆ ತಾವು ಬೋರ್ಡ್‌ನಲ್ಲಿಟ್ಟು ಚೇರ್‌ಮೆನ್ ಜೊತೆ ಚರ್ಚೆ ಮಾಡಿ ಅಭಿಪ್ರಾಯ ತೆಗೆದು ಕೊಳ್ಳುತ್ತೀರೋ ಅಥವಾ ಹೊರಗಡೆ ಈ ಪಾಲಿಸಿ ಡಿಸಿಷನ್ ಬಗ್ಗೆ ತಾವೇ ತೀರ್ಮಾನಕ್ಕೆ ಬರುತ್ತೀರೋ ಗೊತ್ತಿಲ್ಲ. ಇಲ್ಲಿ ತಾವು ಯಾವ ಸಿಸ್ಟಮ್ ಆಡಾಪ್ಟ್ ಮಾಡುತ್ತೀರೆಂದು ನನಗೆ ಗೊತ್ತಿಲ್ಲ. ಆದ್ದರಿಂದ ದಯವಿಟ್ಟು ತಾವು ಇದರ ಬಗ್ಗೆ ಸರಿಯಾದಂಥ ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ ಸನ್ಮಾನ್ಯ ಮಂತ್ರಿಗಳು ಬಾಡಿ ಬಿಲ್ಡಿಂಗ್ ಯೂನಿಟ್ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಅದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಅದನ್ನು ಇನ್ನು ಎಕ್ಸ್‌ಪ್ಯಾಂಡ್ ಮಾಡಬೇಕೆಂದು ಯೋಜನೆ ಮಾಡಿದ್ದಿರಿ ಮತ್ತೆ ಕೆಂಗೇರಿಯ ಬಳಿ ೯೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಶೆಡ್ ಮಾಡಬೇಕೆಂದು ಒಂದು ಯೋಜನೆ ಮಾಡಿದಿರಿ ನಾವು ಸಹ ಅಲ್ಲಿಗೆ ಹೋಗಿಬಂದೆವು ಮತ್ತೆ ಕೆಲವು ಸಲಹೆಗಳನ್ನು ಕೊಟ್ಟಿದ್ದೆವು. ಇದರಿಂದ ಬಹಳ ಸಂತೋಷ ಪಟ್ಟಂತಹ ವ್ಯಕ್ತಿಗಳು ನಾವು ಆದರೆ ಈಗ ಅದನ್ನು ತಾವು ಅಬೆಂಡನ್ ಮಾಡಿ ಮುಗಿಸಬೇಕೆಂಬ ಯೋಜನೆ ಮಾಡಿದ್ದೀರಿ ಇದಕ್ಕೆ ಕಾರಣ ಏನು ? ಅದು ಏನು ಲಾಸ್‌ನಲ್ಲಿ ನಡೆಯುತ್ತಿದೆಯೇ ? ಅಥವಾ ತಾವೇ ಏನೋ ಈ ಬಾಡಿ ಬಿಲ್ಡಿಂಗ್ ಯೂನಿಟ್‌ನ್ನು ಮುಗಿಸಬೇಕೆಂದು ಯೋಚನೆ ಮಾಡುತ್ತಿದ್ದೀರೆಂದು ನಾನು ಕೇಳಿದೆ ಮೊನ್ನೆ ನಿಮ್ಮ ಮ್ಯಾನೇಜಿಂಗ್ ಡೈರೆಕ್ಟರ ರವರೊಬ್ಬರು ಫಾರಿನ್‌ಗೆ ಹೋಗಿ ಬಂದರು. ಅವರು ಯಾರ ಖರ್ಚಿನಲ್ಲಿ ಹೋಗಿಬಂದರು ? ಅಥವಾ ಸರ್ಕಾರನೇ ಇದರ ಖರ್ಚನ್ನು ಕೊಟ್ಟಿದೆಯೆ ? ಇದು ಮೀಟಿಂಗ್‌ನಲ್ಲಿ ತೀರ್ಮಾನವಾಯಿತೆ ? ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ನಾನು ಶಾಸಕನಾಗಿರುವುದರಿಂದ ಇದು ನನಗೆ ಬಂದ ಸಂದಿಗ್ಧ. ಅಥವಾ ಅವರನ್ನು ಕರೆದುಕೊಂಡು ಬಂದು ಅವರು ಒಂದು ೨೫ ಪರ್ಸೆಂಟ್ ಮತ್ತು ಸರ್ಕಾರ ಒಂದು ೭೫ ಪರ್ಸೆಂಟ್ ಇನ್‌ವೆಸ್ಟ್ ಮಾಡಿ ವ್ಯವಹಾರ ಮಾಡಬೇಕೆಂದೇನಾದರೂ ಯೋಚನೆ ಮಾಡಿದ್ದೀರಾ ? ಇದರ ಬಗ್ಗೆ ಯಾವುದಾದರೂ ತೀರ್ಮಾನ ತೆಗೆದುಕೊಂಡಿದ್ದೀರಾ ಅಥವಾ ಆ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಖುಷಿ ಬಂದು ಅವರು ತಮ್ಮ ಖರ್ಚಿನಲ್ಲೇ ಸುಮ್ಮನೆ ಆ ಕಡೆ ಹೋಗಿ ಬಂದರೆ ಇದರ ಬಗ್ಗೆ ಯೋಚನೆ ಮಾಡಬೇಕು ಮತ್ತೆ ಸರಿಯಾದಂಥ ವಿಚಾರವನ್ನು ಈ ಸದನದ ಮುಂದಿಡಬೇಕೆಂದು ಹೇಳುತ್ತೇನೆ.

೧೯೮೫ರಲ್ಲಿ ತಾವು ಜನತೆಯ ಹಿತದೃಷ್ಟಿಯಿಂದ ಕೆಎಸ್‌ಆರ್‌ಟಿಸಿ ಯಲ್ಲಿ ಲಾಸ್ ಆಗುತ್ತದೆಂದು ೨೫ ರಿಂದ ೩೦ ಪರ್ಸೆಂಟ್‌ನವರೆಗೆ ಪ್ರಯಾಣಿಕರಿಗೆ ಬಸ್ ದರವನ್ನು ಜಾಸ್ತಿ ಮಾಡಿದಿರಿ. ತಾವು ಸಣ್ಣ ಉಳಿತಾಯದ ಬಗ್ಗೆ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದೀರಿ ಅದೇ ರೀತಿಯಾಗಿ ಇಲ್ಲೂ ಒಳ್ಳೆ ಹೆಸರು ತೆಗೆದುಕೊಳ್ಳಬೇಡವೇ ? ನೀವು ಈಗ ಈ ಕೆಎಸ್‌ಆರ್‌ಟಿಸಿ ಯಲ್ಲಿ ಏನು ಲಾಭ ಬಂದಿದೆ ನೀವು ಏನು ಬಸ್‌ದರ ಏರಿಸಿದ್ದೀರಿ ಅದಕ್ಕೆ ಸರಿಸಮನಾಗಿ ಬಂದಿದೆಯೆಂದು ನಿಮಗೇನಾದರೂ ಕಾಣುತ್ತದೆಯೋ, ಈ ಲಾಭ ಅದಕ್ಕೆ ಸರಿಸಮನಾಗಿ ಸರಿಯಾಗಿದೆ ಎಂದು ನಿಮಗೆ ಕಂಡುಬಂದಿದ್ದರೆ ಸರಿ. ನನಗೆ ಗೊತ್ತಿರುವ ಪ್ರಕಾರ ಇದರಿಂದ ನಿಮ್ಮ ಬಸ್‌ನ ದರದ ಏರಿಕೆಯಿಂದ ಸುಮಾರು ೩೦–೪೦ ಕೋಟಿ ರೂಪಾಯಿ ಲಾಭ ಏನು ಬರಬೇಕಾಗಿತ್ತೊ ಅಷ್ಟು ಲಾಭ ಬರಲಿಲ್ಲ. ನೀವು ಬಸ್ ದರವನ್ನು ೩೫–೪೦ ಪರ್ಸೆಂಟ್ ಏರಿಸಿದ ಮೇಲೆ ಅದಕ್ಕೆ ಸರಿಸಮನಾದ ಲಾಭ ಬರಲಿಲ್ಲ. ಆದುದರಿಂದ ಇದರ ಬಗ್ಗೆ ತಾವು ಸಾಕಷ್ಟು ಎಚ್ಚರಿಕೆ ವಹಿಸಬೇಕೆಂದು ಅಷ್ಟು ಮಾತ್ರ ಹೇಳುತ್ತೇನೆ. ಒಂದು ವೇಳೆ ನಾನು ಹೇಳುವುದರಲ್ಲಿ ತಪ್ಪು ಇದ್ದರೆ ತಿಳಿಸಿ. ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಸರ್ಕಾರಕ್ಕೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನಿಮ್ಮ ಅಧಿಕಾರಿಗಳು ತಪ್ಪು ತಿಳಿದುಕೊಳ್ಳುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಬೆಂಗಳೂರಿನಲ್ಲಿರುವ ನಿಮ್ಮ ಅಧಿಕಾರಿಗಳಿಗೆ ವಿಧಾನಸೌಧಕ್ಕೆ, ಹಾಗೆಯೇ ಬೇರೆ ಬೇರೆ ಕಡೆ ಆಫೀಸುಗಳಿಗೆ ಹೋಗಿ ಬರುವುದಕ್ಕೆ ಕಾರ್‌ಗಳನ್ನು ಕೊಟ್ಟಿದ್ದೀರಿ. ಆದರೆ ಟಾಪ್ ಲೆವಲ್‌ನಲ್ಲಿರುವ ಅಧಿಕಾರಿಗಳಿಗೆ ಅವರ ಘನತೆ ಗೌರವಕ್ಕೆ ತಕ್ಕಂತೆ ಕೊಡುವುದು ಅಗತ್ಯ ಇದೆ. ಹಾಗೆ ಮಾಡಿಲ್ಲ, ಎಲ್ಲರಿಗೂ ಕಾರ್ ಕೊಟ್ಟಿದ್ದೀರಿ. ಅವರು ಆಫೀಸಿಗೆ ಹೋಗುವುದಕ್ಕೆ, ಹೊರಗೆ ಹೋಗುವುದಕ್ಕೆ. ಊಟಕ್ಕೆ ಅವರ ಮನೆಗೆ ಹೋಗಿ ಕರೆದುಕೊಂಡು ಬರುವುದಕ್ಕೆ ಕೊಟ್ಟಿದ್ದೀರಿ, ಉದಾಹರಣೆ ಹೇಳುವುದಾದರೆ, ನಿಮ್ಮ ಕೆಎಸ್‌ಆರ್‌ಟಿಸಿ, ಆಫೀಸಿಗೆ ಜಯಪ್ರಕಾಶನಗರದ ಎರಡನೇ ಮತ್ತು ಮೂರನೇ ಹಂತದಿಂದ ೬ ಜನ ಆಫೀಸರು ಬರತ್ತಾರೆ. ಜಯನಗರ ೯ನೇ ಬ್ಲಾಕ್‌ನಿಂದ ೯ ಜನ ಬರುತ್ತಾರೆ, ವಿಲ್ಸನ್ ಗಾರ್ಡನ್‌ನಿಂದ ೧೨ ಜನ ಬರುತ್ತಾರೆ, ಆಫೀಸರುಗಳು ಟೂರ್ ಏನಾದರೂ ಹೋದರೆ ಅಂಥದಕ್ಕೆ ಕಾರ್ ಕೊಡಿ. ಈಗಾಗಲೇ ನಿಮ್ಮ ಕೆಎಸ್‌ಆರ್‌ಟಿಸಿಯ ನೌಕರರಿಗೆ ಸುಮಾರು ೧೦೦ ಕೋಟಿ ರೂಪಾಯಿಯಷ್ಟು ಸಂಬಳ ಜಾಸ್ತಿ ಮಾಡಿದ್ದೀರಿ. ಇದಲ್ಲದೆ ಪ್ರತಿ ದಿವಸ ಅವರು ಆಫೀಸಿಗೆ ಹೋಗಿ ಮನೆಗೆ ಬರುವುದಕ್ಕೆ ಕಾರ್ ಏನು ಕೊಟ್ಟಿದ್ದೀರಿ ಇದಕ್ಕೆ ೧೦ ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಬೇಕಾದರೆ ಅವರು ಕಾರ್ ಮೆಂಟೇನ್ ಮಾಡಲು ತಿಂಗಳಿಗೆ ೨೦೦–೩೦೦ ರೂಪಾಯಿ ಕೊಡಿ. ಅದು ಬಿಟ್ಟು ಇವರಿಗೆ ಕಾರ್‌ನ್ನು ಬಳಸುವುದಕ್ಕೆ ಈಗ ೪೦ ಲಕ್ಷ ರೂಪಾಯಿಗಳ ಅಂದಾಜು ಏನು ಇಟ್ಟಿದ್ದೀರೋ ಇದನ್ನು ಡ್ರಾಪ್ ಮಾಡಿ. ಅಗತ್ಯ ಇದ್ದ ಕಡೆ ಖರ್ಚು ಮಾಡಿ ಬೇಡ ಎನ್ನುವುದಿಲ್ಲ. ಇದಕ್ಕೆ ಬೇರೆ ಒಂದು ವ್ಯವಸ್ಥೆ ಮಾಡಿ. ಯಾರಾದರೂ ಕಾರ್ ಉಪಯೋಗಿಸಿದರೆ ಅಂಥವರಿಂದ ೧೦೦ ರೂಪಾಯಿಗಳನ್ನು, ಕಾರ್ಪೊರೇಷನ್ ರೂಲ್ಸ್ ಪ್ರಕಾರ ಅವರ ಸಂಬಳದಿಂದ ಡಿಡೆಕ್ಟ್ ಮಾಡಬೇಕು. ಇದುವರೆಗೆ ಈ ರೀತಿಯಾಗಿ ಯಾವ ಅಧಿಕಾರಿಯಿಂದಲ್ಲೂ ಅವರ ಸಂಬಳದಿಂದ ಡಿಡೆಕ್ಟ್ ಮಾಡಲಿಲ್ಲ. ಅವರಿಗೆ ಅಗತ್ಯ ಏನಾದರೂ ಇದ್ದರೆ ಈ ಸೌಲಭ್ಯವನ್ನು ಕೊಡಿ, ಯಾವ ಆಫೀಸರ್ಸ್ ಹೊರಗಡೆ ಆಫೀಸಿಗೆ ಹೋಗಿ ಬರಬೇಕು, ಯಾವ ಆಫೀಸರ್ಸ್‌ಗೆ ಹೊರಗಡೆ ಹೋಗಿ ಬರುವ ಓಡಾಟ ಇರುತ್ತದೆಯೋ ಅವರಿಗೆ ಬೇಕಾದ ಸೌಲಭ್ಯಗಳನ್ನು ಮಾಡಿಕೊಡಿ, ಬೇಡ ಎನ್ನುವುದಿಲ್ಲ. ಆದರೆ ಬೆಂಗಳೂರಿನಲ್ಲೇ ಇರತಕ್ಕಂಥವರು ಆಫೀಸಿಗೆ ಬರಬೇಕಾದರೆ ಅವರು ತಮ್ಮ ಸ್ವಂತ ಕಾರಿನಲ್ಲೇ ಬರಬೇಕು, ಆ ರೀತಿ ಮಾಡಬೇಕು. ಇನ್ನು ಸೆಂಟ್ರಲ್ ಆಫೀಸಿನಲ್ಲಿ ೫೦ ಎಸ್‌ಟಿಡಿ, ಫೋನ್‌ಗಳು ಇವೆ, ಹಾಗೆಯೇ ಇತರೇ ಆಫೀಸುಗಳಲ್ಲಿ ೧೮ ಐಎಸ್‌ಟಿಡಿ ಫೋನ್‌ಗಳು ಇವೆ. ಇದರ ಬಗ್ಗೆಯೂ ತಾವು ಗಮನ ಕೊಡಬೇಕೆಂದು ಹೇಳುತ್ತೇನೆ. ಪ್ರತಿಯೊಂದು ಇಲಾಖೆಯ ಗತಿಯೂ ಹೀಗೆಯೇ ಇದೆ. ನಾನು ಇದರ ಬಗ್ಗೆ ಹೇಳುವುದೇನೆಂದರೆ ಈ ಸಂಸ್ಥೆಯನ್ನು ಲಾಭದಾಯಕವಾಗಿ ಇನ್ನೂ ಏನೇನು ಅನುಕೂಲಗಳು ಆಗಬೇಕೋ ಅದರ ಬಗ್ಗೆ ಗಮನ ಕೊಡಬೇಕು ಎಂದು ಹೇಳುತ್ತೇನೆ. ಬರಗಾಲದಲ್ಲಿ ನಾವು ಇರುವಾಗ ಈ ರೀತಿ ಖರ್ಚು ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಈ ಸಂಸ್ಥೆಯಲ್ಲಿರುವ ಅಧಿಕಾರಿಗಳಿಗೆ ಅವರು ಕಾರ್‌ನಲ್ಲಿ ಓಡಾಡುವುದಕ್ಕೆ ಕೋಟ್ಯಾಂತರ ರೂಪಾಯಿಗಳ ಹಣ ಖರ್ಚು ಮಾಡುತ್ತಿದ್ದೀರಿ. ಆದರೆ ಈ ಸಂಸ್ಥೆಯ ಅಧಿಕಾರಿಗಳಿಗೆ ಒಬ್ಬ ಶಾಸಕರು ಕಾಗದ ಬರೆದರೆ ಆ ಪತ್ರಕ್ಕೆ ಉತ್ತರ ಬಾರದೇ ಇರುವ ಹಾಗೆ ನಮಗೆ ಒಂದು ತರಹ ಅವಮಾನ ಮಾಡುವ ಹಾಗೆ ಮಾಡುತ್ತಾರೆ ಅದು ಸರಿಯೇ ? ಈ ಸಂದರ್ಭದಲ್ಲಿ ಮೊನ್ನೆ ನಡೆದಂಥ ಒಂದು ಘಟನೆಯನ್ನು ಹೇಳುತ್ತೇನೆ. ಯಾವಯಾವ ಅಧಿಕಾರಿಗಳು ಹೇಗೇಗೆ ನಡೆದುಕೊಳ್ಳುತ್ತಾರೆನ್ನುವ ಒಂದು ಪಟ್ಟಿಯನ್ನೇ ಬೇಕಾದರೆ

ನಾನು ಕೊಡುತ್ತೇನೆ. ಮೊನ್ನೆ ದಿವಸ ನಾನು ಪಿಡಬ್ಲ್ಯೂಡಿ ಸೆಕ್ರೆಟರಿ-೧ ಅವರನ್ನು ನೋಡುವುದಕ್ಕೆ ಹೋಗಿದ್ದೆ. ಅಲ್ಲಿ ಪಿಎಸ್ ಹತ್ತಿರ ಹೋಗಿ ಮಾತನಾಡಿಕೊಂಡು ಬಂದೆ. ಅವರ ಪಕ್ಕದಲ್ಲಿ ಒಬ್ಬ ಕ್ಲರ್ಕ್ ಕುಳಿತಿದ್ದರು ನಾನು ಅವನಿಗೆ ಹೇಳಿದೆ ಏನೆಂದರೆ, ನಾನು ಒಂದು ಪತ್ರವನ್ನು ಕಳುಹಿಸಿ ಕೊಟ್ಟಿದ್ದೇನೆ, ನಿಮಗೇನಾದರೂ ಗೊತ್ತಿದೆಯೋ ಎಂದು ಹೇಳಿದಾಗ, ನನಗೆ ಗೊತ್ತಿಲ್ಲ, ಅವರು ಬಂದ ಮೇಲೆ ಹೇಳುತ್ತೇನೆಂದು ಹೇಳಿದರು. ಆಮೇಲೆ ನಾನು ೫ ನಿಮಿಷ ಹೊರಗೆ ಬಂದು ಸೀಟ್‌ನಲ್ಲಿ ಕುಳಿತುಕೊಂಡು ಸ್ವಲ್ಪ ವಿರಾಮಿಸಿಕೊಂಡುಬಂದುಬಿಟ್ಟೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಐ.ಎ.ಎಸ್. ಮತ್ತು ಐ.ಪಿ.ಎಸ್. ಆಫೀಸರು ಏನು ಇದ್ದಾರೆ ಅವರು ಅನೇಕ ಸಮಸ್ಯೆಗಳನ್ನು ಬಗೆಹರಿಸಬಹುದು, ಒಬ್ಬ ಶಾಸಕ ಜನತೆಯು ಸಮಸ್ಯೆಗಳನ್ನು ಹೇಳಲು ಆ ಅಧಿಕಾರಿಗಳ ಹತ್ತಿರ ಹೋದಾಗ ನಮಗೆ ಗೌರವ ಕೊಟ್ಟು ಒಂದು ಸೌಜನ್ಯತೆಯಿಂದಲಾದರೂ ಆ ಸಮಸ್ಯೆಗಳನ್ನು ಕೇಳುವುದಾದರೂ ಬೇಡವೇ? ಕೆಲಸ ಮಾಡಿಕೊಡದಿದ್ದರೆ ಹೋಗಲಿ, ಕೇಳುವಂಥ ಒಂದು ಸೌಜನ್ಯವೂ ಬೇಡವೇ ? ನಾನು ಈ ಸಂದರ್ಭದಲ್ಲಿ ಮಂತ್ರಿಗಳ ಹೆಸರು ಹೇಳುವುದಿಲ್ಲ. ನಾನು ಅನೇಕ ಇಲಾಖೆಗಳಿಗೆ ಹಾಗೂ ಮಂತ್ರಿಗಳಿಗೆ ಅನೇಕ ಸಮಸ್ಯೆಗಳ ಬಗ್ಗೆ ಕಾಗದ ಬರೆದಿದ್ದೇನೆ. ನಾನು ಎಲ್ಲಾ ಮಂತ್ರಿಗಳ ಮೇಲೂ ಹೇಳುವುದಿಲ್ಲ, ಕೆಲವು ಮಂತ್ರಿಗಳು ಮಾತ್ರ ಶಾಸಕನಾಗಿ ನಾನು ಕಾಗದ ಬರೆದ್ದಕ್ಕೆ ಒಂದು ಉತ್ತರವೂ ಬಂದಿಲ್ಲ. ಹೀಗಾದರೆ ನಮ್ಮ ಗೌರವ ಏನಾಯಿತು ? ಇದರ ಬಗ್ಗೆ ಛೇರ್ಮನ್‌ರವರು ಗೌರವ ಕೊಡುವುದು ಬೇಡ ಮಂತ್ರಿಗಳಾದರೂ ಗೌರವ ಕೊಡುವುದು ಬೇಡವೇ? ಇನ್ನೊಂದು ವಿಚಾರ ಏನೆಂದರೆ ಶಾಸಕರು ಮಂತ್ರಿಗಳಿಗೆ ಬರೆದಂಥ ಪತ್ರಕ್ಕೆ, ಮಂತ್ರಿಗಳು ತನ್ನ ಅಧಿಕಾರಿಗೆ ಅದರ ಬಗ್ಗೆ ಒಂದು ಡೈರೆಕ್ಷನ್ ಕೊಟ್ಟ ಮೇಲೂ ಆ ಅಧಿಕಾರಿ ನಮ್ಮ ಪತ್ರಕ್ಕೆ ಅಗೌರವ ಕೊಟ್ಟು ಮಾತನಾಡುವುದಾದರೆ, ಮತ್ತು ಆ ಅಧಿಕಾರಿ ನಮ್ಮ ಬಗ್ಗೆ ನಡೆದುಕೊಂಡ ರೀತಿ ನೀತಿ ಬಗ್ಗೆ ನಾವು ಏನುಹೇಳಬೇಕಾಗುತ್ತದೆ ಎನ್ನುವುದನ್ನು ತಾವೇ ಯೋಚನೆ ಮಾಡಿ ?

ಅದಕ್ಕಾಗಿ ನಾನು ಈ ಒಂದು ಉದಾಹರಣೆ ಕೊಟ್ಟು ಹೇಳಿದೆ. ಇಂತಹ ಅಧಿಕಾರಿಗಳ ಮೇಲೆ ನೀವು ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆಂದು ಹೇಳುತ್ತೇನೆ.

ಇನ್ನು ಕಿಂಕೋ ಪಾಪರ್ ಆಗುವ ಸ್ಥಿತಿಗೆ ಬಂದಿದೆ. ಅದು ತನ್ನ ನೌಕರರಿಗೆ ಸಂಬಳ ಕೊಡುವ ಸ್ಥಿತಿಯಲ್ಲಿ ಇಲ್ಲ. ಈಗ ಇದನ್ನು ಸಾರಿಗೆ ಸಂಸ್ಥೆ ಜೊತೆ ಸೇರಿಸುವ ಸುದ್ದಿಯನ್ನು ನಾನು ಕೇಳಿದೆ.

ಶ್ರೀ ಸಿದ್ದರಾಮಯ್ಯ.—ಅದನ್ನು ಸೇರಿಸಿಕೊಂಡಿದ್ದು ಆಯಿತು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ರೀತಿ ಪಾಪರ್ ಆಗುವಂತಹ ಸಂಸ್ಥೆಗಳನ್ನೆಲ್ಲಾ ಬೇರೆ ಒಳ್ಳೆಯ ಸಂಸ್ಥೆಗಳೊಡನೆ ಏತಕ್ಕೆ ಸೇರಿಸಿಕೊಳ್ಳಬೇಕು ? ಈ ಹಿಂದೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ರೈತರ ಅನುಕೂಲಕ್ಕೆಂದು ಸ್ಥಾಪನೆ ಆಯಿತು. ಆದರೆ ಈಗ ಅದೂ ಸಹ ನಷ್ಟದಲ್ಲಿ ನಡೆಯುತ್ತಿದೆ. ಈಗ ಅದು ಹಣ್ಣಿನ ರಸವನ್ನು ತಯಾರು ಮಾಡುತ್ತಿದೆ. ನಷ್ಟದಲ್ಲಿರುವಂತಹ ಸಂಸ್ಥೆಗಳನ್ನು ಬೇರೆ ಸಂಸ್ಥೆಗಳ ಜೊತೆಗೆ ಸೇರಿಸುವಂತಹ ತೀರ್ಮಾನವನ್ನು ಏತಕ್ಕೆ ಕೈಕೊಳ್ಳುತ್ತಾರೋ ನನಗೆ ಅರ್ಥವಾಗುವುದಿಲ್ಲ.

ಗೃಹ ಇಲಾಖೆ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಸಚಿವರು ಒಳ್ಳೆಯ ಪ್ರಾಮಾಣಿಕ ರೀತಿಯಿಂದ ಕೆಲಸ ಮಾಡಬೇಕೆಂದು ಅಪೇಕ್ಷೆ ಪಡುತ್ತಾರೆ. ಆದರೆ ಹಳ್ಳಿಗಳ ಮಟ್ಟದಲ್ಲಿ ಮತ್ತು ತಾಲ್ಲೂಕ್ ಮಟ್ಟದಲ್ಲಿ ನಿಮ್ಮ ಅಧಿಕಾರಿಗಳು ನಡೆದುಕೊಳ್ಳುವ ರೀತಿ ನಿಮಗೆ ಸರಿ ಎನಿಸುತ್ತದೆಯೋ ? ಏಕೆಂದರೆ, ನಾವು ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಪ್ರಶ್ನೆ ಕೇಳಿದರೆ, ಅದಕ್ಕೆ ನಿಮ್ಮ ಅಧಿಕಾರಿಗಳು ಕೊಡುವ ಉತ್ತರ ಅಸತ್ಯದಿಂದ ಕೂಡಿರುತ್ತದೆ. ಸಬ್-ಇನ್ಸ್‌ಪೆಕ್ಟರ್ ಹಂತದಿಂದ ಹಿಡಿದು ಐ.ಜಿ.ಪಿ. ವರೆಗೆ ಎಲ್ಲಾ ಅಧಿಕಾರಿಗಳು ಕೊಡುವಂತಹ ವರದಿಗಳಲ್ಲಿ ಶೇಕಡ ೯೦ ರಷ್ಟು ಅಸತ್ಯದಿಂದ ಕೂಡಿರುತ್ತದೆ. ಈ ಕಾರಣದಿಂದ ಇಲ್ಲಿ ಶಾಸಕರಾದ ನಾವು ಏನಾದರೂ ಒಂದು ವಿಷಯವನ್ನು ಜವಾಬ್ದಾರಿಯಿಂದ ಹೇಳಿದಾಗ ಅದು ಸತ್ಯವೇ ಅಥವಾ ಅಸತ್ಯವೇ ಎಂಬುದನ್ನು ನೀವೇ ವಿಮರ್ಶೆ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇತ್ತೀಚೆಗೆ ನಡೆದಂಥ ಒಂದು ಘಟನೆಯನ್ನು ತಮ್ಮ ಗಮನಕ್ಕೆ ಈಗ ತರುತ್ತೇನೆ. ಏನೆಂದರೆ, ಆಲೂರು ತಾಲ್ಲೂಕ್ ಕಾಟಿಹಳ್ಳಿ ಗ್ರಾಮದಲ್ಲಿ ಹರಿಜನ ವರ್ಗದವರ ಮತ್ತು ಸವರ್ಣೀಯರ ನಡುವೆ ಯಾವುದೋ ಹಳೆಯ ಕೊಲೆ ಪ್ರಕರಣದ ಸೇಡಿನಿಂದಾಗಿ ಪೋಲೀಸರ ಬೆಂಬಲದಿಂದ ಸವರ್ಣೀಯರು ಹರಿಜನ ವರ್ಗದ

ವರನ್ನು ಆ ಊರಿನಿಂದ ಹೊರಹಟ್ಟಿ ಅವರ ಧವಸಧಾನ್ಯಗಳನ್ನು ಲೂಟಿ ಮಾಡಿ ಅವರು ಬೆಳೆಯುವ ಬೆಳೆಯನ್ನು ಗೂಂಡಾಗಿರಿ ಮಾಡಿ ಕಿತ್ತುಕೊಂಡು ಮಾರಿ, ಅನೇಕ ರೀತಿಯಿಂದ ಕಿರುಕುಳ ಕೊಡುವುದನ್ನು ತಡೆಯಲಾರದೆ ಹರಿಜನ ವರ್ಗದ ಜನರು ಆಲೂರು ಆರಕ್ಷಕ ಠಾಣೆಗೆ ಬಂದು ಉಪನಿರೀಕ್ಷಕರಿಗೆ ಬರವಣಿಗೆ ಯಲ್ಲಿ ದೂರು ಕೊಡಲು ಹೋದಾಗ ಅವರ ದೂರನ್ನು, ಅವರ ಅಹವಾಲನ್ನು ಸ್ವೀಕರಿಸಲು ನಿರಾಕರಿಸಿ ದ್ದಾರೆ. ಈ ಪ್ರಕರಣದಲ್ಲಿ ಕಂಪ್ಲೇಂಟ್ ಕೊಡಲು ಹೋದವರನ್ನೇ ಅರೆಸ್ಟ್ ಮಾಡಿದ್ದಾರೆ. ರಾಜಕೀಯ ಮುಖಂಡರ ಮಾತನ್ನು ಕೇಳಿ ನಿಮ್ಮ ಅಧಿಕಾರಿಗಳು ಈ ರೀತಿ ಮಾಡಿದ್ದಾರೆ. ನಿಮ್ಮ ಕಾಲದಲ್ಲಿಯಾದರೂ ಹರಿಜನರಿಗೆ ರಕ್ಷಣೆ ಕೊಡದಿದ್ದರೆ ಹೇಗೆ ?

ಶ್ರೀ ಬಿ. ರಾಚಯ್ಯ.—ಇದನ್ನು ಮುಂಚಿತವಾಗಿಯೇ ನನ್ನ ಗಮನಕ್ಕೆ ತಾವು ತರಬಹುದಾಗಿತ್ತು?

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ಮೊನ್ನೆ ನನ್ನ ಗಮನಕ್ಕೆ ಬಂತು ಇದಕ್ಕೆ ಸಂಬಂಧ ಪಟ್ಟ ಎಲ್ಲಾ ವಿವರಗಳನ್ನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ. ತಾವು ಸೂಕ್ತ ಕ್ರಮ ತೆಗೆದುಕೊಳ್ಳ ಬೇಕು. ಈ ಇಲಾಖೆಯನ್ನು ತಾವು ಸ್ವಲ್ಪ ರಿಪೇರಿ ಮಾಡಬೇಕು. ದೂರು ಕೊಡಲು ಬಂದವರ ಜೊತೆ ನಿಮ್ಮ ಪೋಲೀಸರು ಸಭ್ಯತೆಯಿಂದ ನಡೆದು ಕೊಳ್ಳುವಂತೆ ತಾವು ಸೂಚನೆ ನೀಡಬೇಕು.

ಇನ್ನು ಕೊನೆಯದಾಗಿ ನಾನು ರೈತರ ಚಳುವಳಿ ಬಗ್ಗೆ ಹೇಳಬೇಕಾಗಿದೆ. ರೈತರು ತಮ್ಮ ಅನೇಕ ಬೇಡಿಕೆಗಳನ್ನು ಈಡೇರಿಸಬೇಕೆಂದು ಸತ್ಯಾಗ್ರಹ ಮಾಡುತ್ತಿದ್ದಾರೆ. ಇವರಿಗೆ ಯಾರು ರಕ್ಷಣೆ ನೀಡುತ್ತಿಲ್ಲ. ರೈತ ಸಂಘದವರು ರಸ್ತೆಯಲ್ಲಿ ನಿಂತು ಜೈ ಎಂದರೆ ಸಾಕು, ನಿಮ್ಮ ಪೋಲೀಸ್ ಜೀಪ್ ಬರುತ್ತದೆ ನಂತರ ಅವರನ್ನೆಲ್ಲಾ ಅರೆಸ್ಟ್ ಮಾಡಿ ಕರೆದುಕೊಂಡು ಹೋಗುತ್ತಾರೆ. ಈಗ ರಾಜ್ಯದ ಯಾವಯಾವ ಜೈಲುಗಳಲ್ಲಿ ಎಷ್ಟೆಷ್ಟು ಜನ ರೈತರು ಇದ್ದಾರೆಂಬ ಬಗ್ಗೆ ತಾವು ವಿವರಣೆ ಕೊಡಬೇಕು. ರೈತರನ್ನು ಎಷ್ಟು ದಿವಸಗಳ ಕಾಲ ಜೈಲಿನಲ್ಲಿ ಇಟ್ಟುಕೊಳ್ಳಬೇಕೆಂದಿದ್ದೀರಿ ? ಇದು ಸರಿಯಲ್ಲ. ಅವರನ್ನೆಲ್ಲಾ ಬಿಡುಗಡೆ ಮಾಡಬೇಕು ಮತ್ತು ಅವರ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಬೇಕು. ಕೆಲವರನ್ನು ೧೫ ದಿವಸಗಳ ಕಾಲ ಜೈಲಿ ನಲ್ಲಿಟ್ಟರೆ ಬೇರೆಯವರು ಸತ್ಯಾಗ್ರಹ ಮಾಡಲು ಮುಂದೆ ಬರುವುದಿಲ್ಲವೆಂದು ತಾವು ಈ ರೀತಿ ಮಾಡು ತ್ತಿರುವುದು ಸರಿಯಲ್ಲ. ಈ ರೀತಿಯಿಂದ ರೈತರ ಮೇಲೆ ಗಧಾ ಪ್ರಹಾರ ಮಾಡುವುದು ಸರಿಯಲ್ಲ. ಅವರ ಬೇಡಿಕೆಗಳನ್ನು ಕೂಡಲೇ ತಾವು ಈಡೇರಿಸಬೇಕು.

ಇನ್ನು ಕೊನೆಯದಾಗಿ, ಒಂದು ಮಾತನ್ನು ಹೇಳಬೇಕಾಗಿದೆ. ಏನೆಂದರೆ, ಇಲ್ಲಿ ಈ ಸದನ ನಡೆಯು ತ್ತಿರುವಾಗ ಸರ್ಕಾರದ ಕಚೇರಿಗಳಲ್ಲಿ ಯಾವ ಕೆಲಸಗಳೂ ನಡೆಯುವುದಿಲ್ಲ. ನಾವು ಹಳ್ಳಿಗಳಿಗೆ ಹೋಗಿ ನೋಡಿದರೆ ಯಾವ ಕೆಲಸಗಳೂ ಸಹ ನಡೆಯುತ್ತಿರುವುದಿಲ್ಲ. ಇದಕ್ಕೆ ಕಾರಣ, ಸರ್ಕಾರದವರು ಹಣ ಬಿಡುಗಡೆ ಮಾಡದಿರುವುದು. ಕಳೆದ ನಾಲ್ಕು ತಿಂಗಳಿಂದ ಜನತಾ ಮನೆಗಳ ಕೆಲಸ ನಡೆದಿಲ್ಲ. ರಸ್ತೆಗಳ ಕೆಲಸ ನಡೆದಿಲ್ಲ. ಎಲ್ಲಾ ಅಧಿಕಾರಿಗಳು ಬೆಂಗಳೂರಿಗೆ ಬಂದಿದ್ದಾರೆ. ಇಲ್ಲಿ ಮನೆಗಳನ್ನು ಕಟ್ಟಿಸಿಕೊಂಡು ಸುಖವಾಗಿ ಜೀವನ ಮಾಡುತ್ತಿದ್ದಾರೆ. ಕೆಲಸಗಳು ಏತಕ್ಕೆ ನಿಂತಿವೆ ಎಂದು ಇವರನ್ನು ಕೇಳಿದರೆ, ಸರ್ಕಾರ ದವರು ದುಡ್ಡು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಇದೇ ಕಾರಣದಿಂದ ಶಿಕಾರಿಪುರ, ಸಾಗರ, ಸೊರಬ ಇಲ್ಲೆಲ್ಲಾ ಸರ್ಕಾರದ ಆಡಳಿತ ಕುಸಿದು ಬಿದ್ದಿದೆ. ಜನತಾ ಮನೆಗಳನ್ನು ಕೂಡಲೆ ಕಟ್ಟಿ ಮುಗಿಸದಿದ್ದರೆ, ನಾಳೆ ಮಳೆ ಬಂದಾಗ ಕಟ್ಟಿರುವುದೆಲ್ಲಾ ಬಿದ್ದು ಹೋಗುತ್ತದೆ. ಎರಡು ಮೂರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಕಡೆಗಳಿಗೆ ನೀವು ಕೇವಲ ೩೦ ಸಾವಿರ ಇಲ್ಲವೇ ೪೦ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಅಧಿಕಾರಿಗಳು ಬಾಕಿ ಕೆಲಸವನ್ನು ಯಾವ ರೀತಿ ಮುಗಿಸಲು ಸಾಧ್ಯವಾಗುತ್ತದೆಯೇ ಈಗ ನೀವು ಹಳ್ಳಿಯ ರೈತರನ್ನು ಮತ್ತು ಬಡವರನ್ನು ಸಂಪೂರ್ಣವಾಗಿ ಮರೆತು ನಿದ್ರಾವಸ್ಥೆಯಲ್ಲಿದ್ದೀರಿ. ನೀವು ಕೂಡಲೇ ನಿದ್ದೆಯಿಂದ ಎಚ್ಚೆತ್ತು ಬಡವರಿಗೆ ಎಲ್ಲಾ ರೀತಿಯಿಂದ ಅನುಕೂಲ ಮಾಡಿಕೊಡಬೇ ಕೆಂದು ಹೇಳುತ್ತೇನೆ ಮತ್ತು ನಾನು ಇಲ್ಲಿಯವರೆಗೆ ಹೇಳಿದಂಥ ಎಲ್ಲಾ ಸಂಗತಿಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ಈ ಬೇಡಿಕೆಗಳನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೧೨-೩೦ ಎ. ಎಂ

ಅಧ್ಯಕ್ಷರು.—ಈಗ ಐದೂ ಪಕ್ಷದ ಮುಖಂಡರ ಭಾಷಣ ಆಯಿತು. ಇನ್ನು ೨೦ ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ಒಬ್ಬೊಬ್ಬರಿಗೆ ೧೫ ನಿಮಿಷ ಕೊಟ್ಟರೆ ಸಂಜೆ ೫-೩೦ ಗಂಟೆಗೆ

ಚರ್ಚೆ ಮುಕ್ತಾಯವಾಗುತ್ತದೆ. ಇವೊತ್ತು ಸಭೆ ೫-೩೦ಕ್ಕೆ ಮುಕ್ತಾಯವಾದ ಮೇಲೆ ಮಾನ್ಯ ಗೃಹ ಮಂತ್ರಿಗಳು ಮತ್ತು ಮಾನ್ಯ ಸಾರಿಗೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳ ಉತ್ತರ ನಾಳೆ ಬೆಳಿಗ್ಗೆ ೯ ಗಂಟೆಗೆ. ಆದುದರಿಂದ ೫-೩೦ಕ್ಕೆ ತಾವುಗಳು ಮುಕ್ತಾಯ ಮಾಡಬೇಕು. ದಯವಿಟ್ಟು ೧೫ ಮಿನಿಟ್‌ಗಿಂತ ಹೆಚ್ಚಿಗೆ ಯಾಗೂ ತೆಗೆದುಕೊಳ್ಳಬಾರದು. ಈಗ ಮಾನ್ಯ ಇದಿನಬ್ಬರವರು ಮಾತನಾಡಲಿ.

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ್).— ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಅದೇ ರೀತಿಯಲ್ಲಿ ಮಾನ್ಯ ಗೃಹ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೂ ಮಾನ್ಯ ಸಾರಿಗೆ ಮಂತ್ರಿಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಇಲ್ಲಿ ಚರ್ಚೆ ಮಾಡುತ್ತಾ ಇದ್ದೇವೆ. ನನ್ನ ಕೆಲವು ಕಾರಣಗಳಿಗಾಗಿ ಆ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತಾ ಇದ್ದೇನೆ. ಈ ಸದನದ ಹೆಸರು ಕರ್ನಾಟಕ ವಿಧಾನಮಂಡಲ. ಹಾಗಿರುವಾಗ ಕನ್ನಡದಅಭಿವೃದ್ಧಿ ಕನ್ನಡ, ಸಂಸ್ಕೃತಿ ಬಗ್ಗೆ ವ್ಯಾಪಕವಾಗಿ ಮಾತನಾಡುವಂಥಾದ್ದು ಬಹಳ ಮುಖ್ಯ ಎಂದು ನನ್ನ ಅನಿಸಿಕೆ. ಏಕೆಂದರೆ, ನನಗೆ ಬಹಳ ಇಷ್ಟವಾದಂಥ ವಿಷಯ ಕೂಡ ಅದು. ನಾವು ಕರ್ನಾಟಕದಲ್ಲಿದ್ದೇವೆ ಕರ್ನಾಟಕ ವಿಧಾನಮಂಡಲದಲ್ಲಿದ್ದೇವೆ. ಹಾಗಿರುವಾಗ ಕರ್ನಾಟಕದಲ್ಲಿ ಕನ್ನಡಕ್ಕೆ, ಕನ್ನಡ ಸಾಹಿತ್ಯಕ್ಕೆ, ಕನ್ನಡದ ಬೆಳವಣಿಗೆಗೆ, ಕನ್ನಡ ಸಂಸ್ಕೃತಿಗೆ ನಾವು ಎಷ್ಟು ಕೆಲಸ ಮಾಡಬೇಕು, ನಾವು ಎಷ್ಟು ಮಾಡಿದ್ದೇವೆ ಎಂಬುದನ್ನು ಕೂಡ ಪರಿಶೀಲನೆ ಮಾಡಬೇಕು. ಮುಖ್ಯವಾಗಿ ಹೇಳುವುದಾದರೆ ಅದಕ್ಕಾಗಿ ಇಟ್ಟಿರ ತಕ್ಕಂಥ ಹಣ ಬಹಳ ಕಡಿಮೆ, ಇದರ ಇಮ್ಮಡಿ, ಮುಮ್ಮಡಿ ಹಣ ಇಡಬೇಕು. ಕನ್ನಡ ಸಂಸ್ಕೃತಿ, ಕನ್ನಡ ಅಭಿವೃದ್ಧಿ ನಮಗೆ ಅನ್ನ ಇದ್ದ ಹಾಗೆ ಇದು ಅಗ್ರಮಾನ್ಯವಾದಂಥ ವಿಚಾರ. ಅದರ ಕಡೆಗೆ ನಮ್ಮ ಗಮನ ಬರುವಂಥಾದ್ದು ಬಹಳ ಮುಖ್ಯ. ಭಾಷಾವಾರು ರಾಜ್ಯದ ಆಧಾರದ ಮೇಲೆ ಪ್ರತಿಯೊಂದು ರಾಜ್ಯವೂ ಉದ್ಭವವಾಗಿದೆ. ಆಂಧ್ರದಲ್ಲಿ, ಕೇರಳದಲ್ಲಿ, ತಮಿಳುನಾಡಿನಲ್ಲಿ, ಮಹಾರಾಷ್ಟ್ರದಲ್ಲಿ ಅದೇ ರೀತಿಯಲ್ಲಿ ಕರ್ನಾಟಕದಲ್ಲಿ ಆಗಿದೆ. ಭಾಷಾವಾರು ರಾಜ್ಯವಾದುದರಿಂದ ಆ ರಾಜ್ಯಗಳ ಹಿತಕ್ಕಾಗಿ ಅದರ ಬೆಳವಣಿಗೆಗಾಗಿ ಪೇಚಾಡುವಂಥಾದ್ದು ನಮ್ಮ ಮೂಲಭೂತ ಧರ್ಮ. ಇದರ ಬಗ್ಗೆ ಹೇಳುವುದಾದರೆ ಭಾಷಾವಾರು ರಾಜ್ಯವಾದ ಮೇಲೆ ಕರ್ನಾಟಕದಷ್ಟು ಔದಾರ್ಯ ಬೇರೆ ಎಲ್ಲೂ ಇಲ್ಲ ಎಂದು ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ನಾನು ಕೇರಳದಲ್ಲಿ ಸುತ್ತಾಡಿದ್ದೇನೆ, ತಮಿಳುನಾಡಿನಲ್ಲಿ ಸುತ್ತಾಡಿದ್ದೇನೆ. ಕೇರಳದ ಬಗ್ಗೆ ಅವರಿಗೆ ಇರತಕ್ಕ ಅಭಿಮಾನ, ಆ ಸಾಹಿತ್ಯದ ಬಗ್ಗೆ ಇರತಕ್ಕ ಅಭಿಮಾನ, ಅದನ್ನು ಬೆಳವಣಿಗೆ ಮಾಡಬೇಕು ಎಂದು ಇರತಕ್ಕ ಅಭಿಮಾನ, ಅಲ್ಲಿ ಪತ್ರಿಕೆಗಳ ಒಂದು ವಿಶೇಷವಾದಂಥ ಪ್ರಸಾರ, ಅಲ್ಲಿಯ ಮಲೆಯಾಳದ ಪುಸ್ತಕಗಳ ವಿಶೇಷವಾದಂಥ ಪ್ರಸಾರ, ಏನಿದೆ ಅದನ್ನು ಅಲ್ಲಿ ಹೋಗಿ ನೋಡಬೇಕಲ್ಲದೆ ಬೇರೆ ರೀತಿಯಲ್ಲಿ ಹೇಳಲಿಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಹೇಳುವುದಾದರೆ, ಕೇರಳದಲ್ಲಿ ೧೪೦ ಜನ ಇರತಕ್ಕಂಥ ವಿಧಾನ ಮಂಡಲದಲ್ಲಿ ಒಬ್ಬರೇ ಒಬ್ಬರು ಬೇರೆಭಾಷೆಯಲ್ಲಿ ಮಾತನಾಡುವುದು ಬಿಟ್ಟರೆ ಬೇರೆ ಎಲ್ಲರೂ ಮಲೆಯಾಳ ಮಾತನಾಡುವುವಂಥ ವ್ಯವಸ್ಥೆಯುಂಟು. ಹಿಂದೆ ಮಹಾಬಲ ಭಂಡಾರಿಎಂಬುವರಿದ್ದರು, ಅವರು ಮಂಜೇಶ್ವರದಿಂದ ಆರಿಸಿ ಹೋದಾಗಅವರೊಬ್ಬರು ಕನ್ನಡದಲ್ಲಿ ಅಥವಾ ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದರೇ ಹೊರತು ಬಾಕಿ ಎಲ್ಲರೂ ಮಲೆಯಾಳದಲ್ಲಿ ಮಾತನಾಡುತ್ತಿದ್ದರು. ಹೀಗೆ ಭಾಷಾವಾರು ರಾಜ್ಯದ ಪರಿಗಣನೆ ಅಲ್ಲಿ ಇದೆ. ಅದೇ ರೀತಿ ಆಂಧ್ರದಲ್ಲಿ ಕೂಡ ಇದೆ. ಒಂದು ಉದಾಹಣೆ ಹೇಳುತ್ತೇನೆ, ಭಾಷಾವಾರು ರಾಜ್ಯ ಆದರೂ ಕೂಡ ಇವತ್ತು ಮಹಾಜನ್ ವರದಿಯನ್ನು ಅನುಷ್ಠಾನಕ್ಕೆ ತರದೇ ಬೆಳಗಾಂನಲ್ಲಿ ಕಿರುಕುಳ ಆಗುತ್ತಿದೆ, ಕಾಸರಗೋಡು ನಮಗೆ ಬರಬೇಕಾಗಿದೆ, ಕಾಸರಗೋಡಿನ ಬಗ್ಗೆ ಇನ್ನೂ ವಿಲೇವಾರಿಯಾಗಲಿಲ್ಲ. ಹಾಗಿರುವಾಗ ಇಲ್ಲಿನಪರಿಸ್ಥಿತಿ ನೋಡಿದರೆ ಕೇರಳದವರು ಹಿಂದೆಹೇಳಿದ್ದರು ಗೋಕರ್ಣದವರೆಗೆ ನಮ್ಮ ಮಲೆಯಾಳದೇಶ ಎಂದರೆ ಕೇರಳ ಇದೆಯೆಂದು ಅದು ಸಾಧ್ಯವಾಗುವುದಿಲ್ಲ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ನೋಡಿ ಬೆಂಗಳೂರಿನ ಯಾವುದೇ ಒಂದು ಮಾರ್ಗದ ಕಾಲುದಾರಿಯಲ್ಲಿ ನಡೆದು ಸರ್ಕಲ್‌ನಲ್ಲಿ ನಿಂತು ನೋಡಿ, ಅಲ್ಲಿರತಕ್ಕ ಜನ ಮಾತನಾಡುವುದರಲ್ಲಿ ಮುಕ್ಕಾಲುಪಾಲು ತಮಿಳು, ಅಥವಾ ಮುಕ್ಕಾಲುಪಾಲು ತೆಲುಗು ಕನ್ನಡ ಮಾತನಾಡುವವರನ್ನು ೫ ಪರ್ಸೆಂಟ್ ಕಾಣುವುದಕ್ಕೆ ಸಾಧ್ಯವಿಲ್ಲ. ಬೇಕಾದರೆ ಯಾವ ಸದಸ್ಯರೂ ಇದನ್ನು ವಿಮರ್ಶೆ ಮಾಡಬಹುದು. ಮಂಗಳೂರಿನಲ್ಲಿ ಯಾವ ಸರ್ಕಲ್‌ನಲ್ಲಿ ನಿಂತರೂ ಅಲ್ಲೂ ಕೂಡ ಮಲೆಯಾಳದಲ್ಲಿ ಅಥವಾ ತಮಿಳಿನಲ್ಲಿ ಮಾತನಾಡುವುದನ್ನು ಕಾಣುತ್ತೇವೆ. ಕನ್ನಡ ಬಹಳ ಕಡಿಮೆ. ಹೀಗಿದ್ದರೆ

ನಮ್ಮ ಔದಾರ್ಯ ಇಷ್ಟು ಜೋರಾದರೆ ಇನ್ನು ಮುಂದೆ ಭವಿಷ್ಯದಲ್ಲಿ ಗೋಕರ್ಣದವರೆಗೆ ಕೇರಳ ಎನ್ನುವಥಾದಕ್ಕೆ ಒಳ್ಳೆಯ ರೀತಿಯಲ್ಲಿ ಇದು ಪರಿಪಾಲನೆ ಆಗಲಿಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ ಏನು ಆಧಾರಇದೆಸಾಹಿತ್ಯವನ್ನು ಪತ್ರಿಕೆಗಳನ್ನು ಪುಸ್ತಕಗಳನ್ನು ಹೆಚ್ಚು ಹೆಚ್ಚು ಅಭಿವೃದ್ಧಿ ಪಡಿಸಬೇಕು. ಪಂಪ, ರನ್ನ, ರಾಘವಾಂಕ, ಲಕ್ಷ್ಮೀಶ, ಹರಿಹರ, ಮುದ್ದಣ ಇನ್ನು ಮುಂತಾದವರು, ಕರ್ನಾಟಕದ ಸಾಹಿತ್ಯವನ್ನು ಸಂಸ್ಕೃತಿಯನ್ನು ಬೆಳಸಿಹೋಗಿದ್ದಾರೆ. ಅದನ್ನು ಯಾವ ರೀತಿಯಲ್ಲಿ ಬೆಳಸಿಕೊಂಡು ಹೋಗಬೇಕು. ಎನ್ನುವ ವಿಚಾರದಲ್ಲಿ ಸರ್ಕಾರ ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಆಚಾರ್ಯ ವಿನೋಭಾ ಭಾವೆಯವರು ಒಮ್ಮೆ ಕರ್ನಾಟಕಕ್ಕೆ ಭೇಟಿ ನೀಡಿದಾಗ, ಮಂಗಳೂರಿಗೂ ಬಂದಿದ್ದರು. ಅವರು ಕನ್ನಡ ಭಾಷೆಯ ಬಗ್ಗೆ ಮಾತನಾಡುತ್ತಾ, ತಮಿಳು ಬಿಟ್ಟರೆ, ಕನ್ನಡಕ್ಕೆ ಸುಮಾರು ೨,೦೦೦ ವರ್ಷಗಳ ಇತಿಹಾಸ ಇದ್ದು ಇದು ಬಹಳ ಮೇಲ್ಮಟ್ಟದಲ್ಲಿದೆ ಎಂದು ಹೇಳಿದ್ದರು. ಅವರು ೧೫–೨೦ ಭಾಷೆಗಳಲ್ಲಿ ಪಾರಂಗತರಾಗಿದ್ದರು. ಇವೊತ್ತು ಕನ್ನಡದಲ್ಲಿ ಎಷ್ಟು ಪತ್ರಿಕೆಗಳು, ಪುಸ್ತಕಗಳು ಪ್ರಚಾರದಲ್ಲಿವೆ. ಪ್ರಜಾವಾಣಿ. ಉದಯವಾಣಿ ಹಾಗೂ ಮುಂಗಾರು ಪತ್ರಿಕೆಗಳನ್ನು ಕೊಂಡುಕೊಂಡು ಓದುವಂತಹ ಹವ್ಯಾಸ ನಮ್ಮವರಲ್ಲಿ. ಇಲ್ಲ. ಕನ್ನಡ ಪತ್ರಿಕೆಗಳನ್ನು ಒಂದು ರೂಪಾಯಿ ಕೊಟ್ಟು ಕೊಂಡು ಓದಿಕೊಳ್ಳುವಂಥ ಮನೋಭಾವನೆ ನಮ್ಮಲ್ಲಿ ಬೆಳೆದರೆ, ಪತ್ರಿಕೆಗಳು ಉಳಿಯುತ್ತವೆ. ಕನ್ನಡ ಸಾಹಿತ್ಯ ಬೆಳೆಯುತ್ತದೆ. ಇವೊತ್ತು ಕೇರಳದಲ್ಲಿ ಪ್ರತಿಯೊಬ್ಬರು ಅವನು ಮೋಚಿಯಾಗಿರಲಿ, ಭಿಕ್ಷುಕನಾಗಿರಲಿ. ಪುಲೆಯಾಳು ಪತ್ರಿಕೆಗಳನ್ನು ಕೊಂಡು ಓದುತ್ತಾನೆ. ಪ್ರತಿಯೊಬ್ಬರ ಕೈಯಲ್ಲಿಯೂ ಪತ್ರಿಕೆಗಳು ಇರುತ್ತವೆ. ಪ್ರತಿಯೊಂದು ಮನೆಯಲ್ಲಿಯೂ ವಾಚನಾಲಯ ಇದೆ, ಪ್ರತಿಯೊಂದು ಮನೆಯಲ್ಲಿಯೂ ಪುಸ್ತಕಗಳನ್ನು ಸಂಗ್ರಹ ಮಾಡತಕ್ಕ ಪರಿಪಾಠ ಇದೆ. ಅಲ್ಲಿ ಭಾಷೆ ಮತ್ತು ಸಾಹಿತ್ಯವನ್ನು ಬೆಳೆಸುವುದಕ್ಕೆ ಅಷ್ಟು ಪ್ರಾಮುಖ್ಯತೆ ಕೊಟ್ಟಿದ್ದಾರೆ ಆದರೆ, ಕನ್ನಡನಾಡಿನಲ್ಲಿ ಕನ್ನಡ ಪತ್ರಿಕೆಗಳನ್ನು ಓದಿದರೆ ಅವಮಾನವಾಗುತ್ತದೆನ್ನುವ ಮಟ್ಟಕ್ಕೆ ನಮ್ಮ ಜನ ಬಂದಿದ್ದಾರೆ. ಇಂಗ್ಲೀಷ್ ಪತ್ರಿಕೆಗಳನ್ನು ಓದಿದರೆ ದೊಡ್ಡಸ್ಥಿಕೆ, ಕನ್ನಡ ಪುಸ್ತಕಗಳನ್ನು ಪತ್ರಿಕೆಗಳನ್ನು ಓದುವಂಥ ಔದಾರ್ಯ ಯಾರಿಗೂ ಇಲ್ಲ, ಭಾಷಾವಾರು ರಾಜ್ಯಗಳನ್ನು ಮಾಡಿದ್ದು ಭಾಷೆಗಳು ಬೆಳೆಯಲಿ ಎಂದು. ಇವತ್ತು ಕನ್ನಡ ನಾಡಿನಲ್ಲಿ, ಕನ್ನಡಕ್ಕೆ ಕನ್ನಡ ಸಾಹಿತ್ಯಕ್ಕೆ ಅಗ್ರಮಾನ್ಯ ಸ್ಥಾನ ಕೊಡಬೇಕು. ಇವತ್ತು ಬೆಳಗಾವಿಯಲ್ಲಿ ಕನ್ನಡ ಮೇಲೆ ಬರಬೇಕೆಂದು ಚಳುವಳಿ ಮಾಡುತ್ತಿದ್ದಾರೆ. ಕಾಸರಗೋಡಿನಲ್ಲಿ ಕನ್ನಡ ಬೆಳಯಬೇಕು. ಮಹಾಜನ್ ವರದಿ ಪರಿಗಣನೆ ಮಾಡಿ, ಕೂಡಲೇ ಜಾರಿಗೆ ತರಬೇಕು. ಕನ್ನಡ ನಾಡಿನಲ್ಲಿ ದೊಡ್ಡ ದೊಡ್ಡ ಸಾಹಿತಿಗಳು, ಲೇಖಕರು ಬರೆದಂಥ ಪುಸ್ತಕಗಳನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಲುವಂಥ ವ್ಯವಸ್ಥೆ ಮಾಡಬೇಕು. ಡಿ.ವಿ.ಜಿ. ಯವರು ಬರೆದ ಪುಸ್ತಕಗಳನ್ನು ಮಾಸ್ತಿ ವೆಂಕಟೇಶ್ ಅಯ್ಯಂಗರ್ ಬರೆದ ಪುಸ್ತಕಗಳನ್ನು, ಕುವೆಂಪುರವರು ಬರೆದ ಪುಸ್ತಕಗಳನ್ನು. ಶಿವರಾಮ ಕಾರಂತರು ಬರೆದ ಪುಸ್ತಕಗಳನ್ನು ಸರ್ಕಾರದ ವತಿಯಿಂದ ಕಡಿಮೆ ಬೆಲೆಯಲ್ಲಿ ಅಂದರೆ ೨–೩ ರೂಪಾಯಿಗಳಿಗೆ ಕೊಡಿಸುವಂಥ ವ್ಯವಸ್ಥೆ ಮಾಡಿದರೆ ತುಂಬಾ ಅನುಕೂಲವಾಗುತ್ತದೆ, ಹಿಂದೆ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ, ಕುಮಾರವ್ಯಾಸ ಭಾರತವನ್ನು ಅಚ್ಚು ಹಾಕಿಸಿ. ಎರಡು ರೂಪಾಯಿಗೆ ಒಂದರಂತೆ ಮಾರಾಟ ಮಾಡಿಸಿದರು. ಆಗ ಎಲ್ಲರೂ ಪುಸ್ತಕವನ್ನು ತೆಗೆದುಕೊಂಡರು. ಹಾಗೆ ಮಾಡದೆ ಹೋದರೆ, ಕನ್ನಡ ಭಾಷೆ ಬೆಳೆಯುವುದಿಲ್ಲ. ಬೆಟಗೇರಿ ಕೃಷ್ಣಶರ್ಮರವರು ಬರೆದ ಏನಿತು ಇನಿದು ''ಈ ಕನ್ನಡ ನುಡಿಯು'' ಹಾಗೂ ಕೆ.ವಿ. ಪುಟ್ಟಪ್ಪನವರು ''ಬಾರಿಸು ಕನ್ನಡ ಡಿಂಡಿಮವಾ ಹಾಗೆ ಎಲ್ಲಾದರೂ ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು'' ಹೀಗೆ ಹಲವಾರು ಬರೆದಿದ್ದಾರೆ ಇವತ್ತು ಕನ್ನಡ ಭಾಷೆಯ ಬಗ್ಗೆ ಕನ್ನಡ ನಾಡಿನಲ್ಲಿರುವಷ್ಟು ಉದಾಶೀನ ಬೇರೆ ಎಲ್ಲೂ ಇಲ್ಲ ತಮಿಳು ನಾಡು ಕೇರಳ ಆಂಧ್ರ ಗಡಿಗಳಲ್ಲಿ ಕನ್ನಡ ಮಾತನಾಡುವವರು ಇಲ್ಲ. ಒಬ್ಬರು ಕನ್ನಡಿಗರು ಸಿಕ್ಕಿದರೆ, ನಮ್ಮ ಪೂರ್ವಜನ್ಮದ ಪುಣ್ಯ ಎಂದು ಕೊಳ್ಳಬೇಕಾಗುತ್ತದೆ. ಇವತ್ತು ಸಾಹಿತ್ಯ ಅಕಾಡಮಿ ಸಂಗೀತ ನಾಟಕ ಅಕಾಡಮಿಗಳಿಗೆ ಕೆಲಸ ಸಾಲದು, ಕೆಲವರು ಅಧ್ಯಕ್ಷರುಗಳನ್ನು ಸದಸ್ಯರುಗಳನ್ನು ಮಾಡಿದರೆ ಕನ್ನಡದ ಕೆಲಸವಾಗುವುದಿಲ್ಲ. ಸಾಹಿತ್ಯ ನಾಟಕ, ಸಂಗೀತ ಹಾಗೂ ನಾಟಕ ಅಕಾಡಮಿಗಳು ಕರ್ನಾಟಕದ ಪರಂಪರೆಯನ್ನು ಎತ್ತಿಹಿಡಿಯುವಂಥ ದಿಕ್ಕಿನಲ್ಲಿ, ಸಾಹಿತ್ಯ, ಸಂಗೀತ ನಾಟಕಗಳನ್ನು ಬೆಳಸತಕ್ಕ ದಿಕ್ಕಿನಲ್ಲಿ, ಮುಂದೆಬರಬೇಕು, ಆ ದೃಷ್ಟಿಯಲ್ಲಿ ಕೆಲಸ ಮಾಡಬೇಕು.

ಇನ್ನು ನಮ್ಮ ಕನ್ನಡ ಸಾಹಿತ್ಯಪರಿಷತ್ತಿನ ಮೂಲಕ ಅದು ಬಹಳ ಹಿಂದೆ ಮಾಸ್ತಿವೆಂಕಟೇಶ್ ಅಯ್ಯಂಗಾರ್, ಡಿ.ವಿ. ಗುಂಡಪ್ಪನವರು, ಬಿ.ಎಂ. ಶ್ರೀಕಂಠಯ್ಯನವರು ಇಂತಹವರ ಕಾಲದಲ್ಲಿ ಬಹಳ

ವಾಗಿ ಸಾಹಿತ್ಯ ಬೆಳೆದಿತ್ತು. ಇವೊತ್ತು ರಾಜಕೀಯಂ ಬೆರೆಕೆಯಾಗಿ ಅಲ್ಲಿ ಗಬ್ಬುನಾತ ಬರುತ್ತಿದೆ. ಅಲ್ಲಿ ಏನೋ ಒಂದು ಕಲಹವಾಗಿ ಕೋರ್ಟಿನಲ್ಲಿ ಉಂಟು ಎಂದು ಹೇಳುತ್ತಾರೆ ಸಾಹಿತ್ಯಪರಿಷತ್ತು ಈ ರೀತಿ ಆದರೆ ನಮ್ಮಗತಿ ಏನು ? ನಮ್ಮ ಸರ್ಕಾರ ಕನ್ನಡ ಸಾಹಿತ್ಯ ಪರಿಷತ್ತಿಗೆ ಬೇಕಾದಷ್ಟು ಹಣ ಕೊಡುತ್ತಿದೆ. ಸಾಹಿತ್ಯದ ಬಗ್ಗೆ ಕೆಲಸ ಮಾಡಲಿಕ್ಕೆ, ಕನ್ನಡ ನಿಘಂಟು ಮಾಡುವಂಥದ್ದಕ್ಕೆ, ಆ ಪುಸ್ತಕ, ಈ ಪುಸ್ತಕ ಮಾಡಲಿಕ್ಕೆ ಹಣ ಕೊಡುತ್ತಿದ್ದಾರೆ ಆ ಕಡೆ ಸರ್ಕಾರ ಗಮನಹರಿಸಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸಾಹಿತ್ಯಪರಿಷತ್ತು ಆಗಿ ಆಗಲಿಕ್ಕೆ ಹೆಚ್ಚಿನ ಕೆಲಸವನ್ನು ಮಾಡಬೇಕು, ಹೆಚ್ಚಿನ ನಿಗಾ ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಜನಪದ ಎನ್ನುವ ಪತ್ರಿಕೆ ಕನ್ನಡ ಸಂಸ್ಕೃತಿ ಇಲಾಖೆಯಿಂದ ಹೊರಡುತ್ತದೆ, ಅದು ಚಂದವಾದ ರೀತಿ ಇದೆ. ಅದು ಒಳ್ಳೆಯ ರೀತಿಯಲ್ಲಿ ಇಲ್ಲ. ಅದರಲ್ಲಿ ಒಳ್ಳೆಯ ಲೇಖನಗಳನ್ನು, ಒಳ್ಳೆಯ ಕವಿತೆಗಳನ್ನು ಹಾಕಿ, ಒಳ್ಳೆಯ ಅಭಿಪ್ರಾಯ ಬರತಕ್ಕಂಥ ವಿಚಾರಗಳನ್ನು ಕೊಟ್ಟು ಅದನ್ನು ಒಳ್ಳೆಯ ಮಾಸಪತ್ರಿಕೆಯಾಗಿ ಮಾಡಿ ಹೊರಡಿಸಿದರೆ ಅದು ಶೋಭೆಯಾದೀತು. ಇನ್ನು ಕಾವಲು ಸಮಿತಿ ಬಗ್ಗೆ ಹೇಳಬೇಕೆಂದರೆ, ಕೆಲವರು ಇದು ಬೇಕು ಎಂದು ಹೇಳುವವರು ಇದ್ದಾರೆ, ಕೆಲವರು ಬೇಡ ಎಂದು ಹೇಳುವವರು ಇದ್ದಾರೆ. ಇವೊತ್ತು ಇಂಗ್ಲೀಷ್ ಬೇಡ, ಉರ್ದು ಬೇಡ ಎಂದು ಹೇಳುವುದು ಅಲ್ಲ, ಎಲ್ಲ ಭಾಷೆಗಳನ್ನು ಕಲಿತರೆ ಒಳ್ಳೆಯದು. ಕನ್ನಡವನ್ನು ಕಲಿಯಿರಿ ಎಂದು ನಾವು ಹೇಳುವಂಥದ್ದು ಇದೆ. ಯಾರು ಯಾವ ಭಾಷೆ ಬೇಕಾದರೂ ಕಲಿತುಕೊಳ್ಳಲಿ, ಕನ್ನಡವನ್ನು ಕಲಿಯಲೇಬೇಕು. ಇನ್ನು ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿ ಹಿಂದೆ ಸಿದ್ದರಾಮಯ್ಯನವರು ಈ ಕೆಲಸ ಮಾಡಿದ್ದರು. ಅನಂತರ ಈಗ ಪಾಟೀಲ್‌ಪುಟ್ಟಪ್ಪನವರು ಕೆಲಸ ಮಾಡುತ್ತಿದ್ದಾರೆ. ಅವರು ಶಾಸಕರಿಗೆ ಏನೋ ಮಾತನಾಡಿದ ಮಾತು ತುಟಿಮೀರಿದ್ದರಿಂದ ಅವರ ಬಗ್ಗೆ ಹಕ್ಕುಚ್ಯುತಿಗೆ ಕಳುಹಿಸಿದ್ದಾರೆ. ನಾನು ಅದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಅವರು ಎರಡು ವರ್ಷಗಳಿಂದಲೂ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮಂಗಳೂರಿಗೆ ಸುಮಾರ ಹತ್ತು ಸಾರಿ ಬಂದಿದ್ದಾರೆ. ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗ ಇಂಗ್ಲೀಷ ನಲ್ಲಿ ನಡೆಯುತ್ತಿತ್ತು. ಅವರು ಸಾಕಷ್ಟು ಸಾರಿ ಬಂದು ಗದರಿಸಿ ಒಳ್ಳೆಯ ಕೆಲಸ ಮಾಡಿದ್ದರಿಂದ ನೂರಕ್ಕೆ ತೊಂಭತ್ತು ಭಾಗ ಕನ್ನಡ ಆಗಿದೆ. ಅವರು ಮಾತನಾಡಿದ ಮಾತು, ಮಿತಿಮೀರಿದ ಮಾತದ ಅದು ಬೇರೆ ಆಗುತ್ತದೆ. ಇವೊತ್ತು ಕನ್ನಡ ಕಾವಲು ಸಮಿತಿಗೆ ಕನ್ನಡಕ್ಕಾಗಿ ಹಂಬಲಪಡತಕ್ಕವರನ್ನು ಆ ಸಮಿತಿಯಲ್ಲಿ ಹಾಕಿ ಒಳ್ಳೆಯ ಕೆಲಸ ಮಾಡುವಂತೆ ಮಾಡಬೇಕು, ಆ ರೀತಿ ಮಾಡಿದರೆ ಕನ್ನಡ, ಉಳಿಯುತ್ತದೆ ಮತ್ತು ಬೆಳೆಯುತ್ತದೆ.

ಇನ್ನು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಹೇಳಬೇಕೆಂದರೆ, ನಾವು ಕರಾವಳಿಯಲ್ಲಿರತಕ್ಕ ಜನ, ನಮ್ಮ ಉಳ್ಳಾಲ ಸೋಮೇಶ್ವರ ಕಡಲ ತಡಿ ಪ್ರವಾಸೋದ್ಯಮ ಕೇಂದ್ರಕ್ಕೆ ಯೋಗ್ಯವಾದುದು ಎಂದು ಅನೇಕರು ಹೇಳಿದ್ದಾರೆ. ಕಳೆದ ಸಾರಿ ನಮ್ಮ ಆಳ್ವ ಮಂತ್ರಿಯವರು ಅಲ್ಲಿ ಪ್ರವಾಸಿ ಕೇಂದ್ರ ಮಾಡುತ್ತೇವೆಂದು ಹೇಳಿದ್ದಾರೆ. ಆ ಪ್ರವಾಸಿ ಕೇಂದ್ರವನ್ನು ಉಳ್ಳಾಲದ ಕಡಲ ತಡಿಯಲ್ಲಿ ಮಾಡಬೇಕು, ಅದು ಯೋಗ್ಯವಾದ ಸ್ಥಳ, ಅಲ್ಲಿ ಒಂದು ಮುಸಲ್ಮಾನ್ ದರ್ಗಾ ಇದೆ, ಅಲ್ಲಿ ಐದು ವರ್ಷಗಳಿಗೊಮ್ಮೆ ಉರುಸ್ ನಡೆಯುತ್ತದೆ, ಸುಮಾರು ಐದಾರು ಲಕ್ಷ ಜನ ಅಲ್ಲಿಗೆ ಬರುತ್ತಾರೆ. ಬೇರೆ ಬೇರೆ ದೇವಸ್ಥಾನಗಳೂ ಇವೆ. ಅಲ್ಲಿಗೆ ಅನೇಕ ಜನ ಬರುವಂಥದ್ದು, ಸಮುದ್ರದ ಒಳ್ಳೆಯ ವಾತಾವರಣ, ಮತ್ತು ಪ್ರಕೃತಿಯ ಸೌಂದರ್ಯವನ್ನು ನೋಡಲಿಕ್ಕೆ ಜನ ಬರುತ್ತಿರುತ್ತಾರೆ. ಬಹಳ ಒಳ್ಳೆಯ ಜಾಗ ಅಲ್ಲಿ ಪ್ರವಾಸಿ ಕೇಂದ್ರವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಎರಡು ನಿಮಿಷ ಮಾತನಾಡಬೇಕಾಗಿದೆ. ಪೋಲೀಸ್ ಇಲಾಖೆಯ ವಿಚಾರ ಮಾತನಾಡಿದರೆ ಎಷ್ಟು ಗಂಟೆಗಳ ಕಾಲ ಬೇಕಾದರೂ ಮಾತನಾಡಬಹುದು. ಆದರೂ ಕೂಡ ಪೋಲೀಸ್ ಇಲಾಖೆಯ ಬಗ್ಗೆ ನಮ್ಮ ಮುಖಂಡರಾದ ಶ್ರೀಮತಿ ನಾಗರತ್ನಮ್ಮನವರು ಒಳ್ಳೆಯ ರೀತಿಯಲ್ಲಿ ಅನೇಕ ಮಾತುಗಳನ್ನು ಹೇಳಿದ್ದಾರೆ. ಪೋಲೀಸ್ ಇಲಾಖೆಯ ಬಗ್ಗೆ ಇನ್ನೂ ಅನೇಕ ಸದಸ್ಯರು ಹೇಳುವವರು ಇದ್ದಾರೆ. ಇವೊತ್ತು ಪೋಲೀಸ್ ಇಲಾಖೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಅಧಿಕಾರಿಗಳನ್ನು ಹತೋಟಿಯಲ್ಲಿಡತಕ್ಕ ವ್ಯವಸ್ಥೆ ಆಗಬೇಕು. ಮಾನ್ಯ ರಾಚಯ್ಯನವರು ಪ್ರಾಮಾಣಿಕರು, ದಕ್ಷರೂ, ಒಳ್ಳೆಯವರೂ ಇದ್ದಾರೆ. ಅವರ ಒಳ್ಳೆಯತನದಿಂದ ತೊಂದರೆಯಾಗುತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ರಾಚಯ್ಯನವರಿಗೆ ನಾನು ಹೇಳುವಂಥದ್ದು ಇಷ್ಟೆ, ಇವೊತ್ತು ತಾವುಘನಗಂಭೀರವಾಗಿ ನಿಮ್ಮ ಶಕ್ತಿಯನ್ನು ತೋರಿಸಿ ಈ ಕೋಮುಗಲಭೆ, ದೊಂಬಿ, ಕೊಲೆಗಳು

ಆಗುವಂಥಾದ್ದು ನಿಲ್ಲಿಸಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಕೊಲೆಗಳು ಆಗಿವೆ. ಕಲ್ಲಡಕದಲ್ಲಿ ಮೊನ್ನೆ ಒಂದು ಟೊಮೊಟೊ ಬಿಸಾಕಿದ್ದಕ್ಕಾಗಿ ಕೋಮುಗಲಭೆ ಆಗುವಂಥ ಪರಿಸ್ಥಿತಿ ಉಂಟಾಗಿದೆ. ಅಲ್ಲಿ ಶಾಂತರೀತಿಗೆ ಏರ್ಪಾಟಾಗಿದ್ದರೂ ಸಹ ಸಿಕ್ಕಿದವರನ್ನು ಹೊಡೆಯುತಕ್ಕದ್ದು ನಡೆಯುತ್ತಿದೆ ಎಂದು ತಿಳಿದುಬಂದಿದೆ. ಈ ಕಲ್ಲಡಕ ಕೋಮುಗಲಭೆಗೆ ಒಂದು ಹೆಸರು ತೆಗೆದ ಜಾಗ. ಇದನ್ನು ಶಾಂತರೀತಿ ಯಿಂದ ಬಗೆಹರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ ಇದು ಮಾಡದೆ ಮುಸಲ್ಮಾನರನ್ನು ಸಿಕ್ಕಿಸಿಕ್ಕಿದವರನ್ನು ದಸ್ತಗಿರಿ ಮಾಡುತ್ತಿದ್ದಾರೆ. ಹಿಡಿದು ಒಳಗೆ ಹಾಕುತ್ತಿದ್ದಾರೆ. ಈ ರೀತಿ ಮಾಡು ವುದು ಬೇಡ. ಆ ಜನರಿಗೆ ಏನೂ ತೊಂದರೆ ಬಾರದಂತೆ ನೋಡಿಕೊಳ್ಳಬೇಕು. ಅವರನ್ನು ಹಿಡಿದು ಹೊಡೆಯುವುದು, ಹಿಂಸೆ ಕೊಡುವುದು ಬೇಡ. ಅಲ್ಲಿ ಶಾಂತ ವಾತಾವರಣ ಉಂಟಾಗುವಂತೆ ಮಾಡ ಬೇಕೆಂದು ಹೇಳುತ್ತಿದ್ದೇನೆ ಇನ್ನು ಒಬ್ಬ ವ್ಯಕ್ತಿ "ನಿರಾಕರಣ" ಎಂಬ ಒಂದು ನಾಟಕದ ಪುಸ್ತಕ ವನ್ನು ಬರೆದಿದ್ದಾರೆ ಅದರಲ್ಲಿ ಮುಸ್ಲಿಂ ಪಂಗಡದವರನ್ನು ಬಹಳ ಹೀನಾಯವಾಗಿ ಬೈದಿದ್ದಾರೆ. ತಮಗೆಲ್ಲಾ ಗೊತ್ತಿರುವಂತೆ ಒಮ್ಮೆ ಡೆಕ್ಕನ್ ಹೆರಾಲ್ಡ್‌ನಲ್ಲಿ ಪ್ರಕಟವಾದ ಒಂದು ವಿಚಾರದ ಬಗ್ಗೆ ರಾಜ್ಯ ದಲ್ಲಿ ಏನು ಕೋಲಾಹಲವಾಯಿತು. ಅದೇರೀತಿ ಪುತ್ತೂರಿನ ಪ್ರಕರಣದಲ್ಲಿಯೂ ಕೂಡ ಏನಾಯಿತೆಂಬುದೂ ನಮಗೆಲ್ಲಾ ಗೊತ್ತಿದೆ. ಇದನ್ನೆಲ್ಲಾ ನೋಡಿದಮೇಲೆ ಆಡಳಿತವನ್ನು ನಡೆಸುವವರು ಬಹಳ ಜಾಗೃತವಾಗಿರಬೇಕು. ಯಾರೋ ಒಬ್ಬ ವಕ್ತಿ ಏನೋ ಒಂದು ಬರೆದ ಎಂದರೆ ಅದಕ್ಕೆ ನೀವು ಮನ್ನಣೆಯನ್ನು ಕೊಟ್ಟರೆ ಅದರಿಂದ ಕೆಲವುಸಾರಿ ಅನಾಹುತಗಳುಂಟಾಗಬಹುದು, ಕೋಮು ಗಲಭೆ ಗಳುಂಟಾಗಬಹುದು, ಅಥವಾ ಜನರು ರೊಚ್ಚಿಗೇಳುವ ಸಂದರ್ಭಗಳುಂಟಾಗಬಹುದು. ಹಿಂದೂ ಮುಸ್ಲಿಂ ಗಲಾಟೆಗಳಾಗಿ ಅಮಾಯಿಕ ಜನರಿಗೆ ಮುಗ್ಧ ಜನರಿಗೆ ಅನ್ಯಾಯವಾಗಿ ತೊಂದರೆಯಾಗಬಹುದು. ಈರೀತಿ ಆದರೆ ನಮ್ಮ ಕರ್ನಾಟಕದ ಯಃಶಸ್ಸಿಗೆ, ಕರ್ನಾಟಕದ ಕೀರ್ತಿ ಶಿಖರಕ್ಕೆ ಧಕ್ಕೆಯುಂಟಾಗುತ್ತದೆ. ಆದ್ದರಿಂದ ರಾಜ್ಯದ ಆಡಳಿತ ಸೂತ್ರವನ್ನು ಹಿಡಿದಿರುವವರು ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳ ಬೇಕು. ಮಾನ್ಯ ರಾಚಯ್ಯನವರನ್ನು ನಾನು ಎರಡು ವಿಷಯದಲ್ಲಿ ಅಭಿನಂದಿಸುತ್ತೇನೆ. ಮೊದಲನೆ ಯದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಜನತೆಯನ್ನು ನಡುಗಿಸಿದ್ದ ಕೊಲೆಪಾತಕಿ ಚಂದ್ರನ್‌ನನ್ನು ಹಿಡಿದು ಹಾಕಿರುವುದು, ಆತನಿಂದ, ಆತನ ಗೂಂಡಾಗಿರಿಯಿಂದ, ಅಲ್ಲಿನ ಜನರು ಯಾರೂ ಕೂಡ ರಾತ್ರಿ ಹೊತ್ತು ನಿಶ್ಚಿಂತರಾಗಿ ನಿದ್ದೆಯನ್ನು ಮಾಡುವಂತಿರಲಿಲ್ಲ. ಇದು ಎಲ್ಲರಿಗೂ ಗೊತ್ತಿದ್ದ ವಿಚಾರ. ಇನ್ನು ಎರಡನೆಯದಾಗಿ ಎಂದರೆ ಚಂದ್ರಗುತ್ತಿಯ ಬೆತ್ತಲೆ ಸೇವೆಯನ್ನು ನಿಲ್ಲಿಸುವುದಕ್ಕೆ ಸಾಧ್ಯವೇ ಇಲ್ಲ ಎನ್ನತಕ್ಕ ಮಾತು ಎಲ್ಲರ ಬಾಯಲ್ಲೂ ಬರುತ್ತಿತ್ತು. ಪೋಲೀಸರು ಬಹಳ ಕಷ್ಟಪಟ್ಟು, ದಕ್ಷತೆ ಯಿಂದ ಕೆಲಸ ಮಾಡಿ ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಬೆತ್ತಲೆ ಸೇವಯನ್ನು ನಿಲ್ಲಿಸಿದ್ದಾರೆ. ಈ ಎರಡು ವಿಚಾರಗಳಲ್ಲಿ ನಾವು ಗೃಹ ಖಾತೆಯ ಮಾನ್ಯ ರಾಚಯ್ಯನವರನ್ನು ಅಭಿನಂಧಿಸಬೇಕಾಗಿದೆ. ಅವರು ತಮ್ಮ ಧಕ್ಷತೆ ಮತ್ತು ಸಾಮರ್ಥ್ಯವನ್ನು ಇಲ್ಲಿ ತೋರಿಸಿದ್ದಾರೆ. ಕೊಲೆಗಾರರನ್ನು, ಗೂಂಡಾ ಗಳನ್ನು ಹಿಡಿದು ಶಿಕ್ಷಿಸುವುದರಲ್ಲಿ ಯಃಶಸ್ವಿಯಾಗಿದ್ದಾರೆ. ಮಾನ್ಯ ಅಧ್ಯಕ್ಷರೆ, ಸಾರಿಗೆ ಇಲಾಖೆಯ ಬಗ್ಗೆ ಹೇಳಬೇಕಾದುದು ಬಹಳಷ್ಟಿತ್ತು. ಆದರೆ ಕಾಲಾವಕಾಶ ಇಲ್ಲದಿರುವುದರಿಂದ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ರಾತ್ರಿ ಬಸ್ಸುಗಳಿಗೆ ಇಬ್ಬರು ಡ್ರೈವರ್‌ಗಳನ್ನು ಕೊಡಬೇಕು. ನಮ್ಮ ಭಾಗದ ಬಸ್ಸುಗಳಿಗೆ ಒಬ್ಬರೇ ಡ್ರೈವರ್ ಇದ್ದಾರೆ. ಲಕ್ಷುರಿ ಬಸ್ಸುಗಳಲ್ಲಿ ಜನರು ನಿಂತುಕೊಂಡು ಹೋಗುವುದಕ್ಕೆ ಕಾರಣವನ್ನು ಕಂಡುಹಿಡಿದು ಇದನ್ನು ತಪ್ಪಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೆ, ಈ ದಿವಸ ಮಾನ್ಯ ಸಚಿವರುಗಳು ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಸದನದ ಮುಂದೆ ಮಂಡಿಸಿರುವ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ ನನ್ನ ಕೆಲವು ಸಲಹೆಗಳನ್ನು ಕೊಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಮೊದಲನೆಯದಾಗಿ ಗೃಹ ಖಾತೆಯ ಸಚಿವರು ಕೊಟ್ಟಿರತಕ್ಕ ಆಡಳಿತದ ವಾರ್ಷಿಕ ವರದಿಯಲ್ಲಿ ಫೈರಿಂಗ್ ವಿಚಾರಕ್ಕೆ ಸಂಬಂಧಪಟ್ಟಂತೆ ಎಷ್ಟು ಜುಡಿಷಿಯಲ್ ಎನ್‌ಕ್ವೈರಿಗಳಾಗಿವೆ, ಅವುಗಳ ರಿಸಲ್ಟ್ ಏನು ಎಂಬ ಬಗ್ಗೆ ಯಾವುದೇ ಅಂಕಿ ಸಂಖ್ಯೆಗಳನ್ನು ಕೊಟ್ಟಿಲ್ಲ. ಪೋಲೀಸರು ಏತಕ್ಕೆ ಫೈರಿಂಗ್ ಮಾಡುತ್ತಾರೆ. ಅದರ ಹಿನ್ನಲೆ ಏನು ? ಅದರಲ್ಲಿ ಯಾರದ್ದು ತಪ್ಪಿದೆ, ಇನ್ನೂ ಮುಂತಾದವುಗಳನ್ನು

ನಾವು ಯೋಚನೆ ಮಾಡಬೇಕು. ನಾವೆಲ್ಲರೂ ನೋಡಿದಂತೆ ಪೋಲೀಸರು ಬಹಳಷ್ಟು ಫೈರಿಂಗ್‌ಗಳನ್ನು ಮಾಡಿದ್ದಾರೆ. ಈ ಫೈರಿಂಗ್‌ನ್ನು ಮಾಡಬೇಕಾದರೂ ಕೂಡ ಮನಸ್ಸಿಗೆ ಬಂದಂತೆ ಮಾಡುವುದಕ್ಕಾಗುವುದಿಲ್ಲ. ಡ್ರಿಲ್ ಮ್ಯಾನ್ಯುಯಲ್‌ನ ಸೆಕ್ಷನ್ ೧೨೭, ೧೨೧ (ಸಿ) ೧೧೮೦ (ತಿ), ಇನ್ನೂ ಮುಂತಾದುವುಗಳ ಮೇರೆಗೆ ಮಾಡಬೇಕಾಗುತ್ತದೆ. ಈ ಮ್ಯಾನ್ಯುಯಲ್ ನೋಡಿದರೆ ತಮಗೇ ಗೊತ್ತಾಗುತ್ತದೆ, ಪೋಲೀಸರು ಫೈರಿಂಗ್ ಮಾಡುವುದಕ್ಕೆ ಮೊದಲು ಗಲಾಟೆ ಆಗುತ್ತಿರುವಾಗ ಟಿಯರ್ ಗ್ಯಾಸ್‌ನ್ನು ಉಪಯೋಗಿಸಬೇಕು, ನಂತರ ಲಾಠಿ ಛಾರ್ಜ್ ಮಾಡಬೇಕು, ಅದಕ್ಕೂ ಜನರು ಚದುರದಿದ್ದರೆ ರೆಡ್ ಬ್ಯಾನರ್‌ನಿಂದ ವಾರ್ನಿಂಗ್ ಕೊಟ್ಟು ನೀವು ಇಲ್ಲಿಂದ ಚದುರಿ ಹೋಗದಿದ್ದರೆ ಫೈರಿಂಗ್ ಮಾಡುತ್ತೇವೆಂದು ಹೇಳಬೇಕು. ಆಗಲೂ ಜನರು ಹೋಗದಿದ್ದರೆ ಫೈರಿಂಗ್ ಮಾಡಬೇಕು. ಫೈರಿಂಗ್ ಮಾಡುವಾಗಲೂ ಕೂಡ ನೇರವಾಗಿ ಜನರ ಗುಂಪಿಗೆ ಗುಂಡನ್ನು ಹಾರಿಸದೆ ಗಾಳಿಯಲ್ಲಿ ಗುಂಡನ್ನು ಹಾರಿಸಬೇಕು. ಗುಂಪಿನ ಲೀಡರ್ಸ್ ಯಾರಿರುತ್ತಾರೆ ಅವರಿಗೆ ಲಾಠಿಯಿಂದ ಹೊಡೆಯಬೇಕು. ಆದರೆ ಇಲ್ಲಿ ನಡೆದಿರತಕ್ಕ ಫೈರಿಂಗ್‌ನ್ನು ನೋಡಿದರೆ ಪೋಲೀಸರು ನೇರವಾಗಿ ಜನರ ಮೇಲೆಯೇ ಗುಂಡು ಹಾರಿಸಿದ್ದಾರೆ. ಒಂದು ತಮಾಷೆ ಎಂದರೆ ಒಂದು ಪೋಲೀಸ್ ಫೈರಿಂಗ್‌ನಲ್ಲಿ ೨೩ ರೌಂಡ್ಸ್ ಗುಂಡು ಹಾರಿಸಿದ್ದು ೨-೩ ಜನ ಸತ್ತಿದ್ದಾರೆ, ೪-೫ ಜನ ಗಾಯಗೊಂಡಿದ್ದಾರೆಂದು ಏನು ಹೇಳಿದ್ದಾರೆ ಇದನ್ನು ನಾವು ನಂಬುವುದಕ್ಕಾಗುವುದಿಲ್ಲ.

The high-handedness of the police personnel has been highlighted. Why this high-handedness ? That is because, they are not taught the basic social, psychological and other matters of human behaviour. Out of nine months training, only fifty periods are earmarked for social, psychological and human behaviour matters. That is not sufficient. The Police Department should be a friend, a philosopher and a guide to the public. To imbide these qualities in them, proper and extensive training in social, psychological and other matters should be given to them to deal with the human behaviour. I hope that will be included in the curriculam and improve them during their work. ಪೋಲೀಸ್ ಫೈರಿಂಗ್ ಬಗ್ಗೆ ಹೇಳುವುದಾದರೆ ೧೯೮೩ರಲ್ಲಿ ೧೩ ಫೈರಿಂಗ್ ಆಗಿ ಅದರಲ್ಲಿ ೧೭ ಜನರು ಸತ್ತರು, ೫೭ ಜನರು ಗಾಯಗೊಂಡರು. ೧೯೮೪ರಲ್ಲಿ ೩೪ ಫೈರಿಂಗ್ ಆಯಿತು, ೧೯೮೫ರಲ್ಲಿ ೧೭ ಫೈರಿಂಗ್ ಆಯಿತು. ೧೯೮೬ರಲ್ಲಿ ೩೦ ಫೈರಿಂಗ್ ಆಗಿರುತ್ತದೆ ಇದಕ್ಕೆಲ್ಲಾ ಜ್ಯುಡಿಷಿಯಲ್ ಎನ್‌ಕ್ವಯರಿ ಆಗಿದೆ. ಆದರೂ ಕೂಡ ಏನು ಸುಧಾರಣೆ ಆಗಿಲ್ಲ. ಈ ಎನ್‌ಕ್ವರಿಯುಗಳು ಪೋಲೀಸ್ ದೌರ್ಜನ್ಯವನ್ನು ಎತ್ತಿ ತೋರಿಸಿದೆ. ಆದರೆ What is lacking in this; why this high-handedness, which has been highlighted by the Judicial Enquiries which we offen appoint to study these firing incidents. One thing I feel is that we are not paying much attention to three things (1) their high-handedness due to lack of proper training (2) lack of understanding the social and psychological behaviour of the mob and (3) accountability. There is no accountability when the firing incidents take place Judicial enquiries are ordered, the reports will come, but no action will be taken on the reports in time. When reports come, the Government should take strict action. When the government mind will be known to the officers and they will not repeat such things in future.

On Chandraguthi we had a report. But what is the reaction of the government ? The report indicted the Superintendent of Police and made him responsible. But no action is taken as far as I am

aware. Why this delay ? If you delay like this, it will circulate in the minds of the officers that these are only customary things, the enquiries will go on and they will be indicted some persons, but no action will be taken against them. Unless the government takes action on the officers based on the reports immediately, whomsoever they may be, and whatsoever high they may be, their attitude will not change. You take the other incident like the Shimoga Jail affair. What happened there? The Government directed the DGP to suspend two Sub-Inspectors. In turn he passed an order to the Superintendent of Police, to suspend those two Sub-Inspectors. But again within seven days they were reinstated by the SP. The whole point here is, the enquiry was conducted and again they were reinstated. When the Government directed the DGP to suspend those STs and in turn the DGP directed the SP to do the same while revoking the suspension orders, the same route should have been followed The government should have directed on the findings on the enquiry officer to reinstate them. But this was not done. That means the government is highly handicapped. Under such circumstances they should make it clear how the officers should react. Unless that is made clear, I don't think much can done.

Coming to accountability aspect, in many of these firing we have seen that public servants are turning masters of the people. In a democratic set up, this is a most undemocratic attitude which is prevailing. The executives who should serve the people are turning to be their masters. This tendency should be curbed and this could be curbed only if the Government appoints a High-Power Enquiry Commission to go into the entire gamut of Citizen-Executive brelationship. What has happened today, the practices are out-dated and they are century old. The values of life have changed. In the present set-up the rules, the laws and the Acts which are obsolute, do not suit to the prevailing social set-up. Under these circumstances, the Citizen-Executive relationship should be properly defined in the sense, if the executive goes against the directions he should be made accountable. If it is proper okay, but if it is not proper he should be punished This is very urgent and such an examination is necessary and it should be done by appointing a High-power Commission so that it can look into this citizen-executive relationship.

About staffing pattern of police personnel, Sir, you know the Sub-Inspector is the kingpin. This is one area where exactly we are not following certain rules. The rules/procedurs lay down that direct recruitment of SIs should be 66 2/3% and the promotees by 33 1/3%. What is position existing today ? As on today out of 1514 posts of

SIs, direct recruitees are 657 and promotees are 857. The ratio works out to 43.40:66.60. Actually the Government has fixed the percentage at 66 2/3% for direct recruitment and 33 1/3% for promotees with definite background. The background is, if promotee, who has put in 25 or 30 years service in constabulary is given the post of Sub-Inspector, he will still behave as a constable, not as a Sub-Inspector. This has created more botheration to the department and it is causing more blame on the department. After all a constable who has put in more than 20 years of service is of no use because, he doesn't have the capacity to understand the situation and react fast. It is with that view and with an intention to maintain harmonious balance with the public and harmonious balance in the staffing pattern of SIs, ths ratio has been prescribed by the government. Unless immediate steps are taken to rectify the existing ratio where the rules have not been followed, I think, things will not improve.

1-00 P.M.

Sir, the other point is regarding recruitment. Since 1980 to 1985 only 50 Sub-Inspectors have been appointed. Who should recruit, whether it is the Department or Public Service Commission, it is in confusion. Whatever may be the recruiting agency, proper recruitment should take place. Government should clarify this point Then I would like to say a few words regarding police firing etc. Sir, in 1985 a series of dacoities have taken place in and around Bangalore. The Department should give a publicity as to the number of cases in which conviction has taken place, number of cases prosecuted. They should create confidence in the minds of the public. When Police Department is taking prompt action why should it be shy in giving publicity. Whatever action that has been taken by the Department it should be brought to the notice of the public to create a better relationship between public and the police. I request the Hon'ble Minister to take note of all these points. Sir, with these few words I thank you for having given me an opportunity to speak. Thank you.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ೧೯೮೭–೮೮ನೇ ಸಾಲಿಗೆ ಮಂಡಿಸಿರತಕ್ಕ ಬೇಡಿಕೆಗಳನ್ನು ಕೆಲವಾರು ಕಾರಣಗಳಿಗಾಗಿ ವಿರೋಧಮಾಡುತ್ತಾ ನನ್ನ ಮಾತನ್ನು ಪ್ರಾರಂಭಿಸಿದ್ದೇನೆ. ಅಧ್ಯಕ್ಷರೆ, ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರಕ್ಕೆ ಬಂದ ಮೇಲೆ ಯಾವುದೇ ಭ್ರಷ್ಟಾಚಾರದ ಪ್ರಕರಣದ ಬಗ್ಗೆ ಸಾರ್ವಜನಿಕರು ಕಾಗದ ಬರೆದು ತಿಳಿಸಿದರೂ ಸಾಕು ತಪ್ಪಿತಸ್ಥರ ವಿರುದ್ಧ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಭರವಸೆ ನೀಡಿದ್ದರು: ಕೇವಲ ಒಂದು ಕಾಗದದಲ್ಲಿ ಬರೆದರೂ ಸಹ ನಾನು ಭ್ರಷ್ಟಾಚಾರವನ್ನು ಸಹಿಸುವುದಿಲ್ಲ. ಸಾಮಾನ್ಯ ಜನ ಸಣ್ಣ ಕಾಗದದಲ್ಲಿ ಬರೆದು ಆ ವಿಚಾರ ತಿಳಿಸಿದರೂ ಸಹ ಅದನ್ನು ನಾನು ತಡೆಗಟ್ಟುವುದರಲ್ಲಿ ಮತ್ತು ನ್ಯಾಯ ದೊರಕಿಸಿಕೊಡುವುದರಲ್ಲಿ ಬಹಳ ಆಸಕ್ತನಾಗಿದ್ದೇನೆ, ಸರ್ಕಾರ

ಆದಕ್ಕೆ ಬದ್ಧವಾಗಿದೆ, ಭ್ರಷ್ಟಾಚಾರವನ್ನು ನಾವು ಎಳ್ಳಷ್ಟೂ ಸಹಿಸುವುದಿಲ್ಲ ಎಂಬ ಮಾತನ್ನು ಅವರ ಭಾಷಣದಲ್ಲಿ ಹೇಳಿದರು. ಆದರೆ ನಡೆದು ಬಂದ ದಾರಿಯನ್ನು ನೋಡುತ್ತಾ ಬಂದರೆ ಬಹುಶಃ ಭ್ರಷ್ಟಾಚಾರದ ಬುಡವನ್ನು ಕಿತ್ತುಹಾಕುತ್ತೇವೆಂದು ಹೇಳಿದ ಮುಖ್ಯಮಂತ್ರಿಗಳು ಅದನ್ನು ಮುಟ್ಟುವುದಕ್ಕೂ ಸಾಧ್ಯವಿಲ್ಲದೇ ಇರುವ ಪರಿಸ್ಥಿತಿಯಲ್ಲಿ ಇನ್ನೂ ಆಡಳಿತದಲ್ಲಿ ಭ್ರಷ್ಟಾಚಾರ ಅವ್ಯಾಹತವಾಗಿ ನಡೆಯುತ್ತಿದೆ. ಅದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಪಬ್ಲಿಕ್ ಸರ್ವೀಸ್ ಕಮಿಷನ್ ಎಂದು ಒಂದು ಇಲಾಖೆ ಇದೆ. ಅದರ ಕರ್ತವ್ಯ ಈ ರಾಜ್ಯದಲ್ಲಿರತಕ್ಕ ಪದವೀಧರರಿಗೆ, ವಿದ್ಯಾವಂತರಿಗೆ ಉದ್ಯೋಗವನ್ನು ಒದಗಿಸತಕ್ಕದ್ದು. ಈ ಸಂಸ್ಥೆ ಬಗ್ಗೆ ಬಹಳ ಒಳ್ಳೆಯ ಭಾವನೆ ವಿದ್ಯಾವಂತರಲ್ಲಿದೆ. ಏಕೆಂದರೆ ಅದು ಉದ್ಯೋಗವನ್ನು ಒದಗಿಸುವಂಥ ಇಲಾಖೆಯಾಗಿರುವುದರಿಂದ ಅದರ ಮೇಲೆ ಹೆಚ್ಚು ಆಸಕ್ತಿ, ಗೌರವ ಮತ್ತು ಅಭಿಮಾನ ಇದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಏನಾಗಿದೆಯೆಂದರೆ ಅಂಥ ಒಂದು ಸಂಸ್ಥೆಯ ಆಡಳಿತದ ವಿಚಾರದಲ್ಲಿ ಎಲ್ಲರೂ ಸಹ ಜಿಗುಪ್ಸೆ ಪಡತಕ್ಕ, ಅವಮಾನ ಪಡತಕ್ಕ ರೀತಿಯಲ್ಲಿ ಅಲ್ಲಿಯ ವ್ಯವಹಾರ ನಡೆದಿದೆ. ೧೯೮೦ರಿಂದೀಚೆಗೆ ಅಲ್ಲಿ ನಡೆದಿರತಕ್ಕ ಅವ್ಯವಹಾರ, ಬಹುಶಃ ಹಿಂದೆ ಎಂದೂ ನಡೆದಿಲ್ಲ ಎಂದು ನನಗನ್ನಿಸುತ್ತದೆ. ಉದಾಹರಣೆಗೆ ಒಂದು ವಿಷಯವನ್ನು ಆ ಬಗ್ಗೆ ಹೇಳುವುದಾದರೆ, ಒಂದು ಸಾರಿ ಇಲಾಖಾ ಪತಿಯಿಂದ ಅರ್ಜಿಗಳನ್ನು ಕರೆದು ಆಯ್ಕೆಯಾದ ಮೇಲೆ ಅವರುಗಳನ್ನು ಇಲಾಖಾವಾರು ಹಂಚಿಕೆಯಾದ ಮೇಲೆ ಪುನರ್ ಹಂಚಿಕೆ ಮಾಡುವುದಕ್ಕೆ ಅವಕಾಶ ಇಲ್ಲ. ಅಂದರೆ ಇಲಾಖೆಯ ಕಾರ್ಯದರ್ಶಿಗಳಿಗಾಗಲಿ ಅಥವಾ ಆ ಇಲಾಖೆಗಾಗಲಿ ಈ ಅವಕಾಶ ಇರುವುದಿಲ್ಲ, ಅಂತಹ ಒಂದು ಮರು ಹಂಚಿಕೆಯಾದಂಥ ವಿಚಾರವನ್ನು ಇಲ್ಲಿ ಹೇಳುತ್ತೇನೆ. ಅಲ್ಲಿನ ಕಾರ್ಯದರ್ಶಿಯವರಾದ ಶ್ರೀ ಅನಿರುದ್ಧ ದೇಸಾಯಿಯವರು ಈ ಮರು ಹಂಚಿಕೆಯ ಬಗ್ಗೆ ಸರ್ಕಾರಕ್ಕೆ ಒಂದು ಪತ್ರವನ್ನು ಬರೆಯುತ್ತಾರೆ. ಆ ಪತ್ರಕ್ಕೆ ಮುಖ್ಯ ಕಾರ್ಯದರ್ಶಿಯವರು ಉತ್ತರ ಬರೆಯುತ್ತಾರೆ.

> "ಮೇಲ್ಕಂಡ ವಿಷಯದ ಬಗ್ಗೆ ಕರ್ನಾಟಕ ಸರ್ಕಾರ ಸೇವಾ ಗ್ರೂಪ್ . 'ಸಿ'' ಬಗ್ಗೆ ನಿಯಮಾವಳಿ ರೀತ್ಯ ಒಂದು ಇಲಾಖೆಗೆ ಹಂಚಿಕೆ ಮಾಡಲ್ಪಟ್ಟ ಅಭ್ಯರ್ಥಿಗಳು ಬೇರೆ ಇಲಾಖೆಗೆ ಮರು ಹಂಚಿಕೆ ಮಾಡಲು ಅವಕಾಶ ಇರುವುದಿಲ್ಲ''

ಎನ್ನತಕ್ಕಂತಹ ಉತ್ತರವನ್ನು ಅವರಿಗೆ ಬರೆದು ಕಳುಹಿಸುತ್ತಾರೆ. ಆ ರೀತಿ ಮಾಡುವುದಕ್ಕೆ ಅವಕಾಶ ಇಲ್ಲ ಎನ್ನತಕ್ಕಂತಹ ಅಭಿಪ್ರಾಯದಿಂದ ಮುಖ್ಯ ಕಾರ್ಯದರ್ಶಿಯವರು ಈ ಪತ್ರವನ್ನು ಅವರು ೨೫-೬-೮೬ರಂದು ಬರೆಯುತ್ತಾರೆ. ಅಲ್ಲಿ ಸರ್ವಾಧಿಕಾರವನ್ನು ಮಾಡತಕ್ಕ ಶ್ರೀ ಅನಿರುದ್ಧ ದೇಸಾಯಿಯವರು ಅದನ್ನು ಉಲ್ಲಂಘನೆ ಮಾಡಿ, ಮುಖ್ಯ ಕಾರ್ಯದರ್ಶಿಯವರು ಬರೆದ ಪತ್ರವನ್ನು ಕೂಡ ಉಲ್ಲಂಘನೆ ಮಾಡಿ, ಮತ್ತೆ ಆ ಇಲಾಖೆಯಲ್ಲಿರತಕ್ಕ ಎಲ್ಲಾ ನಿಯಮಾವಳಿಗಳನ್ನು ಬದಿಗೊತ್ತಿ...

ಶ್ರೀ ಎ. ಲಕ್ಷ್ಮೀಸಾಗರ್.—ನನ್ನದೊಂದು ಕ್ರಿಯಾಲೋಪ ಇದೆ. ಸನ್ಮಾನ್ಯ ಸದಸ್ಯರು ಇಲಾಖೆಯ ಬೇಡಿಕೆಗಳ ಮೇಲೆ ನಡೆಯುವಂತಹ ಚರ್ಚೆಯಲ್ಲಿ ಭಾಗವಹಿಸತಕ್ಕಂತಹ ಸಮಯದಲ್ಲಿ ಅಧಿಕಾರಿಗಳ ಲೋಪದೋಷಗಳ ಬಗ್ಗೆ ದೋಷಾರೋಪಣೆ ಮಾಡತಕ್ಕ ಸಂದರ್ಭ ಇದ್ದರೆ ಅಂತಹ ವಿಚಾರಗಳನ್ನು ಪೂರ್ವಭಾವಿಯಾಗಿ ಮಂತ್ರಿಗಳಿಗೆ ಪತ್ರದ ಮುಖೇನ ತಿಳಿಸತಕ್ಕದ್ದೆಂದು ಹಿಂದೆ ಈ ಮಹಾ ಸಭೆಯ ಅಧ್ಯಕ್ಷರ ತೀರ್ಮಾನ ಇದೆ. ಆ ರೀತಿ ಮಾನ್ಯ ಲಕ್ಕಪ್ಪನವರು ಅದರ ಬಗ್ಗೆ ಮೊದಲೇ ಪೂರ್ವಭಾವಿಯಾಗಿ ತಿಳುವಳಿಕೆಯನ್ನು ಕೊಟ್ಟು ಮಾತನಾಡುವುದು ಒಳ್ಳೆಯದು ಎಂದು ಹೇಳಿ ನಾನು ತಮ್ಮಲ್ಲಿ ನಿವೇದಿಸಿಕೊಳ್ಳುತ್ತಾ, ನಾನು ಎತ್ತಿರುವಂತಹ ಕ್ರಿಯಾಲೋಪವನ್ನು ಎತ್ತಿ ಹಿಡಿಯಬೇಕೆಂದು ತಮ್ಮಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ. ಆಬಗ್ಗೆ ನೀಡಿರುವಂತಹ ರೂಲಿಂಗ್‌ನ್ನು ತಮಗೆ ನೀಡುತ್ತಿದ್ದೇನೆ.

ಅಧ್ಯಕ್ಷರು.—ಮೊದಲು ನೋಟೀಸ್ ಕೊಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಲಕ್ಷ್ಮೀಸಾಗರ್.—ಇದು ಒಂದು. ಎರಡನೆಯದು, ಸನ್ಮಾನ್ಯ ಲಕ್ಕಪ್ಪನವರು ಇದೇ ವಿಷಯದ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದರು. ನಾನು ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಕೊಟ್ಟಿದ್ದೇನೆ ನಾನು ಮುಖ್ಯಮಂತ್ರಿಗಳ ಪರವಾಗಿ ಕೊಟ್ಟಂತಹ ಉತ್ತರ ಸನ್ಮಾನ್ಯ ಲಕ್ಕಪ್ಪನವರಿಗೆ ಸಮಾಧಾನವಾಗದಿದ್ದರೆ ನಿಯಮಾವಳಿ ಪ್ರಕಾರ ಅರ್ಧ ಗಂಟೆ ಚರ್ಚೆಗೆ ಒಂದು ಅವಕಾಶವನ್ನು ತಮ್ಮಿಂದ ಪಡೆದು ಅದರ ಮೇಲೆ ವಿಚಾರ ವಿನಿಮಯ ಮಾಡುವುದಕ್ಕೆ ಅವಕಾಶ ಇತ್ತು. ಅದನ್ನಾದರೂ ಮಾನ್ಯ ಸದಸ್ಯರು ಮಾಡಬಹುದಾಗಿತ್ತು. ಮೂರನೆಯದು ಕೆಲವು ಸಾರಿ ಸರ್ಕಾರಿ

ಅಧಿಕಾರಿಗಳ ಮೇಲೆ ಆರೋಪವನ್ನು ಮಾಡಿದಾಗ ಉತ್ತರ ಕೊಡತಕ್ಕಂತಹ ಮುಖ್ಯಮಂತ್ರಿಗಳಾಗಲಿ, ಅಥವಾ ಮಂತ್ರಿಗಳಾಗಲಿ ಆ ಆರೋಪವನ್ನು ನೇರವಾಗಿ ನಿರಾಕರಿಸುವುದು ಕಷ್ಟವಾಗುತ್ತದೆ ಅಥವಾ ಅದು ಸರಿ ಎಂದು ಹೇಳುವುದೂ ಕಷ್ಟವಾಗುತ್ತದೆ. ಆದರೆ ಪೂರ್ವಭಾವಿಯಾದ ತಿಳುವಳಿಕೆ ಇದ್ದರೆ, ಪೂರ್ವಾಪರ ಯೋಚನೆ ಮಾಡಿ ಏನು ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ ಎನ್ನುವುದನ್ನು ಯೋಚನೆ ಮಾಡಿ ಉತ್ತರ ಕೊಡುವುದಕ್ಕೆ ಸಹಾಯಕವಾಗುತ್ತದೆ. ಸರ್ಕಾರಿ ಅಧಿಕಾರಿಗಳು ನೇರವಾಗಿ ಈ ಸದನದಲ್ಲಿ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲದ ಕಾರಣಕ್ಕೋಸ್ಕರ ಈ ಒಂದು ಅಭಿಪ್ರಾಯವನ್ನು ನಿಯಮಾವಳಿಗಳಲ್ಲಿ ಅಳವಡಿಸಲಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಬಗ್ಗೆ ನೀಡಿರುವಂತಹ ರೂಲಿಂಗ್‌ನಲ್ಲಿ ಇದಕ್ಕೆ ಸಂಬಂಧ ಪಟ್ಟ ಭಾಗಗಳನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಅದು ಹೀಗಿದೆ.—

"ಮೇಲ್ಕಂಡ ನಿದರ್ಶನಗಳನ್ನು ಗಮನಿಸಿದಲ್ಲಿ ಉನ್ನತ ಮಟ್ಟದ ಸಂಸದೀಯ ಶಿಷ್ಟಾಚಾರವನ್ನು ಉಳಿಸಿಕೊಳ್ಳಲು ಹಾಗೂ ಜನತೆಯ ಗೌರವವನ್ನು ರಕ್ಷಿಸಲು ಸದಸ್ಯರು ಕೆಳಕಂಡ ವಿಧಾನವನ್ನು ಅನುಸರಿಸಬೇಕೆಂದು ನನ್ನ ಅಭಿಪ್ರಾಯ ಹಾಗೂ ತೀರ್ಪು".

"ಇಲಾಖೆಯ ಆಗುಹೋಗುಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳನ್ನು ಟೀಕಿಸುವಾಗ ಪೂರ್ವಭಾವಿ ಸೂಚನೆಯ ಅವಶ್ಯಕತೆ ಇರುವುದಿಲ್ಲ"

ಏಕೆಂದರೆ ಮಂತ್ರಿಗಳು ನೇರವಾಗಿ ಸಂಬಂಧಪಟ್ಟವರು ಇರುತ್ತಾರೆ. ಆದ್ದರಿಂದ ಪೂರ್ವಭಾವಿಯಾಗಿ ಇದು ಬೇಕಾಗುವುದಿಲ್ಲ. ನೀವು ಅವರನ್ನು ತರಾಟೆಗೆ ತೆಗೆದುಕೊಳ್ಳ ಬಹುದು.

"ಮಂತ್ರಿಗಳಿಗೆ ಸಂಬಂಧಿಸಿದ ಇಲಾಖೆಯ ಆಗುಹೋಗುಗಳಿಗೆ ಪೂರ್ಣವಾಗಿ ಸಂಬಂಧಿ ಸದಂತಿದ್ದು, ಅವರ ಮೇಲೆ ಆರೋಪ ಮಾಡಬೇಕಾದಲ್ಲಿ ಅಧ್ಯಕ್ಷರಿಗೆ ಹಾಗೂ ಸಂಬಂಧ ಪಟ್ಟ ಮಂತ್ರಿಗಳಿಗೆ ಪೂರ್ವಭಾವಿ ಸೂಚನೆಯನ್ನು ನೀಡುವುದು ಸೂಕ್ತ"

"ಅಧಿಕಾರಿಗಳ ದುರ್ನಡತೆಯ ಬಗ್ಗೆ ಆರೋಪ ಮಾಡಬೇಕಾದಲ್ಲಿ ಸಂಬಂಧಪಟ್ಟ ಮಂತ್ರಿಗಳಿಗೆ ಸೂಚನೆ ನೀಡಲೇಬೇಕು."

"ಸದಸ್ಯರಲ್ಲದ ಹೊರಗಿನವರ ವಿರುದ್ಧ ಆರೋಪ ಮಾಡಬೇಕಾದ ಸಂದರ್ಭದಲ್ಲಿ ಅಧ್ಯಕ್ಷರಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಪೂರ್ವಭಾವಿ ಸೂಚನೆಯನ್ನು ನೀಡ ಲೇಬೇಕು.

ಇದರಲ್ಲಿ ಮೊದಲ 2 ತೀರ್ಮಾನಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದು ಮಂತ್ರಿಗಳಿಗೆ ಸಂಬಂಧಪಟ್ಟದ್ದು. ಇನ್ನು ಉಳಿದ ವಿಷಯಗಳು ಎರಡು ಇವೆ. ಅಧಿಕಾರಿಗಳ ದುರ್ನಡತೆಯ ಬಗ್ಗೆ ಆರೋಪ ಮಾಡಬೇಕಾದಲ್ಲಿ ಸಂಬಂಧಪಟ್ಟ ಮಂತ್ರಿಗಳಿಗೆ ಸೂಚನೆ ನೀಡಲೇಬೇಕು. ಸಂಸದೀಯ ವ್ಯವಹಾರ ಗೌರವವನ್ನು ಕಾಪಾಡತಕ್ಕ ಮತ್ತು ಈ ಮನೆಯ ದೊಡ್ಡಸ್ಥಿಕೆಯನ್ನು ಉಳಿಸಿಕೊಳ್ಳುವ ಕೆಲಸ ನಡೆಯಬೇಕು ಯಾರೂ ಟೀಕೆಗೆ ಒಳಗಾಗದೇ ಹೋಗದಿರಬಹುದು. ಎಲ್ಲರೂ ಟೀಕೆಗೆ ಒಳಗಾಗಬೇಕು. ಆದರೆ ಟೀಕೆ ಮಾಡುವಾಗ ಸಂಬಂಧಪಟ್ಟ ಮಂತ್ರಿಗಳಿಗೆ ಮೊದಲು ಸೂಚನೆ ನೀಡಬೇಕು. ತಾವು ಈ ಹಿಂದೆ ನೀಡಿದ ತೀರ್ಮಾನವನ್ನೇ ಎತ್ತಿ ಹಿಡಿಯಬೇಕು. ಮತ್ತೆ ಹಿಂದೆ ಕೊಟ್ಟ ತೀರ್ಮಾನ ಹಾಗೂ ಅಲ್ಲಿಂದ ಇಲ್ಲಿಯವರೆಗೆ ವ್ಯತ್ಯಾಸ ಏನೂ ಆಗಿಲ್ಲ. ಅದು ಸರ್ವ ಕಾಲಿಕವಾಗಿ ಬೆಲೆ ಇರುವ ತೀರ್ಮಾನ. ಅದನ್ನು ತಾವು ಎತ್ತಿ ಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ತಮ್ಮ ಕ್ರಿಯಾಲೋಪವನ್ನು ನಾನು ಎತ್ತಿ ಹಿಡಿದಿದ್ದೇನೆ. ತಾವು ದಯವಿಟ್ಟು ನೋಟೀಸ್ ಕೊಟ್ಟು ಮಾತನಾಡಿ.

ಶ್ರೀ ಬಿ. ಬಸವಲಿಂಗಪ್ಪ.— ತಾವು ಅಧ್ಯಕ್ಷರಿದ್ದೀರಿ. ತಾವು ಹಿಂದೆ ಕೊಟ್ಟ ಒಂದು ತೀರ್ಪಿನ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದ್ದಾರೆ. ನಾನು ತಮಗೆ ನಿವೇದನೆ ಮಾಡಿಕೊಳ್ಳುವುದು ಏನೆಂದರೆ ಶ್ರೀ ಲಕ್ಕಪ್ಪನವರು ಏನು ವಿಷಯ ಎತ್ತಿದ್ದಾರೆ ಅದು ಇದಕ್ಕೆ ಅನ್ವಯವಾಗುವುದಿಲ್ಲ. ಇವತ್ತು ಆರೋಪ ಮಾಡತಕ್ಕದ್ದು ಎಂದರೆ, ಅಧಿಕಾರಿಗಳ ಮೇಲೆ ಆರೋಪ ಮಾಡತಕ್ಕದ್ದು ಇದೆ.

ಅಧ್ಯಕ್ಷರು.— ಅವರು ಆರೋಪ ಮಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.— ಅವರು ಬರೆದ್ದಿರತಕ್ಕ ಕಾಗದವನ್ನು ಓದುತ್ತಿದ್ದಾರೆ.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಸುಲಭವಾಗಲಿ ಎಂದು......

ಶ್ರೀ ಬಿ. ಬಸವಲಿಂಗಪ್ಪ.— ದಯಮಾಡಿ ತಾವು ಕೇಳಬೇಕು. ಅವರು ಇದನ್ನು ಹೇಳಿದ್ದುದು. ಅವಶ್ಯಕ ಇಲ್ಲ ಎಂದು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಿ. ರಾಚಯ್ಯ.— ನನ್ನದೊಂದು ಕ್ರಿಯಾಲೋಪ ಇದೆ. ಆ ವಿಷಯದ ಮೇಲೆ ತಾವು ರೂಲಿಂಗ್ ಕೊಟ್ಟಿದ್ದೀರಿ. ಆದ್ದರಿಂದ ಆ ವಿಷಯದ ಮೇಲೆ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ, ಇದನ್ನು ಹಿರಿಯ ಸದಸ್ಯರಾದ ಮಾನ್ಯ ಬಸವಲಿಂಗಪ್ಪನವರು ತಿಳಿದುಕೊಳ್ಳಬೇಕು.

ಅಧ್ಯಕ್ಷರು.— ಮಾನ್ಯ ಸದಸ್ಯರು ಟೀಕೆ ಮಾಡುವುದು ಇದ್ದರೆ, ಅಪಾದನೆ ಮಾಡುವುದು ಇದ್ದರೆ, ಮಾಡಲಿ. ಆದರೆ ಅವರು ಮೊದಲೇ ನೋಟೀಸ್ ಕೊಟ್ಟರೆ ಆ ಬಗ್ಗೆ ತರಿಸಿಕೊಂಡು ಹೇಳುವುದಕ್ಕಾಗುತ್ತದೆಂದು ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.— ನಾನು ಒಂದು ಮಾತನ್ನು ಹೇಳುತ್ತಿದ್ದೇನೆ......

(ಗೊಂದಲ)

MR. SPEAKER.— I have already given the ruling.

ಶ್ರೀ ಬಿ. ಬಸವಲಿಂಗಪ್ಪ.— ಅವರು ಕಾಗದ ಪತ್ರಗಳನ್ನು ಓದುತ್ತಿದ್ದಾರೆ, ಅವರು ಇನ್ನೂ ಆರೋಪವನ್ನೇನೂ ಮಾಡಿಲ್ಲ. ಅವರು ವಿಷಯ ಹೇಳುತ್ತಿದ್ದಾರೆ.

ಅಧ್ಯಕ್ಷರು.— ಮೊದಲೇ ನೋಟೀಸ್ ಕೊಟ್ಟರೆ ಉತ್ತರ ಕೊಡುವುದಕ್ಕೆ ಆಗುತ್ತದೆ.

ಶ್ರೀ ಬಿ. ಲಕ್ಕಪ್ಪ.— ಇದು ಸರ್ಕಾರದ ಗಮನಕ್ಕೆ ತರದೇ ಇರತಕ್ಕ ವಿಚಾರವೇನಲ್ಲ. ಸುಮಾರು ಒಂದೂವರೆ ತಿಂಗಳಿಂದ ಸರ್ವ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಸುಮಾರು ೩೦–೪೦ ಆರೋಪಗಳು ಇದಕ್ಕೆ ಸಂಬಂಧಪಟ್ಟವು ಇವೆ. ಇಷ್ಟೊಂದು ವ್ಯಾಪಕವಾಗಿ ಅವ್ಯವಹಾರ ನಡೆದಿರುವುದರಿಂದ ಈ ವಿಚಾರವಾಗಿ ಈ ಸದನದಲ್ಲಿ ಷಾರ್ಟ್ ಡ್ಯೂರೇಷನ್ ನೋಟಿಸ್ ಕೆಳಗೆ ಮಾತನಾಡಬೇಕೆಂದು ಈ ವಿಷಯವನ್ನು ಮಾನ್ಯ ಅಧ್ಯಕ್ಷರಿಗೆ ತಲುಪಿಸಲು ಪ್ರಯತ್ನ ಪಟ್ಟಾಗ ಅದಕ್ಕೆ ಉತ್ತರ ಬೇಗ ಬರಲಿಲ್ಲ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ನಿಯಮಗಳ ಪ್ರಕಾರ ಯಾವ ಕಾರಣಕ್ಕೂ ಒಮ್ಮೆ ಜಾಗಗಳು ಹಂಚಿಕೆಯಾದ ಮೇಲೆ ಪುನಃ ಹಂಚಿಕೆ ಮಾಡಬಾರದೆನ್ನುವ ನಿಯಮ ಇರುವಾಗ ಆ ನಿಯಮಗಳನ್ನು ಉಲ್ಲಂಘನೆ ಮಾಡಿ ಪುನರ್ ಹಂಚಿಕೆ ಮಾಡಿರತಕ್ಕ ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಸುಮಾರು ೭ ಜನರನ್ನು ದಿನಾಂಕ ೧-೨-೧೯೮೫, ೯-೧೦-೧೯೮೫, ೭-೧೧-೧೯೮೫, ೭-೨-೧೯೮೬ ಹೀಗೆ ಉದ್ದಕ್ಕೂ ಸುಮಾರು ೮–೧೦ ಜನರನ್ನು ಅವರು ಯಾವ್ಯಾವ ಇಲಾಖೆಗೆ ಅಪೇಕ್ಷೆ ಪಟ್ಟಿದ್ದಾರೆ ಅಂತಹವರಿಂದ ಸಂಭಾವನೆ ಪಡೆದು ಈ ಕಾರ್ಯವನ್ನು ಮಾಡಿದ್ದಾರೆಂದು ಅನಿಸುತ್ತದೆ. ಅಂದಮೇಲೆ ಈ ರೀತಿಯಾಗಿ ಕಾನೂನು ದುರುಪಯೋಗ ಮಾಡಿರುವವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ, ಮರು ಹಂಚಿಕೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿರಬೇಕು, ಇಲ್ಲವಿದ್ದರೆ ಅವರ ಮೇಲೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು ಏಕೆಂದರೆ ಈ ವಿಚಾರದಲ್ಲಿ ಅನೇಕ ಸಾರಿ ನಾವು ಹೇಳುತ್ತಾ ಬಂದರೂ, ಸರ್ಕಾರ ಉದಾಸೀನದ ಉತ್ತರವನ್ನು ಕೊಡುತ್ತಾ ಬಂದಿದೆ. ಒಂದು ಸಾರಿ ಮಾನ್ಯ ಲಕ್ಷ್ಮೀಸಾಗರ್‌ರವರು ಈ ಅವ್ಯವಹಾರದ ಬಗೆ ಉತ್ತರ ಹೇಳಿದ್ದಾರೆ. ಬೆಳ್ಳಿಹಾಳ್, ಚಂದ್ರೇಗೌಡ ಮತ್ತು ರಂಗೇಗೌಡ ಎಂಬುವರು ಪರೀಕ್ಷೆಗೆ ಕುಳಿತುಕೊಂಡು ೯೨ ಅಂಕಗಳನ್ನು ಪಡೆದು ಆಯ್ಕೆಯಾಗಿದ್ದರೂ ಅವರುಗಳ ಪತ್ರಿಕೆಗಳನ್ನು ಮರು ಮೌಲ್ಯ ಮಾಪನ ಮಾಡಿ ಅವರ ಅಂಕಗಳನ್ನು ೬೦೦ ಚಿಲ್ಲರೆಗೆ ಇಳಿಸಿ ಅವರನ್ನು ಫೇಲ್ ಮಾಡಿದ್ದಾರೆ. ಫೇಲಾದವರಿಗೆ ಮರು ಮೌಲ್ಯಮಾಪನ ಮಾಡಿ ಹೆಚ್ಚು ಅಂಕಗಳನ್ನು ಹಾಕುವುದು, ಹೆಚ್ಚು ಅಂಕಗಳನ್ನು ಪಡೆದವರಿಗೆ ಮರು ಮೌಲ್ಯಮಾಪನ ಮಾಡಿ ಕಡಿಮೆ ಅಂಕಗಳನ್ನು ಕೊಟ್ಟಿರತಕ್ಕದ್ದು ಇದು ಸರಿಯಾದುದಲ್ಲವೆಂದು ನಾನು ಪ್ರಶ್ನೆ ಕೇಳಿದಾಗ, ಮಾನ್ಯ ಮಂತ್ರಿಗಳು

ಹಾಸ್ಯಾಸ್ಪದ ಉತ್ತರವನ್ನು ಕೊಟ್ಟರು. ಯಾವರೀತಿ ಕೊಟ್ಟರು ಅಂದರೆ 'ಹೆಚ್ಚು ಅಂಕಗಳನ್ನು ಪಡೆದವರಿಗೆ ಮರು ಮೌಲ್ಯಮಾಪನ ಮಾಡಿದ್ದು ಅವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಮಾಡಲಾಗಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ, ಅದು ಇಲ್ಲಿದೆ'. ಲೋಕಸೇವಾ ಆಯೋಗದಲ್ಲಿ ಪರೀಕ್ಷೆಗಳನ್ನು ಕಂಡಕ್ಟ್ ಮಾಡಿದಮೇಲೆ ಮರು ಮೌಲ್ಯಮಾಪನ ಮಾಡತಕ್ಕ ಪದ್ಧತಿ ಇದೆಯೋ? ಪದ್ಧತಿಗೆ ವಿರುದ್ಧವಾಗಿ ಮರು ಮೌಲ್ಯಮಾಪನ ಮಾಡಿರತಕ್ಕ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ? ಕ್ರಮವನ್ನು ತೆಗೆದುಕೊಳ್ಳದಿದ್ದರೆ ಏತಕ್ಕೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲವೆಂದು ಕೇಳುತ್ತೇನೆ? ಅಷ್ಟೆ ಅಲ್ಲ, ಮೊನ್ನೆ ನಡೆದಂತಹ ರಿಕ್ರೂಟ್‌ಮೆಂಟ್ ಕಮಿಟಿ ಅದರದು ಪರೀಕ್ಷೆ ನಡೆದಿದೆ. ದಿನಾಂಕ ೧೬–೧೨–೧೯೬೬ರಲ್ಲಿ ಒಬ್ಬ ಅಭ್ಯರ್ಥಿ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅರ್ಜಿ ಹಾಕಿದ್ದಾರೆ. ಅವರ ಹೆಸರು ಜಿ. ನಾರಾಯಣರಾಜು, ಅವರು ಅರ್ಜಿ ಹಾಕಿದ್ದರೂ ಪರೀಕ್ಷೆಗೆ ಹಾಜರಾಗಲಿಲ್ಲ, ಫೀಸ್ ಕಟ್ಟಿದ್ದಾರೆ. ಮಾರ್ಕ್ಸ್ ಕಾರ್ಡ್ ಅವರ ಮನೆಯು ಹತ್ತಿರ ಹೋಗಿದೆ. ಇದು ಹೇಗೆ ಸಾಧ್ಯವಾಯಿತು? ಇಂತಹ ಮಾರ್ಕ್ಸ್ ಕಾರ್ಡ್‌ಗಳ ಹಂಚಿಕೆಯಲ್ಲಿ ಅಲ್ಲಿರತಕ್ಕ ಕಾರ್ಯದರ್ಶಿಯವರು ಅವ್ಯವಹಾರ ನಡೆಸುತ್ತಿದ್ದಾರೆ. ಸಾವಿರಾರು ಮಾರ್ಕ್ಸ್ ಕಾರ್ಡ್‌ಗಳು ಮಾರಾಟವಾಗುತ್ತಿವೆ. ಆದರೂ ಅವರು ಅಧಿಕಾರ ಗದ್ದುಗೆಯಲ್ಲಿದ್ದಾರೆ. ಈ ರೀತಿಯಾದ ಅವ್ಯವಹಾರ ನಡೆಯುತ್ತಾ ಇದೆ. ಅಲ್ಲಿರತಕ್ಕ ಆಡಳಿತ ಕಮಿಟಿ ಏನಿದೆ ಅದು ಕಾರ್ಯದರ್ಶಿಯವರ ಆಮಿಷಕ್ಕೆ ಒಳಗಾಗಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳದೇ ಇರತಕ್ಕ ವಿಫಲವಾದ ಕಮಿಟಿ ಇದೆ. ಏನು ಅವ್ಯವಹಾರ ನಡೆಯುತ್ತಿದೆ ಅವ್ಯವಹಾರ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಬೆಳ್ಳಿಹಾಳ್ ಎಂಬುವರು ಪ್ರೊಬೆಷನರಿ ಗ್ರೇಡ್–೨ ಪರೀಕ್ಷೆಗೆ ಕುಳಿತುಕೊಂಡಿದ್ದಾರೆ.

ಅಧ್ಯಕ್ಷರು.—ಏನಾಗಬೇಕು ಅದನ್ನು ಹೇಳಿ.

ಶ್ರೀ ಬಿ. ಲಕ್ಕಪ್ಪ.—ಅವರು ಪರೀಕ್ಷೆಗೆ ಅರ್ಜಿ ಹಾಕಿಕೊಂಡಿದ್ದಾರೆ. ಅವರು ಅರ್ಜಿ ಹಾಕುವಾಗ ಬಿ.ಎಸ್.ಟಿ. ಗ್ರೂಪಿನಲ್ಲಿ ಅರ್ಜಿ ಹಾಕಿದ್ದಾರೆ. ಅದಕ್ಕೆ ರೆವಿನ್ಯೂ ಅಧಿಕಾರಿಗಳ ಸಪೋರ್ಟಿಂಗ್ ಪತ್ರವಿಲ್ಲವೆಂದು ಅದನ್ನು ರಿಜೆಕ್ಟ್ ಮಾಡಿ ಅವರು ಜನರಲ್ ಗ್ರೂಪಿನಲ್ಲಿ ಪರೀಕ್ಷೆಗೆ ಕುಳಿತುಕೊಳ್ಳುವಂತೆ ಮಾಡಿದ್ದಾರೆ, ಜನರಲ್ ಗ್ರೂಪಿನಲ್ಲಿ ಅವರು ಪರೀಕ್ಷೆಯಲ್ಲಿ ಫೇಲಾದರು. ಅವರು ಪಡೆದಂತಹ ಅಂಕ ೭೨.೦೫. ಅವರು ಸರ್ಕಾರಕ್ಕೆ ಅಪೀಲು ಹಾಕಿಕೊಂಡಿದ್ದಾರೆ. ನಾನು ಬಿ.ಎಸ್,ಟಿ. ಗ್ರೂಪಿನಲ್ಲಿ ಬರುತ್ತೇನೆ, ನನ್ನನ್ನು ಜನರಲ್ ಗ್ರೂಪಿನಲ್ಲಿ ಕೂರಿಸಿ ಪರೀಕ್ಷೆ ನಡೆಸಿದ್ದರಿಂದ ನಾನು ಫೇಲ್ ಆಗಿದ್ದೇನೆ, ನನಗೆ ಅನ್ಯಾಯವಾಗಿದೆಯೆಂದು ಅವರು ಬರೆದಾಗ, ಸರ್ಕಾರ ಉತ್ತರ ಬರೆಯಿತು. ನೇರವಾಗಿ ಅವರು ಹೇಳಿದರು ರೆವಿನ್ಯೂ ಅಧಿಕಾರಿಗಳ ಸಪೋರ್ಟಿಂಗ್ ಲೆಟರ್ ಇಲ್ಲದೇ ಇರುವುದರಿಂದ ಅರ್ಜಿಯನ್ನು ರಿಜೆಕ್ಟ್ ಮಾಡಲಾಯಿತು ಎಂದು. ಎಂಟು ತಿಂಗಳ ಕಾಲ ಮುಗಿಯಿತು. ಸೆಕ್ರೆಟರಿಯವರು ಯಾವ ಒತ್ತಡಕ್ಕೆ ಬಲಿಯಾದರೋ ಗೊತ್ತಿಲ್ಲ ಪುನಃ ಬಿ.ಎಸ್.ಜಿ. ಗ್ರೇಡ್‌ನಲ್ಲೇ ಆ ವ್ಯಕ್ತಿಯನ್ನು ಆಯ್ಕೆ ಮಾಡಿ ಈ ದಿನ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಎರಡನೇ ದರ್ಜೆ ನೌಕರನನ್ನಾಗಿ ಅವರನ್ನು ಅಪಾಯಿಂಟ್ ಮಾಡಿದ್ದಾರೆ.

ಅಧ್ಯಕ್ಷರು.—ಇದು ಕೂಡ ಚೌಕಾಶಿ ಆಗಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ನಿಮಿಷ. ಇದು ಇಂಡಿವಿಜ್ಯೂಯಲ್ ಕೇಸ್‌ಗಳನ್ನು ರೆಫರ್ ಮಾಡಿ ವ್ಯಕ್ತಿಗತವಾದಂಥ ದೋಷಗಳು ಆಗಿವೆ, ಇವನ್ನೆಲ್ಲಾ ಅಲ್ಲಿರತಕ್ಕಂಥ ಅಧಿಕಾರಿಗಳು ಮಾಡುತ್ತಿದ್ದಾರೆ ಎನ್ನುವುದು ಸನ್ಮಾನ್ಯ ಲಕ್ಕಪ್ಪನವರ ವಾದ. ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಹಾಕಿ ಉತ್ತರ ಸರಿಯಿಲ್ಲವೆಂದರೆ ಅರ್ಧ ಗಂಟೆ ಚರ್ಚೆ ಮಾಡಬಹುದು. ಇಲ್ಲಿ ಮುಖ್ಯಮಂತ್ರಿಗಳ ಬೇಡಿಕೆ ಮೇಲೆ ಪ್ರಸ್ತಾಪ ಮಾಡುತ್ತಾ ಒಂದೊಂದಕ್ಕೂ ಈ ರೀತಿ ಹೇಳಿದರೆ, ಅವರಿಗೆ ಪೂರ್ಣವಾಗಿ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ, ಮಾನ್ಯ ಸದಸ್ಯರು ಏನು ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ, ಅದು ಬೇರೆ ವಿಚಾರ. ಆದರೆ ತಮ್ಮ ಮನಸ್ಸಿಗೆ ಇರತಕ್ಕಂಥ ಸಂಶಯ ಹೋಗಬೇಕಾದರೆ ನಾನು ಹೇಳಿದ ಪ್ರಕಾರ ನಡೆಯುವುದು ಒಳ್ಳೆಯದೆಂದು ಹೇಳುತ್ತೇನೆ. ನಾನು ಇಲ್ಲಿ ಬರೆದುಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜನರಲ್ ಅಡ್ಮಿನಿಸ್ಟ್ರೇಶನ್‌ನಲ್ಲಿ ಏನು ನಡೆಯುತ್ತಿದೆ ಎಂದು ಅವರು ಹೇಳುತ್ತಿದ್ದಾರೆ. ಜನರಲ್ ಅಡ್ಮಿನಿಸ್ಟ್ರೇಶನ್‌ನಲ್ಲಿ ಮುಖ್ಯವಾಗಿ ಪಬ್ಲಿಕ್ ಸರ್ವಿಸ್

ಕಮೀಷನ್‌ನಲ್ಲಿ, ಆದು ಮುಖ್ಯ ಮಂತ್ರಿಗಳಿಗೇ ಬರುತ್ತದೆ. ಅಲ್ಲಿ ಯಾವ ರೀತಿ ನಡೆದುಕೊಳ್ಳುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಟ್ಟರು. He is bringing to your kind notice to examine it.

ಅಧ್ಯಕ್ಷರು.—ಶ್ರೀ ಲಕ್ಕಪ್ಪನವರೇ ಮುಕ್ತಾಯ ಮಾಡಿರಿ. ಇನ್ನೂ ೧೭ ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ಅವರ ಹಕ್ಕನ್ನು ಮೊಟಕುಗೊಳಿಸಬಾರದು ಎಂಬುದು ನನ್ನ ಉದ್ದೇಶ.

ಶ್ರೀ ಬಿ. ಲಕ್ಕಪ್ಪ.—ಅವರ ಇಲಾಖೆಯುಮೇಲಿನ ಬೇಡಿಕೆಗಳ ಮೇಲೆ ಇರತಕ್ಕಂಥ ಲೋಪದೋಷಗಳನ್ನು ಎತ್ತಿತೋರಿಸುವುದಕ್ಕೆ ಮಾತ್ರ ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು.—ತಾವು ಬೇಗ ಮುಗಿಸಿಬಿಡಿ.

ಶ್ರೀ ಬಿ. ಲಕ್ಕಪ್ಪ.—ಈ ವಿಚಾರಗಳ ಬಗ್ಗೆ ಸರ್ಕಾರ ಲಂಚ ಮತ್ತು ಭ್ರಷ್ಟಾಚಾರಗಳನ್ನು ಸಹಿಸುವುದಿಲ್ಲ.ಒಳ್ಳೆಯ ಆಡಳಿತ ನಡೆಸುತ್ತೇವೆ ಎಂದು ಭರವಸೆ ಕೊಟ್ಟ ಸರ್ಕಾರ ತನ್ನ ಭರವಸೆಗಳಿಗೆ ಬದ್ಧವಾಗಿ ನಡೆದುಕೊಂಡಿಲ್ಲ. ಆಗಿರುವ ಅನ್ಯಾಯಗಳ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಸಿ.ಬಿ.ಐ. ಅಥವಾ ಸಂಬಂಧಪಟ್ಟವರಿಂದ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳದೇ ಹೋದರೆ ಈ ಇಲಾಖೆಯಲ್ಲಿರತಕ್ಕಂಥ ಕೆಟ್ಟ ಹೆಸರನ್ನು ತಪ್ಪಿಸುವುದಕ್ಕಾಗುವುದಿಲ್ಲ. ಇದರಿಂದ ಬಡ ಮಕ್ಕಳಿಗೆ ಉದ್ಯೋಗ ಸಿಗುವುದಿಲ್ಲ. ಇದು ಒಂದು ಮಾರಾಟ ಕೇಂದ್ರವಾಗಿ ಪರಿಣಮಿಸಿದೆ. ನೀವು ಲೋಕಾಯುಕ್ತಕ್ಕೆ ಹೋಗಿರಿ ಎಂದು ಹೇಳಿದ್ದೀರಿ. ನಾನಂತೂ ಅದರಿಂದ ಪ್ರಯೋಜನವಾಗುತ್ತದೆ ಎಂದು ತಿಳಿದಿಲ್ಲ. ಭ್ರಷ್ಟಾಚಾರ ಮಾಡತಕ್ಕವರಿಗೆ ಅದೊಂದು ಪುಣ್ಯಕ್ಷೇತ್ರ ಇದ್ದ ಹಾಗೆ...

ಅಧ್ಯಕ್ಷರು.—ತಾವು ದಯವಿಟ್ಟು ಮುಕ್ತಾಯ ಮಾಡಿ. ೧೫ ನಿಮಿಷದ ಮೇಲೆ ಆಯಿತು.

ಶ್ರೀ ಬಿ. ಲಕ್ಕಪ್ಪ.—ಅಲ್ಲೊಂದು ೧ಲಕ್ಷ ೫೬ ಸಾವಿರ ರೂಪಾಯಿ ಕೊಟ್ಟು ಜೆರಾಕ್ಸ್ ಮಿಶನ್‌ನನ್ನು ಕೊಂಡುಕೊಂಡಿದ್ದಾರೆ. ಪುನಃ ಏನು ಆಯಿತು ಎಂದರೆ ಅದಕ್ಕೆ ಇಲ್ಲಿ ಬೆಲೆ ಜಾಸ್ತಿ ಎಂದರೆ ಅದನ್ನು ಪಬ್ಲಿಸಿಟಿ ಮಾಡಿಲ್ಲ. ಬೇರೆ ಕಡೆಗಳಿಂದ ಮೂರು ಕೊಟೇಸನ್‌ಗಳನ್ನು ತಂದಿದ್ದಾರೆ. ಅದರ ಪ್ರಕಾರ 56 ಸಾವಿರಗಿಂತ ಕಡಿಮೆ ಬೆಲೆಗೆ ತೆಗೆದುಕೊಳ್ಳುವಂಥ ವಸ್ತುವನ್ನು ಒಂದು ಲಕ್ಷ ೫೬ ಸಾವಿರಕ್ಕೆ ಕೊಂಡಿದ್ದಾರೆ. ಒಂದು ಲಕ್ಷ ರೂಪಾಯಿಯಷ್ಟು ಇದರಲ್ಲಿ ದುರ್ವ್ಯವಹಾರ ಆಗಿದೆ.

ಅಧ್ಯಕ್ಷರು.—ಇದನ್ನು ಕೂಡ ಚೌಕಾಶಿ ಮಾಡಬೇಕು.

ಶ್ರೀ ಬಿ. ಲಕ್ಕಪ್ಪ.—ಒಟ್ಟು ೩ಳ ದೂರುಗಳು ಈ ಇಲಾಖೆಯ ಮೇಲಿದೆ, ಅವೆಲ್ಲವನ್ನೂ ಮಾನ್ಯ ಮುಖ್ಯಮಂತ್ರಿಗಳಿಗೆ ಕಳಿಸಿಕೊಡುತ್ತೇನೆ. ಸರಿಯಾದ ತನಿಖೆ ನಡೆಸುತ್ತೇವೆ ಎಂಬ ಭರವಸೆಯನ್ನು ಈ ಸವನದ ಮೂಲಕ ಕೊಡಬೇಕೆಂದು ಹೇಳಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ, ತಾವು ದಯಮಾಡಿ ಕುಳಿತುಕೊಳ್ಳಿ...

ಶ್ರೀ ಬಿ. ಲಕ್ಕಪ್ಪ.—ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ಬಗ್ಗೆ ಒಂದೇ ಒಂದು ಮಾತು...

ಅಧ್ಯಕ್ಷರು.—ಇವತ್ತು ೫–೩೦ಕ್ಕೆ ಚರ್ಚೆ ಮುಗಿಸಬೇಕು, ನಂತರ ಮಂತ್ರಿಗಳ ಉತ್ತರ ಇದೆ...

ಶ್ರೀ ಬಿ. ಲಕ್ಕಪ್ಪ.—ಕರ್ನಾಟಕ ರೋಡ್ ಟ್ರಾನ್ಸ್‌ಪೋರ್ಟ್ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ಕೆಲಸ ಮಾಡುವ ನೌಕರರು, ಅವರು ಗಂಡಾಗಿರಲಿ ಅಥವಾ ಹೆಣ್ಣಾಗಿರಲಿ, ಮಿತ ಸಂತಾನದ ಬಗ್ಗೆ ಶಸ್ತ್ರಚಿಕಿತ್ಸೆಗೆ ಒಳಗಾದರೆ ಒಂದು ಇನ್‌ಕ್ರಿಮೆಂಟ್ ಕೊಡಬೇಕೆಂಬ ನಿಯಮ ಇದೆ. ಇದು ಕೇಂದ್ರಸರ್ಕಾರದಲ್ಲೂ ಇದೆ. ಈ ಸರ್ಕಾರವೂ ಆಜ್ಞೆ ಹೊರಡಿಸಿದೆ. ಅಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದವರು ನಂಜಪ್ಪ ಎಂಬುವರು. ಇವರು ಇನ್‌ಕ್ರಿಮೆಂಟ್ ಕೊಡಿ ಎಂದು ಕೇಳಿದರೆ, ಸಾಧ್ಯವಿಲ್ಲವೆಂದು ಆಡಳಿತ ಮಂಡಲಿಯವರು ಹೇಳುತ್ತಿದ್ದಾರೆ. ಸರ್ಕಾರ ೧–೧೦–೮೫ರಲ್ಲಿ ಆಜ್ಞೆ ಮಾಡಿದೆ ಅಲ್ಲಿಂದ ಶಸ್ತ್ರಚಿಕಿತ್ಸೆಗೆ ಒಳಗಾದವರಿಗೆ ಎಲ್ಲರೂ ಈ ಫಲವನ್ನು ಪಡೆಯುವುದಕ್ಕೆ ಅವಕಾಶ ಇದೆ. ಆದರೆ ಅಲ್ಲಿ ಸಂಸ್ಥೆಯ ಸಭೆಯಲ್ಲಿ ೬ ತಿಂಗಳ ನಂತರ ಇದನ್ನು ಮಾಡಿಕೊಂಡಿದ್ದಾರೆ.

ಶ್ರೀ ವೀರಣ್ಣ.—ಈ ವಿಷಯವನ್ನು ನನ್ನ ಹತ್ತಿರ ಪ್ರತ್ಯೇಕವಾಗಿ ಬಂದು ಹೇಳಿದ್ದರೆ, ಈ ಸಮಸ್ಯೆಯನ್ನು ಬಗೆಹರಿಸುತ್ತಿದ್ದೆ ಇದನ್ನು ಡಿಮ್ಯಾಂಡ್ ಮಾತನಾಡುವಾಗ ಹೇಳಬೇಕೆ ?

ಅಧ್ಯಕ್ಷರು.—ಎನ್‌ಕ್ವೈರಿ ಮಾಡಿ ಎಂದು ಹೇಳಿ...

ಶ್ರೀ ಬಿ. ಲಕ್ಕಪ್ಪ.—ರಾಜ್ಯಸರ್ಕಾರದ ಆಜ್ಞೆ ಎಂದು ಹೊರಬಿದ್ದಿದೆ. ಆ ದಿನದಿಂದಲೇ ಸಾರಿಗೆ ಸಂಸ್ಥೆಯ ಕಾರ್ಮಿಕರಿಗೂ ಇದರ ಸೌಲಭ್ಯವನ್ನು ಕೊಡಬೇಕಾಗಿದೆ. ಆದ್ದರಿಂದ ಯಾವ ದಿನ ಈ ಆಕ್ಟ್ ಜಾರಿಗೆ ಬಂದಿದೆ, ಆ ದಿನದಿಂದಲೇ, ಆ ವ್ಯಕ್ತಿಗೆ ಇನ್‌ಕ್ರಿಮೆಂಟ್ ಕೊಡಬೇಕೆಂದು ಹೇಳಿ, ತಮ್ಮ ಕಡೆಗೆ ಈ ಕಾಗದಪತ್ರಗಳನ್ನು ಕಳುಹಿಸಿಕೊಡುತ್ತಿದ್ದೇನೆ. ಇವುಗಳನ್ನು ಸಂಬಂಧಪಟ್ಟವರಿಗೆ ಕಳುಹಿಸಿಕೊಟ್ಟು, ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಬಾಬುರೆಡ್ಡಿ ತುಂಗಳ್ ಅಬ್ಸೆಂಟ್.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಸನ್ಮಾನ್ಯ ಅಧ್ಯಕ್ಷರೇ, ಇಂದು ಮಂಡಿಸಿರತಕ್ಕಂಥ ಹಲವಾರು ಬೇಡಿಕೆಗಳ ಬಗ್ಗೆ ನಾನು ಕೆಲವು ವಿಷಯಗಳನ್ನು ಸಭೆಯ ಮುಂದಿಡುವುದಕ್ಕೆ ಇಚ್ಛೆಪಡುತ್ತೇನೆ, ಹಾಗೂ ಈ ಬೇಡಿಕೆಗಳನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಖಾತೆಗೆ ಸಂಬಂಧಪಟ್ಟ ಅನೇಕ ಇಲಾಖಾ ಬೇಡಿಕೆಗಳನ್ನು ಹಾಗೂ ಗೃಹಮಂತ್ರಿಗಳ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನೂ ಮತ್ತು ಸಾರಿಗೆ ಸಚಿವರ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನೂ ಸ್ವಾಗತ ಮಾಡುತ್ತಾ, ನನ್ನ ಕೆಲವು ಅನಿಸಿಕೆಗಳನ್ನು ತಮ್ಮ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರು ಕೊನೆಯ ಪಕ್ಷ ನನಗೆ ಅರ್ಧ ಗಂಟೆಯ ಕಾಲಾವಕಾಶ ಕೊಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—೧೫ ನಿಮಿಷದಂತೆ ಕೊಟ್ಟರೂ ಸಂಜೆ ೫-೩೦ಕ್ಕೆ ಚರ್ಚೆ ಮುಗಿಯುತ್ತದೆ. ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊನ್ನೆ ೮೫೦ ಕೋಟಿ ರೂಪಾಯಿಗಳ ಬೇಡಿಕೆಗಳನ್ನು ೩ ನಿಮಿಷದಲ್ಲಿ ಮಾಡಿಕೊಂಡಿದ್ದೀರಿ. ಈಗ ಚರ್ಚೆಗೂ ೩ ನಿಮಿಷ, ೫ ನಿಮಿಷ ಎಂದರೆ ಹೇಗೆ ? ಇವುಗಳಿಗೆ ಎರಡು ದಿವಸ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ನಾಳೆ ಅಪ್ರೊಪ್ರಿಯೇಷನ್ ಬಿಲ್ ಆಗಬೇಕು, ಅಷ್ಟೊಂದು ಕಾಲಾವಕಾಶ ಇಲ್ಲ.

ಶ್ರೀಮತಿ ಆರ್. ಲೀಲಾದೇವಿ ಪ್ರಸಾದ್.—ತಾವು ಎಷ್ಟು ಸಮಯ ಕೊಡುತ್ತೀರೋ ಅಷ್ಟು ಸಮಯ ತೆಗೆದುಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ, ನಮ್ಮ ಗೃಹಮಂತ್ರಿಗಳು ಕೆಲವು ವಿಷಯಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅವರಿಗೆ ಅಭಿನಂದನೆ ಮಾಡಬೇಕು. ಚಂದ್ರಗುತ್ತಿ ಪ್ರಕರಣವನ್ನು ಪೋಲೀಸ್ ಇಲಾಖೆಯವರು, ಆ ಒಂದು ಅನಿಷ್ಟಪದ್ಧತಿಯನ್ನು ನಿಲ್ಲಿಸಿದಕ್ಕಾಗಿ ನನ್ನ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಅದೇ ಪ್ರಕಾರವಾಗಿ ಇನ್ನು ಮುಂದಕ್ಕೂ ಇಂತಹ ಅನಿಷ್ಟಪದ್ಧತಿಗಳನ್ನು ನಿಲ್ಲಿಸಬೇಕಾದರೆ ಪೋಲೀಸ್ ಡಿಪಾರ್ಟ್‌ಮೆಂಟ್‌ನವರ ಸಹಕಾರ ಬೇಕಾಗುತ್ತದೆ. ಇದರ ಬಗ್ಗೆ ಕರ್ನಾಟಕದಲ್ಲಿ ದಿಟ್ಟತನದ ಹೆಜ್ಜೆ ಇಟ್ಟಿದ್ದಾರೆ, ಇದರಂತೆಯೇ ಬೇರೆ ಅನಿಷ್ಟ ಪದ್ಧತಿಗಳ ವಿಷಯದಲ್ಲಿಯೂ ದಿಟ್ಟತನದ ಹೆಜ್ಜೆ ಇಟ್ಟರೆ, ನಿಜವಾಗಿಯೂ ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ, ಇದೇ ರೀತಿ ನಮ್ಮ ಸರ್ಕಾರ ಇಂತಹ ಅನಿಷ್ಟಪದ್ಧತಿಗಳ ಬಗ್ಗೆ ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕೆಂದು ಗೃಹಮಂತ್ರಿಗಳನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಗೃಹಖಾತೆಯಲ್ಲಿ ಸುಮಾರು ೪೬ ಸಾವಿರ ಸಿಬ್ಬಂದಿವರ್ಗದವರು ಇದ್ದು ಇವರು ೮ ವಲಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಪೋಲೀಸ್ ಇಲಾಖೆಗೆ ೧೯೮೫-೮೬ರಲ್ಲಿ ಸುಮಾರು ೮೦ ಕೋಟಿ ರೂಪಾಯಿಗಳನ್ನೂ, ಮಂಜೂರು ಮಾಡಲಾಗಿತ್ತು. 1986-87 ರಲ್ಲಿ 87 ಕೋಟಿ ರೂಪಾಯಿಗಳನ್ನು ಪ್ರಸ್ತುತ ವರ್ಷದಲ್ಲಿ ೧೧೦ ಕೋಟಿ ರೂಪಾಯಿಗಳ ಬೇಡಿಕೆಯನ್ನು ಮಾನ್ಯ ಗೃಹಮಂತ್ರಿಗಳು ಮಂಡನೆ ಮಾಡಿದ್ದಾರೆ. ಮೊನ್ನೆ ಆರೋಗ್ಯ ಇಲಾಖೆಯ ಬೇಡಿಕೆಯ ಬಗ್ಗೆ ಮಾತನಾಡುವಾಗ ತಲಾವಾರು ಒಬ್ಬ ಮನುಷ್ಯನಿಗೆ ೧೫ ಪೈಸೆಯಂತೆ ಬೀಳುತ್ತದೆ ಎಂದು ಹೇಳಿದ್ದೆ ಆದರೆ ಗೃಹ ಖಾತೆಯ ಬೇಡಿಕೆಯ ತಲಾವಾರು ಲೆಕ್ಕ ಹಾಕಿದರೆ ಅದು ೩೦ ರೂಪಾಯಿ ಬೀಳುತ್ತದೆ. ಇವೊತ್ತು ಎಲ್ಲರೂ ಪೋಲೀಸ್ ಸ್ಟೇಷನ್‌ಗೆ ಹೋಗತಕ್ಕ ಅವಕಾಶ ಇಲ್ಲ ಅಥವಾ ಜನ ಸಂಖ್ಯೆ ಆಧಾರದ ಮೇಲೆ ಎಲ್ಲರಿಗೂ ಪೋಲೀಸ್ ಸಂರಕ್ಷಣೆ ೧೨ ತಿಂಗಳೂ ಬೇಕೆಂದು ನಾನು ಹೇಳುವುದಿಲ್ಲ. ೧೦ ಪರ್ಸೆಂಟ್ ಜನರಿಗೆ ಇದರ ಅವಶ್ಯಕತೆ ಇದೆ ಎಂದು ತೆಗೆದು

ಕೊಂಡರೆ ಇವತ್ತಿನದಿವಸ ತಲಾವಾರು ೩೦೦ ರೂಪಾಯಿಗಳು ಬರತಕ್ಕಂಥ ಅಂದಾಜು ಪಟ್ಟಿ ಇದಾಗಿದೆ ಇವತ್ತಿನದಿವಸ ಪೋಲೀಸ್ ಇಲಾಖೆಯಲ್ಲಿ ಮೇಲಿನ ವರ್ಗದಲ್ಲಿ ಏನು ಸುವ್ಯವಸ್ಥಿತವಾದ ಆಡಳಿತ ನಡೆಯುತ್ತಿದೆ ಅದು ಕೆಳಗಿನ ಸಿಬ್ಬಂದಿವರ್ಗದಲ್ಲಿ ನಡೆಯುತ್ತಿಲ್ಲ ಎಂದು ವಿಷಾದದಿಂದ ಹೇಳುತ್ತಿದ್ದೇನೆ. ಪೋಲೀಸರ ಭಯ ಬೇಕು, ಪೋಲೀಸ್ ಸ್ಟೇಷನ್ ಎಂದರೆ ಮರ್ಯಾದೆಗೆ ಕುಂದು ಎಂದು ಹೆದರತಕ್ಕ ಜನ ಇವತ್ತು ಬಹಳ ಇದ್ದಾರೆ.

SRI MOHD. LAIQUDDIN.--Sir, there is no quorum in the House.

ಅಧ್ಯಕ್ಷರು.—ಮಾನ್ಯ ಲೈಕುದ್ದೀನ್‌ರವರೇ ಈಗ ಇಂಟರ್‌ಫಿಯರೆನ್ಸ್ ಬೇಡ. ಕೋರಮ್ ಇದೆ ತಾವು ದಯವಿಟ್ಟು ಕುಳಿತುಕೊಳ್ಳಿ, ಅದು ನನಗೆ ಗೊತ್ತಿದೆ. ತಾವು ಮಾತನಾಡಿ ನಿಮಗೆ ಹೆಚ್ಚು ಜನ ಸದಸ್ಯರು ಬೇಕಲ್ಲವೇ, ಕರೆಯಿಸೋಣ ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಆಡಳಿತ ಪಕ್ಷದಲ್ಲಿ ಎಷ್ಟು ಜನ ಇದ್ದಾರೆ ಎಂದು ಲೆಕ್ಕಹಾಕಿ.

ಗೊಂದಲ

ಅಧ್ಯಕ್ಷರು.—ಚರ್ಚೆ ಮಾಡುವುದು ಯಾರಿಗೂ ಬೇಕಾಗಿಲ್ಲ, ನೀವು ಮಾತನಾಡಿ.

೧.೩೦ ಪಿ.ಎಂ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಇವತ್ತು ಸಾರ್ವಜನಿಕ ಸಂಪರ್ಕ ಮತ್ತು ಪೋಲೀಸ್ ಇಲಾಖೆಯ ನಡುವಣ ಅಂತರ ಬಹಳವಾಗಿ ಕಾಣುತ್ತಿದೆ. ಇತ್ತೀಚಿನ ದಿನಗಳಲ್ಲಿಯೂ ಸಹ ನಮ್ಮಲ್ಲಿ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುತ್ತಿದ್ದಾರೆ ಎಂದರೆ ಏನೋ ತಪ್ಪು ಮಾಡಿದ್ದಾರೆ ಆದುದರಿಂದ ಕರೆದುಕೊಂಡು ಹೋಗುತ್ತಿದ್ದಾರೆ ಎಂಬ ಭಾವನೆ ಇದೆ. ಪೋಲೀಸ್ ಸ್ಟೇಷನ್ ಭಯ ಬೇಕು ಪೋಲೀಸ್ ಭಯ ಬೇಕು ನಿಜ, ಆದರೆ ಏನಾಗಿದೆ ಎಂದರೆ ನಿರಪರಾಧಿಗಳನ್ನು ಸಹ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗತಕ್ಕದ್ದು ಇತ್ತೀಚೆಗೆ ಹೆಚ್ಚಾಗುತ್ತಿದೆ. ನಿರಪರಾಧಿಗಳನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗತಕ್ಕ ಪರಿಪಾಠ ಇತ್ತೀಚೆಗೆ ಬೆಳೆದು ಬರುತ್ತಿದೆ. ತಮಗೆ ಉದಾಹರಣೆ ಹೇಳುತ್ತೇನೆ. ಮಟಕಾ ಆಡುವವರನ್ನು ಜೂಜಾಡುವವರನ್ನು ನಿರ್ದಾಕ್ಷಿಣ್ಯವಾಗಿ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ, ಕಾನೂನಿನಲ್ಲಿ ಅವಕಾಶ ಇದ್ದರೆ ಅವರನ್ನು ಹ್ಯಾಂಗ್ ಮಾಡಿ, ಆದರೆ ನಿರಪರಾಧಿ ಜನಗಳು ಪೋಲೀಸ್ ಸ್ಟೇಷನ್‌ಗೆ ಹೋಗತಕ್ಕ ಸಂದರ್ಭಗಳನ್ನು ನಾವು ಇವತ್ತು ಕಾಣುತ್ತಿದ್ದೇವೆ. ಯಾರೋ ಒಬ್ಬರು ವ್ಯಾಪಾರ ಮಾಡುತ್ತಿದ್ದಾರೆ ಮರ್ಯಾದೆಯಿಂದ ಜೀವನ ಮಾಡುತ್ತಿದ್ದಾರೆ ಅವನನ್ನೂ ಕರೆದುಕೊಂಡು ಹೋಗುತ್ತಾರೆ. ನನಗೆ ತಿಳಿದಹಾಗೆ ತಿಂಗಳ ಕೊನೆಯಲ್ಲಿ ಪ್ರತಿಯೊಂದು ಪೋಲೀಸ್ ಸ್ಟೇಷನ್‌ನಲ್ಲಿ ಇಂತಿಷ್ಟು ಕೇಸ್‌ಗಳು ದಾಖಲಾಗಬೇಕೆಂಬ ನಿಯಮ ಇದೆ. ಇದರ ಬಗ್ಗೆ ಉತ್ತರ ಹೇಳತಕ್ಕ ಸಮಯದಲ್ಲಿ ಗೃಹಮಂತ್ರಿಗಳು ಹೇಳಬೇಕೆಂದು ಕೇಳುತ್ತಿದ್ದೇನೆ. ಒಂದು ತಿಂಗಳಲ್ಲಿ ಒಂದು ಪೋಲೀಸ್ ಸ್ಟೇಷನ್‌ನಲ್ಲಿ ಇಂತಿಷ್ಟು ಕೇಸ್‌ಗಳು ದಾಖಲಾಗಬೇಕೆಂದು ಟಾರ್ಜೆಟ್ ಕೊಟ್ಟಿರುತ್ತಾರಂತೆ. ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಟಾರ್ಜೆಟ್ ಕೊಟ್ಟಹಾಗೆ ಪೋಲೀಸ್ ಸ್ಟೇಷನ್‌ನಲ್ಲೂ ಕೂಡಾ ತಿಂಗಳಲ್ಲಿ ಇಷ್ಟಿಷ್ಟು ಕೇಸ್‌ಗಳು ದಾಖಲಾಗಬೇಕೆಂದು ಹೇಳಿದಾಗ, ತಪ್ಪು ಮಾಡಿರತಕ್ಕಂಥವರು ಸಿಗದಿದ್ದಾಗ ಪೋಲೀಸ್ ಪೇದೆಗಳು ನಿರಪರಾಧಿಗಳನ್ನು ಕರೆದುಕೊಂಡು ಹೋಗುತ್ತಾರೆ. ಒಬ್ಬ ವ್ಯಾಪಾರ ಮಾಡುತ್ತಾ ಇರುತ್ತಾನೆ, ಅವನ ಹತ್ತಿರ ಹೋಗಿಬಿಟ್ಟು, ಏನಯ್ಯಾ ಏನು ಮಾಡುತ್ತಿದ್ದೀಯಾ ಎನ್ನುತ್ತಾರೆ, ಅದಕ್ಕೆ ಅವನು ಏನಿಲ್ಲಾ ವ್ಯಾಪಾರ ಮಾಡಿಕೊಳ್ಳುತ್ತಿದ್ದೇನೆ ಎನ್ನುತ್ತಾನೆ, ಇವರು ನಡೀ ಪೋಲೀಸ್ ಸ್ಟೇಷನ್‌ಗೆ ಎಂದು ಕರೆದುಕೊಂಡು ಹೋಗುತ್ತಾರೆ. ನಿರಪರಾಧಿ ವ್ಯಾಪಾರಸ್ಥ ಇರಬಹುದು ಮತ್ತೊಬ್ಬರು ಇರಬಹುದು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುತ್ತಾರೆ. ತಪ್ಪು ಮಾಡಿರುವವನು ಪೋಲೀಸ್ ಸ್ಟೇಷನ್‌ಗೆ ಹೋಗುತ್ತಾನೆ, ಆದರೆ ಏನೂ ತಪ್ಪು ಮಾಡದೇ ಇರುವ ಮರ್ಯಾದಸ್ಥ ವ್ಯಕ್ತಿ, ತಾನು ಪೋಲೀಸ್ ಸ್ಟೇಷನ್‌ಗೆ ಹೋದುದನ್ನು ಯಾರಾದರೂ ಜನ ನೋಡಿದರೆ ಏನು ತಿಳಿದುಕೊಳ್ಳುತ್ತಾರೋ ಎಂದು, ನಾನು ಏನೂ ತಪ್ಪು ಮಾಡಿಲ್ಲ ದಯಮಾಡಿ ನಿಮ್ಮ ಮಾಮೂಲು ತೆಗೆದುಕೊಂಡು ನನ್ನನ್ನು ಬಿಟ್ಟುಬಿಡಿ, ಪೋಲೀಸ್ ಸ್ಟೇಷನ್‌ಗೆ ಎಳೆಯಬೇಡಿ ಎಂದು ಹೇಳತಕ್ಕ ಪರಿಸ್ಥಿತಿ ಉದ್ಭವವಾಗಿದೆ,

ಇದನ್ನು ತಡೆಹಿಡಿಯುವುದಕ್ಕೆ ಮಾನ್ಯ ಗೃಹಮಂತ್ರಿಗಳು ಏನಾದರೂ ಹೊಸ ಚಿಕಿತ್ಸೆ ಕಂಡುಹಿಡಿದಿದ್ದಾರೆಯೋ ಎಂದು ಕೇಳುತ್ತೇನೆ. ಅವರು ಇಲ್ಲ ಎಂದು ಹೇಳುತ್ತಿದ್ದಾರೆ, ಇದಕ್ಕೆ ಏನಾದರೂ ಕಂಡು ಹಿಡಿಯಲೇ ಬೇಕು.

ಇದನ್ನು ಮಾನ್ಯ ಮಂತ್ರಿಗಳು ಹೇಳಬೇಕು ಸ್ವಾಮಿ. ಇವತ್ತಿನ ದಿವಸ ನಿರಪರಾಧಿಗಳು ಪೋಲೀಸ್ ಠಾಣೆಗೆ ಹೋಗುತ್ತಿದ್ದಾರೆ. ಅವರನ್ನು ಅಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ಸ್ ಹೆದರಿಸುತ್ತಾರೆ. ಆಗ ಆ ನಿರಪರಾಧಿಗಳ ಪರಿಸ್ಥಿತಿ ಏನಾಗಬೇಕು ಎನ್ನುವುದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಹೇಳಿದರೂ ತಾವುಕೇಳುವುದಿಲ್ಲ. ನಿಮ್ಮ ಪಕ್ಷದವರು ಹೇಳಿದರೂ ಸಹ ಕೇಳುವುದಿಲ್ಲ. ಇನ್ಯಾರು ಹೇಳಿದರೆ ಕೇಳುತ್ತೀರಿ ? ಏನು ಕಂಡುಹಿಡಿಯುತ್ತೀರಿ ?

ಶ್ರೀ ಬಿ. ರಾಚಯ್ಯ.—ಇಂತಿಷ್ಟು ಕೇಸುಗಳನ್ನು ಒಂದು ತಿಂಗಳಲ್ಲಿ ದಾಖಲು ಮಾಡಿಕೊಳ್ಳಬೇಕೆಂದು ನಾವೇನು ಆದೇಶ ಕೊಟ್ಟಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸರ್ವೇಸಾಮಾನ್ಯವಾದ ಜನರು ಪೋಲೀಸ್ ಠಾಣೆಗೆ ಹೋದರೆ ಅವರಿಗೆ ರಕ್ಷಣೆ ಸಿಗುತ್ತಿಲ್ಲ. ಸರ್ವೇ ಸಾಮಾನ್ಯವಾದ ಜನ ಪೋಲೀಸ್ ಠಾಣೆಗೆ ಏತಕ್ಕೆ ಹೋಗುತ್ತಾರೆ ಸ್ವಾಮಿ ತಮ್ಮ ರಕ್ಷಣೆಗಾಗಿ ಹೋಗುತ್ತಾರೆ. ಆದರೆ ಅಲ್ಲಿ ಅವರಿಗೆ ರಕ್ಷಣೆ ಸಿಗುವುದಿಲ್ಲ. ಮೊನ್ನೆಯ ದಿವಸ ಪತ್ರಿಕೆಗಳಲ್ಲಿ ಒಂದು ವ್ಯಂಗ್ಯ ಚಿತ್ರ ಬಂದಿದೆ. ಅದೇನೆಂದರೆ ಪೋಲೀಸಿನವರು ಇದ್ದಾರೆ ಎಚ್ಚರಿಕೆ ಎಂದು ಕಳ್ಳರಿದ್ದಾರೆ ಎಚ್ಚರಿಕೆ ಎನ್ನುವುದು ಹೋಗಿ ಪೋಲೀಸಿನವರು ಇದ್ದಾರೆ ಎಚ್ಚರಿಕೆ ಎಂದು ಅವರು ವ್ಯಂಗ್ಯ ಮಾಡಿದ್ದಾರೆ. ಇಂತಹ ಪರಿಸ್ಥಿತಿಗೆ ಏತಕ್ಕೆ ಹೋಯಿತು ಎನ್ನುವುದನ್ನು ಮಾನ್ಯ ಗೃಹಸಚಿವರು ಗಂಭೀರವಾಗಿ ಆಲೋಚನೆ ಮಾಡಬೇಕು. ಪೋಲೀಸ್ ಇಲಾಖೆಯಲ್ಲಿ ಏನಾದರೂ ಒಂದು ಹೊಸ ಬದಲಾವಣೆ ಮಾಡಬೇಕು. ಆಮೇಲೆ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಗಳು ನಡೆಯುತ್ತಿವೆ, ದೌರ್ಜನ್ಯಗಳು ನಡೆಯುತ್ತಿವೆ, ರೇಪ್‌ಗಳು ನಡೆಯುತ್ತಿವೆ. ಹೆಣ್ಣು ಮಕ್ಕಳು ಮನೆಯಲ್ಲಿ ಮರ್ಯಾದೆಯಿಂದ ಜೀವನ ಮಾಡುವುದಕ್ಕೆ ಆಗುತ್ತಿಲ್ಲ. ಈ ರೀತಿ ಏತಕ್ಕೆ ಆಗುತ್ತಿದೆಯೋ ನನಗೆ ಖಂಡಿತವಾಗಿಯೂ ಅರ್ಥವಾಗುತ್ತಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಹಗಲಿನ ವೇಳೆಯಲ್ಲಿಯೇ ದರೋಡೆಗಳು ನಡೆಯುತ್ತಿವೆ. ಇವುಗಳನ್ನೆಲ್ಲಾ ತಾವು ಯಾವ ರೀತಿ ತಡೆಯುತ್ತೀರಿ ? ಶ್ರೀಸಾಮಾನ್ಯರಿಗೆ ಯಾವ ರೀತಿ ರಕ್ಷಣೆಯನ್ನು ತಾವು ಕೊಡುತ್ತೀರಿ ? ಹಿಂದೆ ಪೋಲೀಸಿನವರು ರಾತ್ರಿ ವೇಳೆಯಲ್ಲಿ ಗಸ್ತು ತಿರುಗುತ್ತಿದ್ದರು. ಆದರೇ ಇನ್ನು ಮುಂದೆ ನಮಗೆ ರಾತ್ರಿ ವೇಳೆಯಲ್ಲಿ ರಕ್ಷಣೆ ಕೊಡದಿದ್ದರೂ ಚಿಂತೆಯಿಲ್ಲ ಸ್ವಾಮಿ ಹಗಲಿನಲ್ಲಾದರೂ ರಕ್ಷಣೆ ಕೊಡಿ. ಈ ಹಿಂದೆ ಕರ್ನಾಟಕ ರಾಜ್ಯದಲ್ಲಿ ಈ ಒಂದು ಪರಿಸ್ಥಿತಿ ಇರಲಿಲ್ಲ. ಹಗಲಿನಲ್ಲಿ ಅನೇಕ ಜನ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಗಳು, ರೇಪ್‌ಗಳು ನಡೆಯುತ್ತಿವೆ. ಇದನ್ನು ಬದಲಾವಣೆ ಮಾಡಿ ಪೋಲೀಸ್ ಇಲಾಖೆಯಿಂದ ಒಳ್ಳೆಯ ಕೆಲಸ ಮಾಡುವಂತೆ ತಾವು ಚೈತನ್ಯ ತುಂಬಬೇಕು. ಮಾನ್ಯ ಅಧ್ಯಕ್ಷರೇ ಇನ್ನೊಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬಯಸುವುದಾದರೆ ಬೆಳಗಿನ ಜಾವ ಹೆಣ್ಣು ಮಕ್ಕಳು ಟ್ರೈನ್‌ನಿಂದ ಅಥವಾ ಬಸ್ಸಿನಿಂದ ೫–೦೦ ಗಂಟೆಗೆ ಬರುತ್ತಾರೆ ಅವರಿಗೆ ಆ ವೇಳೆಯಲ್ಲಿ ಆಟೋರಿಕ್ಷಾಗಳು ಸಿಗುವುದಿಲ್ಲ, ಬಸ್ಸುಗಳು ಸಹ ಇರುವುದಿಲ್ಲ. ಪೋಲೀಸಿನವರು ಅಲ್ಲಿಯೇ ನಿಂತುಕೊಂಡು ನೋಡುತ್ತಿದ್ದರೂ ಸಹ ಆ ಹೆಣ್ಣು ಮಗಳಿಗೆ ಸಹಾಯ ಮಾಡುವುದಿಲ್ಲ. ಇಂಥ ಸಮಯದಲ್ಲಿ ಮಕ್ಕಳು ಮಾನ ಮರ್ಯಾದೆಯಿಂದ ಜೀವನ ಮಾಡುವುದಕ್ಕೆ ತಾವು ಏನಾದರೂ ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತರಲು ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಅದೇ ರೀತಿಯಲ್ಲಿ ಪೋಲೀಸ್ ಸಿಬ್ಬಂದಿವರ್ಗಕ್ಕೂ ಕೂಡ ಸಾಕಷ್ಟು ಸೌಲಭಗಳನ್ನು ಸರ್ಕಾರದವರು ಒದಗಿಸಿಕೊಡಬೇಕು ಅವರಿಗೂ ಸಹ ಆಸೆಆಕಾಂಕ್ಷೆಗಳು ಇರುತ್ತವೆ, ಅವರೂ ಸಹ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕು. ಅವರಿಗೇನೇನು ಸೌಲಭ್ಯಗಳು ಬೇಕೋ ಕೊಡಿ ಬೇಡವೆಂದು ನಾನು ಹೇಳುವುದಿಲ್ಲ. ಆದರೆ ಅದಕ್ಕೆ ತಕ್ಕಂತೆ ಕೆಲಸ ಕೂಡ ಅವರಿಂದ ತೆಗೆದುಕೊಳ್ಳಬೇಕು. ಪೋಲೀಸ್ ಠಾಣೆಗಳಿಗೆ ಯಾರಾದರೂ ಹೆಣ್ಣು ಮಕ್ಕಳು ಹೋದರೆ ಅವರಿಗೆ ಸರಿಯಾದ ರಕ್ಷಣೆ ಸಿಗಬೇಕು. ಪೋಲೀಸ್ ಠಾಣೆಗಳಲ್ಲಿ ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡುವುದಕ್ಕೆ ಪೋಲೀಸ್ ವೃತ್ತಿಯು ಮಹಿಳೆಯರನ್ನೇ ನೇಮಕ ಮಾಡಬೇಕು, ಅವರಿಗೆ ಪ್ರತ್ಯೇಕವಾದಂಥ ಒಂದು ಕೊಠಡಿ ಇರಬೇಕು,

ಹೆಣ್ಣು ಮಕ್ಕಳ ರಕ್ಷಣೆಯನ್ನು ಮಹಿಳಾ ಪೋಲೀಸಿನವರೇ ನೋಡಿಕೊಳ್ಳುವಂತೆ ಏರ್ಪಾಡು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಪೋಲೀಸ್ ಠಾಣೆಗಳಲ್ಲಿ ನಾನಾ ರೀತಿಯಾದ ಚಿತ್ರಹಿಂಸೆಗಳನ್ನು ಕೊಡುತ್ತಾರೆಂದು ನಾನು ಕೇಳಿದ್ದೇನೆ. ಆ ಹಿಂಸೆಗಳಾದರೂ ಏನೆಂದರೆ ಚಪಾತಿ ಸೇವೆ, ಏರೋಪ್ಲೇನ್ ಸೇವೆ ಇತ್ಯಾದಿ ಎಂದು ಹೇಳುತ್ತಾರೆ.

ಶ್ರೀ ಕೆ. ಮಲ್ಲಪ್ಪ.—೧೯೭೫ನೇ ಇಸವಿಯಲ್ಲಿ ಎಮರ್ಜನ್ಸಿ ಇತ್ತು. ಆಗ ಏನೇನು ಆಯಿತು ಕೇಳಿದ್ದೀರಾ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಆಗ ಏನೇನು ತೊಂದರೆ ಪಟ್ಟರು ಈ ಕಡೆಯವರು ಎನ್ನುವುದು ನನಗೆ ಗೊತ್ತಿದೆ...

ಶ್ರೀ ಆರ್.ಎನ್. ನಾಯಕ್.—ನಿಮಗೆ ಆ ಸೇವೆ ಏನಾದರೂ ಆಗಿದೆಯೇ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಾವು ಆ ಸೇವೆಯನ್ನು ಅನುಭವಿಸಿರುವುದರಿಂದಲೇ ಈಗ ಅಧಿಕಾರದಲ್ಲಿ ಇಲ್ಲಿರುವುದು, ನೀವು ಅಲ್ಲಿರುವುದು...

(ಗೊಂದಲ)

ನಾವು ಆಗ ರಾಜಕೀಯವಾಗಿ ಏನೇನು ಎಷ್ಟು ಕಷ್ಟಪಟ್ಟಿದ್ದೇವೆಂಬುದು ತಮಗೆ ಗೊತ್ತಿಲ್ಲ ತಾವು ಕುಳಿತುಕೊಳ್ಳಿ...

ಅಧ್ಯಕ್ಷರು.—ಮಾನ್ಯ ನಾಯಕರೇ, ತಾವೇನೂ ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ತಾವೇನು ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಮ್ಮ ಪಕ್ಷದವರು ಆಗ ಎಷ್ಟು ಕಷ್ಟಪಟ್ಟಿದ್ದಾರೆ ಎನ್ನುವುದು ತಮಗೇನು ಗೊತ್ತು ನಾಯಕರೇ ತಾವು ಕುಳಿತುಕೊಳ್ಳಿ.

ಅಧ್ಯಕ್ಷರು.—ಮಾನ್ಯ ನಾಯಕರೇ ತಾವೇನೇ ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್.—ಮಾನ್ಯ ನಾಯಕರು ಏಕೆ ಈ ರೀತಿ ಮಾಡುತ್ತಾರೋ ನನಗೆ ಗೊತ್ತಾಗುವುದಿಲ್ಲ. ಅಧ್ಯಕ್ಷರೇ, ಪೊಲೀಸಿನವರು ಸಾರ್ವಜನಿಕರ ಜೊತೆ ಸರಿಯಾಗಿ ವರ್ತನೆ ಮಾಡುವಂತೆ ಗೃಹ ಸಚಿವರು ತಿಳಿಸಬೇಕು. A police should be a friend, philosopher and a guide. ಶ್ರೀಮತಿ ನಾಗರತ್ನಮ್ಮನವರು ಹೇಳಿದ ಹಾಗೆ ನಮ್ಮ ಗೃಹ ಸಚಿವರು ಹೆಂಗರಳಿನವರು ಬಹಳ ಒಳ್ಳೆಯವರು. ಇಲ್ಲಿ ಏನಾಗಿದೆ ಎಂದರೆ, ಅವರ ಒಳ್ಳೆಯತನವನ್ನು ಪೊಲೀಸ್ ಇಲಾಖೆಯ ಆಫೀಸರ್‌ಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಮಾನ್ಯ ಸಚಿವರಿಗೆ ತುಂಬಾ ಕನಿಕರ. ಗೃಹ ಮಂತ್ರಿಯವರು ಈ ರೀತಿ ಒಳ್ಳೆಯವರಾಗಿದ್ದರೆ ಆಗುವುದಿಲ್ಲ, ಗೃಹ ಮಂತ್ರಿಯವರು ನಾಗಪ್ಪನ ತರಹ ಇರಬೇಕು. ನಾಗಪ್ಪ ಕಚ್ಚದಿದ್ದರೂ ಬುಸ್ ಬುಸ್ ಎಂದರೆ ಸಾಕು ಜನ ಹೆದರುತ್ತಾರೆ. ಹಾಗೆ ನೀವು ಬುಸ್‌ಗುಟ್ಟಿದರೆ ಇಲಾಖೆ ಗದ ಗದ ಎಂದು ನಡುಗುತ್ತದೆ. ಗೃಹ ಮಂತ್ರಿಯವರು ಬಹಳ ಅನುಭವಸ್ಥರಿದ್ದಾರೆ, ನಮಗೆ ಅವರ ಮೇಲೆ ಗೌರವ ಭಾವನೆ ಇದೆ. ನಿಮ್ಮ ಒಳ್ಳೆಯತನವನ್ನು ಇಲಾಖಾ ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳದಂತೆ ನೋಡಿಕೊಳ್ಳಬೇಕು. ಯಾವುದಾದರೂ ಕೇಸ್ ಬಂದರೆ ಅದನ್ನು ಪರಿಶೀಲಿಸುತ್ತೇವೆ ಸಿ.ಓ.ಡಿ.ಗೆ ಕಳುಹಿಸುತ್ತೇವೆ ಎಂದರೆ ಸಾಲದು. ಅದರ ಬಗ್ಗೆ ಸೂಕ್ತ ಕ್ರಮವನ್ನು ತಕ್ಷಣ ತೆಗೆದುಕೊಳ್ಳಬೇಕು. ಮೊನ್ನೆ ಕೆಲವು ದಿನಗಳ ಹಿಂದೆ ಧಾರವಾಡದಲ್ಲಿ ಎ.ಎನ್.ಎಂ. ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ರಮಾ ಭಂಡಾರಿಯವರ ಕೇಸ್‌ನ್ನು ಸಿ.ಓ.ಡಿ.ಗೆ ರೆಫರ್ ಮಾಡಿ ಆಕೆಯನ್ನು ಸಸ್ಪೆಂಡ್ ಮಾಡಿದರೆ ಸಾಲದು. ಅವರ ಮೇಲೆ ಸೂಕ್ತ ಕ್ರಮವನ್ನು ತಕ್ಷಣ ತೆಗೆದುಕೊಳ್ಳಬೇಕಾಗಿತ್ತು, ಒಬ್ಬ ಮಹಿಳೆ ಇನ್ನೊಬ್ಬ ಮಹಿಳೆಯನ್ನು ಅನೈತಿಕ ಚಟುವಟಿಕೆಗೆ ಪ್ರಚೋದನೆ ಮಾಡಿದರೆ, ಪ್ರಚೋದನೆ ಮಾಡುವ ಮಹಿಳೆಗೆ ಉಗ್ರ ಶಿಕ್ಷೆ ಕೊಡಬೇಕೆಂದು ನಾನು ಒಬ್ಬ ಹೆಣ್ಣು ಮಗಳಾಗಿ ಹೇಳುತ್ತಿದ್ದೇನೆ. ಯಾರಿಗೇ ಅನ್ಯಾಯವಾದರೂ ಸರಿ ಅನ್ಯಾಯ

ಮಾಡುವವರ ಮೇಲೆ ತಕ್ಕ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕು. ಮರ್ಯಾದಸ್ಥ ಹೆಣ್ಣುಮಕ್ಕಳು ಯಾವ ರೀತಿ ವ್ಯಾಸಂಗ ಮಾಡಬೇಕು ? ಹೆಣ್ಣು ಮಕ್ಕಳನ್ನು ಕಾಲೇಜಿಗೆ ಕಳುಹಿಸದಂತಹ ಪರಿಸ್ಥಿತಿ ಇವತ್ತಿನ ದಿವಸ ಧಾರವಾಡದಲ್ಲಿ ಉದ್ಭವವಾಗಿದೆ. ತಪ್ಪಿತಸ್ಥರನ್ನು ಸಸ್ಪೆಂಡ್ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತೇವೆ ಎಂದರೆ, ಆಗುವುದಿಲ್ಲ. ಸಸ್ಪೆಂಡ್ ಆದವರು ೮೦ ಪರ್ಸೆಂಟ್ ಸಂಬಳ ತೆಗೆದುಕೊಂಡು ಸುಮ್ಮನೆ ಇರುತ್ತಾರೆ. ಯಾರು ತಪ್ಪು ಮಾಡುತ್ತಾರೋ ಅಂತಹವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಧಾರವಾಡದಲ್ಲಿ ೭ ಜನ ಯುವತಿಯರು ಕಾಣೆಯಾಗಿದ್ದಾರೆಂದು ತಿಳಿದುಬಂದಿದೆ. ಅದರ ಬಗ್ಗೆ ಏನು ಮಾಡುತ್ತೀರಿ ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಈ ವಿಷಯ ಬಹಳ ಮಹತ್ವದ್ದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ನಾಯಕರೇ ನಾನು ಮಾತನಾಡುವಾಗ ಮಧ್ಯೆ ಮಾತನಾಡಿ ಡಿಸ್ಟರ್ಬ್ ಮಾಡಬೇಡಿ.

ಅಧ್ಯಕ್ಷರು.—ಯಾವುದೇ ಸದಸ್ಯರು ಮಾತನಾಡುತ್ತಿರುವಾಗ ಇತರೇ ಸದಸ್ಯರುಗಳು ದುರ್ವಚನದಿಂದ ಮತ್ತು ಏರಿಸಿದ ಸ್ವರಗಳಲ್ಲಿ ಮಾತನಾಡುವುದು, ತೊಂದರೆ ಮಾಡತಕ್ಕಂಥಾದ್ದಲ್ಲ.

ಶ್ರೀ ಎಂ. ರಾಮಪ್ಪ.—ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯಣಿಯವರು ಡೈರೆಕ್ಟ್ ಆಗಿ ನಾಯಕರನ್ನು ಮಾತನಾಡಬೇಡಿ ಕುಳಿತುಕೊಳ್ಳಿ ಎಂದು ಹೇಳುವುದು ಸರಿಯಲ್ಲ. ಅವರಿಗೂ ಸೂಚನೆಗಳನ್ನು ಕೊಡಿ.

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಗೃಹ ಸಚಿವರು ಇವತ್ತು ತಂದಿರುವ ಬೇಡಿಕೆಗಳನ್ನು ನಾನು ಸ್ವಾಗತ ಮಾಡಿ ಹೆಚ್ಚು ದಕ್ಷತೆಯಿಂದ ಕೆಲಸ ಮಾಡತಕ್ಕ ಶಕ್ತಿ ಬರಲೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ವೀರಣ್ಣನವರಿಗೆ ಸೇರಿದಂತಹ ಇಲಾಖೆಯ ಬಗ್ಗೆ, ಅದರಲ್ಲೂ ಕೆ.ಎಸ್.ಆರ್.ಟಿಸಿ. ಬಗ್ಗೆ ಹೇಳುವುದಾದರೆ, ಮಾನ್ಯ ಸಚಿವರು ೩-೪ ತಿಂಗಳ ಹಿಂದೆ ಒಂದು ಪತ್ರಿಕಾ ಹೇಳಿಕೆಯಲ್ಲಿ ಕೆ. ಎಸ್. ಆರ್. ಟಿ. ಸಿ ಯಲ್ಲಿ ಲಾಭ ಬರುತ್ತಾ ಇದೆ ಎಂದು ಹೇಳಿದ್ದಾರೆ. ಇವೊತ್ತು ಇಲ್ಲಿ ಬಂದ ನಂತರ ನಮಗೆ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಸುಮಾರು ೪-೭ ಕೋಟಿ ರೂಪಾಯಿಗಳ ನಷ್ಟ ಆಗುತ್ತಾ ಇವೆ ಇದರಲ್ಲಿ ಲಾಭದ ಬಗ್ಗೆ ಪ್ರಸ್ತಾಪವೇ ಬಂದಿಲ್ಲ. ಇತ್ತೀಚೆಗೆ ಕೆ.ಎಸ್.ಆರ್.ಟಿ ಸಿ ಯಲ್ಲಿ ಹಿಂದೆ ಇಲಾಖಾ ಮಂತ್ರಿಗಳಾಗಿದ್ದ ಶ್ರೀಮಾನ್ ಸಿಂಧ್ಯೆ ಮತ್ತು ಪ್ರಕಾಶ್‌ರವರು ಇದ್ದಾಗ ಮಾಡಿದ್ದ ಕೆಲವು ಒಳ್ಳೆಯ ಪ್ರಾಜೆಕ್ಟ್‌ಗಳನ್ನು ಇನ್ನೂ ಕಾರ್ಯಗತ ಮಾಡಲಿಲ್ಲ. ಈಗ ಈ ಸಂಸ್ಥೆಯ ಅಧ್ಯಕ್ಷರು ಯುವಕರಾಗಿದ್ದಾರೆ, ಹಾಗೆಯೇ ಎಂ. ಡಿ.ಯವರೂ ಕೂಡ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದಾರೆ. ಇವರಿಂದ ಸಂಸ್ಥೆಯ ಉನ್ನತಕಾರ್ಯ ನಡೆಯಬೇಕಾಗಿದೆ. ಆದರೆ ಇತ್ತೀಚೆಗೆ ಛೇರ್‌ಮನ್‌ರವರಿಗೂ ಮತ್ತು ಎಂ. ಡಿ.ಯವರಿಗೂ ಏನೋ ಸ್ವಲ್ಪ ಭಿನ್ನಾಭಿಪ್ರಾಯ ಇದೆ ಎಂದು ಕೇಳಿದ್ದೇನೆ. ಅದು ಏನಿದ್ದರೂ ಬಗೆ ಹರಿಯಬೇಕು ಮತ್ತು ಅದರಿಂದ ದುಷ್ಪರಿಣಾಮಗಳನ್ನು ಕಾಣುವಂತಾಗಬಾರದು ಎಂದು ನಾನು ಹೇಳಬಯಸುತ್ತೇನೆ. ಅಲ್ಲಿ ಏನಾಗಿದೆ ಅಂದರೆ ಟೆಕ್ನೋಕ್ರಾಟ್ಸ್‌ಗೆ ಆದ್ಯತೆ ಇಲ್ಲವಾಗಿದೆ. ನಾಲ್ಕು ಜನರನ್ನು ನಾಲ್ಕು ಪ್ರತ್ಯೇಕ ಭಾಗಗಳಿಗೆ ಡೈರೆಕ್ಟರ್‌ಗಳನ್ನಾಗಿ ಮಾಡಿದ್ದಾರೆ. ಅವರುಗಳು ಯಾರು ಅಂದರೆ, ಡೈರೆಕ್ಟರ್ ಟ್ರಾಫಿಕ್, ಡೈರೆಕ್ಟರ್ ಫೈನಾನ್ಸ್, ಡೈರೆಕ್ಟರ್ ಟೆಕ್ನಿಕಲ್ ಮತ್ತು ಡೈರೆಕ್ಟರ್ ಪರ್ಸೋನಲ್ ಹೀಗೆ ಏಕೆ ಮಾಡಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಹೀಗೆ ನಾಲ್ಕು ಜನರಲ್ಲಿ ಅಧಿಕಾರವನ್ನು ಹಂಚಿದರೆ ಎಷ್ಟರಮಟ್ಟಿಗೆ ಬೋರ್ಡ್‌ನಲ್ಲಿ ಸೌಹಾರ್ದತೆ ಬಂದು ಕೆಲಸ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ತಾವುಗಳು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇತ್ತೀಚೆಗೆ ಕೊಟ್ಟಿರತಕ್ಕಂಥ ಪಟ್ಟಿಯಲ್ಲಿ ಬಸ್‌ಪ್ರಯಾಣದ ದರ ಜಾಸ್ತಿಯಾಗಿದೆ. ೩೦ ಪರ್ಸೆಂಟ್ ನಷ್ಟು ಜಾಸ್ತಿಯಾಗಿದೆ. ಅಂದರೆ ೧೮ ಪರ್ಸೆಂಟ್ ಹೆಚ್ಚಿಗೆ ರೆವಿನ್ಯೂ ತೋರಿಸುತ್ತಾ ಇದೆ. ಅಂದರೆ

ನಮ್ಮ ಕಣ್ಣಿಗೆ ಕಾಣತಕ್ಕಂಥಾದ್ದು ೧೨ ಪರ್ಸೆಂಟ್‌ನಷ್ಟು ಇವೊತ್ತು ಸೋರಿ ಹೋಗುತ್ತಾ ಇರುವುದು ಎಂದು ಹೇಳಬೇಕಾಗುತ್ತದೆ. ಅಂದರೆ ಒಂದು ರೂಪಾಯಿ ಇದ್ದ ಟಿಕೆಟ್‌ನ ದರ ಇವೊತ್ತು ೧-೩೦ ಆದಾಗ ನಮಗೆ ಹೆಚ್ಚಿಗೆ ಆದ ರೆವಿನ್ಯೂ ೧೮ ಪೈಸೆ ಮಾತ್ರ. ೧೨ ಪೈಸೆ ನಷ್ಟವಾಗಿರುವುದು ನಮಗೆ ಕಂಡು ಬರುತ್ತಾ ಇದೆ.

ಇನ್ನು ಇದರಲ್ಲಿ ಕೊಟ್ಟಿರತಕ್ಕಂಥ ವಿಷಯಗಳ ಬಗ್ಗೆ ಹೇಳುವುದಾದರೆ, ಹಿಂದೆ ಮಾನ್ಯ ಸಿಂಧ್ಯ ರವರು ಮಂತ್ರಿಗಳಾಗಿ ಇದ್ದಾಗ ಟ್ರಕ್‌ಗಳಿಗಾಗಿ ಒಂದು ಪ್ರತ್ಯೇಕ ಟ್ರಕ್ ಟರ್ಮಿನಸ್ ಮಾಡಬೇಕೆಂದು ಯೋಜನೆ ಮಾಡಿದ್ದರು. ಅಂತಹ ಒಂದು ಪ್ರತ್ಯೇಕ ವ್ಯವಸ್ಥೆಯನ್ನು ಹರಿಯಾಣದಲ್ಲಿ ಮಾಡಿದ್ದಾರೆ. ಹಾಗೆಯೇ ಟ್ರಕ್‌ಗಳಿಗೆಲ್ಲಾ ಒಂದು ಪ್ರತ್ಯೇಕವಾದ ಟರ್ಮಿನಸ್ ಮಾಡಿ, ಅವರಿಗೆ ಬೇಕಾದ ಪೆಟ್ರೋಲ್ ಇತ್ಯಾದಿ ಸಕಲ ಸೌಲಭ್ಯಗಳನ್ನು ಅವರಿಗೆ ಮಾಡಿಕೊಡುವಂತಹ ಒಂದು ಯೋಜನೆ ಇತ್ತು. ಅದು ತುಂಬಾ ಒಳ್ಳೆಯ ಯೋಜನೆ ಇದರಿಂದ ಒಳ್ಳೆಯ ಪರಿಣಾಮಗಳು ಆಗುತ್ತವೆ. ಆದರೆ ಈಗ ಆ ಯೋಜನೆ ಯಾವ ಹಂತದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ, ದಯಮಾಡಿ ಅದರ ಬಗ್ಗೆ ತಾವು ತಿಳಿಸ ಬೇಕು.

ಇನ್ನು ೩೦೦ ಕೋಟಿ ರೂಪಾಯಿಗಳನ್ನು ಕೇಂದ್ರ ಸರಕಾರದವರು ರಸ್ತೆ ಸಂಚಿತ ನಿಧಿ ಇಂದ ಕೊಡಲಿದ್ದಾರೆ ಎಂದು ಹೇಳಿದ್ದಾರೆ. ೩೦೦ ಕೋಟಿ ರೂಪಾಯಿಗಳಲ್ಲಿ ಕೇಂದ್ರ ಸರಕಾರದಿಂದ ಎಷ್ಟು ಹಣವನ್ನು ತೆಗೆದುಕೊಂಡು ಬಂದಿದ್ದಾರೆ, ಅದರ ಬಗ್ಗೆ ಯಾವ ಪ್ರಾಜೆಕ್ಟ್ ಮಾಡಿದ್ದಾರೆ ಎಂದು ತಿಳಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಂತೆಯೇ ಕೇಂದ್ರ ಸರಕಾರದವರು ಏನು ೩೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ನಮಗೊಂದು ಆಸೆ ಬಹಳ ವರ್ಷಗಳಿಂದ ಇದೆ. ಅದೇನೆಂದರೆ, ನ್ಯಾಷನಲ್ ಹೈವೇ ಆಗಲಿ ಅಥವಾ ಬೇರೆ ರಸ್ತೆಯಲ್ಲಾದರೂ ಕೂಡ ೧೦೦ ಕಿ. ಮೀ.ಗೆ ಒಂದು ಕನ್ಸಲ್ಟೇಟಿವ್ ಸಂಸ್ಥೆ ಆಗಬೇಕು. ಅಲ್ಲಿ ಒಂದು ಚೆಕ್‌ಪೋಸ್ಟ್, ಒಂದು ವೈರ್‌ಲೆಸ್ ಸೆಟ್, ಒಂದು ಅಂಬುಲೆನ್ಸ್, ಮತ್ತು ಒಬ್ಬ ಮೋಟಾರ್‌ವೆಹಿಕಲ್ ಇನ್ಸ್‌ಪೆಕ್ಟರ್ ಇರಬೇಕು. ಮತ್ತು ಒಂದು ಫೋನ್ ವ್ಯವಸ್ಥೆಯೂ ಇರಬೇಕು. ನ್ಯಾಷನಲ್ ಹೈವೇಸಲ್ಲಿ ಬೆಂಗಳೂರಿನಿಂದ ನಿಪ್ಪಾಣಿಯವರೆಗೆ ಇದನ್ನು ಮಾಡಿದರೆ, ಏನು ಸೋರಿಕೆ ಈಗ ಆಗುತ್ತಿದೆ ಅದನ್ನು ತಪ್ಪಿಸಬಹುದು ಮತ್ತು ಅದರಿಂದ ಇನ್ನೂ ಅನೇಕ ಅನುಕೂಲತೆ ಗಳು ಮತ್ತು ಭದ್ರತೆಗಳು ದೊರೆಯುತ್ತವೆ. ಮತ್ತು ಚೆಕ್‌ಪೋಸ್ಟ್‌ನಿಂದ ಕಮರ್ಷಿಯಲ್ ಟ್ಯಾಕ್ಸ್ ಬರುತ್ತದೆ. ಮತ್ತು ಮೋಟಾರ್ ವೆಹಿಕಲ್ ಇನ್ಸ್‌ಪೆಕ್ಟರ್ ಹಾಗೂ ಪೋಲೀಸ್ ಇರುವುದರಿಂದ ಬೇರೆ ಅನುಕೂಲತೆಗಳನ್ನೂ ಒದಗಿಸಿಕೊಟ್ಟಂತಾಗಿ ಆದಾಯವೂ ಹೆಚ್ಚಿಗೆ ಬರುತ್ತದೆ. ಆದುದರಿಂದ ಆ ೩೦೦ ಕೋಟಿ ರೂಪಾಯಿಗಳಲ್ಲಿ ನಮ್ಮ ಷೇರನ್ನು ತೆಗೆದುಕೊಂಡು ಬಂದು ಕರ್ನಾಟಕದಲ್ಲಿ ಈ ಒಂದು ವ್ಯವಸ್ಥೆ ಯನ್ನು ಮಾಡತಕ್ಕಂಥ ಅವಕಾಶ ಇದೆ. ಇದನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿ ಗಳವರಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ರೀತಿಯಲ್ಲಿ ಹೊಸ ಪದ್ಧತಿಯ ಯೋಜನೆಯನ್ನು ತಾವು ಹಾಕಿಕೊಳ್ಳಬೇಕು.

ಹಿಂದೆ ಆಲ್ ಇಂಡಿಯಾ ಪರ್ಮಿಟ್‌ನಲ್ಲಿ ಕೆ. ಎಸ್. ಆರ್ ಟಿ. ಸಿ.ಯವರು ನಾಲ್ಕು ಬಸ್‌ಗಳನ್ನು ಕೊಂಡುಕೊಂಡಿದ್ದರು. ಅದನ್ನು ಈಗ ಓಡಿಸುತ್ತಾ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಆ ಬಸ್ಸು ಗಳು ಎಲ್ಲಿ ಓಡಾಡುತ್ತಿವೆ ಎಂದು ಇದರಲ್ಲಿ ಎಲ್ಲಿಯೂ ಉಲ್ಲೇಖ ಮಾಡಿಲ್ಲ. ಹಿಂದೆ ನಾನು ಮಾತನಾಡು ವಾಗ ನಾಲ್ಕು ನಾಲ್ಕು ಡಿವಿಜನ್‌ಗಳಿಗೆ ಆಫೀಸ್‌ಗಳನ್ನು ಮಾಡಬೇಕೆಂದು ಹೇಳಿದ್ದೇನೆ. ಇಲ್ಲದಿದ್ದರೆ.ಬಿ.ಟಿ. ಎಸ್. ಮತ್ತು ಕೆ.ಎಸ್.ಆರ್.ಟಿ.ಸಿ.ಯನ್ನು ಪ್ರತ್ಯೇಕವಾಗಿ ಮಾಡಬೇಕೆಂದು ಕೇಳಿದಾಗ ಕೂಡ ಯಾವುದೇ ನಿರ್ದಿಷ್ಟವಾದ ಯೋಜನೆಯೂ ಆ ಬಗ್ಗೆ ಕಂಡುಬರುತ್ತಿಲ್ಲ. ಆ ಬಗ್ಗೆ ದಯಮಾಡಿ ಹೇಳಬೇ ಕೆಂದು ಕೇಳಿಕೊಳ್ಳುತ್ತೇನೆ. ಕನ್‌ಸಲ್ಟೇಟಿಡ್ ಕಮಿಟಿ ಮೆಂಬರ್ಸ್‌ಗೆ ಡಿಸ್ಟ್ರಿಕ್ಟ್‌ಗಳಲ್ಲಾದರೂ ಓಡಾಡು ವುದಕ್ಕೆ ಫ್ರೀ ಪಾಸ್ ಕೊಡಬಾರದೇ ಸ್ವಾಮಿ, ಅವರು ಬಹಳ ವರ್ಷಗಳಿಂದ ಕೇಳುತ್ತಿದ್ದಾರೆ. ಈ ಬೇಡಿಕೆಯನ್ನು ಪ್ರಕಾಶ್‌ರವರು ಮಂತ್ರಿಯಾಗಿದ್ದಾಗ ಸಿಂಧ್ಯಾರವ ಮಂತ್ರಿಯಾಗಿದ್ದಾಗಿನಿಂದಲೂ ಕೇಳುತ್ತಿದ್ದಾರೆ. ಇದರ ಬಗ್ಗೆಯೂ ಕೂಡ ನಮ್ಮ ಮಂತ್ರಿಗಳು ಗಮನಹರಿಸುತ್ತಾರೆಂದು ನಾನು ಕೇಳಿ ಕೊಳ್ಳುತ್ತೇನೆ.

ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಗಳ ಬೇಡಿಕೆ ಬಗ್ಗೆ ಅನೇಕ ಹೊಸ ಯೋಜನೆಗಳನ್ನು ನಮ್ಮ ಸರ್ಕಾರ ಬಂದ ಮೇಲೆ ಜಾರಿಗೆ ಕೊಟ್ಟಿರುವುದರ ಬಗ್ಗೆ ಶ್ಲಾಘಿಸುತ್ತಾ ಇನ್ನು ಕೆಲವು ವಿಚಾರಗಳನ್ನು

ತಮ್ಮ ಮೂಲಕ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ನಮ್ಮ ಸಂಸ್ಕೃತಿಯನ್ನು ಪ್ರಸರಿಸುವುದು ನಮ್ಮ ಕರ್ತವ್ಯ. ಅದು ಬೇರೆಯವರಿಗೂ ಗೊತ್ತಾಗಬೇಕು. ಆದರೆ ರಾಜ್ಯ ಮಾಲೀಕತ್ವದ ಹೋಟೆಲ್‌ಗಳಲ್ಲಿ ನಮ್ಮ ಸಂಸ್ಕೃತಿಯ ಊಟ ಉಪಚಾರ ನಡೆ ನುಡಿ ತಿಂಡಿ ತಿನಿಸು ಯಾವುದೂ ಕಾಣುತ್ತಿಲ್ಲ. ಹೋಟೆಲ್ ಅಶೋಕಾಗೆ ಹೋದರೆ ಕಲ್ಕತ್ತದಲ್ಲಿ ಮಾಡಿರುವ ರಸಗುಲ್ಲ ಏಕೆ ತಿನ್ನಬೇಕು? ಏಕೆ ನಮ್ಮ ಮೈಸೂರುಪಾಕ್ ಇಲ್ಲವೇ? ಧಾರವಾಡದ ಫೇಡ ಇಲ್ಲವೇ ? ನಮ್ಮ ತಿಂಡಿತಿನಿಸುಗಳು ಜಗತ್‌ಪ್ರಸಿದ್ಧವಲ್ಲವೇ ? ನಾವು ಗುಜರಾತಿಗೆ ಹೋದರೆ ಅಲ್ಲಿಯ ಪ್ರಸಿದ್ಧ ಹೋಟೆಲ್‌ಗಳಲ್ಲಿ ಅಲ್ಲಿನ ರೊಟ್ಟಿ ಬೆಣ್ಣೆ ಕೊಡುತ್ತಾರೆ. ಅಲ್ಲಿನ ಥ್ರಿಸ್ಟಾರ್ ಫೈವ್ ಸ್ಟಾರ್ ಹೋಟೆಲ್‌ಗಳಲ್ಲಿ ಅಲ್ಲಿನ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ನಮ್ಮ ಹೋಟೆಲ್‌ಗಳಲ್ಲಿ ಕಾಶ್ಮೀರದ ಕಾರ್ಪೆಟ್‌ಗಳನ್ನು ಏಕೆ ಹಾಸಬೇಕು ? ಕರ್ನಾಟಕದ ನವಲಗುಂದದ ಕಾರ್ಪೆಟ್‌ಗಳು ಜಗತ್‌ಪ್ರಸಿದ್ಧ. ಈ ಜನರ ಸೂಕ್ಷ್ಮ ಕಲಾವಂತಿಕೆಯನ್ನು ಬೆಳಸದಿದ್ದರೆ ಅಲ್ಲಿಗೆ ಅದು ನಶಿಸಿ ಹೋಗುತ್ತದೆ. ಕರ್ನಾಟಕದ ಕಸೂತಿ ಇದೆ, ಅದನ್ನು ಪ್ರದರ್ಶಿಸಿ. ಸೀರೆಗಳೆಂದರೆ ಕಾಂಚಿ ಅಥವಾ ಧರ್ಮಾವರಂ ಸೀರೆಗಳನ್ನು ಮಾತ್ರ ಇಡುತ್ತಾರೆ, ಏಕೆ ನಮ್ಮಲ್ಲಿನ ಮೈಸೂರು ಸಿಲ್ಕ್, ಇಳಕಲ್ಲಿನ ಸಾದಾ ಸೀರೆಗಳು ಜಗತ್ತಿನವರಿಗೆ ಗೊತ್ತಾಗಬೇಡವೇ ? ಕೇರಳಕ್ಕೆ ಹೋದರೆ ಅಲ್ಲಿ ಎಲ್ಲಾ ಕಡೆ ಪ್ರಸಿದ್ಧ ನಾರಿನಿಂದ ಮಾಡಿದ ಸಾಧನಗಳನ್ನು ಕಾಣುತ್ತೇವೆ. ಆ ರೀತಿ ನಮ್ಮ ಸಂಸ್ಕೃತಿಯನ್ನೂ ಮೆರೆಸಬೇಕೆಂದು ಕೋರುತ್ತೇನೆ. ಇದರಿಂದ ಇನ್ನೊಂದೇನಾಗುತ್ತದೆಂದರೆ ಇವನ್ನು ನಿರ್ಮಿಸುವ ಕಲಾವಿದರ ಜೀವನ ನಿರ್ವಹಣೆಯಾಗುತ್ತದೆ. ಇದರ ಬಗ್ಗೆ ತಾವು ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸಣ್ಣ ಉಳಿತಾಯದ ಬಗ್ಗೆ ಒಂದೆರಡು ಮಾತುಗಳನ್ನು ಆಡುತ್ತೇನೆ ಸ್ವಾಮಿ. ಸಣ್ಣ ಉಳಿತಾಯದ ಮಂತ್ರಿಗಳೇನೋ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ಇತ್ತೀಚೆಗೆ ಕೇಂದ್ರ ಸರ್ಕಾರ ಸಣ್ಣ ಉಳಿತಾಯದಿಂದ ನಮಗೆ ಬಿಡುಗಡೆ ಮಾಡಿದ ಹಣದಲ್ಲಿ ಮೋಸವಾಗಿದೆ. ಸಣ್ಣ ಉಳಿತಾಯದ ಮೇಲೆ ಕೇಂದ್ರ ಅನೇಕ ಬಾಬುಗಳಲ್ಲಿ ನಮಗೆ ಹಣವನ್ನು ರಿಲೀಸ್ ಮಾಡುತ್ತದೆ. ಅದನ್ನು ಮೂರು ಭಾಗ ಮಾಡಿದೆ. Statutory transfers, discretionary transfers and plan transfers. ಗವರ್ನಮೆಂಟ್ ಆಫ್ ಇಂಡಿಯಾದವರು ಕೊಡುವಾಗ ಈ ಡಿಸ್ಕ್ರಿಷಿನರಿ ಗ್ರ್ಯಾಂಟ್‌ನಲ್ಲಿ ಬಹಳ ಅನ್ಯಾಯವಾಗಿದೆ. ಇವತ್ತಿನ ದಿವಸ ಸಣ್ಣ ಉಳಿತಾಯದಲ್ಲಿ ನಾವು ಮುಂದೆ ಇದ್ದೇವೆ. ೧೯೭೪–೭೫ರಲ್ಲಿ ಕರ್ನಾಟಕಕ್ಕೆ ೧೧ನೇ ಸ್ಥಾನ ಕೊಟ್ಟಿದ್ದರು, ನಾವು ಕಲೆಕ್ಟ್ ಮಾಡಿರುವುದು ಆವರೇಜ್ ೭೮ ಪರ್ಸೆಂಟ್ ಇರುವಾಗ ನಮ್ಮ ಸ್ಥಾನ ಸಣ್ಣ ಉಳಿತಾಯದಲ್ಲಿ ಇವತ್ತು ೧೯ನೇ ಸ್ಥಾನ ಇದರ ಬಗ್ಗೆ ಒಂದು ಪಟ್ಟಿ ಸಿದ್ಧ ಮಾಡಿ ಸಂಬಂಧಪಟ್ಟ ಮಂತ್ರಿಗಳಿಗೆ ಕೊಡುತ್ತೇನೆ ನಾವು ಬಹಳ ಕಷ್ಟ ಪಟ್ಟು ಉಳಿತಾಯ ಮಾಡಿದಾಗ ಮೂರನೇ ಎರಡು ಭಾಗ ನಮಗೇ ನೊಡಬೇಕೆಂದು ಸಣ್ಣ ಉಳಿತಾಯದಲ್ಲಿ ಇದೆ, ಆದರೆ ಇವರು ನಮಗೆ ಕೊಡುತ್ತಿರುವುದು ಮೂರನೇ ಒಂದು ಭಾಗ ಮಾತ್ರ, ನಮಗೆ ನ್ಯಾಯವಾಗಿ ಬರತಕ್ಕಂತಹ ಹಣವೂ ಬರುತ್ತಿಲ್ಲ. ಇನ್ನು ಇಂದಿರಾ ವಿಕಾಸಪತ್ರ ಯೋಜನೆಯಲ್ಲಿ ಹಣ ಹಾಕಿದರೆ ಡಬಲ್ ಆಗುತ್ತದೆಂದೂ ೫ ಸಾವಿರ ರೂಪಾಯಿ ಇಟ್ಟರೆ ಹತ್ತು ಸಾವಿರ ರೂಪಾಯಿಗಳು ಬರುತ್ತದೆಂದು ಹೇಳುತ್ತಿದ್ದಾರೆ. ಆದರೆ ಇನ್‌ಕಂ ಟ್ಯಾಕ್ಸ್ ರಿಯಾಯಿತಿಯನ್ನು ಇದಕ್ಕೆ ಎಲ್ಲೂ ತೋರಿಸಿಲ್ಲ. ೫ ಸಾವಿರ ಇಟ್ಟರೆ ನಮಗೆ ವಾಪಸ್ ಬರತಕ್ಕಂತಹ ಹಣ ಐದು ವರ್ಷವಾದ ಮೇಲೆ ೭೫೦೦ ರೂಪಾಯಿ ಮಾತ್ರ ೧೦ ಸಾವಿರ ಕೈಗೆ ಬರುವುದಿಲ್ಲ ಎಲ್ಲೂ ಕೂಡ ಇದರ ಬಗ್ಗೆ ನಿರ್ದಿಷ್ಟವಾಗಿ ಹೇಳಿಲ್ಲ. ಐದು ಸಾವಿರ ರೂಪಾಯಿ ಇಟ್ಟರೆ ನಮಗೆ ಹತ್ತು ಸಾವಿರ ರೂಪಾಯಿ ಕೊಡುವುದಿಲ್ಲ ೨,೫೦೦ ರೂಪಾಯಿ ಡಿಡಕ್ಷನ್ ಮಾಡಿಕೊಂಡು ಕೊಡುತ್ತಾರೆ ಇದರ ಬಗ್ಗೆ ಒಂದು ನಿರ್ದಿಷ್ಟವಾದ ನಿಯಮವನ್ನು ತಾವು ಮಾಡಬೇಕು. ನಮಗೆ ಬರಬೇಕಾದ ಹಣದ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಹೆಚ್ಚು ಗಮನಹರಿಸಬೇಕು. ಇನ್ನು ಜೈಲಿನ ಬಗ್ಗೆ ಹೇಳುವುದಾದರೆ ಹೆಣ್ಣುಮಕ್ಕಳು ಖೈದಿಗಳು ಇದ್ದಾರೆ......

ಅಧ್ಯಕ್ಷರು.—ತಾವು ದಯವಿಟ್ಟು ಮುಗಿಸಿ ನೀವು ಹೆಚ್ಚು ಸಮಯ ಕೇಳಿದರೆ ಅವರೂ ಕೂಡ ಕೇಳುತ್ತಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಇನ್ನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಸೆಂಟ್ರಲ್ ಜೈಲಿನಲ್ಲಿ ಖೈದಿಗಳು ಸಣ್ಣ ಸಣ್ಣ ಕೈಗಾರಿಕೆ ಮಾಡುತ್ತಾರೆ, ತೋಟಗಾರಿಕೆ ಮಾಡುವುದಕ್ಕೆ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದೀರಿ, ಅಲ್ಲಿ ಹೆಣ್ಣುಮಕ್ಕಳೂ ಕೂಡ ಕೆಲಸ ಮಾಡುತ್ತಾರೆ ಆದರೆ ಅವರಿಗೆ ಕಡಿಮೆ ಸಂಬಳ ಕೊಟ್ಟು ಗಂಡಸರಿಗೆ ಹೆಚ್ಚು ಕೊಡುತ್ತಿದ್ದಾರೆ. ಗಂಡಸರಿಗೆ ೨–೭೫ ರೂಪಾಯಿ ಕೊಡುತ್ತಿದ್ದು ಹೆಂಗಸರಿಗೆ ೧–೭೫ ಪೈಸೆ ಕೊಡುತ್ತಿದ್ದಾರೆ ಹೆಣ್ಣುಮಕ್ಕಳೂ ಕೂಡ ತೋಟದಲ್ಲಿ ಕೆಲಸ ಮಾಡುತ್ತಾರೆ, ನೇಯುತ್ತಾರೆ, ಆದರೂ ಇವರಿಗೆ ೧–೭೫ ಪೈಸೆ ಕೊಡುತ್ತಿದ್ದಾರೆ ಇದನ್ನು ಸರಿಪಡಿಸ ಬೇಕೆಂದು ಕೇಳಿಕೊಂಡು ಇನ್ನೂ ಮಾತನಾಡುವ ವಿಷಯಗಳು ಇದ್ದರೂ ಕೂಡ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಪಿ. ಮೂಡಲಗಿರಿಯಪ್ಪ (ಶಿರಾ) ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ ಅವರ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮೊದಲನೆಯದಾಗಿ ತಮ್ಮ ಆಡಳಿತ ಯಾವ ರೂಪದಲ್ಲಿ ನಡೆಯುತ್ತಿದೆ ಎಂದರೆ ಇವತ್ತು ಯಾವುದಕ್ಕೂ ಕಡಿವಾಣ ಇಲ್ಲದೇ ಇರತಕ್ಕಂತಹ ರೀತಿಯಲ್ಲಿ ನಡೆಯುತ್ತಿದೆ.

(ಶ್ರೀ ವೈ. ಕೆ. ರಾಮಯ್ಯನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ಎನ್. ಎ. ಪಾಲ್ಕಿವಾಲರವರು ಒಂದು ಮಾತನ್ನು ಹೇಳಿದ್ದಾರೆ ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

> "Failure to maintain law and order, we have too much Government and too little administration ; too many public servants and too little public service, too many controls and too little welfare, too many laws and too little justice."

ಎಂದು. ಅಂದರೆ ನಮ್ಮ ಸಹಕಾರ ಬಹಳ ದೊಡ್ಡದಾಗಿ ಕಾಣಿಸುತ್ತಿದೆ ಆದರೆ ಅದರ ಅಡ್ಮಿನಿಸ್ಟ್ರೇಷನ್ ನೋಡಿದರೆ ಬಹಳ ಚಿಕ್ಕದಾಗಿ ಇದೆ ಅದೇ ರೀತಿ ಪಬ್ಲಿಕ್ ಸರ್ವೆಂಟ್ಸ್ ಜಾಸ್ತಿಯಾಗುತ್ತಿದ್ದಾರೆ ಅವರ ಸಂಬಳ ಜಾಸ್ತಿಯಾಗುತ್ತಿದೆ ಆದರೆ ಅವರ ಎಫಿಷಿಯೆನ್ಸಿ ನೋಡಿದರೆ ಬಹಳ ಕಡಿಮೆಯಾಗುತ್ತಿದೆ, ಕಾರಣವೇನೆಂದರೆ ಸರಿಯಾದ ರೀತಿಯಲ್ಲಿ ಆಡಳಿತ ನಡೆಯುತ್ತಿಲ್ಲ ಮತ್ತು ಅದರಲ್ಲಿ ಸಡಿಲತೆ ಇದ್ದು ದಕ್ಷತೆ ಇಲ್ಲವೆಂದು ಇದರಿಂದ ಅರ್ಥವಾಗುತ್ತದೆ. ಅಧಿಕಾರಿಗಳ ಮತ್ತು ಸಾರ್ವಜನಿಕರಲ್ಲಿ ಒಡಂಬಡಿಕೆ ಇಲ್ಲ. ಅಧಿಕಾರಿಗಳು ಸಾರ್ವಜನಿಕರ ಬೇಡಿಕೆ ಏನಿದೆ ಸಾರ್ವಜನಿಕರ ಒಂದು ಆಶೆ ಅನಿಸಿಕೆ ಏನಿದೆ ಎಂದು ಅರ್ಥ ಮಾಡಿಕೊಳ್ಳದೇ ಅವರಲ್ಲಿ ಒಡಂಬಡಿಕೆ ಇಲ್ಲದೇ ಇದ್ದರೆ ಅಧಿಕಾರಿ ವರ್ಗ ಬೇರೆಯಾಗುತ್ತದೆ ಸಾರ್ವಜನಿಕರು ಬೇರೆ ಯಾಗುತ್ತಾರೆ.

2-00 ಪಿ.ಎಂ,

ಅಧಿಕಾರಿಗಳ ಹತ್ತಿರಕ್ಕೂ ಕೂಡಾ ಹೋಗುವುದಕ್ಕೆ ಸಾಧ್ಯವಾಗದಂಥ ಪರಿಸ್ಥಿತಿಯಲ್ಲಿ ಸಾರ್ವಜನಿಕರು ಇದ್ದಾರೆ, ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಸಾರ್ವಜನಿಕರನ್ನು ಸರಿಯಾದ ರೀತಿಯಲ್ಲಿ ನಾವು ಅರ್ಥಮಾಡಿಕೊಂಡು ಅವರ ಒಂದು ಅನಿಸಿಕೆಗಳನ್ನು, ಅವರು ಯಾವುದಕ್ಕೋಸ್ಕರ ಸರ್ಕಾರದ ಅಧಿಕಾರಿಗಳ ಹತ್ತಿರ ಬರುತ್ತಾರೆ, ಯಾವ ಒಂದು ಬೇಡಿಕೆಗಳನ್ನು ತೆಗೆದುಕೊಂಡು ಬರುತ್ತಾರೆ, ಯಾವ ರೀತಿಯಾದ ಪರಿಹಾರವನ್ನು ಕೊಡಬೇಕೆಂದು ದೃಷ್ಟಿಯಲ್ಲಿಟ್ಟುಕೊಂಡು ನಡೆದು ಕೊಳ್ಳದೇ ಹೋದರೆ ಪರಿಸ್ಥಿತಿ ಬಹಳ ಕಷ್ಟವಾಗುತ್ತದೆ. ಇವತ್ತು ಅಧಿಕಾರಿಗಳು ಸರ್ವಾಧಿಕಾರದ ಒಂದು ರೀತಿಯಲ್ಲಿ ವರ್ತನೆ ಮಾಡತಕ್ಕಂಥದ್ದು ನೋಡಿದರೆ ಈ ಆಡಳಿತ ನಿಜವಾಗಲೂ ಕೂಡಾ ಸರಿಯಾದ ಒಂದು ರೀತಿಯಲ್ಲಿ ನಡೆದುಕೊಂಡು ಹೋಗುತ್ತಿಲ್ಲ, ಇದರಲ್ಲಿ ಒಂದು ಬಿಗಿ ಇಲ್ಲ, ದಕ್ಷತೆ ಇಲ್ಲ, ಒಂದು ಇಂಟಿಗ್ರೇಷನ್ ಇಲ್ಲ ಎಂದು ನಮಗೆ ಅರ್ಥವಾಗುತ್ತದೆ. ಒಂದು ಡಿಪಾರ್ಟ್‌ಮೆಂಟ್‌ಗೂ ಇನ್ನೊಂದು ಡಿಪಾರ್ಟ್‌ಮೆಂಟಿಗೂ ಕೋ-ಆಪರೇಷನ್, ಇಂಟಿಗ್ರೇಷನ್ ಇಲ್ಲ ಅದರಲ್ಲಿಯೂ ಕೂಡ್ಾ ಅಡ್ಮಿನಿಸ್ಟ್ರೇಷನ್‌ನಲ್ಲಿ ಒಂದು ಪ್ಲಾನಿಂಗ್ ಇಲ್ಲ. ನಮ್ಮಲ್ಲಿ ಹಣಕಾಸಿನ ವಿಚಾರದಲ್ಲಿ ಒಂದು ಪ್ಲಾನಿಂಗು

ಮಾಡುತ್ತೇವೆ, ಬೇರೆ ವಿಚಾರದಲ್ಲಿ ಪ್ಲಾನಿಂಗ್ ಮಾಡುತ್ತೇವೆ. ಆದರೆ ಅಡ್ಮಿನಿಸ್ಟ್ರೇಷನ್‌ನಲ್ಲಿಯೂ ಕೂಡಾ ಪ್ಲಾನಿಂಗ್ ಇರಬೇಕು. ಅಡ್ಮಿನಿಸ್ಟ್ರೇಷನ್‌ನಲ್ಲಿ ಪ್ಲಾನಿಂಗ್ ಇಲ್ಲ ಎಂದು ಹೇಳಿದರೆ ನಿಜವಾಗಲೂ ಆಡಳಿತವನ್ನು ನಡೆಸುವುದಕ್ಕೆ ಬಹಳ ತೊಂದರೆಯಾಗುತ್ತದೆ. ಇದರಲ್ಲಿ ಅಲ್ಟಿಮೇಟ್ ಸಫರರ್ಸ್ ಯಾರು ಎಂದು ಹೇಳಿದರೆ ಸಾರ್ವಜನಿಕರು, ಮುಗ್ಧಜೀವಿಗಳು. ಯಾರು ನಮ್ಮನ್ನು ಇಲ್ಲಿ ಪ್ರತಿನಿಧಿಸಿ ಅವರ ಆಸೆ ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತಿದ್ದಾರೋ, ಆ ಆಸೆ ಆಕಾಂಕ್ಷೆಗಳಿಗೆ ಕುಂದು ತರದಂತೆ, ಅವರ ಬೇಡಿಕೆಯನ್ನು ತಿರಸ್ಕರಿಸದಂತೆ ನೋಡಿಕೊಂಡು ಹೋಗಬೇಕಾಗಿದೆ. ಇವತ್ತು, ಆರೀತಿಯ ಅಂಡರ್‌ಸ್ಟ್ಯಾಂಡಿಂಗ್ ಇಲ್ಲದೇ ಆಡಳಿತ ಕುಸಿದು ಬೀಳುತ್ತದೆ ಎಂದು ನನ್ನ ಭಾವನೆ. ಅದೇ ರೀತಿಯಾಗಿ ನೆಹರೂರವರು ಒಂದು ಮಾತನ್ನು ಹೇಳಿದ್ದಾರೆ.

> You have many gifts and presents but there is nothing more precious than the affection and love of the people.

ನೀವು ಎಷ್ಟೋ ಜನಗಳಿಗೆ ಏನನ್ನೋ ಕೊಡಬಹುದು, ಯಾವ ರೀತಿಯಲ್ಲಾದರೂ ಎಷ್ಟೋ ನೀವು ಕೊಡಬಹುದು, ಆದರೆ ಜನಗಳ ಪ್ರೀತಿಪಾತ್ರವನ್ನುಗಳಿಸಿಕೊಳ್ಳದೇ ಹೋದರೆ ಜನರ ನಂಬಿಕೆ ಈ ಸರ್ಕಾರದ ಮೇಲೆ ಇಲ್ಲದೇ ಹೋದರೆ ಈ ರೀತಿಯಾದಂಥ ಆಡಳಿತ ಸೂತ್ರವನ್ನು ನಡೆಸಿಕೊಂಡು ಹೋಗದೇ ಹೋದರೆ ನಿಜವಾಗಲೂ ಅದರಿಂದ ಯಾವ ಪ್ರಯೋಜನವು ಆಗುವುದಿಲ್ಲ. ಅದು ಕೇವಲ ನೀವು ಈ ಸಾರ್ವಜನಿಕ ಸಭೆಗಳನ್ನು ನಡೆಸದೇ ಯಾವ ಒಂದು ಕಾನೂನಿನ ಚೌಕಟ್ಟಿನಲ್ಲಿ ಇಲ್ಲದೆ, ನಿಯಮ ಇಲ್ಲದೇ ಮಾಬನ್ನು ನಾವು ನೋಡುತ್ತಿದ್ದೇವೆಯೋ ಆ ರೀತಿಯ ಪರಿಸ್ಥಿತಿಗೆ ಬರುತ್ತದೆ ಎಂಬ ಮಾತನ್ನು ಇಲ್ಲಿ ನಾನು ಸ್ಪಷ್ಟಪಡಿಸುತ್ತೇನೆ. ಅಧ್ಯಕ್ಷರೇ, ಇನ್ನೊಂದು ಮಾತನ್ನು ನೆಹರೂರವರು ಹೇಳಿದ್ದಾರೆ.

> "Equally important is the service of the common man in India, who has suffered so much in the past. His claims must be paramunt and everything that comes in the way of his betterment must have second place not merely on moral and humanitarian grounds but also from the point of view of political common sense But it becomes essential to raise the standard of the common man and give him full opportunity of progress. A social structure, which denies him this opportunity stands self-condemned and must be changed."

ಈ ರೀತಿಯಾದಂಥ ಒಂದು ಕಾನೂನನ್ನು ನಾವು ಇಟ್ಟುಕೊಂಡು, ತತ್ವಗಳನ್ನು ಇಟ್ಟುಕೊಂಡು ಒಂದು ನಿಯಮವನ್ನು ಇಟ್ಟುಕೊಂಡು ಆಡಳಿತವನ್ನು ನಡೆಸಿಕೊಂಡು ಹೋಗಬೇಕೇ ಹೊರತು ಬೇರೆ ಯಾವುದರಿಂದಲೂ ಅಲ್ಲ. ಅದು ಇಲ್ಲದೇ ಹೋದರೆ ಜನರಿಗೆ ನ್ಯಾಯವನ್ನು ಒದಗಿಸಿಕೊಡುವುದರಲ್ಲಿ ನಾವು ವಿಫಲವಾಗುತ್ತೇವೆ ಎನ್ನತಕ್ಕಂಥ ಒಂದು ಮಾತನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಏನಾಗಿದೆ ಎಂದರೆ ಸರ್ಕಾರದ ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ಮರೆತು ಬಿಟ್ಟಿದ್ದಾರೆ. ತಮ್ಮ ಕರ್ತವ್ಯ ಏನು ? ಪ್ರಜೆಗಳಿಗೆ ಅವರ ಕರ್ತವ್ಯ ಏನು ? ದೇಶಕ್ಕೆ ಅವರ ಕರ್ತವ್ಯ ಏನು ? ಸರ್ಕಾರದಲ್ಲಿ ಕಾರ್ಯಕಲಾಪಗಳು ಏನು ? ಎನ್ನತಕ್ಕಂಥದ್ದನ್ನು ಸರ್ಕಾರದ ಅಧಿಕಾರಿಗಳು ಮರೆತುಬಿಟ್ಟಿದ್ದಾರೆ. ಸಾರ್ವಜನಿಕರನ್ನು ಅವರು ದರ್ಪದಿಂದ ನೋಡುತ್ತಿದ್ದಾರೆ. ಸಾರ್ವಜನಿಕರು ಯಾವುದಾದರೂ ಕೆಲಸಕ್ಕೆ ಹೋದರೂ ಸರಿ ಯಾದ ರೀತಿಯಲ್ಲಿ ಅವರನ್ನು ನೋಡುವುದಿಲ್ಲ. ನ್ಯಾಯಬದ್ಧವಾದ ಬೇಡಿಕೆ ಇರಲಿ, ಅನ್ಯಾಯವಾದಂಥ ಬೇಡಿಕೆ ಆಗಿರಲಿ, ಅದನ್ನು ಸರಿಯಾದಂಥ ರೀತಿಯಲ್ಲಿ ಅಧಿಕಾರಿಗಳು ಸಾರ್ವಜನಿಕರಿಗೆ ತಿಳಿವಳಿಕೆಯನ್ನು ಕೊಡಬೇಕು. ಆಡಳಿತವನ್ನು ನಡೆಸಿಕೊಂಡು ಹೋಗಬೇಕಾದರೆ ಆ ಅಧಿಕಾರಿಗಳಿಗೆ ಒಂದು ಸರಿಯಾದ ಟ್ರೈನಿಂಗ್ ಆಗಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ನಾನು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಚಾರವನ್ನು ನಾನು ಹೇಳುವುದಕ್ಕೆ ಬಹಳವಾಗಿ ಇಚ್ಛೆ ಪಡುತ್ತೇನೆ. ಇದು ನಿಜವಾಗಿಯೂ ದುಃಖಕರವಾದ ಸಂಗತಿ ಆಗಿದೆ. ನಾವು ಇದುವರೆಗೆ ಕೂಡ 20 ದಿವಸಗಳಿಂದ ಅಥವಾ ಒಂದು ತಿಂಗಳಿಂದ ಈ ಆಯವ್ಯಯವನ್ನು ಚರ್ಚೆ ಮಾಡಿದ್ದೇವೆ. ಹಿಂದೆಯೂ ಕೂಡ 86-87ನೇ ಇಸವಿಯಲ್ಲಿ ನಾವು ಚರ್ಚೆ ಮಾಡಿದ್ದೇವೆ. ಆದರೆ ಇವೊತ್ತಿನ ದಿನ ಈ ಒಂದು ಆಯವ್ಯಯ ಪಟ್ಟಿ ಬರತಕ್ಕಂತಹ ಪರಿಸ್ಥಿತಿಯನ್ನು ನೋಡಿದಾಗ, ಹಿಂದೆ ಏನು ಒಂದು ಸದನದಲ್ಲಿ ಈ ಆಯವ್ಯಯವನ್ನು, ನಾವು ಪಾಸ್ ಮಾಡುವುದಕ್ಕೆ ಯಾವ ಯಾವ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡಿ ಈ ಸಭೆಯ ಮುಂದೆ ಇಟ್ಟಿದ್ದೇವೆ. ಆ ಎಲ್ಲಾ ಕೆಲಸ ಕಾರ್ಯಗಳನ್ನು ತೆಗೆದುಕೊಂಡಿರುವ ಬಗ್ಗೆ, ಆ ಕೆಲಸ ಕಾರ್ಯಗಳು ಆಗಿರುವ ಬಗ್ಗೆ ನಾವು ನೋಡಿದಾಗ ನಿಜವಾಗಿಯೂ ಕೂಡ ಈ ಸಭೆಗೆ ನಾವು ಅಗೌರವವನ್ನು ತಂದಿದ್ದೇವೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಇವೊತ್ತಿನ ದಿನ ಒಂದು ಪವಿತ್ರತೆ ಏನು ಈ ಸದನದ ಬಗ್ಗೆ ಇದೆ, ಅದನ್ನು ನಾವು ಕಾಪಾಡಿಕೊಂಡು ಬಂದಿಲ್ಲ. ಬಜೆಟ್‌ನಲ್ಲಿ ಎಷ್ಟೋ ಕೆಲಸ ಕಾರ್ಯಗಳು ಸೇರಿಕೊಂಡಿವೆ. ಆದರೆ ನಡೆದಿರತಕ್ಕ ಕೆಲಸ ಕಾರ್ಯಗಳು ಎಷ್ಟು. ಕೇವಲ ಒಂದು ತಾಲ್ಲೂಕಿನಲ್ಲಿ 5-6 ಕೆಲಸ ಸೇರಿದರೂ ಅದರಲ್ಲಿ ನಡೆದಿರತಕ್ಕದ್ದು ಕೇವಲ 4-5 ಮಾತ್ರ. ಆದುದರಿಂದ ಸಾರ್ವಭೌಮತ್ವವನ್ನು ಹೊಂದಿರತಕ್ಕ ಈ ಸದನ ಯಾವ ಒಂದು ತೀರ್ಮಾನವನ್ನು ಕೊಡುತ್ತದೆ, ಆದೇಶವನ್ನು ಕೊಡುತ್ತದೆ ಅದನ್ನು ಅಕ್ಷರಶಃ ಪಾಲಿಸಿ, ಬೆಳೆಸಿಕೊಂಡು ಬರುವ ಸೌಜನ್ಯತೆ ಮತ್ತು ಸೌಭಾಗ್ಯದ ಮನೋವೃತ್ತಿಯನ್ನು ಅವರು ತಮ್ಮಲ್ಲಿ ಬೆಳೆಸಿಕೊಳ್ಳಲಿ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಮತ್ತೊಂದು ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ಅಂದರೆ ಎರಿಂಗ್ ಅಫಿಷಿಯಲ್ಸ್ ಬಗ್ಗೆ ಹೇಳುತ್ತೇನೆ. ಸಾರ್ವಜನಿಕರು ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ಇದೆ. ತಪ್ಪು ಮಾಡಿದವರನ್ನು ಶಿಕ್ಷೆ ಮಾಡಲು ಹೈ ಕೋರ್ಟ್ ಮೂಲಕ ಹಾಗೂ ಪೋಲೀಸ್ ಸ್ಟೇಷನ್‌ನಲ್ಲಿ ಅವಕಾಶ ಇದೆ. ಆದರೆ ಅಧಿಕಾರಿಗಳು ತಪ್ಪು ಮಾಡಿದರೆ ಅವರಿಗೆ ಯಾವ ಪನಿಷ್‌ಮೆಂಟ್ ಕೊಡುತ್ತೀರಿ. ನಾನು ಒಬ್ಬ ಶಾಸಕನಾಗಿ ಹಾಗೂ ಟ್ರಿಬ್ಯೂನಲ್ ಮೆಂಬರ್ ಆಗಿ ನೋಡಿದ್ದೇನೆ. ಪಹಣಿ ಬರೆಯುತಕ್ಕಂಥಹ ವಿಲೇಜ್ ಅಕೌಂಟೆಂಟ್ ತಪ್ಪು ಪಹಣಿ ಬರೆದರೆ ಅವರಿಗೆ ಯಾವ ಶಿಕ್ಷೆ ಇದೆ, ಇವೊತ್ತು ಅವರು ಪಹಣಿ ಬರೆಯುವ ರೀತಿಯನ್ನು ನೋಡಿದರೆ ನಿಜವಾಗಿ ಇವರು ಅಧಿಕಾರಿಗಳಲ್ಲ ಎಂದು ಭಾಸವಾಗುತ್ತದೆ. ಮತ್ತು ಕೇವಲ ಏನೋ ಆಮಿಷಕ್ಕೆ ಒಳಗಾಗಿ ಏಜೆಂಟ್ ಆಗಿದ್ದಾನೆ ಎನ್ನತಕ್ಕ ಭಾವನೆ ಬರುತ್ತದೆ. ಇದನ್ನು ನಾಚಿಕೆಯಿಂದ ಹೇಳಬೇಕಾಗಿದೆ. ಪಹಣಿಯನ್ನು ಚೇಂಜ್ ಮಾಡತಕ್ಕ ಅಫಿಷಿಯಲ್ಸ್‌ಗೆ ಪನಿಷ್‌ಮೆಂಟ್ ಇಲ್ಲ. ಆದರೆ ಅದೇ ರೀತಿ ಜೀವನಕ್ಕೋಸ್ಕರ ಒಂದು ಅನ್ ಆಥರೈಸ್ಡ್ ಜಮೀನನ್ನು ಮಾಡಿಕೊಂಡಿರುತ್ತಾನೆ, ಅವನಿಗೆ ಪನಿಷ್‌ಮೆಂಟ್ ಕೊಡುತ್ತಿದ್ದೀರಿ. ಹಾಗೆಯೇ ಅವರಿಗೆ ಪೆನಾಲ್ಟಿ ಹಾಕುತ್ತೀರಿ. ಅಧಿಕಾರಿಗಳು ಎಫಿಷಿಯಂಟ್ ಆಗಿ ಕೆಲಸ ಮಾಡಬೇಕು, ಈ ಸಂದರ್ಭದಲ್ಲಿ ಅವರುಗಳು ಯಾವ ರೀತಿ ಪಹಣಿ ಮಾಡುವುದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರೇ, ಈ ಒಂದು ಆಡಳಿತ ಸೂತ್ರ ಹೇಗೆ ಆಗಿದೆ ಅಂದರೆ ಒಂದೊಂದು ಡಿಪಾರ್ಟ್‌ಮೆಂಟ್‌ಗೂ ಮತ್ತೊಂದು ಡಿಪಾರ್ಟ್‌ಮೆಂಟ್‌ಗೂ ಕೋ-ಆಪರೇಷನ್, ಕೋ-ಆರ್ಡಿನೇಷನ್ ಇಲ್ಲ. ಸಾರ್ವಜನಿಕರು ತಮ್ಮ ಕೆಲಸ ಮಾಡಿಕೊಳ್ಳಬೇಕಾದರೆ ಅಥವಾ ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ ಎಲ್ಲಾ ಡಿಪಾರ್ಟ್‌ಮೆಂಟ್‌ಗೆ ಕೂಡ ಅವನು ಅಪ್ರೋಚ್ ಮಾಡಿ ಅವರನ್ನು ಕನ್‌ವಿನ್ಸ್ ಮಾಡಬೇಕು. ಆ ಮೇಲೆ ಅವರು ಎಲ್ಲಾ ಸರ್ಟಿಫಿಕೇಟ್‌ಗಳನ್ನು ಕೊಟ್ಟು ಅವನ ಲೋನ್ ಅಥವಾ ಇನ್ನೇನಾದರೂ ಬೇರೆ ರೀತಿಯ ಸಹಾಯಗಳನ್ನು ಪಡೆದುಕೊಳ್ಳಬೇಕಾದರೆ ಅವನ ಕಷ್ಟವನ್ನು ಕೇಳಬೇಕು. ಇದು ಬಹಳ ವಿಷಾದನೀಯ ವಿಷಯವಾಗಿದೆ. ಅದೇ ರೀತಿ ಇಂಟಿಗ್ರೇಟೆಡ್ ಪ್ರೋಗ್ರಾಮ್ ಹಾಕಿಕೊಂಡು ಸಾರ್ವಜನಿಕರಿಗೆ ಅನುಕೂಲ ಆಗುವ ರೀತಿ ಏಕಮುಖವಾಗಿ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕು ಮತ್ತು ಸಾರ್ವಜನಿಕರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮತ್ತೊಂದು ವಿಚಾರವನ್ನು ಹೇಳಬೇಕು ಅಂದರೆ, ಇವೊತ್ತು ನಮ್ಮ ಪ್ರೆಸ್ ಬಹಳ ಮುಖ್ಯವಾದುದು. ಈ ಡೆಮಾಕ್ರಸಿಯಲ್ಲಿ ಪ್ರೆಸ್ ಕೂಡ ಒಂದು ಪಾರ್ಟ್ ಅಂಡ್ ಪಾರ್ಸೆಲ್ ತರಹ ಬಹು ಮುಖ್ಯವಾದ ಅಂಗವಾಗಿದೆ. ಈ ಡೆಮಾಕ್ರಸಿಯಲ್ಲಿ ಈ ಒಂದು ಪ್ರೆಸ್ ಇನ್‌ಸ್ಟಿಟ್ಯೂಷನ್‌ಗೆ ಎಲ್ಲಾ ಕಡೆ ಉತ್ತೇಜನ ಇದೆ. ಆದರೆ ನಮ್ಮ ಕರ್ನಾಟಕದಲ್ಲಿ ರಿಪೋರ್ಟರ್ಸ್‌ಗಳಿಗೆ ಉತ್ತೇಜನ ಅಷ್ಟಾಗಿ

ಕೊಡುತ್ತಿಲ್ಲ. ನಾವು ಎಂದರೆ, ಎಂ.ಎಲ್.ಎ.ಗಳಿಗೆ ಯಾವ ರೀತಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಬಸ್ ಸೌಲಭ್ಯ ಪಡೆಯುತ್ತೇವೆಯೋ ಅದೇ ರೀತಿ ರಿಪೋರ್ಟರ್ಸ್‌ಗೆ ಕೂಡ ಶೇಕಡ 50 ರಿಯಾಯಿತಿ ಕೊಡಬೇಕು. ಅವರಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಕಲ್ಪಿಸಿಕೊಟ್ಟರೆ ಅವರು ಸಾರ್ವಜನಿಕ ಅಭಿಪ್ರಾಯವನ್ನು ರೂಢಿಸಿಕೊಡುವುದರಲ್ಲಿ ವಿಫಲರಾಗದೇ, ಸಫಲರಾಗಿ ಕಾರ್ಯ ನಿರ್ವಹಿಸುತ್ತಾರೆ. ಏಕೆಂದರೆ ಪ್ರೆಸ್ ಅನ್ನು ಬಿಟ್ಟು ಪ್ರಜಾಪ್ರಭುತ್ವ ಇಲ್ಲ. ಪ್ರೆಸ್ ಇಲ್ಲದೆ ಅದನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವ ಒಂದು ಅನುಕೂಲತೆಯನ್ನು ಬಡ ಜನರಿಗೆ ತಮ್ಮ ಜೀವನವನ್ನು ನಿರ್ವಹಿಸಲು ಸೃಷ್ಟಿಸಿಕೊಡುತ್ತೇವೆ ಅದೇ ರೀತಿ ಸರಿಯಾದ ಅನುಕೂಲಗಳನ್ನು ಈ ಪ್ರೆಸ್‌ನಲ್ಲಿ ಕೆಲಸ ಮಾಡತಕ್ಕ ನೌಕರ ವರ್ಗದವರಿಗೆ ಕೂಡ ಒದಗಿಸಿಕೊಡಬೇಕು. ಇದರಿಂದ ಅವರ ಜ್ಞಾನಕ್ಕೆ ಇನ್ನೂ ಹೆಚ್ಚು ಮಹತ್ವ ಬರುತ್ತದೆ ಮತ್ತು ಅವರಿಗೆ ಟ್ರೈನಿಂಗ್ ಕೂಡ ಕೊಟ್ಟು ಒಳ್ಳೆಯ ಕೆಲಸಕಾರ್ಯಗಳನ್ನು ದಕ್ಷತೆಯಿಂದ ಮಾಡುವುದಕ್ಕೆ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸಿಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಹರಿಜನಗಿರಿಜನರಿಗೆ ಪತ್ರಿಕೋದ್ಯಮದ ಬಗ್ಗೆ ತರಬೇತಿಯ ಬಗ್ಗೆ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ನಿಜವಾಗಿಯೂ ಕೂಡ ನನಗೆ ನಾಚಿಕೆಯಾಗುತ್ತದೆ. ಪತ್ರಿಕೋದ್ಯಮ ತರಬೇತಿಯನ್ನು ಪಡೆಯಲು ಸ್ವಇಚ್ಛೆಯಿಂದ ಯಾರು ಬರುತ್ತಾರೋ ಅವರಿಗೆ ಶಾಲೆಗಳಲ್ಲಿ ಪತ್ರಿಕೋದ್ಯಮವನ್ನು ಪ್ರಾರಂಭ ಮಾಡಬೇಕಾಗುತ್ತದೆ. ಈ ರೀತಿ ಮಾಡಿದರೆ ದಕ್ಷತೆಯನ್ನು ಹೆಚ್ಚಿಸಿ ಪ್ರಜಾಪ್ರಭುತ್ವದಲ್ಲಿ ಸರಿಯಾದ ವಾತಾವರಣವನ್ನು ಮಾಡಬಹುದಾಗಿರುತ್ತದೆ.

ಅಧ್ಯಕ್ಷರೇ, ಗೃಹ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಗೃಹ ಇಲಾಖೆಯ ಬಗ್ಗೆ ಹೇಳಬೇಕಾದರೆ ಇದು ನಿಜವಾಗಿಯೂ ಗೃಹ ಇಲಾಖೆಯಾಗಿ ಕೆಲಸ ಮಾಡುತ್ತಿಲ್ಲ. ನಾನು ನನ್ನ ಸ್ನೇಹಿತರ ಹತ್ತಿರ ಚರ್ಚೆ ಮಾಡುತ್ತಿದ್ದಾಗ ಪೋಲೀಸ್ ಪದಕ್ಕೆ ಬಿಡಿಸಿ ಅರ್ಥ ಹೇಳಿದರು. ಅದರಲ್ಲಿ ಎಲ್ಲಾ ಜ್ಞಾಪಕ ಇಲ್ಲ. ಪಿ. ಎಂದರೆ Politeness ಓ ಎಂದರೆ Obedient ಹೀಗೆ ಅರ್ಥ ಇದೆ. ಆದರೆ ಪೋಲೀಸ್ ಇಲಾಖೆಯವರು ಈ ರೀತಿಯಾಗಿ ನಡೆದುಕೊಂಡಿರುತ್ತಾರೆಯೋ? ಕಾನೂನು ರೀತ್ಯಾ ಜನಗಳಿಗೆ ಕೊಡುತ್ತಿದ್ದಾರೆಯೋ ಎನ್ನತಕ್ಕಂಥದ್ದನ್ನು ನಾವು ನೋಡಿದಾಗ, ನಿಜವಾಗಿ ಕೂಡ ಸರಿಯಾದ ರೀತಿಯಲ್ಲಿ ಕಾನೂನು ಪರಿಪಾಲನೆ ಮಾಡುತ್ತಿದ್ದಾರೆಯೋ ಎಂಬುದನ್ನು ನೋಡಿದಾಗ ಒಬ್ಬ ಸಾಮಾನ್ಯ ಪ್ರಜೆಗೆ ರಕ್ಷಣೆ ಇಲ್ಲದಂತಾಗಿದೆ. ಈ ಒಂದು ಸದನದಲ್ಲಿ ಈ ಆಡಳಿತ ಏನು ಇದೆ ಅದು ಸಾಮಾನ್ಯ ಮನುಷ್ಯನಿಗೆ ಕಾನೂನು ರೀತ್ಯಾ ರಕ್ಷಣೆ ಇಲ್ಲವಾಗಿದೆ. ಇವತ್ತು ರಾಜ್ಯದಲ್ಲಿ ಗುಂಡಾಗಿರಿ ಜಾಸ್ತಿಯಾಗಿದೆ ಜೈನ್ ಆ್ಯಕ್ಷನ್ ಜಾಸ್ತಿಯಾಗಿದೆ. ಒಳ್ಳೆಯ ಜನಗಳಿಗೆ, ಸತ್ಪ್ರಜೆಗಳಿಗೆ ಬದುಕಲು ಅವಕಾಶವಿಲ್ಲವೆಂದು ಹೇಳುತ್ತಿದ್ದೇನೆ. ಪೋಲೀಸರು ರಕ್ಷಕರಾಗಿರಬೇಕು. ಅವರು ರಕ್ಷಕರಾಗುವ ಬದಲು ಭಕ್ಷಕರಾಗುತ್ತಿದ್ದಾರೆ. ಇದನ್ನು ನಾವು ಜಾಗ್ರತೆ ಯೋಚನೆ ಮಾಡಬೇಕಾಗುತ್ತದೆ. ಈ ಒಂದು ಪರಿಸ್ಥಿತಿಯಲ್ಲಿ ಈ ದೇಶದಲ್ಲಿ ಪೋಲೀಸ್ ರಾಜ್ಯ ಸ್ಥಾಪನೆಯಾಗುತ್ತದೆಯೋ ಹೊರತು ಅಂತಿಮವಾಗಿ ಪ್ರಜಾಪ್ರಭುತ್ವ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಪೋಲೀಸ್ ಸ್ಟೇಟ್, ಪೋಲೀಸ್ ಸ್ಟೇಷನ್ ತತ್ವಗಳನ್ನು ನಾವೇನಾದರೂ ಬೆಳೆಯುವುದಕ್ಕೆ ಅವಕಾಶ ಕೊಟ್ಟಿದ್ದ ಆದರೆ ಪ್ರಜಾಪ್ರಭುತ್ವಕ್ಕೆ ಎದುರಾಗಿ, ಪ್ರಜಾಪ್ರಭುತ್ವವನ್ನು ನಾವು ಅಲ್ಲಗೆಳೆಯುವಂತಹ ಪರಿಸ್ಥಿತಿಯನ್ನು ನಿರ್ಮಿಸಿದಂತಾಗುತ್ತದೆ. ಇದು ನಿಜವಾದ ಪ್ರಜಾಪ್ರಭುತ್ವ ಆಗುವುದಿಲ್ಲ. ಮೊನ್ನೆ ನನ್ನ ತಾಲ್ಲೂಕಿನಲ್ಲಿರತಕ್ಕ ಕ್ಲಬ್‌ಗಳನ್ನು ರೈಡ್ ಮಾಡುವುದಕ್ಕೆ ಪೋಲೀಸರಿಗೆ ಹೇಳಿದೆ. ಅಲ್ಲಿ ಬಹಳ ಅವ್ಯವಹಾರ ನಡೆಯುತ್ತಿತ್ತು. ರೈಡ್ ಮಾಡತಕ್ಕ ಸಂದರ್ಭದಲ್ಲಿ ಗೂಂಡಾಗಳು ಬಂದಾಗ ಪೋಲೀಸ್ ಸಬ್-ಇನ್ಸ್‌ಪೇಕ್ಟರ್‌ಗೆ ರಕ್ಷಣೆ ಸಿಕ್ಕಿಲ್ಲ. ಪೋಲೀಸ್ ಸಬ್-ಇನ್ಸ್‌ಪೇಕ್ಟರ್ ಈ ಗೂಂಡಗಳನ್ನು ಬಂಧಿಸಲು ಅನುಮತಿ ಕೋರಿದಾಗ ಅನುಮತಿಯನ್ನು ಕೊಟ್ಟಿಲ್ಲ. ಇವತ್ತು ಈ ಗೂಂಡಗಳನ್ನು ಬಂಧಿಸಿಲ್ಲ. ಇವತ್ತು ನಾವು ಈ ಪರಿಸ್ಥಿತಿಯಲ್ಲಿದ್ದೇವೆ. ಈ ಒಂದು ಪರಿಸ್ಥಿತಿಯನ್ನು ನಿವಾರಣೆ ಮಾಡಬೇಕೆಂದು ಹೇಳುತ್ತೇನೆ. ಪೋಲೀಸರು ಯಾವಾಗಲೂ ತಂದೆತಾಯಿಗಳು ಇದ್ದ ಹಾಗೆ. ಪೋಲೀಸರ ಖಾಕಿ ಬಟ್ಟೆಯನ್ನು ನೋಡಿದರೆ ಜನರಲ್ಲಿ ನಗುಮುಖ ಬರಬೇಕು. ಬಂಧುಬಳಗವನ್ನು ನೋಡಿದರೆ ಯಾವ ರೀತಿಯ ಸಂತೋಷ ಬರುತ್ತದೆಯೋ ಆ ರೀತಿಯ ಸಂತೋಷ ಖಾಕಿ ಬಟ್ಟೆಯನ್ನು ನೋಡಿದಾಗ ಬರಬೇಕು. ತಾವು ಈ ಒಂದು ವಾತಾವರಣವನ್ನು ಕಲ್ಪಿಸಿದರೆ ಈ ಪೋಲೀಸ್ ಆಡಳಿತ ಸರಿಯಾದ ರೀತಿಯಲ್ಲಿ ನಡೆದುಕೊಂಡು ಹೋಗುತ್ತದೆ. ಇಲ್ಲದಿದ್ದರೆ

ನಾವಿಂದು ಈ ಒಂದು ಗೊಂದಲದಲ್ಲಿ ಇರಬೇಕಾಗುತ್ತದೆಂದು ಸರ್ಕಾರದಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಕೆ.ಎಸ್. ಆರ್.ಟಿ.ಸಿ. ಯ ಬಗ್ಗೆ ಹೇಳಬೇಕೆಂದರೆ. ಕೆ. ಎಸ್. ಆರ್. ಟಿ. ಸಿ. ಬಸ್ ಸ್ಟ್ಯಾಂಡ್‌ಗಳನ್ನು ಬಹಳ ದೊಡ್ಡ ದೊಡ್ಡದಾಗಿ ಕಟ್ಟಿದ್ದೀರಿ. ಒಳ್ಳೆಯ ಬಣ್ಣಗಳನ್ನು ಹಾಕಿದ್ದೀರಿ. ಯಾವ ಒಂದು ಉದ್ದೇಶದಿಂದ ಇವುಗಳನ್ನು ಕಟ್ಟಿದ್ದೀರಿ ಆ ಉದ್ದೇಶ ಸಫಲವಾಗುತ್ತಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಮಳೆಗಾಲದಲ್ಲಿ ಸಂಪೂರ್ಣವಾಗಿ ಮಳೆ ಒಂದು ಕಡೆಯಿಂದ ಇನ್ನೊಂದು ಕಡೆ ಬೀಳಬಹುದು ಇವರು ಮಾಡಿರುವ ಷೆಲ್ಟರ್‌ಗಳು ರಕ್ಷಣಾತ್ಮಕವಾಗಿಲ್ಲ. ಬಿಸಿಲು ಕಾಲದಲ್ಲೂ ಅಷ್ಟೆ, ಅಲ್ಲಿ ಪ್ರಯಾಣಿಕರು ಬಿಸಿಲಿನಲ್ಲಿ ಒಣಗಬೇಕಾಗಿದೆಯೇ ಹೊರತು ಕೇವಲ ನಾಮಕಾವಸ್ತೆ ಮಾತ್ರ ಈ ಬಸ್ ನಿಲ್ದಾಣಗಳು ಇವೆ. ಮತ್ತು ಅಲ್ಲಿರತಕ್ಕಂತಹ ಸ್ಯಾನಿಟರಿ ಲ್ಯಾವೆಟರಿಯ ಮೇನ್‌ಟ್‌ನೆನ್ಸ್ ಹೇಗೆ ಇದೆ ಅಂದರೆ ಅಲ್ಲಿ ಲ್ಯಾವೆಟರಿ ಇಲ್ಲದೆ ಇದಿದ್ದರೆ ಚೆನ್ನಾಗಿತ್ತು ಏಕೆಂದರೆ ಜನರು ಬೇರೆ ಕಡೆ ಶುಚಿ ಇರತಕ್ಕಂತಹ ಸ್ಥಾನಗಳಲ್ಲಿ ಹೋಗುತ್ತಿದ್ದರು. ಅಲ್ಲಿ ಮೈಟೆನೆನ್ಸ್ ಬಹಳ ಹೋಪಲೆಸ್ ಆಗಿದೆ, ಅಲ್ಲಿ ಓಡಾಡುವುದಕ್ಕೆ ಕೂಡ ಬಹಳ ಕಷ್ಟವಾಗಿದೆ. ಇನ್ನೊಂದು ಮಾತು, ನಾವು ಇಲ್ಲಿ ಪ್ರಯಾಣಿಕರಿಗೋಸ್ಕರ ಬಸ್ಸ್ ರೂಟ್‌ಗಳನ್ನು ಮಾಡಿ ಅನುಕೂಲ ಮಾಡಿಕೊಟ್ಟಿದ್ದೇವೆ. ಆದರೆ ಅಲ್ಲಿ ಏನಾಗಿದೆ ಎಂದರೆ, ಈಗ ಯಾರಾದರೂ ಒಬ್ಬ ಸಾಮಾನ್ಯ ಮನುಷ್ಯನಿಗೆ ಬಸ್ ಮಿಸ್ ಆದರೆ ಅವನು ಅಲ್ಲಿ ತಂಗುವುದಕ್ಕೆ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಅವರಿಗೆ ಏನಾದರೂ ರೆಸ್ಟ್ ಹೌಸ್‌ಗಳನ್ನು ಮಾಡಿದ್ದೀರೆಯೇ ಇದನ್ನು ಕೇವಲ ಮಂತ್ರಿಗಳಿಗೂ ಎಂ.ಎಲ್.ಎ, ಗಳಿಗೂ ಅಥವಾ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಮಾತ್ರ ಇಂಥ ಸೌಲಭ್ಯ ಇರುತ್ತದೆ, ಹೀಗಾಗಿ ಅಲ್ಲಿ ಸಾಮಾನ್ಯ ಪ್ರಜೆಗೆ ಇರುವುದಕ್ಕೆ ಯಾವ ಅನುಕೂಲತೆಗಳೂ ಇಲ್ಲಾ. ಆದ್ದರಿಂದ ಈ ಕಡೆ ತಾವು ಗಮನಹರಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಈಗಂತೂ ಬಸ್ಸುಗಳು ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಪ್ರತಿಯೊಂದು ಬಸ್ಸು ಅರ್ಧ ಅಥವಾ ಮುಕ್ಕಾಲು ಗಂಟೆ ಲೇಟಾಗಿ ಬರುತ್ತದೆ. ಹೀಗಾಗಿ ಪ್ರಯಾಣಿಕರು ಬೆಳಗ್ಗೆಯಿಂದ ಸಂಜೆಯವರಿಗೂ ಕಾಯಬೇಕು, ನಂತರ ಬರುವ ಬಸ್ಸುಗಳು ಲೋಡ್ ಆಗಿರುವುದರಿಂದ ಅವರಿಗೆ ಸೀಟುಗಳು ಸಿಕ್ಕುವುದಿಲ್ಲ. ಇದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತದೆ. ನೀವು ಈ ರೂಟುಗಳನ್ನು ನ್ಯಾಷನಲೈಸ್ ಮಾಡಬೇಕಾದರೆ ಸರಿಯಾದ ಒಂದು ವ್ಯವಸ್ಥೆಯನ್ನು ಮಾಡಬೇಕು. ಮತ್ತು ಹಣದ ವ್ಯವಸ್ಥೆಯೂ ಇರಬೇಕು. ನ್ಯಾಷನಲೈಸ್ ಮಾಡುವ ಮೊದಲು ಬಸ್ಸ್‌ಗಳು ಓಡಾಡತಕ್ಕಂತಹ ರೂಟ್‌ಗಳು ಸರಿಯಾಗಿವೆಯೇ, ಅಲ್ಲಿನ ಜನರಿಗೆ ಅನುಕೂಲತೆಗಳು ಇದೆಯೇ ಎನ್ನುವುದನ್ನು ನೋಡಬೇಕು, ಬಸ್ ನಿಲ್ದಾಣಗಳು ಇದೆಯೇ ಎಂಬುದನ್ನು ನೋಡಬೇಕು, ಹೀಗೆ ಎಲ್ಲಾ ತರಹದ ವ್ಯವಸ್ಥೆಯನ್ನು ಮಾಡಿಕೊಂಡು ನ್ಯಾಷನಲೈಸ್ ಮಾಡಬೇಕೇ ಹೊರತು ಕೇವಲ ನಾವು ನ್ಯಾಷನಲೈಸ್ ಮಾಡುತ್ತೇವೆ, ಪ್ರೈವೇಟ್‌ನವರಿಗೆ ಕೊಡುವುದಿಲ್ಲವೆಂದು ಪ್ರಚಾರ ಮಾಡಿದರೆ ಸಾಲದು. ಇನ್ನು ಕೆಲವರು ಒಂದು ಕೆಟ್ಟ ಭಾವನೆ ಬರುವಂತಹ ರೀತಿಯಲ್ಲಿ ಮತ್ತು ಸರ್ಕಾರಕ್ಕೆ ಒತ್ತಡವನ್ನು ತರುವಂತಹ ಒಂದು ಪರಿಸ್ಥಿತಿಯನ್ನು ಉಂಟುಮಾಡುವುದಕ್ಕೋಸ್ಕರ ನ್ಯಾಷನಲೈಸ್ ಮಾಡಿದರೆ ನಮ್ಮ ಉದ್ದೇಶ ಸಫಲವಾಗುವುದಿಲ್ಲ. ಆದ್ದರಿಂದ ಈ ಒಂದು ಪರಿಸ್ಥಿತಿಯಲ್ಲಿ ಆಡಳಿತ ಸರಿಯಾದ ರೀತಿಯಲ್ಲಿ ನಡೆದುಕೊಂಡು ಹೋಗುತ್ತಿಲ್ಲವೆಂದೂ, ಈ ಆಡಳಿತದ ಒಂದು ಹಿಡಿತ ನಮ್ಮ ಮುಖ್ಯಮಂತ್ರಿಗಳ ಕೈಯಲ್ಲಿ ಸರಿಯಾಗಿ ನಡೆಯುತ್ತಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಬಿ. ಬಾಲಿಕಾಯಿ (ಶಿರಹಟ್ಟಿ),—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಮುಖ್ಯ ಮಂತ್ರಿಗಳು, ಗೃಹ ಮಂತ್ರಿಗಳು ಮತ್ತು ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಇಲಾಖೆಗಳ ಮಂತ್ರಿಗಳು ಮಂಡಿಸಿರತಕ್ಕಂತಹ ೧೯೮೭–೮೮ನೇ ಇಸವಿಯ ಇಲಾಖಾ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮುಖ್ಯವಾಗಿ ಈಗಾಗಲೇ ಅನೇಕ ಹಿರಿಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ಜನತಾ ಸರ್ಕಾರದ ಆಡಳಿತ ಬಂದ ಮೇಲೆ ಎಷ್ಟೇ ಕಾರ್ಯಕ್ರಮಗಳನ್ನು ಕೈಗೊಂಡಿದ್ದರೂ ಕೂಡ ಅಧಿಕಾರಿಗಳ ಮೇಲೆ ಹಿಡಿತ ಸಡಿಲವಾಗುತ್ತಿದೆಯೆಂದು ನನ್ನ ಭಾವನೆ. ಸಾರ್ವಜನಿಕರಿಗೂ ಇವೊತ್ತು ಅನೇಕ ರೀತಿಯಿಂದ ಈ ಅಧಿಕಾರಿಗಳ ಬಗ್ಗೆ ಬೇಸತ್ತಿದ್ದಾರೆ. ಆದಾಗ್ಯೂ ಕೂಡ ನಮ್ಮ ಮಾನ್ಯ ಮುಖ್ಯ

ಮಂತ್ರಿಗಳು ಹಾಗೂ ಸಾರಿಗೆ ಮಂತ್ರಿಗಳು ತಮ್ಮ ತಮ್ಮ ಇಲಾಖೆಗಳ ಅಧಿಕಾರಿಗಳನ್ನು ಒಂದು ಹಿಡಿತದಲ್ಲಿ ಹಿಡಿದಿಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮುಖ್ಯವಾಗಿ ಇವತ್ತು ಅಧಿಕಾರಿಗಳು ತಮ್ಮ ಪ್ರಾಮಾಣಿಕವಾದ ಹಾಗೂ ಕರ್ತವ್ಯ ನಿಷ್ಠರಾಗಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಈಗ ಅನೇಕ ಇಲಾಖೆಗಳಲ್ಲಿ ಇವತ್ತು ಅದರಲ್ಲೂ ತಾಲ್ಲೂಕು ಕಚೇರಿಗಳಲ್ಲಿ ಅನೇಕ ಫೈಲುಗಳು ವರ್ಷಾನು ಗಟ್ಟಲೆ ಕೊಳೆಯಲು ಹತ್ತಿವೆ. ಇದು ಇಂದಿನ ಕಥೆಯಲ್ಲಾ ಬಹಳ ವರ್ಷಗಳಿಂದ ನಡೆದು ಬರುತ್ತಿದೆ. ಈ ಕೊಳೆಯನ್ನು ನಾವು ಅಲ್ಪಕಾಲದಲ್ಲಿಯೇ ನಿರ್ಮೂಲ ಮಾಡುತ್ತೇವೆಂದು ಹೇಳುವುದಕ್ಕೆ ನಾವೇನು ಬೃಹಸ್ಪತಿಗಳಲ್ಲಾ. ಆದರೂ ಕೂಡ ಸಾರ್ವಜನಿಕರೂ ಅವರ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ಅಧಿಕಾರಿಗಳು ಪ್ರಾಮಾಣಿಕರಾಗಿರಬೇಕೆಂದು ನಾವು ಅಪೇಕ್ಷೆಪಡುತ್ತೇವೆ. ಆಗ ಸಾರ್ವಜನಿಕರೂ ಕೂಡ ಪ್ರಮಾಣಿಕವಾಗಿ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೆ ತಯಾರಾಗಿರಬೇಕು. ಶಾಸಕರೂ ಕೂಡ ತಮ್ಮ ಆತ್ಮ ನಿರೀಕ್ಷೆಯಂತೆ ಕೆಲಸವನ್ನು ಮಾಡದೇಕಾಗುತ್ತದೆ. ನಾವು ಶಾಸಕರಾಗಿ ಸುಮಾರು ೨ ವರ್ಷ ಆಗಿದ್ದರೂ ನಮ್ಮ ಕ್ಷೇತ್ರದಲ್ಲಿ, ನಮ್ಮ ರಾಜ್ಯದಲ್ಲಿ ಯಾವ ಪ್ರಮಾಣದಲ್ಲಿ, ಎಷ್ಟು ಪ್ರಮಾಣಿಕವಾಗಿ ನಾವು ಸೇವೆಯನ್ನು ಸಲ್ಲಿಸುತ್ತೇವೆಂದು ನಾವೇ ಇಲ್ಲಿ ವಿಚಾರ ಮಾಡಬೇಕಾಗುತ್ತದೆ. ಆದಾಗ್ಯೂ ಈಗ ಸಂಪನ್ಮೂಲಗಳನ್ನು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿಸಿಕೊಂಡು ಅನೇಕ ಸುಧಾರಣೆಗಳನ್ನು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ:

ಈ ದಿಸೆಯಲ್ಲಿ ಸಾವಿರಾರು ವರ್ಷಗಳ ಕಲೆ, ಸಂಸ್ಕೃತಿ, ಭಾಷೆ ಇವುಗಳನ್ನು ಉಳಿಸಿಕೊಂಡು ಬರಲು ಸರ್ಕಾರ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರ ಪ್ರಕಾರ ಯುವಜನ ಸೇವಾ, ಕ್ರೀಡೆ ಈ ಭಾಗಗಳಲ್ಲಿ ಮುಖ್ಯವಾಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅಂದರೆ ಬೆಂಗಳೂರು, ಮಂಗಳೂರು ಇಂತಹ ನಗರಗಳಲ್ಲಿ ಇದಕ್ಕೆ ಹಣ ವ್ಯಯ ಮಾಡದೆ ಹಳ್ಳಿಗಳಲ್ಲಿ ವ್ಯಯ ಮಾಡಬೇಕು. ಹಳ್ಳಿಗಳಲ್ಲಿ ಸಾಕಷ್ಟು ಯುವ ಸಂಪತ್ತು ಇದೆ. ಅನೇಕ ಕ್ರೀಡಾ ಮನೋಭಾವವುಳ್ಳ ಜನ ಇದ್ದಾರೆ. ಅವರಿಗೆ ಆಟವಾಡಲು ಸರಿಯಾದ ಮೈದಾನವಿಲ್ಲ, ಆಟದ ಸಲಕರಣೆಗಳು ಇಲ್ಲ. ಮತ್ತೆ ಅವರ ದೈಹಿಕ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಪುಷ್ಟಿಕರವಾದ ಆಹಾರದ ಅನುಕೂಲವು ಇಲ್ಲ. ದುರಾದೃಷ್ಟವಾಶಾತ್ ನಮ್ಮ ರಾಜ್ಯ ಹಾಗೂ ರಾಷ್ಟ್ರದ ಮಹತ್ವದ ಕ್ರೀಡೆಗಳು ನಶಿಸಿ ಹೋಗುತ್ತಿವೆ. ಈ ಸಂದರ್ಭದಲ್ಲಿ ಇಂತಹ ಕ್ರೀಡೆಗಳಿಗೆ ನಾವು ಪ್ರೋತ್ಸಾಹ ಕೊಡಬೇಕಾದರೆ, ತಾಲ್ಲೂಕು ಮಟ್ಟದಲ್ಲಿ ಕೊನೆಯಪಕ್ಷ ಒಂದೊಂದು ಕ್ರೀಡಾ ಮೈದಾನವನ್ನು ಸುಸಜ್ಜಿತ ರೀತಿಯಲ್ಲಿ ಸಲಕರಣೆಗಳೊಂದಿಗೆ ಕೊಡುವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ ಮತ್ತು ಅಲ್ಲಿ ಇರತಕ್ಕಂಥ ಕ್ರೀಡ ಮನೋಭಾವವುಳ್ಳ ಯುವಕರಿಗೆ ಪ್ರೋತ್ಸಾಹ ಕೊಡಬೇಕು. ಈಗ ತಾಲ್ಲೂಕು ಮಟ್ಟಗಳಲ್ಲಿ ಕೇವಲ ಕೆಲವು ಸ್ಥಾನಿಕ ಜನರ ಸಹಾಯದಿಂದ ಈ ಯುವಕ ಮಂಡಳಿಗಳು ನಡೆಯುತ್ತಿವೆಯೇ, ವಿನಹಃ ಸರ್ಕಾರದಿಂದ ಯಾವುದೇ ಧನ ಸಹಾಯ ಸಿಗುತ್ತಿಲ್ಲ. ಆದುದರಿಂದ ಒಂದೆರಡು ಹಳ್ಳಿಗಳನ್ನು ಸೇರಿಸಿ ಅಲ್ಲಿ ಯುವಕ ಮಂಡಳಿಗಳನ್ನು ಹಾಗೂ ಯುವತಿಯರ ಮಂಡಳಿಗಳನ್ನು ರಚಿಸಿ ಅವುಗಳಿಗೆ ಸರ್ಕಾರ ಧನಸಹಾಯವನ್ನು ಕೊಡಬೇಕೆಂದು ಹೇಳುತ್ತೇನೆ. ವರ್ಷಕ್ಕೆ ಇಂತಿಷ್ಟು ಎಂದು ಧನ ಸಹಾಯವನ್ನು ಸರ್ಕಾರ ಕೊಟ್ಟರೆ, ಹಳ್ಳಿಗಳಲ್ಲಿರತಕ್ಕಂಥ ಕ್ರೀಡಾ ಮನೋಭಾವವುಳ್ಳಂತ ಯುವಕ ಯುವತಿಯರಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಆ ದೃಷ್ಟಿಯಿಂದ ನಾವು ಯುವಕ ಸಂಘಟನೆ ಮಾಡಬೇಕು. ಈಗ ಪಟ್ಟಣಗಳಲ್ಲಿ ಕ್ರಿಕೆಟ್‌ಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆದರೆ ಹಳ್ಳಿಗಳಲ್ಲಿ ಈ ರೀತಿಯ ಪ್ರೋತ್ಸಾಹ ಕೊಡಬೇಕೆಂದು ಕೇಳುತ್ತೇನೆ ಮುಖ್ಯವಾಗಿ ಇವತ್ತು ನಮ್ಮ ಸಂಸ್ಕೃತಿಯನ್ನು ಬೆಳಸಬೇಕಾದರೆ ಅನೇಕ ರೀತಿಯ ಕಾರ್ಯಕಲಾಪಗಳನ್ನು ಹಾಕಿಕೊಳ್ಳಬೇಕು. ಆ ದಿಸೆಯಲ್ಲಿ ಲಲಿತಕಲೆ, ನಾಟಕ, ಸಾಹಿತ್ಯ, ನೃತ್ಯ ಹೀಗೆ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ಹಾಗೆಯೇ ಹಳ್ಳಿಗಳಲ್ಲಿ ಇರತಕ್ಕಂಥ ಜನರಲ್ಲಿ ಇರುವ ಗುಪ್ತ ಸಂಗೀತ ಪ್ರತಿಭೆಯನ್ನು ಗುರುತಿಸಿ ಅವರಿಗೆ ಧನಸಹಾಯ ಕೊಡಬೇಕು. ಈ ದಿಸೆಯಲ್ಲಿ ಸರ್ಕಾರ ದೀರ್ಘ ಪ್ರಯತ್ನ ಮಾಡಬೇಕು.

ಇನ್ನು ಗೃಹ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಗೃಹ ಇಲಾಖೆ ಇದು ಗ್ರಹಣ ಹಿಡಿದ ಇಲಾಖೆ ಎಂದು ಹೇಳುತ್ತೇನೆ. ಏಕೆಂದರೆ, ಈಗಾಗಲೇ ಮಾನ್ಯ ಮೂಡಲಗಿರಿಯಪ್ಪನವರು ಪೋಲಿಸ್ ಇಲಾಖೆಯ ಬಗ್ಗೆ ಹೇಳುತ್ತಾ, ಪೋಲಿಸ್ ಪದದ ಅರ್ಥವನ್ನು ಬಿಡಿಸಿ ಹೇಳಿದರು. ಆದರೆ ಅವರು ಪಿ ಮತ್ತು ಒ ಗೆ ಮಾತ್ರ ಹೇಳಿದರು. ಇಲ್ಲಿ ಪೋಲಿಸ್‌ನ ಅರ್ಥವೇನೆಂದರೆ ಪಿ—ಪೊಲೈಟ್‌ನೆಸ್, ಒ—ಒಬಿಡಿಯನ್ಸ್, ಎಲ್—ಲಾಫುಲ್‌ನೆಸ್, ಐ—ಇಂಟೆಲಿಜೆನ್ಸ್, ಸಿ—ಕ್ಯೂರೆ

ಕ್ವಿಕ್ ರೆಸ್ಪಾನ್ಸ್ ಮತ್ತು ಎಫಿಷಿಯೆನ್ಸಿ. ಈ ಎಲ್ಲಾ ಒಳ್ಳೆಯ ಗುಣಗಳಿಂದಾಗಿರುವ ಈ ಪೋಲಿಸ್ ಇಲಾಖೆಯಿಂದ ಸಾರ್ವಜನಿಕರ ಕುಂದುಕೊರತೆಗಳನ್ನು ಅರಿತು, ಅವರು ತೊಂದರೆಗಳನ್ನು ತಪ್ಪಿಸಲು ಸಾಧ್ಯವಾಗುತ್ತಿಲ್ಲ. ಜನಗಳಿಗೂ ಮತ್ತು ರಕ್ಷಣಾಧಿಕಾರಿಗಳಿಗೂ ನೇರವಾದ ಸಂಬಂಧವಿರುವುದು ಈ ಇಲಾಖೆಯಲ್ಲಿಯೇ, ಆದ್ದರಿಂದ ಈ ಇಲಾಖೆಯಲ್ಲಿ ಇರತಕ್ಕ ಅಧಿಕಾರಿಗಳು ಒಳ್ಳೆಯವರಾಗಿರಬೇಕು. ಇವರಲ್ಲಿ ಅನೇಕರು ಉತ್ತಮ ಹೃದಯವುಳ್ಳವರು, ಮಾನವೀಯತೆಯನ್ನರಿತವರು ಇದ್ದಾರೆ. ಆದರೆ ಜನರಲ್ಲಿ ಈ ಪೋಲಿಸ್ ಇಲಾಖೆ ಎಂದರೆ, ಒಂದು ರಾಕ್ಷಸೀ ಮನೋಭಾವವುಳ್ಳ ಇಲಾಖೆ ಎಂದು ತಿಳಿಯುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಅದಕ್ಕೋಸ್ಕರ ಈ ಪೋಲಿಸರಿಗೆ ಒಂದು ನೈತಿಕ ಮನೋಭಾವನೆಯ, ಉತ್ತಮ ಪಾಠಗಳನ್ನು ಅವರಿಗೆ ಹೇಳಿಕೊಡಬೇಕಾಗುತ್ತದೆ. ಜನರಲ್ಲಿ ಅವರ ಬಗ್ಗೆ ಉತ್ತಮ ಭಾವನೆಯನ್ನು ನಿರ್ಮಾಣ ಮಾಡಬೇಕಾದರೆ ನಾವು ಇದನ್ನೆಲ್ಲ ಮಾಡಬೇಕಾಗುತ್ತದೆ. ಆದ್ದರಿಂದ ಪೋಲಿಸ್ ಸ್ಟೇಷನ್‌ಗೆ ಒಬ್ಬ ಹಳ್ಳಿಯ ವ್ಯಕ್ತಿ ಅಥವಾ ಯಾರೋ ಒಬ್ಬ ಮುಗ್ಧ ವ್ಯಕ್ತಿ ಬಂದಾಗ ಪೋಲೀಸರು ಯಾವರೀತಿ ನಡೆದುಕೊಳ್ಳಬೇಕು ಎಂಬುದನ್ನು ಅವರಿಗೆ ತಿಳಿಸತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರ ನನ್ನ ಕ್ಷೇತ್ರದಲ್ಲಿ ಪೋಲಿಸರಿಗೆ ಸಾಮಾನ್ಯವಾಗಿ ಕೊನೆಯಪಕ್ಷ ಸರ್ಕಲ್ ಇನ್ಸ್‌ಪೆಕ್ಟರ್ ಅಥವಾ ಪಿ. ಎಸ್. ಐ. ಇವರುಗಳಿಗೆ ಸರ್ಕಾರ ಕಟ್ಟಡಗಳನ್ನು ನಿರ್ಮಾಣ ಮಾಡಿ ಕೊಡಬೇಕು ಪೋಲೀಸರಿಂದ ನಾವು ನಿಷ್ಪಕ್ಷಪಾತವಾದ ಸಹಾಯವನ್ನು, ಸೇವೆಯನ್ನು ಅಪೇಕ್ಷಿಸುವಾಗ, ಅವರಿಗೆ ಸರ್ಕಾರಿ ಗೃಹಗಳನ್ನು ನಿರ್ಮಾಣ ಮಾಡಿ ಕೊಡದಿದ್ದರೆ ಹೇಗೆ ? ಈಗ ಅವರು ಬೇರೆಯವರ ಸ್ವತ್ತಿನಲ್ಲಿ ಇರಬೇಕಾಗುತ್ತದೆ. ಅವರು ಬೇರೆಯವರ ಹಂಗಿನಲ್ಲಿ ಇರದಂತೆ ಮಾಡುವುದು ನಮ್ಮ ಕರ್ತವ್ಯ. ನನ್ನ ಕ್ಷೇತ್ರವಾದ ಶಿರಹಟ್ಟಿಯಲ್ಲಿ ೫ ವರ್ಷಗಳ ಹಿಂದೆ ಸುಮಾರು ಒಂದೂವರೆ ಎಕರೆ ಜಮೀನನ್ನು ಪೋಲೀಸ್ ಗೃಹಗಳನ್ನು ಕಟ್ಟಲು ಕೊಟ್ಟಿದ್ದಾರೆ.

ಈ ಜಾಗವನ್ನು ಪುಕ್ಕಟೆಯಾಗಿ ಫಕೀರ್ ಮಠದವರು ಕೊಟ್ಟಿದ್ದಾರೆ. ಈ ಜಾಗದಲ್ಲಿ ದಯವಿಟ್ಟು ಸಿ.ಪಿ.ಐ. ಮತ್ತು ಪಿ.ಎಸ್.ಐ. ಗೃಹಗಳನ್ನು ಬೇಗನೆ ನಿರ್ಮಾಣ ಮಾಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಗೃಹ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ಪೋಲೀಸರ ಒಂದು ನಡವಳಿಕೆ ಬಗ್ಗೆ ಹೇಳಬೇಕಾದರೆ ರಾತ್ರಿ ೮½—೯ ಗಂಟೆ ಮೇಲೆ ಪೋಲೀಸ್ ಸ್ಟೇಷನ್‌ಗೆ ಯಾವ ಒಬ್ಬ ಸಭ್ಯ ಗೃಹಸ್ಥನೂ ಹೋಗುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಆ ಪೋಲೀಸ್ ಸ್ಟೇಷನ್‌ನಲ್ಲಿ ಕರ್ತವ್ಯದಲ್ಲಿ ನಿರತರಾಗಿರತಕ್ಕಂಥವರು ಮಧ್ಯಸೇವನೆ ಮಾಡಿಕೊಂಡು ಬರುವುದರಿಂದ ಸಾರ್ವಜನಿಕರಲ್ಲಿ ಅಲ್ಲಿಗೆ ಹೋಗುವುದಕ್ಕೆ ಒಂದು ರೀತಿ ಭಯ ಬಂದಿದೆ. ಇದರ ಬಗ್ಗೆ ಪೋಲೀಸಿನವರಿಗೆ ತಾವು ಕಟ್ಟುನಿಟ್ಟಾಗಿ ಹೇಳಬೇಕೆಂದು ಹೇಳುತ್ತೇನೆ. ಅವರು ಮಧ್ಯ ಸೇವನೆಯನ್ನು ಮಾಡಿಕೊಂಡು ಬರಕೂಡದು ಎಂದು ಹೇಳಬೇಕು. ಅನೇಕ ಸಾರಿ ಕೆಲವು ದುರ್ಘಟನೆಗಳು ನಡೆದಿವೆ, ಅದನ್ನು ನೋಡಿ ನನಗೆ ಬಹಳ ದುಃಖವಾಗಿದೆ. ಮುಂದೆ ಇಂತಹ ಒಂದು ಪರಿಸ್ಥಿತಿ ಆಗದೆ ಇದ್ದ ಹಾಗೆ ನೋಡಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಪೋಲೀಸಿನವರು ಯಾವುದಾದರೂ ಕೇಸು ಹಾಕಬೇಕಾದರೂ ಕೂಡ ೬೦ ದಿವಸದೊಳಗೆ ಹಾಕಬೇಕೆಂದು ಇದ್ದರೂ ಕೂಡ ೬-೮ ತಿಂಗಳಾದರೂ ಸಹ ಛಾರ್ಜ್ ಷೀಟ್ ಹಾಕದೇ ಇರುವುದು ಕಂಡುಬಂದಿದೆ. ಇವರ ಈ ಒಂದು ವರ್ತನೆಯಿಂದ ಇವರು ಕೇಸು ಹಾಕುವುದನ್ನು ನಿಧಾನ ಮಾಡಿದರೆ ಕೊನೆಯಲ್ಲಿ ಅದಕ್ಕೆ ಬೇಕಾಗಿರತಕ್ಕಂಥ ಮಹತ್ತರವಾದ ಪುರಾವೆಗಳು ನಶಿಸಿಹೋಗಿ ಬಹಳ ಅನ್ಯಾಯಗಳು ಆಗುತ್ತವೆ. ಇದರ ಬಗ್ಗೆ ಪೋಲೀಸಿನವರಿಗೆ ತಾವು ಕಟ್ಟುನಿಟ್ಟಾಗಿ ಹೇಳಬೇಕೆಂದು ಹೇಳುತ್ತೇನೆ. ಆರೋಪಿಯಾದಂಥವನು ಪೋಲೀಸ್‌ಸ್ಟೇಷನ್‌ಗೆ ಹೋದಾಗ ಒಂದು ರೀತಿಯಾದ ಮನೋಭಾವವನ್ನು ಅವರು ತೋರಿಸುತ್ತಾರೆ. ಆ ಪ್ರವೃತ್ತಿ ಹೋಗಬೇಕು, ಅವನನ್ನು ಸೌಜನ್ಯದಿಂದ ಕಾಣುವ ಹಾಗೆ ನೋಡಿಕೊಳ್ಳಬೇಕು. ಅಲ್ಲದೆ ಅವರು ಯಾವ ಆರೋಪಿಯನ್ನು ಹಿಡಿಯುತ್ತಾರೆ, ಅವನಿಗೆ ಜಾಮೀನು ಕೊಡುತ್ತೇವೆಂದು ಹೇಳಿದರೂ ಕೂಡಾ ಅವನಿಗೆ ಜಾಮೀನು ಕೊಡದೇ ಇರುವ ಹಾಗೆ ಮಾಡುತ್ತಾರೆ, ಇಂಥ ಕೇಸುಗಳು ಬಹಳ ಇವೆ. ಈ ಬಗ್ಗೆ ಪೋಲೀಸಿನವರಲ್ಲಿರತಕ್ಕಂಥ ಪ್ರವೃತ್ತಿ ಬದಲಾವಣೆಯಾಗಬೇಕೆಂದು ಹೇಳುತ್ತೇನೆ. ಇನ್ನು ಈ ಪೋಲೀಸ್ ಸ್ಟೇಷನ್‌ಗೆ ಬರುವವರು ಎಲ್ಲರೂ ಕೆಟ್ಟವರು ಇರುವುದಿಲ್ಲ. ಸಭ್ಯರೂ ಇರುತ್ತಾರೆ. ಅವರನ್ನು ಬಹಳ ಆತ್ಮೀಯತೆಯಿಂದ, ಸೌಜನ್ಯತೆಯಿಂದ ಒಂದು ಸಹಾನುಭೂತಿಯಿಂದ ಅವರ ಕಷ್ಟಸುಖಗಳನ್ನು ಪರಿಶೀಲನೆ ಮಾಡುವ ಹಾಗೆ ಒಂದು ಸಂಯಮತೆಯನ್ನು ತೋರಿಸುವ ರೀತಿಯಲ್ಲಿ ಈ ಒಂದು ದಿಸೆಯಲ್ಲಿ ಅವರು ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಬಂದೀಖಾನೆ ಮತ್ತು ಜೈಲುಗಳ ವಿಚಾರದಲ್ಲಿ ಹೇಳುವುದಾದರೆ ಇದರ ಬಗ್ಗೆ ಇನ್ನೂ ಅನೇಕ ಸುಧಾರಣೆಗಳನ್ನು ಮಾಡಬೇಕಾಗಿದೆ. ಈ ಖೈದಿಗಳಿಗೆ ಒಳ್ಳೆಯ ಆಹಾರ ಕೊಡುವುದಿಲ್ಲ ಎಂದು ನಾನು ಕೇಳಿದ್ದೇನೆ, ಅನೇಕ ಖೈದಿಗಳು ದುರಾದೃಷ್ಟವಶಾತ್ ಅವರು ಮತ್ತೆ ಖೈದಿಗಳಾಗಿ ಬರುವ ಪ್ರಶ್ನೆ ಬರುತ್ತಾ ಇದೆ. ಆದುದರಿಂದ ನಾನು ಇವರ ಬಗ್ಗೆ ಹೇಳುವುದೇನೆಂದರೆ ಈ ಖೈದಿಗಳಾಗಿ ಏನು ಬರುತ್ತಾರೆ ಅವರಿಗೆ ಕರಕುಶಲತೆಗಳಲ್ಲಿ, ಕೈಗಾರಿಕೆಯಲ್ಲಿ ತರಬೇತಿ ಕೊಟ್ಟರೆ ಗೃಹ ಕೈಗಾರಿಕೆಗಳಲ್ಲಿ ತರಬೇತಿ ಕೊಟ್ಟರೆ ಅವರನ್ನು ಸಮಾಜದಲ್ಲಿ ಬಹಿಷ್ಕಾರ ಹಾಕಿದ್ದರೂ ಕೂಡ ಅವರು ತಮ್ಮ ಕಾಲಮೇಲೆ ನಿಂತು ಜೀವನ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಹಾಗೆ ಮಾಡದೇ ಹೋದರೆ ಅವರನ್ನು ಇನ್ನೂ ಅಪರಾಧಿ ಸ್ಥಾನದಟ್ಟಲ್ಲಿದ್ದಾರೆಂದು ಜನ ತಿಳಿದುಕೊಳ್ಳುತ್ತಾರೆ. ಅದಕ್ಕೆ ಅವಕಾಶ ಕೊಡದೆ ಯೋಗ್ಯವಾಗಿ ಅವರಿಗೆ ಪುರಸ್ಕಾರ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಮಾನ್ಯ ಸಚಿವರಾದ ವೀರಣ್ಣನವರು ಸಣ್ಣ ಉಳಿತಾಯದ ಬಗ್ಗೆ ಬಹಳಷ್ಟು ದೀರ್ಘವಾಗಿ ಸಾಧನೆ ಮಾಡಿದ್ದಾರೆ. ಈ ಬಗ್ಗೆ ಮನೆ ಮನೆಗೂ ಕಾರ್ಯಕ್ರಮ ಹಾಕಿಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ಆ ಜನರು ಏನು ಕೇಳುತ್ತಾರೋ ಆ ರೈತರು ಏನು ಕೇಳುತ್ತಾರೋ ಅದರ ಬಗ್ಗೆ ಭರವಸೆ ಕೊಟ್ಟು ಈ ಒಂದು ಸಣ್ಣ ಉಳಿತಾಯವನ್ನು ಹೆಚ್ಚು ಹೆಚ್ಚು ಮಾಡಿದ್ದಾರೆ. ಈ ಬಗ್ಗೆ ನಾನು ಕೇಳುವುದೇನೆಂದರೆ ಈ ಸಣ್ಣ ಜನರಿಂದ ಬಡವರಿಂದ ಈ ಅಧಿಕಾರಿಗಳು ಕಿರುಕುಳ ಕೊಟ್ಟು ಸಣ್ಣ ಉಳಿತಾಯ ಏನು ಮಾಡಿಸುತ್ತಾರೆ ಮುಂದಾದರೂ ಕೂಡ ಆ ಜನರಿಗೆ ಕಿರುಕುಳ ಕೊಡದ ಹಾಗೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಸಾರಿಗೆ ಸಂಸ್ಥೆ ಬಗ್ಗೆ ಹೇಳಬೇಕಾದರೆ ಹಿಂದೆ ಶ್ರೀ ಸಿಂಧ್ಯ ಅವರೂ ಇದ್ದರು, ಶ್ರೀ ಎಂ.ಪಿ. ಪ್ರಕಾಶ್ ಅವರೂ ಇದ್ದರು, ಈಗ ಶ್ರೀ ವೀರಣ್ಣನವರು ಇದ್ದಾರೆ. ಎಲ್ಲರೂ ಸೇರಿ ಇದನ್ನು ಸುಧಾರಣೆ ಮಾಡಿದ್ದಾರೆ. ಎಲ್ಲೆಲ್ಲಿ ರಾಷ್ಟ್ರೀಕರಣ ಮಾಡಿದ್ದಾರೆ ಅಲ್ಲೆಲ್ಲಾ ಬಸ್ ನಿಲ್ದಾಣ ಮಾಡಿದ್ದಾರೆ, ಡಿಪೋ ತೆಗೆದಿದ್ದಾರೆ. ನನ್ನ ಮತಕ್ಷೇತ್ರದ ಬಗ್ಗೆ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ಶಿರಹಟ್ಟಿ ಗ್ರಾಮ ೧೦ ಸಾವಿರ ಜನಸಂಖ್ಯೆ ಇರತಕ್ಕಂಥ ಗ್ರಾಮ ಆ ಊರಿಗೆ ಅವಶ್ಯಕವಾಗಿ ಒಂದು ಬಸ್ ನಿಲ್ದಾಣ ಬೇಕು. ಆ ಊರಿನ ಮುಖಾಂತರ ೭೦–೮೦ ಬಸ್ಸುಗಳು ಓಡಾಡುತ್ತವೆ. ಅಲ್ಲಿಗೆ ಒಂದು ಬಸ್ ನಿಲ್ದಾಣವನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ. ಆದ್ದರಿಂದ ದಯಮಾಡಿ

೨–೩೦ ಪಿ.ಎಂ.

ಮಾನ್ಯ ಸಾರಿಗೆ ಸಚಿವರು ಅಲ್ಲಿಗೆ ಒಂದು ಬಸ್–ನಿಲ್ದಾಣವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಈಗ ಬಸ್‌ಗಳಲ್ಲಿ ವಿದ್ಯಾರ್ಥಿಗಳು ಓಡಾಡಲು ಉಚಿತ ಪಾಸ್ ವ್ಯವಸ್ಥೆ ಇದೆ. ಈ ಉಚಿತ ಪಾಸ್‌ನ್ನು ವಿದ್ಯಾರ್ಥಿಗಳು ಕೇವಲ ಮನೆ ಮತ್ತು ಶಾಲಾಕಾಲೇಜುಗಳಿಗೆ ಹೋಗಿ ಬರಲು ಉಪಯೋಗ ಮಾಡದೆ ಬೇರೆ ಕೆಲಸಗಳಿಗೆ ಹೋಗಲು ಸಹ ಉಪಯೋಗಿಸುತ್ತಿದ್ದಾರೆ. ದಿನವು ೪–೫ ಸಲ ಬಸ್‌ಗಳಲ್ಲಿ ಓಡಾಡಿ ಬಸ್‌ಪಾಸ್‌ನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ, ಇದನ್ನು ತಪ್ಪಿಸಲು ಪಂಚ್ ಸಿಸ್ಟಮ್‌ನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ದಿನಕ್ಕೆ ಎರಡು ಸಲದಂತೆ ತಿಂಗಳಿಗೆ ೬೦ ಸಲ ಪಾಸ್ ಮೇಲೆ ಪಂಚ್ ಮಾಡಿದರೆ ಪಾಸ್‌ನ್ನು ದುರುಪಯೋಗಪಡಿಸಿಕೊಳ್ಳುವುದು ತಪ್ಪುತ್ತದೆ.

ಇನ್ನು ನಮ್ಮ ಲಕ್ಷ್ಮೇಶ್ವರ ಬಸ್ ನಿಲ್ದಾಣ ಬಹಳ ಚಿಕ್ಕದಾಗಿದೆ. ಇಲ್ಲಿನ ಬಸ್ ಡಿಪೋದಲ್ಲಿ ೭೩ ಬಸ್‌ಗಳು ಇವೆ. ಸುಮಾರು ೩೦೪ ಬಸ್‌ಗಳು ದಿನವೂ ಈ ಬಸ್ ನಿಲ್ದಾಣಕ್ಕೆ ಬಂದು ಹೋಗುತ್ತವೆ. ಅಲ್ಲಿನ ಬಸ್ ನಿಲ್ದಾಣ ಚಿಕ್ಕದು ಎಂಬುದು ಮಾನ್ಯ ಸಚಿವರಿಗೂ ಸಹ ಗೊತ್ತಿದೆ. ಈಗ ಅಲ್ಲಿ ೫–೬ ಬಸ್‌ಗಳು ನಿಲ್ಲುವುದಕ್ಕೆ ಮಾತ್ರ ಸ್ಥಳವಿದೆ. ಆದರೆ ಒಮ್ಮೆಲೆ ೧೦–೧೫ ಬಸ್‌ಗಳು ಬಂದರೆ, ಅವು ನಿಲ್ಲಲು ಬಹಳ ತೊಂದರೆ ಆಗುತ್ತಿದೆ. ೩೦ ಸಾವಿರದಷ್ಟು ಜನಸಂಖ್ಯೆ ಇರುವ ಈ ನಗರ ಬೆಳೆಯುತ್ತಿರುವ ಒಂದು ಬೃಹತ್ ನಗರವಾಗಿದೆ. ಆದ್ದರಿಂದ ಈ ಬಸ್‌ಸ್ಟ್ಯಾಂಡ್ ಪಕ್ಕದಲ್ಲಿರುವಂಥ ಜಮೀನನ್ನು ಸೇರಿಸಿಕೊಂಡು ಇದನ್ನು ವಿಸ್ತರಣೆ ಮಾಡಿದರೆ ಸಾರ್ವಜನಿಕರಿಗೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

SMT. MUKTHARUNNISA (NARASIMHARAJA).—Respected Speakar, Sir, I take the privilege to speak a few words on this demand.

First I would like to ask how far the Child Welfare Department is progressed It is not mentioned in any of the demands or in any report. It is surprised to me because this House passes rules and regulations and the decision of this House is supreme, but I found a child labour working in canteen. So, I thought to speak on ehild labour and child welfare. Sir, our children are our investment. We should invest in them our love and care, our pride and attention. We should grow with them, learn with them and build up in them the values that we cherish most. We should discover and develop the interests of the child. Sir, love is the basic and natural needs of chid. Child is very important. Love is the most important need for the child. Love is the basic and natural need of the child or any human being for that matter, The growth and salvation of the child depends on this love.loye is a base for creating morals in the mind of the child, Life is not possible only through laws and regulations, science and experince or any namely department. It is rightly said that law without love is nothing and love too without law has no meaning. It is important in the life of the child and it supplies the necessary power for continuing life. Sir, it is our duty to pay attention to unfortunate children living in urban slums and rural areas. They are having no access to good hygine, education and sophisticated environment. They are even denied basic amenities of life, no toilet facilities, no drinking water is available. More than all they tend to develop in an inferiority complex which is dangerous to their mental and physical growth. Illiteracy of Slum-dwellers also has its own impact on the children. While discussing the norms of social environment I cannot ignore the issues relevant to child labour in Karnataka. The child labour prematurely encoun ters the difficulties of life. Child labourers are forced to work in farms, in factories and as helpers at home, canteen. These children are being exploited under the most inhuman conditions. These luckless children are without any hope of a bright future. The working hours of children are unlimited and they have to spend the night in a corner of a workshop or footpath or in their tiny houses or huts. In many cases they are paid only one sixth of that of an adult workers. Labour laws are not honestly and strictly followed. The situation of children in Karnataka is miserable, where they are employed in agricultural fields in rural areas and in factories private shops, canteen, automobile sheds etc., In Karnataka, history tells us that the exploiters of child manpower

have committed the most uncivilized form of oppression against child workers. Even the death of a child has not prevented them from employing others. Many employers prefers children, because these innocent, unfortunate youngesters are easy to handle and can be exploited to a maximnm possible extent. Sir, in this, I request the Department to encourage the voluntary agencies, which have a more responsible role to play in this direction. Every practical care must be taken to ensure that mental and physical well being of children is not jeopardised. Laws should not only be made but they must be strictly enforced. Sir, I urge the Government that they should atleast mention what is the budget they have sanctioned for the child welfare and what the programmes they have chalked out to control child labour in Karnataka. It is a very important issue, nobody has touched that point. I hope Government will take appropriate action on this issue.

Secondly, I would like to speak about taxation. I got this book relating to Motor Vehicles Department. In the first page it is mentioned that Motor Vehicles Department is one of the major revenue earning department in the State. But I can say this should be only a compensatory tax as user of the road, but here unfortunately, it is mentioned as major revenue department, Sir, in Karnataka the KSRTC buses are 9,557 They deduct 15% of tax out of total collection, even then this department is incurring loss. We have seen so many reports and we have heard also that there is always loss in KSRTC. Simultaneously, I will say there are 3456 private State Carriages. They have enhanced about 25% tax for private carriages. There are 201 contract carriages which has been converted as State Carriages but no contract carriages are available for public. Now, for All India Permits the rate of tax has been enhanced abnormally. For All India permits buses for one quarter it is enhanced to Rs. 87,500
I am surprised to see this enhancement. In Motor vehicle, Tax. Nobody will ply the buses if you enhance the rate of tax to this extent. All the buses will be at home only. Then tourists coming to Bangalore will ask the Minister how go to tourist centres ?

SRI VEERANNA.—KSRTC buses are there.

SMT. MUKTHARUNNISA.—So, I request the Hon'ble Minister to see that it is exempted for the benefit of the tourists. Here it is mentioned in page No. 6 KSRTC buses in 1986–10,510 and private buses 3.712. Here they have written percentage of expenditure over collection. It is 19 per cent. So, I urge the Government to reduce the tax, otherwise there will be some trouble and that you had to face.

Secondly, Sir, in Mysore City, some houses were constructed for physically handicapped persons. This is the first colony in Mysore City. They constructed through CITB. EWS houses and MIG Houses. They are small houses. EWS Houses only 10x10, one room and one bath room. There are very small houses. They fixed Rs. 8,000 for the physically handicapped. They have no legs at all. They paid the first instalment and they took possession certificate in 1981-85 But these houses were constructed in 1980. For getting houses again, they charged one and a half thousand something for one light No Bhagyajothi is introduced for these poorest section of the society. I now learn that they have raised it to 18.000/- for one house, consisting of a small room of 10x10. When they fixed the value of the house in 1980, why you have enhanced it? Actually poor persons should get these houses free. That means, per seat 2.500. Before it was rupees per seat, per quarter. these Rs. 17,500 per quarter. But now 87,500 per quarter. It gives three and a half lakhs of rupees tax per year. What is the value of the bus? What is the maintenance of the bus ? What is the maintenance of the labourers? What is the maintenance of the same owner who has spent lakhs of rupees on bus? If you collect three and a half lakhs rupees tax per year and per seat it was only 500 rupees for three months. Now it has come to 2500 rupees, that means rupees 87,500 for a year. The R.T.O. Police Inspector, should till their part as the "mamool" also. Sir, you have enhanced the taxes and there are only 15 All India Permit buses in Karnataka. Out of 50 buses in Bangalore 15 is Government and 35 buses belongs to private and you have enhanced taxes on only 35 buses Sir, in Kerala, they are charging 7700, rupees, Andhra 12,075 rupees Pondicherry 6300 rupee, but our Karnataka was charging 17,500 per quarter. That time also it was little more but there was no complains they were maintaining But now immediately instead of Rs. 17 50 they had to pay 87,500. per per year. Nobody can believe. Nobody will imagine. I think it is a printing mistake Please check up. I think somebody has mentioned and nobody has read that. Please check up that figure because they are all siteless and houseless people Some nominal rate should be there. Now 36,000 rupees for LIGS and for MIG Houses 60.000 I request minister to check up with the concerned Department and make the value as they had fixed previously.

Same thing has happened in Rajendranagar. Regarding Industrial houses for the weaker sections, I don't want to explain is because I don't have much time at my disposal. There are 488 houses. They got them by way of loan and now they wanted to take

back those houses. They are all one room houses. The value of the houses was Rs. 1390 in 1954. Now the value has been enhanced to 17,500, like that, I don't want to explain all this in detail. Our Hon'ble Chief Minister is here. Housing problem is much in Mysore City. Then about Stadium in Mysore City. Last time the then Minister Mr Jeevaraj Alva had promised that it will be completed by December and that we can use the stadium. But up till now it is like that only. So, I request the Goods completed the stadium at least this year.

Sir, I am thankful to you for giving me any opportunity, 10 minutes not 15 minutes.

3-00 P. M.

Sir, latly, every time, our friend, Smt. Leeladevi R. Prasad is telling about Dowry. Every day we are reading in newspapers about these Dowry and dowry deaths. Whenever we request our Hon'ble Home Minister to do something, he gets angry on us and we will have to shout on him and this is going on but nobody is bothered about what should be done to solve this problem. I therefore, request the Government to constitute an Official enquiry Committee exclusively to deal with Dowry cases in the women welfare Department. I also request the Government to constitute a House Committee if possible to tackle this problem.

Then, Sir, I would like to mention another problem being faced by women. Women are finding it difficult to approach various agencies to get finance to start industries. Somebody will say, you go to I industries Department and you will get Rs. 25,000 to Rs. 35,000 under Unemployment Scheme and all that but if we go, we don't get at. Then, somebody will say-you go to Finance Corporation, and if we go there, we don't get it and finally somebody will say-you go to Social Welfare Depertment, or Women Welfare Department and you will get the benefit but if we go there, we don't get any help or assistance. Therefore, I request the Government to set up a Women Development Finance Corporation so that the entereoreneurs need not woman approach various agencies to get the assistance or help

With these words, I thank you Mr. Speaker Sir, for giving me this opportunity to speak a fewwords on these demands.

SRI J. A. FERNANDEZ (Nominated).—Mr Speaker, Sir, in supporting the demands under various categories listed for to-day, I would like to make few comments on the Police, Motor Vehicles and Transport departments.

We must concede that the law and order position in Karnataka State is indeed much better than many of the other States in the country. Here, people have a lot more freedom and less worry about their safety than that could have in other neighbouring States. The Police have a great and hazardous occupation and it is, therefare, unfortunate that in the Third Pay Commission, the Police Constable's salay has been given a low priority and their scale is now lower than even the Forest Guards. I am told that the salary of the Police Constable has been put down at a much less figure than these Forest Guards. This is an important disciplined force and it is difficult for them to meet their needs for existence with this low salary. I do believe and recommend that the Government will take a second look at the welfare of the Police Department, in general, and, in particular, the Police Constables who face the brunt of all difficult situations and I request the Government to take suitable action to set this anomaly right. Inadequate salary, however, does not mean to say that attitudes to the public should be changed. I agree that the Police must change their attitudes towards the public, not only in Karnataka but in other parts of the country as well. We are far behind when making comparison with the London Babbies and it is necessary that some sort of training is imparted to our Police Force.

I am aware that Constables are sent for training before they are appointed. Apart from this initial training, I believe that we must open out new avenues of training among the lower cadres of the Police Department. The higher echelons of the department, I honestly believe (I am not making any derogatory statement about IPS Officers) must play a more useful role. They are too sedentary. They must see that their subordinates really work, by working along with them. They must also see that their sub-ordinates will be able to play a more effective role in relation to the public. It is unfortunate that in many cases in Bangalore, we notice flouting of Police Regulations but the Police including the Police Officers seem to be rather passive. I think they should be a little more tough in dealing with traffic and law and order problems so that the Police can keep up its respect and the offenders will behave.

Then Sir, I would like to say that th Police should play a more active role in the control of pollution in the City. Traffic congestion, particularly in Bangalore City is becoming worse and possibly, this is due to inadequate police control. Therefore, this needs to be locked into by the Police Department. Sir, many of the roads have been widened and divided and traffic has been blocked in many places I would like to cite an instance. A Signal light has been

installed in front of the Vidhana Soudha very recently. The worst affected people are the Secretariat employees. I suggest that either the signal is removed to avoid congestion of the traffic or the entire Cubbon Park area be banned form Vehicular traffic. I do honestly believe that we should not allow the vehicular traffic inside Cubbon Park and it is time to develop this Cubbon Park and a time has come to take immediate action in this regard. It is very difficult to walk in the Cubbon Park and we hear cases of some body being molested after dark. Therefore, it should be brightened up and more facilities should de provided in the Cubbon Park and you should see that movement of motor vehicles inside Cubbon Park should be banned. Re-allocation of some of the light signals in the City should also be done. I also request the Government to take necessary steps to avoid or to reduce pollution in the City caused by traffic collection at automatic signals.

As regards the Motor Vehicles Department, well in RTO Offices there is perhaps a little more efficiency but still a lot has to be done. No doubt the Government has increased the number of Offices to help the public but steps should also be taken to improve the efficiency of these Offices. Considering the number of vehicles plying on roads in this City, we find that the largest number of vehicles that are plying on our roads are two wheelers. With the introduction of life time tax on two wheelers, the work-load on the staff R T O Offices have been reduced by about 20%. Therefore the staff ofcould be usefully employed to improve the efficiency of this Department. They should take steps to book tax-evaders.

In regard to single window agency which has been introduced in the RTO's Office, I would say that it sounds good on paper but in actual practice, a lot of outs are still there in and around RTO's Offices. Well, there is room for improvement here. I think the Public Relations Officer of the RTO Offices must be made more conscious of public requirements. I think the time has come to treat the public as customers but this feeling is completely lacking at the Government side and I am sure that the Hon'ble Minister will look into this aspect and take needful action. I believe in the R.T.O. Office they take three weeks for the R. C. Book to reach the owner. This should be speeded up as I don't think they require such a long time I think it can be issued within a day or two considering the work-load of the staff which has been consider ably reduced particularly in Bangalore City consequent on the introduction of life-time tax for two wheelers. I think one of the ways by which some of the mal-practices that are going on in this

departme t can be reduced is by permitting freely the visits of College Students to these offices from time to time Sir' especially College girls if they visit Police Stations, RTO's Offices, Water Board Offices Electricity Board Offices from time to time' I am sure, the public grievances will be redressed much more promptly and efficiently than they are at the moment.

In regard to issue of driving licences, unfortunately, it is not being done very satisfactorily. Sir, most of the driving licences are issued to those trained by private Driving Schools. Within 2/3 weeks, a driver gets his licence and it is hardly enough for him to drive a vehicle and what about the security to the people who walk on the streets ? I, therefore. honestly believes that the Government should introduce a new type of training for drivers or a better monitoring of their performance with special reference to public vehicles like truks and buses.

Therefore, an independent authority perhaps may have to be appointed considering the growth of the city traffic. So much for the Motor Vehicle Department.

Then coming to the Transport Division, the floating population of Bangalore City is about 1 lakh and it will be impossible for the State Transport to tackle this large increase. It is therefore necessary that we should have an integrated approach to the road transport system. This sector should be declared as core sector like Agriculture. Now it is necessary to include this under the core sector. I don't think it is enough to own a house, food, power, water. But how will the poor people in the rural areas benefit from the various technological and other developments that we enjoy in the city unless access is available to the city from the villages. The only way by which this can be achieved is by proper development of roads. I remember we have in 1985 December an agreement with other States particularly neighbouring States for inter-state routes. But the performance of KSRTC leaves much to be desired as the inter-state routes have increased by 17 only. Here again, the route nationalisation is required. If we want to go to Cochin through KSRTC bus, we have to go via Mandya, Mysore Naujangud, Calicut and then we reach Cochin and whereas the other operators take a direct route i.e. Bangalore-Salem-Coimbatore-Cochin. By operating in this round about fashion the Karnataka State Road Transport Corporation will lose lot more in wear and tear and will also cause hardship and fatigue to the driver because of difficult terrains, hilly areas, ghat sections etc., There will be lot of strain on the vehicle as well as on the driver. This should be looked into. I

remember when Mr. Sindhya was the Minister for Transport he has assured that he will bring out a white paper on the KSRTC but that has not been provided to us and this should be done without delay. Another point that comes to my mind is that KSRTC is using Leyland vehicles. There are high powered vehicles I don't think we need such heavy engine vehicles for our transportation. So, the KSRTC may look into the question of using a smaller vehicle with the same wheel base for carring passengers. Then these mini buses do not really serve any purpose the base of the vehicle is the same as the larger ones. Using these mini buses could be codsidered where the density of traffic is high and the roads are narrow. And then optimum use of the existing fleet is not being made because of some of the administrative restrictions. The conductor prepares the trip sheets. Sometimes he prepares the trip sheets at the cost and convenience of the operational income and passenger comfort. So a reasonable assessment is to be made so as to earn more revenue. Then the other problem is regarding bus stops. Bus Stops should not be less than one mile apart.

(SRI M. P. PRAKASH IN THE CHAIR)

Regarding tyre performance it is a sad comentary that the cubic milege has gone down. In 1961-62 it was 62356 and in 1985-86 it has come down by ten thousand. In the international level there has been lot of improvement in the tyre technology and it is not clear why there is reduction in tyre performance. Apart from this The M. V. Dept, have to collect Rs. 150 crores. It is very doubtful that the Motor Vehicles Department will be able to collect more than Rs. 130 crores. The taxation for the new vehicles, in relation, to other States is disproportionally high and that may perhaps account for the fall in new vehicle registration. This may be looked into because a new vehicle means generation of direct and indirect employment and we cannot afford to allow flight of business from this State to another State purely because of the unfavourable tax policy and that is why it is likely that they will ever achieve the Rs. 150 crore mark. Before concluding I would like to make a little point on the service matters and career prospects in the Departments. In both the police and motor vehicle Departments, as well as the Transport, the employees are to some extent working under difficult, tough conditions. for people to us successful in their operations, one must concede some incentives and better improved facilities must be offered to them in order get back from them what we expect. One of the most important aspects is to provide good housing Here may be the police have a little advantage over the Motor Vehicles Depart-

ment. I don't think adequate housing facilities are provided. Many of the employees have to operate in rural areas where facilities are lacking. Some compensation should, therefore, be given, in addition to salaries. Secondly, many of them don't have means of transport. Since the Government might not be able to provide vehicles to every one of them, a scheme of interest free or low interest loans should be given to them so that they can have their own vehicles and was them on the Government work. Government can give them compensatory allowance to cover the cost, depreciation and interest on their investment. This will enable them to be more efficient and perhaps bring increased revenue to the Government. Another aspect I want to stress is development of water transport. I think there is plenty of cargo that can be shifted from Mangalore and Karwar ports to other parts of the country and truck useage could be reduced. If water transport is to be better developed' it will reduce pollution on the roads and prevent congestion. Tourist facilities are not as good as they should be. Long distance bus travel has not come to be considered a happy experience because very few facilities are available. Karnataka has a beautiful land-scape, This can be used with advantage to provide, at least. the bare necessities for travel like confort rooms, waiting rooms, some facilities for refreshment, a little privacy which can be provided without much cost on the part of the Government, or even allow private contractors to do this job. The last point I would like to discuss is the introduction of a kind of a monitoring body comprising of the vehicle manufacturers, tyre manufacturers, fuel suppliers, battery manufacturers etc. because once a vehicle is sold to the State Road Transport Corporation or any Government agency, the responsibility of the manufacturers seems to stop. If the manufacturers say that the bus should give 5 (five) Kilometers a litre, how will they associate themselves with the State Transport Corporation to ensure that their claims are justified? I agree that there has been an improvement in the performance of the vehicles but I think we have to tie down these manufacturers much more effectively than we are doing now. We must be able to bring them down to a little more direct participation in the operation of the State Transport so that we can further improve its efficiency. Similarly for tyres oil and batteries.

MR. CHAIRMAN.—Your time is up.

SRI J A FERNANDEZ —I am pleading for a package deal with these manufacturers because the bulk of the money which is collected goes to feed the manufacturers of the vehicles Let them get a little more

involved in the daily operationsof the Transport to reduce the cost of the transport and the State Transport can reduce its losses. When Sri Sindhya was the Transport Minister, he promised that within one year the State Transport would make profit. But at the rate at which we are going, I thank, even in ten years we can't make a profit, So you have to find some new ways and means by which you can reduce the cost to the common man whose only means of transport is the bus. Thank you very much for the time given.

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೇ, ಜನತಾ ಸರ್ಕಾರ ೧೯೮೩ರಲ್ಲಿ ಅಧಿಕಾರಕ್ಕೆ ಬಂದಾಗ ಕೆಲವು ಹೊಸ ರಾಜಕೀಯ ಸೂತ್ರಗಳನ್ನು ಹಾಗೂ ಘೋಷಣೆಗಳನ್ನು ಅವರು ಮಾಡಿದರು. ಕಾಂಗ್ರೆಸ್‌ನವರು ೩೫ ವರ್ಷಗಳ ಕಾಲ ಅಧಿಕಾರ ನಡೆಸಿ ಬೇಜಾರು ಆಗಿರತಕ್ಕ ಜನ, ನಮಗೆ ಹೊಸದಾಗಿ ಅಧಿಕಾರ ಕೊಟ್ಟಿದ್ದಾರೆ. ನಮ್ಮ ಒಂದು ಪಾಲಿಸಿಗಳನ್ನು ಚುನಾವಣಾ ಘೋಷಣೆಗಳನ್ನು ಜನ ಒಪ್ಪಿದ್ದಾರೆ, ಆದುದರಿಂದ ನಮಗೆ ಅಧಿಕಾರ ಬಂದಿದೆ ಎಂದು ಹೇಳಿದ್ದೀರಿ. ಅದರಲ್ಲಿ ಒಂದು ಘೋಷಣೆ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುತ್ತೇವೆ ಎನ್ನುವುದು ಸಧ್ಯ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದು ಇರಲಿ ಅದನ್ನು ಹೆಚ್ಚಾಗದಿರುವಂತೆ ತಡೆಗಟ್ಟಲೇ ಇಲ್ಲ ಇವರು ಅದನ್ನು ಕೇಳಿದರೆ ನಿಮ್ಮ ಕಾಲದಲ್ಲಿ ಇರಲಿಲ್ಲವೇ ಎಂದು ಉತ್ತರ ಬರಬಹುದು. ಈ ಭ್ರಷ್ಟಾಚಾರ ಇವತ್ತಿನದಲ್ಲ ಹಿಂದೆ ಬ್ರಿಟಿಷರ ಕಾಲದಲ್ಲೂ ಕೂಡಾ ತಹಶೀಲ್ದಾರರು, ಶಿರಸ್ತೇದಾರರುಗಳಿಗೆ ಬೆಣ್ಣೆ, ಹಾಲು ಮೊಸರು ಮುಂತಾದ ವಸ್ತುಗಳನ್ನು ಕೊಡುತ್ತಿದ್ದರು ಇದು ನಿಜ. ಆದರೆ ನಿಮ್ಮ ಘೋಷಣೆ ಪ್ರಕಾರ ಇವತ್ತಿನದಿವಸ ರಾಜಕೀಯ ವಾತಾವರಣವನ್ನು ನೋಡಿದಾಗ ಏನು ನಾವು ವಿಧಾನಸೌಧದಲ್ಲಿ ಇದ್ದೇವೆ ಇಲ್ಲಿಯ ಪೊಲಿಟಿಕಲ್ ಭ್ರಷ್ಟಾಚಾರ ಹೋದರೆ ಕೆಳಗಿನ ಮಟ್ಟದಲ್ಲೂ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಇದು ಮೊದಲು ವಿಧಾನಸೌಧದಿಂದ ಶುರು ಆಗಬೇಕು. ಇಲ್ಲಿ ಎಲ್ಲಾ ಸರಿಯಾದರೆ ಬಹುಶಃ ಕೆಳಗಿನ ಮಟ್ಟದಲ್ಲಿ ತಹಶೀಲ್ದಾರರನ್ನು ನೀವು ಏಕೆ ಮಾಡುತ್ತಿದ್ದೀಯಾ ಎಂದು ಕೇಳುವಂಥ ಹೊಣೆಗಾರಿಕೆ ಬರುತ್ತದೆ ಹಾಗೂ ಒಂದು ರೀತಿಯ ಧೈರ್ಯ ಬರುತ್ತದೆ ಆಕಸ್ಮಿತವಾಗಿ ನನಗೆ ಒಬ್ಬರು ಈ ಬಗ್ಗೆ ಕೇಳಿದರು, ನಾನು ಈ ಬಗ್ಗೆ ಪದೇ ಪದೇ ಏನು ಹೇಳುತ್ತಿದ್ದೇನೆ ಏನೆಂದರೆ 'honesty from the top, efficiency from the bottom' ಈ ಸೂತ್ರವನ್ನು ಇಟ್ಟುಕೊಂಡು ಮಾಡುವುದಾದರೆ ನೀವು ಹೇಳಿದಹಾಗೆ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದಕ್ಕೆ ಆಗದೇ ಇದ್ದರೂ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ ಎಂದು ನಾನು ಹೇಳುತ್ತೇನೆ ಇವತ್ತಿನ ದಿವಸ ಮೇಲಿನವರು ಲಕ್ಷಗಟ್ಟಲೆ ಅಥವಾ ೧೦ ಲಕ್ಷ ೨೦ ಲಕ್ಷವನ್ನು ತೆಗೆದುಕೊಂಡು ಕೆಳಗೆ ಇರತಕ್ಕ ರೆವಿನ್ಯೂ ಇನ್ಸ್‌ಪೆಕ್ಟರ್ ಅಥವಾ ವಿಲೇಜ್ ಅಕೌಂಟೆಂಟ್‌ನನ್ನು ನೀನು ೫೦ ರೂಪಾಯಿ ತೆಗೆದುಕೊಳ್ಳಬೇಡ ಎಂದು ಹೇಳುವುದಕ್ಕೆ ನರನಿಗೆ ನೈತಿಕ ಮಟ್ಟ ಏನಿದೆ ಇವತ್ತು ವಿಧಾನ ಸೌಧದ ಮಟ್ಟದಲ್ಲಿ ರಾಜಕೀಯ ಭ್ರಷ್ಟಾಚಾರವನ್ನು ಕ್ಲೀನ್ ಮಾಡಿದರೆ ನಿಜವಾಗಿಯೂ ಕೂಡಾ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದಕ್ಕೆ ಆಗುತ್ತದೆ. ಆದರೆ ಚುನಾವಣಾ ಪದ್ಧತಿ, ಚುನಾವಣಾ ವೈಶಿಷ್ಟ್ಯ ಚುನಾವಣೆಗೆ ಆಗತಕ್ಕ ಖರ್ಚು, ಇದನ್ನೆಲ್ಲಾ ಲೆಕ್ಕ ಹಾಕಿದರೆ ಇದು ಅನಿವಾರ್ಯ ಅನುಸರಿಸಲೇಬೇಕು ಈ ಘೋಷಣೆಯನ್ನು ಹೇಳುವುದಕ್ಕಿಂತ ಮೊದಲು ಇದನ್ನು ಯೋಚನೆ ಮಾಡಿದರೆ ಚೆನ್ನಾಗಿರುತ್ತಿತ್ತು ಏನು ಭ್ರಷ್ಟಾಚಾರ ನಿರ್ಮೂಲನ ಮಾಡುತ್ತೇವೆಂದು ಹೇಳುತ್ತಿದ್ದೀರಿ ಅದರಲ್ಲಿ ನೀವು ಪೂರ್ಣವಾಗಿ ವಿಫಲರಾಗಿದ್ದೀರಿ ಕಾಂಗ್ರೆಸ್ ಸರ್ಕಾರದಲ್ಲಿ ೨೫ ರೂಪಾಯಿಗಳನ್ನು ಕೊಟ್ಟರೆ ಆಗಲೇ ಪಹಣಿಯನ್ನು ವಿಲೇಜ್ ಅಕೌಂಟೆಂಟ್ ಬರೆದು ಕೊಡುತ್ತಿದ್ದರು ಆದರೆ ಅದರ ಬೆಲೆಯನ್ನು ಈಗ ೫೦ ಅಥವಾ ೬೦ ರೂಪಾಯಿಗೆ ಹೆಚ್ಚು ಮಾಡಿದ್ದರೂ ೫ ದಿವಸ ೧೦ ಸಾರಿ ಅವನ ಮನೆಗೆ ತಿರುಗಬೇಕು ಹಾಗೂ ಅವನು ಎಲ್ಲಿ ಇದ್ದಾನೆ ಅಲ್ಲಿಗೆ ಹೋಗಿ ಬರೆಸಿಕೊಂಡು ಬರಬೇಕಾದ ಪರಿಸ್ಥಿತಿ ಬಂದಿದೆ. ಇದು ನಿಮ್ಮ ಸರ್ಕಾರದ ಒಂದು ನೀತಿ ನಿಮ್ಮ ಸರ್ಕಾರದಿಂದ ಜನಗಳಿಗೆ ಸಿಕ್ಕಿರತಕ್ಕ ಪ್ರತಿಫಲ ಅದರ ಬಗ್ಗೆ ಯೋಚನೆ ಮಾಡದಿದ್ದರೆ ಹೇಗೆ ಆಗುತ್ತದೆ ? ಚುನಾವಣಾ ಘೋಷಣೆಯನ್ನು ಏನು ಮಾಡಿದ್ದೀರಿ ಅದನ್ನು ಇದುವರೆಗೆ ಇಟ್ಟುಕೊಂಡಿದ್ದೀರಿ. ಮೌಲ್ಯಾಧಾರಿತ ರಾಜಕಾರಣ, ನಿಮ್ಮನ್ನು ನಾನು ಕೇಳುತ್ತೇನೆ ಮಾನ್ಯ ರಾಚಯ್ಯನವರೇ ನಿಮ್ಮ ಇಲಾಖೆಯಲ್ಲಿ ಮೌಲ್ಯಾಧಾರಿತ ರಾಜಕಾರಣ ಮಾಡಿದ್ದೀರಾ ? ನಾನು ಸುಮಾರು ೩೫

ವರ್ಷಗಳಿಂದ ರಾಜಕೀಯದಲ್ಲಿದ್ದೇನೆ ಯಾವ ಸರ್ಕಾರದವರು, ಯಾವ ಮುಖ್ಯಮಂತ್ರಿಗಳೂ ಈ ಮಾತನ್ನು ಹೇಳಿರಲಿಲ್ಲ. ನೀವು ಈ ಮಾತನ್ನು ಹೇಳಿದಾಗ ಏನಾದರೂ ಮೌಲ್ಯಗಳನ್ನು ಜನಗಳ ಮುಂದೆ ನೀವು ಇಡಬಹುದು ಅಡ್ಮಿನಿಸ್ಟ್ರೇಷನ್‌ನಲ್ಲಿ ನೀವು ಮಾಡಿರತಕ್ಕ ನೀತಿ ನಿಯಮ, ಧರ್ಮ ಇವುಗಳು ನಿಮ್ಮ ಅಧಿಕಾರದಲ್ಲಿ ಇವೆಯೋ ಎಂದು ನೋಡಿದರೆ ಈ ಮೂರನ್ನು ಬಿಟ್ಟ ಸರ್ಕಾರ ಇವಾಗಿದೆ ಇದನ್ನು ನಾನು ಹೇಳುತ್ತಿಲ್ಲ. ಜನ ಹೇಳುತ್ತಾರೆ ಮೂರು ಬಿಟ್ಟ ಸರ್ಕಾರ ಅಂದರೆ, ಒಂದು ನೀತಿಯಿಲ್ಲ ಒಂದು ನಿಯಮವಿಲ್ಲ ಒಂದು ಧರ್ಮವಿಲ್ಲ ನನ್ನ ಕ್ಷೇತ್ರದ ಕ್ಷೇತ್ರಾಭಿವೃದ್ಧಿ ಅಧಿಕಾರಿಯಾಗಿ ಪ್ರಮೋಷನ್ ಸಿಕ್ಕಿ ಅವರನ್ನು ಪಿರಿಯಾಪಟ್ಟಣಕ್ಕೆ ವರ್ಗಾಯಿಸಲಾಯಿತು. ಅವರು ಜಿಲ್ಲಿಗೆ ಹೋದ ಒಂದು ಶಿಗಳಿ ನಲ್ಲಿಯೇ ವಾಪಸ್ಸು ಬಂದರು ಏತಕ್ಕೆ ವಾಪಸ್ಸು ಬಂದಿರಿ ಎಂದು ಕೇಳಿದ್ದಕ್ಕೆ ನನ್ನನ್ನು ಕೋಲಾರಕ್ಕೆ ಹಾಕಿದ್ದಾರೆ. ಕಾರಣ ನಾನೂ ಒಬ್ಬ ಮುಸ್ಲಿಮ್ ಅಲ್ಲಿರತಕ್ಕ ತಹಶೀಲ್ದಾರ್‌ರವರು ಮುಸ್ಲಿಮ್ ಆಗಿರುವುದರಿಂದ ಒಂದೇ ತಾಲ್ಲೂಕಿನಲ್ಲಿ ಒಂದೇ ಜಾತಿಯ ಇಬ್ಬರು ತಾಲ್ಲೂಕು ಅಧಿಕಾರಿಗಳು ಇರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಅದು ಮೊದಲಿನಿಂದಲೂ ನಡೆದುಕೊಂಡು ಬಂದಂತಹ ಸರ್ಕಾರದ ನೀತಿ ಒಬ್ಬ ಮುಸ್ಲಿಮ್ ತಹಶೀಲ್ದಾರ್ ಇದ್ದ ಅಂದರೆ ಮತ್ತೊಬ್ಬ ಕ್ಷೇತ್ರಾಭಿವೃದ್ಧಿ ಅಧಿಕಾರಿ ಏತಕ್ಕೆ ಇರಬಾರದು ? ಮಾನ್ಯ ವೀರಣ್ಣನವರ ಕ್ಷೇತ್ರದಲ್ಲಿ ನೂರು ಜನ ಒಂದೇ ಜಾತಿಯ ಜನರು ಇದ್ದಾರೆ. ಇದನ್ನು ಯಾವ ನೀತಿಯೆಂದು ಹೇಳುತ್ತೀರಿ ? ಇದನ್ನು ಸಮರ್ಥನೆ ಮಾಡಿಕೊಳ್ಳುವದಕ್ಕೆ ಸಾಧ್ಯವೆ ? ನಾನು ಒಬ್ಬ ಅಧಿಕಾರಿಯನ್ನು ಕೇಳಿದರೆ ಏತಕ್ಕೆ ಕೊಡುವುದಿಲ್ಲ ? ನಮ್ಮಲ್ಲಿ ಒಬ್ಬರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಇದ್ದರು ಅವರನ್ನು ವೈ. ಕೆ. ರಾಮಯ್ಯನವರು ಮಂತ್ರಿಗಳಾಗಿದ್ದಾಗ ಬೇಕೆಂದು ಹಾಕಿಸಿಕೊಂಡರು ನನಗೆ ಏನೂ ಹೊಟ್ಟೆಹುರಿ ಬರಲಿಲ್ಲ. ನನಗೂ ಒಬ್ಬರೂ ತಹಶೀಲ್ದಾರ್‌ರವರು ಸಿಕ್ಕಿದರು, ಅವರನ್ನು ನನ್ನ ತಾಲ್ಲೂಕಿಗೆ ವರ್ಗ ಮಾಡಿಕೊಡಿ ಎಂದು ಮಾನ್ಯ ಶ್ರೀ ಬೊಮ್ಮಾಯಿಯವರನ್ನು ಕೇಳಿದೆ. ಅದಕ್ಕೆ ಅವರು ಹೇಳಿದರು ನೀವು ಲಿಂಗಾಯಿತರು ಈಗಾಗಲೇ ತಹಶೀಲ್ದಾರ್ ಲಿಂಗಾಯಿತರು ಇದ್ದಾರೆ, ಕ್ಷೇತ್ರಾಭಿವೃದ್ಧಿ ತಹಶೀಲ್ದಾರರು ಅಧಿಕಾರಿಗಳನ್ನಾಗಿ ಲಿಂಗಾಯಿತರೇ ಆಗಿರುವವರನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರು ಸಬ್ ಇನ್ಸ್‌ಪೆಕ್ಟರ್ ಒಂದೇ ಜಾತಿ, ತಹಶೀಲ್ದಾರ್ ಒಂದೇ ಜಾತಿ ಕ್ಷೇತ್ರಾಭಿವೃದ್ಧಿ ಅಧಿಕಾರಿ ಒಂದೇ ಜಾತಿ ಎ.ಇ.ಒ. ಒಂದೇ ಜಾತಿ, ರೆವಿನ್ಯೂ ಇನ್ಸ್‌ಪೆಕ್ಟರ್ ಒಂದೇ ಜಾತಿ ಈ ತರಹ ಸುಮಾರು ೧೦೦ ಜನರನ್ನು ಹೇಗೆ ಕೊಟ್ಟಿದ್ದೀರಿ ?

ಶ್ರೀ ಜಿ. ರಾಚಯ್ಯ.—ಎಲ್ಲಿದೆ ?

ಶ್ರೀ ಜಿ. ಎಸ್. ಶಿವನಂಜಪ್ಪ.—ಕೊರಟಗೆರೆಯಲ್ಲಿದೆ.

ಶ್ರೀ ವೀರಣ್ಣ.—ಮಾನ್ಯ ಸದಸ್ಯರು ಕೊರಟಗೆರೆ ಎಂದು ಹೇಳಿದ್ದರಿಂದ ನಾನು ಮಾತನಾಡಬೇಕಾಗಿದೆ. ಎ.ಇ.ಒ. ಒಕ್ಕಲಿಗ ಜನಾಂಗದವರು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಬೆಸ್ತರು ಮಾಹಿತಿ ಇದ್ದರೆ ಮಾತನಾಡಬೇಕು ಇಲ್ಲದಿದ್ದರೆ ಹಾಗೆ ಮಾತನಾಡಬಾರದು ಸದನದಲ್ಲಿ ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಬೇಕು. ಆ ತರಹ ಮಾತನಾಡುವುದು ಸರಿಯಾದುದಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ —ನಾನು ಜವಾಬ್ದಾರಿಯಿಂದಲೇ ಮಾತನಾಡುತ್ತಿದ್ದೇನೆ.

ಶ್ರೀ ವೀರಣ್ಣ.—ಎ.ಇ.ಓ. ಅವರು ನನ್ನ ಜಾತಿಗೆ ಸೇರಿದ್ದರೆ ನಾನು ಈಗಲೇ ರಾಜೀನಾಮೆಯನ್ನು ಕೊಡುತ್ತೇನೆ. ಕೊರಟಗೆರೆಯಲ್ಲಿರತಕ್ಕ ಎ.ಇ.ಒ. ನನ್ನ ಜಾತಿಗೆ ಸೇರಿದ್ದರೆ ನಾನು ಈಗಲೇ ರಾಜೀನಾಮೆಯನ್ನು ಕೊಡುತ್ತೇನೆ, ಇಲ್ಲದಿದ್ದರೆ ನೀವು ರಾಜೀನಾಮೆಯನ್ನು ಕೊಡುತ್ತೀರಾ ? ಏತಕ್ಕೆ ಸುಮ್ಮನೆ ಹೇಳುತ್ತೀರಿ ?

ಶ್ರೀ ಜಿ. ಎಸ್ ಶಿವನಂಜಪ್ಪ.—ಒಬ್ಬ ಅಧಿಕಾರಿ ಒಂದು ಜಾತಿಯವರು ಇದ್ದಾರೆಂದು ಮತ್ತೊಬ್ಬ ಅಧಿಕಾರಿ ಅದೇ ಜಾತಿಗೆ ಸೇರಿದವರೆಂದು ಅವರನ್ನು ಅಲ್ಲಿಂದ ವರ್ಗಾವಣೆ ಮಾಡಿದ್ದಾರೆ. ಒಂದು ಜಾತಿಯವರು ೧೦ ಜನರಿಗಿಂತ ಜಾಸ್ತಿ ಇದ್ದರೆ ಅವರು ರಾಜೀನಾಮೆಯನ್ನು ಕೊಡುತ್ತಾರೆಯೆ? ಅವರ ಹತ್ತಿರ ರಾಜೀನಾಮೆಯನ್ನು ಬರೆಸಿಕೊಳ್ಳಿ, ನಾನು ರಾಜೀನಾಮೆಯನ್ನು ಕೊಡುತ್ತೇನೆ. ಮೈನಾರಿಟಿ ಕಮ್ಯುನಿಟಿಯ ಒಬ್ಬ ಮುಸ್ಲಿಮ್ ಇದ್ದರೆ ಮತ್ತೊಬ್ಬರು ಅದೇ ಜಾತಿಯವರು ಬೇಡವೆಂದು ವರ್ಗಾವಣೆ ಮಾಡಿದ್ದಾರೆ. ಮಾನ್ಯ ವೀರಣ್ಣನವರು ಎಷ್ಟು ಜನರನ್ನು ಬೇಕಾದರೂ ಹಾಕಿಸಿಕೊಳ್ಳಲಿ ನಾನೇನು ಬೇಡ ಅನ್ನುವುದಿಲ್ಲ ನನಗೇನು ಲಾಸ್ಸೇನು ಇಲ್ಲ, ಇದು ಸರ್ಕಾರದ ನೀತಿಯೆ ? ಜನತಾ ಪಕ್ಷದ ಶಾಸಕರಿಗೆ ಒಂದು ಕಾಂಗ್ರೆಸ್ ಪಕ್ಷದ ಶಾಸಕರಿಗೆ ಒಂದು ನೀತಿ ಅದಕ್ಕಾಗಿಯೇ ಇದನ್ನು

ಮೂರನ್ನು ಬಿಟ್ಟ ಸರ್ಕಾರವೆಂದು ಹೇಳಿದ್ದೇನೆ. ನೀವು ಸಮರ್ಥನೆ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿ ನೀತಿ ನಿಯಮ ಮತ್ತು ಧರ್ಮ ಇವು ನಿಮ್ಮಲ್ಲಿ ಇವೆಯೇ ? ಎಂದು ಕೇಳುತ್ತಿದ್ದೇನೆ. ಈ ತರಹ ಅಡ್ಮಿನಿಸ್ಟ್ರೇಷನ್ ಇಟ್ಟುಕೊಂಡು ಮೌಲ್ಯಾಧಾರಿತ ರಾಜಕಾರಣದಿಂದ ಭ್ರಷ್ಟಾಚಾರವನ್ನು ತೆಗೆಯುತ್ತೇವೆಂದರೆ ಅದು ಸಾಧ್ಯವೆ ? ಆದ್ದರಿಂದ ನಾನು ನಿಮಗೆ ಏನು ಹೇಳುತ್ತಿದ್ದೇನೆಂದರೆ ನೀವು ಜನರಿಗೆ ಕೊಟ್ಟಂತಹ ವಚನಗಳನ್ನು ನೀವು ಯಾವುದೇ ರೀತಿಯಲ್ಲಿ ಪರಿಪಾಲನೆ ಮಾಡುವುದಕ್ಕೆ ಆಗಿಲ್ಲ, ಕೇವಲ ಇದು ಅಗ್ಗದ ಪ್ರಚಾರದಿಂದ ಇದು ಸಾಧ್ಯವಿಲ್ಲ. ಇದರಿಂದ ಜನರ ಹೊಟ್ಟೆ ತುಂಬಿಸುತ್ತೇವೆಂದರೆ ಅದು ಸಾಧ್ಯವಿಲ್ಲ.

ಶ್ರೀ ಮದನಗೋಪಾಲ ನಾಯಕ್.—ಮಾನ್ಯ ಬೊಮ್ಮಾಯಿಯವರ ಕ್ಷೇತ್ರದಲ್ಲಿ ಯಾವಯಾವ ಜಾತಿಯ ಅಧಿಕಾರಿಗಳು ಇದ್ದಾರೆಂಬುದನ್ನು ಹೇಳಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅದು ನನಗೆ ಗೊತ್ತಿಲ್ಲ.

ಶ್ರೀ ಎಂ. ರಾಮಪ್ಪ —ಮಾನ್ಯ ಪ್ರಕಾಶ್‌ರವರ ತಾಲ್ಲೂಕಿನಲ್ಲಿ ಬಿ.ಡಿ.ಒ, ಯಾರು? ತಹಶೀಲ್ದಾರ್ ಯಾರು ಎಂಬುದು ಎಲ್ಲರಿಗೂ ಗೊತ್ತಿದೆ. ಎಲ್ಲಾ ಕಡೆಗೂ ಇದು ನಡೆಯುತ್ತಾ ಇದೆ.

ಶ್ರೀ ಎಂ. ಸಿ. ಪ್ರಕಾಶ್ (ಅಧ್ಯಕ್ಷ ಪೀಠದಿಂದ).— ಮಾನ್ಯ ರಾಮಪ್ಪನವರ ಕ್ಷೇತ್ರದಲ್ಲಿ ಯಾರಿದ್ದಾರೆ ?

ಶ್ರೀ ವೀರಣ್ಣ.—ಕಾಮಾಲೆ ರೋಗ ಇದ್ದವರಿಗೆ ನೋಡಿದ್ದೆಲ್ಲಾ ಹಳದಿಯಾಗಿ ಕಾಣುತ್ತದೆ. ಮಾನ್ಯ ಶಿವನಂಜಪ್ಪನವರಿಗೆ ಕಾಮಾಲೆ ರೋಗ ಇದ್ದ ಹಾಗ ಕಾಣುತ್ತದೆ.

ಶ್ರೀ ಎಂ. ರಾಮಪ್ಪ.—ಅದು ನಮಗಲ್ಲ ಇರೋದು. ಅದು ಇರುವುದು ನಿಮಗೆ. ಪರೀಕ್ಷೆಗೆ ಒಳಗಾಗಬೇಕಾದವರು ನೀವು. ನಾವು ಅಲ್ಲ, ಬಳ್ಳಾರಿ ತಾಲ್ಲೂಕಿನಲ್ಲಿ ಹೇಳಿದ್ದೇನೆ. ಅಲ್ಲಿ ಬಿ. ಡಿ. ಓ. ಯಾರಿದ್ದಾರೆ. ತೋರಿಸಿ ?

ವೈಸ್ ಚೇರ್ಮನ್.—ನಿಮ್ಮ ಅವಕಾಶ ಬಂದಾಗ ನೀವು ಮಾತನಾಡಿ. ಈಗ ಬೇಡ.

ಶ್ರೀ ಜಿ. ಎಸ್. ಶಿವನಂಜಪ್ಪ.—ಈಗ ನನ್ನ ಜಾತಿಯೊಳಗೆ. ನನ್ನ ಸ್ನೇಹಿತನೊಬ್ಬ ಜನಾರ್ಧನ ಪೂಜಾರಿಯವರ ಸಾಲಮೇಳಕ್ಕೆ ಬಂದ. ಆವೊತ್ತು ಸರ್ಕಾರಿ ರಜೆ. ಅದನ್ನು ಜನತಾ ಪಕ್ಷದ ಒಬ್ಬ ಎಂ. ಎಲ್. ಎ. ನೋಡಿದರು. ಡಿಪಾರ್ಟ್‌ಮೆಂಟಿನ ಮುಖ್ಯಸ್ಥರಿಗೆ ಮಂತ್ರಿಗಳಿಗೆ ಬರೆದರು ಏನೆಂದರೆ ಆತ ರಾಜಕೀಯ ಮಾಡುತ್ತಾನೆ, ಕೂಡಲೇ ಅವನನ್ನೂ ಗುಲ್ಬರ್ಗಾಕ್ಕೆ ಹಾಕಬೇಕು ಎಂದು. ಅವನನ್ನ ಗುಲ್ಬರ್ಗಾಕ್ಕೆ ಹಾಕಿಯೇ ಬಿಟ್ಟರು. ನಾನು ಮತ್ತು ನಮ್ಮ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಬಸವರಾಜಪ್ಪನವರು ಮುಖ್ಯಮಂತ್ರಿಗಳಿಗೆ ಅರ್ಜಿ ಕೊಟ್ಟು ಏಕೆ ಹೀಗೆ ಮಾಡಿದ್ದೀರಿ ಎಂದು ಕೇಳಿದೆವು. ಅವರು ಅದಕ್ಕೆ ರಿಪೋರ್ಟ್ ತರಿಸುತ್ತೇನೆ ಎಂದು ಹೇಳಿದರು. ರಿಪೋರ್ಟ್ ಬಂತು. ಅದರಲ್ಲಿ ಆತ ಯಾವುದೇ ತರಹದ ರಾಜಕೀಯ ಮಾಡುವ ಮನುಷ್ಯ ಅಲ್ಲ. ಒಳ್ಳೆಯ ಕೆಲಸಗಾರ. ತುಮಕೂರಿನಲ್ಲೇ ಇಟ್ಟುಕೊಳ್ಳಿ ಎಂದು ಹೇಳಿದರೂ. ಇರಲಿಲ್ಲ. ಗುಲ್ಬರ್ಗಾಕ್ಕೆ ಟ್ರಾನ್ಸ್‌ಫರ್ ಮಾಡಿದರು. ಇದು ನಿಮ್ಮ ನೀತಿಯೇ ಇದು ನ್ಯಾಯವೆ ? ನೀವು ಆಡಳಿತದಲ್ಲಿ ಕೈಹಾಕುತ್ತಿಲ್ಲವೆ ? ಇದು ಸರಿಯೇ ಎಂದು ನಾನು ನಿಮ್ಮನ್ನು ಕೇಳತಕ್ಕದ್ದು. ಈಗ ನೀವು ಓಟು ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಇನ್ನೂ ಎರಡು–ಮೂರು ವರ್ಷ ಇದೆ. ಭ್ರಷ್ಟಾಚಾರ ಕಡಿಮೆ ಮಾಡುತ್ತೇವೆ ಎಂದು ಹೇಳಿದವರು ನೀವು. ನಮಗೆ ಒಂದು ಕಾನೂನು, ನಿಮಗೇ ಒಂದು ಕಾನೂನು. ಬಸವಣ್ಣನವರು ಹೇಳಿದ್ದರು– "ವಿಪ್ರೋತ್ತಮದೇ, ನಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ" ಎಂದು. ಏಕೆ ಈ ವ್ಯವಸ್ಥೆ ಮಾಡುತ್ತಿದ್ದೀರಿ ? ಯಾರಾದರೂ ಈಗ ಕಾನೂನಿನ ಬಗ್ಗೆ ಯೋಚನೆ ಮಾಡುತ್ತಿದ್ದಾರೆಯೋ ಜನಗಳ ಬಗ್ಗೆ ಯೋಚನೆ ಮಾಡುತ್ತಿದ್ದಾರೆಯೆ ? ಅಧಿಕಾರ ನಡೆಸುವಾಗ ಹಸ್ತಕ್ಷೇಪ ಮಾಡದೇ ಇರುವುದಕ್ಕೆ ಸಾಧ್ಯವಿದೆಯೆ ? ತಾವು ಬಹಳ ವರ್ಷಗಳಿಂದ ರಾಜಕೀಯದಲ್ಲಿ ಇರುವವರು. ಹಿಂದೆ ಮಂತ್ರಿಗಳಾಗಿದ್ದೀರಿ. ಆದರೆ ಹೀಗೆ ವರ್ತನೆ ಮಾಡಿದ್ದುದು ನೋಡಿಲ್ಲ. ಮತ್ತೊಂದು ಉದಾಹರಣೆ ಕೊಡಬೇಕೆಂದರೆ ದೇವರಾಜ್ ಅರಸು ಅವರ ಕಾಲದಲ್ಲಿ ಕೋಳಿಗೊಂದು ಮಂಡಳಿ, ಕೊಕ್ಕರೆಗೊಂದು ಮಂಡಳಿ ಕೋಳಿಮೊಟ್ಟೆಗೊಂದು ಮಂಡಳಿ ಎಂದು ೪೦–೫೦ ಮಂಡಳಿಗಳನ್ನು ಮಾಡಿದ್ದರು. ಪುನರ್ವಸತಿ ಕೇಂದ್ರಗಳಲ್ಲಿ ಒಬ್ಬೊಬ್ಬರಿಗೂ

ಅಧಿಕಾರ ಕೊಡಬೇಕೆಂದು ಮಾಡಿದ್ದರು. ಗುಂಡೂರಾಯರು ಬಂದರು, ಧೈರ್ಯವಾಗಿ ಇವುಗಳನ್ನು ಕಿತ್ತುಹಾಕಿದರು. ೪೦ ಮಂಡಳಿಗಳು ಬೇಡ, ರಾಜ್ಯದ ಬೊಕ್ಕಸಕ್ಕೆ ಇದು ಆತಂಕವನ್ನು ತರತಕ್ಕದ್ದು ಇದನ್ನು ಮಾಡುವುದು ಬೇಡ ಎಂದು ಕಿತ್ತುಹಾಕಿದರು. ನೀವು ಬಂದ ಮೇಲೆ ಮತ್ತೆ ೪೦ ಮಂಡಳಿಗಳನ್ನು ಮಾಡಿದಿರಿ. ಇವುಗಳಿಂದ ಜನರಿಗೆ ಏನಾದರೂ ಅನುಕೂಲ ಆಗಿದೆಯೇ ? ಮಂಡಳಿಗಳಲ್ಲಿ ನೇಮಕ ಮಾಡಿರತಕ್ಕ ಅಧ್ಯಕ್ಷರುಗಳಿಗೂ ಅಧಿಕಾರಿಗಳಿಗೂ ಹೊಂದಾಣಿಕೆ ಇಲ್ಲ. ವಾರಪತ್ರಿಕೆಯಲ್ಲಿ ಇದು ಸವಿಸ್ತಾರವಾಗಿ ಬಂದಿದೆ. ಕೆಲಸ ಮಾಡುವುದಕ್ಕೆ ಆಗದೇ ಹೋದರೆ ಮಂಡಳಿಗಳನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ ? ಕೆಎಸ್‌ಆರ್‌ಟಿಸಿ ಅಲ್ಲಿನ ಎಂ. ಡಿ. ಯವರು ಒಂದು ಆದೇಶವನ್ನು ಹೊರಡಿಸಿದ್ದಾರೆ. ಅಧ್ಯಕ್ಷರ ಯಾವುದೇ ಮಾತನ್ನು ನೀವು ಕೇಳಕೂಡದು ಎಂದು. ಇದು ಆಡಳಿತವೇ ತಮಾಷೆಯೇ ತಿಂಗಳಿಗೆ ಏಳೂವರೆ ಸಾವಿರ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಒಬ್ಬ ನಿಗಮದ ಅಧ್ಯಕ್ಷರಿಗೆ ಎಲ್ಲಾ ಅನುಕೂಲತೆಗಳನ್ನೂ ಕೊಡುತ್ತಾರೆ. ಕಾರು, ಡ್ರೈವರು, ಟೈಪಿಸ್ಟ್, ಕ್ಲರ್ಕ್ ಎಲ್ಲಾ ಲೆಕ್ಕ ಹಾಕಿದರೆ ಎಷ್ಟು ಆಗುತ್ತದೆ ? ಸುಮಾರು ೨೫ ಸಾವಿರ ರೂಪಾಯಿಗಳು ಆಗಬಹುದು. ೨೫ ಸಾವಿರ × ೪೦ × ೧೨ ಅಂದರೆ ಎಷ್ಟಾಯಿತು ? ಇದನ್ನು ಏತಕೋಸ್ಕರ ಮಾಡಿದ್ದೀರಿ, ಯಾರ ಅನುಕೂಲಕೋಸ್ಕರ ಮಾಡಿದ್ದೀರಿ ಎಂದು ನಿಮ್ಮನ್ನು ನಾನು ಪ್ರಶ್ನೆ ಮಾಡಬೇಕಾಗುತ್ತದೆ.

೩.೩೦ ಪಿ. ಎಂ.

ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲದೆ ಕೆಲಸ ಮಾಡುವ ಈ ನಿಗಮಗಳು, ಕಾರ್ಪೊರೇಷನ್‌ಗಳು ಏಕೆ ಬೇಕು ? ಇವುಗಳಿಂದ ಸರ್ಕಾರಕ್ಕಾಗಲೀ, ಜನತೆಗಾಗಲಿ ಅಥವಾ ನಿಗಮಗಳಿಗೇ ಆಗಲೀ ಏನಾದರೂ ಅನುಕೂಲ ಆಗಿದ್ದರೆ ಸಂತೋಷಪಡೋಣ, ನಾನು ಸ್ವಾಗತ ಮಾಡುತ್ತೇನೆ. ಆದರೆ ಯಾರಿಗೂ ಅನುಕೂಲವಿಲ್ಲ. ಇವತ್ತು ಕರೀಗೌಡರ ಪರಿಸ್ಥಿತಿ ಯಾವ ಶತ್ರುಗಳಿಗೂ ಬೇಡ. ಬೇಕಾದರೆ ಅವರನ್ನೇ ಕೇಳಿ, ಒಂದಾದರೂ ಕೆಲಸ ಮಾಡುವುದಕ್ಕಾಗುತ್ತದೆಯೇ ಎಂದು ಕೆ. ಹೆಚ್. ಡಿ. ಸಿ. ನಲ್ಲೂ ಹೊಂದಾಣಿಕೆ ಇಲ್ಲ. ಯಾವ ಉದ್ದೇಶಕ್ಕಾಗಿ ಕಾರ್ಪೊರೇಷನ್‌ಗಳಿಗೆ ಹಣ ಖರ್ಚು ಮಾಡುತ್ತಿದ್ದೀರಿ ? ಅನಾವಶ್ಯಕವಾಗಿ, ಕೇವಲ ಕೆಲವರನ್ನು ತೃಪ್ತಿ ಮಾಡುವುದಕ್ಕೆ ಸರ್ಕಾರದ ಹಣ ಖರ್ಚು ಮಾಡುತ್ತಿದ್ದೀರಿ. ಈಗ್ಗೆ ೬ ತಿಂಗಳಿಂದ ಕುಡಿಯುವ ನೀರಿಗೆ ಒಂದು ಬೋರ್‌ವೆಲ್ ಕೊಡಿ ಎಂದು ಕೇಳುತ್ತಿದ್ದೇನೆ. ಒಂದು ಬೋರ್‌ವೆಲ್ ಹಾಕಿಸುವುದಕ್ಕಾಗಲಿಲ್ಲ. ೪೦-೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾ, ಹಾಳು ಮಾಡುತ್ತಾ, ಇಲ್ಲಿ ಒಬ್ಬ ಹಳ್ಳಿ ಬಡ ರೈತನಿಗೆ ನೀರು ಕೊಡುವುದಕ್ಕಾಗಿಲ್ಲ. ಈ ಸರ್ಕಾರ ಏಕೆ ಬೇಕು ? ಕೇವಲ ಅಧಿಕಾರಕ್ಕೋಸ್ಕರ ನೀವು ಇರುತ್ತೇವೆಂದರೆ ಇರಿ. ತಾವು ಇನ್ನೂ ೩-೪ ವಿಚಾರ ಹೇಳಿದ್ದೀರಿ. ಮೌಲ್ಯಾಧಾರಿತ ರಾಜಕಾರಣ, ಭ್ರಷ್ಟಚಾರ ತೆಗೆಯುತ್ತೇವೆ, ಒಳ್ಳೆಯ ಸ್ವಚ್ಛವಾದ ಅಧಿಕಾರ ಕೊಡುತ್ತೇವೆ, ನಮಗೂ ನಿಮಗೂ ಯಾವುದೇ ಭೇದ ಇಲ್ಲ ಎಂದು ಅಗ್ಗದ ಪ್ರಚಾರ ಮಾಡಿಕೊಳ್ಳುತ್ತೀರಿ. ದಯವಿಟ್ಟು ಇನ್ನು ಮುಂದೆ ಇದನ್ನು ತಪ್ಪಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ನಿಮ್ಮ ಚುನಾವಣಾ ಪ್ರಣಾಳಿಕೆಯಿಂದ ತೆಗೆದುಹಾಕಬೇಕು. ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಇದು ಇಲ್ಲದಿದ್ದರೆ ನಾನು ಕೇಳುತ್ತಾ ಇರಲಿಲ್ಲ. ಹಿಂದಿನ ಸರ್ಕಾರ ಏನು ತಪ್ಪು ಮಾಡಿದ್ದಾರೆ, ಅದನ್ನು ನಾವು ಕಂಡಿದ್ದೇವೆ, ತಪ್ಪನ್ನು ಸರಿಪಡಿಸಿಕೊಂಡು ಹೋಗುತ್ತೇವೆಂದು ಹೇಳುತ್ತಿದ್ದ ಜನ, ಇವತ್ತು ಅದೇ ದಾರಿಯಲ್ಲಿ ಹೋದರೆ ನೀವು ಏಕೆ ಇರಬೇಕು ? ಹಿಂದೆ ೨೫ ರೂಪಾಯಿ ಲಂಚ ಕೊಟ್ಟರೆ ೨೫ ನಿಮಿಷದಲ್ಲಿ ಕೆಲಸ ಆಗುತ್ತಿತ್ತು. ಇವತ್ತು ೭೫ ರೂಪಾಯಿ ಕೊಟ್ಟರೂ, ಒಬ್ಬ ವಿಲೇಜ್ ಅಕೌಂಟೆಂಟ್‌ನಿಂದ ೫ ವರ್ಷವಾದರೂ ಕೆಲಸ ಆಗುವುದಿಲ್ಲ. ನಿಮ್ಮ ಸರ್ಕಾರದಲ್ಲಿ ವಿಲೇಜ್ ಅಕೌಂಟೆಂಟ್‌ಗಳು ಎಲ್ಲೆಲ್ಲಿ ಇದ್ದಾರೆ. ಅವರುಗಳು ಇವತ್ತು ಸೈಟ್ ವ್ಯಾಪಾರ, ವೆಹಿಕಲ್ ಏಜೆನ್ಸಿ ಅಥವಾ ಒಬ್ಬೊಬ್ಬ ರಾಜಕಾರಣಿ ಹಿಂದೆ ಹೋಗುತ್ತಿದ್ದಾರೆ. ಇವರ ಮೇಲೆ ನಿಮ್ಮ ಹಿಡಿತ ಏನಾದರೂ ಇದೆಯೇ ಎಂದು ನಾನು ಕೇಳುತ್ತಿದ್ದೇನೆ. ೪ ವರ್ಷಗಳ ನಿಮ್ಮ ಅಧಿಕಾರದಲ್ಲಿ ಅಧಿಕಾರಿಗಳು ನಿಮ್ಮ ಮಾತ, ಕೇಳಿಲ್ಲ, ನೀವು ಅವರ ಮಾತು ಕೇಳುವುದಿಲ್ಲ. ನೀವು ಹೇಳಿದ್ದು ಅವರಿಂದ ಆಗುತ್ತಾ ಇಲ್ಲಾ

ಅವರು ಹೇಳಿದ್ದುದು ನಿಮ್ಮಿಂದ ಆಗುತ್ತಾ ಇಲ್ಲ. ಇವತ್ತು ನಿಮ್ಮ ಆಡಳಿತ ಪೂರ್ಣವಾಗಿ ಕುಸಿದು ಬಿದ್ದಿದೆ. ಎಲ್ಲಾ ಕಡೆಯೂ, ಇವತ್ತು ಸರ್ಕಾರ ಇಲ್ಲ ಎನ್ನುವ ಭಾವನೆ ಜನರಿಗೆ ಬಂದಿದೆ. ಮೊನ್ನೆ ಚುನಾವಣೆಗಳಲ್ಲಿ ಜಿಲ್ಲಾ ಪರಿಷತ್ತಿನಲ್ಲಿ ಗೆದ್ದಿದ್ದೇವೆ, ಮಂಡಲ್ ಪಂಚಾಯಿತಿ ಚುನಾವಣೆಗಳಲ್ಲಿ ಗೆದ್ದಿದ್ದೇವೆ ಎಂದು ನೀವು ಹೇಳಬಹುದು. ಒಂದು ಉದಾಹರಣೆ ಕೊಡುತ್ತೇನೆ. ಕಲ್ಲೂರಿನಲ್ಲಿ ೭೫೦ ಜನ ಇರತಕ್ಕಂಥ ಒಂದು ಹರಿಜನ ಕೇರಿ. ಇದನ್ನು ಜನರಲ್ ಕಾನ್‌ಸ್ಟಿಟ್ಯೂಯನ್ಸಿ ಎಂದು ಮಾಡಿದ್ದೀರಿ, ಇನ್ನೊಂದು ಕಡೆ ೫೦ ಜನ ದೇವಾಂಗದವರಿದ್ದಾರೆ, ಅಲ್ಲಿ ರಿಸರ್ವ್ ಕ್ಷೇತ್ರ ಎಂದು ಮಾಡಿದ್ದೀರಿ. ಕುನ್ನಾಳದಲ್ಲಿ ೭೮೦ ಜನ ಓಟು ಕೊಡತಕ್ಕ ಮುಸಲ್ಮಾನರು ಇರತಕ್ಕ ಜಾಗದಲ್ಲಿ ಒಂದೇ ಒಂದು ಸೀಟು. ದೊಡ್ಡ ಕುನ್ನಾಳದಲ್ಲಿ ೩೦೦ ವೋಟಿಗೆ ಮೂರು ಸೀಟು ಮಾಡಿದಿರಿ. ಎಂ. ಹೆಚ್. ಪಟ್ಟಣದಲ್ಲಿ ಮಂಡಲ್ ಪಂಚಾಯಿತಿ ಚುನಾವಣೆಗೆ ೭೯ ಜನಕ್ಕೆ ಒಂದು ಬ್ಲಾಕ್‌ಗೆ ಸೀಟು. ಇದು ನೀವು ಚುನಾವಣೆ ಮಾಡಿರತಕ್ಕ ವೈಖರಿ. ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನೀವು ಇವತ್ತು ಇದರ ಬಗ್ಗೆ ಬೇಕಾದರೆ ರಿಟ್ ಹೋಗಲಿ ಎಂದು ಹೇಳಬಹುದು. ತಿನ್ನುವುದಕ್ಕೆ ಅನ್ನ ಇಲ್ಲದವನು ಹೇಗೆ ರಿಟ್ ಹೋಗುತ್ತಾನೆ ? ಒಂದು ಸೀಟಿಗೆ ೪೦೦ ಓಟು ಇರಬೇಕೆಂದು ಕಾನೂನಿನಲ್ಲಿ ಇದೆ. ನಿಮ್ಮ ಅಧಿಕಾರಿಗಳು ಕಾನೂನು ಮೀರಿ ನಡೆದುಕೊಂಡಿದ್ದಾರೆ ನೀವು ಏನು ಶಿಕ್ಷೆ ಮಾಡುತ್ತೀರಿ ? ಯಾರಾದರೂ ಹೀಗೇಕೆ ಮಾಡಿದಿರಿ ಎಂದರೆ, ರಾಮಯ್ಯನವರೋ, ವೀರಣ್ಣನವರೋ, ಯಾರೋ ಹೇಳಿದರು ಅವರಿಕೋಸ್ಕರ ಈ ರೀತಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಈ ಕೆಲಸ ನೀವು ಮಾಡಿರುವುದೇ. ಜಯಭೇರಿ ಹೊಡೆದೆವು ಎಂದು ನೀವು ಭುಜ ತಟ್ಟಿಕೊಳ್ಳಬಹುದು. ನಿಷ್ಪಕ್ಷಪಾತವಾಗಿ, ಕಾನೂನುಬದ್ಧವಾಗಿ ಚುನಾವಣೆ ನಡೆದಿದ್ದರೆ ಈಗ ಬಂದಿರುವುದರಲ್ಲಿ ಅರ್ಧ ಬರುತ್ತಿರಲಿಲ್ಲ. ಚುನಾವಣೆಯಲ್ಲಿಯೂ ಭ್ರಷ್ಟಾಚಾರ ಮಾಡಿದ್ದೀರಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಕೇರಳದಲ್ಲಿ, ವೆಸ್ಟ್ ಬಂಗಾಳದಲ್ಲಿ ಏನಾಗಿದೆ ಎಂಬುದನ್ನು ನೋಡಿಕೊಳ್ಳಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಕೇರಳದಲ್ಲಿ ಅವರ ಪಕ್ಷದ ಸಾಧನೆ. ಬಂದಿವೆ. ಅಲ್ಲದೆ ಬೇರೆಯವರು ಗೆದ್ದರೆ. ನಿಮಗೆ ಏಕೆ ? ನಾನು ರೇಡಿಯೋದಲ್ಲೂ ಕೇಳಿದ್ದೇನೆ, ಪೇಪರ್‌ನಲ್ಲೂ ಓದಿದ್ದೇನೆ. ಆ ಸುದ್ದಿ ಬೇಡ.

ಚೇರ್ಮನ್.— ಮಾನ್ಯ ನೀಲಕಂಠಪ್ಪನವರೇ ತಾವು ಕುಳಿತುಕೊಳ್ಳಿ.

ಶ್ರೀ ಜಿ. ಎಸ್. ಶಿವನಂಜಪ್ಪ.— ನಾನು ಮುಚ್ಚುಮರೆಯಿಲ್ಲದೆ ವಿಷಯವನ್ನು ಹೇಳುತ್ತಿದ್ದೇನೆ ನಾನೂ ಸಹ ಜನತಾ ಪಕ್ಷದ ಸದಸ್ಯನಾಗಿ ಈ ಸಭೆಗೆ ಪ್ರಥಮವಾಗಿ ಕಾಲಿಟ್ಟಿದ್ದವನು. ನಾನು ಇಲ್ಲಿ ಆ ಪಕ್ಷದ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಬೊಮ್ಮಾಯಿಯವರು, ದೇವೇಗೌಡರು ಏನು ಕೆಲವರು ಇದ್ದಾರೆ ಅವರು ನನ್ನ ಜೊತೆ ಇದ್ದರು. ಆಗ ಅವರು ಬಹಳ ಭಾಷಣ ಮಾಡಿದ್ದಾರೆ, ನಾನೂ ಅದನ್ನು ಕೇಳಿದ್ದೇನೆ. ಏನು ಭಾಷಣ ಮಾಡಿದ್ದರು ಅದನ್ನು ತೆಗೆಯಿರಿ, ಆ ಹಾಳೆಗಳನ್ನು ತೆಗೆಯಿಸಿ ಅವರು ಏನೇನು ಭಾಷಣ ಮಾಡಿದ್ದಾರೆ, ಆ ಭಾಷಣದ ಯಾವುದಾದರೂ ಒಂದು ಭಾಗವನ್ನು ಅವರ ಇಲಾಖೆಯೊಳಗೆ ಇವತ್ತು ಪರಿಪಾಲನೆ ಮಾಡಿದ್ದಾರೆಯೋ ? ಇದನ್ನು ನಾನು ಕೇಳಬಾರದು. ಇದು ಸಾರ್ವತ್ರಿಕ ಚುನಾವಣೆಯ ಕಣ ಅಲ್ಲ. ಜನಗಳಿಗೆ ಅನುಕೂಲ ಆಗಬೇಕು, ನಾವು ಏನು ಕೆಲಸಗಳನ್ನು ಮಾಡುತ್ತಿದ್ದೇವೆ ಅದರಿಂದ ಜನಗಳಿಗೆ ಅನುಕೂಲ ಆಗಬೇಕಾಗಿದೆ. ನಾವು ಏನು ವಚನಗಳನ್ನು ಕೊಡುತ್ತೇವೆ, ಆ ವಚನದಂತೆ ನಾವು ನಡೆಯಬೇಕು. ನಮ್ಮ ಚೀಫ್ ವಿಪ್ ಪಾಟೀಲರು ಹೇಳಿದರು ಮುಖ್ಯಮಂತ್ರಿಗಳು ಅವರ ಒಂದು ಊರಾದ ಸಂಕೇಶ್ವರಕ್ಕೆ ಬಂದಾಗ ಕರ್ಪೂರಿ ಹಳ್ಳದಿಂದ ಕುಡಿಯುವ ನೀರನ್ನು ಹಂಚಿಕೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟು ಬಂದವರು ಎರಡು ವರ್ಷ ಆಯಿತು ಇದುವರೆಗೆ ಅಲ್ಲಿಗೆ ನೀರನ್ನು ಕೊಟ್ಟಿಲ್ಲ ಎಂದು ನಾವು ಬರೀ ಮಾತನಾಡತಕ್ಕವರಲ್ಲ, ಕೆಲಸ ಮಾಡತಕ್ಕವರು ಎಂದು ಹೇಳಿ ನೀವು ಅಧಿಕಾರಕ್ಕೆ ಬಂದಿದ್ದೀರಿ. ನಾನು ಈ ವಿಚಾರದಲ್ಲಿ ಮಾತನಾಡುವುದಿಲ್ಲ. ಅವರಿಗೆ ಬೇಕಾದಷ್ಟು ಕಾಗದ ಬರೆದಿದ್ದೇನೆ, ಇನ್ನು ಸಂಕೇಶ್ವರದಲ್ಲಿ ಉಪವಾಸ ಮುಷ್ಕರ ಕುಳಿತುಕೊಳ್ಳುವುದು ಒಂದು ಬಾಕಿ ಇದೆ ಎಂದು ಪಾಟೀಲರು ಇಲ್ಲಿ ಹೇಳಿದರು. ಹಿಂದಿನ ಸರಕಾರದವರು ಬರೀ ಆಶ್ವಾಸನೆಗಳನ್ನು ಕೊಡುತ್ತಾರೆ ಎಂದು ಹೇಳಿದ ನೀವು ಏನು ಕೆಲಸ ಮಾಡಿದ್ದೀರಿ ? ನನ್ನ

ಕ್ಷೇತ್ರಕ್ಕೆ ಕೆಲವು ಕೆಲಸಗಳಿಗೆ ಕಳೆದ ವರ್ಷ ೭೫ ಲಕ್ಷ ರೂಪಾಯಿಗಳು ಮಂಜೂರಾಗಿತ್ತು, ಆದರೆ ಅದರಲ್ಲಿ ೫ ಲಕ್ಷ ರೂಪಾಯಿಗಳ ಕೆಲಸವನ್ನೂ ಸಹ ಮಾಡಲಿಲ್ಲ. ಆ ದುಡ್ಡು ಏನಾಯಿತು. ಇದನ್ನು ಯಾವ ಬಾಬಿಗೆ ಬಳಸಿಕೊಂಡಿರಿ ? ಇಲ್ಲಿ ನಾವು ಯಾವ ಕೆಲಸಕ್ಕೆ ಗ್ರ್ಯಾಂಟ್ ಮಾಡಿಕೊಡುತ್ತೇವೆ, ಅದೇ ಕೆಲಸಕ್ಕೆ ಅದನ್ನು ಉಪಯೋಗಿಸಬೇಡವೇ. ಆ ದುಡ್ಡು ಏನಾಯಿತು ಎಂಬುದರ ಬಗ್ಗೆ ಈ ಬಜೆಟ್‌ನಲ್ಲಿ ಪ್ರಸ್ತಾಪ ಇಲ್ಲ. ಆ ದುಡ್ಡು ಹಾಗೆಯೇ ಉಳಿದಿದೆ, ಈ ನನ್ನ ಕ್ಷೇತ್ರಕ್ಕೆ ಈ ಬಾರಿ ನಾವು ಹಣ ಕೊಡುತ್ತೇವೆ ಎಂಬ ಒಂದು ಮಾತಾದರೂ ಬರಬೇಕಲ್ಲವೇ ? ಈಗ ನೀವು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಇದ್ದೀರಿ. ಹಣಕಾಸಿನ ಇಕ್ಕಟ್ಟಿನ ಪರಿಸ್ಥಿತಿಯ ಒಳಗೆ ಇದ್ದು ಸರಿಯಾದ ರೀತಿ ವ್ಯವಹಾರ ಮಾಡುವುದಕ್ಕೆ ಆಗದಿರುವಂತಹ ಪರಿಸ್ಥಿತಿಯನ್ನು ನೀವಾಗಿ ನೀವೇ ತಂದುಕೊಂಡಿದ್ದೀರಿ ಎಂದು ನಾನು ಹೇಳದೇ ವಿಧಿ ಇಲ್ಲ.

ಇವತ್ತು ಪೋಲೀಸ್ ವಿಚಾರದಲ್ಲಿ ಹೇಳಬೇಕೆಂದರೆ, ಮಾನ್ಯ ರಾಚಯ್ಯನವರೇ ಇವತ್ತು ಖಾಕಿ ಬಟ್ಟೆ ಹಾಕಿಕೊಂಡು ನಾನೇ ಐ.ಜಿ. ಎಂದು ಹೋದರೂ ಎಲ್ಲವನ್ನೂ ಸರಿ ಮಾಡುತ್ತೇನೆ ಎಂದು ಹೋದರೂ ಯಾರೂ ಅದನ್ನು ಒಪ್ಪುವುದಿಲ್ಲ. ಈ ಇಲಾಖೆ ಎಷ್ಟು ಕಳವಟ್ಟಕ್ಕೆ ಇಳಿಯಬೇಕೋ ಅಷ್ಟು ಕೆಳಮಟ್ಟಕ್ಕೆ ಇಳಿದು ಹೋಗಿದೆ. ಒಳ್ಳೆಯ ಅಧಿಕಾರಿಗಳು ಬಹಳಷ್ಟು ಜನ ಇದ್ದಾರೆ. ಆದರೆ ಅವರಿಗೆ ಪೂರ್ಣವಾದ ಅಧಿಕಾರ ಇಲ್ಲ. ತಾವು ಇಲ್ಲಿ ಹೇಳಿದಿರಿ, ನೋಡಿರಿ, ಶಿವನಂಜಪ್ಪನವರೇ. ಎಲ್ಲಾ ಪೋಲೀಸ್ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡತಕ್ಕ ಅಧಿಕಾರವನ್ನು ನಾನು ಐ.ಜಿ., ಡಿ.ಐ.ಜಿ ಗಳಿಗೆ ಕೊಟ್ಟುಬಿಟ್ಟಿದ್ದೇನೆ ಎಂದು ಒಂದು ಆರ್ಡರ್ ತೋರಿಸಿದಿರಿ, ಆದರೆ ಅದನ್ನು ನನಗೆ ಕೊಡಲಿಲ್ಲ. ದಯವಿಟ್ಟು ಆದರ ಪ್ರತಿಯನ್ನು ನನಗೆ ಕೊಡಿ, ಏತಕ್ಕೆಂದರೆ ಅಲ್ಲಿ ಕೇಳಿದರೆ ನಮಗೆ ಏನೂ ಆ ರೀತಿ ಬಂದಿಲ್ಲ ಎಂದು ಹೇಳುತ್ತಾರೆ. ಇದು ತುಂಬಾ ಸೆನ್ಸಿಟೀವ್ ಆದಂಥ ಡಿಪಾರ್ಟ್‌ಮೆಂಟ್ ಈಗಿನ ರಾಜಕೀಯ ಪರಿಸ್ಥಿತಿಯೊಳಗೆ ಇದು ತುಂಬಾ ಸೆನ್ಸಿಟೀವ್ ಆದ ಡಿಪಾರ್ಟ್‌ಮೆಂಟ್ ಆಗಿದೆ. ಅವರುಗಳು ನಮ್ಮ ಮಾತೂ ಕೇಳಬೇಕು, ನಿಮ್ಮ ಮಾತೂ ಕೇಳಬೇಕು, ನಾನು ಫೋನ್ ಮಾಡುತ್ತೇನೆ, ನೀವೂ ಫೋನ್ ಮಾಡುತ್ತೀರಿ. ಇವತ್ತು ತುಮಕೂರು ಎಸ್. ಪಿ. ಯವರು ನನಗೆ ಅನುಮತಿ ಕೊಡಿ, ನಾನು ಎಲ್ಲರ ಮೇಲೆ ಮಾನನಷ್ಟ ಮೊಕದ್ದಮೆ ಹಾಕುತ್ತೀನಿ ಎಂದು ಕೇಳಿದ್ದಾರೆ ನನಗೆ ಇದರಿಂದ ನಾಚಿಕೆಯಾಗುತ್ತಿದೆ. ಈ ಸದನದಲ್ಲಿ ನಿಂತುಕೊಂಡು ಮಾತನಾಡಲು ನಾಚಿಕೆಯಾಗುತ್ತದೆ ಈ ಸದನದಲ್ಲಿ ನಾವು ಏತಕ್ಕೆ ಕುಳಿತುಕೊಳ್ಳಬೇಕು ? ಯಾರೋ ಒಬ್ಬರು ಅಮಾಯಕರಿಗೆ ತೊಂದರೆಯಾಗುತ್ತದೆ, ಜನ ನಮ್ಮ ಹತ್ತಿರ ಬರುತ್ತಾರೆ, ನಾವು ಫೋನ್ ಮಾಡುತ್ತೇವೆ. ಸರಿಪಡಿಸಿ ಎಂದು ಹೇಳುತ್ತೇವೆ. ಅದು ಕಾನೂನು ಬದ್ಧವಾಗಿ ಇದ್ದಾಗ ಅವರಿಗೆ ರಕ್ಷಣೆ ಕೊಡಬೇಕು, ಇಲ್ಲದಿದ್ದರೆ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಬೇಕು. ಅದರ ಬದಲಿಗೆ ರಾಜಕೀಯ ವ್ಯಕ್ತಿಗಳು ಇದರಲ್ಲಿ ರಾಜಕೀಯ ಬೆರೆಸುತ್ತಿದ್ದಾರೆ. ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಪೋಲೀಸರು ಪತ್ರಿಕೆಗಳಿಗೆ ಹೇಳಿಕೆ ಕೊಡುವ ಮಟ್ಟಕ್ಕೆ ಹೋದರೆ ನಮ್ಮ ದೇಶದಲ್ಲಿ ಪೋಲೀಸ್ ವ್ಯವಸ್ಥೆ ಇದೆಯೇ ? ನೀವು ಏತಕ್ಕೆ ಇದ್ದೀರಿ ? ಈಗ ವೈ. ಕೆ. ರಾಮಯ್ಯನವರು ನಮ್ಮ ಕ್ಷೇತ್ರದಲ್ಲಿ ಈ ರೀತಿ ತೊಂದರೆಯಾಗಿದೆ, ರಕ್ಷಣೆ ಕೊಡಿ ಎಂದು ಕೇಳುವುದು ತಪ್ಪೇ ?

ಸನ್ಮಾನ್ಯ ಮಂತ್ರಿಗಳಾದಂಥ ವೀರಣ್ಣನವರು ಇದ್ದಾರೆ, ವೈ. ಕೆ. ರಾಮಯ್ಯನವರು ಇದ್ದಾರೆ ಅವರ ಕ್ಷೇತ್ರದ ಜನ ಯಾರಾದರೂ ಅಮಾಯಕರು ಬಂದು ನಮಗಿಂತಹ ತೊಂದರೆ ಯಾಗಿದೆ ರಕ್ಷಣೆ ಕೊಡಿ ಎಂದು ಕೇಳಿದರೆ ಅದು ತಪ್ಪೇ ? ಆ ಅಧಿಕಾರಿಯ ಮೇಲೆ ಕೇಸು ಹಾಕುವುದಕ್ಕೆ ನನಗೆ ಪರ್ಮಿಷನ್ ಕೊಡಿ ನೋಡಿಯೇ ಬಿಡೋಣ ನಿಮ್ಮ ತುಮಕೂರು ಎಸ್.ಪಿ. ಯವರ ಬಗ್ಗೆ ಅವರು ಅಲ್ಲಿ ಏನು ಮಾಡಿದರೆಂದರೆ ಅಲ್ಲಿ ಒಬ್ಬ ಮರ ಕಡಿಯದಿರಲು ಕೋರ್ಟಿನಿಂದ ಇಂಜೆಕ್ಷನ್ ಆರ್ಡರ್ ತಂದರೆ ಅವನಿಗೆ ರಕ್ಷಣೆ ಕೊಡಲಿಲ್ಲ. ಯಾರು ಹಣವಂತರಿದ್ದರೋ ಯಾರು ಇನ್‌ಫ್ಲೂಯೆನ್ಸಿಯಲ್ ಪರ್ಸನ್ಸ್ ಇದ್ದರೋ ಅವನಿಗೆ ರಕ್ಷಣೆ ಕೊಟ್ಟು, ಮರ ಕಡಿಯಲು ಅವಕಾಶ ಮಾಡಿಕೊಡುತ್ತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಬಸವರಾಜುರವರು ಅಲ್ಲಿಗೆ ಬಂದರು, ಅವರಿಗೆ ವಿಷಯ ತಿಳಿದಾಗ ಅವರು ಫೋನ್ ಮಾಡಿ ಅವರಿಗೆ ರಕ್ಷಣೆ ಕೊಡಿ ಎಂದು ಹೇಳಿದರು ಆಗ ಈ ಎಸ್. ಪಿ. ಯವರು ಏನು ಹೇಳಿದರೆಂದರೆ 'Injunction under is not mad properly' ಎಂದು ಹೇಳಿದರು. ಇವರಿಗೆ ಇನ್ನೇನು ಮಾಡಬೇಕಾಗಿತ್ತು ? ಪರ್ಮನೆಂಟ್ ಇಂಜೆಂಕ್ಷನ್ ತರಬೇಕಾಗಿತ್ತೆ ? ಅಥವಾ ಕೋರ್ಟಿನಿಂದ ಡಿಕ್ರಿ ಆರ್ಡರ್ ತರಬೇಕಾಗಿತ್ತೆ ? ಅಥವಾ ಅದರ ಮೇಲೆ ಅಪೀಲು ಹೋಗಿ ಆರ್ಡರ್ ತೋರಿಸ

ಬೇಕಾಗಿತ್ತೋ ? ಈ ಪೋಲೀಸ್ ಆಫೀಸರ್ ಕೈಯಲ್ಲಿ ಸುಮಾರು ೪ ಕೋಟಿ ಜನರ ರಕ್ಷಣೆ ಮಾಡುವಂತಹ ಅಧಿಕಾರ ಕೊಟ್ಟಿದ್ದೀರಿ. ಆ ಅಧಿಕಾರಿ ರಕ್ಷಣೆ ಮಾಡುತ್ತಾರೆಯೋ ? ಖಂಡಿತವಾಗಿ ಇದು ಅವರಿಂದ ಸಾಧ್ಯವಾಗುವುದಿಲ್ಲ. ನಿಮ್ಮ ಇಲಾಖೆಯಲ್ಲಿ ಒಳ್ಳೆಯ ಜನರು ಇದ್ದಾರೆ. ಎಲ್ಲರೂ ಕೆಟ್ಟವರೆಂದು ನಾನು ಹೇಳುವುದಿಲ್ಲ. ಅವರಿಗೆ ಇನ್ನೂ ಒಂದು ಒಳ್ಳೆಯ ಜಾಗವಿದ್ದರೆ ಕೊಟ್ಟು ಅಲ್ಲಿಂದ ವರ್ಗಾವಣೆ ಮಾಡಿ ಎಂದು ನಾನು ಮಾನ್ಯ ಮಂತ್ರಿಗಳಿಗೆ ಅನೇಕ ಸಲ ಹೇಳಿದ್ದೇನೆ, ಪೋಲೀಸ್ ಇಲಾಖೆಯಲ್ಲಿ ನಿಷ್ಪಕ್ಷಪಾತವಾಗಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಬೇಕಾದಷ್ಟು ಜನ ಇದ್ದಾರೆ. ಒಳ್ಳೆಯ ಹೆಸರು ಪಡೆದಂತಹ ಜನ ಸಹ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ, ಸಾಂಗ್ಲಿಯಾನರಂತಹ ದಕ್ಷ ಅಧಿಕಾರಿಗಳು ನಿಮ್ಮ ಇಲಾಖೆಯಲ್ಲಿ ಇದ್ದಾರೆ. ಅವರು ತುಮಕೂರಿಗೆ ಎಸ್. ಪಿ. ಯಾಗಿ ಬಂದಂತಹ ಕಾಲದಲ್ಲಿ ಜೂಜುಕೋರರು ಯಾರ್ಯಾರು ಇದ್ದರೋ ಅವರು ತಾವಾಗಿಯೇ ತಮ್ಮ ತಮ್ಮ ಮನೆಯ ಬಾಗಿಲುಗಳನ್ನು ಮುಚ್ಚಿಕೊಂಡರು. ಸ್ವಾಮಿ ನಾವು ಇನ್ನು ಜೂಜು ಆಡುವುದಿಲ್ಲವೆಂದು ಅವರೇ ಹೇಳಿಕೊಂಡರು. ಆ ಜೂಜುಕೋರರ ಹೆಂಡತಿ ಮತ್ತು ಮಕ್ಕಳು ಹೋಗಿ ಆ ಎಸ್. ಪಿ. ಯವರಿಗೆ ಹೂವಿನ ಹಾರ ಹಾಕಿದರು ಸ್ವಾಮಿ ನಿಮ್ಮಿಂದ ನಮ್ಮ ಗಂಡಂದಿರು ಪ್ರತಿದಿವಸ ಕಾಲಕ್ಕೆ ಸರಿಯಾಗಿ ಮನೆಗೆ ಬರುತ್ತಿದ್ದಾರೆ, ತಿಂಗಳ ಪೂರ್ತಿ ಸಂಬಳ ನಮ್ಮ ಕೈಗೆ ತಂದು ಕೊಡುತ್ತಿದ್ದಾರೆಂದು ಹೇಳಿದರು.

ಛೇರ್ಮನ್.—ತಾವು ಬೇಗ ಮುಗಿಸಿ ಸಮಯ ಸಾಕಷ್ಟು ಆಯಿತು.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ ೪ ಕೋಟಿ ಜನರ ರಕ್ಷಣೆಯ ವಿಚಾರ. ಆ ಪೋಲೀಸ್ ಅಧಿಕಾರಿ ತುಮಕೂರಿಗೆ ಬಂದು ಹೂವಿನ ಹಾರ ಹಾಕಿಸಿಕೊಂಡಿದ್ದೇ ತಡ ಒಂದೇ ತಿಂಗಳಲ್ಲಿ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗವಣೆ ಮಾಡಿದರು ಅವರು ಈಗ ಕರ್ನಾಟಕ ರಾಜ್ಯದಲ್ಲಿ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ವೈ. ಕೆ. ರಾಮಯ್ಯ.—ಸಾಂಗ್ಲಿಯಾನರವರ ಕೈಗೆ ನಾನು ನೀವು ಸಿಗಲಿಲ್ಲ. ಏಕೆಂದರೆ ಅವರು ಬಾರ್ ಅಸೋಷಿಯೇಷನ್ ಮೇಲೆ ರೈಡ್ ಮಾಡಲಿಲ್ಲ.

ಶ್ರೀ ವೀರಣ್ಣ.—ಬಾರ್ ಅಸೋಷಿಯೇಷನ್ ಮೇಲೆ ರೈಡ್‌ಮಾಡಿದ್ದರೆ ನೀವು ಸಿಕ್ಕಿ ಹಾಕಿಕೊಳ್ಳುತ್ತಿದ್ದೀರಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಆಗ ನನ್ನ ಜೊತೆಯಲ್ಲಿ ತಾವು ಸಹ ಇಸ್ಪೀಟ್ ಆಡುವುದಕ್ಕೆ ಬರುತ್ತಿದ್ದೀರಿ. ವೈ. ಕೆ. ರಾಮಯ್ಯನವರು ಮಾತ್ರ ಬರುತ್ತಿರಲಿಲ್ಲ ಅಲ್ಲಿ ರಾಜಕೀಯ ಮಾಡುವುದಕ್ಕೆ ಏನೂ ಇಲ್ಲ. ನಿಮಗೆ ಒಳ್ಳೆಯದಾಗಲಿ ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಒಳ್ಳೆಯ ಅಧಿಕಾರಿಗಳು ಯಾರಿದ್ದಾರೆ ಅವರನ್ನು ಗುರುತು ಮಾಡಿ ಎನ್ನುವುದಕ್ಕೆ ಒಂದು ಉದಾಹರಣೆ ಹೇಳಿದೆ ಅಷ್ಟೇ, ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ಮಾತನ್ನು ನಾನು ಹೇಳುವುದಾದರೆ, ಪಂಪ್ ಹೌಸಿನಲ್ಲಿ ಇದ್ದಂತಹ ೧೬ ಮೂಟೆ ಮೆಣಸಿನ ಕಾಯಿ ಮತ್ತು ೩೦೦ ಅಡಿಗಳಷ್ಟು ಜಿ. ಐ. ಪೈಪ್ ಕಳುವಾಗಿದೆ ಎಂದು ದೂರು ಕೊಟ್ಟು ೩ ಜನರ ಹೆಸರನ್ನು ಸಹ ಕೊಟ್ಟರು. ಅದರಲ್ಲಿ ಒಬ್ಬ ಅಪರಾಧಿಯನ್ನು ಭದ್ರಾವತಿಯಿಂದ ಕರೆದುಕೊಂಡು ಬಂದು ಠಾಣೆಯಲ್ಲಿ ಇಟ್ಟುಕೊಂಡರು. ಅವನಿಗೆ ಏನೇನು ಆಗಬೇಕಾಗಿತ್ತೊ ಅದೆಲ್ಲಾ ಅಲ್ಲಿ ಆಯಿತು. ಅದಾದ ಮೇಲೆ ಅಲ್ಲಿನ ಎಸ್. ಐ. ಗುಬ್ಬಿ ತಾಲ್ಲೂಕಿಗೆ ಅವನನ್ನು ಕರೆದುಕೊಂಡು ಹೋಗಿ ಅಲ್ಲಿ ಒಬ್ಬ ವಕೀಲರನ್ನು ಅವರೇ ಹುಡುಕಿಕೊಟ್ಟು ಒಂದು ಆಂಟಿಸಿಪೇಟರಿ ಬೇಲು ಹಾಕಿಸಿ ಬೇಲು ಮೇಲೆ ಬಿಡಿಸಿಕೊಂಡು ಹೋದರು. ಇದಾದಮೇಲೆ ನಾನು ಅಲ್ಲಿನ ವಿಚಾರವನ್ನು ಎಸ್. ಪಿ. ಯವರಿಗೆ ತಿಳಿಸಿದೆ. ಅವರೇನು ಹೇಳಿದರೆಂದರೆ ಸರ್ಕಲ್ ಇನ್ಸ್‌ಪೆಕ್ಟರ್ ಅನ್ನು ನೋಡಿ ಎಂದರೆ ಸ್ವಾಮಿ ಆ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಕೈ ಮುಗಿಯಬೇಕು. ಅವರಿಗೆ ಚಾರ್ಜ್‌ಶೀಟ್ ಎಂದರೆ ಏನು ಎನ್ನುವುದು ಗೊತ್ತಿಲ್ಲ. ಎಫ್. ಐ. ಆರ್. ಎಂದರೆ ಏನು ಗೊತ್ತಿಲ್ಲ. ಡೈರಿ ಎಂದರೆ ಏನೂ ಗೊತ್ತಿಲ್ಲ. ಸ್ವಾಮಿ ಅವರ ಕೈಯಲ್ಲಿ ಒಂದು ಎಫ್. ಐ. ಆರ್. ಬರೆಸಿದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ ಇಂತಹವರಿಂದ ಜನರ ರಕ್ಷಣೆಯಾಗುವುದಿಲ್ಲ. ಜನರಿಗೆ ಇಂತಹವರಿಂದ ತೊಂದರೆಯಾಗುತ್ತದೆ. ಆ ಅಧಿಕಾರಿಯನ್ನು ವರ್ಗಾವಣೆ ಮಾಡಿ ಎಂದು ನಾನು ತಮಗೆ ಎಷ್ಟೋಸಾರಿ ಹೇಳಿದ್ದೇನೆ. ಆದರೂ ಸಹ ತಾವು ವರ್ಗಾವಣೆ ಮಾಡಲಿಲ್ಲ ವರ್ಗಾವಣೆಯ ಅಧಿಕಾರವನ್ನೆಲ್ಲಾ ತಾವೇ ಇಟ್ಟುಕೊಂಡಿದ್ದೀರಿ. ಡಿ.ಐ.ಜಿ. ಗಳಿಗೆ ಆ ಅಧಿಕಾರವನ್ನು ಕೊಟ್ಟರೆ ಅವರು ಸ್ವಲ್ಪ ಕಂಟ್ರೋಲ್ ಆದರೂ ಇಟ್ಟುಕೊಂಡಿರುತ್ತಾರೆ. ಮೊನ್ನೆ ದಿವಸ ಡಿ. ಐ. ಜಿ. ಯವರಿಗೆ ಅಧಿಕಾರ

ಕೊಟ್ಟ ಆದೇಶದ ಒಂದು ಕಾಪಿಯನ್ನು ನನಗೆ ತೋರಿಸಿದಿರಿ. ಆ ಕಾಪಿಯನ್ನು ದಯಮಾಡಿ ಕೊಡಿ. ಇನ್ನು ನಾನು ಸಾರಿಗೆ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಬಸ್ಸುಗಳಿಗೆ ಬೇರೆ ಬಣ್ಣವನ್ನು ಬಳಸಿದರೆ ಆಗ ಆ ಬಸ್ಸಿನ ಮೇಲೆ ಬರೆದಿರುವ ದೂರುಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತವೆ. ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳವನ್ನು ನಾವು ಹಾಕಿ ನಮಗೆ ಅದರಿಂದ ಬರುವ ಲಾಭವಾದರೂ ಏನು ? ಹಳೇ ಮೈಸೂರಿನಲ್ಲಿ ಪೆರುಮಾಳ್‌ಚೆಟ್ಟಿ ಎನ್ನುವವರು ಸುಮಾರು ೧೦೦ ಬಸ್ಸುಗಳನ್ನು ಓಡಿಸು ತ್ತಿದ್ದರು. ಅವರು ಚೆಕ್ ಮಾಡುತ್ತಿರಲಿಲ್ಲ. ಆದರೂ ಸಹ ಕೋಟ್ಯಾಂತರ ರೂಪಾಯಿಗಳ ಲಾಭ ಬರುತ್ತಿತ್ತು. ಸ್ವಾಮಿ ಕಂಡೆಕ್ಟರು ಅಥವಾ ಡ್ರೈವರ್ಸ್ ತಿಂದರೆ ಒಂದು ೧೦-೨೦ ರೂಪಾಯಿಗಳನ್ನು ತಿನ್ನಬಹುದು. ಇದರಿಂದೇನು ದೊಡ್ಡ ನಷ್ಟವಾಗುವುದಿಲ್ಲ. ಕಂಡೆಕ್ಟರ್ಸ್ ಮತ್ತು ಡ್ರೈವರ್ಸ್ ತಿನ್ನುವುದರಿಂದ ನಷ್ಟವಾಗುತ್ತದೆಂದು ಹೇಳುವುದು ಸುಳ್ಳು. ಎಲ್ಲಾ ಕಡೆಯು ಭ್ರಷ್ಟಾಚಾರ ನಡೆಯು ತ್ತಿದೆ. ಇಲ್ಲ ಅಂದರೆ ಎಲ್ಲಿ ಭಷ್ಟಾಚಾರ ನಡೆಯುತ್ತಿದೆ ಎಂಬುದನ್ನಾದರೂ ಹೇಳಿ.

ಉಪಾಧ್ಯಕ್ಷರು.—ಬೇಗ ಮುಗಿಸಿ,

ಶ್ರೀ ಜಿ. ಎಸ್. ಶಿವನಂಜಪ್ಪ.—ನೀವು ಇನ್ನು ಮೇಲೆ ಹೊಸದಾಗಿ ಹಸಿರು ಬಸ್‌ಗಳನ್ನು ಬಿಡುತ್ತೇವೆಂದು ಹೇಳಿದ್ದೀರಿ. ಎಲ್ಲಿ ಬಿಟ್ಟಿದ್ದೀರಿ ? ಅವು ಏನು ನಿಮ್ಮ ಹಿಂದೆಯೇ ಹೊರಟು ಹೋದವೇ ? ಚುನಾವಣೆ ಆದ ಮೇಲೆ ಒಂದು ಬಸ್‌ನ್ನು ಸಹಿತ ನಮ್ಮ ಕಡೆ ಹಾಕಿಲ್ಲ. ಜಿಲ್ಲಾಪರಿಷತ್ ಚುನಾವಣೆ ಸಂದರ್ಭದಲ್ಲಿ ನೀವು ಕೆಲವು ಕಡೆ ಬಸ್‌ಗಳನ್ನು ಬಿಟ್ಟಿದ್ದೀರಿ, ಇದು ನಿಮ್ಮ ಅಧಿಕಾರ ದುರುಪಯೋಗ ಅಲ್ಲವೇ ? ನಾನು ನಾಲ್ಕು ರೂಟ್‌ಗಳಲ್ಲಿ ಬಸ್‌ಗಳನ್ನು ಹಾಕಿ ಎಂದು ಎಷ್ಟು ಕೇಳಿದರೂ ಇದುವರೆಗೂ ಬಸ್‌ಗಳನ್ನು ಹಾಕಲಿಲ್ಲ.

ಉಪಾಧ್ಯಕ್ಷರು.—೧೫ ನಿಮಿಷದ ಬದಲು ನೀವು ೩೦ ನಿಮಿಷ ಮಾತನಾಡಿದ್ದೀರಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಬಸ್‌ಗಳಲ್ಲಿ ಒಂದು ಗೇಣು ಉದ್ದ ಕಡಲೇಕಾಯಿ ಸಿಪ್ಪೆ ಇರುತ್ತದೆ. ಬಸ್‌ಗಳನ್ನು ಕ್ಲೀನ್ ಮಾಡಿ ಕಳುಹಿಸುವುದಕ್ಕೆ ಆಗುವುದಿಲ್ಲವೆ ? ಈ ಕೆಲಸ ಮಾಡುವುದಕ್ಕೆ ಆಗದಿದ್ದರೆ ಚುನಾವಣೆಗೆ ಏಕೆ ಬರಬೇಕು ? ಅಸೆಂಬ್ಲಿಗೆ ಬಂದು ಭಾಷಣ ಏಕೆ ಮಾಡಬೇಕು ? ತಾವು ಒಂದು ಮೀಟಿಂಗ್ ಕರೆದಿದ್ದಿರಿ. ನಾನು ಅದಕ್ಕೆ ಬರಲಿಲ್ಲ. ಏಕೆ ಅಂದರೆ, ಮೀಟಿಂಗ್‌ನಲ್ಲಿ ಸುಳ್ಳು ಆಶ್ವಾಸನೆಗಳನ್ನು ಕೊಟ್ಟು ಆಮೇಲೆ ಅವುಗಳನ್ನು ನೀವು ಕಾರ್ಯಗತ ಮಾಡುವುದಿಲ್ಲ. ವಚನ ಕೊಟ್ಟರೆ, ಯಾವರೀತಿ ವಚನ ಕೊಡುತ್ತೀರೋ ಅದೇ ಪ್ರಕಾರ ನಡೆದುಕೊಳ್ಳಬೇಕು. ನಮ್ಮ ಗುಬ್ಬಿಯಲ್ಲಿ ವೀರಣ್ಣನವರ ಸ್ಮರಣಾರ್ಥವಾಗಿ ಒಂದು ಬಯಲು ನಾಟಕ ಮಂದಿರವನ್ನು ಕಟ್ಟಿಸಿಕೊಡುತ್ತೇವೆಂದು ಈ ಹಿಂದೆ ಯುವ ಜನ ಕಲ್ಯಾಣ ಮಂತ್ರಿಗಳಾಗಿದ್ದ ಶ್ರೀ ಜೀವರಾಜ ಆಳ್ವರವರು ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ, ಆ ಕೆಲಸವನ್ನು ಮಾಡಲಿಲ್ಲ. ಮಾನ್ಯ ಸದಸ್ಯರಾದ ಚೆನ್ನಬಸವಯ್ಯನವರು ಮೇಲ್ಮನೆಯಲ್ಲಿ ಇದರ ಬಗ್ಗೆ ಪ್ರಶ್ನೆ ಕೇಳಿದರೆ, ನಾವು ಗುಬ್ಬಿ ವೀರಣ್ಣನವರ ಸ್ಮರಣಾರ್ಥವಾಗಿ ನಾಟಕ ಮಂದಿರವನ್ನು ಕಟ್ಟಿಸಿಕೊಡುತ್ತೇವೆಂಬ ಯಾವ ಆಶ್ವಾಸನೆಯನ್ನೂ ಕೊಟ್ಟಿಲ್ಲವೆಂದು ಹೇಳಿದ್ದಾರೆ, ಈ ರೀತಿ ಆಶ್ವಾಸನೆ ಕೊಟ್ಟು, ನಾವು ಆಶ್ವಾಸನೆ ಕೊಟ್ಟಿಲ್ಲ ಎನ್ನುವುದು ಪ್ರಿವಿಲೇಜ್ ಆಗುವುದಿಲ್ಲವೆ ? ನೀವೆ ಹೇಳಿ ಇಂಥಹ ನೂರಾರು ಆಶ್ವಾಸನೆಗಳನ್ನು ನಿಮ್ಮ ಸರ್ಕಾರ ಬಂದ ಮೇಲೆ ನೀವು ಕೊಡುತ್ತಿದ್ದೀರಿ. ಆಶ್ವಾಸನೆಗಳನ್ನು ಮಾತ್ರ ಈಡೇರಿಸುತ್ತಿಲ್ಲ. ನೀವು ಆಶ್ವಾಸನೆಗಳನ್ನು ಕೊಟ್ಟ ರೀತಿಯಿಂದಲೇ ಈಡೇರಿಸಿದ್ದಿದ್ದರೆ ನಾವು ಸಂತೋಷಪಡಬಹುದಾಗಿತ್ತು. ನೀವು ಅಧಿಕಾರ ಮಾಡಿ, ನಾವು ಬೇಡ ಎನ್ನುವುದಿಲ್ಲ. ಇನ್ನೂ ಐದು ಸಾರಿ ಅಧಿಕಾರಕ್ಕೆ ಬಂದರೂ ಸರಿ, ಆದರೆ ಜನಗಳಿಗೆ ಏನು ಆಶ್ವಾಸನೆಗಳನ್ನು ಕೊಡುತ್ತೀರೋ ಅವುಗಳನ್ನು ಈಡೇರಿಸಿ ಇಲ್ಲದಿದ್ದರೆ ಜನರ ಶಾಪ ನಿಮ್ಮ ಮೇಲೆ ಪರಿಣಮಿಸಬಹುದೆಂದು ಎಚ್ಚರಿಸಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಲ್ಲಪ್ಪ (ಮಾಯಕೊಂಡ).— ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಗೃಹ ಸಚಿವರು, ಮಾನ್ಯ ಸಾರಿಗೆ ಮತ್ತು ಉಳಿತಾಯ ಖಾತೆಗಳ ಬೇಡಿಕೆಗಳನ್ನು ನಾನು ಸ್ವಾಗತಿಸಿ ಈ ಸಂದರ್ಭದಲ್ಲಿ ತಮ್ಮ ಮೂಲಕ ನನ್ನ ಕೆಲವು ಸಲಹೆಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ನಮ್ಮ ರಾಜ್ಯದ ಜಿಲ್ಲೆಗಳನ್ನು ಪುನರ್ ವಿಂಗಡಣೆ ಮಾಡುವುದಕ್ಕೆ ಹುಂಡೇಕಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಲಾಗಿತ್ತು. ಹುಂಡೇಕಾರ್‌ರವರ ವರದಿ ಬಂದಿದ್ದಾಗ್ಯೂ ಇನ್ನೂ ಜಿಲೆಗಳ ಪುನರ್ ವಿಂಗಡಣೆಯು ವ್ಯವಸ್ಥೆ ಆಗಲಿಲ್ಲ. ದಾವಣಗೆರೆಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುತ್ತಾರೆಂದು ಮತ್ತು ಒಂದು ವಿಶ್ವವಿದ್ಯಾನಿಲಯವನ್ನು ದಾವಣಗೆರೆಗೆ ಕೊಡುತ್ತಾರೆಂದು ನಾವು ಆಸೆಯನ್ನು ಇಟ್ಟುಕೊಂಡಿದ್ದೆವು. ವಿಶ್ವವಿದ್ಯಾನಿಲಯವನ್ನು ಕೊಡುತ್ತಾರೆಂಬ ಆಸೆಯನ್ನು ಈಗ ನಾವು ಬಿಟ್ಟು ಬಿಟ್ಟಿದ್ದೇವೆ. ದಾವಣಗೆರೆಯನ್ನು ಜಿಲ್ಲಾ ಕೇಂದ್ರವನ್ನಾಗಿ ಕೂಡಲೇ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕೋರಿಕೊಳ್ಳುತ್ತೇನೆ, ಆಮೇಲೆ ಸ್ವಾಮಿ, ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲನ್ನು ಸ್ಥಳಾಂತರಿಸುವ ಯೋಜನೆ ಇದೆ ಎಂಬುದನ್ನು ನಾನು ಕೇಳಿದ್ದೇನೆ. ಗ್ರಾಮಾಂತರ ಪ್ರದೇಶದ ಜನತೆಯು ಮಂತ್ರಿಗಳನ್ನು ಹುಡುಕಿಕೊಂಡು ಬಂದರೆ ಅವರ ನಿವಾಸಗಳನ್ನು ಹುಡುಕುವುದೆ ಕಷ್ಟವಾಗಿದೆ. ಸೆಂಟ್ರಲ್ ಜೈಲನ್ನು ಸ್ಥಳಾಂತರಿಸುವ ಯೋಚನೆ ಇರುವುದರಿಂದ ಸಭಾಧ್ಯಕ್ಷರುಗಳನ್ನು ಒಳಗೊಂಡಂತೆ ಎಲ್ಲಾ ಮಂತ್ರಿಗಳ ವಾಸದ ಮನೆಗಳನ್ನು ಅಲ್ಲಿ ಕಟ್ಟುತ್ತೀರಾ

ಉಪಾಧ್ಯಕ್ಷರು.... ಜೈಲಿನಲ್ಲೇ ಮಾಡಿರಿ ಎಂದು ಹೇಳುತ್ತಿದ್ದೀರಾ

ಶ್ರೀ ಕೆ. ಮಲ್ಲಪ್ಪ.— ಎಲ್ಲಾ ಮನೆಗಳನ್ನು ಅಲ್ಲೆ ಕಟ್ಟುವುದರಿಂದ ಗ್ರಾಮಾಂತರ ಪ್ರದೇಶಗಳಿಂದ ಬರುವ ಜನರಿಗೆ ಮಂತ್ರಿಗಳ ಮನೆಗಳನ್ನು ಹುಡುಕುವುದು ಕಷ್ಟವಾಗುವುದಿಲ್ಲ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯದ ಜನತೆ ಇದರಿಂದ ಸಂತೋಷಪಡುತ್ತಾರೆ. ಆ ಸ್ಥಳಗಳಲ್ಲಿ ಎಲ್ಲಾ ಮಂತ್ರಿಗಳು ಹಾಗೂ ಸಭಾಧ್ಯಕ್ಷರುಗಳನ್ನು ಒಳಗೊಂಡ ವಾಸದ ಮನೆಗಳನ್ನು ಮಾಡಿದರೆ ಬಹಳ ಒಳ್ಳೆಯ ಕೆಲಸವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಹಾಗೆ ಮಾಡಿದರೆ ರಾಜ್ಯದ ಜನತೆ ಬಹಳ ಸಂತೋಷಪಡುತ್ತಾರೆ ಆ ಸ್ಥಳದಲ್ಲಿ ಎಲ್ಲಾ ಮಂತ್ರಿಗಳ ವಾಸದ ಮನೆಗಳನ್ನು ಮಾಡಿದಾಗ, ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ. ಇನ್ನು ಯುವಜನ ಇಲಾಖೆಯವರ ರೇಡಿಯೋ ಪ್ರಸಾರ ಕಾರ್ಯಕ್ರಮ ಇದು ಬಹಳ ವಿಚಿತ್ರವಾಗಿದೆ. ಅವರು ಕೇವಲ ಕೆಲವೇ ಕ್ರೀಡೆಗಳಿಗೋಸ್ಕರದಾಗಿ ಅವಕಾಶವನ್ನು ಅದರ ಮೂಲಕವಾಗಿ ಕೊಡುತ್ತಿದ್ದಾರೆ. ಹೀಗೆ ಅವರು ಪ್ರಸಾರ ಮಾಡುವುದನ್ನು ನೋಡಿದರೆ, ಕ್ರಿಕೆಟ್, ಟೆನ್ನಿಸ್ ಮತ್ತು ಬಹಳ ಮುಖ್ಯವಾದ ಕ್ರೀಡೆಗಳಿಗೆ ಮಾತ್ರ ಅವರು ಅವಕಾಶವನ್ನು ಕೊಡುತ್ತಿದ್ದಾರೆ. ಹಾಗೆಂಬ ಮೇಲೆ ಆ ಮಾಧ್ಯಮವು ಅವುಗಳಿಗಷ್ಟೇ ಸೀಮಿತವಾಗಿ ಇದೆಯೋ ಎಂಬುದು ನಮಗೆ ಗೊತ್ತಿಲ್ಲ. ಅಥವಾ ಅವರು ಪ್ರಸಾರಕ್ಕಾಗಿ ಹಣವನ್ನು ಕೊಡುತ್ತಿದ್ದಾರೆಯೋ ಎಂಬುದು ಕೂಡ ನಮಗೆ ಗೊತ್ತಿಲ್ಲ. ನಮ್ಮಲ್ಲಿ ಭಾರತೀಯ ಕ್ರೀಡೆಗಳಾದ ಕೋಕೋ, ಕಬಡ್ಡಿ, ಕುಸ್ತಿ, ಮುಂತಾದ ಕ್ರೀಡೆಗಳಿಗೆ ಯಾವುದೇ ರೀತಿಯಲ್ಲಿ ರೇಡಿಯೋ ಮೂಲಕ ಪ್ರಸಾರವನ್ನು ಕೊಡುತ್ತಾ ಇಲ್ಲ. ಇವರ ಈ ವರ್ತನೆಯಿಂದಾಗಿ ನಮ್ಮ ಯುವಜನತೆ ಬಹಳವಾಗಿ ನೊಂದುಕೊಂಡಿದ್ದಾರೆ. ಆದುದರಿಂದ ನಮ್ಮ ರಾಷ್ಟ್ರೀಯ ಮತ್ತು ಗ್ರಾಮೀಣ ಕ್ರೀಡಗಳಿಗೆ ಹೆಚ್ಚಿನ ಮಹತ್ವವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಾ ಇದ್ದೇನೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇನ್ನು ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಸೇವಾದಳವು ಮಹತ್ತರವಾದ ಪಾತ್ರವನ್ನು ವಹಿಸಿತ್ತು. ಇದು ಮಹಾತ್ಮಾ ಗಾಂಧೀಜಿಯವರ ಗ್ರಾಮೀಣ ಅಭಿವೃದ್ಧಿಯ ಕನಸನ್ನು ನನಸು ಮಾಡುವತ್ತ ತನ್ನ ಪಾತ್ರವನ್ನು ವಹಿಸುತ್ತಾ ಬಂದಿತ್ತು. ಅನೇಕ ರಚನಾತ್ಮಕ ಕೆಲಸಕಾರ್ಯಗಳನ್ನು ಇದು ಮಾಡುತ್ತಾ ಬರುತ್ತಿವೆ. ಸ್ವಾತಂತ್ರ್ಯ ನಂತರ ಭಾರತ ಸೇವಾ ದಳ ಎಂದು ಹೆಸರು ಬದಲಾಯಿಸುವುದರ ಮೂಲಕ ಗಾಂಧೀಜಿಯವರು ಹಾಕಿಕೊಟ್ಟ ಕಾರ್ಯಕ್ರಮವನ್ನು ಈ ಒಂದು ಸಂಸ್ಥೆ ನಡೆಸಿಕೊಂಡು ಬರುತ್ತಾ ಇದೆ. ಇದಕ್ಕೆ ಹೆಚ್ಚಿನ ಸಹಾಯಧನವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಹಾತ್ಮಾ ಗಾಂಧೀಜಿಯವರು ಹಾಕಿಕೊಟ್ಟ ರಚನಾತ್ಮಕ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿರುವುದರಿಂದ, ಗ್ರಾಮೀಣ ಪ್ರದೇಶಗಳಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಒಳ್ಳೆಯ ರೀತಿಯಲ್ಲಿ ಮಾಡಿಕೊಂಡು ಬರುತ್ತಿರುವುದರಿಂದ ಅಂಥ ಸಂಸ್ಥೆಗೆ ಹೆಚ್ಚಿನ ಸಹಾಯಧನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರಾಜ್ಯದ ಗ್ರಾಮೀಣ ಪ್ರದೇಶದ ಜನತೆಗೆ ಅನುಕೂಲವಾಗಲಿ ಎಂದು ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿ ಒಂದೊಂದು ಕ್ರೀಡಾಂಗಣವನ್ನು ಮಾಡುವ ಗುರಿಯನ್ನು ಸರ್ಕಾರ ಹೊಂದಿದರೆ, ಆದರಿಂದ ತಾಲ್ಲೂಕು ಕೇಂದ್ರಗಳಲ್ಲಿ ಗ್ರಾಮಾಂತರ ಪ್ರದೇಶಗಳ ಯುವಶಕ್ತಿಗೆ ಒಂದು ಶಕ್ತಿಯನ್ನು ಕೊಟ್ಟ ಹಾಗೆ ಆಗುತ್ತದೆ ಎಂದು ನಾನು ಹೇಳಲಿಚ್ಛಿಸುತ್ತೇನೆ. ಇವೊತ್ತಿನ ದಿವಸ ಯುವಕರಲ್ಲಿನ ಒಂದು ನೈತಿಕಮಟ್ಟವನ್ನು ನಾವು ಬೆಳೆಸಬೇಕಾದರೆ ಈ ಕ್ರೀಡಾಂಗಣಗಳು ಅವಶ್ಯಕವಾಗಿವೆ, ಕ್ರೀಡೆಗಳು ಅವಶ್ಯವಾಗಿವೆ ಎನ್ನುವುದನ್ನು ಇಂದಿನ ಪರಿಸ್ಥಿತಿಯಲ್ಲಿ ನಾವೆಲ್ಲರೂ ಕಾಣುತ್ತಿದ್ದೇವೆ ಯುವಕರು ತಮ್ಮ ದಿಕ್ಕನ್ನು ಬದಲಾಯಿಸುವ ಹಂತಕ್ಕೆ ಹೋಗುತ್ತಿದ್ದಾರೆ. ಅವರ ಮನಸ್ಸು ವಿಚರತವಾಗುತ್ತಿದೆ...

ಶ್ರೀ ಕೆ. ಬಿ. ಶಾಣಪ್ಪ.— ಪ್ರತಿಯೊಂದು ತಾಲ್ಲೂಕಿಗೂ ಕ್ರೀಡಾಂಗಣವನ್ನು ಕೊಡುತ್ತೇವೆ ಎಂದು ಘಂಟಾಘೋಷವಾಗಿ ಹೇಳುತ್ತಾ ಬಂದಿದ್ದಾರೆ. ಆದರೆ ಇನ್ನೂ ಕೆಲಸ ಆಗಿಲಿಲ್ಲ.

ಅಧ್ಯಕ್ಷರು.... ತಾವುಗಳು ದಯಮಾಡಿ ಕುಳಿತುಕೊಳ್ಳಬೇಕು, ಹೀಗೆ ಮಧ್ಯೆ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಕೆ. ಮಲ್ಲಪ್ಪ.—ಇಂದಿನ ಪರಿಸ್ಥಿತಿಯಲ್ಲಿ ಯುವಜನತೆ ಮಾನಸಿಕವಾಗಿ ನೈತಿಕವಾಗಿ ಬದಲಾವಣೆ ಹೊಂದುತ್ತಾ ಇದ್ದಾರೆ. ಇದಕ್ಕೆ ಕ್ರೀಡೆಗಳ ಕಡೆಗೆ ಅವರು ತಮ್ಮ ಮನಸ್ಸನ್ನು ತೊಡಗಿಸುವುದು ಕಡಿಮೆಯಾದುದರ ಕಾರಣ ಎಂದು ನಾನು ಹೇಳಬಯಸುತ್ತೇನೆ. ಕ್ರೀಡೆಗಳಲ್ಲಿ ತಮ್ಮ ಮನಸ್ಸನ್ನು ತೊಡಗಿಸುವುದರಿಂದ ಅವರಿಗೆ ತಮ್ಮ ಮಾನಸಿಕ ಸ್ಥೈರ್ಯವನ್ನು ಈ ಒಂದು ದಿಸೆಯಲ್ಲಿ ತೊಡಗಿಸಲು ಅನುವು ಮಾಡಿದಂತಾಗುತ್ತದೆ. ಇಲ್ಲದಿದ್ದರೆ ಅವರು ಬೇರೆಯಾದ ತಮ್ಮದೇ ಆದ ಹವ್ಯಾಸಗಳಲ್ಲಿ ತೊಡಗುವ ಸಂಭವ ಏರ್ಪಡುತ್ತದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಕ್ರೀಡೆಗಳ ಮೂಲಕ ರಾಷ್ಟ್ರೀಯ ಭಾವನೆಯನ್ನು ಬೆಳೆಸುವುದಕ್ಕೆ ಕೂಡ ಕ್ರೀಡೆಗಳು ಅವಶ್ಯಕವಾಗಿವೆ. ಈ ಎಲ್ಲಾ ಮಹತ್ವಪೂರಿತವಾದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಸರಕಾರದವರು ಕ್ರೀಡೆಗಳಿಗೆ ಹೆಚ್ಚು ಹೆಚ್ಚಾಗಿ ಪ್ರೋತ್ಸಾಹವನ್ನು ಕೊಡಬೇಕಲ್ಲದೆ, ಈ ಬಗ್ಗೆ ಒಂದು ಸಮಗ್ರವಾದ ಯೋಜನೆಯನು ರೂಪಿಸಿಕೊಂಡು ಅದನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಯುವಜನ/ಸಂಘಗಳು ಆಗುತ್ತಾ ಇವೆ. ಅವುಗಳಿಗೆ ಹೆಚ್ಚಿನ ಧನ ಸಹಾಯವನ್ನು ಕೊಡಬೇಕಾಗಿದೆ. ಅಂತೆಯೇ ಪ್ರತಿ ಗ್ರಾಮಾಂತರ ಪ್ರದೇಶಗಳಲ್ಲಿಯೂ ಗ್ರಂಥಾಲಯಗಳನ್ನು ಮಾಡಬೇಕು. ಇದರಿಂದಾಗಿ ಯುವಜನತೆ ಮಾನಸಿಕವಾಗಿ ತಮ್ಮನ್ನು ಓದಿನ ಕಡೆಗೆ ಹರಿಸುತ್ತಾರೆ, ಆ ಮೂಲಕ ಅಪಾರ ಜ್ಞಾನವನ್ನು ಪಡೆಯಲು ಕೂಡ ಸಾಧ್ಯವಾಗುತ್ತದೆ ಮತ್ತು ಓದುವುದರಿಂದ ತಮ್ಮ ಮನಸ್ಸನ್ನು ಒಳ್ಳೆಯ ವಿಚಾರಗಳ ಕಡೆಗೆ ತಲ್ಲೀನರಾಗಿಸಲು ಅನುವು ಮಾಡಿದಂತಾಗುತ್ತದೆ. ಅಷ್ಟೇ ಅಲ್ಲದೇ ವಿದ್ವತನ್ನು ಬೆಳೆಸಿಕೊಳ್ಳಲು ಅನುಕೂಲವಾಗುತ್ತದೆ ಆದುದರಿಂದ ಇಂತಹ ಗ್ರಂಥಾಲಯಗಳಿಗೆ ಆರ್ಥಿಕ ನೆರವನ್ನು ಕೊಡುವುದರ ಮೂಲಕ ಕ್ರೀಡೆಗಳಿಗೆ ಮತ್ತು ಗ್ರಂಥಾಲಯಗಳಿಗೆ ಸಹಾಯ ಆಗುತ್ತದೆ. ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಜಿಲ್ಲಾ ಕೇಂದ್ರಗಳಲ್ಲಿ ರಂಗಮಂದಿರಗಳನ್ನು ಮಾಡಬೇಕೆಂಬ ಗುರಿ ಇದೆ. ನಮ್ಮ ಜಿಲ್ಲೆಯಲ್ಲಿ ಇನ್ನೂ ರಂಗಮಂದಿರ ಬರಲಿಲ್ಲ, ದಾವಣಗೆರೆಯಲ್ಲಿ ರಂಗಮಂದಿರವನ್ನು ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ತನಕ ಆಗಿಲ್ಲ. ಇಲ್ಲಿಯ ನಗರಸಭೆಯವರು ಈ ಕಾರ್ಯವನ್ನು ಹಮ್ಮಿಕೊಂಡಿದ್ದಾರೆ. ಅದನ್ನು ಇನ್ನೂ ಒಳ್ಳೆಯ ರೀತಿಯಲ್ಲಿ ಮಾಡಲು ಅವರಿಗೆ, ಆರ್ಥಿಕ ನೆರವನ್ನು ಕೊಡಬೇಕೆಂದು ಕೇಳಿಕೊಂಡು, ಆದರಿಂದ ಗ್ರಾಮಾಂತರ ಪ್ರದೇಶಗಳವರಿಗೆ ತಮ್ಮ ಜಾನಪದ ಕಲೆಗಳಲ್ಲಾಗಲೀ, ನಾಟಕ ಕಲೆಗಳಲ್ಲಾಗಲೀ ಮನರಂಜನೆಯನ್ನು ಪಡೆಯಲು ಮತ್ತು ಹಳೆಯ ಕಲೆಗಳನ್ನು ಉಳಿಸಿಕೊಳ್ಳಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಅದುದರಿಂದ ದಾವಣಗೆರೆಯ ರಂಗಮಂದಿರಕ್ಕೆ ಆರ್ಥಿಕ ನೆರವನ್ನು ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ.

ಅನಂತರ ಕ್ರೀಡಾ ಪಟುಗಳಿಗೆ ಮಾಸಾಶನ ಕೊಡುತ್ತಿದ್ದಾರೆ. ಹಿಂದೆಬಯಲುಜಾತ್ರೆಗಳಲ್ಲಿ ಕುಸ್ತಿಗಳನ್ನು ಆಡುತ್ತಿದ್ದರು. ಯಾವ ಪ್ರಶಸ್ತಿ ಪತ್ರಗಳನ್ನೂ ಅವರು ಕೊಡುತ್ತಿರಲಿಲ್ಲ. ಆಗ ಬರೀ ಮಂಡಕ್ಕಿ ಉಂಡಾಟಕ್ಕೆ ಅವರ ಜೀವನವನ್ನು ಪಣವಾಗಿಡುತ್ತಿದ್ದರು. ಈಗ ಸರ್ಕಾರ ಪ್ರಶಸ್ತಿ ಪತ್ರಗಳನ್ನು ಕೊಡುತ್ತಿದೆ. ಆದರೆ ಕುಸ್ತಿಪಟುಗಳ ಆರ್ಥಿಕ ಸ್ಥಿತಿ ಬದಲಾಗಿ ತೊಂದರೆಯಲ್ಲಿದ್ದು ಜೀವನ

ನಿರ್ವಹಣೆಯೇ ಕಷ್ಟವಾಗಿದೆ. ಆದ್ದರಿಂದ ನಿಮ್ಮ ಪ್ರಶಸ್ತಿ ಪತ್ರ ಕೊಡುವ ಬದಲು ದುರ್ಬಲ ವರ್ಗದ ಕುಸ್ತಿ ಪಟುಗಳಿಗೆ ಮಾಸಾಶನವನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಪೋಲಿಸ್ ಡಿಪಾರ್ಟ್‌ಮೆಂಟ್ ಬಗ್ಗೆ ರಾಚಯ್ಯನವರು ನಮ್ಮ ರಾಜ್ಯದಲ್ಲಾಗುತ್ತಿದ್ದ ದರೋಡೆಗಳನ್ನು ತಡೆಗಟ್ಟಿದ್ದಾರೆ. ೧೯೮೩ಕ್ಕಿಂತ ಮೊದಲು ಒಂದಲ್ಲ ಒಂದು ಕಡೆ ಹೆದ್ದಾರಿ ದರೋಡೆ ನಡೆಯುತ್ತಿದ್ದವು. ಅವುಗಳನ್ನು ತಪ್ಪಿಸುವುದರ ಜೊತೆಗೆ ಮುಂದೆ ಅವು ಆಗತಾನೆ ಹತೋಟಿಗೆ ತಂದಿದ್ದಾರೆ. ಜನ ನೆಮ್ಮದಿಯಿಂದ ಇರಲು ವ್ಯವಸ್ಥೆ ಮಾಡಿದ್ದಾರೆ. ಆದರೆ ಪೋಲೀಸ್ ಇಲಾಖೆಯೆಂದರೆ ಬರೀ ಬೆಂಗಳೂರು ಅಲ್ಲ, ಬರೀ ಬೆಂಗಳೂರಿನಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ಪೋಲಿಸರ ಸ್ಥಾನವನ್ನು ಕೊಟ್ಟಿದ್ದಾರೆ. ಬೇರೆ ನಗರಗಳಲ್ಲಿ ಕೊಟ್ಟಿಲ್ಲ. ನಮ್ಮ ಚಿತ್ರದುರ್ಗದಲ್ಲಿ ೨೦–೩೦ ವರ್ಷಗಳಿಂದ ಹಿಂದೆ ಕೊಟ್ಟಿದ್ದ ಸಂಖ್ಯೆಯನ್ನೇ ಇವತ್ತಿಗೂ ಮುಂದುವರಿಸಿಕೊಂಡು ಹೋಗಲಾಗಿದೆ. ಯಾವುದಾದರೂ ಗಲಾಟೆ ಆದರೆ ಅದನ್ನು ನಿಯಂತ್ರಿಸಲು ಪೋಲಿಸ್‌ಮೆನ್ ಇಲ್ಲ ಎನ್ನುತ್ತಾರೆ. ಆದ್ದರಿಂದ ಹೆಚ್ಚಿನ ರೀತಿಯಲ್ಲಿ ಇವರನ್ನು ಭರ್ತಿ ಮಾಡಬೇಕು. ಅಂದರೆ ಜನಸಂಖ್ಯೆಗನುಸಾರವಾಗಿ ಪೋಲಿಸರನ್ನು ನೇಮಿಸುವ ವ್ಯವಸ್ಥೆ ಮಾಡಬೇಕು. ಹಾಗೂ ಜನತೆ ನೆಮ್ಮದಿಯಾಗಿ ಬಾಳಲು ಅವಕಾಶ ಮಾಡಿಕೊಡಬೇಕು.

ಕೆಲವು ನಗರಗಳಲ್ಲಿ ದೊಡ್ಡ ಆಸ್ಪತ್ರೆಗಳಿವೆ ಅಲ್ಲಿಗೆ ದರೋಡೆಯಾಗೋ, ಗಲಾಟೆಯಾಗೋ ಏಟು ತಿಂದವರ ಚಿಕಿತ್ಸೆಗಾಗಿ ರೋಗಿಗಳನ್ನು ತರಲಾಗುವುದು. ಅಂಥ ಸಂದರ್ಭದಲ್ಲಿ ಈ ಸುದ್ದಿಯನ್ನು ಪೋಲಿಸ್ ಸ್ಟೇಷನ್ನಿಗೆ ಕೊಡಲು ಕಷ್ಟವಾಗುತ್ತದೆ. ಆದ್ದರಿಂದ ನಗರಗಳಲ್ಲಿರುವ ಆಸ್ಪತ್ರೆಗಳಲ್ಲೊಂದು ಪೋಲಿಸ್ ಔಟ್‌ಪೋಸ್ಟನ್ನು ತೆರೆಯಬೇಕೆಂದು ಬಹಳ ದಿವಸಗಳಿಂದ ಕೇಳಿಕೊಳ್ಳುತ್ತಿದ್ದೇವೆ. ಇದರಿಂದ ತಕ್ಷಣ ಕ್ರಮ ಕೈಗೊಳ್ಳಲಿಕ್ಕೆ ಅವಕಾಶವಾಗುತ್ತದೆ. ಇದರಿಂದ ಜನತೆಯು ನೆಮ್ಮದಿಯೂ ಉಳಿಯುತ್ತದೆ.

ಪೋಲಿಸ್ ಸ್ಟೇಷನ್‌ನಲ್ಲಿ ಸ್ಟೇಷನರಿಗೆ ಎಂದು ಎರಡು ರೂಪಾಯಿಗಳನ್ನು ಕೊಡಲಾಗುತ್ತಿದೆಯಂತೆ. ಬಹಳ ದಿನಗಳಿಂದಲೂ ಹೀಗೆ ನಡೆದಿದೆ. ಆಕಸ್ಮಿಕವಾಗಿ ಯಾರಾದರೂ ಆಕ್ಸಿಡೆಂಟಾಗೋ, ಸತ್ತರೋ ಆ ಪ್ರಕರಣದ ಬಗ್ಗೆ ಸ್ಟೇಷನ್‌ಗೆ ಹೋದರೆ ಸ್ಟೇಷನ್‌ನವರು ಹೋದವರನ್ನು ಪೇಪರ್ ತಂದು ಕೊಡಿ, ಕಾರ್ಬನ್ ಷೀಟ್ ತಂದುಕೊಡಿ ಎನ್ನುತ್ತಾರೆ. ಇದು ಹೊಸದೇನೂ ಅಲ್ಲ. ಆದ್ದರಿಂದ ಅದನ್ನು ಸುಧಾರಣೆ ಮಾಡಬೇಕು. ತಿಂಗಳಿಗೆ ಎರಡು ರೂಪಾಯಿ ಬದಲು ಬೇಕಾದ ಬಿಳಿ ಕಾಗದ, ಕಾರ್ಬನ್ ಪೇಪರ್‌ಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು, ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸಚಿವರನ್ನು ಕೋರುತ್ತೇನೆ. ಪೋಲಿಸರಿಗೆ ಯೂನಿಫಾರ್ಮ್ ಸಹ ಕಡಿಮೆ ಕೊಡುತ್ತಾರೆ. ಅದನ್ನು ಜಾಸ್ತಿ ಮಾಡಬೇಕು. ವಾಷಿಂಗ್ ಅಲೋಯನ್ಸ್ ಜಾಸ್ತಿ ಮಾಡಬೇಕು.

೪–೦೦ ಪಿ.ಎಂ.

ಅವರು ಬಾಡಿಗೆ ಮನೆಯಲ್ಲಿದ್ದರೆ ಗೊತ್ತಾಗುವುದಿಲ್ಲ ಫೋನ್ ಮಾಡಿದರೂ ಕೂಡ ಗೊತ್ತಾಗುವುದಿಲ್ಲ ಅಲ್ಲಿ ಫೋನ್ ಕೂಡ ಇರುವುದಿಲ್ಲ ಪೋಲೀಸ್ ಕಾಲೋನಿ ಇದ್ದರೆ ನಾವು ಕರೆದ ಕೂಡಲೇ ಅವರು ಬಂದು ಜನಗಳಿಗೆ ಆಗತಕ್ಕಂತಹ ತೊಂದರೆಯನ್ನು ತಪ್ಪಿಸಲಿಕ್ಕೆ ಅನುಕೂಲವಾಗುತ್ತದೆ ಮತ್ತು ಅವರ ರಕ್ಷಣೆಗೆ ಅವಕಾಶ ವಾಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ನಮ್ಮ ಸಾರಿಗೆ ಸಚಿವರು ಉಳಿತಾಯದ ವಿಚಾರದಲ್ಲಿ ನಮ್ಮ ರಾಜ್ಯದಲ್ಲಿ ಒಂದು ನೂತನವಾದಂತಹ ದಾಖಲೆಯನ್ನು ಸ್ಥಾಪಿಸಿದ್ದಾರೆ ಅಷ್ಟೇ ಏಕೆ ನಮ್ಮ ರಾಷ್ಟ್ರದಲ್ಲೇ ಒಂದು ದಾಖಲೆಯನ್ನು ಸ್ಥಾಪಿಸಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಉಳಿತಾಯ ಸರ್ಟಿಫಿಕೇಟ್‌ನಲ್ಲಿ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ ಆದಕ್ಕಾಗಿ ನಾನು ಅವನನ್ನು ಅಭಿನಂದಿಸುತ್ತೇನೆ. ಇತ್ತೀಚೆಗೆ ಇಂದಿರಾ ವಿಕಾಸ ಪತ್ರವನ್ನು ಕೇಂದ್ರ ಸರ್ಕಾರದವರು ಬಿಡುಗಡೆ ಮಾಡಿದ್ದಾರೆ, ನಾವು ಐದು ಸಾವಿರ ರೂಪಾಯಿ ತೊಡಗಿಸಿದರೆ ಐದು ವರ್ಷಗಳ ನಂತರ ಹತ್ತು ಸಾವಿರ ರೂಪಾಯಿ ಬರುತ್ತದೆ. ಅದೇ ನಾವು ಇಟ್ಟಿರುವ ರಾಷ್ಟ್ರೀಯ ಉಳಿತಾಯ ಯೋಜನೆಯನ್ನು ತೆಗೆದುಕೊಂಡರೆ ಆರು ವರ್ಷದಲ್ಲಿ ಅದು ದ್ವಿಗುಣವಾಗುವುದಕ್ಕೆ ಸಾಧ್ಯವಿಲ್ಲ. ಇಂದಿರಾ ವಿಕಾಸ ಪತ್ರ ತೆಗೆದುಕೊಂಡರೆ ಅದು ಐದು ವರ್ಷಕ್ಕೆ ದ್ವಿಗುಣವಾಗುತ್ತದೆ ಇದು ಆರು ವರ್ಷ ಇದ್ದರೂ ಕೂಡ ದ್ವಿಗುಣವಾಗದೇ ಇದರೆ ಹೆಚ್ಚಿನ ಹಣವನ್ನು ಇಂದಿರಾ

ವಿಕಾಸ ಪತ್ರದಲ್ಲಿ ತೊಡಗಿಸುತ್ತಾರೆ. ಆದುದರಿಂದಾಗಿ ಈ ಎರಡೂ ಯೋಜನೆಗಳನ್ನು ಒಂದೇ ಸಮನಾಗಿ ಮಾಡಿದರೆ, ಎರಡಕ್ಕೂ ಸರಿಸಮಾನವಾದ ಮೊತ್ತ ಬರುವುದಾದರೆ ಜನತೆಯಲ್ಲಿ ವಿಶ್ವಾಸ ಮೂಡುತ್ತದೆ. ಇನ್ನು ಸಾರಿಗೆ ಬಗ್ಗೆ ಹೇಳುವುದಾದರೆ ಮಾನ್ಯ ಸಿಂಧ್ಯಾರವರು ಸಾರಿಗೆ ಸಚಿವರಾಗಿದ್ದಾಗ 20 ಕಿಲೋ ಮೀಟರ್ ಮೇಲ್ಪಟ್ಟು ಇದ್ದರೆ ಸಬ್–ಅರ್ಬನ್ ಬಸ್ಸುಗಳನ್ನು ಓಡಿಸುತ್ತೇವೆಂದು ಹೇಳಿದರು. ಆದರೆ ಇದುವರೆಗೂ ಈ ಕೆಲಸ ಆಗಿಲ್ಲ. ಇದನ್ನು ಕೂಡಲೇ ಮಾಡಿಸಿಕೊಡಿ ಎಂದು ಮಾನ್ಯ ವೀರಣ್ಣನವರನ್ನು ಕೇಳಿಕೊಳ್ಳುತ್ತೇನೆ. ಹಿಂದಿನಿಂದ ಬಸ್ಸನ್ನು ಬಿಡಿಸುತ್ತೇವೆ ಬಿಡಿಸುತ್ತೇವೆಂದು ಹೇಳುತ್ತಿದ್ದಾಗ ಆದರೆ ಇನ್ನೂ ಆಗಿಲ್ಲ. ತಾವು ನೋಡಿರಬಹುದು ಮಾರ್ಗದಲ್ಲಿ ಬಸ್ ಹೊಗುತ್ತಿರ ಬೇಕಾದರೆ ಬಸ್ ಟಾಪ್ ಮೇಲೆ ನಿಂತು ಜನ ಹೋಗುತ್ತಾರೆ, ಹೀಗೆ ಹೋಗುವಾಗ ಮರದ ಕೊಂಬೆ ಗಳು ಬಡಿದು ಜನರು ಸಾಯುತ್ತಿದ್ದಾರೆ. ಸಬ್–ಅರ್ಬನ್ ಸರ್ವೀಸ್ ನೀಡುವ ಮೂಲಕ ಗ್ರಾಮಾಂತರ ಪ್ರದೇಶದ ಜನರಿಗೆ ಸಾರಿಗೆ ಅನುಕೂಲವನ್ನು ಮಾಡಿಕೊಡಬೇಕು. ಇನ್ನೂ ನಮ್ಮಲ್ಲಿ ನಾಲ್ಕೈದು ಕಿಲೋಮೀಟರ್‌ನಿಂದ ನಡೆದುಕೊಂಡು ಬಂದು ಬಸ್ ಹತ್ತತಕ್ಕಂತಹ ಪರಿಸ್ಥಿತಿ ಇದೆ. ಆದುದರಿಂದಾಗಿ ಲಿಂಕ್ ರೋಡ್ ಏನಿದೆ, ಒಳಾಂಗಣ ಮಾರ್ಗ ಏನಿದೆ ಅಲ್ಲೂ ಕೂಡ ಬಸ್ಸುಗಳನ್ನು ಓಡಿಸಬೇಕು. ಇನ್ನು ಎಷ್ಟೋ ಬಸ್ಸುಗಳಲ್ಲಿ ಇವತ್ತು ಹಾರನ್ ಇಲ್ಲ. ಬ್ರೇಕ್ ಇಲ್ಲ, ಲೈಟ್ ಇಲ್ಲ ಹೀಗಾಗಿ ತುಂಬಾ ತೊಂದರೆಯಾಗುತ್ತಿದೆ. ಪಂಕ್ಚರ್ ಆದರೆ ಹಾಕಿಕೊಳ್ಳುತ್ತಾರೆ, ಮೆಷಿನ್ ಕೆಟ್ಟರೆ ರಿಪೇರಿ ಮಾಡಿಕೊಳ್ಳು ತ್ತಾರೆ ಇಲ್ಲವೇ ಇನ್ನೊಂದು ಬಸ್‌ನಲ್ಲಿ ಬರುತ್ತಾರೆ. ಹಾರನ್ ಇಲ್ಲದಿದ್ದರೆ ಬಹಳ ಅಪಾಯಕರವಾಗುತ್ತದೆ. ಆದುದರಿಂದಾಗಿ ಬಸ್ಸುಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಹಾರನ್, ಲೈಟ್ ಹಾಗೂ ಬ್ರೇಕ್ ಇರುವ ವ್ಯವಸ್ಥೆಯನ್ನು ಮಾಡಬೇಕು. ಎಷ್ಟೋ ಬಸ್ಸುಗಳನ್ನು ಸಿಂಗಲ್ ಲೈಟಿನಲ್ಲಿ ಓಡಿಸುತ್ತಿರುತ್ತಾರೆ. ಮಾನ್ಯ ಸಚಿವರು ಈ ಎಲ್ಲಾ ದೋಷಗಳನ್ನು ಸರಿಪಡಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೋಸ್ಕರ ತಮಗೆ ವಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ ಹೆಚ್. ಶ್ರೀನಿವಾಸ್ (ಶಿವಮೊಗ್ಗ).— ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಸದನದ ಮುಂದೆ ಹಲವಾರು ಪ್ರಾಮುಖ್ಯವಾದ ಬೇಡಿಕೆಗಳು ಏಕಕಾಲದಲ್ಲಿ ಚರ್ಚೆಯಾಗುತ್ತಿವೆ, ಮತ್ತೆ ಸಮಯ ಕೂಡಾ ಬಹಳ ಕಡಿಮೆ ಇದೆ. ಆದ್ದರಿಂದ ನಿಜವಾಗಿ ಇದರಲ್ಲಿ ಯಾವುದರ ಬಗ್ಗೆ ಏನು ಭಾಷಣ ಮಾಡಬೇಕು ಎನ್ನತಕ್ಕಂಥದ್ದು ಅರ್ಥವಾಗದೇ ಗೊಂದಲದ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಈ ಇಲಾಖೆಗಳಿಗೆ ಸಂಬಂಧಿಸಿದಂತೆ ನಮ್ಮ ಕಾಗದ ಪತ್ರಗಳನ್ನು ಜೋಡಿಸಿಕೊಳ್ಳುವುದಕ್ಕೂ ಕೂಡಾ ಸಮಯ ಉಳಿಯುವುದಿಲ್ಲವಲ್ಲ. ಆದುದರಿಂದ, ಕೆಲವೇ ಕೆಲವು ಮುಖ್ಯ ವಿಷಯಗಳಿಗೆ ಸಂಬಂಧ ಪಟ್ಟಂತೆ ಒಂದೆರಡು ಮಾತುಗಳನ್ನು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ, ಬೆಳಿಗ್ಗೆಯಿಂದ ನಮ್ಮ ಮುಂದೆ ಈ ಚರ್ಚೆಯನ್ನು ಕೇಳಿಕೊಂಡು ತುಂಬಾ ಶ್ರದ್ಧಾ ಭಕ್ತಿಗಳಿಂದ ಮಾನ್ಯ ಶ್ರೀ ರಾಚಯ್ಯನವರು ಗೃಹ ಸಚಿವರು ಇದ್ದಾರೆ. ಆದುದರಿಂದ ಅವರ ಇಲಾಖೆಯಿಂದಲೇ ಪ್ರಾರಂಭ ಮಾಡತಕ್ಕಂಥದ್ದು ನ್ಯಾಯ ಮತ್ತು ಧರ್ಮಸಮ್ಮತ ಎಂದು ನಾನು ಅಂದುಕೊಂಡಿದ್ದೇನೆ. ಈ ಪೋಲೀಸ್ ಇಲಾಖೆಯ ಬಗ್ಗೆ ತುಂಬಾ ಗಂಭೀರವಾದಂಥ ಒಂದು ಚರ್ಚೆ ಈ ಸದನದಲ್ಲಿ ನಡೆಯ ಬೇಕು ಎಂದು ಇಲ್ಲಿ ಕೆಲವು ದಿವಸಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಕೂಡಾ ಅಭಿಪ್ರಾಯ ಪಟ್ಟಿದ್ದರು. ನಾನು ಕೂಡಾ ಹಲವಾರು ಸಾರಿ ಹೇಳಿದ್ದೇನೆ. ಪೋಲೀಸ್ ಇಲಾಖೆಯ ಕಾರ್ಯ ಕ್ಷಮತೆಯನ್ನು ಸುಧಾರಿಸುವ ಬಗ್ಗೆ ಅತ್ಯಂತ ಪರಿಪೂರ್ಣವಾದ ವರದಿಯನ್ನು ನ್ಯಾಷನಲ್ ಪೋಲೀಸ್ ಕಮಿಷನ್" ಎಂಬುವರ ಬಗ್ಗೆ ಧರ್ಮವೀರ್ ಎಂಬುವರು ಸಿದ್ಧಪಡಿಸಿದರು. ಆ ವರದಿಯನ್ನು ಇಟ್ಟುಕೊಂಡು ಈ ಸದನ ಕೊನೆಯಪಕ್ಷ ಇಡೀ ದಿವಸ ಪೋಲೀಸ್ ಇಲಾಖೆಯ ಬಗ್ಗೆ ಚರ್ಚೆ ಮಾಡು ವಂಥ ಅಗತ್ಯ ಇತ್ತು. ಈ ಸದನದಲ್ಲಿ ಅದು ಆಗಬಹುದು ಎಂದು ನನ್ನ ನಿರೀಕ್ಷೆ ಕೂಡಾ ಇತ್ತು. ದುರಾದೃಷ್ಟವಶಾತ್, ಈ ವರದಿಯ ಪ್ರತಿಗಳೂ ಕೂಡಾ ದೊರಕುತ್ತಾ ಇಲ್ಲ. ನಾನು ಹಿಂದೆ ನಮ್ಮ ಪೋಲೀಸ್ ವರಿಷ್ಠ ಅಧಿಕಾರಿಗಳಾದ ಮಾನ್ಯ ಶ್ರೀ ಗರುಡಾಚಾರ್‌ರವರನ್ನು ಕೇಳಿಕೊಂಡೆ. ಅದಕ್ಕೆ ಅವರು ಅದು ಡೆಲ್ಲಿಯಲ್ಲಿ ಸಿಗುತ್ತದೆ ಎಂದು ಹೇಳಿದ್ದರು. ಅದನ್ನು ನನಗೆ ತರಿಸಿಕೊಡಿ ಎಂದು ಕೇಳಿಕೊಂಡೆ ಸಿಗಲಿಲ್ಲ ಆದರೆ, ನಾನು ಹಿಂದೆ ಓದಿದಂಥ ನೆನಪಿನಲ್ಲಿ ಹೇಳುವುದಾದರೆ ಇನ್ನು ದಿನನಿತ್ಯ, ದಿನಬೆಳಗಾದರೆ ಪೋಲೀಸ್ ವೈಫಲ್ಯಗಳ ಬಗ್ಗೆ ಮಾತನಾಡುತ್ತೇವೆ. ಎಲ್ಲಾ ವಿಚಾರಗಳ ಬಗ್ಗೆ ಅವರು ತುಂಬಾ ಆಳವಾದಂಥ, ಅಧ್ಯಯನ ಮಾಡಿ ಅದನ್ನು ಯಾವ ರೀತಿಯಲ್ಲಿ

ಬದಲಾಯಿಸಿಕೊಳ್ಳಬೇಕು ಹೇಗೆ ಅದನ್ನು ತಡೆಗಟ್ಟಬೇಕು ಎನ್ನತಕ್ಕಂಥದ್ದನ್ನು ಅವರು ಅಲ್ಲಿ ಹೇಳಿದ್ದಾರೆ. ಬೆಳಿಗ್ಗೆ ವೆಂಕಟರಾಮಯ್ಯನವರೋ ಯಾರೋ ಹೇಳುತ್ತಿದ್ದರು. ಪೋಲೀಸ್ ಪೇದೆಗಳನ್ನು ಪೋಲೀಸ್ ಅಧಿಕಾರಿಗಳು ಬಳಸಿಕೊಳ್ಳುತ್ತಾರೆ ಎಂದು. ಅದನ್ನೂ ಕೂಡಾ ಅವರು ಹೇಳಿದ್ದಾರೆ. ಪೋಲೀಸ್ ಪೇದೆಯ ಬಗ್ಗೆ ನಮ್ಮ ನಾಯಕರು ಹೇಳುವಂತೆ ಬಾಲ ಭಾಷೆಯಿಂದ ಪ್ರಯೋಗ ಮಾಡುತ್ತಾನೆ ಎಂದರೆ ಅವನಿಗೆ ದಿನನಿತ್ಯ ಅದೇ ಪ್ರಯೋಗವಾಗುತ್ತದೆ, ಅದಕ್ಕೋಸ್ಕರವಾಗಿ ಆ ರೀತಿ ಮಾಡುತ್ತಾನೆ. ಅವನು ಒಂದಲ್ಲ ಒಂದು ಕಡೆ ಎಲ್ಲಿಯಾದರೂ ಅದನ್ನು ತೀರಿಸಿಕೊಳ್ಳಬೇಕು ಎಂದು ಆ ಕೆಲಸವನ್ನು ಮಾಡುತ್ತಾನೆ. ಅದನ್ನೂ ಕೂಡಾ ವಿಶ್ಲೇಷಣೆ ಮಾಡಿದ್ದಾರೆ. ನಾನು ಒಂದು ಟಿ. ವಿ. ಸಿನಿಮಾ ನೋಡಿದೆ. ಅದರಲ್ಲಿ ಒಬ್ಬನು ಪ್ರತಿ ದಿವಸ ಬಂದು ಮನೆಯಲ್ಲಿ ಅವನು ಶಾಂತವಾಗಿರುತ್ತಿದ್ದ. ಒಂದು ದಿವಸ ಮನೆಯಲ್ಲಿ ಬಂದವನು ಹೆಂಡತಿ ಮಕ್ಕಳ ಮೇಲೆ ಹುಚ್ಚಾಪಟ್ಟೆ ಗಲಾಟೆ ಮಾಡಿಬಿಟ್ಟ. ಕೊನೆಗೆ ಅದಕ್ಕೆ ಕಾರಣವೇನೆಂದರೆ ಪ್ರತಿದಿವಸ ಆಫೀಸಿನಿಂದ ಬರುವುದಕ್ಕೆ ಮುಂಚೆ ಹತ್ತಿರ ಇರತಕ್ಕಂಥ ಒಂದು ಸಣ್ಣ ಗುಡ್ಡಕ್ಕೆ ಹೋಗುತ್ತಿದ್ದ. ಹೋಗಿ ಅಲ್ಲಿ ಏನು ಮಾಡುತ್ತಿದ್ದ ಎಂದರೆ ಅಲ್ಲಿ ಗುಹೆ ತರಹ ಇದೆ, ಆ ಗುಹೆ ಒಳಗೆ ಆಫೀಸಿನ ಬಾಸ್ ಫೋಟೋ ಹಾಕಿ, ಆ ಫೋಟೋಗೆ ಚಪ್ಪಲಿ ಹಾರ ಹಾಕಿ ಅರ್ಧ ಗಂಟೆ ಬಾಯಿಗೆ ಬಂದಹಾಗೆ ಫೋಟೋಗೆ ಬೈಯ್ದುಬಿಟ್ಟು ಬಂದು ಮನೆಯಲ್ಲಿ ಸುಖವಾಗಿರುತ್ತಿದ್ದ, ಆಗ ಅವನು ಬಹಳ ಸರಿಯಾಗಿರುತ್ತಿದ್ದ. ಒಂದು ದಿವಸ ಆ ಕೆಲಸವನ್ನು ಮಾಡದೇ ಇದ್ದುದರಿಂದ ಅವನ ಮನೆಯಲ್ಲಿ ಈ ರೀತಿ ಅನಾಹುತ ಆಯಿತು.

ಹೀಗೆ ಪೋಲೀಸ್ ಪೇದೆಗಳದೇ ಆಗಲಿ ಮತ್ತೊಬ್ಬರಿಗೇ ಆಗಲಿ ಅವರು ಏನು ನಿರೀಕ್ಷೆ ಮಾಡಿದ್ದಾರೋ ಅದು ಏತಕ್ಕೆ ಸಿಗುವುದಿಲ್ಲ ? ಅವರಿಗೆ ಏನು ಸಿಗುತ್ತದೆ ಎನ್ನುವುದನ್ನು ಅವರು ತಮ್ಮ ವರದಿಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಅವರು ಈ ಇಲಾಖೆಯ ಬಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಪೋಲೀಸ್ ಸ್ಟೇಷನ್‌ಗೆ ಹೋದಂಥ ಮನುಷ್ಯ ಪೋಲೀಸ್ ಕಸ್ಟಡಿಯಲ್ಲಿದ್ದಾಗ ಹೊರಗೆ ಬರುವಷ್ಟರಲ್ಲೇ ಸತ್ತು ಹೋಗಿರುತ್ತಾನೆ. ಅವನನ್ನು ಲಾಕಪ್‌ನಲ್ಲಿ ಇಟ್ಟಾಗ ಅವನು ಆತ್ಮಹತ್ಯೆ ಮಾಡಿಕೊಂಡು. ಅವನಿಗೆ ಹಾರ್ಟ್ ಅಟ್ಯಾಕ್ ಆಯಿತು, ಆದರಿಂದ ಪ್ರಾಣಬಿಟ್ಟ ಎಂದು ಅವರು ವಿವರಣೆ ಕೊಡುತ್ತಾರೆ. ಅದಕ್ಕೆ ನಾನು ಹೇಳುವುದೇನೆಂದರೆ ಅವನನ್ನು ಪೋಲೀಸ್ ಕಸ್ಟಡಿಯಲ್ಲಿ ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ಅವನ ಆರೋಗ್ಯವನ್ನು ಪರೀಕ್ಷಿಸಬೇಕು, ಮೆಡಿಕಲ್ ಚೆಕ್‌ಅಪ್ ಮಾಡಬೇಕು. ಹಲವಾರು ವಿಷಯಗಳ ಬಗ್ಗೆ ದಿನನಿತ್ಯ ನಾವು ಪ್ರಶ್ನೆಗಳ ಮುಖಾಂತರ ಮತ್ತು ಗಮನ ಸೆಳೆಯುವ ಸೂಚನೆಗಳ ಮುಖಾಂತರ ಇದನ್ನು ಚರ್ಚೆ ಮಾಡಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಗೃಹಸಚಿವರನ್ನು ಕೇಳಿಕೊಳ್ಳುವುದೇನೆಂದರೆ ಅವರ ಕೈಯಲ್ಲಿ ಈ ವರದಿ ಇದೆಯೋ ಇಲ್ಲವೋ ಗೊತ್ತಿಲ್ಲ, ಅವರು ಆ ವರದಿಯನ್ನು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. ಆ ವರದಿ ತಮ್ಮ ಹತ್ತಿರ ಇಲ್ಲದಿದ್ದರೆ ಅದರ ಒಂದು ಪ್ರತಿಯನ್ನು ತರಿಸಿ ಅದರ ಬಗ್ಗೆ ಒಂದು ಸಂಕ್ಷಿಪ್ತ ರೂಪದಲ್ಲಾದರೂ ಇಲ್ಲಿ ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಕೊನೆಗೆ ನಾವು ಎಸ್ ಅಂದರೂ ಅವರೂ 'ಎಸ್' ಎನ್ನುತ್ತಾರೆ, ನಾವು 'ನೊ' ಅಂದರೂ ಅವರು 'ಎಸ್' ಅನಿಸಿಕೊಂಡು ಪಾಸು ಮಾಡಿಕೊಳ್ಳುತ್ತಾರೆ ಅದು ಮುಖ್ಯವಲ್ಲ. ಅದರಿಂದಾಗಿ ಈ ಪೋಲೀಸ್ ಇಲಾಖೆಯನ್ನು ಸುಧಾರಿಸಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಇಲಾಖೆಯನ್ನು ಸುಧಾರಿಸುವುದಕ್ಕೆ ಇದರ ಬಗ್ಗೆ ಚರ್ಚೆಯಾಗಬೇಕು- ಇದಕ್ಕೆ ಕಾಲ ವ್ಯಯವಾದರೂ ಪರವಾಗಿಲ್ಲ ಮಾನ್ಯ ಧರ್ಮವೀರ್ ಅವರು ಸೀಜನ್ಡ್ ಆದ ವ್ಯಕ್ತಿ ಅವರು ಇದರ ಬಗ್ಗೆ ಸಿದ್ಧಪಡಿಸಿರತಕ್ಕಂಥ ವರದಿ ಏನು ಇದೆ ಅದರ ಒಂದು ಪ್ರತಿಯನ್ನು ದೊರಕುವ ಹಾಗೆ ಮಾಡಿ. ಈಗ ಅದರ ಪ್ರತಿ ದೊರಕದ ಹಾಗೆ ದುಸ್ಥಿತಿಯಲ್ಲಿರುವುದು ಸರಿಯಲ್ಲ. ಇದನ್ನು ಕೇಂದ್ರ ಸರ್ಕಾರದವರು ಮಾಡಬೇಕು. ಎನ್ನುವ ವಿವರಣೆ ಕೊಡುವುದು ಬೇಡ. ಕೇಂದ್ರ ಸರ್ಕಾರದವರು ಏನು ಬೇಕೋ ಮಾಡಿಕೊಳ್ಳುತ್ತಾರೆ. ಇದರ ಬಗ್ಗೆ ನಮಗೆ ಪ್ರತಿಯನ್ನು ಒದಗಿಸಿ. ನಾವಾದರೂ ಕೂಡ ಇದರ ಬಗ್ಗೆ ಒಂದು ದಿವಸ ಈ ವರದಿಯನ್ನು ಇಟ್ಟುಕೊಂಡು ಈ ಪೋಲೀಸ್ ಇಲಾಖೆಯ ಬಗ್ಗೆ ಚರ್ಚೆ ಮಾಡುವುದು ಯೋಗ್ಯ ಎಂದು ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳೂ ಸಹ ಹಲವಾರು ಸಲ ಇದನ್ನು ಹೇಳಿದ್ದಾರೆ. ಅವರಿಗೂ ಸಹ ನಾನು ಜ್ಞಾಪಿಸಲಿಕ್ಕೆ ಬಯಸುತ್ತೇನೆ. ಈ ಪೋಲೀಸ್ ಇಲಾಖೆಯ ಮೇಲೆ ಸಾಧ್ಯವಾದರೆ ಒಂದು ದಿವಸ ಚರ್ಚೆಯನ್ನು ಈ ಸದನ ಮುಗಿಯುವುದರೊಳಗಾದರೂ ಇಡಿ. ಸಾಧ್ಯವಿಲ್ಲದೇ ಹೋದರೆ ಮುಂದೆ ಸಭೆ ಸೇರಿದಾಗಾಲಾದರೂ ಇಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಪೋಲೀಸ್ ಇಲಾಖೆಯ 1986ರ ವಾರ್ಷಿಕ ವರದಿಯಲ್ಲಿ ಮೊಟ್ಟ ಮೊದಲನೇ ಪ್ಯಾರಾದಲ್ಲೇ ಈ ರೀತಿ ಹೇಳಿದ್ದಾರೆ.— ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

> '' ಸಾರ್ವಜನಿಕರ ಪ್ರಾಣ ಮತ್ತು ಆಸ್ತಿಪಾಸ್ತಿಗಳ ರಕ್ಷಣೆ ಪೋಲೀಸ್ ಇಲಾಖೆಯ ಆದ್ಯ ಕರ್ತವ್ಯ. ಕಾನೂನು ಮತ್ತು ಶಾಂತಿಪಾಲನೆ, ಅಪರಾಧಗಳನ್ನು ತಡೆಗಟ್ಟುವುದು ಮತ್ತು ಅವುಗಳನ್ನು ಪತ್ತೆ ಹಚ್ಚುವುದು ಈ ಮೂಲಕ ಸಮಾಜದಲ್ಲಿ ಸುವ್ಯವಸ್ಥೆ ಶಾಂತಿ ಮತ್ತು ಭದ್ರತೆ ನೆಲೆಸುವಂತೆ ಮಾಡುವುದೇ ಇಲಾಖೆಯ ಮೂಲ ಉದ್ದೇಶ'' ಎಂದು ಇದೆ. ಇದು ಈ ವರದಿಯ ಪ್ರಾರಂಭದಲ್ಲೇ ಇದೆ.

ಈ ರೀತಿಯ ಹೇಳಿಕೆ ಬಂದಿದೆ. ಇವರು ಸಾರ್ವಜನಿಕರನ್ನು ರಕ್ಷಣೆ ಮಾಡುವುದು ಇರಲಿ, ಅವರಿಗೆ ತೊಂದರೆಯಾಗದೇ ಇದ್ದ ಹಾಗೆ ನೋಡಿಕೊಂಡರೆ ಸಾಕು. ಸಮಾಜದಲ್ಲಿ ಎಲ್ಲರಿಗೂ ರಕ್ಷಣೆ ಕೊಡಬೇಕಾದದ್ದು ನಮ್ಮ ಇಲಾಖೆಯ ಧ್ಯೇಯ, ಮತ್ತು ನಮ್ಮ ಆದ್ಯ ಕರ್ತವ್ಯ ಎಂದು ಹೇಳಿ ಕೊಟ್ಟಿದ್ದಾರೆ ಇವೊತ್ತಿನ ದಿವಸ ಯಾವ ರೀತಿಯಿಂದಲೂ ಸಾರ್ವಜನಿಕರ ಪ್ರಾಣಕ್ಕೆ ರಕ್ಷಣೆ ಸಿಕ್ಕಿಲ್ಲ, ಅಲ್ಲದೆ ಇದುವರೆಗೆ ಯಾವ ಕಾನೂನು ಮತ್ತು ಶಾಂತಿಪಾಲನೆ, ಅಪರಾಧಗಳನ್ನು ತಡೆಗಟ್ಟುವುದು ಆಗಿಲ್ಲ. ಇನ್ನು ಇವುಗಳನ್ನು ಪತ್ತೆ ಹಚ್ಚುವುದಂತೂ ಮೊದಲೇ ಇಲ್ಲ. ಇವರು ಸಮಾಜದಲ್ಲಿ ಸುವ್ಯವಸ್ಥೆ ಶಾಂತಿ ಮತ್ತು ಭದ್ರತೆ ನಡೆಸುವಂತೆ ಮಾಡುವುದೇ ನಮ್ಮ ಇಲಾಖೆಯ ಉದ್ದೇಶ ಎಂದು ಹೇಳಿದ್ದಾರೆ. ಆದರೆ ಇವರು ಯಾರಿಗೂ ತೊಂದರೆ ಕೊಡದೇ ಹೋದರೆ ಸಾಕು. ಶಾಂತಿ ಬದಲು ತೊಂದರೆ ಕೊಡುವುದನ್ನು ತಪ್ಪಿಸಿದರೆ ಸಾಕು. ಇನ್ನು ಮಾನ್ಯ ಗೃಹಸಚಿವರು ನಾವು ಇವೊತ್ತಿನ ದಿವಸ ಒಳ್ಳೆಯ ಪರಿಸ್ಥಿತಿಗೆ ಬಂದು ಮುಟ್ಟಿದ್ದೇವೆ ಎಂದು ಹೇಳಿದ್ದಾರೆ. ಅದನ್ನು ನಾವು ತೀವ್ರವಾಗಿ ಪರಿಗಣಿಸುವುದಾದರೆ ಈ ವರದಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಒಳ್ಳೆಯ ಅರ್ಥ ಬರುವಹಾಗೆ ಕೊಟ್ಟಿದ್ದಾರೆ. ಇದರಲ್ಲಿ ಹೀಗೆ ಇದೆ.—

> '' ಕಾನೂನು ಮತ್ತು ಸುವ್ಯವಸ್ಥೆ ; 1986ನೇ ವರ್ಷದಲ್ಲಿ, ರಾಜ್ಯದ ಕೆಲವು ಭಾಗಗಳಲ್ಲಿ ಸಂಭವಿಸಿದ ಕೆಲವು ಹಿಂಸಾತ್ಮಕ ಚಳುವಳಿ ಮತ್ತು ಕೋಮುವಾರು ಗಲಭೆಗಳನ್ನು ಬಿಟ್ಟರೆ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಶಾಂತಿಯುತವಾಗಿತ್ತು.'' ಎಂದು ಹೇಳಿದ್ದಾರೆ.

ಈಗ ನಡೆದಿರತಕ್ಕಂಥ ಗಲಾಟೆ ಬಿಟ್ಟರೆ ಉಳಿದಿದ್ದೆಲ್ಲಾ ಸುವ್ಯವಸ್ಥೆಯಾಗಿತ್ತು ಎನ್ನುವುದನ್ನು ಈ ವರದಿಯಲ್ಲಿ ತಿಳಿದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಈ ವಾಕ್ಯವನ್ನು ನೋಡಿದ್ದಾರೋ ಏನೋ ಗೊತ್ತಿಲ್ಲ. ಇಲ್ಲವೇ ಅವರೇ ಹೇಳಿ ಏನಾದರೂ ಬರೆಯಿಸಿಕೊಟ್ಟರೋ ಏನೋ, ನ್ಯಾಯವಾಗಿ ಅವರಿಗೆ ಈ ರೀತಿಯಾಗಿ ಬರೆಯುವುದಕ್ಕೆ ಬರುತ್ತಾ ಇರಲಿಲ್ಲ. 1986ನೇ ವರ್ಷದಲ್ಲಿ ರಾಜ್ಯದಲ್ಲಿ ಕೆಲವು ಭಾಗಗಳಲ್ಲಿ ಸಂಭವಿಸಿದ ಕೆಲವು ಹಿಂಸಾತ್ಮಕ ಚಳುವಳಿ ಮತ್ತು ಕೋಮುವಾರು ಗಲಭೆಗಳನ್ನು ಬಿಟ್ಟರೆ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಶಾಂತಿಯುತವಾಗಿತ್ತು ಎಂದು ಹೇಳಿದ್ದಾರೆ. ಹಾಗೆ ಇರಲೇಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ರಾಜ್ಯದ ಕೆಲವು ಭಾಗಗಳಲ್ಲಿ ಮಾತ್ರ ಆ ರೀತಿ ನಡೆದಿದೆ ಎಂದು ಅದರಲ್ಲಿ ಹೇಳಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್—ಇಲ್ಲಿ ನಿಮ್ಮ ವರದಿಗಳು ಯಾವ ರೀತಿ ಇರುತ್ತವೆ ಎಂದರೆ ಇದರಲ್ಲಿ ಇರುವಂತಹ ಯಾವ ವಿಷಯಗಳೂ ಸಹ ಸರಿಯಾಗಿ ನಮ್ಮ ಕಣ್ಣಿಗೆ ಕಾಣುವುದಿಲ್ಲ ಮತ್ತು ಕೈಗೆ ಸಿಗುವುದಿಲ್ಲ. ಇತಂಹ ವರದಿಗಳನ್ನು ಕೊಟ್ಟರೆ ನಾವು ಯಾರೂ ಅಷ್ಟಾಗಿ ಗಮನಕ್ಕೆ ತೆಗೆದುಕೊಳ್ಳದೆ ಬಿಟ್ಟುಬಿಡುತ್ತೇವೆ ಎಂದು ಅರ್ಥವೇ ಹೇಗೆ ? ''ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಕೋಮು ಘಟನೆಗಳ ಹೆಚ್ಚಳದ ಪ್ರವೃತ್ತಿ ಕಂಡುಬಂದಿದೆ'' ಎಂದು ಇಲ್ಲಿ ಹೇಳಿದ್ದಾರೆ. ಅಂದರೆ ಇವರು ಕೋಮು ಗಲಭೆಗಳನ್ನು ತಡೆಗಟ್ಟುವುದರಲ್ಲಿ ವಿಫಲರಾಗಿದ್ದಾರೆಂದು ಅರ್ಥವಾಗುತ್ತದೆ. ಇಲ್ಲಿ ತನ್ನಷ್ಟಕ್ಕೆ ತಾನೇ ಇಂತಹ ಪ್ರವೃತ್ತಿಗಳು ಹೆಚ್ಚಿವೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕೇ ಹೇಗೆ ? ಇಂತಹ ವಿಷಯಗಳನ್ನು ಇವರು ಈ ದಾಟಿಯಲ್ಲಿ ನೋಡಿದರೆ ಮತ್ತು ಯಾವುದಕ್ಕೂ ಇವರು ಜವಾಬ್ದಾರರಾಗದ ರೀತಿಯಲ್ಲಿ ವರದಿಯನ್ನು ಕೊಟ್ಟರೆ ನೀವು ಜನರನ್ನು ವಂಚನೆ ಮಾಡಿದಂತೆ ಆಗುತ್ತದೆ. ನಮಗೆ ವರದಿ ಕೊಡು

ವಾಗ ನೀವು ಇಂತಹ ಉಪಾಯವನ್ನು ಕಂಡುಕೊಂಡರೆ ಹೇಗೆ ? ಈ ವರದಿಯಲ್ಲಿ ಪೋಲೀಸ್ ಗೋಲಿ ಬಾರ್‌ನ ಬಗ್ಗೆ ಸಹ ವಿವರಗಳನ್ನು ಕೊಟ್ಟಿದ್ದಾರೆ. ಶ್ರೀ ವೆಂಕಟರಾಮಯ್ಯನವರು ಮಾತನಾಡುವಾಗ ಒಂದು ಮಾತು ಹೇಳಿದರು. ಏನೆಂದರೆ ಇಲ್ಲಿ ಪೋಲೀಸ್ ಇಲಾಖೆಯ ಬಗ್ಗೆ ಮಾತನಾಡಿದರೆ ಮಾನ್ಯ ರಾಚಯ್ಯನವರಿಗೆ ಕೋಪ ಬರುತ್ತದೆ ಎಂದು. ಮಾನ್ಯ ವೆಂಕಟರಾಮಯ್ಯನವರಿಗೆ ಈ ಚಿಂತೆ ಆದರೆ ನನಗೆ ಬಂದಿರುವ ತಾಪ ಏನೆಂದರೆ ಇಲ್ಲಿ ನಾವು ಏನೇ ಪೋಲೀಸರ ಬಗ್ಗೆ ಹೇಳಿದರೂ ಸಹ ಮಾನ್ಯ ರಾಚಯ್ಯನವರಿಗೆ ಕೋಪವೇ ಬರುವುದಿಲ್ಲ. ಇದೇ ನನ್ನ ತಾಪ. ಈ ದಿನದ ಚರ್ಚೆಗೆ ಅವರು ಏನು ಉತ್ತರ ಕೊಡತ್ತಾರೆಂಬುದು ಸಹ ನನಗೆ ಗೊತ್ತಿದೆ. ಅನಾವಶ್ಯಕವಾಗಿ ಪೋಲೀಸರು ಜನರನ್ನು ಎಳೆದುಕೊಂಡು ಹೋಗಿ ಪೋಲೀಸ್ ಲಾಕಪ್‌ನಲ್ಲಿ ಇಡುತ್ತಾರೆ ಜನರಿಗೆ ಹಿಂಸೆ ಕೊಡುತ್ತಾರೆ ಅನವಶ್ಯಕವಾಗಿ ಪೋಲೀಸರು ಲಾಠಿಚಾರ್ಜ್ ಮಾಡುತ್ತಾರೆ ಮತ್ತು ಗೋಲೀಬಾರ್ ಮಾಡುತ್ತಾರೆ ಎಂದು ನಾವು ಇಲ್ಲಿ ಹೇಳಿದರೆ ಮಾನ್ಯ ಮಂತ್ರಿಗಳು ಅದಕ್ಕೆ ಏನು ಉತ್ತರ ಕೊಡುತ್ತಾರೆಂದರೆ ನಾನು ಇದನ್ನೆಲ್ಲ ಮಾಡುತ್ತೇನೆಯೇ ? ಇದನ್ನೆಲ್ಲ ಪೋಲೀಸರು ಮಾಡುತ್ತಾರೆ. ಏನು ಮಾಡುವುದು ಎಂದು ಉತ್ತರ ಕೊಟ್ಟರೆ ಅದಕ್ಕೆ ನಾವು ಏನು ಹೇಳುವುದು? ಇಂತಹ ತಿರುಗುಮುರುಗು ಹೇಳಿಕೆ ಕೊಟ್ಟರೆ ನಾವು ಏನು ಮಾಡಬೇಕು ?

ಶ್ರೀ ಎಂ. ಪಿ. ಪ್ರಕಾಶ್:—ಇದರಲ್ಲಿ ನಿಮ್ಮ ಮಾತಿನ ವ್ಯಂಗ್ಯ ಅರ್ಥವಾಗುತ್ತದೆ.

ಶ್ರೀ ಕೆ. ಎಚ್. ಶ್ರೀನಿವಾಸ್ :—ಇದರಲ್ಲಿ ವ್ಯಂಗ್ಯ ಏನಿದೆ ?

ಶ್ರೀ ಹೆಚ್. ಡಿ. ದೇವೇಗೌಡ.—ಮೊನ್ನೆ ಕೇರಳದಲ್ಲಿ ನಡೆದ ಸಾರ್ವತ್ರಿಕ ಚುನಾವಣೆ ಸಂದರ್ಭ ದಲ್ಲಿ ೮ ಜನರು ಸತ್ತರು. ಇದಕ್ಕೆ ಯಾರು ಕಾರಣರು?

ಶ್ರೀ ಕೆ. ಎಚ್. ಶ್ರೀನಿವಾಸ್:— ನಾನು ಮೊದಲೇ ಹೇಳಿದಂತೆ ಬಿಹಾರ ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡಿದಾಗ ನಾವು ಇಲ್ಲಿ ಏನನ್ನು ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ. —ಈಗ ನಮ್ಮ ರಾಜ್ಯದಲ್ಲಿ ನಡೆದಿರುವಂತಹ ಘಟನೆಗಳೆಲ್ಲಾ ಸರಿ ಎಂದು ಇವರು ಸಮರ್ಥನೆ ಮಾಡಿಕೊಳ್ಳುತ್ತಾರೆಯೇ ?

ಶ್ರೀ ಕೆ.ಎಚ್. ಶ್ರೀನಿವಾಸ್.—ಇವರು ಮಾಡಿದನ್ನು ಸಮರ್ಥನೆ ಮಾಡಿಕೊಳ್ಳಲು ಇಂಡಿಯಾ ದೇಶದಲ್ಲಿ ಯಾವ ಉದಾಹರಣೆಗಳು ಇವರಿಗೆ ಸಿಗದಿದ್ದಾಗ ಹೊರ ದೇಶಗಳ ಉದಾಹರಣೆ ಕೊಡುತ್ತಾರೆ ಉದಾಹರಣೆ ಕೊಡಲು ಇವರಿಗೆಯಾವ ಬರಗಾಲವು ಇಲ್ಲ. ನಮ್ಮ ರಾಜ್ಯದ ಸ್ಥಿತಿಯನ್ನು ಇವರು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ಹೇಳಬಹುದು. ಆದರೆ ಇವೊತ್ತು ನಮ್ಮ ಭಾರತ ದೇಶದ ಒಂದೊಂದು ರಾಜ್ಯವು ಸಹ ಒಂದೊಂದು ಸ್ಥಿತಿಯಲ್ಲಿವೆ. ನಮ್ಮ ರಾಜ್ಯದ ಸ್ಥಿತಿಯನ್ನು ಬಿಹಾರಕ್ಕೆ ಇಲ್ಲವೇ ಮಧ್ಯ ಪ್ರದೇಶಕ್ಕೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದ ಸ್ಥಿತಿಯೇ ಚೆನ್ನಾಗಿದೆ ಎಂದು ಹೇಳಬಹುದು. ಇದೇ ಕಾರಣದಿಂದ ನಮ್ಮ ಗೃಹ ಇಲಾಖೆಯನ್ನು ಸಹ ರದ್ದು ಮಾಡಬಹುದು. ಈ ಇಲಾಖೆ ಇಲ್ಲದಿದ್ದರೆ ನಾವು ಇನ್ನೂ ಚೆನ್ನಾಗಿರುತ್ತೇವೆ. ಇಲ್ಲಿ ಮಾನ್ಯ ರಾಚಯ್ಯನವರು ತಮ್ಮ ಒಂದು ಜವಾಬ್ದಾರಿಯನ್ನು ಎಷ್ಟರಮಟ್ಟಿಗೆ ನಿರ್ವಹಣೆ ಮಾಡಿದ್ದಾರೆಂದರೆ, ಇವರು ಜನತೆಗೋಸ್ಕರ ಸರ್ಕಾರದ ಪರವಾಗಿ ಕೆಲಸವನ್ನು ನಿರ್ವಹಣೆ ಮಾಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆಂದು ಹೇಳಬಹುದು. ಇದಕ್ಕೆ ಕಾರಣ ಏನು ಎಂಬುದು ನನಗೆ ಗೊತ್ತಿಲ್ಲ. ಇವರು ಯಾವ ವಿಚಾರವನ್ನು ಸಹ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಇದರ ಜೊತೆಗೆ ಇವರ ಮಾತನ್ನು ಇವರ ಇಲಾಖೆಯವರೇ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಒಬ್ಬ ಗೃಹ ಸಚಿವರು ವಿಧಾನ ಸಭೆಯಲ್ಲಿ ಹೇಳಿದಂತಹ ಭರವಸೆಗಳಿಗೆ ಕೆಳಗಡೆ ಇರತಕ್ಕಂಥ ಜಿಲ್ಲಾ ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳು ಮೂರು ಕಾಸಿನ ಬೆಲೆ ಕೊಡದೇಹೋದರೆ ಆಗ ಆಡಳಿತ ಹೇಗೆ ನಡೆಯುತ್ತದೆ ಮತ್ತು ಬೇರೆಯವರಿಗೆ ಏನು ಭಯ ಇರುತ್ತದೆ, ಮತ್ತೆ ಆಡಳಿತದಲ್ಲಿ ದೊಡ್ಡ ಶಿಸ್ತು ಎಂದು ಏನು ಹೇಳುತ್ತೀರಲ್ಲ ಆ ಶಿಸ್ತು ಎಲ್ಲಿರುತ್ತದೆ ? ಮಾನ್ಯ ಅಧ್ಯಕ್ಷರೆ, ಇದೇ ಸದನದಲ್ಲಿ ಎರಡು ಘಟನೆಗಳ ಬಗ್ಗೆ ನಾನು ಸರ್ಕಾರದ ಗಮನ ಸೆಳೆದೆ. ನಿಜ ಅಂದರೆ ಅವುಗಳ ಬಗ್ಗೆ ನೋಟೀಸುಗಳನ್ನು ಕೊಟ್ಟಿದ್ದೇನೆ. ಈಗ ಅದೆಲ್ಲಾ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಪೋಲೀಸ್ ಆಡಳಿತದ ವಿಚಾರವನ್ನು ನಾವು ಪ್ರಸ್ತಾಪ ಮಾಡಲೇಬೇಕು. ಶಿವಮೊಗ್ಗ

ದಲ್ಲಿ ಜೈಲ್ ಅಧಿಕಾರಿಗಳನ್ನು ಪೋಲೀಸರು ಹಿಡಿದುಕೊಂಡು ಲಾಕಪ್‌ನಲ್ಲಿ ಹಾಕಿ ಅವರಿಗೆ ಚಿತ್ರಹಿಂಸೆ ಕೊಟ್ಟಂಥ ಸಂದರ್ಭ. ನಾನು ಇಲ್ಲಿ ಅದನ್ನು ಪ್ರಸ್ತಾಪ ಮಾಡಿದೆ, ಗೃಹಸಚಿವರಾದ ಮಾನ್ಯ ಶ್ರೀ ರಾಚಯ್ಯನವರು ಇಲ್ಲಿ ಹೇಳಿದರು, ಸಂಬಂಧಿಸಿರತಕ್ಕಂಥ ಇಬ್ಬರು ಪೋಲೀಸ್ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಅಮಾನತ್ತುಪಡಿಸಿ ಆ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಆ ಇಬ್ಬರನ್ನೂ ಕೂಡ ತನಿಖೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೇನೆ ಎಂದು. ನಾನು ಮತ್ತೆ ೨–೩ ದಿವಸ ಬಿಟ್ಟು ಈ ವಿಷಯವನ್ನು ಪ್ರಸ್ತಾಪ ಮಾಡಿದೆ. ಅಷ್ಟು ಹೊತ್ತಿಗೆ ಇವರ ಡಿ. ಐ. ಜಿ. ಅಲ್ಲಿ ಯಾವ ತನಿಖೆ ಆಗುತ್ತಿಲ್ಲ ಎಂದು ಹೇಳಿಕೆ ಕೊಟ್ಟುಬಿಟ್ಟರು. ಅವರು ಹೇಳಿಕೆ ಕೊಟ್ಟಿದ್ದನ್ನೇ ಪ್ರಸ್ತಾಪ ಮಾಡಿ ಒಂದು ಹಕ್ಕುಚ್ಯುತಿ ನಿರ್ಣಯವನ್ನು ನಾನು ಇಲ್ಲಿ ಕಳುಹಿಸಿ ಕೊಟ್ಟೆ. ಆದರೆ ನಿಜವಾಗಿ ಮಾನ್ಯ ರಾಚಯ್ಯನವರ ವಿರುದ್ಧ ಏನೋ ಹಕ್ಕುಚ್ಯುತಿ ಇದೆ ಎನ್ನುವುದಕ್ಕಿಂತ ಹೆಚ್ಚಾಗಿ ಈ ಪರಿಸ್ಥಿತಿಯನ್ನು ಅವರು ಗಮನಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಅದನ್ನು ನಾನು ತಂದೆ. ಆಗ ಅವರು ಹೇಳಿದರು. ಇಲ್ಲ ನಿನ್ನೆ ದಿವಸ ಆರ್ಡರ್ ಮಾಡಿದ್ದೇನೆ, ಇವತ್ತು ಹೋಗಿರಬಹುದು. ನಾಳೆ ಹೋಗಿರಬಹುದು ಎಂದು. ನೀವು ಹೇಳಿ ೨ ದಿವಸ ಆದಮೇಲೆ ಆ ಆರ್ಡರ್ ಮೆಟ್ಟಿಲು ಮೆಟ್ಟಿಲು ಇಳಿದುಹೋಗಿದೆ. ನಿಜ ಎಂದರೆ ಇಡೀ ಪೋಲೀಸ್ ಇಲಾಖೆ ಇದರೊಳಗೆ ತಪ್ಪು ಮಾಡಿದೆ. ನಿಮಗೆ ಈ ಇಲಾಖೆಗೆ ರಕ್ಷಣೆ ಕೊಡಬೇಕು. ಜೈಲು ಮತ್ತು ಗೃಹ ಇವೆರಡು ಇಲಾಖೆಗಳು ಸಮನ್ವಯವಾಗಿ ಕೆಲಸ ಮಾಡಬೇಕು ಎಂದು ಇರಬಹುದು. ಇವರನ್ನು ರಾಜಿ ಮಾಡಿದೆವು ಎಂದು ಯಾರೋ ಹೇಳಿದರು. ಹೀಗೆ ಆಗಿದ್ದು ಆಗಿಹೋಗಿದೆ. ತಪ್ಪನ್ನು ಸರಿಪಡಿಸಿ ಕೊಳ್ಳಬೇಕು ಎಂದು ಕಟ್ಟುನಿಟ್ಟಾಗಿ ಆಜ್ಞೆ ಮಾಡಿದ್ದೇನೆ ಹೆಚ್ಚಿಗೆ ಕೇಳಬೇಡಿ ಎಂದು ಹೇಳಿದ್ದರೆ ತೆಪ್ಪಗೆ ನಾನು ಕುಳಿತುಕೊಳ್ಳುವುದಕ್ಕೆ ತಯಾರಿದ್ದೆ, ಆದರೆ ಹಾಗೆ ತಾವು ಹೇಳಲಿಲ್ಲ. ಅವರನ್ನು ಸಸ್ಪೆಂಡ್ ಮಾಡಿದ್ದು ಮುಖ್ಯವಲ್ಲ, ನನಗೆ ವ್ಯಕ್ತಿಗತವಾಗಿ ಯಾವ ಪೋಲೀಸ್ ಅಧಿಕಾರಿಮೇಲೆ ಮಮತೆಯಾಗಲಿ, ವಿರೋಧವಾಗಲಿ ನನಗೆ ಇಲ್ಲ, ಆ ಪ್ರಶ್ನೆ ಇಲ್ಲ, ನಾನು ಅಲ್ಲಿ ರಾಜಕಾರಣ ಮಾಡಬೇಕಾದಂಥ ಸಂದರ್ಭ ಇಲ್ಲ. ಒಂದು ವೇಳೆ ಮಾನ್ಯ ರಾಚಯ್ಯನವರು ಯಾರನ್ನು ಹಾಕಬೇಕು ಅಂದಾಗ ಯಾರನ್ನು ಬೇಕಾದರೂ ಹಾಕಿ ಎಂದು ಹೇಳಿದ್ದೇನೆ. ಬೇರೆ ಕ್ಷೇತ್ರದಲ್ಲಿ ಯಾವುದರಲ್ಲೋ ಹೇಳಿರಬಹುದೇ ಹೊರತು ನನ್ನ ಕ್ಷೇತ್ರದಲ್ಲಿ ಇಂತಹ ಪೋಲೀಸ್ ಅಧಿಕಾರಿಗಳನ್ನು ಹಾಕಿ ಎಂದು ಯಾವ ಮನವಿಯನ್ನು ನಾನು ಮಾಡಿಲ್ಲ. ಒಟ್ಟಿನಲ್ಲಿ ಇಲಾಖೆಯ ಸ್ಥೈರ್ಯ ಉಳಿಯಬೇಕು. ಆಮೇಲೆ ಸಸ್ಪೆನ್‌ಷನ್ ಆರ್ಡರ್ ಆಯಿತು. ಕೊನೆಗೆ ಎಸ್. ಪಿ. ೪ ದಿವಸ ಬರೀ ಬಾಯಿಮಾತಿನಲ್ಲಿ ಹೇಳಿದರು. ಊರಿನಲ್ಲಿ ಎಲ್ಲಾ ಹೇಳುತ್ತಾರೆ, ಯಥಾಸ್ಥಿತಿಯಲ್ಲೇ ಇದ್ದಾರೆ ಎಂದು. ಎನ್‌ಕ್ವೈಯರಿ ಎಂದು ತಾವು ಏನು ಹೇಳುತ್ತೀರಿ, ೪ ದಿವಸ ಆದಮೇಲೆ ಎನ್‌ಕ್ವೈಯರಿ ಏನಾಯಿತೋ ಏನಿಲ್ಲವೋ. ಏನಾಯಿತು ಎಂದು ಒಬ್ಬ ಅಧಿಕಾರಿ ಕೇಳಿದರಂತೆ, ಎನ್‌ಕ್ವೈರಿ ಮುಗಿಯಿತು ಎಂದು ಹೇಳಿ ಅವರನ್ನು ರೀಇನ್‌ಸ್ಟೇಟ್ ಮಾಡಿಬಿಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ವಿಧಾನಸಭೆಯಲ್ಲಿ ಹಕ್ಕುಗಳನ್ನು ಎತ್ತಿ ಹಿಡಿಯುತಕ್ಕ ಜವಾಬ್ದಾರಿ ತಮಗೆ ಇದೆ. ನಾನು ಕೇಳುತ್ತೇನೆ, ಗೃಹಸಚಿವರು ವಿಧಾನಸಭೆಯಲ್ಲಿ ಭರವಸೆ ಕೊಟ್ಟು, ಅಧಿಕಾರಿಯನ್ನು ಸರಿಯಾದ ರೀತಿಯಲ್ಲಿ ತನಿಖೆಗೆ ಒಳಪಡಿಸುವುದಕ್ಕೋಸ್ಕರ ಸಸ್ಪೆಂಡ್ ಮಾಡಿದೆ ಎಂದು ಹೇಳಿದ್ದಾರೆ. ವಿಧಾನಸಭೆ ನಡೆಯುವ ಹೊತ್ತಿನಲ್ಲಿ ಇಲ್ಲಿ ಮಾನ್ಯ ಗೃಹ ಸಚಿವರಿಗೆ ಯಾವುದೇ ಮಾಹಿತಿ ಇಲ್ಲ, ಫೈಲ್ ಇಲ್ಲ. ಅವರನ್ನು ಸಸ್ಪೆನ್‌ಷನ್‌ನಿಂದ ತೆಗೆದಿದ್ದಾರೆ ಎಂದು ನಾನು ಹೇಳಿದಮೇಲೆ ಅವರಿಗೆ ಗೊತ್ತಾಗಬೇಕು. ಅಂತಹ ಪರಿಸ್ಥಿತಿ ಇದೆ, ಆ ರೀತಿ ಸಸ್ಪೆನ್‌ಷನ್ ರದ್ದು ಮಾಡಿಬಿಟ್ಟರೆ ಮತ್ತೆ ಪೋಲೀಸ್ ಇಲಾಖೆಯಲ್ಲಿ ಏನು ಭಯ ಇರುತ್ತದೆ. ವಿಧಾನಸಭೆಯಲ್ಲಿ ಯಾವ ಚರ್ಚೆಯಾದರೆ ಏನು ಪ್ರಯೋಜನ ಅಥವಾ ತಾವು ಯಾವ ಭರವಸೆಯನ್ನು ಕೊಟ್ಟರೆ ಏನು ಪ್ರಯೋಜನ ?

ಇದರ ಬಗ್ಗೆ ಪ್ರಶ್ನೆ ಹಾಕಿದ್ದೇನೆ. ಇವತ್ತಿನವರೆಗೂ ಉತ್ತರ ಬಂದಿಲ್ಲ. ವಿಧಾನ ಸಭೆ ಮುಗಿಯುವುದರೊಳಗೆ ಉತ್ತರ ಬರುವುದೇ ಇಲ್ಲ. ಮೊದಲನೇ ದಿವಸ ಬಂತು, ಮಾನ್ಯ ಗೃಹ ಸಚಿವರು ಸಮಯ ಕೇಳಿದರು. ಒಂದೇ ದಿವಸದಲ್ಲಿ ಉತ್ತರ ಕೊಡಬೇಕೆಂದು ನಾನು ಬಲತ್ಕಾರ ಮಾಡುತ್ತಿಲ್ಲ. ಸಾಕಷ್ಟು ವಿಮರ್ಶೆ ಮಾಡಿಕೊಂಡು ಉತ್ತರ ಕೊಡಲಿ. ನಾನು ಪದೇ ಪದೇ ಪ್ರಶ್ನೆ

ಕೇಳಬೇಕಾದ ಅವಶ್ಯಕತೆ ಕೂಡ ಇಲ್ಲ. ವಿಷಯ ಅವರಿಗೆ ಗೊತ್ತಾದರೆ ಸಾಕು. ಇನ್ನೊಂದು ಪ್ರಕರಣ ಭದ್ರಾವತಿ ಹತ್ತಿರ ಜಂಬರಗಟ್ಟೆ ಹಳ್ಳಿಯ ಮುಸ್ಲಿಂ ಹುಡುಗಿ ನೂರ್ ಜಹಾನ್‌ಳನ್ನು ಹೊತ್ತುಕೊಂಡು ಹೋಗಿ, ಅತ್ಯಾಚಾರ ಮಾಡಿ ಕೊಲೆ ಮಾಡಿದರು. ಅಲ್ಲಿರತಕ್ಕ ಪೋಲೀಸಿನವರು ಯಾವ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ. ಆತ್ಮಹತ್ಯೆ ಪ್ರಕರಣ ಎಂದು ವರದಿ ಬಂದಾಗ ಮಾನ್ಯ ರಾಚಯ್ಯನವರು ಈ ವರದಿ ಸರಿಯಲ್ಲ ಇದರ ಬಗ್ಗೆ ನನಗೆ ವಿಶ್ವಾಸ ಇಲ್ಲ, ಇದನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸುತ್ತೇನೆಂದು ಹೇಳಿದರು. ಅಲ್ಲಿರತಕ್ಕ ಪೋಲೀಸಿನವರನ್ನು ಅಲ್ಲಿಯೇ ಇಟ್ಟುಕೊಂಡು ತನಿಖೆ ಮಾಡಿದರೆ ಏನೂ ಅನುಕೂಲವಾಗುವುದಿಲ್ಲವೆಂದು ಹೇಳಿದಾಗ ವರ್ಗಾವಣೆ ಮಾಡುತ್ತೇನೆನ್ನುವ ಭರವಸೆ ಕೊಟ್ಟರು. ೭ನೇ ತಾರೀಖು ಭರವಸೆ ಕೊಟ್ಟರು. ೮ನೇ ತಾರೀಖು ಪತ್ರಿಕೆಗಳಲ್ಲಿ ಸಕಲವೂ ಕೂಡ ಬಂದಿದೆ. ಇಷ್ಟೆಲ್ಲಾ ಬಂದಿದ್ದರೂ ಶಿವಮೊಗ್ಗದಲ್ಲಿ ಜಿಲ್ಲೆಯ ಎಸ್.ಪಿ. ಯವರು ಪತ್ರಿಕಾಗೋಷ್ಠಿಯನ್ನು ಕರೆದು, ಇದು ಆತ್ಮಹತ್ಯೆ ಪ್ರಕರಣ, ಇದರ ಬಗ್ಗೆ ತನಿಖೆ ಮಾಡುವ ಅಗತ್ಯ ಇಲ್ಲ, ಯಾರನ್ನೂ ಕೂಡ ಬಂಧಿಸಬೇಕಾದ ಅಗತ್ಯ ಇಲ್ಲ ಎಂದು ಹೇಳಿದರು. ಇದರ ಬಗ್ಗೆ ತಮಗೂ ಅವರು ಹೇಳಿದುದನ್ನು ಕಳುಹಿಸಿಕೊಟ್ಟಿದ್ದೇನೆ, ಅವರಿಗೂ ಕಳುಹಿಸಿಕೊಟ್ಟಿದ್ದೇನೆ. ಈ ವಿಚಾರದಲ್ಲಿ ಹಕ್ಕುಚ್ಯುತಿ ಪ್ರಸ್ತಾಪ ಮಾಡಬೇಕೆಂದು ಕೇಳಿದ್ದೆ. ಎಲ್ಲಾ ಪತ್ರಿಕೆಗಳಲ್ಲೂ ಮಂತ್ರಿಗಳು ಕೊಟ್ಟಂಥ ಭರವಸೆ ದೊಡ್ಡದಾಗಿ ಬಂದಿದ್ದರೂ ಅದಕ್ಕೆ ತದ್ವಿರುದ್ಧವಾಗಿ ಜಿಲ್ಲಾ ಎಸ್.ಪಿ. ಯವರು ಪತ್ರಿಕಾಗೋಷ್ಠಿ ಕರೆದು ಹೇಳಿಕೆ ಕೊಟ್ಟಿದ್ದಾರೆಂದರೆ ಇಲಾಖೆ ಮೇಲೆ ನಿಮಗೆ ಹತೋಟಿ ಇದೆಯೆ ? ಯಾರ ಪ್ರಭಾವ ಇದೆ ?

> "ಶಿವಮೊಗ್ಗ ಮಾರ್ಚಿ ೭, ಹೊಳೆಹೊನ್ನೂರು ತಾಲ್ಲೂಕಿನ ಜಂಬರಗಟ್ಟೆ ಗ್ರಾಮದ ನೂರ್ ಜಹಾನ್ ಎನ್ನುವರು ಕಳೆದ ಜನವರಿ ೧೮ರಂದು ಸಾವು ಕಂಡಿದ್ದು, ಇದು ಕೊಲೆಯಲ್ಲ ಆತ್ಮಹತ್ಯೆ ಎಂಬುದು ವೈದ್ಯಕೀಯ ಪರೀಕ್ಷೆಯಿಂದ ಖಚಿತಪಟ್ಟಿದೆ ಎಂದು ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿ ವೈ. ಆರ್. ಪಾಟೀಲ್ ತಿಳಿಸಿದ್ದಾರೆ.
>
> ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ತಾ|| ೧೧ರಿಂದ ಪೋಲೀಸ್ ಮುಖ್ಯಾಧಿಕಾರಿ ಕಛೇರಿಯ ಮುಂಭಾಗದಲ್ಲಿ ಧರಣಿ ಸತ್ಯಾಗ್ರಹ ಹೂಡಲಿದ್ದಾರೆಂಬ ಪತ್ರಿಕಾ ಹೇಳಿಕೆಯ ಬಗ್ಗೆ ಪತ್ರಕರ್ತರು ಗಮನ ಸೆಳೆದಾಗ ಮೇಲ್ಕಂಡಂತೆ ಉತ್ತರ ನೀಡಿದ ಅವರು, ಆತ್ಮಹತ್ಯೆ ಪ್ರಕರಣದಲ್ಲಿ ಅಪರಾಧಿಗಳೆಂದು ಯಾರನ್ನೂ ಬಂಧಿಸಲು ಸಾಧ್ಯವಾಗುವುದಿಲ್ಲ ಎಂದರು. ಮೃತ ದೇಹದಲ್ಲಿ ೧೨ ಗಾಯಗಳು ಇದ್ದುವು ಎಂಬ ವಿಷಯವನ್ನು ಅವರು ಒಪ್ಪಿಕೊಂಡರು.

ಮುಂದೆ ಒಂದು ಮಾತನ್ನು ಹೇಳಿದ್ದಾರೆ. ಮೃತ ದೇಹದಲ್ಲಿ ೧೨ ಗಾಯಗಳು ಇದ್ದವು ಎಂದು. ಮೈ ತುಂಬಾ ಗಾಯ ಮಾಡಿಕೊಂಡು, ಹಗ್ಗ ಕಟ್ಟಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಸುತ್ತಮುತ್ತ ಊರಿನ ಸಾವಿರಾರು ಜನ ಎಸ್.ಪಿ ಹತ್ತಿರ ಬಂದು ಗೋಳಾಡಿಕೊಂಡು ಹೇಳಿದಾರೆ. ಇದನ್ನು ನೋಡಿಕೊಂಡು ಇರುವುದಕ್ಕೆ ನಮಗೆ ನಾಚಿಕೆಯಾಗುತ್ತದೆ, ಏನಾದರೂ ಮಾಡಿ ಎಂದು. ಇಂಥಾದ್ದು ಬೇಕಾದಷ್ಟು ಆಗುತ್ತದೆ ಎನ್ನುವ ಉಡಾಫೆ ಉತ್ತರ ಕೊಟ್ಟು ಕಳುಹಿಸಿದ್ದಾರೆ. ಇಲ್ಲಿ ಗೃಹಸಚಿವರು ಇದನ್ನು ನಂಬುವುದಕ್ಕೆ ಆಗುವುದಿಲ್ಲ, ಇದರ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಇದೇ ಸಬ್‌ಇನ್ಸ್‌ಪೆಕ್ಟರ್ ಊರಿನವರನ್ನು ಕರೆಯಿಸಿ, ಅವರುಗಳನ್ನು ಬೆದರಿಸಿ, ಡಿ.ವೈ.ಎಸ್.ಪಿ. ಸೇರಿ ಮೀಟಿಂಗ್ ಮಾಡಿದ್ದಾರೆ. ಸಿ.ಓ.ಡಿ. ಗೂ ಹೋಗಲಿಲ್ಲ, ಎಲ್ಲಿಗೂ ಹೋಗಲಿಲ್ಲ. ಇದು ಆತ್ಮಹತ್ಯೆ ಪ್ರಕರಣ ಎಂದು ಸಿದ್ಧಪಡಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದಾರೆ. ಇಷ್ಟೆಲ್ಲಾ ಮಾಡಿದರೂ ಜಿಲ್ಲಾ ಪೋಲೀಸ್ ಅಧಿಕಾರಿ ತದ್ವಿರುದ್ಧವಾಗಿ ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆಂದರೆ, ಪೋಲೀಸ್ ಇಲಾಖೆಯನ್ನು ನಡೆಸತಕ್ಕವರು ಯಾರು ? ಅವರವರಿಗೆ ಪೋಲೀಸ್ ಠಾಣೆಗಳನ್ನು ಜಾಹಗೀರ್ ಕೊಟ್ಟಿದ್ದೀರಾ ? ಬಾರಾ ಖೂನ್ ಮಾಫಿ ಎಂದು ಅಧಿಕಾರ ಕೊಟ್ಟಿದ್ದೀರಾ ? ಶ್ರೇಣಿಕೃತ ವ್ಯವಸ್ಥೆ ಇದೆಯೆ ? ಆ ಒಂದು ವ್ಯವಸ್ಥೆಯಡಿಯಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆಯೆ ? ಮಾನ್ಯ ಗೃಹ ಸಚಿವರು ಇದ್ದಾರೆ, ಅವರು ಹೇಳಿದಂತೆ ನಡೆಯುತ್ತದೆಂದು ನಂಬಿಕೊಳ್ಳುವುದಕ್ಕೆ ಯಾವ ಪುರಾವೆಯೂ ಇಲ್ಲ. ಇದು ನನ್ನ ಸ್ವಂತ ಅನುಭವಕ್ಕೆ ಬಂದಿರುವಂಥಾದ್ದು. ಇನ್ನು ದೇಶಾದ್ಯಂತ ಎಷ್ಟು ನಡೆಯುತ್ತದೆ. ಇದನ್ನು ಊಹಿಸುವುದೂ ಕೂಡ ಕಷ್ಟ ಸಾಧ್ಯ. ಇಂಥ ಪರಿಸ್ಥಿತಿಯಲ್ಲಿ ಪೋಲೀಸ್ ಇಲಾಖೆಯಲ್ಲಿ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಅವರುಗಳನ್ನು ಜನಗಳಿಗೆ ಜವಾಬ್ದಾರರನ್ನಾಗಿ

ಮಾಡುವುದಕ್ಕೆ ಕೊನೆಯ ಪಕ್ಷ ಸರ್ಕಾರಕ್ಕೆ ಜವಾಬ್ದಾರರನ್ನಾಗಿ ಮಾಡುವುದಕ್ಕೆ ಯಾವ ಪ್ರಯತ್ನವನ್ನು ಮಾಡಿದ್ದೀರಿ ಎಂಬುದನ್ನು ಮಾನ್ಯ ಸಚಿವರು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

೪-೩೦ ಪಿ.ಎಂ.

ಈಗ ಅವರು ಎಷ್ಟು ದೊಡ್ಡ ಮನುಷ್ಯರು ಎನ್ನುವ ಬಗ್ಗೆ ವ್ಯಾಖ್ಯಾನ ಬೇಡ. ನಾವು ಮೊದಲೇ ಅದರ ಬಗ್ಗೆ ಒಪ್ಪಿಕೊಂಡಿದ್ದೇವೆ. ಇವರನ್ನು ಒಂದು ತರಹ ಗುರಾಣಿ ಮಾಡಿದ್ದಾರೆ ಎಂದು ಹೇಳಿದಾಗ ಮಾನ್ಯ ಮುಖ್ಯ ಮಂತ್ರಿಗಳು ಯಾವ ದೃಷ್ಟಿಯಲ್ಲಿ ಗ್ರಹಿಸಿದರೋ ಗೊತ್ತಿಲ್ಲ. ಅವರ ಬಗ್ಗೆ ವೈಯಕ್ತಿಕವಾಗಿ ಹೇಳಲಿಕ್ಕೆ ಏನೂ ಇಲ್ಲ. ಡಿಪಾರ್ಟ್‌ಮೆಂಟಿನ ಬಗ್ಗೆ ಏನು ಹೇಳಿದರೂ ಉತ್ತರ ಕೊಡುವುದಿಲ್ಲ. ಅವರನ್ನು ನಾವು ಏನೂ ಮಾಡುವ ಹಾಗೆ ಇಲ್ಲ. ಅವರಿಗೆ ನಾವು ನೀವು ಲಾಠಿ ಚಾರ್ಜ್ ಮಾಡಿದಿರಿ ಗುಂಡುಹೊಡೆದಿರಿ, ಲಾಕಪ್‌ನಲ್ಲಿ ಸಾಯಿಸಿದಿರಿ ಎಂದು ಹೇಳುವ ಹಾಗೆ ಇಲ್ಲ. ಇಂತಹ ಪರಿಸ್ಥಿತಿ ಏತಕ್ಕೆ ಅವರಿಗೆ ನಿರ್ಮಾಣವಾಗಿದೆ. ಒಬ್ಬ ಗೃಹಸಚಿವರಾಗಿ ಏನು ಬೇಕೋ ಅದನ್ನು ಮಾಡುವಂಥ ಸ್ವತಂತ್ರ ಇಲ್ಲವೋ ? ತಪ್ಪು ಮಾಡಿರತಕ್ಕ ಅಧಿಕಾರಿಗಳಿಗೆ ಶಿಕ್ಷೆ ಕೊಡಲಿಕ್ಕೆ ಅಧಿಕಾರ ಇಲ್ಲವೋ ? ಧೈರ್ಯ ಇಲ್ಲವೋ. ಅಥವಾ ಒಳಗಡೆ ಇರತಕ್ಕವರ ಒತ್ತಡದಿಂದ ಈ ರೀತಿ ಮಾಡಲಿಕ್ಕೆ ಸಾಧ್ಯವಿಲ್ಲವೋ, ಅರ್ಥವಾಗಲಿಲ್ಲ. ಆ ರೀತಿ ಮಾಡಲಿಕ್ಕೆ ಸಾಧ್ಯವಿಲ್ಲದೇ ಇದ್ದರೆ ಇಂತಹ ಇಲಾಖೆಯನ್ನು ಕೊಳೆಸುವುದರಲ್ಲಿ ಅರ್ಥ ಇಲ್ಲ. ಸರಿಪಡಿಸಬೇಕಾದದ್ದು ಬೇಕಾದಷ್ಟು ಇದೆ. ಇದುವರೆಗೂ ಡಕಾಯಿತಿಗಳು ನಡೆಯುತ್ತಿತ್ತು ಈಗ ತನ್ನಷ್ಟಕ್ಕೆ ತಾನೇ ನಿಂತುಹೋಗಿದೆ. ಈಗ ಏನೋ ಸ್ವಲ್ಪ ಕಡಿಮೆಯಾಗಿದೆ ಎಂದು ಹೇಳಿದರು. ಇದು ಅಮಾವಾಸ್ಯೆ ಮತ್ತು ಹುಣ್ಣಿಮೆಗೆ ವ್ಯತ್ಯಾಸವಾಗುತ್ತಿರುತ್ತದೆ. ಅಮಾವಾಸ್ಯೆ ಬಂದರೆ ಜಾಸ್ತಿಯಾಗುತ್ತದೆ, ಹುಣ್ಣಿಮೆ ಬಂದರೆ ಕಡಿಮೆಯಾಗುತ್ತದೆ. ಸಮುದ್ರದಲ್ಲಿ ಉಬ್ಬರವಿಳಿತ ಇದ್ದ ಹಾಗೆ ಆಗುತ್ತದೆ. ನಿಮ್ಮ ಇಲಾಖೆಯ ಪಾತ್ರ ಏನು ? ಯಾವುದಾದರೂ ಒಂದೆರಡು ಕೇಸುಗಳಲ್ಲಿ ದರೋಡೆಗಾರರನ್ನು ಹಿಡಿದಿದ್ದರೆ ಅಡ್ಡಿಯಿಲ್ಲ. ತಾವು ಯಾವುದೂ ಹಿಡಿಯಲಿಲ್ಲ, ಬೇಕಾದದ್ದು ಮಾಡುತ್ತೇವೆ ಎಂದು ಹೇಳುತ್ತೀರಿ ಇದುವರೆಗೂ ಏನು ಮಾಡಿದ್ದೀರಿ ? ಇಲಾಖೆಯನ್ನು ಸಮರ್ಥಗೊಳಿಸುತ್ತೇವೆಂದು ಹೇಳಿದಿರಿ, ಇಂಟೆಲಿಜೆನ್ಸ್ ಮತ್ತು ಸಿಓಡಿ ಬಗ್ಗೆ ಹೇಳುತ್ತಿರುತ್ತೀರಿ. ನೀವು ಮಾತೆತ್ತಿದರೆ ಜ್ಯುಡಿಷಿಯಲ್ ಎನ್‌ಕ್ವಯಿರಿ ಸಿಓಡಿ ಎನ್‌ಕ್ವಯಿರಿ ಎಂದು ಹೇಳುತ್ತೀರಿ, ಅದರಿಂದ ಯಾವ ಒಂದು ಪ್ರಯೋಜನವೂ ಇಲ್ಲ. ಇದುವರೆಗೂ ತಪ್ಪಿತಸ್ಥರು ಎಂದು ಕಂಡುಬಂದವರಿಗೆ ಯಾವುದೇ ರೀತಿಯ ಶಿಕ್ಷೆ ಆಗಿಲ್ಲ. ಪ್ರಮೋಷನ್ ಆಗಿದ್ದುದು ನಮಗೆ ಗೊತ್ತಿದೆ, ಶಿಕ್ಷೆ ಆಗಿರುವಂತಾದ್ದು ಇದ್ದರೆ ಮಾನ್ಯ ಮಂತ್ರಿಗಳು ಅದರ ಬಗ್ಗೆ ಪಟ್ಟಿಯನ್ನು ಹೇಳಬೇಕು. ಇವೊತ್ತು ಚಂದ್ರಗುತ್ತಿ ಪ್ರಕರಣದಲ್ಲಿ ತಪ್ಪಿತಸ್ಥರು ಎಂದು ಆಗಿದೆ. ಈಗ ಅವರೇ ತದ್ವಿರುದ್ಧವಾಗಿ ಪತ್ರಿಕಾ ಹೇಳಿಕೆಯನ್ನು ಕೊಡುತ್ತಿದ್ದಾರೆ ತಾವು ಇಂಥಾದ್ದನ್ನು ಸಿಓಡಿಗೆ ರೆಫರ್ ಮಾಡುತ್ತೇವೆಂದು ಹೇಳುತ್ತೀರಿ. ಅದು ಅಲ್ಲಿಗೆ ಬರುವುದರೊಳಗೆ ಬೆಳಗಾಗಿರುತ್ತದೆ. ಇನ್ನು ಭದ್ರಾವತಿ ಪ್ರಕರಣದಲ್ಲಿ ಅದನ್ನು ಸಿಓಡಿಗೆ ಒಪ್ಪಿಸುತ್ತೇವೆ ಎಂದು ಹೇಳಿದರು, ಅದರ ಬಗ್ಗೆ ಇದುವರೆಗೂ ಆಜ್ಞೆ ಹೊರಡಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಅಲ್ಲಿರತಕ್ಕ ಪೋಲೀಸರು ಅದನ್ನು ಮುಚ್ಚಿಹಾಕಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ಸಕಲ ವಿಚಾರಣೆಗಳು ನಡೆಯುತ್ತಿದೆ ಹಳ್ಳಿಯವರನ್ನು ಕರೆಯಿಸಿ ಹೆದರಿಸಿ, ಬೆದರಿಸಿ, ಚಕಾರ ಶಬ್ದ ಮಾತನಾಡಬಾರದು ಎಂದು ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಈ ಆಡಳಿತವನ್ನು ಸರಿ ಎಂದು ಹೇಳಿ ಪ್ರತಿಪಾದನೆ ಮಾಡತಕ್ಕದ್ದು ಖಂಡಿತವಾಗಿಯೂ ಸರಿಯಲ್ಲ. ಇನ್ನು ಶಿವಮೊಗ್ಗ ಜೈಲು ಪ್ರಕರಣದ ಬಗ್ಗೆ ಯಾವ ರೀತಿ ನಾಟಕ ಮಾಡಿದಿರಿ. ನೀವು ಹೇಗೆ ಮಾಡಿದಿರಿ ಎಂದರೆ ಒಂದೆರಡು ದಿವಸ ಎನ್‌ಕ್ವಯಿರಿ ಎಂದು ಮಾಡಿ ಮೂರನೆಯ ದಿವಸ ರೀಇನ್‌ಸ್ಟೇಟ್ ಮಾಡಿದಿರಿ. ನಾನು ಎನ್‌ಕ್ವಯಿರಿ ಏನಾಗಿದೆ ಎಂದು ಕೇಳಿದರೆ ಅಲ್ಲಿ ಯಾವುದೂ ಆಗಿಲ್ಲ. It is all in paper and it is all force. ನಮಗೆ ಸಂಬಂಧ ಇಲ್ಲ. ನಿಮ್ಮದೇ ಎರಡು ಇಲಾಖೆಗಳು ಹೊಡೆದಾಡುತ್ತಿರತಕ್ಕ ಸಂಬಂಧದಲ್ಲಿ ಗಂಭೀರವಾಗಿ ರಾಜೀಮಾಡಿ, ಇಬ್ಬರನ್ನೂ ಸರಿಪಡಿಸಿದ್ದೇವೆ ದಯಮಾಡಿ ಗಲಾಟೆ ಮಾಡಬೇಡಿ ಎಂದು ಹೇಳಿ. ಇವೊತ್ತು ಜೈಲು ಅಧಿಕಾರಿಗಳ ತಪ್ಪಿದ್ದರೆ, ಅಥವಾ ಪೋಲೀಸ್ ಅಧಿಕಾರಿಗಳ ತಪ್ಪಿದ್ದರೆ ಅವರು ಇಬ್ಬರಿಗೂ ಬಲಿ ಹಾಕದೇ ಇದ್ದರೆ, ಅಧಿಕಾರಿಗಳು ಹೇಗೆ ಕೆಲಸ ಮಾಡುತ್ತಾರೆ. ಇವೊತ್ತು ಜೈಲು ಅಧಿಕಾರಿಗಳು ಪೋಲೀಸ್ ಅಧಿಕಾರಿಗಳ ವಿರುದ್ಧವಾಗಿ ನಾವು ಕೇಸ್ ಹಾಕುತ್ತೇವೆ ಪರ್ಮಿಷನ್ ಕೊಡಿ ಎಂದು ಕೇಳಿದ್ದಾರೆ.

ಗೃಹ ಇಲಾಖೆಯ ಮಹಾ ನಿರೀಕ್ಷಕರೂ ಕೂಡ ತಮಗೆ ಪರ್ಮಿಷನ್ ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಅದಕ್ಕಾದರೂ ತಾವು ಅಪ್ಪಣೆಯನ್ನು ಕೊಡಿ. ನಮ್ಮಿಂದ ಅಂತೂ ಆಗಲಿಲ್ಲ. ಕೋರ್ಟಿನಿಂದ ಆದರೂ ಆಗುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಇವೆರಡರಲ್ಲಿ ಯಾವುದನ್ನೂ ನೀವು ಮಾಡದಿದ್ದರೆ ಇಲ್ಲಿ ನಾವು ಇಂಥ ವಿಚಾರಗಳನ್ನು ಚರ್ಚೆಮಾಡುವುದರಲ್ಲಿ ಯಾವುದೇ ತಾತ್ಪರ್ಯವೂ ಇಲ್ಲವೆಂದು ನನ್ನ ಭಾವನೆ. ನಮ್ಮ ಸಜ್ಜನಿಕೆಯನ್ನು ಇಲ್ಲಿ ಪಣವಾಗಿ ಒಡ್ಡಿ ನಾವು ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ನನ್ನ ಅನಿಸಿಕೆ. ನಿಮ್ಮ ಈ ಇಲಾಖೆಯನ್ನು ಸರಿಪಡಿಸಿಕೊಳ್ಳುವುದಕ್ಕೆ ನಿಮಗೆ ಅದೇನು ಕಷ್ಟ ಇದೆಯೋ ನನಗಂತೂ ಗೊತ್ತಾಗುತ್ತಿಲ್ಲ ನಿಮಗೆ ಇರತಕ್ಕ ತೊಂದರೆಯನ್ನು ಹೇಳಿಕೊಳ್ಳುವುದಕ್ಕೆ ಆಗದೇ ಇರತಕ್ಕ ಪರಿಸ್ಥಿತಿ ಇರಬಹುದೆಂದು ನಾನು ಅಂದುಕೊಂಡಿದ್ದೇನೆ. ಒಂದು ವೇಳೆ ಅಂಥ ಪರಿಸ್ಥಿತಿ ಇದ್ದರೆ ಮಾನ್ಯ ಗೃಹ ಸಚಿವರು ಗೌರವವಾಗಿ ಸ್ವಗೃಹಕ್ಕೆ ತೆರಳುವುದು ಸೂಕ್ತವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಇಲಾಖೆಯ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ನಾನು ತಯಾರಿಲ್ಲ. ನಮ್ಮ ಮಾನ್ಯ ಸದಸ್ಯರಾದ ಶಿವನಂಜಪ್ಪನವರು ಹೇಳಿದಂತೆ ನಿಮ್ಮ ಆಡಳಿತದಲ್ಲಿ ಎಲ್ಲಾ ರೀತಿಯ ಅಧಿಕಾರಿಗಳೂ ಇದ್ದಾರೆ. ಪೋಲೀಸ್ ಇಲಾಖೆ ಎಂದಕೂಡಲೇ ಎಲ್ಲರೂ ಲಂಚಕೋರರು, ಎಲ್ಲರೂ ಭ್ರಷ್ಟ ಅಧಿಕಾರಿಗಳೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದೇ ರೀತಿ ಎಲ್ಲರೂ ಬಹಳ ಒಳ್ಳೆಯವರೂ ಇದ್ದಾರೆಂದೂ ನಾನು ಹೇಳುವುದಕ್ಕೆ ತಯಾರಿಲ್ಲ. ಒಳ್ಳೆಯವರೂ ಇದ್ದಾರೆ, ಕೆಟ್ಟ ಅಧಿಕಾರಿಗಳೂ ಇದ್ದಾರೆ. ನಿಮ್ಮ ಆಡಳಿತವನ್ನು ಯಾವರೀತಿ ನಡೆಸುತ್ತಿದ್ದೀರಿ, ಯಾವುದಕ್ಕೆ ಹೆಚ್ಚಿಗೆ ಪ್ರಾಶಸ್ತ್ಯವನ್ನು ಕೊಡುತ್ತೀರಿ, ಯಾವುದನ್ನು ಮೇಲೆಕ್ಕೆತ್ತುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂಬುದನ್ನು ನಾವು ನೋಡಬೇಕಾಗಿದೆ. ಈ ಸರ್ಕಾರ ಸಜ್ಜನಿಕೆಗೆ, ಬೆಂಬಲ ಕೊಡಬೇಕು, ದಕ್ಷತೆಗೆ ಬೆಂಬಲ ಕೊಡಬೇಕು. ಪ್ರಾಮಾಣಿಕತೆಗೆ ಹೆಚ್ಚಿನ ಬೆಂಬಲ ಕೊಡಬೇಕು, ಹಾಗೆ ಮಾಡುವುದಾದರೆ ನಿಮ್ಮ ಆಡಳಿತಕ್ಕೆ ಒಂದು ಶೋಭೆ ಬರುತ್ತದೆ. ಮೇಲಿರತಕ್ಕ ಸರ್ಕಾರ ಸೌಜನ್ಯಕ್ಕೆ, ಪ್ರಾಮಾಣಿಕತೆಗೆ, ದಕ್ಷತೆಗೆ ಬೆಂಬಲ ಕೊಡುವ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ಹೇಳುವುದಾದರೆ ಆಡಳಿತ ಯಾವ ರೀತಿ ನಡೆಯಬಹುದೆಂದು ನಾವು ಯೋಚನೆ ಮಾಡಬೇಕಾಗುತ್ತದೆ. ಪ್ರಭಾವ ಹೊಂದಿರತಕ್ಕ ಒಬ್ಬ ಹೆಡ್ ಕಾನ್‌ಸ್ಟೇಬಲ್‌ನನ್ನು ನೀನು ಏತಕ್ಕೆ ಈ ರೀತಿ ಮಾಡುತ್ತಿದ್ದೀಯ ಎಂದು ಕೇಳತಕ್ಕ ಧೈರ್ಯ ಒಬ್ಬ ಸಬ್ ಇನ್‌ಸ್ಪೆಕ್ಟರ್‌ಗೆ ಧೈರ್ಯವಿಲ್ಲದಿದ್ದರೆ, ಅಥವಾ ಮೇಲಿನವರ ಪ್ರಭಾವವನ್ನು ಹೊಂದಿರತಕ್ಕ ಸಬ್ ಇನ್‌ಸ್ಪೆಕ್ಟರ್‌ನನ್ನು ಅವನ ಕೆಲಸದ ಬಗ್ಗೆ ಪ್ರಶ್ನೆ ಮಾಡತಕ್ಕ ಧೈರ್ಯ ಅವನ ಮೇಲಿರತಕ್ಕ ಸರ್ಕಲ್ ಇನ್‌ಸ್ಪೆಕ್ಟರ್‌ಗೆ ಇಲ್ಲದಿದ್ದರೆ, ಅಥವಾ ಸರ್ಕಲ್ ಇನ್‌ಸ್ಪೆಕ್ಟರ್ ಕೆಲವರನ್ನು ಪ್ರಶ್ನೆ ಮಾಡತಕ್ಕ ಧೈರ್ಯ ಅವರ ಮೇಲಿರತಕ್ಕ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್‌ಗೆ ಇಲ್ಲದಿದ್ದರೆ, ಅದೇ ರೀತಿ ಪ್ರಭಾವಿ ಡಿ. ವೈ. ಎಸ್. ಪಿ. ಯನ್ನು ಕೇಳತಕ್ಕ ಧೈರ್ಯ ಎಸ್. ಪಿ. ಗೆ ಇಲ್ಲದಿದ್ದರೆ ನಿಮ್ಮ ಇಲಾಖೆಯ ಆಡಳಿತದ ಬಗ್ಗೆ ನಾವು ಏನು ತಿಳಿದುಕೊಳ್ಳಬೇಕು. ಸೈನ್ಯಕ್ಕೆ ಮತ್ತು ಪೋಲೀಸ್‌ಗೆ ನಾವು ಗೌರವವನ್ನು ಕೊಡಬೇಕು. ಆದರೆ ಅದೇ ರೀತಿಯಲ್ಲಿ ಆ ಇಲಾಖೆಯ ಅಧಿಕಾರಿಗಳ ಮೇಲೆ ಹಿಡಿತವನ್ನೂ ತಾವು ಹೊಂದಿರಬೇಕು. ಇಲ್ಲದೇಹೋದರೆ ನೀವು ಒಬ್ಬ ಪೋಲೀಸ್ ಹೆಡ್ ಕಾನ್‌ಸ್ಟೇಬಲ್‌ನನ್ನು ಮಾತನಾಡಿಸಿ ಅವನಿಂದ ಕೆಲಸ ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ. ನೀವು ಏನಾದರೂ ಜೋರಾಗಿ ಅವನನ್ನು ಕೇಳಿದರೆ ನನಗೆ ನಿನಗಿಂತ ಹೆಚ್ಚಿನ ಇನ್‌ಫ್ಲೂಯೆನ್ಸ್ ಇದೆ, ನಾನು ನಿನ್ನನ್ನು ನೋಡಿಕೊಳ್ಳುತ್ತೇನೆಂದು ಹೇಳುತ್ತಾರೆ. ಈ ರೀತಿ ಹೇಳುವುದಾದರೆ ನಿಮ್ಮ ಇಲಾಖೆಯೇ ಹಾಳಾಗಿ ಹೋಗುತ್ತದೆ. ನಿಮ್ಮಲ್ಲಿ ದಕ್ಷ ಅಧಿಕಾರಿಗಳಿಲ್ಲ ಎಂದಲ್ಲ, ಪ್ರಾಮಾಣಿಕ ಅಧಿಕಾರಿಗಳಿಲ್ಲ ಎಂದಲ್ಲ, ನಿಮ್ಮಲ್ಲಿ ಯೋಗ್ಯ ಅಧಿಕಾರಿಗಳಿದ್ದಾರೆ, ದಕ್ಷ ಅಧಿಕಾರಿಗಳಿದ್ದಾರೆ, ಪ್ರಾಮಾಣಿಕ ಅಧಿಕಾರಿಗಳೂ ಇದ್ದಾರೆ. ಆದರೆ ಕೆಲವರು ಈ ಸರ್ಕಾರಕ್ಕೆ ಬೆಲೆ ತರತಕ್ಕ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಇಂಥ ಒಳ್ಳೆಯ ಇಲಾಖೆ ಹಾಳಾಯಿತೆಂದು ಹೇಳುವುದಾದರೆ ಅದರ ಸಂಪೂರ್ಣ ಹೊಣೆಗಾರಿಕೆ ಮಾನ್ಯ ಗೃಹ ಸಚಿವರ ಮೇಲೆ ಈ ಸರ್ಕಾರದ ಮೇಲಿದೆ. ಆದರೆ ಅಲ್ಲೊಬ್ಬ, ಇಲ್ಲೊಬ್ಬ ಅಧಿಕಾರಿಯನ್ನು ನೀವು ಬೊಟ್ಟು ಮಾಡಿ ತೋರಿಸುವುದು ಸರಿಯಲ್ಲ. ನೀವು ಯಾವ ರೀತಿ ಕೆಲಸಮಾಡುತ್ತಿದ್ದೀರಿ ಎಂಬುದು ಪ್ರಾಮುಖ್ಯವಾದುದು. ಯಾವುದೋ ಒಂದು ಜಾರಿಕೆಯ ಮಾತನ್ನು ಹೇಳಿ ನಿಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೂ ಹಲವಾರು ಇಲಾಖೆಗಳ ಬಗ್ಗೆ ನಾನು ಮಾತನಾಡಬೇಕಾದುದು ಇದೆ. ಇವತ್ತು ವಾರ್ತಾ ಮತ್ತು ಪ್ರಚಾರ ಇಲಾಖೆ ತೆಗೆದುಕೊಂಡರೆ ಒಂದು ಸಂತೋಷದ ಸಂಗತಿ ಎಂದರೆ ಇದು ಬಹಳ ದೊಡ್ಡದಾಗಿ, ವಿಸ್ತಾರವಾಗಿ ಬೆಳೆಯುತ್ತಿರತಕ್ಕ ಇಲಾಖೆ. ಹಿಂದೆ ಒಂದು ಕಾಲದಲ್ಲಿ ನಾನು, ಈ ಇಲಾಖೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೆ. ಈ ಇಲಾಖೆಗೆ ಈಗ ಪುಷ್ಟಿಯನ್ನು ತುಂಬುತ್ತಿರುವುದರ ಬಗ್ಗೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಆದರೆ ಇದು ಅಖಿಲ ಭಾರತ ವಾರ್ತಾ ಮತ್ತು ಪ್ರಚಾರ ಇಲಾಖೆಯಾಗುತ್ತಿದೆಯೆಂದು ನನ್ನ ಅನಿಸಿಕೆ. ಈ ಇಲಾಖೆ ನಮ್ಮ ಜನರನ್ನು ಸರ್ಕಾರದ ಹತ್ತಿರಕ್ಕೆ ಒಯ್ಯತಕ್ಕ ಕೆಲಸವನ್ನು ಮಾಡುವುದಕ್ಕೆ ಬದಲಾಗಿ ಸರ್ಕಾರಕ್ಕೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಅಖಿಲ ಭಾರತ ಮಟ್ಟದಲ್ಲಿ ಪ್ರಚಾರ ಮಾಡುವುದಕ್ಕೆ ಹೋಗುತ್ತಿರುವುದರ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಬೇಕಾಗಿದೆ. ಆದರೆ ಇದು ತಪ್ಪು ಎಂದು ನಾನು ಹೇಳುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಬಹಳ ಚೆನ್ನಾಗಿ ಕೆಲಸಮಾಡುತ್ತಿರುವುದಕ್ಕೆ ಅವರ ಬಗ್ಗೆ ದೇಶಾದ್ಯಂತ ಪ್ರಚಾರ ಆಗಬಾರದೆಂದು ನಾನು ಹೇಳುವುದಿಲ್ಲ. ಆದರೆ ಈ ಇಲಾಖೆ ಕಾರ್ಯಕ್ರಮಗಳನ್ನು ನಮ್ಮ ಜನರು ಅರ್ಥೈಸಿಕೊಂಡು ಸರ್ಕಾರಕ್ಕೆ ಇನ್ನೂ ಹತ್ತಿರ ಹತ್ತಿರ ಆಗುವುದಕ್ಕೆ ಪೂರಕವಾಗಿ ಇದು ಕೆಲಸಮಾಡಬೇಕು.

ಈವತ್ತು ಪತ್ರಿಕಾ ಕರ್ತರ ಬಗ್ಗೆ ಹೇಳುವುದಾದರೆ ೧೨ ಜನ ಪತ್ರಿಕಾ ಕರ್ತರಿಗೆ ಮಾಸಾಸನವನ್ನು ಮಂಜೂರು ಮಾಡಿದ್ದೇವೆ, ಒಟ್ಟು ೭೩ ಜನ ಪತ್ರಿಕಾ ಕರ್ತರಿಗೆ ಮಾಸಾಸನವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಇನ್ನಷ್ಟು ಧಾರಾಳವಾಗಿ ಸರ್ಕಾರದವರು ಮಾಶಾಸನವನ್ನು ವಿತರಣೆ ಮಾಡಬೇಕು. ಮತ್ತು ಯಾರು ಪತ್ರಿಕೋದ್ಯಮವನ್ನೇ ನಂಬಿಕೊಂಡು ಸಾಕಷ್ಟು ಸಮಯವನ್ನು ಪ್ರಾಮಾಣಿಕವಾಗಿ ಸಲ್ಲಿಸಿದ್ದಾರೋ ಅವರ ಬಗ್ಗೆ ಇನ್ನಷ್ಟು ಉದಾರ ಮನಸ್ಸಿನಿಂದ ಈ ಮಾಶಾಸನವನ್ನು ಮಂಜೂರು ಮಾಡಬೇಕೆಂದು ಹೇಳಿ ಒತ್ತಾಯಪಡಿಸುತ್ತೇನೆ.

ಇದೇ ಸಂದರ್ಭದಲ್ಲಿ ಮಾನ್ಯ ಮಲ್ಲಪ್ಪನವರು ಹೇಳಿದರು ಕುಸ್ತಿ ಪೈಲ್ವಾನ್ನರ ಬಗ್ಗೆ. ಕುಸ್ತಿ ಪೈಲ್ವಾನ್‌ರ ಬಗ್ಗೆಯೂ ಮಾಶಾಸನವನ್ನು ಕೊಡಬೇಕೆಂದು ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿಯೇ ಪೈಲ್ವಾನರುಗಳಿಗೆ, ಮಾಶಾಸನವನ್ನು ಕೊಡುವ ಬಗ್ಗೆ ಹೇಳಿದ್ದರು. ಅಲ್ಲಿಂದ ಪ್ರಾರಂಭವಾದುದು ಇವತ್ತಿನವರೆಗೂ ಏನೂ ಆದಂತೆ ಕಾಣುತ್ತಿಲ್ಲ. ಈವತ್ತಿನ ದಿವಸ ಸ್ಕೂಲಿನಲ್ಲಿ ಕುಸ್ತಿ ಮಾಡಿದರೂ ಕೂಡ ಇಂತಿಂಥ ಕಡೆ ಕುಸ್ತಿ ಮಾಡಿದ್ದಾರೆಂದು ಸರ್ಟಿಫಿಕೇಟ್ ಕೊಟ್ಟುಬಿಡುತ್ತಾರೆ. ಆದರೆ ಆ ಕಾಲದಲ್ಲಿ ಬಡತನ, ಸರ್ಟಿಫಿಕೇಟ್ ಕೊಡತಕ್ಕಂಥ ವ್ಯವಸ್ಥೆಯೂ ಇರಲಿಲ್ಲ, ತೆಗೆದುಕೊಳ್ಳುವುದಕ್ಕೂ ಕೂಡ ಆಗುತ್ತಿರಲಿಲ್ಲ. ಫೋಟೋ ಕೂಡ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಇಲ್ಲದ್ದರಿಂದ ಪೈಲ್ವಾನರು ಎಂದು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಹಿಂದಿನ ಕಾಲದವರನ್ನು ಈಗಿನ ಕಾಲದ ಜನರೇಷನ್ ಅವರನ್ನು ಪೈಲ್ವಾನರು ಎಂದು ಹೇಳತಕ್ಕಂಥ ಪರಿಸ್ಥಿತಿಯೂ ಇಲ್ಲ. ದಯವಿಟ್ಟು ಇದು ಒಂದು ಆಡಳಿತ ಶಾಹಿಯ ವೈಖರಿ ಏನು ಮಾಡಿದರೂ ಕೂಡ ಫೈಲು ಕೆಳಗಡೆ ಹೋಗುತ್ತದೆ, ಮೇಲುಗಡೆ ಬರುತ್ತದೆ. ಇವೊತ್ತಿನವರೆಗೂ ನಾನು ಅದರ ಬೆನ್ನು ಹತ್ತಿದರೂ ಏನೂ ಮಾಡಲಿಕ್ಕೆ ಆಗಲಿಲ್ಲ. ಹೊಸ ಸರ್ಕ್ಯುಲರ್ ಬಂದರೂ ಕೂಡ ಡಿ. ಸಿ. ಯವರು ನೋಡಬೇಕು, ಪರಿಶೀಲನೆ ಮಾಡಬೇಕು ಪೈಲ್ವಾನ್ ಎಂದು ಗುರುತಿಸಬೇಕು. ಇದನ್ನು ಇನ್ನಷ್ಟು ಸರಳ ರೀತಿಗೊಳಿಸಿ ಡಿ. ಸಿ ಯವರಿಗೆ ಅಧಿಕಾರವನ್ನು ಕೊಟ್ಟು ಆದಷ್ಟು ಜಾಗ್ರತೆಯಾಗಿ ಅವರುಗಳಿಗೆ ಮಾಶಾಸನವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸಣ್ಣ ಪತ್ರಿಕೆಗಳ ವಿಷಯದ ಬಗ್ಗೆ ಹೇಳುವುದಾದರೆ ಅದಕ್ಕೆ ಯಾವ ರೀತಿಯಲ್ಲಿ ಸಹಾಯ ಮಾಡಬೇಕು ಎನ್ನುವ ಬಗ್ಗೆ ಮಾನ್ಯ ಎಂ. ಬಿ. ಸಿಂಗ್‌ರವರ ಅಧ್ಯಯನ ಸಮಿತಿಯ ಶಿಫಾರಸು ಇರುತ್ತದೆ. ನಿಜಕ್ಕೂ ಅದೂ ವಿಸ್ತೃತ ಯೋಜನೆಗಳು, ಒಳ್ಳೆಯ ಉದ್ದೇಶಗಳನ್ನು ಒಳಗೊಂಡಂತಿದೆ. ಅವುಗಳನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಇನ್ನು ಪ್ರವಾಸೋದ್ಯಮ ಬಗ್ಗೆ ಹಲವಾರು ವಿಚಾರಗಳನ್ನು ಹೇಳಿದ್ದಾರೆ. ಈ ದಿಸೆಯಲ್ಲಿ ಕಾರವಾರ, ಮಲ್ಪೆ, ಮರವಂತೆ ಕಡಲ ತೀರಗಳಲ್ಲಿ ತಂಗುದಾಣಗಳನ್ನು ನಿರ್ಮಾಣ ಮಾಡಲು ಕೇಂದ್ರ ಸರ್ಕಾರದವರು ಹಣ ಮಂಜೂರು ಮಾಡಿದ್ದಾರೆ. ಆದನ್ನು ಇವರು ಪ್ರೈವೇಟ್‌ನವರಿಗೆ ಖರೀದಿಗೆ

ಕೊಡಲು ಏರ್ಪಾಡು ಮಾಡಿದ್ದಾರೆ. ಖರೀದಿಗೆ ಕೊಟ್ಟರೋ ಬಿಟ್ಟರೋ ಗೊತ್ತಿಲ್ಲ. ನಾವು ಹೇಳಿ ಮಾಡಿಸುವುದು, ನೀವು ಒಳಗೆ ವ್ಯವಹಾರ ಮಾಡತಕ್ಕಂಥದ್ದು ಇರುತ್ತದೆ. ಈವತ್ತು ಕೇಂದ್ರ ಸರ್ಕಾರದವರು ತಲಕಾಡು ಜೋಗ್‌ಫಾಲ್ಸ್, ಮುಳಬಾಗಲು ಪ್ರೇಕ್ಷಣೀಯ ಸ್ಥಳಗಳನ್ನಾಗಿ ಮಾಡಿ ಪ್ರವಾಸಿಗರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಲು ಮುಂದೆ ಬಂದಿರುತ್ತಾರೆ. ಆದರೆ ಜೋಗ್ ಫಾಲ್ಸ್‌ನ್ನು ನೋಡಿದರೆ ಈವತ್ತು ಬಹಳ ಆಶ್ಚರ್ಯವಾಗುತ್ತದೆ. ಜಗತ್‌ಪ್ರಸಿದ್ಧವಾದ ಜೋಗ್ ಫಾಲ್ಸ್ ಎಂದು ಏನು ಹೇಳಿದ್ದಾರೆ, ಅದು Falls ಅಲ್ಲ False ಆಗಿದೆ. ಇಂಥ ಒಂದು ಪರಿಸ್ಥಿತಿಯಲ್ಲಿದೆ. ಒಂದು ತೊಟ್ಟು ನೀರು ಕೂಡ ಆ ಫಾಲ್ಸಿಗೆ ಬೀಳುತ್ತಿಲ್ಲ. ಇದು ಈಗ ಭಯಂಕರವಾಗಿ ಕಾಣುತ್ತಿದೆ. ಫಾಲ್ಸ್ ಇಲ್ಲದಿರುವ ದೃಶ್ಯ ಪ್ರಕೃತಿಗೆ ಮಾಡುತ್ತಿರುವ ಅಪಚಾರದ ಸಂಕೇತವಾಗಿ ಕಾಣುತ್ತದೆ. ಅದನ್ನು ನೋಡಿದರೆ ಭಯಾನಕ ದೃಶ್ಯ ಇದೆ. ತಮಗೆ ಗೊತ್ತಿದೆ, ನಿಜವಾಗಿ ಇಡೀ ಜಗತ್ತಿನಲ್ಲಿ ಅಂಥ ಒಂದು ಸಹಜವಾದ ಪ್ರಾಕೃತಿಕವಾದ ಫಾಲ್ಸ್ ಇಲ್ಲ ನಯಾಗರ ಇದೆ. ಆದರೆ ಅದು ಕೃತಕವಾಗಿ ನಿರ್ಮಾಣವಾದುದು. ಜೋಗ್ ಜಲಪಾತದಂಥ ಸಹಜ ಸೌಂದರ್ಯವಾಗಿ ಕಂಗೊಳಿಸತಕ್ಕ ಜಲಪಾತ ಬೇರೊಂದು ಇಲ್ಲ. ಶರಾವತಿ ಯೋಜನೆಯನ್ನು ಮಾಡಿದ ಕಾಲದಲ್ಲಿ ಆ ಯೋಜನೆಯಿಂದ ಇದಕ್ಕೆ ಇಷ್ಟು ನೀರು ಬಿಡಬೇಕೆಂದು ಕಡ್ಡಾಯ ಮಾಡಿದರು. ಈ ಜಲಪಾತವನ್ನು ೩೬೫ ದಿನವೂ ಸುಂದರವಾಗಿಡುವುದಕ್ಕೆ ಇಷ್ಟು ನೀರು ಬಿಡಬೇಕೆಂದು ನಿಗಧಿ ಮಾಡಿದ್ದರು. ಅಲ್ಲಿ ಬೇರೆ ಬೇರೆ ರೀತಿಯಲ್ಲಿ ಪ್ರವಾಸಿಗರಿಗೆ ಅನುಕೂಲ ಮಾಡಿ ಕೊಡುವ ಸಲುವಾಗಿ ಬಡ್ಜೆಟ್‌ನಲ್ಲಿ ಒಂದು ಕೋಟಿ ರೂಪಾಯಿಗಳನ್ನು ನಿಗಧಿ ಮಾಡಿದ್ದರು. ಆದರೆ ಅದು ಬಳಕೆಯಾಗಲಿಲ್ಲ. ಇವತ್ತು ಆ ಜಲಪಾತ ಇಲ್ಲ. ಮಳೆಗಾಲದಲ್ಲಿ ನೀರು ಬಂದಾಗ ಅಡ್ವರ್ಟೈಸ್‌ಮೆಂಟ್ ಮಾಡುತ್ತಾರೆ. ಇಲ್ಲಿಂದ ಜನ ಹೋಗುವ ವೇಳೆಗೆ ಅದು ಇರುವುದಿಲ್ಲ. ನಾವೇ ಅಲ್ಲಿ ಹುಟ್ಟಿ ಬೆಳೆದವರು ಜಲಪಾತವನ್ನು ನೋಡದೆ ಯಾವುದೋ ಜನ್ಮವಾಯಿತು. ಇಂಥ ಪರಿಸ್ಥಿತಿ ಬಂದಿದೆ ನಾನು ವಿದ್ಯುಚ್ಛಕ್ತಿ ಮಂತ್ರಿಯಾಗಿದ್ದಾಗ ಪವರ್ ಕಾರ್ಪೊರೇಷನ್‌ನಲ್ಲಿ ಇದಕ್ಕೆ ಬೇರೆ ಯೋಜನೆ ಮಾಡುವುದಕ್ಕೆ ಸೂಚಿಸಿದ್ದೆ. ನಂತರ ಶ್ರೀ ವೀರಪ್ಪ ಮೊಯಿಲಿಯವರು ಮುಂದುವರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಲಿಂಗನಮಕ್ಕಿ ರಿಸರ್ವಾಯರ್ ಮತ್ತು ಜೋಗ್ ಜಲಪಾತದ ಮಧ್ಯೆ ಕ್ಯಾಚ್‌ಮೆಂಟ್ ಏರಿಯಾ ಇದೆ. ಅಲ್ಲಿ ಒಂದು ಸಣ್ಣ ಅಣೆಕಟ್ಟನ್ನು ನಿರ್ಮಾಣ ಮಾಡಿದರೆ ೩೬೫ ದಿವಸ ಜೋಗ್ ಜಲಪಾತವನ್ನು ಜೀವಂತವಾಗಿ ಸುಂದರವಾಗಿ ಇಡುವುದಕ್ಕೆ ಸಾಧ್ಯವಿದೆ. ಆಗಿನ ಕಾಲದಲ್ಲಿ ಅದಕ್ಕೆ ಅಂದಾಜು ಒಂದು ಕೋಟಿ ಇದ್ದರೆ ಈಗ ೩-೪ ಕೋಟಿ ರೂಪಾಯಿ ಆಗುತ್ತದೆ. ಪ್ರವಾಸೋದ್ಯಮ ಸಂಸ್ಥೆಯವರು ಮತ್ತು ಪವರ್ ಕಾರ್ಪೊರೇಷನ್‌ನವರು ಜಂಟಿಯಾಗಿ ಈ ಯೋಜನೆಯನ್ನು ಮಾಡಬಹುದು. ಒಂದು ವರ್ಷದಲ್ಲಿ ಇದನ್ನು ಸಿದ್ಧಪಡಿಸಬಹುದು. ಅಂಥ ಯೋಜನೆ ಇವರಲ್ಲಿ ಇಲ್ಲವೇ ಇಲ್ಲ. ಹೋಟೆಲು ಕಟ್ಟಿದ್ದೇವೆ, ದಾರಿ ಮಾಡಿದ್ದೇವೆಂದರೆ ಮೂಲಭೂತವಾಗಿ ಇರಬೇಕಾದ ಜಲಪಾತ ಇಲ್ಲದೆ ಹೆದ್ದಾರಿ ನಿರ್ಮಾಣ ಮಾಡಿದರೆ ಆ ದಾರಿಯಲ್ಲಿ ಯಾರು ಹೋಗಬೇಕು ? ಅಲ್ಲಿ ಇವೊತ್ತು ಆನೆ ಹುಲಿಗಳು ಬದುಕಿಲ್ಲ. ಹೆದ್ದಾರಿಯ ಉಪಯೋಗ ಹೇಗೆ ಆಗಬೇಕು. ಈ ಬಗ್ಗೆ ನಾನು ಬಹಳ ತೀವ್ರವಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಅವತ್ತೇ ಹೇಳಿದ್ದೆ. ಮಾನ್ಯ ಮುಖ್ಯ ಮಂತ್ರಿಗಳ ಮನೆಯ ಹತ್ತಿರದಲ್ಲಿ ಇರತಕ್ಕ ಜಲಪಾತ ಇದು. ಅವರಿಗೆ ಬಹಳ ಹತ್ತಿರವಾದುದು ಅದು. ಆ ದೃಷ್ಟಿಯಿಂದ ಇದನ್ನು ತುಂಬಾ ಒತ್ತಾಯಿಸಿ ಹೇಳಿದ್ದೆ. ಈ ಯೋಜನೆ ಬಗ್ಗೆ ಏನಾದರೂ ಮಾಡಿ ಎಂದು ಕಳೆದ ವರ್ಷ ಹೇಳಿದಾಗ ಜೀವರಾಜ ಆಳ್ವರವರು ಇದರ ಬಗ್ಗೆ ಯೋಚನೆ ಮಾಡುತ್ತೇನೆಂದು ಹೇಳಿದ್ದರು. ಅವರು ನಿರ್ಯೋಚನೆ ಮಾಡುವುದೇ ಹೊರತು ಯೋಚನೆ ಮಾಡಿ ಯಾವುದೇ ಕೆಲಸ ಮಾಡುವ ಸಂಪ್ರದಾಯ ಇಲ್ಲವೆಂದು ತಿಳಿದುಕೊಂಡಿದ್ದೇನೆ. ನಿರ್ಯೋಚನೆಯಿಂದ ಏನು ಸಾಧ್ಯ? ಅವರ ಹೆಸರೇನೋ ಜೀವರಾಜ ಆಳ್ವ ಸರಿ. ಆದರೆ ಪ್ರವಾಸೋದ್ಯಮ ನಿರ್ಜೀವವಾಯಿತೇ ಹೊರತು ಜೀವ ಬರಲಿಲ್ಲ. ಜಲಪಾತ ಸತ್ತುಹೋಗಿದೆ, ಇದು ಅತ್ಯಮೂಲ್ಯವಾದ ಸುಂದರವಾದ ಜಲಪಾತ, ಪ್ರಕೃತಿದತ್ತವಾದದ್ದು. ಇದನ್ನು ಕೇವಲ ವಿದ್ಯುಚ್ಛಕ್ತಿ ಯೂನಿಟ್ ಬರಬೇಕೆಂಬ ಕಾರಣಕ್ಕೋಸ್ಕರ ಬಲಿ ಕೊಡತಕ್ಕದ್ದು ಸರಿಯಲ್ಲ. ಸರ್ಕಾರಕ್ಕೆ ಒತ್ತಡ ಇದೆ ಎಂಬುದನ್ನು ಒಪ್ಪುತ್ತೇನೆ. ನಾನು ಮಂತ್ರಿಯಾಗಿದ್ದಾಗ ನಿಲ್ಲಿಸಬೇಕಾದ ಸಂದರ್ಭ ಬಂತು. ಅದಕ್ಕೆ ಒಂದು ಪರ್ಯಾಯ ಯೋಜನೆ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ. ಪ್ರವಾಸೋದ್ಯಮ ಸಂಸ್ಥೆಯ ಬಗ್ಗೆ ನಾನು ಒಂದು ಪ್ರಶ್ನೆ

ಹಾಕಿದ್ದೆ. ಅದು ಬಹಳ ಗಂಭೀರವಾದ ವಿಚಾರ. ಅಲ್ಲಿರತಕ್ಕ ಮೂರು ಜನ ಅಧಿಕಾರಿಗಳು ಸಿದ್ದರಾಜು, ಸತೀಶಬಾಬು ಮತ್ತು ಕೆ.ಎಸ್. ವಿಜಯದೇವ–ಇವರು ಯಾರು ಎಂದು ನನಗೆ ಗೊತ್ತಿಲ್ಲ. ಇವರ ಬಗ್ಗೆ ಪ್ರಬಲವಾದ ಆರೋಪ ಇದೆ. ಸಿಬಿಐ ತನಿಖೆಯಿಂದ ಮೇಲ್ನೋಟಕ್ಕೆ ಆರೋಪ ಸತ್ಯ ಎಂದು ಸಾಬೀತಾಗಿದೆ. ಅಂಥವರು ಯಾವುದೋ ಕಾರಣದಿಂದ ರಕ್ಷಣೆ ಪಡೆದು ಹಾಗೇ ಇರುವುದಲ್ಲದೆ ಅವರುಗಳಿಗೆ ಮತ್ತೆ ಬಡ್ತಿ ದೊರೆತಿದೆ.

ಈ ಮೂರು ಜನರ ಬಗ್ಗೆಯೂ ಗಂಭೀರವಾದ ಆರೋಪ ಇದ್ದು ಸಿ. ಒ. ಡಿ. ಯು ಪ್ರಥಮ ಸುತ್ತಿನ ವರದಿ ಆಧಾರದ ಮೇಲೆ ೨೫ ಲಕ್ಷ ರೂಪಾಯಿಗಳ ಅವ್ಯವಹಾರದ ಆಪಾದನೆ ಮೇಲೆ ಜೂನ್ ೧೯೮೪ರಲ್ಲಿ ಸರ್ಕಾರ ಇವರನ್ನು ಸಸ್ಪೆಂಡ್ ಮಾಡಿತ್ತು. ಸಿ. ಒ. ಡಿ. ತನಿಖೆಯ ಆಧಾರದ ಮೇಲೆ ಸಸ್ಪೆಂಡ್ ಮಾಡಿರತಕ್ಕವರು ಇವತ್ತು ಕೋರ್ಟಿನಲ್ಲಿ ರಕ್ಷಣೆ ಪಡೆದುಕೊಂಡು ಉಳಿದು ಬಿಟ್ಟಿದ್ದಾರೆ. ಕೆಲಸದಲ್ಲಿ ಉಳಿಯಬಹುದು. ಆದರೆ ಜವಾಬ್ದಾರಿ ಸ್ಥಾನದಲ್ಲಿ ಇವರನ್ನು ಉಳಿಸದೆ ಬೇರೆ ಕಡೆ ಕಳಿಸುವುದಕ್ಕೆ ಸರ್ಕಾರಕ್ಕೆ ಶಕ್ತಿ ಇದೆ. ಅಲ್ಲೇ ಉಳಿಸಿಕೊಳ್ಳುವುದರ ಜೊತೆಗೆ ಬಡ್ತಿಯನ್ನೂ ಅವರಿಗೆ ಕೊಟ್ಟಿದ್ದಾರೆ. ಮೂರು ನಾಲ್ಕು ಜನ ಮೇಲ್ಮಟ್ಟದ ಅಧಿಕಾರಿಗಳು ಪ್ರವಾಸೋದ್ಯಮ ಸಂಸ್ಥೆಯಲ್ಲಿ ಏನಿದ್ದಾರೆ ಅವರೆಲ್ಲರೂ ಈ ರೀತಿಯ ಆಪಾದನೆಗೆ ಒಳಗಾಗಿ ಸಸ್ಪೆನ್‌ಷನ್ ಆಜ್ಞೆ ಜಾರಿಯಾಗಿ ಕೋರ್ಟ್ ಬಲದ ಮೇಲೆ ಉಳಿದುಕೊಂಡು ಈಗ ಬಡ್ತಿಯನ್ನೂ ಸಂಪಾದನೆ ಮಾಡಿದ್ದಾರೆ ಎಂದರೆ ಈ ಉದ್ಯಮ ಸಂಸ್ಥೆಯಿಂದ ಪ್ರವಾಸೋದ್ಯಮ ಬೆಳವಣಿಗೆಯನ್ನು ಏನು ನಿರೀಕ್ಷೆ ಮಾಡಬಹುದು ಎಂಬ ಆತಂಕವನ್ನು ನಾನು ಈ ಸಂಧರ್ಭದಲ್ಲಿ ವ್ಯಕ್ತ ಮಾಡುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ಸಂಬಂಧಪಟ್ಟಿರ ತಕ್ಕವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರ ಪ್ರಸ್ತಾಪ ಮಾಡಬೇಕೆಂದಿರುವುದು ಚಲನಚಿತ್ರದ ವಿಚಾರ. ಚಲನಚಿತ್ರದ ತೆರಿಗೆ ವಿಚಾರದಲ್ಲಿ ಚಲನಚಿತ್ರ ವಾಣಿಜ್ಯ ಮಂಡಲಿಯವರು ಒಂದು ಮನವಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ್ದಾರೆ. ಅವರಿಗೆ ಯಾವ ರೀತಿ ತೊಂದರೆಯಾಗುತ್ತದೆ ಎಂಬ ಬಗ್ಗೆ ಅದರಲ್ಲಿ ಹೇಳಿದ್ದಾರೆ. ಅದು ಸಹಾನುಭೂತಿ ಪೂರ್ವಕವಾಗಿ ಪರಿಶೀಲನೆಗೆ ಯೋಗ್ಯವಾಗಿದೆ. ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇನ್ನೊಂದು ಪ್ರಶ್ನೆ ಏನೆಂದರೆ ಈ ಚಲನಚಿತ್ರದ ಬಗ್ಗೆ ಸರ್ಕಾರದ ಪಾತ್ರ ಏನು ? ಸರ್ಕಾರಕ್ಕೆ ಒಂದು ಚಲನಚಿತ್ರ ನೀತಿ ಇದೆಯೆ ? ಮಾನ್ಯ ಅಧ್ಯಕ್ಷರೆ, ಚಲನಚಿತ್ರವನ್ನು ಎರಡು ರೀತಿಯಲ್ಲಿ ನೋಡಬೇಕು. ಒಂದನೆಯದು ಅದೊಂದು ಕೈಗಾರಿಕೆ. ಹಲವಾರು ಜನರಿಗೆ, ಲಕ್ಷಾಂತರ ಜನರಿಗೆ ಉದ್ಯೋಗ ಕೊಡತಕ್ಕ, ಅವರಿಗೆ ಅನ್ನ ನೀಡತಕ್ಕ ಕೈಗಾರಿಕೆ. ಇನ್ನೊಂದು ಅತ್ಯಂತ ಪ್ರಭಾವಿ ಮಾಧ್ಯಮ. ಆದ್ದರಿಂದ ಸರ್ಕಾರ ಈ ಎರಡೂ ಅಂಶಗಳನ್ನು ನೋಡಿ ಅದರ ಬಗ್ಗೆ ಗಮನ ಹರಿಸಬೇಕಾದುದು ಅಗತ್ಯ. ಕೈಗಾರಿಕೆಯಾಗಿ ಅದು ಸರಿಯಾಗಿ ಬೆಳೆದುಕೊಂಡು ಹೋಗುವುದಕ್ಕೆ ಏನು ಪ್ರೋತ್ಸಾಹಗಳನ್ನು ಕೊಡಬೇಕೋ ಅದನ್ನು ಕೊಡಬೇಕು. ಮತ್ತು ಒಂದು ಮಾಧ್ಯಮವಾಗಿ ಅದರಿಂದ ಏನು ನಿರೀಕ್ಷೆ ಮಾಡಬೇಕೋ ಈ ಎರಡನ್ನೂ ಗ್ರಹಿಸಿಕೊಂಡು ಚಲನಚಿತ್ರಕ್ಕೆ ಸಂಬಂಧಿಸಿದಂತೆ ಸರ್ಕಾರ ಒಂದು ನೀತಿಯನ್ನು ರೂಪಿಸಬೇಕಾದ ಅಗತ್ಯ ಇದೆ. ಈಗ ಏನಿದ್ದರೂ ಬರೀ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಅಷ್ಟೇ ದೃಷ್ಟಿಯಿಂದ ನೋಡುತ್ತಿದ್ದೇವೆಯೇ ಹೊರತು ಬೇರೆ ದೃಷ್ಟಿಯಿಂದ ನೋಡುತ್ತಿಲ್ಲ. ಉತ್ಪಾದನೆ, ತಯಾರಿಕೆ, ಹಂಚಿಕೆ ಮತ್ತು ಅದರ ಪ್ರದರ್ಶನ ಈ ಮೂರೂ ವಿಚಾರಗಳ ಬಗ್ಗೆ ಸರ್ಕಾರ ತನ್ನದೇ ಆದ ಪಾತ್ರ ನಿರ್ವಹಿಸುವುದಕ್ಕೆ ಸಾಧ್ಯವಿದೆ. ಅದನ್ನು ನಿರ್ವಹಿಸತಕ್ಕ ಅಗತ್ಯ ಬಹಳ ಇದೆ. ಚಲನಚಿತ್ರ ಇವತ್ತು ಯಾವ ಸ್ವರೂಪದಲ್ಲಿ ಇರಬೇಕೆಂಬುದನ್ನು ದೊಡ್ಡ ನಿಯಂತ್ರಣದ ಮೂಲಕ ತರುವುದಕ್ಕೆ ಸಾಧ್ಯ ಇಲ್ಲದೇ ಇರುವ ಪರಿಸ್ಥಿತಿ ಇದೆ. ಕೊನೇ ಪಕ್ಷ ಉತ್ತಮವಾದ ಚಲನಚಿತ್ರ ಬರುವುದಕ್ಕೆ ಯಾವ ರೀತಿಯ ಸೂತ್ರ ಮಾಡಬೇಕು ಎಂಬ ಬಗ್ಗೆ ಗಮನ ಹರಿಸಬೇಕು. ಒಳ್ಳೆಯ ಚಿತ್ರಗಳನ್ನು ನೋಡುವುದಿಲ್ಲ ಎಂದು ಹಿಂದೆ ಹೇಳುತ್ತಿದ್ದರು. ಹೊಸ ಅಲೆಯ ಚಿತ್ರ ಬಂದಾಗ ಜನ ನೋಡುತ್ತಾರೆ. ಹೆಗ್ಗೋಡಿನಲ್ಲಿ ನೀನಾಸಂ ಎಂದು ಒಂದು ಸಂಸ್ಥೆ ಇದೆ. ಪ್ರಪಂಚದಲ್ಲಿ ಬಹಳ ಅತ್ಯುತ್ತಮವಾದ ಚಲನಚಿತ್ರ ಏನಿದೆ ಆ ಚಿತ್ರಗಳನ್ನು ಆ ಹಳಿಯವರೆಲ್ಲಾ ನೋಡುತ್ತಾರೆ. ಆ ಊರಿನಲ್ಲಿ ಏನೂ ಓದದೇ ಇರುವವರು, ವಿದ್ಯಾಭ್ಯಾಸ ಮಾಡದೇ ಇರುವವರು ಅದನ್ನು ನೋಡಿ ಚರ್ಚೆ ಮಾಡತಕ್ಕ ಸ್ಥಿತಿಗೆ ಬಂದಿದ್ದಾರೆ, ಕಾರಣ ಅಲ್ಲಿರುವ ಸಂಸ್ಥೆ ವರ್ಷೇ ವರ್ಷೇ ಆ ಚಿತ್ರವನ್ನು ತೋರಿಸಿ ಅವರ ಅರ್ಥ, ರಸಗ್ರಹಣ ಹೇಗೆ ಮಾಡಬೇಕು ಎಂದು ಅಭ್ಯಾಸ ಮಾಡಿಸಿರುವುದರಿಂದ. ಇವತ್ತು ಬೇಕಾದಷ್ಟು ಸಹಾಯಂಥನ ಯೋಜನೆಗಳನ್ನು ಕೊಟ್ಟಿದಿ ೀರಿ. ಆದರೆ ಫಿಲಂ ಸೊಸೈಟೀಸ್ ಏನಿದೆ,

ಚಲನಚಿತ್ರ ರಸಗ್ರಹಣಕ್ಕೆ ಸಂಬಂಧಪಟ್ಟ ಹಲವಾರು ಸಂಘಗಳನ್ನು ಏನು ಮಾಡಿದ್ದಾರೆ ಅವರಿಗೆ ಸಹಾಯ ಮಾಡುತ್ತಿಲ್ಲ. ಒಳ್ಳೆಯ ಚಲನಚಿತ್ರ ಬರುವುದು ಹೇಗೆ, ಅದಕ್ಕೆ ಏನು ಪ್ರೋತ್ಸಾಹ ಕೊಡಬೇಕು ಎಂಬ ಬಗ್ಗೆ ಲಕ್ಷ್ಯ ಕೊಡಬೇಕು. ಮತ್ತು ಅದರ ಹಂಚಿಕೆಗೂ ಗಮನ ಕೊಡಬೇಕು. ಬಾಕ್ಸ್ ಆಫೀಸ್ ಮೈಂಡೆಡ್ ಹಂಚಿಕೆ ವ್ಯವಸ್ಥೆ ಇದೆ. ಮನಿ ಸ್ಪಿನ್ನಿಂಗ್ ಫಾರ್ಮುಲಾದ ಮೇಲೆ ಆಗತಕ್ಕ ಚಿತ್ರ. ಕೋಷ್ಟಕದಲ್ಲಿ ಒಂದು ವಿಚಾರ ಇದೆ. ಒಬ್ಬ ಹೀರೊ ಇರಬೇಕು, ಒಬ್ಬ ವಿಲನ್ ಇರಬೇಕು, ಒಬ್ಬಳು ಹೀರೋಯಿನ್ ಇನ್ನೊಂದಿಷ್ಟು ಜನ ಚಿಲ್ಲರೆ ಪಾತ್ರಗಳು, ಕ್ಯಾಬರೆ ಡ್ಯಾನ್ಸ್ ಇರಬೇಕು ಕೊನೆಗೆ ಈ ರೀತಿ ಮುಕ್ತಾಯ ಆಗಬೇಕು, ಅನಂತರ ಹೀರೋನಾ ಜನ ಹೊಡೆದಮೇಲೆ ಕೊನೆಗೆ ಪೋಲೀಸರು ಬರಬೇಕು, ಹೀಗೆ ಕೋಷ್ಟಕ ಇದೆ. ಇದರದೇ ಹಂಚಿಕೆ. ಗಾಂಧೀನಗರದ ಹಂಚಿಕೆದಾರರು ಇದಿದ್ದರೆ ಮಾತ್ರ ಹಂಚಿಕೆ ಮಾಡುವುದಕ್ಕೆ, ದುಡ್ಡು ಇನ್‌ವೆಸ್ಟ್ ಮಾಡುವುದಕ್ಕೆ ಸಿದ್ಧರಾಗುತ್ತಾರೆ. ಆದ್ದರಿಂದ ಇಂತಹದ್ದು ಇಲ್ಲದೇ ಇರತಕ್ಕ ಕ್ರಿಯಾಶೀಲವಾದ ಚಲನಚಿತ್ರವಾಗಿದ್ದರೆ, ಅದನ್ನು ನಿರ್ಮಾಣ ಮಾಡುವುದಕ್ಕೆ ಬೇಕಾದ, ಪ್ರೋತ್ಸಾಹಕರವಾದ ಇಲಾಖೆಯ ನೀತಿಯಾಗಬೇಕು. ಇದೂ ಕೂಡ ಒಂದು ಅದರ ಅವಿಭಾಜ್ಯ ಅಂಗವಾಗಬೇಕು. ಚಲನಚಿತ್ರ ಅಭಿವೃದ್ಧಿ ನಿಗಮ ಎಂದು ಇದೆ. ಈ ನಿಗಮದಲ್ಲಿ ಏನು ಮಾಡುತ್ತಿದ್ದಾರೆಂದರೆ, ಖಾಸಗಿ ಬಂಡವಾಳವನ್ನು ಇದರಲ್ಲಿ ಸ್ವಲ್ಪ ತೊಡಗಿಸಲಾಗಿದೆ, ಇದರಿಂದಾಗಿ ಎಲ್ಲರೂ ಅವರೇ ಇದ್ದಾರೆ. ಸಿನಿಮಾ ಥಿಯೇಟರ್‌ಗಳ ಮಾಲೀಕರೇ ಇದರ ಡೈರೆಕ್ಟರ್‌ಗಳಾಗಿರುವುದರಿಂದ ಇದು ಎದ್ವಾತದ್ವಾ ಹೋಗುತ್ತಿದೆ. ಹಿಂದೆ ನಾನು ಮಂತ್ರಿಯಾಗಿದ್ದಾಗಲೂ ಈ ವಿಚಾರವನ್ನು ಹೇಳಿದ್ದೇನೆ ಕೇರಳದಲ್ಲಿ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಅದು ಸಂಪೂರ್ಣವಾಗಿ ಸರ್ಕಾರದ ಸ್ವಾಮ್ಯವಾಗಿರತಕ್ಕ ಕಾರ್ಪೊರೇಷನ್ ಆಗಿದೆ. ಸರ್ಕಾರದ ನೀತಿಯನ್ನು ಕಾರ್ಯಗತ ಮಾಡತಕ್ಕ ಇಲಾಖೆಯಾಗಿದೆ. ಇಲ್ಲೂ ಕೂಡ ಅಂಥ ಒಂದು ಪರಿಸ್ಥಿತಿ ನಿರ್ಮಾಣವಾಗಬೇಕೆಂದು ನಾನು ಬಯಸುತ್ತೇನೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನು ಮುಗಿಸುವುದಕ್ಕೆ ಬಯಸುತ್ತೇನೆ. ಬಹಳ ಕಾಲದಿಂದ ಆಡಳಿತ ಸುಧಾರಣೆಯ ಬಗ್ಗೆ ಮಾತುಗಳನ್ನಾಡುತ್ತಿದ್ದೇವೆ. ಮುಖ್ಯಮಂತ್ರಿಯಾಗಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅಧಿಕಾರವನ್ನು ವಹಿಸಿಕೊಂಡ ಮೇಲೂ ಆಡಳಿತವನ್ನು ಸುಧಾರಣೆ ಮಾಡತಕ್ಕ ಮಾತನ್ನು ಹೇಳಿದ್ದಾರೆ. ಇದು ಅವರ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲೂ ಇದೆ. ಆಡಳಿತವನ್ನು ಸುಧಾರಣೆ ಮಾಡುತ್ತೇವೆ. ಬದಲಾವಣೆ ಮಾಡುತ್ತೇವೆ ಎಂದು ಏನೇನೋ ಹೇಳಿಕೊಂಡಿದ್ದಾರೆ. ಇರತಕ್ಕ ಆಡಳಿತ ವ್ಯವಸ್ಥೆ ಏನಿದೆ, ಇದನ್ನು ನಾವು ಸ್ವಂತವಾಗಿ ನಿರ್ಮಾಣ ಮಾಡಿರತಕ್ಕದ್ದಲ್ಲ ಅದು ಬ್ರಿಟಿಷರು ನಮಗೆ ಕೊಡುಗೆಯಾಗಿ ಕೊಟ್ಟು ಹೋಗಿರತಕ್ಕ ವ್ಯವಸ್ಥೆ. ಕಾಲಾನುಕ್ರಮದಿಂದ ಇದು ಅಂತರ್ಗತವಾಗಿ, ಸುಧಾರಣೆಗಳು ಇದರಲ್ಲಿ ಇರುವಂಥದ್ದು ಏನೆಂದರೆ ಒಂದು ದೇಶ ಇನ್ನೊಂದು ದೇಶವನ್ನು ವಸಾಹತುವನ್ನಾಗಿ ಆಳುವುದಕ್ಕೆ ಅದನ್ನು ಶೋಷಣೆ ಮಾಡುವುದಕ್ಕೆ ಬೇಕಾದ ಸೂತ್ರಗಳು ಇದರಲ್ಲಿ ಇವೆಯೇ ಹೊರತು, ಒಂದು ದೇಶ ತಾವು ಸ್ವತಂತ್ರವಾಗಿ ಅಭಿವೃದ್ಧಿಯಾಗುವುದಕ್ಕೆ ಬೇಕಾದ ಸೂತ್ರಗಳು ಈ ಆಡಳಿತ ವ್ಯವಸ್ಥೆಯಲ್ಲಿಲ್ಲ. ಆದ್ದರಿಂದ ಇವೊತ್ತು ಏನಾಗಿದೆ ಎಂದರೆ ಈ ಒಂದು ಆಡಳಿತ ವ್ಯವಸ್ಥೆಯಲ್ಲಿ ಪರಸ್ಪರ ಅನುಮಾನದ ಮೇಲೆ, ಶಂಕೆಯ ಮೇಲೆ ಚೆಕ್ಸ್ ಅಂಡ್ ಬ್ಯಾಲೆನ್ಸ್, ಇದರ ಮೇಲೆ, ಆಡಳಿತ ನಡೆಯುತ್ತಿದೆ. ಪರಸ್ಪರ ವಿಶ್ವಾಸದ ಮೇಲೆ ಆಡಳಿತ ನಡೆಯುತ್ತಿಲ್ಲ. ಯಾವುದೇ ಒಂದು ಅರ್ಜಿಯನ್ನು ಮಂತ್ರಿಗಳಿಗೆ ಒಬ್ಬ ಕೊಟ್ಟರೆ ಅದು ತಹಶೀಲ್ದಾರ್‌ಗೆ ಹೋಗಿ ಮತ್ತೆ ತಹಶೀಲ್ದಾರ್‌ರಿಂದ ಮಂತ್ರಿಗಳಿಗೆ ಬರುತ್ತದೆ. ವಾಲಿಬಾಲ್ ಆಟದಲ್ಲಿ ಇತ್ತಿಂದ ಅತ್ತ ಬಾಲನ್ನು ಹೊಡೆಯುವುದು, ಅತ್ತಿಂದ ಇತ್ತ ಕಡೆ ವಾಲಿಬಾಲನ್ನು ಹೊಡೆಯುವುದು ಯಾವ ರೀತಿ ಆಡುತ್ತಾರೋ ಅದೇ ರೀತಿಯಲ್ಲಿ ಫೈಲು ಮೇಲಿಂದ ಕೆಳಗಿನವರೆಗೆ, ಕೆಳಗಿನಿಂದ ಮೇಲಿನವರೆಗೆ ಬರುತ್ತದೆಯೇ ಹೊರತು ಜವಾಬ್ದಾರಿ ಮಾತ್ರ ಕಡಿಮೆಯಾಗುವುದಿಲ್ಲ. ರೂಲ್ಸ್, ಕಾನೂನುಗಳೂ ಹಾಗೆಯೇ ಇವೆ. ದಪ್ಪಗಿದ್ದರೆ ರೊಟ್ಟಿ ತಟ್ಟಿ ತೆಳ್ಳಗಿದ್ದರೆ ದೋಸೆ ಹೊಯ್ಯಲಿ, ಎನ್ನುವ ಹಾಗೆ ರೂಲ್ಸ್‌ನ್ನು ಹಾಗೆಯೇ ಇಂಟರ್‌ಪ್ರಿಟ್ ಮಾಡುವ ಹಾಗೆ ಮಾಡಿದ್ದೇವೆ. ಯಾವುದೇ ಖಚಿತವಾದ ರೀತಿಯಲ್ಲಿ ಇರುವ ಹಾಗೆ ನಾವು ಮಾಡುವುದೇ ಇಲ್ಲ. ಖಚಿತವಾಗಿ ಇರುವ ಹಾಗೆ ಮಾಡಿದ ಕೂಡಲೆ ಯಾರಾದರೊಬ್ಬರ ಮೇಲೆ ಜವಾಬ್ದಾರಿ ಬರುತ್ತದೆ. ಆದ್ದರಿಂದ ಆ ಕೆಲಸವನ್ನು ನಾವು ಮಾಡುವುದೇ ಇಲ್ಲ. ಕೇವಲ ಇವತ್ತು ರೂಲ್ಸು, ಫೈಲು ಇವುಗಳೇ ದೇಶವನ್ನು ಆಳುತ್ತಿರುವುದರಿಂದಲೇ ನಮ್ಮ ಆಡಳಿತದಿಂದ ನಾವು ಏನೇ ನಿರೀಕ್ಷಣೆ ಮಾಡಿದರೂ, ಅದು ದೊರಕುತ್ತಿಲ್ಲ

ಇಲ್ಲ. ಇವತ್ತು ಮನುಷ್ಯರು ಆಡಳಿತವನ್ನು ನಡೆಸತಕ್ಕಂತಹ ವ್ಯವಸ್ಥೆಯನ್ನು ನಾವು ತರಬೇಕು. ಮನುಷ್ಯರು ತಪ್ಪಾದರೂ ಮಾಡಲಿ, ಸರಿಯಾದರೂ ಮಾಡಲಿ. ಈಗ ಹೌಸಿಂಗ್ ಪ್ರೋಗ್ರಾಂ ಬಗ್ಗೆ ಹೇಳುವುದಾದರೆ, ಡಿ. ಸಿ. ಗೆ ಜವಾಬ್ದಾರಿ ಇರಬೇಕು. ಇಷ್ಟು ದಿವಸದೊಳಗೆ ಇಷ್ಟು ಮನೆ, ಇಷ್ಟು ಸೈಟುಗಳನ್ನು ಮಾಡಿಕೊಡಬೇಕೆಂದು ಅದನ್ನು ಬಿಟ್ಟು ಬರೀ ರೂಲ್ಸನ್ನು ಹೇಳಿಕೊಳ್ಳುತ್ತಾ ಪ್ರತಿ ದಿವಸ ವಿಧಾನ ಸೌಧಕ್ಕೆ ಕಾಗದ ಕಳುಹಿಸುವುದು, ವಿಧಾನ ಸೌಧದಿಂದ ಕಾಗದ ಕೆಳಕ್ಕೆ ಬರುವುದರಿಂದ ಏನು ಪ್ರಯೋಜನ ಇದೆ ? ಇವತ್ತು ಅಂಥ ಯಾವುದೇ ಮೂಲಭೂತವಾದ ಬದಲಾವಣೆಯನ್ನು ನಾವು ತಂದಿಲ್ಲ. ಇವತ್ತು ನಾವು ಕೆಲವೊಂದು ಅಧಿಕಾರಿಗಳಲ್ಲಿ ಶ್ರದ್ಧೆಯನ್ನಿಟ್ಟಿದ್ದೇವೆ. ಐ. ಎ. ಎಸ್. ಅಧಿಕಾರಿಗಳು, ಅವರು ದೇವರು, ಅಥವಾ ದೇವರ ಅವತಾರ ಎಂದು ಲೆಕ್ಕಾಚಾರ ಇದೆ. ಅವರಿಗೂ ಅದೇ ಭಾವನೆ ಇವೊತ್ತು ಬಂದು ಬಿಟ್ಟಿದೆ. ಮಂತ್ರಿಗಳು ಆಜ್ಞೆ ಮಾಡಿದರೆ ಅದನ್ನು ಅವರು ಸಹಿಸುವುದಿಲ್ಲ. ಸಾಧಾರಣವಾಗಿ ಅವರು ಹಾಕಿದ ನೋಟ್‌ಗೆ ರುಜು ಹಾಕಿದರೆ ಅವರು ಬಹಳ ಒಳ್ಳೆಯ ಮಂತ್ರಿ. ಅದನ್ನು ಬಿಟ್ಟು ಅವರು ಹಾಕಿದ ನೋಟ್ಸನ್ನು ಅಲ್ಲೇ ಇಟ್ಟು ತಿರುಗಿ ಹೇಳಿದರೋ ಆಗ ಅದು ಅವರ ಮನಸ್ಸಿಗೆ ವ್ಯಥೆಯಾಗುತ್ತದೆ. ಏಕೆಂದರೆ ಅವರು ತೀರ್ಮಾನ ಮಾಡಿದ್ದಾರೆ. ನಾವು ಮಾಡಿದ್ದೇ ಸರಿ ಎಂದು ನಾವು ಕೆಲವರಿಗೆ ಪುರುಸೊತ್ತು ಇಲ್ಲದೆ ಐ. ಎ. ಎಸ್. ಮಾಡಲಿಲ್ಲವೇ ಹೊರತು ಐ. ಎ. ಎಸ್. ಮಾಡುವುದಕ್ಕೆ ಏನು ತೊಂದರೆ ಇಲ್ಲ. ಅದನ್ನು ಅವರು ತಿಳಿದುಕೊಳ್ಳುವುದು ಬೇಡ. ಅದೇನು ದೊಡ್ಡ ಪರಾಕ್ರಮ ಎಂದು ಹೇಳಿ ಬಿಟ್ಟಿದ್ದೇವೆ ಅಷ್ಟೆ. ರಾಜಕಾರಿಗಳಾಗಿ ಬಂದವರೆಲ್ಲಾ ಐಯ್ಯೋ ಎನ್ನತಕ್ಕಂತಹ ಭಾವನೆಯಿಂದ ಅವರು ವರ್ತನೆ ಮಾಡತಕ್ಕಂಥದ್ದು, ಮತ್ತು ಅವರೇ ಬೃಹಸ್ಪತಿಗಳು ಎನ್ನತಕ್ಕಂತಹ ರೀತಿಯಲ್ಲಿ ವರ್ತನೆ ಮಾಡುವುದು ಇದೆಯಲ್ಲಾ, ಇದರಿಂದ ದೇಶಕ್ಕೆ ಅನ್ಯಾಯವಾಗುತ್ತದೆ. ಅವರಲ್ಲೂ ಒಳ್ಳೆಯ ಆಫೀಸರ್ಸ್ ಇದ್ದಾರೆ. ಅವರವರ ಯೋಗ್ಯತೆಗೆ ತಕ್ಕ ಹಾಗೆ ಇದ್ದಾರೆ. ಆದರೆ ಆಡಳಿತವನ್ನು ನಡೆಸತಕ್ಕಂಥವರ ಜವಾಬ್ದಾರಿ ಏನು ? ಯಾರನ್ನು ಎಲ್ಲಿಗೆ ಹಾಕಬೇಕು ? ಯಾರಿಂದ ಏನು ಕೆಲಸ ಮಾಡಿಸಿಕೊಳ್ಳಬೇಕು ಎಂದು ಪರಿಜ್ಞಾನಬೇಕು. ಕುದುರೆ ಸವಾರಿ ಮಾಡತಕ್ಕ ವಿಚಾರ. ಲಗು–ಬಿಗು ನೋಡಿ ಸವಾರಿ ಮಾಡಬೇಕು. ಸೊಂಟನೂ ಮುರಿಯ ಬಾರದು. ಅದು ತನ್ನಷ್ಟಕ್ಕೆ ತಾನೆ ಯಾರೂ ಸವಾರರು ಇಲ್ಲದೆ ಎಲ್ಲೆಂದರೆ ಅಲ್ಲಿಗೆ ಹೋಗಿ ಬೇಕಾಬಿಟ್ಟಿ ಮೇಯುವ ಹಾಗೆ ಆಗಬಾರದು. ಆ ರೀತಿಯಲ್ಲಿ ಆಡಳಿತದ ಸೂಕ್ಷ್ಮತೆಯಿಂದ ಏನು ಪದ್ಧತಿಯನ್ನು ತಂದಿದ್ದೀರಿ ? ಏನು ಆಡಳಿತದಲ್ಲಿ ಬದಲಾವಣೆ ತಂದಿದ್ದೀರಿ ! ಒಬ್ಬ ಡಿ. ಸಿ. ಇವತ್ತು ಒಂದುಕಡೆ ಹಾಕಿದ ಮೇಲೆ ೨ ವರ್ಷದೊಳಗೆ ಯಾರೋ ಮಂತ್ರಿಗಳಿಗೆ ಸರಿಯಿಲ್ಲ ಎಂದರೆ ಅವರನ್ನು ಅಲ್ಲಿಂದ ತೆಗೆಯುವುದು ಬೇರೊಂದು ಕಡೆಗೆ ಹಾಕುವುದು. ಈಗ ಅಧಿಕಾರಿಗಳಿಗೂ ಅಷ್ಟೆ. ಅವರನ್ನು ಒಂದು ತರಹ ಚೆಂಡಿನ ತರಹ ದಿನದಿಂದ ದಿನಕ್ಕೆ ಎಸೆಯುತ್ತಾ ಇದ್ದರೆ ಅವನಿಗೆ ಕೆಲಸ ಮಾಡುವ ಮನೋಭಾವ ಎಲ್ಲಿ ಬರುತ್ತದೆ ? ಅಲ್ಲಿಮೇಟಿ ಏನು ಬೇಕು ಅವರಿಗೆ ? ಅವರಿಗೆ ಸಂಬಳ ಸಾರಿಗೆ ಪೆನ್‌ಷನ್ ಎಲ್ಲವೂ ಇದೆ. ಅವರಿಗೆ ಏನೂ ತೊಂದರೆ ಇಲ್ಲ. ಮನುಷ್ಯ ಅಂದ ಮೇಲೆ ಪ್ರತಿಯೊಬ್ಬನಿಗೂ ಜಾಬ್ ಸ್ಯಾಟಿಸ್‌ಫ್ಯಾಕ್ಷನ್ ಬೇಕು.

೫-೦೦ ಪಿ.ಎಂ.

ಅವನು ಏನಾದರೂ ಮಾಡಿದರೆ ಅವನಿಗೆ ತೃಪ್ತಿ ಬೇಕು. ಆ ತೃಪ್ತಿಗೆ ಬೇಕಾಗುವ ವ್ಯವಸ್ಥೆ ಇಲ್ಲ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ಪೋಲೀಸ್ ಆಡಳಿತ ನಿರ್ವಹಣೆ ಮಾಡತಕ್ಕ ಅಧಿಕಾರಿಗಳ ಜಾಗ ದಲ್ಲಿ ಕೆಲವರನ್ನು ಹಾಕಬೇಕಾದರೆ ಅವರಲ್ಲಿ ಸ್ವಲ್ಪ ನಾಯಕತ್ವದ ಶಕ್ತಿ ಇರಬೇಕು. ತೀರಾ ಮುಕ್ಕೀಕಾ ಮಂಕ್ಕಿ ಇರುವ ಮಕ್ಕಳನ್ನು ತಂದು ಹಾಕಿಬಿಟ್ಟರೆ, ಆ ಜಿಲ್ಲೆ ಹಾಳಾಗಿಹೋಗುತ್ತದೆ. ಆದುದರಿಂದ ಆಡಳಿತದಲ್ಲಿ ಸೂಕ್ಷ್ಮತೆಯನ್ನು ತರುವುದು ಒಂದು ವಿಚಾರ. ಇವತ್ತು ರೂಲ್ಸ್, ಫೈಲ್ಸ್ ಎಂದು ಮೇಲೆ ಕೆಳಗೆ ತಡಕಾಡುವ ವ್ಯವಸ್ಥೆ ಬದಲಾವಣೆ ಮಾಡಿ ಮನುಷ್ಯನಿಗೆ ನಿರ್ದಿಷ್ಟ ಜವಾಬ್ದಾರಿ ಕೊಡ ಬೇಕು. ಪ್ರತಿಯೊಬ್ಬ ಅಧಿಕಾರಿಗೂ ಇಂತಿಷ್ಟು ಕೆಲಸ ಮಾಡಲೇಬೇಕೆಂದು ಜವಾಬ್ದಾರಿ ಕೊಡಿ. ಅವನು ಆ ಕೆಲಸ ಮಾಡಿದಾಗ ಆ ಕೆಲಸ ಸ್ವಲ್ಪ ತಪ್ಪಿರಲಿ ಒಪ್ಪಿರಲಿ ಅವನ ಉದ್ದೇಶವನ್ನು ನೋಡಬೇಕು. ಇವತ್ತು ಫೈಲ್ಸ್ ಎಲ್ಲಾ ಸರಿಯಾಗಿಟ್ಟು ಬೇಕಾದಷ್ಟು ದರೋಡೆ ಮಾಡಿದರೂ ಆತನನ್ನು ಏನೂ

ಮಾಡುವುದಕ್ಕಾಗುವುದಿಲ್ಲ. ಯಾರೋ ಒಬ್ಬ ಫೈಲ್ ಬಗ್ಗೆ ತಲೆ ಕೆಡಿಸಿಕೊಳ್ಳದೇ ಪಾಪ ನ್ಯಾಯವಾದ ಕೆಲಸ ಮಾಡಿದರೆ ನಾಳೆ ಆತ ಕಾನೂನು ಕೆಳಗೆ ಸಿಕ್ಕಿಕೊಂಡು ನರಳಾಡತಕ್ಕ ಸ್ಥಿತಿ ಇದೆ. ಇವತ್ತು ಆಡಳಿತದಲ್ಲಿ ಯಾವುದೂ ಬದಲಾವಣೆ ಕಂಡಿಲ್ಲ. ಜನರ ಕಷ್ಟಗಳಿಗೆ ಸ್ಪಂದಿಸತಕ್ಕ ಆಡಳಿತ ತರುತ್ತೇವೆಂದು ಮುಖ್ಯಮಂತ್ರಿಗಳು ಹಾಗೂ ಆ ಪಕ್ಷದ ಸದಸ್ಯರು ಹೇಳಿದರು. ಇವೊತ್ತು ಜನರ ಕಷ್ಟಗಳಿಗೆ ಸ್ಪಂದಿಸತಕ್ಕ ಆಡಳಿತ ಬಂದಿಲ್ಲ. ಇತ್ತೀಚೆಗೆ ಏನು ಬರುತ್ತಿದೆ ಎಂದರೆ, ಜನತಾ ಪಕ್ಷದ ಮುಖಂಡರಿಗೆ ಸ್ಪಂದಿಸತಕ್ಕ ಆಡಳಿತ ವ್ಯವಸ್ಥೆ ಬರುತ್ತಾ ಇದೆ. ಅವರು ಹೇಳಿದಹಾಗೆ ಕೇಳಿಕೊಂಡು ಏನು ಬೇಕೋ ಅದನ್ನು ಮಾಡುವುದು, ಅದು ತಪ್ಪಿರಲಿ ಸರಿಯಿರಲಿ ಇಂತಹ ಒಂದು ರೀತಿ ಅವರಿಗೆ ಸ್ಪಂದಿಸತಕ್ಕ ಆಡಳಿತ ಬರುತ್ತಾ ಇದೆ. ನಾವು ಇದರ ಬಗ್ಗೆ ಇವತ್ತು ಒಟ್ಟಾಗಿ ಕುಳಿತೇ ಆಗಲಿಲ್ಲ. ಆಡಳಿತ ಇದೇ ರೀತಿ ಮುಂದುವರಿಯುತ್ತಾ ಹೋದರೆ ಇನ್ನು ೧೦ ವರ್ಷಗಳಲ್ಲಿ ನಾವು ತುಂಬಾ ಅಧ್ವಾನ ಪರಿಸ್ಥಿತಿಯನ್ನು ತಲುಪುವುದರಿಂದ ಇದರ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಆಡಳಿತದಲ್ಲಿ ಬದಲಾವಣೆ ಮಾಡಬೇಕಾದರೆ ಅದರ ಸ್ವರೂಪವನ್ನು ಅದರ ಅಂತರ್ಗತವಾದ ಚೈತನ್ಯವನ್ನು ಬದಲಾವಣೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗಿದೆ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಜಿ. ನಂಜಯ್ಯನಮಠ್ (ಗುಳೇದಗಂಡ್ಡ).—ಮಾನ್ಯ ಅಧ್ಯಕ್ಷರೇ, ಇವತ್ತು ವಾರ್ತಾ ಪ್ರಚಾರ, ಸಾಮಾನ್ಯ ಆಡಳಿತ, ಸಾರಿಗೆ ಹಾಗೂ ಇತರ ಇಲಾಖೆಗಳ ವಿಷಯದ ಮೇಲೆ ವಿರೋಧಪಕ್ಷದ ನಾಯಕರು ಹಾಗೂ ಇನ್ನಿತರ ಹಿರಿಯ ಕಿರಿಯ ಸದಸ್ಯರು ಬಹಳ ವಿಷಯಗಳನ್ನು ತಮ್ಮ ಮುಖಾಂತರವಾಗಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಇಲಾಖೆಗಳಲ್ಲಿ ಇವತ್ತು ಸಾರಿಗೆ ಇರಲಿ, ಪ್ರವಾಸೋದ್ಯಮ ಮತ್ತು ಯುವಜನ ಇಲಾಖೆ ಇರಲಿ. ಸಾಮಾನ್ಯ ಆಡಳಿತ ಇಲಾಖೆ ಇರಲಿ, ಇವುಗಳಲ್ಲಿ ಕೆಲವೊಂದು ಅಂಶಗಳನ್ನು ಅಷ್ಟೇ ಮೆಚ್ಚಿಕೊಂಡು ಬಹಳ ಅಂಶಗಳನ್ನು ವಿರೋಧಿಸಿ ವಿಶ್ಲೇಷಣೆ ಮಾಡಲು ನೀವು ನನಗೆ ಸಮಯದ ಚೌಕಟ್ಟು ಹಾಕಿರುವುದರಿಂದ ನೇರವಾಗಿ ವಿಷಯಕ್ಕೆ ಬರುತ್ತೇನೆ. ಮಾನ್ಯ ಅಧ್ಯಕ್ಷರೇ, ಸಾಮಾನ್ಯ ಆಡಳಿತ ವಿಷಯವಾಗಿ ಇವತ್ತು ತಮ್ಮ ಮುಖಾಂತರವಾಗಿ ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರಲಿಚ್ಛಿಸುತ್ತೇನೆ. ಅದು ಏನೆಂದರೆ, ಈ ಸರ್ಕಾರಿ ಅಧಿಕಾರಿಗಳ ವರ್ಗಾವರ್ಗಿ ವಿಷಯ. ಇದಕ್ಕೆ ಸರ್ಕಾರ ಸ್ಪಷ್ಟವಾದ ಒಂದು ರೂಪುರೇಷೆಯನ್ನು ಹಾಕಿಕೊಂಡರೆ ಬಹಳ ಒಳ್ಳೆಯದಾಗುತ್ತದೆ ಎಂಬುದು ಆಡಳಿತ ದೃಷ್ಟಿಯಿಂದ ಒಂದು ಅಭಿಪ್ರಾಯ ನನ್ನದು. ಅದೇ ರೀತಿ ಈ ವರ್ಗಾವರ್ಗಿಗಾಗಿ ಇವತ್ತು ಹಲವಾರು ಶಾಸಕರ, ರಾಜಕಾರಣಿಗಳ ಕಾಲವ್ಯಯ ಆಗುತ್ತಾ ಇದೆ. ಏಕೆಂದರೆ, ಸರ್ಕಾರದಲ್ಲಿ ಇದಕ್ಕೆ ಒಂದು ನೀತಿ ಇಲ್ಲದೇ ಇರುವುದರಿಂದ ಹೀಗಾಗುತ್ತದೆಂದು ನನ್ನ ಅಭಿಪ್ರಾಯ. ಮಾರ್ಚಿ, ಏಪ್ರಿಲ್. ಮೇ ತಿಂಗಳುಗಳಲ್ಲಿ ಶಾಸಕರಿಗೆ ಬೇರೆ ಕೆಲಸವನ್ನು ಮಾಡುವುದಕ್ಕೆ ಜನರು ಬಿಡುವುದಿಲ್ಲವೆನ್ನುವುದನ್ನು ಹೇಳಬೇಕಾಗಿದೆ. ಏಕೆಂದರೆ, ಇದಕ್ಕೆ ನಿರ್ಧಿಷ್ಟಪಡಿಸಿದ ರೂಪರೇಷೆ ಸರ್ಕಾರದಲ್ಲಿ ಇಲ್ಲದೇ ಇರುವುದರಿಂದ ನಮ್ಮನ್ನು ಈ ಸ್ಥಿತಿಗೆ ತಂದಿರತಕ್ಕ ಹಲವಾರು ಮುಖಂಡರುಗಳ ಮಾತನ್ನು ಹೇಳುವುದಕ್ಕಾಗಿ ರಾಜಕೀಯ ಭವಿಷ್ಯದ ವಿಷಯದಿಂದಾಗಲೀ ನಾವು ಈ ವಿಷಯಕ್ಕೆ ಕಲಿಭಾಗಬೇಕಾಗುತ್ತದೆ. ಇವತ್ತು ಆ ಕಡೆಯ ಶಾಸಕರಿಗೂ ಪರಿಸ್ಥಿತಿ ಹಾಗೆ ಇರಬಹುದು. ಈ ಕಡೆಯ ಶಾಸಕರಿಗೂ ಪರಿಸ್ಥಿತಿ ಹಾಗೆ ಇರಬಹುದು. ಏನಾಗುತ್ತದೆ ಎಂದರೆ ಇವತ್ತು ಒಂದು ಗ್ರಾಮದ ಪ್ರತಿಷ್ಠಿತರು ಮುಖಂಡರು ಅವನ ಸಂಬಂಧಿಕ ಅಥವಾ ಅವನಿಗೆ ಬೇಕಾದವರಿಗೆ ಅವನನ್ನು ಅಲ್ಲಿಗೆ ತರಬೇಕು, ಇವನನ್ನು ಇಲ್ಲಿಗೆ ತರಬೇಕೆಂದು ಅದಕ್ಕೆ ನಿಮ್ಮ ಶಿಫಾರಸು ಬೇಕೆಂದು ಕೇಳುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ವರ್ಗಾವರ್ಗಿ ನೀತಿಯಲ್ಲಿ ಭಾಗವಹಿಸುವುದಿಲ್ಲವೆಂದು ತಾವು ಹೇಳಬಹುದು. ಆದರೆ ಇದು ಅನಿವಾರ್ಯವಾಗಿರತಕ್ಕ ಪ್ರಸಂಗ. ಇದಕ್ಕೆ ಸ್ಪಷ್ಟವಾದ ರೂಪುರೇಷೆ, ನೀತಿಯನ್ನು ಸರ್ಕಾರದಲ್ಲಿ ಹಾಕಿಕೊಂಡರೂ ಪರಿಸ್ಥಿತಿ ಹಾಗೆ ಉದ್ಭವವಾಗುವುದಿಲ್ಲ. ಇವತ್ತು ಈ ಒಂದು ತಾಪತ್ರೈಯ ಎಲ್ಲರಿಗೂ ಇದ್ದೇ ಇದೆ. ಬಿಜಾಪುರದಿಂದ ಕೋಲಾರಕ್ಕೆ ಬರಬಹುದು. ಕೋಲಾರದಿಂದ ಗುಲ್ಬರ್ಗಕ್ಕೆ ಹೋಗಬಹುದು, ಗುಲ್ಬರ್ಗದಿಂದ ರಾಯಚೂರಿಗೆ, ರಾಯಚೂರಿನಿಂದ ಚಿಕ್ಕಮಗಳೂರು, ಚಿತ್ರದುರ್ಗ. ಕಾರವಾರ ಹೀಗೆ ಈ ತಾಪತ್ರೈಯನ್ನು ಮೊದಲು ಮಾಡಿಕೊಂಡು ಅವನನ್ನು ಇಲ್ಲಿಗೆ ತರಲೇಬೇಕು ಇವನನ್ನು ಅಲ್ಲಿಗೆ ಹಾಕಲೇಬೇಕು ಎನ್ನುವ ಕೆಲಸವನ್ನು ಹಚ್ಚುತ್ತಾರೆ. ಇದರಲ್ಲಿ ತಾವು ಕೂಡ ಸಾಕಷ್ಟು ಅನುಭವವಿರತಕ್ಕ ರಾಜಕಾರಣಿಗಳು. ಈ ಸಣ್ಣ ಕೆಲಸವನ್ನು ರಾಜಕೀಯ ನೀತಿಯಿಂದ ಅದನ್ನು ದೂರ ಮಾಡಿದರೆ, ವರ್ಗಾವರ್ಗಿಯಲ್ಲಿ

ನಾನು ಭಾಗವಹಿಸುವುದಿಲ್ಲವೆಂದೂ ಯಾವ ಮಂತ್ರಿಗಳ ಹತ್ತಿರ ನಾನು ಹೋಗುವುದಿಲ್ಲವೆಂದೂ ಆ ಒಂದು ನೀತಿಯನ್ನು ಹಾಕಿಕೊಂಡಿದ್ದೇನೆಂದು ಜನರಿಗೆ ಹೇಳಿದರೆ ಅವರು ಅವರ ಹಕ್ಕನ್ನು ಚಲಾಯಿಸುತ್ತಾರೆ. ಹಾಗಾದರೆ ನಮ್ಮ ಊರಿಗೆ ಬಾ ಎಂದು ಅನ್ನಿಸಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ. ನಾವು ಆ ಊರಿಗೆ ಕೆರೆ, ರಸ್ತೆ, ಕುಡಿಯುವ ನೀರು, ಬಸ್ಸು ಈ ಎಲ್ಲಾ ಸೌಕರ್ಯಗಳನ್ನು ಮಾಡಿಸಿದ್ದರೂ ಸಹಿತ ರಾಜಕೀಯ ಇದೆಯಲ್ಲ, ಆ ವ್ಯಕ್ತಿ ಹೇಳಿರತಕ್ಕ ಆತನ ಅಳಿಯನಾಗಲೀ ಅಥವಾ ಸಂಬಂಧಿಕನಾಗಲೀ ಅವರನ್ನು ಅವರು ಹೇಳಿದ ಜಾಗಕ್ಕೆ ವರ್ಗಾವಣೆ ಮಾಡಿಸದಿದ್ದರೆ ನಾವು ಮಾಡಿದ ಕೆಲಸವೆಲ್ಲ ಜಿರೋ ಆಗುತ್ತದೆ. ನಮ್ಮ ಅಳಿಯನನ್ನು ವರ್ಗ ಮಾಡಿಸದೆ ಇರುವುದರಿಂದ ನಿಮಗೆ ಏತಕ್ಕೆ ನಾವು ಬೆಂಬಲ ಕೊಡಬೇಕೆಂದು ಹೇಳುತ್ತಾರೆ. ಇದಕ್ಕಾಗಿ ಮಂತ್ರಿಗಳು ಶಾಸಕರು ಹೆಚ್ಚಿನ ಸಮಯವನ್ನು ವ್ಯಯ ಮಾಡಬೇಕಾಗಿದೆ. ವರ್ಗಾವರ್ಗಿಗಾಗಿ ಶಿಫಾರಸು ಮಾಡಿ ಅವನನ್ನು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ವರ್ಗ ಮಾಡಿಸಲಿಕ್ಕೆ ಬೇಕಾಗುತ್ತದೆ. ಇವತ್ತು ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಡಬೇಕಾಗುತ್ತದೆ ಅದೇನೆಂದರೆ, ನಾಲ್ಕನೇದರ್ಜೆ ನೌಕರ, ಎರಡನೇ ದರ್ಜೆ ಗುಮಾಸ್ತ, ಮೊದಲನೇ ದರ್ಜೆ ಗುಮಾಸ್ತ, ಜೂನಿಯರ್ ಇಂಜಿನಿಯರ್, ಪ್ರಾಥಮಿಕ ಶಾಲಾಶಿಕ್ಷಕ ಇನ್ನಿತರ ಈ ಕೇಡರ್‌ನಲ್ಲಿ ಬರತಕ್ಕ ನೌಕರರು ಯಾರಿದ್ದಾರೆ ಅವರನ್ನು ಜಿಲ್ಲೆ ಬಿಟ್ಟು ಮತ್ತೊಂದು ಜಿಲ್ಲೆಗೆ ವರ್ಗ ಮಾಡಬಾರದೆಂದು ನನ್ನ ಸಲಹೆ. ಸಣ್ಣ ಸಣ್ಣ ಪಗಾರದ ಜನ ಬದುಕಿಕೊಳ್ಳುವುದು ಕಷ್ಟ. ಇವತ್ತು ಬಿಜಾಪುರದಿಂದ ಕೋಲಾರಕ್ಕೆ ಕೋಲಾರದಿಂದ ಬಿಜಾಪುರಕ್ಕೆ ಮುಟ್ಟುವುದರಲ್ಲಿ ಒಂದು ತಿಂಗಳ ಸಂಬಳ ಮುಗಿದು ಹೋಗುತ್ತದೆ. ಸಣ್ಣ ನೌಕರರು ಅವರು ಯಾವ ಜಿಲ್ಲೆಯಲ್ಲಿದ್ದಾರೆ ಅದೇ ಜಿಲ್ಲೆಯಲ್ಲಿ ಅವರನ್ನು ಇಟ್ಟುಕೊಳ್ಳಬೇಕು. ತಾಲ್ಲೂಕಿನಿಂದ ತಾಲ್ಲೂಕಿಗೆ ವರ್ಗ ಮಾಡಿದರೆ ಸಾಕು. ಪೋಲೀಸ್ ಕಾನ್‌ಸ್ಟೇಬಲ್ ಹಿಡಿದುಕೊಂಡು ಆ ತರಹ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ತಾವು ನಿರ್ದಿಷ್ಟಪಡಿಸಿರತಕ್ಕ ನೀತಿಯನ್ನು ಇದರಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಕೇಡರ್‌ಗಳಲ್ಲಿರತಕ್ಕ ನೌಕರರ ಯಾರಿದ್ದಾರೆ ಅಂತಹವರನ್ನು ಶಾಸಕರಿಂದ ದೂರು ಬಾರದ ಹೊರತು ಸಾರ್ವಜನಿಕರಿಂದ ದೂರು ಬಾರದ ಹೊರತು ನಾಲ್ಕು ವರ್ಷಗಳ ಕಾಲ ಆ ಜಾಗದಿಂದ ಕಿತ್ತುಹಾಕಬಾರದು ಎನ್ನುವುದು ನನ್ನ ಸಲಹೆ. ನಾಲ್ಕು ವರ್ಷಗಳ ವರೆಗೆ ಅವನನ್ನು ಮುಟ್ಟಲೇಬಾರದು, ಒಂದು ವೇಳೆ ಏನಾದರೂ ಆಪಾದನೆಗಳು ಇದ್ದರೆ, ಸಾರ್ವಜನಿಕರಿಂದ, ಶಾಸಕರಿಂದ ಜನರ ಮುಖಂಡರಿಂದ ಆಪಾದನೆಗಳು ಬಂದರೆ ೧೫ ದಿವಸಗಳಲ್ಲಿ ಅವನ್ನು ವಿಚಾರಣೆ ಮಾಡಿ ಅದಕ್ಕೆ ಯೋಗ್ಯವಾದ ಕ್ರಮವನ್ನು ಕೈಗೊಳ್ಳಬೇಕು. ಇವತ್ತು ಎಷ್ಟೋ ಆಪಾದನೆಗಳನ್ನು ಶಾಸಕರು ಮಂತ್ರಿಗಳಿಗೆ ತಿಳಿಸಿದ್ದರೂ ಕೂಡ ಒಂದು ವರ್ಷದಿಂದ ವಿಚಾರಣೆಯಾಗದೆ ಅವು ನೆನೆಗುದಿಯಲ್ಲಿ ಬಿದ್ದಿರತಕ್ಕ ವಿಷಯಗಳು ಇವೆ. ನಾಲ್ಕು ವರ್ಷಗಳ ಕಾಲ ನಾನು ಹೇಳಿದಂತಹ ಕೇಡರ್‌ಗಳಲ್ಲಿ ಬರತಕ್ಕ ನೌಕರ ಶಾಹಿಗಳನ್ನು ವರ್ಗ ಮಾಡುವುದಿಲ್ಲವೆನ್ನುವ ಸ್ಪಷ್ಟವಾದ ನೀತಿಯನ್ನು ಸರ್ಕಾರ ಅನುಸರಿಸಬೇಕು. ನಾನು ಶಾಸಕರ ಹಕ್ಕನ್ನು ಮೊಟಕು ಮಾಡಬೇಕೆನ್ನುವ ದೃಷ್ಟಿಯಿಂದ ಇದನ್ನು ಹೇಳುತ್ತಿಲ್ಲ. ಸರ್ಕಾರ ಒಂದು ನೀತಿಯನ್ನು ಮಾಡಿದ ಮೇಲೆ ಯಾವುದೇ ಶಾಸಕರ ಶಿಫಾರಸ್ಸು ಪತ್ರವನ್ನು ನೌಕರರು ತಂದರೆ ಅಂತಹ ಸರ್ಕಾರಿ ನೌಕರರನ್ನು ಡಿಸ್‌ಮಿಸ್ ಮಾಡಿದರೂ ತಪ್ಪಿಲ್ಲವೆಂದು ನನ್ನ ಅಭಿಪ್ರಾಯ. ನಮಗೆ ಇದೆ ಒಂದು ಬಿಸಿನೆಸ್‌ಯಾಗುತ್ತದೆ. ಅಲ್ಲಿಗೆ ವರ್ಗ ಮಾಡಬೇಕು ಇಲ್ಲಿಗೆ ಮಾಡಿಸಬೇಕೆಂದು ರಾಜಕೀಯ ಒತ್ತಡ ಬರುತ್ತದೆ. ನಮ್ಮನ್ನು ಇಲ್ಲಿಗೆ ಕಳುಹಿಸಿಕೊಟ್ಟಿರುವವರ ಕೈಯಲ್ಲಿ ಸಿಕ್ಕಿಹಾಕಿಕೊಂಡು, ನಾಳೆ ನಮ್ಮ ರಾಜಕೀಯ ಭವಿಷ್ಯ ಏನಾಗುತ್ತದೆಯೋ ಎಂದು ನಾವು ಯೋಚನೆ ಮಾಡುತ್ತಿರುತ್ತೇವೆ. ನಾವು ಯೋಚನೆ ಮಾಡುತ್ತೇವೆ ಅವರು ಯೋಚನೆ ಮಾಡುತ್ತಾರೆ, ಈ ದೃಷ್ಟಿಯಿಂದ ಬಿದೆ ಮಾರುವತ್ತುಗಳಿಗೆ ಒಳಗಾಗಿ ಪ್ರಿಮೆಚ್ಯೂರ್ ಟ್ರಾನ್ಸ್‌ಫರ್‌ಗಾಗಿ ಮುಖ್ಯಮಂತ್ರಿಗಳ ಹತ್ತಿರ ಬರುತ್ತಿರುತ್ತೇವೆ. ಬೇರೆ ರೀತಿಯ ವರ್ಗಾವರ್ಗಿಗಾಗಿ ಮಂತ್ರಿಗಳ ಕಡೆ ಅಡ್ಡಾಡುವ ಪರಿಸ್ಥಿತಿ ಬರುತ್ತದೆ.

ಆದ್ದರಿಂದ ಈ ಕೇಡರ್‌ನಲ್ಲಿ ಬರತಕ್ಕಂಥ ಅಧಿಕಾರಿ ವರ್ಗಗಳನ್ನು ಅದೇ ಜಿಲ್ಲೆಯಲ್ಲಿಟ್ಟು, ಆ ಜಿಲ್ಲೆಯ ಸಂಖ್ಯೆಗಿಂತ ಜಾಸ್ತಿಯಾದರೆ ಪಕ್ಕದ ಜಿಲ್ಲೆಗೆ ಹಾಕಿ. ಅಗ್ರಿಕಲ್ಚರಲ್ ಆಫೀಸರ್, ಬಿ.ಡಿ.ಒ., ತಹಸೀಲ್ದಾರರು, ಸಬ್-ಇನ್‌ಸ್ಪೆಕ್ಟರ್, ಮೆಡಿಕಲ್ ಆಫೀಸರ್, ಕಾಲೇಜು ಪ್ರೊಫೆಸರ್‌ಗಳು ಹೀಗೆ ಈ ಕೇಡರ್‌ನಲ್ಲಿ ಬರತಕ್ಕಂಥ ಅಧಿಕಾರಿಗಳನ್ನು ನಾಲ್ಕಾಲ್ಕು ಜಿಲ್ಲೆಗಳಿಗೆ ಸೇರಿಸಿ ಒಂದೊಂದು ಡಿವಿಜನ್ ಮಟ್ಟದಲ್ಲಿ ಮಾಡಿ, ಅಲ್ಲಿಗಷ್ಟೇ ಅವರನ್ನು ವರ್ಗಾಯಿಸುವಂಥ ಕ್ರಮ ಕೈಗೊಂಡರೆ ಬಹುಶಃ ಅವರಿಗೆ ನೆಮ್ಮದಿಯಾಗಿ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ. ಇದರ ಜೊತೆಗೆ ಇವತ್ತು ಅನಾವಶ್ಯಕವಾಗಿ

ನಮಗೂ ಕೂಡ ಈ ವಿಷಯದಲ್ಲಿ ಭಾಗವಹಿಸುವುದು ತಪ್ಪುತ್ತದೆ. ಅದೇ ಸಮಯದಲ್ಲಿ ಬೇರೆ ಬೇರೆ ಕೆಲಸಗಳಿಗೆ ನಾವು ಸಾರ್ವಜನಿಕರ ಹತ್ತಿರ, ಸರ್ಕಾರದ ಹತ್ತಿರ ಸಾರ್ವಜನಿಕ ಕೆಲಸಕ್ಕಾಗಿ ನಮ್ಮ ಲೆಟರ್‌ಹೆಡ್‌ನ್ನು ಬಳಸತಕ್ಕಂಥ ಪರಿಸ್ಥಿತಿ ಬರಬಹುದು ಎಂಬ ದೃಷ್ಟಿಯಿಂದ ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ. ವರ್ಗಾವರ್ಗಿ ವಿಷಯದಲ್ಲಿ ಸ್ಪಷ್ಟವಾಗಿರತಕ್ಕಂಥ ಒಂದು ನೀತಿಯನ್ನು ಹಾಕಿಕೊಂಡರೆ ಆಡಳಿತ ಸುಗಮವಾಗಿ ಸಾಗಲು ಸಾಧ್ಯವಾಗುತ್ತದೆ ಎನ್ನತಕ್ಕದ್ದು ನನ್ನ ಒಂದು ಪ್ರಾಮಾಣಿಕವಾದ ಅಭಿಪ್ರಾಯ. ಇದರ ಜೊತೆಗೆ ಇವತ್ತು ಎಷ್ಟೋ ಸಾವಿರ ಹುದ್ದೆಗಳು ಸರ್ಕಾರದಲ್ಲಿ ಖಾಲಿ ಇವೆ. ಸ್ಟೈಪೆಂಡರಿಯವರ ಸಮಸ್ಯೆ ಬಹಳ ದಿನಗಳಿಂದ ಇದೆ. ಏಳೆಂಟು ಸಾವಿರ ಸ್ಟೈಪೆಂಡರಿಗಳು ಇದ್ದಾರೆ. ೬೦ ಸಾವಿರ ಹುದ್ದೆಗಳು ಖಾಲಿ ಇವೆ. ೫೦ ಪರ್ಸೆಂಟ್ ಪ್ರಕಾರ ಅವರನ್ನು ಭರ್ತಿಮಾಡಿದರೂ ಸಾಕು. ಅವರ ಸಮಸ್ಯೆ ಬಗೆಹರಿಯುತ್ತದೆ ಮತ್ತು ಅವರಿಗೊಂದು ದಾರಿ ಮಾಡಿದ ಹಾಗೆ ಆಗುತ್ತದೆ ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇನ್ನು ಗೃಹಖಾತೆಯ ಬಗ್ಗೆ ಹೇಳಬೇಕೆಂದರೆ ಅದು ಬಹಳ ಸಡಿಲವಾಗಿದೆ. ಇವತ್ತು ಗೃಹ ಇಲಾಖೆ ಕುಸಿದು ಹೋಗಿದೆ. ಸರ್ವೆ ಸಾಧಾರಣವಾಗಿ ಮನೆಯ ಯಜಮಾನನ ಮಾತನ್ನು ಮನೆಯಲ್ಲಿ ಮಕ್ಕಳು ಕೇಳುವುದಿಲ್ಲ. ಊರಿನ ಹಿರಿಯನ ಮಾತನ್ನು ಊರಿನವರು ಕೇಳುವುದಿಲ್ಲ. ಅಧಿಕಾರ ಸ್ಥಾನದಲ್ಲಿರುವವರು ಸ್ವಲ್ಪ ದರ್ಪದಿಂದ ಇದ್ದರೆ ಮಾತ್ರ ಕೈಕೆಳಗಿನ ಅಧಿಕಾರಿಗಳು ಅವರ ಮಾತನ್ನು ಕೇಳುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ರಾಚಯ್ಯನವರ ಬಗ್ಗೆ ಎಲ್ಲರಿಗೂ, ಗೌರವ ಇದ್ದ ಹಾಗೆ ನನಗೂ ಕೂಡ ಇದೆ. ಆದರೆ ಅವರಿಗೆ ಇಂತಹಕ್ಕಂಥ ಸಂಭಾವಿತನ ಗೃಹ ಇಲಾಖೆಯಲ್ಲಿ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಅವರಿಗೆ ಸಮಾಜ ಕಲ್ಯಾಣ ಇಲಾಖೆ ಅಥವಾ ಖಾತೆ ರಹಿತ ಸಚಿವರನ್ನಾಗಿ ಮಾಡಿದರೆ ಸೂಕ್ತ ಅನ್ನಿಸುತ್ತದೆ. ಗೃಹ ಖಾತೆಗೆ ಸ್ವಲ್ಪ ಗಟ್ಟಿತನದ ಮನುಷ್ಯನನ್ನು, ಹಿರಿಯರಾದ ದೇವೇಗೌಡರನ್ನು ನೇಮಿಸಿದರೆ ಬಹಳ ಒಳ್ಳೆಯದಾಗುತ್ತದೆ ಎಂದು ನನ್ನ ಸಲಹೆ. ಅದು ಊರಿಗೇ ಬಿಟ್ಟ ವಿಷಯ. ಜಮಾತು ಬೇರೆ, ಇದು ನನ್ನ ಅನಿಸಿಕೆ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

ಶ್ರೀ ಎಸ್. ಜಿ. ಸಂಜಯ್ಯನವರ್.—ಇನ್ನು ಪೋಲೀಸ್ ಪೇದೆ ವಿಷಯ ಹೇಳಬೇಕೆಂದರೆ, ಇವತ್ತು ಬಹಳ ಒರಟಾಗಿ ಆತನನ್ನು ಕಾಣುವಂಥ ಪರಿಸ್ಥಿತಿ ನಮ್ಮ ಆಡಳಿತದಲ್ಲಿ ಇದೆ. ಬಹುಶಃ ಪೋಲೀಸ್ ಪೇದೆಯ ಪರಿಸ್ಥಿತಿಯನ್ನು ನೋಡಿದರೆ ಏಳು ಜನ್ಮದಲ್ಲಿ ಪಾಪ ಮಾಡಿದವನು ಪೋಲೀಸ್‌ನಾಗುತ್ತಾನೆ ಎಂದು ನೋಡುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು, ಯಾರಾದರೂ ಮಂತ್ರಿಗಳು ಬಂದರೆ, ಅವರು ಬರುವವರೆಗೆ ಆರೇಳು ತಾಸು ಕಾಲ ನಿಂತಲ್ಲೇ ನಿಂತು ಟೊಂಕ ನೋಯಿಸಿಕೊಂಡು ಆತ ಕಷ್ಟಪಡಬೇಕಾಗುತ್ತದೆ. ಈ ಇಲಾಖೆಯಲ್ಲಿ ಆತನಿಗೆ ಯಾವ ಸವಲತ್ತುಗಳೂ ಇಲ್ಲ. ೨೪ ಗಂಟೆಗಳ ಕಾಲ ದುಡಿಸಿಕೊಂಡರೂ ಕೂಡ ಆತನಿಗೆ ಓ.ಟಿ. ಎಂದು ೬ ರೂಪಾಯಿ ಕೊಡುವ ರೀತಿಯನ್ನು ನೋಡಿದರೆ ಮಾನವೀಯತೆ ರಹಿತವಾದ ದೃಷ್ಟಿಯಿಂದ ಸರ್ಕಾರ ಇವರನ್ನು ನೋಡುತ್ತಿದೆ ಎಂದು ಹೇಳಬೇಕಾಗುತ್ತದೆ. ಎಲ್ಲಿಯಾದರೂ ಆತ ಸ್ವಲ್ಪ ಕುಳಿತುಕೊಂಡರೆ ಸಾಕು, ಜೀಪನ್ನು ಕಂಡರೆ ಮತ್ತೆ ಆತ ಎದ್ದು ನಿಂತು ಸೆಲ್ಯೂಟ್ ಹೊಡೆಯತಕ್ಕಂಥ ಸ್ಥಿತಿ ಇದೆ. ಬೇರೆಯವರು ೮ ಗಂಟೆ ಕೆಲಸ ಮಾಡಿದರೆ ಆತ ೨೪ ಗಂಟೆಯೂ ಕೆಲಸ ಮಾಡಬೇಕಾದಂಥ ಪರಿಸ್ಥಿತಿ ಇದೆ. ಹೆಚ್ಚಿನ ಸಮಯಕ್ಕೆ ಹೆಚ್ಚಿನ ಸಂಬಳವನ್ನು ಕೊಡುವಂಥ ನೀತಿ ಸರ್ಕಾರಕ್ಕೆ ಇಲ್ಲ. ನಾನು ಶ್ರೀ ರಾಚಯ್ಯನವರನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಮಾನವೀಯ ಅನುಕಂಪದ ಆಧಾರದಮೇಲೆ ಅವರಿಗೆ ಹೆಚ್ಚಿನ ಸಂಬಳವನ್ನು, ಬಟ್ಟೆ ಕೊಡುವುದು, ಓವರ್‌ಟೈಮ್ ಭತ್ಯವನ್ನು ಕೊಡುವುದನ್ನು ಮಾಡಬೇಕು.

ಇನ್ನು ಸಾರಿಗೆ ಒಂದೆರಡು ಮಾತುಗಳನ್ನು ಹೇಳಿ ತಾವು ಕೊಟ್ಟ ಅವಧಿಯಲ್ಲೇ ನನ್ನ ಮಾತನ್ನು ಮುಗಿಸುತ್ತೇನೆ. ಶ್ರೀಮಾನ್ ಮಲ್ಲಪ್ಪನವರು ಒಂದು ಮಾತನ್ನು ಹೇಳಿದರು ಬಸ್ಸುಗಳ ಬ್ರೇಕ್ ಸರಿಯಾಗಿ ಇಟ್ಟುಕೊಳ್ಳಿ, ಲೈಟ್ ಸರಿಯಾಗಿ ಇಟ್ಟುಕೊಳ್ಳಿ. ಹಾರ್ನ್ ಸರಿಯಾಗಿ ಇಟ್ಟುಕೊಳ್ಳಿ ಎಂದು. ಇಲ್ಲಿಯವರೆಗೆ ನಾವು ಎಲ್ಲಾ ಸರಿಯಾಗಿದೆ ಎಂದು ಭಾವಿಸಿದ್ದೆವು. ಈಗ ಅವರೇ ಹೀಗೆ ಹೇಳಿದ ಮೇಲೆ ನಾವು ಎಚ್ಚರಿಕೆಯಿಂದ ಬಸ್ಸುಗಳಲ್ಲಿ ಕುಳಿತುಕೊಳ್ಳಬೇಕಾಗಿರುವ ಪರಿಸ್ಥಿತಿ ಬಗ್ಗೆ ಯೋಚನೆ ಮಾಡಬೇಕಾಗಿದೆ.

ಆದರೂ ಬಸ್‌ಗಳನ್ನು ಜಾಸ್ತಿ ಮಾಡಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದು. ಅನಂತರ ಈ ಸ್ಟೇಜ್ ಗೊತ್ತು ಮಾಡುವುದರ ಬಗ್ಗೆ ಅಧಿಕಾರಿಗಳಿಗೆ ಸರಿಯಾದ ಸೂಚನೆ ಕೊಡುವುದು ಅವಶ್ಯಕ. ಏಕೆಂದರೆ ನನ್ನ ಕ್ಷೇತ್ರದಲ್ಲಿಯೇ ಹಳ್ಳೂರು ಎಂಬ ಗ್ರಾಮ ಇದೆ. ಈ ಗ್ರಾಮಕ್ಕೆ ಎರಡು ಹೂರು ಎಂದರೆ ಎರಡು ಫರ್ಲಾಂಗ್ ದೂರದಲ್ಲಿ ಒಂದು ಸ್ಟೇಜ್ ಮಾಡಿದ್ದಾರೆ. ಅಲ್ಲಿ ಇಳಿದರೆ ಒಂದು ರೂಪಾಯಿ, ಅದೇ ಗ್ರಾಮಕ್ಕೆ ಬಂದು ಇಳಿದರೆ ಎರಡು ರೂಪಾಯಿ ಇಟ್ಟಿದ್ದಾರೆ. ಇದರಿಂದ ಹಳ್ಳಿಯ ಬಡ ಜನತೆಗೆ ತೊಂದರೆಯಾಗಿದೆ. ಜನ ಏನು ಮಾಡುತ್ತಾರೆ, ಒಂದು ರೂಪಾಯಿ ಉಳಿಯುತ್ತದೆಂದು, ಒಂದು ರೂಪಾಯಿ ಕೊಟ್ಟು, ಗ್ರಾಮಕ್ಕೆ ಎರಡು ಫರ್ಲಾಂಗ್ ದೂರದ ಸ್ಟೇಜ್‌ನಲ್ಲಿಯೇ ಇಳಿದು ನಡೆದುಕೊಂಡು ಬರುತ್ತಾರೆ. ಏಕೆಂದರೆ ಹಳ್ಳಿಯವರಿಗೆ ಒಂದು ರೂಪಾಯಿ ಉಳಿದರೂ, ಅದು ಯಾವುದಕ್ಕಾದರೂ ಉಪಯೋಗವಾಗುತ್ತದೆ. ಆದ್ದರಿಂದ ಇಂಥ ಸ್ಟೇಜ್‌ಗಳನ್ನು ಮಾರ್ಪಾಡು ಮಾಡಬೇಕೆಂಬ ಸೂಚನೆಯನ್ನು ಸರ್ಕಾರದ ಗಮನಕ್ಕೆ ನಾನು ತರುತ್ತಿದ್ದೇನೆ. ಈ ತರಹ ನನ್ನ ಕ್ಷೇತ್ರದಲ್ಲಿಯೇ ಅಲ್ಲ, ಇಡೀ ರಾಜ್ಯದಲ್ಲಿಯೇ ಇರಬಹುದು. ಈ ರೀತಿ ಅಸಮರ್ಪಕವಾಗಿರತಕ್ಕ ಸ್ಟೇಜ್‌ಗಳನ್ನೂ, ರೂಟ್‌ಗಳನ್ನೂ ಪರಿಶೀಲಿಸಿ, ಸಾರ್ವಜನಿಕ ಯೋಗ್ಯವಾದ ಸ್ಟೇಜ್‌ಗಳನ್ನು ನಿಗದಿ ಮಾಡಿದರೆ, ಸಾರಿಗೆ ಇಲಾಖೆಗೂ ನಷ್ಟವಾಗುವುದಿಲ್ಲವೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಸ್ವಚ್ಛತೆ ವಿಷಯವಾಗಿ ಹೇಳಬೇಕೆಂದರೆ, ಸರ್ಕಾರ ಈ ವಿಚಾರದಲ್ಲಿ, ಗಹನವಾದ ರೀತಿಯಲ್ಲಿ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕು. ಬಸ್ ಸ್ಟ್ಯಾಂಡಿನಲ್ಲಿ ಇರತಕ್ಕ ಶೌಚಾಲಯಗಳನ್ನು ನೋಡಿದರೆ, ಹೇಳುವುದಕ್ಕೆ ಬಾರದೆ ಇರತಕ್ಕ ಸ್ಥಿತಿಯಲ್ಲಿ ಹೊಲಸಾಗಿದೆ. ಶೌಚಾಲಯಕ್ಕೆ ಹೋಗುವಾಗ ನೀರನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕು. ಬಸ್ ಸ್ಟ್ಯಾಂಡಿನಲ್ಲಿರತಕ್ಕ ಶೌಚಾಲಯಗಳಿಗೆ ಹೋದರೆ, ೬ ತಿಂಗಳು ಆಯುಸ್ಸು ಕಡಿಮೆ ಆಗುವ ಸಂಭವ ಇದೆ. ಆದ್ದರಿಂದ ಬಹಳ ಗಂಭೀರವಾದ ರೀತಿಯಲ್ಲಿ ಅಧಿಕಾರಿಗಳ ಮೇಲೆ ಹಿಡಿತ ಇಟ್ಟುಕೊಂಡು ಸಾರ್ವಜನಿಕರಿಗೆ ಈ ಅನುಕೂಲ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಾಟಕ ಅಕಾಡೆಮಿ ಬಗ್ಗೆ ಒಂದು ಮಾತು ಹೇಳುತ್ತೇನೆ. ನಾಟಕ ಆಡಲು ಬಾರದೆ ಇರುವವರಿಗೂ, ವರ್ಷಕ್ಕೊಮ್ಮೆ ಬಣ್ಣ ಹಚ್ಚಿಕೊಳ್ಳುವವರಿಗೂ ಸಹಾಯಧನ ಕೊಟ್ಟಿದ್ದಾರೆ. ರಾಜ್ಯದಲ್ಲಿ ಉತ್ತಮವಾದ ನಾಟಕಕಾರರು ಇದ್ದು, ಸುಮಾರು ೬೦ ರಿಂದ ೧೦೦ ನಾಟಕಗಳನ್ನು ಬರೆದಿದ್ದರೂ ಕೂಡ, ಅವರನ್ನು ಸರ್ಕಾರ ಪರಿಗಣನೆ ಮಾಡಿಲ್ಲ. ಉದಾಹರಣೆಗೆ ಪಿ. ಬಿ. ದುತ್ತರಗಿ ಎಂಬ ನಾಟಕಕಾರರು ಬರೆದ ಎರಡು ನಾಟಕಗಳು ಒಂದು ಸಂಪತ್ತಿಗೆ ಸವಾಲ್ ಮತ್ತೊಂದು ಸೊಸೆತಂದ ಸೌಭಾಗ್ಯ ಸಿನಿಮಾ ಆಗಿವೆ. ಸಿನಿಮಾ ನಿರ್ಮಾಪಕರು ಲಕ್ಷಾಂತರ ರೂಪಾಯಿಗಳು ಸಂಪಾದನೆ ಮಾಡಿದರು. ಅವರಿಗೆ ಇವತ್ತಿನವರೆಗೂ ನಾನು ಬಟ್ಟೆ ಹೊಲಿಸುವುದು ತಪ್ಪಿಲ್ಲ. ಈ ವಿಷಯವನ್ನೂ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಾಗ, ಅವರು ಸಹಾಯಧನವನ್ನು ಕೊಟ್ಟರು. ಅದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇನ್ನೊಬ್ಬ ನಾಟಕಕಾರ ಭಸ್ಮ ಎಂಬುವವರು ಇವರೂ ಕೂಡ ನಾಟಕ ರಂಗಭೂಮಿಯಲ್ಲಿ ಈ ರಾಜ್ಯಕ್ಕೆ ಗಣನೀಯವಾದ ಸೇವೆ ಸಲ್ಲಿಸಿದ್ದಾರೆ. ಇವರೇ ಅಲ್ಲದೆ ಇನ್ನೂ ಎಷ್ಟೋ ನಾಟಕಕಾರರು ಈ ರಾಜ್ಯದಲ್ಲಿ ಇರಬಹುದು. ಇವರುಗಳಿಗೆಲ್ಲಾ ಕೊನೆಯ ಪಕ್ಷ ೫೦೦ ರೂಪಾಯಿಗಳ ಸಹಾಯಧನ ಕೊಟ್ಟರೆ ಒಳ್ಳೆಯದು. ಸುಮ್ಮನೆ ಆಡಾಡ್ಡಿ, ಪ್ರಭಾವದ ಮೇಲೆ ಬರತಕ್ಕವರಿಗೆ ಕೊಡುವುದಕ್ಕಿಂತ, ತಮ್ಮ ಇಡೀ ಜೀವನವನ್ನು ನಾಟಕಕ್ಕಾಗಿ ಸವೆಸಿ, ಬಡತನದಲ್ಲಿದ್ದು, ಕಷ್ಟದಲ್ಲಿರತಕ್ಕ ನಾಟಕಕಾರರಿಗೆ ಅದರಲ್ಲೂ ನಾಟಕ ರಂಗವನ್ನೆ ಆಶ್ರಯಿಸಿ ಕೊಂಡಿರುವವರನ್ನು ಆರಿಸಿ, ಸಹಾಯಧನ ಕೊಟ್ಟು ಅನುಕೂಲ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ಹಾಗೂ ನಾಟಕ ರಂಗ ಬೆಳೆಯುತ್ತದೆ. ಎಂದು ಹೇಳಿ ತಾವು ಕೊಟ್ಟಂಥ ಸಮಯದಲ್ಲಿಯೇ ಮುಗಿಸಿ, ತಮಗೆ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್ (ಭಟ್ಕಳ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹ ಮಂತ್ರಿಗಳು ಮತ್ತು ಸಾರಿಗೆ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ನಾನು ಮೊದಲನೆಯದಾಗಿ, ಗೃಹ ಖಾತೆಯ ಮೇಲೆ ಮಾತನಾಡಲು ಇಚ್ಛೆಪಡುತ್ತೇನೆ. ಈ ಗೃಹ ಖಾತೆಯನ್ನು ಶ್ರೀಮಾನ್ ರಾಚಯ್ಯನವರು ತೆಗೆದುಕೊಂಡರು ಎಂದು ಹೇಳಿದ ಕೂಡಲೇ, ನಾನು ಬಹಳ

ಸಂತೋಷಪಟ್ಟೆ. ಏನೋ ಭಾರಿ ಬದಲಾವಣೆಗಳನ್ನು ಈ ಪೋಲೀಸ್ ಖಾತೆಯ ಮೇಲೆ ತರುತ್ತಾರೆ, ಹೊಸ ಹೊಸ ಪ್ರಯೋಗ ಮಾಡುತ್ತಾರೆ, ಅವರು ಹೀಗೆ ಮಾಡುವುದರಿಂದ ಪೋಲೀಸ್ ಸ್ಟೇಷನ್‌ನಲ್ಲಿ ಪೇರೋಪ್ಲೇನ್ ಮಾಡುವುದನ್ನು ತಪ್ಪಿಸುತ್ತಾರೆ. ಶ್ರೀಮತಿ ಲೀಲಾದೇವಿ ಪ್ರಸಾದ್‌ರವರು ಹೇಳಿದರು ಪೋಲೀಸ್ ಸ್ಟೇಷನ್‌ನಲ್ಲಿ ಚಪಾತಿ ಮಾಡುವುದನ್ನು ತಪ್ಪಿಸುತ್ತಾರೆ ಮತ್ತು ಅಲ್ಲಿನ ಲಾಕಪ್‌ಗಳಲ್ಲಿ ಇದ್ದು ಅವರು ಆಕಸ್ಮಾತ್ತಾಗಿ ಸತ್ತು ಹೋಗುವವರು ಅಥವಾ ಸ್ಟೇಷನ್‌ಗಳಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದು ಘಂಟಾದವನ್ನೆಲ್ಲಾ ತಪ್ಪಿಸುತ್ತಾರೆ, ರಾಜ್ಯದಲ್ಲಿ ಮಹಿಳೆಯರ ಮಾನಭಂಗ ಆಗುವುದು ನಿಂತು ಹೋಗುತ್ತದೆ ಅಷ್ಟೇ ಏಕೆ ರಾಚಯ್ಯನವರು ಬಂದ ಮೇಲೆ ಗೋಲಿಬಾರ್ ಆಗುವುದೇ ಇಲ್ಲ ಎನ್ನುವಂತಹ ಭಾವನೆಯನ್ನು ನಾನು ಇಟ್ಟುಕೊಂಡಿದ್ದೆ. ಆಕಸ್ಮಾತ್ತಾಗಿ ಗೋಲಿಬಾರ್ ಮಾಡುವ ಪ್ರಸಂಗ ಬಂದರೂ ಕೂಡ ರಬ್ಬರ್ ಗುಂಡನ್ನು ಉಪಯೋಗಿಸಿ ಜನರನ್ನು ಖುಷಿ ಪಡಿಸುತ್ತಾರೆಂದು ನಾನು ಅಂದು ಕೊಂಡಿದ್ದೆ. ಈ ಯಾವ ಬದಲಾವಣೆಯನ್ನೂ ಅವರು ಮಾಡಿಲ್ಲ. ಅದರಿಂದ ನನಗಷ್ಟೇ ಅಲ್ಲ ಇಡೀ ಕರ್ನಾಟಕ ರಾಜ್ಯದ ಜನತೆಗೆ ಬಹಳ ನಿರಾಶೆಯಾಗಿದೆ ಎಂದು ನಾನು ಭಾವಿಸುತ್ತೇನೆ. ಅವರು ಬಹಳ ಹಿರಿಯರಾಗಿದ್ದಾರೆ. ಅವರು ಅಧಿಕಾರಕ್ಕೆ ಬಂದ ಮೇಲೆ ಒಳ್ಳೆಯ ಕೆಲಸವಾಗುತ್ತದೆಂದು ನಾನು ತಿಳಿದು ಕೊಂಡಿದ್ದೆ ಇವರು ಎಷ್ಟು ದಿವಸ ಅಧಿಕಾರದಲ್ಲಿ ಇರುತ್ತಾರೆಂಬುದು ಪ್ರಶ್ನೆ ಅಲ್ಲ ಇಂತಹವರು ಅಧಿಕಾರದಲ್ಲಿದ್ದಾಗ ಇಂಥಾದ್ದನ್ನು ಮಾಡಿದ್ದಾರೆಂದು ಗುರುತು ಇಡುವಂತಹ ಕೆಲಸವನ್ನು ಅವರು ಮಾಡಬೇಕು ಕರ್ನಾಟಕದ ಇತಿಹಾಸದಲ್ಲಿ ಬಹಳ ಜನ ಆ ರೀತಿ ಮಾಡಿದ್ದಾರೆ. ಉದಾಹರಣೆಗೆ ಹೇಳುವು ದಾದರೆ ಮಾನ್ಯ ಬಸವಲಿಂಗಪ್ಪನವರು ನಮಗೆ ಮಾದರಿಯಾಗಿದ್ದಾರೆ. ಹಿಂದೆ ಅವರು ಅಧಿಕಾರ ದಲ್ಲಿದ್ದಾಗ ತಲೆಯ ಮೇಲೆ ಮಲ ಹೊರುವುದನ್ನು ನಿಷೇಧಿಸುತ್ತೇವೆಂದು ಹಠ ಹಿಡಿದರು. ಅದನ್ನು ನಿಷೇಧಿಸಿದರು. ಮತ್ತು ಕೆಟ್ಟ ಸಾಹಿತ್ಯವನ್ನು ಬೂಸ ಎಂದು ಹೇಳಿದರು, ಆಗ ಅವರ ಮೇಲೆ ಬಹಳ ಉದ್ವೇಗದಿಂದ ಅಪಾದನೆ ಮಾಡಿದರು ಕೆಲವು ದಿವಸ ಅವರು ಮಂತ್ರಿ ಪದವಿಯನ್ನೇ ಆ ವಿಚಾರದಲ್ಲಿ ಕಳೆದುಕೊಂಡಿದ್ದಾರೆ. ಕಳೆದುಕೊಂಡರೂ ಕೂಡ ಅವರು ಏನು ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದರು, ಅದನ್ನೇ ಇವತ್ತು ಕೇಂದ್ರ ಸರಕಾರದಲ್ಲಿ ಈ ಪದ್ಧತಿಯನ್ನು ಮಾಡುವುದಕ್ಕೆ ಹೊರಟ್ಟಿದ್ದಾರೆ ಇವರ ಆದರ್ಶಗಳನ್ನು ಇಟ್ಟುಕೊಂಡು ಒಂದು ಕಾನೂನನ್ನೇ ತರುವುದಕ್ಕೆ ಅವರು ಹೊರಟಿದ್ದಾರೆ. ಅವರು ಮಾಡಿದ ಕೆಲಸವನ್ನು ಮಾದರಿಯನ್ನಾಗಿಟ್ಟುಕೊಂಡು ಮಾನ್ಯ ರಾಚಯ್ಯನವರೂ ಕೂಡ ಕರ್ನಾಟಕದ ಅಂಬೇಡ್ಕರ್ ಆಗುತ್ತಾರೆಂದು ನಾನು ಅಂದುಕೊಂಡಿದ್ದೆ ಆದರೆ ಅವರು ರಾಚಯ್ಯನವರ ತರಹವೇ ಇರುತ್ತೇವೆಂದು ಹೇಳಿದರೆ ನಾನು ಏನು ಮಾಡುವುದಕ್ಕಾಗುತ್ತದೆ. ಅಂಬೇಡ್ಕರ್ ತರಹ ಶ್ರೀ ಬಸವಲಿಂಗಪ್ಪನವರ ತರಹ ಆಗಿ ಎಂದು ಹೇಳಿದರೆ ಬೇಡವೆಂದು ಹೇಳುತ್ತೀರಿ ನಾನೇನು ಮಾಡುವುದಕ್ಕಾಗುತ್ತದೆ. ಮಾನ್ಯ ಬಸವಲಿಂಗಪ್ಪನವರು ಗೃಹಸಚಿವರಾಗಿದ್ದಾಗ ನನಗೆ ನೆನಪಿಲ್ಲ ಅವರು ಬಹಳ ತೂಕವಾದ ಆಡಳಿತವನ್ನು ಮಾಡಿದ್ದಾರೆ ಅದನ್ನು ಯಾರೂ ಮರೆಯಬಾರದೆಂದು ಹೇಳುತ್ತೇನೆ. ಮಲ ಹೊರುವ ಪದ್ಧತಿ ನಿಷೇಧ ಮಾಡುವುದು ನನಗೆ ಗೊತ್ತು, ಕೆಟ್ಟ ಸಾಹಿತ್ಯವನ್ನು ಬೂಸ ಎಂದು ಹೇಳಿದ್ದು ನನಗೆ ಗೊತ್ತು ಮತ್ತು ಇದನ್ನೆಲ್ಲಾ ಎದುರಿಸಿ ಹೋರಾಟ ಮಾಡಿದ್ದು ಕೂಡ ಗೊತ್ತಿದೆ. ನಿಮಗೆ ಅಧಿಕಾರ ಇದೆ ಎಲ್ಲರೂ ನಿಮ್ಮನ್ನು ಹೊಗಳುತ್ತಾರೆ ಏನು ಪ್ರಯೋಜನ ನೀವು ಎಷ್ಟೇ ಒಳ್ಳೆಯವರಾದರೂ ಆಗಲಿಲ್ಲ ನಿಮ್ಮ ಒಳ್ಳೆಯತನದಿಂದ ಯಾರಿಗಾದರೂ ಅನುಕೂಲವಾಗಿದ್ದರೆ ಜನ ಅದನ್ನು ಹೇಳಿಕೊಂಡು ಬದುಕುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಗೋಮಟೇಶ್ವರನ ಬಗ್ಗೆ...

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮೊಯಿಲಿ ಸಾಹೇಬರು ಹೇಳಿದರು. ಕಾರ್ಕಳದ ಗೋಮ್ಮಟೇಶ್ವರಬಹಳ ಒಳ್ಳೆಯವನೆಂದು. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನೂ ನೋಡಿಯೂ ಇಲ್ಲ.

ಶ್ರೀ ಬಸವರಾಜಪಾಟೀಲ್ ಅನ್ವರಿ.— ತಾವು ಗೊಮ್ಮಟೇಶ್ವರನಾಗುವುದಕ್ಕೆ ಹೋಗಬೇಡಿ.

ಶ್ರೀ ಆರ್. ಎನ್. ನಾಯಕ್.— ನಾನು ಗೊಮ್ಮಟೇಶ್ವರನಾಗುವುದಕ್ಕೆ ತಯಾರಾಗಿದ್ದರೂ ಅದನ್ನು ನೀನು ಒಪ್ಪಿಕೊಳ್ಳುವುದಿಲ್ಲ. ಆದಕ್ಕೆ ನಾನು ಇಲ್ಲಿ ನಾಯಕ್ ಆಗಿ ನಿಂತಿದ್ದೇನೆ. ತಮ್ಮ ಇಲಾಖೆಯಲ್ಲಿ ಯಾವುದೇ ರೀತಿಯ ಹೊಸ ಸುಧಾರಣೆಗಳನ್ನು ತಾವು ಮಾಡಿಲ್ಲ. ಯಾವ ಬದಲಾವಣೆ ಗಳನ್ನು ಮಾಡಿಲ್ಲ. ಆದರೂ ಸಹ ನಾನು ಸಂಪೂರ್ಣವಾಗಿ ನಿರಾಶೆಯನ್ನು ಇಟ್ಟುಕೊಂಡಿಲ್ಲ. ಸನ್ಮಾನ್ಯ

ಸಚಿವರು ಈ ಪೋಲೀಸ್ ಇಲಾಖೆಯಲ್ಲಿ ಏನಾದರೂ ಒಂದು ಸುಧಾರಣೆ ಮಾಡಬಹುದು ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದೇನೆ. ಇನ್ನು ಪೋಲೀಸ್ ಇಲಾಖೆಯಲ್ಲಿ ಪೋಲೀಸ್ ಪೇದೆಗಳು ಯಾರಿದ್ದಾರೆ ಅವರಿಗೆ ಒಂದು ತಿಂಗಳಿಗೆ ವಾಶಿಂಗ್ ಅಲೋಯೆನ್ಸ್ ಎಂದು ಹೇಳಿ ೧೨ ರೂಪಾಯಿಗಳನ್ನು ಮಾತ್ರ ಕೊಡುತ್ತೀರಿ. ಒಂದು ಜೊತೆ ಬಟ್ಟೆಯನ್ನು ಮೂರು ದಿವಸ ಹಾಕಿಕೊಂಡರೆ ಆ ಬಟ್ಟೆಯನ್ನು ನಾಲ್ಕನೇ ದಿವಸ ಪುನಃ ವಾಶ್ ಮಾಡಬೇಕು. ಒಂದು ತಿಂಗಳಲ್ಲಿ ಎಂಟು ಸಲ ಒಂದು ಜೊತೆ ಬಟ್ಟೆಯನ್ನು ವಾಶ್ ಮಾಡುವುದಕ್ಕೆ ಕೊಟ್ಟರೆ ಸುಮಾರು ೩೦–೩೫ ರೂಪಾಯಿಗಳು ಖರ್ಚು ಬರುತ್ತದೆ. ಇದರ ಜೊತೆಗೆ ಅವರು ಬೂಟ್ ಪಾಲೀಶ್ ಮಾಡಬೇಕು. ಅವರು ಡ್ರೆಸ್ ಟ್ರಿಮ್ ಆಗಿರಬೇಕು. ಅವರನ್ನು ನೋಡಿದರೆ ಜನರಿಗೆ ಒಳ್ಳೆಯ ಗೌರವ ಬರಬೇಕಾದರೆ ತಾವು ಅವರಿಗೆ ಕನಿಷ್ಟ ಪಕ್ಷ ೩೫ ರೂಪಾಯಿಗಳನ್ನಾದರೂ ಕೊಡಿ. ನಿಮ್ಮ ಕಾಲದಲ್ಲಿಯಾದರೂ ಈ ಕೆಲಸ ಮಾಡಿದರೆ ಆ ಪೋಲೀಸ್ ಪೇದೆಗಳು ತಮ್ಮನ್ನು ಜ್ಞಾಪಿಸಿಕೊಂಡು ಜೀವನ ಮಾಡುತ್ತಾರೆ. ಇನ್ನು ವೀಕ್ಲಿ ಆಫ್ ಎಂದು ನಾಲ್ಕು ದಿವಸಗಳನ್ನು ತಾವು ಒಬ್ಬ ಪೋಲೀಸ್ ಪೇದೆಗೆ ಕೊಡುತ್ತಿದ್ದೀರಿ. ಆ ದಿವಸಗಳಲ್ಲಿ ಅವನು ಕೆಲಸ ಮಾಡಿದರೆ ಒಂದು ದಿವಸಕ್ಕೆ ೭ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದೀರಿ. ಇದನ್ನು ಬದಲಾವಣೆ ಮಾಡಬೇಕು. ಈಗ ಅವರಿಗೆ ಏನು ಒಂದು ದಿವಸಕ್ಕೆ ಸಂಬಳ ಬರುತ್ತಿದೆಯೋ ಅಷ್ಟು ಸಂಬಳವಾದರೂ ಕೊಡಿ. ಬೇರೆ ಇಲಾಖೆಗಳಲ್ಲಿ ಈ ರೀತಿ ಹೆಚ್ಚುವರಿ ಕೆಲಸ ಮಾಡಿದರೆ ಅವರಿಗೆ ಡಬ್ಬಲ್ ಸಂಬಳವನ್ನು ತಾವು ಕೊಡುತ್ತಿದ್ದೀರಿ. ಪೋಲೀಸಿನವರು ಇಷ್ಟು ಕೆಲಸ ಮಾಡಿದರೂ ಸಹ ಅವರಿಗೆ ಮಾನಸಿಕ ಸಮಾಧಾನವಿಲ್ಲ. ಎಲ್ಲರನ್ನು ಸಮಾಧಾನಪಡಿಸಲು ಸಾಧ್ಯವಿಲ್ಲ. ಆದರೂ ಸಹ ಇವರು ಏನು ವೀಕ್ಲಿ ಆಫ್‌ನಲ್ಲಿ ಬಂದು ಕೆಲಸ ಮಾಡುತ್ತಾರೋ ಅದಕ್ಕೆ ಒಂದು ದಿವಸದ ಸಂಬಳ ಕೊಡಬೇಕು. ಇನ್ನು ನಾಲ್ಕು ದಿವಸಗಳ ಕಾಲ ವೀಕ್ಲಿ ಆಫ್ ಕೊಟ್ಟು ಆ ದಿವಸಗಳಲ್ಲಿ ಅವರು ಕೆಲಸ ಮಾಡಿದರೂ ಸಹ ಅವರಿಗೆ ಎರಡು ದಿವಸಗಳ ಸಂಬಳವನ್ನು ಮಾತ್ರ ಕೊಡುತ್ತಾರೆ. ಇದನ್ನು ಸಹ ತಾವು ಬದಲಾವಣೆ ಮಾಡಬೇಕು. ಇನ್ನು ತಾವು ಹೊರಗಡೆ ಸ್ಪೆಷಲ್ ಡ್ಯೂಟಿಗೆ ಎಂದು ಕಳುಹಿಸಿದರೆ ಒಬ್ಬ ಪೇದೆಗೆ ಒಂದು ದಿವಸಕ್ಕೆ ೬ ರೂಪಾಯಿಗಳನ್ನು ಕೊಡುತ್ತೀರಿ. ಇವತ್ತು ಬೆಂಗಳೂರು ನಗರದಲ್ಲಿ ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ಎರಡು ಇಡ್ಲಿಗೆ ೬ ರೂಪಾಯಿಗಳು ಆಗುತ್ತದೆ. ಅವರು ಸ್ಪೆಷಲ್ ಡ್ಯೂಟಿಗೆ ಹೋದರೆ ೨೪ ಗಂಟೆಗಳೂ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಅವರಿಗೆ ಈ ಕೆಲಸಕ್ಕೆ ಕನಿಷ್ಟ ಪಕ್ಷ ೧೫ ರೂಪಾಯಿಗಳನ್ನಾದರೂ ಹೆಚ್ಚು ಮಾಡಬೇಕು. ಪಾಪ ಅವರು ಎಂತೆಂತಹ ಒಳ್ಳೆಯ ಕೆಲಸಗಳನ್ನು ಮಾಡಬೇಕಾಗುತ್ತದೆ. ಮೊನ್ನೆಯ ದಿವಸ ಶಾಸಕರನ್ನು ಬಾಗಿಲುನಿಂದ ಹೊರಗಡೆ ಯಾವ ತೊಂದರೆಯನ್ನು ಮಾಡದೆ ತೆಗೆದುಕೊಂಡು ಹೋಗಿ ಹೊರಗೆ ಇಟ್ಟರು. ಶಾಸಕರು ಎಷ್ಟೇ ಭಾರವಿದ್ದರೂ ಸಹ ಅವರಿಗೆ ನೋವಾಗದ ರೀತಿಯಲ್ಲಿ ತೆಗೆದುಕೊಂಡು ಹೋಗಿಟ್ಟರು. ಆದ್ದರಿಂದ ಸ್ಪೆಷಲ್ ಡ್ಯೂಟಿಗೆ ಬಂದಿರುವವರಿಗೆ ೬ ರೂಪಾಯಿಗಳಿಂದ ೧೫ ರೂಪಾಯಿಗಳಾದರೂ ಕೊಡಬೇಕು.

ಶ್ರೀ ಬಿ. ರಾಚಯ್ಯ.— ಪೋಲೀಸಿನವರಿಗೆ ಹೆಚ್ಚು ಸಂಬಳ ಕೊಡಿ ಎಂದು ಹೇಳುತ್ತಿದ್ದೀರೋ ಅಥವಾ ವಾಚ್ ಅಂಡ್ ವಾರ್ಡ್‌ನವರಿಗೆ ಹೆಚ್ಚು ಮಾಡಿ ಎಂದು ಹೇಳುತ್ತಿದ್ದೀರೋ ?

ಶ್ರೀ ಆರ್. ಎನ್. ನಾಯಕ್.— ವಿಧಾನ ಸೌಧಕ್ಕೆ ಬಂದರೆ ವಾಚ್ ಅಂಡ್ ವಾರ್ಡ್ ಆಗುತ್ತಾರೆ. ಅದೇ ಇಲ್ಲಿಂದ ಹೋದರೆ ಸೆಂಟ್ರಲ್ ಪೋಲೀಸ್ ಠಾಣೆಯಲ್ಲಿ ಪೋಲೀಸಿನವರು ಆಗುತ್ತಾರೆ. ಅದರಲ್ಲಿ ವ್ಯತ್ಯಾಸವೇನೂ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಮಾನ್ಯ ನಾಯಕರ್‌ರವರಿಗೆ ಪೋಲೀಸ್‌ನವರು ಯಾರು, ವಾಚ್ ಅಂಡ್ ವಾರ್ಡ್‌ನವರು ಯಾರೆಂದು ಸಹ ಗೊತ್ತಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.— ಚಂದ್ರಗುತ್ತಿ ಸೊರಬಕ್ಕೆ ಹತ್ತಿರದಲ್ಲಿದೆ, ನಿಮಗೆ ಹತ್ತಿರವಿದೆಯೋ ?

ಶ್ರೀ ಆರ್. ಎನ್. ನಾಯಕ್.— ಮಾನ್ಯ ಅಧ್ಯಕ್ಷರೇ...

೫–೩೦ ಪಿ.ಎಂ.

ಚಂದ್ರಗುತ್ತಿ ಸೊರಬದಲ್ಲಿರದೇ ಅಮೇರಿಕಾದಲ್ಲಿರುತ್ತದೆಯೋ ? ಅಲ್ಲಿ ಬೆತ್ತಲೆಸೇವೆ ಮಾಡಬಾರದೆಂದು ಎನ್ನುವಂಥ ಒಂದು ರಿಫಾರ್ಮ್ಸ್ ತರಬೇಕು. ಆದನ್ನು ಬಿಟ್ಟು ಬಲಾತ್ಕಾರವಾಗಿ ಅದನ್ನು ತಂದರೆ

ಹುಂಡಿವೆ ವರ್ಷ ಮಾತ್ರ ಮಾಡಿರುತ್ತಾರೆ. ಬಲಾತ್ಕಾರವಾಗಿ ಯಾವುದನ್ನೋ ನಿಷೇಧ ಮಾಡಿದರೂ ಅದಕ್ಕೆ ಬೆಲೆ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ನಮ್ಮ ಸರ್ಕಾರ ಇಷ್ಟಾದರೂ ಮಾಡಿದೆ, ನೀವು ಇರುವಾಗ ಅದೂ ಮಾಡಿಲ್ಲ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.— ಭಕ್ತರನ್ನು ಹೋಗದ ಹಾಗೆ ಮಾಡಿದ್ದೀರಿ. ಇನ್ನೊಂದು...

ಅಧ್ಯಕ್ಷರು.— ಅವರಿಗೆ ಮಧ್ಯೆ ಇಂಟರ್‌ಫಿಯರ್ ಮಾಡಬೇಡಿ.

ಶ್ರೀ ಆರ್. ಎನ್. ನಾಯಕ್.— ಈ ರೀತಿಯಾಗಿ ನಾನು ಬಹಳಷ್ಟು ಗೃಹ ಖಾತೆಯ ಮೇಲೆ ಕೆಲವು ಸೂಚನೆ, ಸಲಹೆಗಳನ್ನು ಕೊಟ್ಟಿದ್ದೇನೆ. ಬಾಕಿ ಎಲ್ಲವನ್ನು ನಡೆಸುವುದಕ್ಕೆ ಆಗದೇ ಹೋದರೂ ಸಂಬಳ ಕೊಡುವಂಥ ಹೆಚ್ಚಿನ ಒಂದು ಔದಾರ್ಯವನ್ನು ತೋರಿಸಿ ಸ್ವಲ್ಪ ಅವರಿಗೆ ಅನುಕೂಲವನ್ನು ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ಹೆಚ್ಚಿನ ಸಂಖ್ಯೆಯಲ್ಲಿರುವ ನೌಕರರು ಇದರ ಲಾಭವನ್ನು ಪಡೆದುಕೊಳ್ಳಲಿ ಮತ್ತು ಈ ಕೆಲಸ ನಿಮ್ಮಿಂದ ಆಯಿತು ಎಂದು ಸಂತೋಷಪಡುತ್ತಾರೆ. ನೀವು ಆ ರೀತಿ ಮಾಡುತ್ತೀರಿ ಎಂದು ನಾನು ಆಸೆಯನ್ನು ಇಟ್ಟುಕೊಂಡಿದ್ದೇನೆ. ಮಲ್ಲಾರಿಗೌಡರ ಕ್ಷೇತ್ರದಲ್ಲಿ ಹಂಕೇರಿ ತಾಲ್ಲೂಕಿನ ಕುರುಡಿವಾಡಿ ಗ್ರಾಮದಲ್ಲಿ ರಾಜಾಸಾಹೇಬ್ ಮುದ್ನಾಳ್ ಅವರ ಮನೆಯಲ್ಲಿ ಗೂಂಡಾಜನರು ಧಾಳಿ ಮಾಡಿದರು. ಆ ಬಗ್ಗೆ ಪೋಲೀಸ್ ಸ್ಟೇಷನ್‌ನಲ್ಲಿ ಫಿರ್ಯಾದಿಯನ್ನು ಕೊಟ್ಟರೂ ಕೂಡಾ ಆ ಪೋಲೀಸ್‌ನವರು ಇದರ ಬಗ್ಗೆ ಲಕ್ಷ್ಯ ಕೊಟ್ಟಿಲ್ಲ. ಈ ವಿಚಾರವಾಗಿ ಇದರ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ಈ ವಿಷಯಕ್ಕೆ ಲಕ್ಷ್ಯ ಕೊಡಬೇಕು ಎಂದು ಹೇಳುತ್ತೇನೆ. ಆ ರೀತಿ ಹೇಳುತ್ತಾ ಹೋದರೆ ಇನ್ನೂ ಇದೆ. ಅಂಕೋಲಾ ತಾಲ್ಲೂಕಿನಲ್ಲಿ ವೀರಣ್ಣ ಎಂಬುವವರನ್ನು ಕೊಲೆ ಮಾಡಿದರು. ನಾನು ಆ ವಿಷಯವನ್ನು ೩೩೪ ರ ನಿಯಮಾವಳಿಗಳಲ್ಲಿ ಎತ್ತಿದ್ದೆ. ಅದರ ಬಗ್ಗೆ ಪರಿಶೀಲನೆ ಮಾಡಿಸುತ್ತೇನೆ ಎಂದು ಹೇಳಿದರು. ಅದು ಏನು ಪರಿಶೀಲನೆ ಆಯಿತು ? ಆ ಕೊಲೆ ಹೇಗೆ ಆಯಿತು ? ಕೊಲೆ ಮಾಡಿದವರು ತಪ್ಪಿಸಿಕೊಂಡು ಅಲ್ಲಿಯೇ ಇದ್ದಾರೆ. ತಹಶೀಲ್ದಾರ್ ಅವರು ಶಾಮೀಲಾಗಿ ಅವರ ರಕ್ಷಣೆಗೆ ಅನುಕೂಲ ಮಾಡಿ ಕೊಟ್ಟಿದ್ದಾರೆ. ಡಿವೈಎಸ್‌ಪಿ ಸಿದ್ಧಣ್ಣ ಎನ್ನುವವರು ಸರಿಯಾಗಿ ತನಿಖೆಯನ್ನು ಮಾಡಿಲ್ಲ. ಸಿದ್ಧಣ್ಣ ಎನ್ನುವವರನ್ನು ಈಗ ಚಿಕ್ಕಮಗಳೂರಿನಲ್ಲಿ ಡಿವೈಎಸ್‌ಪಿ ಮಾಡಿ ಇಟ್ಟಿದ್ದಾರೆ. ಅದರ ಬಗ್ಗೆ ಎನ್‌ಕ್ವೈರಿ ಮಾಡಬೇಕಾಗಿತ್ತು. ನೀವು ಲಕ್ಷ್ಯ ಕೊಟ್ಟಿಲ್ಲ. ಏನಾದರೂ ಒಂದು ಅರ್ಜಿಯನ್ನು ಕೊಟ್ಟರೆ ಅದನ್ನು ಮೂಲೆಗೆ ಇಡುತ್ತೀರಿ. ಎನ್‌ಕ್ವೈರಿ ಬಗ್ಗೆ ಕೇಳಿದರೆ...

ಶ್ರೀ ಬಿ. ರಾಚಯ್ಯ.— ಅರ್ಜಿ ಕೊಟ್ಟರೆ ಮೂಲೆಗೆ ಹಾಕುತ್ತಾರೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಆ ರೀತಿ ಹೇಳುವುದು ಸರಿಯಲ್ಲ.

ಶ್ರೀ ಆರ್. ಎನ್. ನಾಯಕ್.— ಈಗ ನಾನು ಏನು ಹೇಳಿದೆ, ಯಾವ ಕೆಲಸ ಆದರೂ ಸಹಾ ಅದನ್ನು ಮಾಡಿದ್ದೇವೆ, ಮಾಡಿದ್ದೇವೆ ಎಂದು ಹೇಳುತ್ತಾರೆ. ಯಾವ ಮನುಷ್ಯನೂ ಕೂಡಾ ಎಲ್ಲ ಕೆಲಸವನ್ನು ಟೈಮ್‌ನಲ್ಲಿ ಮಾಡುತ್ತೇನೆ ಎಂದು ಹೇಳುತ್ತಾರೆ, ಆ ವ್ಯಕ್ತಿ ಒಂದು ಕೆಲಸವನ್ನೂ ಮಾಡಿರುವುದಿಲ್ಲ, ಎಲ್ಲಾ ಕೆಲಸವನ್ನು ಸಕಾಲದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಇಂಥ ಕೆಲಸವನ್ನು ಮಾಡಿದ್ದೇವೆ, ಇಂಥ ಕೆಲಸವನ್ನು ಮಾಡಿಲ್ಲ ಎಂದು ಹೇಳಲಿಕ್ಕೆ ಏತಕ್ಕೆ ಚಿಂತೆ ಮಾಡುತ್ತಾರೆ ? ನಾವು ಬರೆಯುವಂಥದ್ದಕ್ಕೆ ಯಾವುದಾದರೂ ಅಧಿಕಾರಿಗಳಿಗೆ ಶಿಕ್ಷೆ ಆಗಿದೆಯೇ ? ಆಗಿಲ್ಲ. ನ್ಯಾಯಾಂಗ ತನಿಖೆಯಾಗಿ, ಸಿಓಡಿ ತನಿಖೆಯಾಗಿ, ಸಿ.ಬಿ.ಐ. ತನಿಖೆಯಾಗಿ ನಿಮ್ಮ ಮುಂದೆಯೇ ಪ್ರೊಮೋಷನ್ ತೆಗೆದುಕೊಂಡು ಹೋಗಿದ್ದಾರೆ ಎಂದು ಶ್ರೀನಿವಾಸ್‌ರವರು ಹೇಳಿದ್ದಾರೆ ನೀವು ಏನೂ ಮಾಡಿಲ್ಲ.

ಅಧ್ಯಕ್ಷರೇ, ನಾನು ಬೇರೆ ಇಲಾಖೆಗಳ ಬಗ್ಗೆ ಇನ್ನೂ ಹೇಳಲಿಲ್ಲ, ಸ್ವಲ್ಪ ಸಮಯ ಕೊಡಿ. ಕೆ.ಎಸ್.ಆರ್.ಟಿ.ಸಿ. ಬಗ್ಗೆ ಸ್ವಲ್ಪ ಹೇಳುತ್ತೇನೆ.

ಅಧ್ಯಕ್ಷರು.— ಆಯಿತು ಸ್ವಲ್ಪ ಹೇಳಿ...

ಶ್ರೀ ಆರ್. ಎನ್. ನಾಯಕ್.— ಆ ಸಂಸ್ಥೆಯ ಬಗ್ಗೆ ಹೇಳಲೇ ಬೇಕಾಗುತ್ತದೆ. ನಮ್ಮ ತಾಲ್ಲೂಕಿಗೆ ಒಂದು ಸೂಪರ್ ಡಿಲಕ್ಸ್ ಬಸ್ಸನ್ನು ಕೊಡಿ ಎಂದು ಆ ಇಲಾಖೆಯ ಮಂತ್ರಿಗಳಾಗಿದ್ದ, ಮಾನ್ಯ

ಪ್ರಕಾಶ್‌ರವರು ಮತ್ತು ಸಿಂಧ್ಯರವರು ಇದ್ದ ಕಾಲದಲ್ಲಿ ಕೇಳಿಕೊಂಡಿದ್ದೆ. ಅವರಿಬ್ಬರೂ ವ್ಯವಸ್ಥೆ ಮಾಡಿಸುತ್ತೇವೆ ಎಂದು ಹೇಳಿದ್ದರು. ಆದರೂ ಕೂಡ ಆ ಬಸ್‌ನ ವ್ಯವಸ್ಥೆ ಆಗಿರಲಿಲ್ಲ. ಇವರ ಬಳಿಯಲ್ಲಿಯೂ ಹೇಳಿದ್ದೇನೆ. ಕೇಳಿದ್ದೇನೆ, ಆಯಿತು ಎಂದು ಹೇಳಿದ್ದಾರೆ, ಆದರೆ ಇದುವರೆಗೂ ಬಸ್ ಮಾತ್ರ ಓಡ್ತಾಡುತ್ತಾ ಇಲ್ಲ. ಇದು ನಿಮ್ಮ ಅನುಭವ ಕೂಡ ಇರಬಹುದು...

ಶ್ರೀ ವೀರಣ್ಣ.— ಮಾನ್ಯ ಸದಸ್ಯರು ತಮ್ಮ ಊರಿಗೆ ಹೋಗುವಾಗ ಸೂಪರ್ ಡಿಲಕ್ಸ್ ಬಸ್ಸನ್ನು ಓಡಿಸುತ್ತೇವೆ, ಅದರಲ್ಲಿ ಹೋಗಲಿ...

ಶ್ರೀ ಆರ್. ಎನ್. ನಾಯಕ್.— ಒಂದು ವೇಳೆ ಬಸ್‌ನ ವ್ಯವಸ್ಥೆ ಆಗದಿದ್ದರೂ ಕೂಡ ತಮ್ಮ ಕಾರನ್ನು ಕೊಡುತ್ತೀರಾ ? ನೀವು ಕಳೆದ ಸಲ ೪೦ ಪರ್ಸೆಂಟ್‌ನಷ್ಟು ಬಸ್ ದರವನ್ನು ಏರಿಸಿದ್ದೀರಿ. ಆದರೆ ೪೦ ಪರ್ಸೆಂಟ್‌ನಷ್ಟು ಪ್ರಯಾಣಿಕರಿಗೆ ಸವಲತ್ತುಗಳನ್ನು ಕೂಡ ಏರಿಸ ಬೇಕಾಗುತ್ತದೆ. ಅದನ್ನು ತಾವುಗಳು ಮಾಡಲಿಲ್ಲ. ಕೆಲವು ಕಡೆಗಳಲ್ಲಿ ಬಸ್‌ಗಳನ್ನು ಜಾಸ್ತಿ ಹಾಕಿರಬಹುದು. ಮತ್ತು ಸ್ವಲ್ಪ ಮಟ್ಟಿಗೆ ಪ್ರಗತಿ ಕೂಡ ಆಗಿರಬಹುದು, ಆಗಿದೆ. ಅಂಥ ಒಂದು ಪ್ರಗತಿಯಲ್ಲಿ ನಾವುಗಳು ಉಪಯೋಗ ಮಾಡಿಕೊಂಡದ್ದನ್ನು, ಅನುಭವಿಸಿಕೊಂಡಿದ್ದನ್ನು ಇಲ್ಲ, ಎಂದು ನಾನು ಹೇಳುವುದಿಲ್ಲ. ಅಂದರೆ ಬಸ್‌ಗಳು ಸಮಯಕ್ಕೆ ಸರಿಯಾಗಿ ಓಡಾಡುತ್ತಿವೆ. ಸ್ವಲ್ಪ ಸುಧಾರಣೆ ಕಂಡು ಬಂದಿದೆ. ೪೦ ಪರ್ಸೆಂಟ್‌ನಷ್ಟು ದರವನ್ನು ಏರಿಸಿ. ೫ ಪರ್ಸೆಂಟ್‌ನಷ್ಟು ಅಭಿವೃದ್ಧಿಯನ್ನು ಮಾಡಿದ್ದೀರಿ. ಲಾಭವನ್ನು ತೋರಿಸಿದ್ದೀರಿ. ಆದರೆ, ೪೦ ಪರ್ಸೆಂಟ್‌ನಷ್ಟು ದರವನ್ನು ಏರಿಸಿದಾಗ, 40 ಪರ್ಸೆಂಟ್‌ನಷ್ಟು ಲಾಭವೂ ಆಗಬೇಕಲ್ಲ ? ಆ ಲಾಭ, ಈ ರೀತಿಯಾಗಿ ಬಸ್‌ನ ದರವನ್ನು ಏರಿಸಿದಾಗ ಅಷ್ಟೇ ಹೆಚ್ಚಿಗೆ ಬರಬೇಕಲ್ಲ ? ಆದರೆ ಅಷ್ಟು ತೋರಿಸಿಲ್ಲ ಅಂದರೆ ಅಷ್ಟು ಸೋರಿ ಹೋಗಿದೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಇನ್ನು ಬಸ್ ನಿಲ್ದಾಣಗಳಲ್ಲಿನ ಸ್ವಚ್ಛತೆಗೆ ಹೆಚ್ಚು ಲಕ್ಷ್ಯ ಕೊಡಬೇಕು. ಯಾವುದೇ ಬಸ್‌ಸ್ಟ್ಯಾಂಡ್‌ಗೆ ಹೋದರೂ ಕೂಡ ಈ ಒಂದು ಅನುಭವ ಆಗುತ್ತದೆ. ಅದರಲ್ಲೂ ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಬಸ್‌ಸ್ಟ್ಯಾಂಡ್‌ಗೆ ತಾವುಗಳು ಹೋಗಬೇಕು. ಅಲ್ಲಿಗೆ ಹೋದವರು ಯಾವುದೇ ರೋಗವಿಲ್ಲದೇ ಹಿಂದಕ್ಕೆ ಬರುವುದು ಕಷ್ಟ ಎನಿಸುತ್ತದೆ. ಬೇಕಾದರೆ ನೀವು ಪ್ರಯೋಗ ಮಾಡಿ ನೋಡಬಹುದು. ಅಷ್ಟು ಹೊಲಸು ಅಲ್ಲಿ ಇದೆ. ಆದುದರಿಂದ ಅಲ್ಲಿನ ಒಂದು ಸ್ವಚ್ಛತೆಗೆ ಅತೀ ಹೆಚ್ಚಿನ ಲಕ್ಷ್ಯ ಕೊಡಬೇಕು. ಅಲ್ಲಿ ನೀರು ಬಿಡುವುದಕ್ಕೆ ಏನು ತೊಂದರೆ ಇದೆಯೋ ಗೊತ್ತಿಲ್ಲ. ಅಲ್ಲಿ ಅಷ್ಟು ಗಲೀಜು ಕಂಡು ಬರುತ್ತದೆ. ನೀವು ಸಿಮೆಂಟ್‌ನ ನಿಲ್ದಾಣವನ್ನು ಕಟ್ಟಿದ ಮಾತ್ರಕ್ಕೆ ಆಗಲಿಲ್ಲ...

ಶ್ರೀ ವೀರಣ್ಣ.— ಸಿರ್ಸಿ ಬಸ್‌ಸ್ಟ್ಯಾಂಡ್‌ಗೆ ನಾನೂ ಕೂಡ ಹೋಗಿದ್ದೇನೆ. ಇಲ್ಲಿಯವರೆಗೂ ಯಾವ ರೋಗವೂ ನನಗೆ ಹತ್ತಿಲ್ಲ. ಯಾರಿಗೆ ರೋಗ ಹತ್ತಿದೆ ಎಂದು ತಾವು ಹೇಳಬೇಕು.

ಶ್ರೀ ಆರ್. ಎನ್. ನಾಯಕ್.— ಕನಿಷ್ಟ ಪಕ್ಷ ಬಸ್‌ಸ್ಟ್ಯಾಂಡ್‌ನ ಶೌಚಾಲಯಕ್ಕೆ ನೀವು ನೀರಿನ ಪೂರೈಕೆ ಮಾಡಬೇಕು. ಹಾಗೆ ಮಾಡದಿದ್ದರೆ ಹೊಲಸು ಇರುವುದು ಸಹಜ...

ಅಧ್ಯಕ್ಷರು.— ಒಟ್ಟಿನಲ್ಲಿ ನೀರು ಮತ್ತು ಬಾಗಿಲು ತೆಗೆದುಕೊಂಡು ಹೋಗಬೇಕೇ?

ಶ್ರೀ ಆರ್. ಎನ್. ನಾಯಕ್.— ಜನಕ್ಕೆ ಅದನ್ನು ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲವಲ್ಲ? ಇನ್ನು ಮಾನ್ಯ ಮುಖ್ಯಮಂತ್ರಿಯವರ ಖಾತೆಯ ಬಗ್ಗೆ ಹೇಳುವುದು ಬೇಡವೆ?

ಅಧ್ಯಕ್ಷರು.— ಈಗಾಗಲೇ ೧೫ ನಿಮಿಷಗಳು ಆದವು. ಇಲ್ಲಿಗೆ ಮುಗಿಸಿಬಿಡಿ.

ಶ್ರೀ ಆರ್. ಎನ್. ನಾಯಕ್.— ಮಾನ್ಯ ಮುಖ್ಯಮಂತ್ರಿಗಳ ಖಾತೆಯ ಬಗ್ಗೆ ಹೇಳುವುದು ಬೇಡ, ಎಂದು ತಮ್ಮ ಆದೇಶವನ್ನು ಪಾಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಸುಮಾವಸಂತ್ (ವಿರಾಜಪೇಟೆ)— ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಹಲವಾರು ಬೇಡಿಕೆಗಳನ್ನು ಇಟ್ಟಿದ್ದಾರೆ. ನಾನು ಯುವಜನ ಮತ್ತು ಕ್ರೀಡಾ ಇಲಾಖೆಗಳ ಬಗ್ಗೆ ಆ ಬೇಡಿಕೆಯನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ. ಕೊಡಗಿನ ಯುವಕರು ಹಿಂದಿನಿಂದಲೂ ಅನೇಕ ಕ್ರೀಡೆಗಳಲ್ಲಿ ಮುಂದೆ ಇದ್ದಾರೆ. ಕೊಡಗು, ಹಾಕಿ, ಫುಟ್‌ಬಾಲ್, ಮುಂತಾದ ಆಟಗಳಿಗಾಗಿ ಹೆಸರುವಾಸಿಯಾಗಿದೆ. ಈಗ ಕೊಡಗಿನಲ್ಲಿ ಹಾಕಿ ಆಟದ ಕೋಚ್‌ಗಳು ಇಲ್ಲವಾಗಿದ್ದರೆ ಅವರನ್ನು ಕೇರಳಕ್ಕೆ ಪೋಸ್ಟ್ ಮಾಡಿದ್ದಾರೆ. ಕೊಡಗಿನಲ್ಲಿನವರು ಜ್ಯೂನಿಯರ್ ಟೀಮ್ಸ್ ಸ್ಟೇಟ್‌ವಿನ್ನರ್ ಆಗಿದ್ದಾರೆ. ಈವರೆಗೂ ಯೂತ್ ಸರ್ವಿಸ್ ಡಿಪಾರ್ಟ್‌ಮೆಂಟಿನಿಂದ ಡಿಸ್ಟ್ರಿಕ್ಟ್ ಕೋಚ್ ಇದ್ದರು. ದುರದೃಷ್ಟ ಎಂದರೆ ಗವರ್ನಮೆಂಟಿನಿಂದ ಒಂದು ಬಾಲನ್ನೂ ಸಪ್ಲೈ ಮಾಡುವುದಕ್ಕೆ ಆಗಲಿಲ್ಲ. ಯಾವುದೇ ಆಟೋಪಕರಣವನ್ನೂ ಸಪ್ಲೈ ಮಾಡಿಲ್ಲ. ಈ ಬಜೆಟ್ ಪುಸ್ತಕದಲ್ಲಿ ರಾಜ್ಯಮಟ್ಟ ಜಿಲ್ಲಾಮಟ್ಟದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಈಗ ಸದ್ಯಕ್ಕೆ ಕೊಡಗಿನಲ್ಲಿ ಟ್ರೈನೀಸ್ ಬಾಲನ್ನು ಕೊಂಡು ಆಡುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಗಮನಹರಿಸುತ್ತಿಲ್ಲ. ಸ್ಪೋರ್ಟ್ಸ್‌ಗಾಗಿ ಲಕ್ಷಗಟ್ಟಲೆ ಸರ್ಕಾರ ಹಣ ಖರ್ಚು ಮಾಡುತ್ತಿರುವುದೆಲ್ಲ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ. ನಮ್ಮ ಕೊಡಗಿನ ಒಬ್ಬ ಹುಡುಗ ಗ್ರಾಮೀಣ ಕ್ರೀಡಾ ಕೂಟಗಳಲ್ಲಿ ಚಾಂಪಿಯನ್‌ಷಿಪ್ ಪಡೆದು, ಅತೀ ವೇಗದ ಓಟಗಾರನೆಂದು ಗೆದ್ದಿದ್ದಾನೆ. ಅವನು ಎಕನಾಮಿಕಲಿ ಪೂರ್ ಫ್ಯಾಮಿಲಿಯಿಂದ ಬಂದಿದ್ದಾನೆ. ಅವನಿಗೆ ಸರ್ಕಾರ ಇದುವರೆಗೂ ಯಾವುದೇ ಎನ್‌ಕರೇಜ್‌ಮೆಂಟ್ ಆಗಲೀ. ಫೆಸಿಲಿಟೀಸಾಗಲಿ ಕೊಟ್ಟಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಅಥ್ಲೆಟಿಕ್ಸ್‌ಗಳು ಬೇಕಾದಷ್ಟು ಜನರಿದ್ದಾರೆ. ಹಾಲಿ ಕೊಡಗಿನಲ್ಲಿರುವ ಕ್ರೀಡಾಧಿಕಾರಿಗಳು ಕನ್ನಡ ಇಲಾಖೆಯ ಅಧಿಕಾರಿಗಳಿದ್ದವರು ಅಂಥವರನ್ನು ಯೂಥ್ ಸರ್ವಿಸ್ ಆಫೀಸರಾಗಿ ನೇಮಕ ಮಾಡಿದ್ದಾರೆ. ಅವರಿಗೆ ಕ್ರೀಡೆ ಬಗ್ಗೆ ಯಾವುದೇ ಆಸಕ್ತಿ ಇಲ್ಲ. ಗ್ರಾಮೀಣ ಕ್ರೀಡಾಪಟುಗಳಿಗೆ ಯಾವುದಾದರೂ ಬೆನಿಫಿಟ್ ಮಾಡಿಕೊಡಿ ಎಂದು ಹೇಳಿದರೆ ಹಣ ಇಲ್ಲ. ಸರ್ಕಾರದಲ್ಲಿ ನಿರುದ್ಯೋಗ ಪದವೀಧರರಿಗೆ ಉದ್ಯೋಗ ಒದಗಿಸುವ ಯೋಜನೆಯೇನೋ ಇದೆ. ಇದರಲ್ಲಿ ನಗರ ಪ್ರದೇಶದ ನಿರುದ್ಯೋಗಿಗಳಿಗೆ ಮಾತ್ರ ಉತ್ತೇಜನ ಸಿಗುತ್ತಿದೆಯೇ ಹೊರತು ಗ್ರಾಮೀಣ ಪ್ರದೇಶದವರಿಗೆ ಸಿಗುತ್ತಿಲ್ಲ. ಅದೂ ಅಲ್ಲದೆ ಇನ್‌ಫ್ಲೂಯೆನ್ಸ್ ಇರುವವರು ಮಾತ್ರ ಈ ಉದ್ಯೋಗವನ್ನು ಪಡೆದು ಕೊಳ್ಳುತ್ತಿದ್ದಾರೆ. ನಗರಪ್ರದೇಶದಲ್ಲಿ ಒಬ್ಬ ಕ್ರೀಡಾಪಟು ಗೆದ್ದರೆ ಅವನಿಗೆ ನ್ಯಾಷನಲ್ ಲೆವೆಲ್‌ನಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಡಲಾಗುತ್ತಿತ್ತು. ಆದರೆ ನಮ್ಮ ಕೊಡಗಿನಲ್ಲಿ ಈ ತರದ್ದು ಯಾವುದೂ ಇಲ್ಲ. ಕೊಡಗಿನಲ್ಲಿ ಹಂಡುಗಿ ಎಂಬಲ್ಲಿ ಒಂದು ಕ್ರೀಡಾ ಶಾಲೆ ಇದೆ. ಗ್ರಾಮಾಂತರ ಪ್ರದೇಶದ ಕ್ರೀಡಾಶಾಲೆಯಾದ ಅದು ಕರ್ನಾಟಕಕ್ಕೇ ಮೊದಲಿನದು. ಕೊಡಗಿನ ಕ್ರೀಡಾಪಟುಗಳಿಗೆ ಆದ್ಯತೆ ನೀಡುವ ಸಲುವಾಗಿ ಹಿಂದಿನ ಸರ್ಕಾರ ತೆರೆದದ್ದು ಇಲ್ಲಿತನಕ ಯಾವುದೇ ಸೌಕರ್ಯವನ್ನು ಅಲ್ಲಿಗೆ ಮಾಡಿಕೊಟ್ಟಿಲ್ಲ. ಅದು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿಗೆ ಸೇರಿದ ಜಾಗ ಈಗ ಕೃಷಿ ಇಲಾಖೆಯವರು ಜಾಗ ಕೊಡಲು ತೊಂದರೆ ಮಾಡುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಗಮನಹರಿಸುತ್ತಿಲ್ಲ ಆದ್ದರಿಂದ ನಾನು ಕೇಳಿಕೊಳ್ಳುವುದೇನೆಂದರೆ ಕೊಡಗಿಗೆ ಮೊದಲು ಒಬ್ಬ ಕ್ರೀಡಾಧಿಕಾರಿಯನ್ನು ನೇಮಕ ಮಾಡಿ. ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗಲೂ ವಂಚನೆ ಮೋಸ ನಡೆದಿದೆ. ಇದರಿಂದ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕ ಸೋಲನ್ನನುಭವಿಸಬೇಕಾಗುತ್ತದೆ. ಉದಾಹರಣೆಗೆ ಕಳೆದ ಒಲಂಪಿಕ್‌ನಲ್ಲಿ ಕೊಡಗಿನ ಸಿದ್ಧರಾಮು ಎಂಬುವವರು ಭಾಗವಹಿಸಿ ಮೂರನೆಯ ಸ್ಥಾನ ಪಡೆದಿದ್ದರು, ಇದು ಬರೀ ಕೊಡಗಿಗೆ ಮಾತ್ರ ಸೀಮಿತವಾಗದೇ ಕರ್ನಾಟಕದ ಗ್ರಾಮಾಂತರ ಪ್ರದೇಶದ ಕ್ರೀಡಾ ಪಟುಗಳಿಗೆ ಇದೇ ಸ್ಥಿತಿ ಇದೆ. ಬಹಳ ಶೋಚನೀಯವಾದ ಪರಿಸ್ಥಿತಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕು. ಇನ್ನು ಯುವಕ ಸಂಘ ಮತ್ತು ಜಿಲ್ಲಾ ಗ್ರಂಥಾಲಯಗಳಿಗೆ ಹೆಚ್ಚಿನ ಸೌಕರ್ಯ ಒದಗಿಸಿಕೊಡಬೇಕು. ಎರಡು ವರ್ಷದಿಂದ ಪ್ರತಿ ತಾಲ್ಲೂಕಿಗೆ ಕ್ರೀಡಾಂಗಣದ ವ್ಯವಸ್ಥೆ ಮಾಡುತ್ತೇವೆಂದು ಭರವಸೆಯನ್ನು ಮಾತ್ರ ಕೊಡುತ್ತಿದ್ದಾರೆ ಆದರೆ ಇದರ ಬಗ್ಗೆ ಏನೂ ಕಾರ್ಯಕ್ರಮವನ್ನು ತಾವು ಹಾಕಿಕೊಂಡಿಲ್ಲ. ಇದರ ಬಗ್ಗೆ ಕೂಡ ಹೆಚ್ಚು ಗಮನಹರಿಸಬೇಕು. ಮಡಿಕೇರಿಯಲ್ಲಿನ ಕ್ರೀಡಾಂಗಣವನ್ನು ಆದಷ್ಟು ಬೇಗ ಮಾಡಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ಪ್ರವಾಸೋದ್ಯಮದ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ ತಲಕಾವೇರಿಗೆ ಮತ್ತು ನಾಗರಹೊಳೆಗೆ ಸಾವಿರಾರು ಜನ ಪ್ರವಾಸಿಗರು ಬರುತ್ತಾರೆ ಆದರೆ ಅಲ್ಲಿ ಸರಿಯಾದಂತಹ ಸೌಕರ್ಯ ಇಲ್ಲ ಅದಕ್ಕೆ ಯಾವುದೇ ಹಣವನ್ನು ಒದಗಿಸಿದ ಹಾಗೆ ಕಾಣುವುದಿಲ್ಲ- ನಾಗರಹೊಳೆ ಬರ್ಡ್ ಸ್ಯಾಂಕ್ಚುರಿ ಇದೆ ಅಲ್ಲಿಗೆ ಹೆಚ್ಚಿನ ಹಣವನ್ನು ಒದಗಿಸಿ ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು

ಕೆ. ಎಸ್. ಆರ್. ಟಿ. ಸಿ. ಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಲಾಂಗ್ ರೋಡ್‌ಗಳಿಗೆ ಬಸ್ಸುಗಳನ್ನು ಏನು ಹಾಕುತ್ತಾರೆ ಮಡಿಕೇರಿಯಿಂದ ಹುಬ್ಬಳ್ಳಿ ಅಥವಾ ಬೆಂಗಳೂರಿನ ಕಡೆಗೆ ಎಂದು, ಅಂತಹ ದೂರದ ಕಡೆಗಳಿಗೆ ಹೋಗುವ ಬಸ್ಸುಗಳಲ್ಲಿ ಬ್ರೇಕ್ ಸರಿಯಾಗಿರುವುದಿಲ್ಲ. ಇದರಿಂದಾಗಿ ಅವು ಅರ್ಧ ದಾರಿಯಲ್ಲಿ ನಿಂತುಹೋಗುತ್ತವೆ. ಆಗ ಡ್ರೈವರ್ ಇಲ್ಲಿಯೇ ಬಸ್ಸನ್ನು ನಿಲ್ಲಿಸಿ ನೀವು ಇಲ್ಲಿಯೇ ಇಳಿಯಿರಿ ಎಂದು ಹೇಳುತ್ತಾನೆ ಮಡಿಕೇರಿಯ ಮಧ್ಯ ದಾರಿಯಲ್ಲಿ ನಿಂತರೆ ಮಡಿಕೇರಿ ಡಿಪೋದವರು ಬಂದು ಆ ಬಸ್ಸನ್ನು ತೆಗೆದುಕೊಂಡು ಹೋಗಬೇಕು. ಮಧ್ಯದಲ್ಲಿ ಬಸ್ಸುಗಳು ನಿಂತು ಹೋದಾಗ ಬೇರೆ ವಾಹನಗಳ ಕಡೆಗೆ ಕೈ ತೋರಿಸಿದರೆ ಅವರು ಯಾರೂ ನಿಲ್ಲಿಸುವುದಿಲ್ಲ ಇದರಿಂದಾಗಿ ಆ ಪ್ರಯಾಣಿಕರು ತುಂಬಾ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಆದುದರಿಂದಾಗಿ ಈ ಕೂಡಲೇ ಅವರಿಗೆ ಬೇರೆ ವ್ಯವಸ್ಥೆ ಮಾಡುವಂತಹ ಅವಕಾಶವನ್ನು ಕಲ್ಪಿಸಿಕೊಡಬೇಕು. ಇನ್ನು ಪೋಲೀಸರ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಅದರ ಬಗ್ಗೆ ಹೆಚ್ಚಿಗೆ ಹೇಳಲು ಇಚ್ಛಿಸದೆ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಈಗ ಗೃಹ ಖಾತೆ ಸಚಿವರ ಮತ್ತು ಸಾರಿಗೆ ಖಾತೆ ಸಚಿವರ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು ಈಗ ಮಾನ್ಯ ಗೃಹ ಸಚಿವರಿಂದ ಉತ್ತರ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಈ ದಿನದ ಬೇಡಿಕೆಗಳ ಮೇಲೆ ಭಾಗ ವಹಿಸಿದಂತಹ ಸುಮಾರು ೧೯ ಜನ ಮಾನ್ಯಸದಸ್ಯರು ಅನೇಕ ವಿಷಯಗಳನ್ನು ಈ ಸಭೆಯ ಮುಂದೆ ಹೇಳಿ ಸರ್ಕಾರದ ಗಮನವನ್ನು ಹರಿಸುವುದಕ್ಕೆ ಕೆಲವಾರು ಟೀಕೆಗಳನ್ನು ಮಾಡಿದ್ದಾರೆ. ರಚನಾತ್ಮಕವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ಕೂಡ ನನ್ನ ಪತಿಯಿಂದ ಸರಕಾರದ ಪತಿಯಿಂದ ಧನ್ಯವಾದಗಳನ್ನರ್ಪಿಸುತ್ತೇನೆ. ಬಹುಶಃ ಪಕ್ಷ ಪಕ್ಷಗಳು ವಿಷಯಗಳನ್ನು ಚರ್ಚಿಸಿ ಚರ್ಚೆಯ ಮುಖಾಂತರ ಸರಕಾರ ಮಾತಡತಕ್ಕಂತಹ ತಪ್ಪುಗಳನ್ನು ಸಾರ್ವಜನಿಕರ ಗಮನಕ್ಕೆ ಈ ಸಭೆಯ ಮುಖಾಂತರ ತಂದು ವಿಷಯಗಳನ್ನು ತೀರ್ಮಾನ ಮಾಡತಕ್ಕಂತಹ ಪದ್ಧತಿ ಇದೆ. ಅನೇಕ ವಿಚಾರಗಳನ್ನು ಚರ್ಚಿಸಿ ನಿನ್ನೆಯ ದಿವಸ ತೀರ್ಮಾನ ಮಾಡತಕ್ಕಂತಹ ಅವಕಾಶ ದೊರಕಿರದ್ದರಿಂದ ಅದಕ್ಕೆ ನಾನು ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಬಹುಶಃ ಇದು ಚರ್ಚೆಯಾಗದೇ ಇದಿದ್ದಪಕ್ಷದಲ್ಲಿ ನನಗೆ ಸಮಾಧಾನವಾಗುತ್ತಿರಲಿಲ್ಲ. ಬಹುಶಃ ನಮ್ಮ ಸ್ನೇಹಿತರಿಗೂ ಇವತ್ತು ಚರ್ಚೆಮಾಡುವುದರ ಮುಖಾಂತರ ಎಷ್ಟು ತೃಪ್ತಿಯಾಗಿದೆಯೋ ಅಷ್ಟೇ ತೃಪ್ತಿ ನನಗೂ ಕೂಡಾ ಆಗಿದೆ ಎಂದು ಹೇಳದೆ ವಿಧಿಯಿಲ್ಲ ಈ ಪೋಲೀಸ್ ಇಲಾಖೆಯ ಮೇಲೆ ಭಾಷಣ ಮಾಡಿದಂಥ ಶ್ರೀಮತಿ ನಾಗರತ್ನಮ್ಮ, ನಾಯಕಿಯವರು ಅವರಿಂದ ಹಿಡಿದು ಕೊನೆಗೆ ಭಾಷಣವನ್ನು ಮುಗಿಸಿದಂಥ ಶ್ರೀಮತಿ ಸುಮಾ ವಸಂತರವರೂ ಕೂಡಾ ಮಾಡಿದಂಥ ಭಾಷಣಗಳನ್ನು ನಾಲ್ಕಾರು ಭಾಗಗಳಾಗಿ ನಾವು ಮಾಡಿಕೊಳ್ಳ ಬಹುದು. ರಾಚಯ್ಯನವರು ಒಳ್ಳೆಯವರು ಇದ್ದಾರೆ, ಇಷ್ಟೊಂದು ಸಂಪೂರ್ಣವಾಗಿ ಒಳ್ಳೆಯವರು, ಆದರೆ ಇದನ್ನು ನಡೆಸಿಕೊಳ್ಳುವುದು ಕಷ್ಟ ಎಂದು ಹೇಳತಕ್ಕಂಥ ಒಳ್ಳೆಯ ಮಾತುಗಳನ್ನು ಹೇಳಿ ತಮಗೆ ತೊಂದರೆಯಾದರೆ ಬೇಗ ನಿರ್ಗಮಿಸುವುದು ಒಳ್ಳೆಯದು ಎಂದು ಶ್ರೀನಿವಾಸ್‌ರವರು ಕೂಡಾ ಇದೇ ಭಾಷೆಯಲ್ಲಿ ಊರಿಗೆ ನಿರ್ಗಮಿಸುವುದು ಒಳ್ಳೆಯದು ಎಂದು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆ ಮಾತನ್ನು ವೈಯಕ್ತಿಕವಾಗಿ ಎಂದು ಹೇಳಿ ಗೌರವವನ್ನು ಸೂಚಿಸಿ ನಿಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಹೇಳಿದ್ದಾರೆ ಬಹುಶಃ ಈ ಇಲಾಖೆಯಲ್ಲಿ ಅತ್ಯಂತ ಕೆಲವಾರು ಘಟನೆಗಳು ಮತ್ತು ಸಾರ್ವಜನಿಕರಿಗೆ ಆದಂಥ ತೊಂದರೆಗಳ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಆ ಮಾತನ್ನು ಆಡಿದ್ದಾರೆ. ಬಹುಶಃ ನಾನು ಅದನ್ನು ತಿದ್ದುಕೊಳ್ಳುವುದಕ್ಕೆ ಮತ್ತೆ ಅವಕಾಶ ಇದೆ ಎಂದು ತಿಳಿದು ಕೊಂಡು ಈ ಸಭೆಯ ಮುಂದೆ ನಿಂತು ಉತ್ತರವನ್ನು ಕೊಡುತ್ತಿದ್ದೇನೆ. ಈ ದಿನ ವರ್ಷಂಪ್ರತಿ ಜನಸಂಖ್ಯೆ ಏರುತ್ತಿರತಕ್ಕಂತಹ ಈ ಜನ ಸಂಖ್ಯೆಯ ಮೇಲೆ ಇರತಕ್ಕಂಥ ಒತ್ತಡಗಳು ಇವುಗಳನ್ನೆಲ್ಲಾ ನೋಡಿದಾಗ ನಾವು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಇದ್ದೇವೆ. ನಾವು ಹೊಸ ಹೊಸ ಕಾಯ್ದೆಗಳನ್ನು ಮಾಡಿದ್ದೇವೆ ಹೊಸ ರೀತಿಯ ರಿಫಾರ್ಮ್ಸ್‌ಗಳನ್ನು ಕೂಡಾ ಅನೇಕ ಕಾಯ್ದೆಗಳ ಮುಖಾಂತರ ತಂದಿದ್ದೇವೆ. ಅವುಗಳನ್ನು ಜಾರಿಗೆ ಕೊಡತಕ್ಕಂಥ ಸಂದಿಗ್ಧ ಸಮಯದಲ್ಲಿ ಬಹುಶಃ ಪೋಲೀಸ್ ಇಲಾಖೆಯ ಮೇಲೆ ಹೆಚ್ಚು ಒತ್ತಡ ಗಳನ್ನು ಹಾಕಿ ಈ ಒತ್ತಡಗಳಿಂದ ಅನೇಕ ಜನರ ಮೇಲೆ ಇರತಕ್ಕಂಥ ಒತ್ತಡಗಳು, ಉದ್ಭವಿಸತಕ್ಕಂಥ ಅನೇಕ ಸಂದರ್ಭಗಳು, ಆ ಸಂದರ್ಭಗಳಿಂದ ಪ್ರತೀ ವರ್ಷ ಸ್ವಲ್ಪಮಟ್ಟಿಗೆ ಈ ಅಪರಾಧಗಳು ಹೆಚ್ಚುತ್ತಾ ಇರತಕ್ಕಂಥದ್ದು ಸ್ವಾಭಾವಿಕ, ಹೆಚ್ಚುತ್ತಿರುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ನೋಡಿದರೆ ಕಡಿಮೆಯಾಗುವ

ಪರಿಸ್ಥಿತಿಯನ್ನು ನೋಡಲಿಲ್ಲ. ಆದುದರಿಂದ ನಿಯಂತ್ರಿಸತಕ್ಕಂಥದ್ದು, ಕಡಿಮೆ ಮಾಡತಕ್ಕಂಥ ಮತ್ತು ಈಗ ಇರತಕ್ಕಂಥ ಈ ಅಪರಾಧಗಳನ್ನು ಕಂಡುಹಿಡಿಯುವುದಕ್ಕೆ ಎಷ್ಟು ಶ್ರಮವನ್ನು ವಹಿಸಿ ಕೆಲಸ ಮಾಡಿದ್ದೇವೆಯೋ ಅವುಗಳನ್ನು ನೋಡಿದಾಗ ಅವರಿಗೆ ಅನಿಸುತ್ತದೆ, ಬಹುಶಃ ಅಂಕಿಅಂಶಗಳನ್ನು ಕೊಟ್ಟಮೇಲೆ ಪ್ರಯತ್ನವನ್ನು ಮಾಡಿದ್ದಾರೆ, ಅವರ ಮಿತಿಮೀರಿ ಆಗಿರತಕ್ಕಂಥ ವಿಷಯ ಎಂದು ಸಮಾಧಾನಪಟ್ಟುಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಈ ದೃಷ್ಟಿಯಲ್ಲಿ ಹೇಳಲೇ ಹೋಗಿದ್ದರೆ ಪೊಲೀಸ್ ಇಲಾಖೆಯಲ್ಲಿ ಇವತ್ತು ಸಂಖ್ಯೆಯನ್ನು ನಾವು ನೋಡಿದಾಗ ೯೦೦ ಜನರಿಗೆ ಒಬ್ಬರು ಪೊಲೀಸರು ಇದ್ದಾರೆ. ಹೀಗೆ ನಾವು ದಕ್ಷಿಣ ಭಾಗದ ಮಹಾರಾಷ್ಟ್ರ, ಆಂಧ್ರ ಮತ್ತು ದಕ್ಷಿಣದ ಮಹಾರಾಷ್ಟ್ರ ಕೇರಳಗಳನ್ನು ಹೋಲಿಸಿ ನೋಡಿದಾಗ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಮನುಷ್ಯ ಇಷ್ಟು ಜನರನ್ನು ನೋಡಿಕೊಳ್ಳುವುದಕ್ಕೆ ಇರುವುದರಿಂದ ಈ ಅಪರಾಧಗಳನ್ನು ನಿಯಂತ್ರಿಸುವುದಕ್ಕೆ, ಕಂಡುಹಿಡಿಯುವುದಕ್ಕೆ ಸ್ವಲ್ಪಮಟ್ಟಿಗೆ ಹೆಚ್ಚು ಶ್ರಮವಾಗುತ್ತದೆ. ಅದೇ ರೀತಿಯಲ್ಲಿ ಆ ಪೊಲೀಸರ ಮೇಲೆ ಇರತಕ್ಕಂಥ ಕಾಲದ ಒತ್ತಡ ಏನು ಇದೆ, ಬೇರೆಯವರಿಗೆ ೮-೧೦ ಗಂಟೆ ಆದರೆ ಇವರಿಗೆ ೨೪ ಗಂಟೆಗಳೂ ಇರಬೇಕಾಗಿರುವುದರಿಂದ ಸ್ವಲ್ಪಮಟ್ಟಿಗೆ ಹೆಚ್ಚು ಶ್ರಮ ಇದೆ. ಅವರಿಗೆ ಒಂದು ರೀತಿಯಲ್ಲಿ ರಿಲೀಫ್ ಕೊಡತಕ್ಕಂಥ ಒಂದು ಕಾರ್ಯವನ್ನು ಮಾಡಿದರೆ ಇನ್ನೂ ದಕ್ಷತೆಯಿಂದ ಮಾಡುತ್ತಾರೆ, ಹಾಗೆಯೇ ಸೌಲಭ್ಯಗಳನ್ನು, ಸವಲತ್ತುಗಳನ್ನು ಕೊಡಬೇಕೆಂದು ಕೆಲವರು ಮಾತನಾಡಿದ್ದಾರೆ. ಈವೊತ್ತಿನ ದಿವಸ ಡಿಸಿಪ್ಲಿನ್, ಇಂಟಗ್ರಿಟಿ ಹಾನೆಸ್ಟಿ ಕ್ರೈಟೀರಿಯಾ ಎಷ್ಟು ಇರಬೇಕೋ ಅಷ್ಟು ಬಾರದೆ ಇರುವುದಕ್ಕೆ ಸಾಧ್ಯವಾಗದೇ ಇರಬಹುದು. ಆದರೆ ಎಷ್ಟೋ ಜನ ಇದ್ದಾರೆ. ಅಂಥವರನ್ನು ಆಡಳಿತ ಪಕ್ಷದವರಾಗಲಿ, ಆ ಪಕ್ಷದವರಾಗಲಿ ಗುರುತಿಸಬಹುದು. ಸುಮಾರು ೬೬ ಸಾವಿರ ಜನರಲ್ಲಿ ಎಷ್ಟು ಜನ ಪೊಲೀಸಿನವರು ಈ ರೀತಿಯಾಗಿ ಒಳ್ಳೆಯ ಜನ ಯಾರು ಇದ್ದಾರೆ ಎಂದು ಲೆಕ್ಕ ಹಾಕಿ ನೋಡಿದಾಗ ಅದರಲ್ಲಿ ಒಳ್ಳೆಯವರನ್ನು ನಾವು ಗುರುತಿಸಿ ಹಾಗೆ ಅವರಿಗೆ ನಾವು ತಕ್ಕ ಪ್ರೋತ್ಸಾಹ ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಈ ದೃಷ್ಟಿಯಿಂದ ನಾನು ಹೇಳುವುದಾದರೆ ಈ ಇಲಾಖೆಯಲ್ಲಿ ನಿಯಂತ್ರಣ ಮಾಡುವುದಕ್ಕೆ ಮಹಾನಿರ್ದೇಶಕರು ಒಬ್ಬರೇ ಒಬ್ಬರು ಇರಬೇಕೇ ವಿನಾ ಅವರ ಡೈರೆಕ್ಷನ್‌ನಲ್ಲಿ ಎಲ್ಲವೂ ನಡೆಯಬೇಕೇ ವಿನಾ ಇನ್ನು ಉಳಿದಿರತಕ್ಕಂಥ ಅಧಿಕಾರಿಗಳ ಕೈಯಲ್ಲಿ ಸ್ಪೆಷಲ್ ಐ. ಜಿ. ಪಿ. ಆಗಲಿ ಅಥವಾ ಡೆಪ್ಯೂಟಿ ಕಮೀಷನರ್ ಕೈಯಲ್ಲಾಗಲಿ ಹಿಂದೆ ಇದ್ದ ಹಾಗೆ ಕೆಲಸ ಮಾಡಬೇಕಾಗಿದೆ. ಈಗ ಬೇರೆ ಬೇರೆ ಗ್ರೂಪ್ ಆಗಿದೆ ಎಂದು ಶ್ರೀ ಆರ್. ವೆಂಕಟರಾಮಯ್ಯನವರು ಮಾತನಾಡುವಾಗ ವ್ಯಕ್ತಪಡಿಸಿದರು. ಈ ರೀತಿಯಾಗಿ ಗುಂಪುಗಾರಿಕೆಯಾಗಿದೆ ಎಂದು ಸರ್ಕಾರಕ್ಕೆ ಯಾವ ಶಿಫಾರಸ್ಸೂ ಬಂದಿಲ್ಲ, ಯಾವ ವರದಿಯೂ ಬಂದಿಲ್ಲ. ಯಾವ ಒಂದು ಕೆಲಸವಾಗಬೇಕಾದರೂ ಕೂಡ ಈ ಒಬ್ಬ ಮಹಾನಿರ್ದೇಶಕರ ಮುಖಾಂತರ ಆಗಬೇಕು ಎನ್ನುವ ಸಮ್ಮತಿ ಇರುವುದರಿಂದ ಇದರಲ್ಲಿ ಗುಂಪುಗಾರಿಕೆಗೆ ಅವಕಾಶ ಇಲ್ಲ. ಆ ರೀತಿಯಾದ ಗುಂಪುಗಾರಿಕೆ ಇದಿದ್ದರೆ ಯಾವ ಕಾನ್‌ಸ್ಟೇಬಲ್ ಆಗಲಿ, ಯಾವ ಎಸ್.ಐ. ಆಗಲಿ ಯಾವ ಇನ್‌ಸ್ಪೆಕ್ಟರಾಗಲಿ ಅವರ ಮೇಲ್ಪಟ್ಟವರಾಗಲಿ ಸರ್ಕಾರದ ನಿಯಮಾವಳಿ ಪ್ರಕಾರ ಕೆಲಸ ಮಾಡುವುದಕ್ಕಾಗುವುದಿಲ್ಲ. ಬೇರೆ ಯಾರಾದರೂ ಒತ್ತಡ ತಂದು ಇವರು ತಪ್ಪು ಮಾಡಿದ್ದಾರೆ ಎಂದು ಹೇಳತಕ್ಕಂಥ ಒಂದು ಅಭ್ಯಾಸ ಮಾಡಿಕೊಂಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಾನ್ಯ ವಿರೋಧಪಕ್ಷದ ನಾಯಕಿಯಾದ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಮೊದಲನೇ ಸಾರಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್ ಎಲೆಕ್ಷನ್‌ನಲ್ಲಿ ಯಾರೂ ನಮ್ಮ ಪಕ್ಷಕ್ಕೆ ಸಹಾಯ ಮಾಡಲಿಲ್ಲ, ಯಾರು ನಮ್ಮನ್ನು ಬೆಂಬಲಿಸಲಿಲ್ಲ ಅವರ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದರು. ಅದನ್ನು ಲೆಕ್ಕ ಹಾಕಿ ನೋಡಿದಾಗ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್ ಚುನಾವಣೆಗೆ ಸಂಬಂಧಪಟ್ಟ ಹಾಗೆ ಎಷ್ಟು ವಿಷಯಗಳಲ್ಲಿ ಕೇಸುಗಳನ್ನು ತೆಗೆದುಕೊಂಡಿದ್ದೇವೆ ಎನ್ನುವುದನ್ನು ಲೆಕ್ಕ ಹಾಕಿ ನೋಡಿದ ಪಕ್ಷದಲ್ಲಿ ಜಿಲ್ಲಾ ಪರಿಷತ್ ಮಟ್ಟಿಗೆ ಹೇಳುವುದಾದರೆ ಹೆಚ್ಚು ಕೇಸುಗಳನ್ನು ನಾವು ತೆಗೆದುಕೊಂಡಿಲ್ಲ ಅಲ್ಲಿ ಎಲೆಕ್ಷನ್ ಆಗುವುದಕ್ಕಿಂತ ಮೊದಲು ಘಟನೆಗಳು ಆಗಿರುವುದು ಬಹಳ ಕಡಿಮೆಯಾಗಿದೆ. ಆದರೆ ಇದರ ಚುನಾವಣೆಯಾದಮೇಲೆ ಅಲ್ಲಿ ಇಲ್ಲಿ ಘಟನೆಗಳು ಆಗುತ್ತಾ ಇವೆ. ಅದಕ್ಕೋಸ್ಕರ ಅವನ್ನೇ ದೊಡ್ಡದನ್ನಾಗಿ ಮಾಡಿಕೊಂಡು ನಾವು ಸೇಡು ತೀರಿಸಿಕೊಳ್ಳುತ್ತಿದ್ದೇವೆನ್ನುವ ಭಾವನೆ ಹೊಂದಿರುವುದು ಸರಿಯಲ್ಲ ಎಂದು ಹೇಳುತ್ತೇನೆ. ನಾವು ಯಾವ ಸಂದರ್ಭದಲ್ಲೂ ಕೂಡ ಪಕ್ಷಪಾತ ಇಲ್ಲದೆ ಕೆಲಸ

ಮಾಡುತ್ತಿದ್ದೇವೆ. ನಮ್ಮ ಇಲಾಖೆಯಲ್ಲಿ ಯಾರಾದರೂ ಲೋಪದೋಷ ಮಾಡಿದ್ದರೆ ಅವುಗಳನ್ನು ಸರಿಪಡಿಸುವುದಕ್ಕೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ತಿಳಿಸಿದ್ದೇನೆ. ನಮ್ಮ ಪಕ್ಷದವರೇ ಹೇಳಲಿ, ನಿಮ್ಮ ಪಕ್ಷದವರೇ ಹೇಳಲಿ ಒಬ್ಬೊಬ್ಬರಿಗೆ ಒಂದೊಂದು ಆಜ್ಞೆ ಮಾಡಿಲ್ಲ. ಶ್ರೀಮತಿ ನಾಗರತ್ನಮ್ಮನವರು ಗುಂಡ್ಲುಪೇಟೆಯಲ್ಲಿ ಸಣ್ಣಪುಟ್ಟ ಘಟನೆ ನಡೆದುದನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಹೇಳಿದ್ದಾರೆಂದು ನಾನು ಭಾವಿಸಿದ್ದೇನೆ. ಒಟ್ಟಿನಲ್ಲಿ ಹೇಳುವುದಾದರೆ ಅವರು ಇಷ್ಟಪಟ್ಟಂಥ ಅಧಿಕಾರಿಯನ್ನು ಅಲ್ಲೇ ಉಳಿಸಿದ್ದಾರೆ ಎಂದು ತಿಳಿದುಕೊಂಡಿದ್ದಾರೆ. ಹಾಗೇನೂ ಇಲ್ಲ. ಈ ಕಡೆಯವರೂ ಆ ಕಡೆಯವರೂ ಒಪ್ಪತಕ್ಕಂಥ ಅಧಿಕಾರಿಯನ್ನು ಅಲ್ಲಿ ಇಟ್ಟಿದ್ದೇವೆ ಎರಡು ವರ್ಷದಿಂದ ಅವರ ಮೇಲೆ ಯಾವರೀತಿಯಾಗಿಯೂ ಲೋಪದೋಷಗಳನ್ನು ಯಾರೂ ಹೇಳಿಲ್ಲ. ಇದನ್ನು ಅವರೇನಾದರೂ ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದು ಎಂದು ಭಾವಿಸುತ್ತೇನೆ. ಆರೀತಿಯಾದ ತಪ್ಪು ಭಾವನೆಗಳಿಗೆ ಅವಕಾಶ ಇಲ್ಲ ಎಂದು ನಾನು ಈ ಸಂದರ್ಭದಲ್ಲಿಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಸಂದರ್ಭದಲ್ಲಿ ನಮ್ಮ ಇಲಾಖೆಯ ವಿಷಯಗಳ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನನಗೆ ಈ ಇಲಾಖೆಯಲ್ಲಿ ಕಂಟ್ರೋಲೇ ಇಲ್ಲ, ನನಗೆ ಈ ಇಲಾಖೆಯನ್ನು ಅಷ್ಟು ದಕ್ಷತೆಯಿಂದ ನಡೆಸುವುದಕ್ಕೆ ಸಾಧ್ಯವಿಲ್ಲ ಎನ್ನುವ ವಿಷಯವಾಗಿ ಸಾಮಾನ್ಯವಾಗಿ ಎಲ್ಲರೂ ಮಾತನಾಡಿದರು. ಅದಕ್ಕೋಸ್ಕರ ಅವರಿಗೆ ನಾನು ಇದರ ಬಗ್ಗೆ ಈ ಇಲಾಖೆಯಲ್ಲಿ ನಾನು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೇನೆನ್ನುವುದನ್ನು ತಮ್ಮ ಮುಖಾಂತರ ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯಲ್ಲಿ ವಿಚಾರಣೆಗೆ ಒಳಪಟ್ಟವರು, ಎಸ್.ಪಿ ಇಬ್ಬರು, ಡಿ.ಎಸ್.ಪಿ. ೧೫ ಜನ, ಪೊಲೀಸ್ ಇನ್ಸ್‌ಪೆಕ್ಟರ್ ೪೭ ಜನ, ಸಬ್ ಇನ್ಸ್‌ಪೆಕ್ಟರ್ಸ್ ೨೦೬ ಜನ, ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ಸ್ ೩೮ ಜನ ಹೆಡ್ ಕಾನ್‌ಸ್ಟೇಬಲ್ಸ್ ೨೬೨ ಜನ ಮತ್ತು ಕಾನ್‌ಸ್ಟೇಬಲ್ಸ್ ೬೪೭ ಜನ ಇತರರು. ೧೫, ಒಟ್ಟು ೧೨೩೧ ಜನರನ್ನು ವಿಚಾರಣೆಗೆ ಒಳಪಡಿಸಿದ್ದೇವೆ.

೬–೦೦ ಪಿ. ಎಂ.

ಈ ರೀತಿ ವಿಚಾರಣೆಗೆ ಒಳಪಟ್ಟ ಪ್ರಕರಣಗಳು ಎಷ್ಟು ಕಾಲದಿಂದ ಬಾಕಿ ಇವೆ ಎಂದರೆ, ೩ತಿಂಗಳಿಗಿಂತ ಕಡಿಮೆ ಇರುವಂಥ ಪ್ರಕರಣಗಳು 146, ೩ ತಿಂಗಳಿಗಿಂತ ಮೇಲ್ಪಟ್ಟು ಇರುವಂಥ ಪ್ರಕರಣಗಳು ೧೩೨, ಆರು ತಿಂಗಳಿಗಿಂತ ಮೇಲ್ಪಟ್ಟು ಇರುವಂಥ ಪ್ರಕರಣಗಳು ೨೭೯, ಒಂದು ವರ್ಷಕ್ಕಿಂತ ಮೇಲ್ಪಟ್ಟು ಇರುವಂಥ ಪ್ರಕರಣಗಳು ೨೯೨, ಎರಡು ವರ್ಷಗಳಿಗಿಂತ ಮೇಲ್ಪಟ್ಟು ಇರುವಂಥ ಪ್ರಕರಣಗಳು ೧೯೨. ಸಸ್ಪೆಂಡ್ ಮಾಡಿದರೆ ೬ ತಿಂಗಳೊಳಗಾಗಿ ವಿಚಾರಣೆ ಮಾಡಿ ಮುಗಿಸಬೇಕು ಇಲ್ಲದಿದ್ದರೆ ಕೆಲಸಕ್ಕೆ ಪುನಃ ತೆಗೆದುಕೊಳ್ಳಬೇಕೆಂದು ಸರ್ಕಾರದ ಆಜ್ಞೆ ಇದೆ ಈ ದೃಷ್ಟಿಯಿಂದ ನಾನು ಇಲ್ಲಿ ಯಾವ ಯಾವ ಪ್ರಕರಣಗಳು ಎಷ್ಟೆಷ್ಟು ಕಾಲದಿಂದ ಬಾಕಿ ಇವೆ ಎಂದು ಹೇಳುತ್ತಿದ್ದೇನೆ. ಈ ಮೇಲಿನ ಪ್ರಕರಣದಲ್ಲಿ ಇಬ್ಬರು ಡಿ. ಎಸ್. ಪಿ ಗಳನ್ನು, ೪ ಜನ ಪಿ. ಐ.ಗಳನ್ನು, ೨೦ ಜನ ಪಿ. ಎಸ್. ಐ. ಗಳನ್ನು, ೬ ಜನ ಎ. ಎಸ್. ಐ. ಗಳನ್ನು, ೪೩ ಜನ ಎಚ್. ಸಿ.ಗಳನ್ನು, ೯೩ ಜನ ಪಿ. ಸಿ. ಗಳನ್ನು ಹಾಗೂ ಇತರೇ ೯ ಜನರನ್ನು ಅಮಾನತ್ತಿನಲ್ಲಿಡಲಾಗಿದೆ. ಹೀಗೆ ಒಟ್ಟು ೧೭೭ ಜನರನ್ನು ಸಸ್ಪೆಂಡ್‌ನಲ್ಲಿಟ್ಟಿದ್ದೇವೆ. ಇವರಲ್ಲಿ ೩ ತಿಂಗಳಿಗಿಂತ ಕಡಿಮೆ ೪೬ ಜನ ೩ ತಿಂಗಳಿಗಿಂತ ಮೇಲ್ಪಟ್ಟು ೨೮ ಜನ, ೬ ತಿಂಗಳಗಿಂತ ಮೇಲ್ಪಟ್ಟು ೪೩ ಜನ, ಒಂದು ವರ್ಷಕ್ಕೆ ಮೇಲ್ಪಟ್ಟು ೪೬ ಜನ ಹಾಗೂ ಎರಡು ವರ್ಷಗಳಿಗೂ ಮೇಲ್ಪಟ್ಟು ೧೬ ಜನ ಸಸ್ಪೆಂಡ್‌ನಲ್ಲಿದ್ದಾರೆ. ಮಾನ್ಯ ಶ್ರೀನಿವಾಸ್ ಅವರು ಒಂದು ವಿಚಾರ ಹೇಳಿದರು. ಏನೆಂದರೆ ಇಬ್ಬರು ಪೊಲೀಸ್ ಅಧಿಕಾರಿಗಳು ಸರ್ಕಾರದ ಆದೇಶಕ್ಕೆ ವಿರುದ್ಧವಾದಂಥ ಹೇಳಿಕೆಗಳನ್ನು ಪತ್ರಿಕೆಗಳಿಗೆ ಕೊಟ್ಟಿದ್ದಾರೆ, ಈ ರೀತಿ ಹೇಳಿಕೆ ಕೊಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಯಾವ ರೀತಿಯಾದ ಕ್ರಮ ತೆಗೆದುಕೊಂಡಿಲ್ಲ ಹಾಗೂ ಇಂತಹ ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ಯಾವುದೇ ಹತೋಟಿ ಇಲ್ಲ ಎನ್ನುವ ಭಾವನೆಯಲ್ಲಿ ಮಾನ್ಯ ಶ್ರೀನಿವಾಸ್ ಅವರು ಮಾತನಾಡಿದ್ದಾರೆ. ಬಹುಶಃ ಅವರು ತುಮಕೂರು ಇಲ್ಲವೇ ಶಿವಮೊಗ್ಗ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಹೇಳಿರಬಹುದು. ಈ ವಿಚಾರದಲ್ಲಿ ನಾನು ನಮ್ಮ ಪೊಲೀಸ್ ಮಹಾ ನಿರ್ದೇಶಕರಿಗೆ ಒಂದು ಆದೇಶ ಕಳುಹಿಸಿ. ಈ ರೀತಿ ಪತ್ರಿಕಾ ಹೇಳಿಕೆ ಕೊಟ್ಟವರ ಬಗ್ಗೆ ಸೂಕ್ತ ಸಮಜಾಯಿಸಿ ಪಡೆದುಕೊಂಡು, ಅವರ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳಬೇಕೆಂದು ತಿಳಿಸಿದ್ದೇನೆ. ಕೆಲವು ಸಲ ತಪ್ಪು

ಮಾಡಿದವರನ್ನು ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳುವಂತಹ ವಿಷಯ ಸಂಬಂಧಪಟ್ಟವರಿಗೆ ಮುಟ್ಟಲು ೩ ದಿವಸಗಳ ಕಾಲ ತಡವಾಗಬಹುದು. ಇಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟವರ ಮೇಲೆ ತನಿಖೆ ಮಾಡಿ ಸರ್ಕಾರಕ್ಕೆ ವರದಿ ಕಳುಹಿಸಿಕೊಡಬೇಕೆಂದು ನಾವು ಆದೇಶ ಕೊಟ್ಟಿಗುತ್ತೇವೆ. ಈ ನಮ್ಮ ಆದೇಶದ ಪ್ರಕಾರ ಜಿಲ್ಲಾಮಟ್ಟದ ಅಧಿಕಾರಿಗಳಿಂದ ಸರ್ಕಾರಕ್ಕೆ ವರದಿ ಬರುವುದಕ್ಕೆ ಮೊದಲೇ ತನಿಖೆಗೆ ಒಳಗಾದವರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡಿದ್ದಾರೆಂದು ಇದೇ ಮಾನ್ಯ ಸದಸ್ಯರು ಹೇಳಿ, ಈ ಇಲಾಖೆಯ ಮೇಲೆ ಸರ್ಕಾರದ ಹತೋಟಿ ಇಲ್ಲವೇ ಅಥವಾ ಇದಕ್ಕೆ ಹೊರಗಿನ ಒತ್ತಡಕ್ಕೆ ಏನಾದರೂ ಇದೆಯೋ ಎಂದು ಕೇಳಿದರು. ಇದರ ಜೊತೆಗೆ ಜಿಲ್ಲಾ ಮಟ್ಟದ ಅಧಿಕಾರವನ್ನು ನೀವೇ ನಡೆಸಿಕೊಳ್ಳಿ ಎಂದು ಅಲ್ಲಿನ ಅಧಿಕಾರಿಗಳಿಗೆ ಏನಾದರೂ ನೀವು ಹೇಳಿದ್ದೀರಾ ಎಂದು ಸಹ ಕೇಳಿದರು. ಇಂತಹ ಒಂದು ಅಧಿಕಾರವನ್ನು ನಾನು ಯಾರಿಗೂ ಕೊಟ್ಟಿಲ್ಲ. ಅಂತಹ ಹೇಳಿಕೆಯನ್ನು ಸಹ ನಾನು ನೀಡಿಲ್ಲ. ನಮ್ಮ ಆದೇಶಕ್ಕೆ ವಿರುದ್ಧವಾಗಿ ಯಾರಾದರೂ ನಡೆದುಕೊಂಡಿದ್ದರೆ. ಅಂತಹವರಿಂದ ಸಮಜಾಯಿಸಿ ಕೇಳಿ, ಅವರು ಏನಾದರೂ ತಪ್ಪು ಮಾಡಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಅಧಿಕಾರ ನನಗಿದೆ. ಸಮಯ ಬಂದಾಗ ಅದನ್ನು ಜಾರಿ ಮಾಡಬಲ್ಲೆ ಎಂದು ನಾನು ತಮಗೆ ಹೇಳುತ್ತಿದ್ದೇನೆ. ಈಗ ನಮ್ಮ ಪೋಲೀಸ್ ಇಲಾಖೆಯಲ್ಲಿ ತಪ್ಪು ಮಾಡಿದಂಥ ೧೧೮ ಜನರನ್ನು ಕೆಲಸದಿಂದ ವಜಾ ಮಾಡಲಾಗಿದೆ. ೩೨ ಜನರನ್ನು ಕೆಲಸದಿಂದ ರಿಮೂವ್ ಮಾಡಲಾಗಿದೆ. ೪೪ ಜನರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲಾಗಿದೆ. ೩೦ ಜನರನ್ನು ಅವರ ಈಗಿನ ಹುದ್ದೆಯಿಂದ ಕೆಳಗೆ ಇಳಿಸಲಾಗಿದೆ. ೨೬೩ ಜನರ ವೇತನವನ್ನು ಸ್ಥಗಿತಗೊಳಿಸಲಾಗಿದೆ. ೪೩೧ ಜನರ ಬಡ್ತಿಯನ್ನು ಮುಂದಕ್ಕೆ ಹಾಕಲಾಗಿದೆ. ೪೨ ಜನರ ಮೇಲೆ ದೋಷಾರೋಪಣೆಯನ್ನು ಹೊರಿಸಲಾಗಿದೆ. ೯೨ ಜನರ ವೇತನವನ್ನು ಕಡಿತ ಮಾಡಲಾಗಿದೆ. ಇಲ್ಲವೇ ಜುಲ್ಮಾನೆ ವಿಧಿಸಲಾಗಿದೆ. ದೋಷಾರೋಪಣೆಯಿಂದ ವಿಮುಕ್ತರಾದವರು ಕೇವಲ ೮ ಜನರು. ಕೇವಲ ೧೬ ಜನರ ಮೇಲೆ ವಿಚಾರಣೆಯನ್ನು ಕೈಬಿಡಲಾಗಿದೆ ಈ ರೀತಿಯಿಂದ ನಮ್ಮ ಪೋಲೀಸ್ ಇಲಾಖೆಯಲ್ಲಿ ಶಿಸ್ತನ್ನು ಕಾಪಾಡಿಕೊಂಡು ಬರುವುದಕ್ಕಾಗಿ ಹಾಗೂ ತಪ್ಪು ಮಾಡಿದರಿಗೆ ಶಿಕ್ಷೆ ವಿಧಿಸುವುದಕ್ಕಾಗಿ ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಿದ್ದೇವೆ. ಈ ಸಮಿತಿಯವರು ತಪ್ಪು ಮಾಡಿದವರನ್ನು ವಿಚಾರಣೆಗೆ ಒಳಪಡಿಸಿ, ಅವರು ಮಾಡಿದ ತಪ್ಪಿಗೆ ಅನುಗುಣವಾಗಿ ಶಿಕ್ಷೆಯನ್ನು ವಿಧಿಸುತ್ತಾರೆ. ಇಂತಹ ಒಂದು ಕ್ರಮವನ್ನು ನಮ್ಮ ಸರ್ಕಾರ ಕೈಕೊಂಡಿದೆ. ಇದರಲ್ಲಿ ಯಾವ ವಿಧವಾದಂತಹ ನಿರ್ದಾಕ್ಷಿಣ್ಯವಾಗಲೀ ಪಕ್ಷಪಾತಕ್ಕಾಗಲೀ ಒಳಗಾಗದೇ ಕ್ರಮ ತೆಗೆದುಕೊಂಡಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕಿಯವರಿಗೂ ಮತ್ತು ಇತರ ಸಹೋದ್ಯೋಗಿಗಳಿಗೂ ಅದು ವೇದ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ಇದರಲ್ಲಿ ಯಾವ ಯಾವ ಮಟ್ಟದ ಅಧಿಕಾರಿಗಳಿದ್ದಾರೆ ಎಂಬುದನ್ನು ಇಲ್ಲಿ ಹೇಳಬಯಸುತ್ತೇನೆ ವಜಾ ಆದವರು ೭೬ ಜನ ಸಬ್ ಇನ್ಸ್‌ಪೆಕ್ಟರ್. ೨೧೧ ಹೆಡ್ ಕಾನ್‌ಸ್ಟೇಬಲ್ಸ್‌ಗಳು, ಪಿ. ಸಿ. ೭೭ ಜನ ತೆಗೆದುಹಾಕಲ್ಪಟ್ಟವರು ಇಬ್ಬರು ಸಬ್‌ಇನ್ಸ್‌ಪೆಕ್ಟರ್ಸ್, ೯ ಜನ ಹೆಡ್ ಕಾನ್‌ಸ್ಟೇಬಲ್ಸ್, ೨೧ ಜನ ಕಾನ್‌ಸ್ಟೇಬಲ್ಸ್, ಕಡ್ಡಾಯ ನಿವೃತ್ತಿ ಮಾಡಿರತಕ್ಕಂತಹವರು ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್. ೨ ಪಿ. ಎಸ್. ಐ. ಎ. ಎಸ್. ಐ. ಒಬ್ಬರು, ಹೆಚ್. ಸಿ. ೧೮, ಪಿ. ಸಿ. ೨೨, ವೇತನ ಕಡಿತವಾದಂತಹವರು, ಬಡ್ತಿ ಮುಂದೂಡಿಕೆ ಯಾದಂತವರು, ಸೆನ್ಸಾರ್ ಆದಂತಹವರು ಈ ಎರಡೂ ಕ್ರಮಗಳನ್ನು ಎ. ಎಸ್. ಪಿ ಯಿಂದ ಹಿಡಿದು ಕೆಳಗಿನ ವರ್ಗಗಳಲ್ಲಿ ಈ ರೀತಿಯಾದಂತಹ ಕ್ರಮಗಳನ್ನು ತೆಗೆದುಕೊಂಡಿದೆ. ಪೋಲೀಸ್ ಸಿಬ್ಬಂದಿಯ ಮೇಲೆ ಇಲಾಖೆಯ ವಿಚಾರಣೆಯನ್ನು ೮೪ ರಲ್ಲಿ ನಿಯಮಿಸಲ್ಪಟ್ಟಿದ್ದು ೧೯೮೫ ರಲ್ಲಿ ೫೩. ೮೬ ರಲ್ಲಿ ೬೨೮, ಇತ್ಯರ್ಥ ಪಡಿಸಿರುವ ಇಲಾಖಾ ವಿಚಾರಣೆಗಳ ಸಂಖ್ಯೆ ೧೯೮೪ ರಲ್ಲಿ ೨೪೯, ೮೫ರಲ್ಲಿ ೩೯, ೧೯೮೬ ರಲ್ಲಿ ೬೭, ಬಾಕಿ ಇರುವ ಇಲಾಖಾ ವಿಚಾರಣಾ ಸಂಖ್ಯೆ ೧೯೮೪ ರಲ್ಲಿ ೪೪೧ ೧೯೮೫ ರಲ್ಲಿ ೫೯೩ ೧೯೮೬ ರಲ್ಲಿ ೫೯೩, ವಿಚಾರಣೆಗೆ ಒಳಗಾದ ಅಧಿಕಾರಿಗಳ ಸಂಖ್ಯೆ ೧೯೮೪ ರಲ್ಲಿ ೫೧೩, ೧೯೮೫ ರಲ್ಲಿ ೫೭೪, ೧೯೮೬ ರಲ್ಲಿ ೬೯೯. ೪೨೭ ಜನರ ಮೇಲೆ ಅಂತಿಮ ತೀರ್ಮಾನ ತೆಗೆದುಕೊಂಡಿದ್ದೇವೆ. ೧೯೮೫ರಲ್ಲಿ ೪೨ ಜನರ ಮೇಲೆ. ೧೯೮೬ರಲ್ಲಿ ೭೦ ಜನರ ಮೇಲೆ ಇಲಾಖೆಯಲ್ಲಿ ಶಿಸ್ತಿನ ಕ್ರಮ ತೆಗೆದುಕೊಂಡಿದ್ದೇವೆ ದೋಷಾರೋಪಣೆ ಬಂದಿದ್ದರೆ ಅದನ್ನು ಅನುಸರಿಸಿ ಅದಕ್ಕೆ ತಕ್ಕ ಹಾಗೆ ಇಲಾಖೆಯಲ್ಲಿ ಸೂಕ್ತ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಬಹುಶಃ ಪೋಲೀಸರು ಎಲ್ಲಾ ಕಾಲದಲ್ಲೂ ಕೂಡ ತಮ್ಮ ವರ್ತನೆಯನ್ನು ಮೀರಿ ಕೈಗೆ ಕಾನೂನು ತೆಗೆದುಕೊಂಡಿದ್ದರೆ ಅದನ್ನು ವಿಚಾರಣೆ ನಡೆಸಿ ಅದಕ್ಕೆ ತಕ್ಕಂತಹ ಶಿಕ್ಷೆಯನ್ನು ವಿಧಿಸುವುದಲ್ಲದೆ ಕೇವ

ಸಂದರ್ಭಗಳಲ್ಲಿ ಅವರಿಗೆ ವಿನಾಯಿತಿಯನ್ನು ಕೂಡ ಕೊಡಲಾಗಿದೆ. ವಿಚಾರಣಾ ಆಯೋಗದ ಬಗ್ಗೆ ಮಾತನಾಡುವಾಗ ಆಗಲೀ ನ್ಯಾಯಾಂಗ ತನಿಖೆಯ ಬಗ್ಗೆ ಮಾತನಾಡುವಾಗ ಆಗಲೀ ಇಲಾಖೆಯ ತನಿಖೆಗಳ ಬಗ್ಗೆಯಾಗಲೀ ಸಂಬಂಧಪಟ್ಟ ವಿಷಯ ಚರ್ಚೆಗೆ ಬಂದಾಗ ಇದರ ಬಗ್ಗೆ ಹೇಳುತ್ತೇನೆ. ಗೋಲೀಬಾರ್ ವಿಷಯದಲ್ಲಿ ಹೇಳಿದರೆ......

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ಬಸವಲಿಂಗಪ್ಪ.— ಯಾರು ಯಾರಿಗೆ ಶಿಕ್ಷೆ ಕೊಟ್ಟಿದ್ದೀರಿ, ಯಾವ ಅಧಿಕಾರಿಗಳಿಗೆ ಶಿಕ್ಷೆ ಕೊಟ್ಟಿದ್ದೀರಿ ಎಂಬ ಬಗ್ಗೆ ಪಟ್ಟಿಯನ್ನು ಕೊಟ್ಟಿದ್ದೀರಿ, ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಮಧುಗಿರಿ ಮುಂತಾದ ಕಡೆಗಳಲ್ಲಿ ಗೋಲೀಬಾರ್ ಆಗುವುದಕ್ಕೆ ಅವಕಾಶ ಏಕೆ ಆಯಿತು ನಿಮ್ಮ ಶಿಕ್ಷೆಗೆ ಅವರೇನು ಹೆದರುವುದಿಲ್ಲವೇ, ಅಂಜುವುದಿಲ್ಲವೇ ? ಶಿಕ್ಷೆ ಕೊಟ್ಟರೆ ಕೊಡಲಿ, ನಾವು ಮಾಡುವುದನ್ನು ಮಾಡೋಣ ವೆಂದು ಹೇಳುತ್ತಿದ್ದಾರೆಯೋ ?

ಶ್ರೀ ಬಿ. ರಾಚಯ್ಯ.—ಇವತ್ತು ಗೋಲಿಬಾರ್ ಆದಂಥ ಸಂದರ್ಭದಲ್ಲಿ ನ್ಯಾಯಾಂಗ ತನಿಖೆ ಗಳನ್ನು ಮಾಡಿಸುವುದಕ್ಕಾಗಿ ಆಜ್ಞೆಗಳನ್ನು ಹೊರಡಿಸಲಾಗಿದೆ. ನ್ಯಾಯಾಂಗ ತನಿಖೆಯ ವ್ಯಾಪ್ತಿಯಲ್ಲಿ ಗೋಲಿಬಾರ್ ಮಾಡತಕ್ಕ ಅವಶ್ಯಕತೆ ಏತಕ್ಕೆ ಬಂತು ? ಅಂಥ ಸಂದರ್ಭವಲ್ಲಿ ಏತಕ್ಕೆ ಉಂಟಾಯಿತು ಎಂಬುದನ್ನು ವಿಚಾರಣೆಯಾದ ಮೇಲೆ ಹೇಳುತ್ತೇನೆ. ಈ ಸಂದರ್ಭದಲ್ಲಿ ಹೇಳಿದರೆ ಬಹಳ ಹತ್ತಿರ ವಾಗುತ್ತದೆ. ಪಾವಗಡದಲ್ಲಿ ಆದಂಥ ಗೋಳಿಬಾರ್ ವಿಷಯದಲ್ಲಿ ಈಗಾಗಲೇ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಮತ್ತು ಮೂರು ಜನ ಪೋಲೀಸ್ ಪೇದೆಗಳು ಒಟ್ಟು ೫ ಜನರನ್ನು ಅಮಾನತ್ತಿ ನಲ್ಲಿಡಲಾಗಿದ್ದು ಇವರ ಮೇಲೆ ಕ್ರಿಮಿನಲ್ ಕೇಸು ಕೂಡ ಹಾಕಲಾಗಿದ್ದು, ಅದು ಕೋರ್ಟಿನಲ್ಲಿ ನಡೆಯುತ್ತಿದೆ. ಭಯ ಏತಕ್ಕೆ ಇಲ್ಲ ಅಂದರೆ, ಅನೇಕ ಸಂದರ್ಭದಲ್ಲಿ, ಕ್ರಿಮಿನಲ್ ಕೇಸ್‌ಗಳಲ್ಲಿ ಶಿಕ್ಷೆ ಅನುಭವಿಸಿ. ಮತ್ತೆ ಕಳ್ಳತನ ಮಾಡತಕ್ಕವರು ಇವತ್ತು ಇದ್ದಾರೆ. ಅದೇ ಟೈಪ್‌ನಲ್ಲಿ ಇಲ್ಲೂ ಕೂಡ ಅಂಥವರೇ ಇರಬಹುದು. ಮೈಸೂರಿನಲ್ಲಿ, ಬೆಂಗಳೂರಿನಲ್ಲಿ, ಆಳಂದ್‌ನಲ್ಲಿ, ತುಮಕೂರಿನಲ್ಲಿ ಇತ್ತೀಚಿಗೆ ಪಾವಗಡದಲ್ಲಿ ಒಟ್ಟು ೫ ಕಡೆ ಗೋಳಿಬಾರು ಆಗಿದೆ. ಅದಕ್ಕೆ ತಕ್ಕಹಾಗೆ ಈಗಾಗಲೇ ಉತ್ತರ ಗಳನ್ನು ಕೊಟ್ಟಿದ್ದೇನೆ. ಆಗಿದ್ದು ಆಗಿಹೋಗಿದೆ. ಸತ್ತವರ ಕುಟುಂಬಗಳಿಗೆ, ಗಾಯಗೊಂಡವರಿಗೆ, ಆಸ್ತಿಪಾಸ್ತಿಗೆ ನಷ್ಟ ಸಂಭವಿಸಿದ ಸಂದರ್ಭಗಳಲ್ಲಿ ಪರಿಹಾರ ಕೊಡುತ್ತಾ ಬಂದಿದ್ದೇವೆ ಗೋಳಿಬಾರು ಮಾಡುವ ಮೂಲಕ ಸಂಪೂರ್ಣ ಶಾಂತಿ ತರುತ್ತೇವೆನ್ನುವ ನಂಬಿಕೆ ನನಗೆ ಇಲ್ಲ. ೧೨೭–೧೨೮ನೇ ಕ್ರಿಮಿನಲ್ ಪ್ರೊಸೀಜರ್ ಪ್ರಕಾರ ದೊಂಬಿಗಳು ನಡೆದಂಥ ಸಂದರ್ಭದಲ್ಲಿ ಪೋಲೀಸ್ ಇಲಾಖೆಯ ಅಧಿಕಾರಿಗಳು ಗಲಭೆಯನ್ನು ನಿಯಂತ್ರಿಸುವುದಕ್ಕೆ ಲಾಠಿಚಾರ್ಜು, ಟಿಯರ್ ಗ್ಯಾಸ್ ಮಾಡಿದಮೇಲೆ, ಕೊನೆಯ ಹಂತದಲ್ಲಿ ಮ್ಯಾಜಿಸ್ಟ್ರೇಟರ ಹತ್ತಿರ ಕರೆದುಕೊಂಡು ಬಂದು ಡಿಕ್ಲೇರ್ ಮಾಡಿಸಬೇಕು. ಇದು ಪೋಲೀಸ್ ಅಧಿಕಾರಿಗಳಿಗೆ ಪವರ್ಸ್ ಇಲ್ಲ ಜನರ ಪ್ರಾಣ ಸಂರಕ್ಷಣೆ ಮಾಡತಕ್ಕಂಥ ಸಂದರ್ಭದಲ್ಲಿ ಈ ರೀತಿಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ದೊಂಬಿ ನಿಯಂತ್ರಿಸುವುದಕ್ಕೆ ಕೊನೆ ಅಸ್ತ್ರವನ್ನಾಗಿ ಗೋಳಿಬಾರು ಉಪಯೋಗಿಸಬೇಕು. ನಾವು ರಬ್ಬರ್ ಗುಂಡು ಹಾರಿಸುತ್ತೇವೆಂದು ಹೇಳಿದ್ದೆವು. ಕೇಂದ್ರ ಸರ್ಕಾರ ರಬ್ಬರ್ ಗುಂಡು ತಯಾರು ಮಾಡುವುದಕ್ಕೆ ಸಿದ್ಧವಿಲ್ಲ. ಅವರಿಂದ ಬಂದಮೇಲೆ ರಬ್ಬರ್ ಗುಂಡು ಬಳಸಲಾಗುವುದು. ಈಗ ಇರತಕ್ಕಂಥಾದ್ದು ೩೦೩ ಗುಂಡು ಹಾರಿಸುವುದು. ಇಂಥ ಒಂದು ಪರಿಸ್ಥಿತಿ ಬರದಂತೆ ಜನಗಳು ಕೂಡ ಸಹಕರಿಸಬೇಕು. ರಾಜಕೀಯ ಪಕ್ಷಗಳವರು ಕೂಡ ದೊಂಬಿಗಳನ್ನು ನಿಯಂತ್ರಿಸುವ ಕೆಲಸ ಮಾಡಬೇಕು. ೮೨ ರಿಂದ ೮೭ರವರೆಗೆ ರಾಜ್ಯದಲ್ಲಿ ನಡೆದಂಥ ಗೋಲಿಬಾರುಗಳ ವಿವರ ಈ ರೀತಿ ಇದೆ.

೧೯೮೨ರಲ್ಲಿ ಕೋಮುಗಲಭೆ—೩ ಸಾರಿ, ಕಾರ್ಮಿಕರ ಮೇಲೆ ೩ ಸಾರಿ, ಪೋಲೀಸರ ವಿರುದ್ಧ ೪ ಸಾರಿ, ದುಷ್ಕರ್ಮಿಗಳ ವಿರುದ್ಧ ೩ ಸಾರಿ, ಅರಣ್ಯ ಅಪರಾಧಕ್ಕಾಗಿ ೩ ಸಾರಿ, ಭಾಷಾ ಚಳುವಳಿಯಲ್ಲಿ ೮ ಸಾರಿ, ರೈತರ ಮೇಲೆ ೬ ಸಾರಿ. ೧೯೮೩ರಲ್ಲಿ ಕೋಮುಗಲಭೆ—೨ ಸಾರಿ, ಕಾರ್ಮಿಕರ ಮೇಲೆ ೨ ಸಾರಿ, ದೊಂಬಿ ಸಂದರ್ಭದಲ್ಲಿ ೨ ಸಾರಿ, ಜಾತಿ ವೈಷಮ್ಯದಲ್ಲಿ ೧ ಸಾರಿ, ಶ್ರೀಗಂಧದ ಕಳ್ಳಸಾಗಾಣಿಕೆ ಯಲ್ಲಿ ೨ ಸಾರಿ, ದುಷ್ಕರ್ಮಿಗಳ ಮೇಲೆ ೧ ಸಾರಿ, ಇತರೆ ಸಂದರ್ಭದಲ್ಲಿ ೩ ಸಾರಿ. ೧೯೮೪ರಲ್ಲಿ ಕೋಮುಗಲಭೆ ೫ ಸಾರಿ, ಕಾರ್ಮಿಕರ ಮೇಲೆ ೧ ಸಾರಿ, ವಿದ್ಯಾರ್ಥಿಗಳ ಮೇಲೆ ೧ ಸಾರಿ, ಪ್ರಾಣಿಗಳ

ಬಲಿ ಸಂದರ್ಭದಲ್ಲಿ ೧ ಸಾರಿ, ಚುನಾವಣೆ ಪೂರ್ವದಲ್ಲಿ ೧ ಸಾರಿ, ಇನ್ನಿತರ ಸಂದರ್ಭದಲ್ಲಿ ೧೧ ಸಾರಿ. ೧೯೮೫ರಲ್ಲಿ—ಕೋಮುಗಲಭೆ ೫ ಸಾರಿ, ಜಾತಿ ವೈಷಮ್ಯ ೧ ಸಾರಿ, ಚುನಾವಣೆಯಲ್ಲಿ ೩ ಸಾರಿ, ಶ್ರೀಗಂಧದ ಕಳ್ಳಸಾಗಾಣಿಕೆಯಲ್ಲಿ ೫ ಸಾರಿ ಇತರೆ ಸಂದರ್ಭದಲ್ಲಿ ೧ ಸಾರಿ. ೧೯೮೬ರಲ್ಲಿ ಕೋಮುಗಲಭೆ ೫, ಗುಂಪು ಗಲಭೆ ೩, ಭಾಷಾ ಚಳುವಳಿ ೨, ಪೋಲೀಸರ ವಿರುದ್ಧ ೫, ದರೋಡೆ ಲೂಟಿ ೪ ಸಾರಿ, ಕಳ್ಳಸಾಗಾಣೆದಾರರ ಮೇಲೆ ೪ ಸಾರಿ ವನ್ಯ ಜೀವಿಗಳ ಮೇಲೆ ೨, ಇನ್ನಿತರ ಸಂದರ್ಭಗಳಲ್ಲಿ ೫, ಒಟ್ಟು ೩೦ ಸಾರಿಯಾಗಿದೆ. ಇನ್ನು ೧೯೮೭ರಲ್ಲಿ ಒಂದು ಸಾರಿ ಮೊನ್ನೆ ಕೋಮುಗಲಭೆ ಪೋಲೀಸರ ವಿರುದ್ಧ ವಾಗಿದುದ್ದು ಒಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಇದರ ಬಗ್ಗೆ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್‌ನಲ್ಲಿ ಕೊಟ್ಟಿದ್ದೀರಿ, ಹೆಚ್ಚು ಆಗಿದೆಯೋ, ಕಡಿಮೆಯಾಗಿದೆಯೋ ಎನ್ನುವ ಬಗ್ಗೆ ಕಂಪೇರಿಟೀವ್ ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ೧೯೮೫ಕ್ಕಿಂತಲೂ ೧೯೮೬ರಲ್ಲಿ ಜಾಸ್ತಿಯಾಗಿದೆ. ನಿಮ್ಮ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ ಪ್ರಕಾರ ೧೯೮೫ರಲ್ಲಿ ೧,೦೦೨ ಮರ್ಡರ್ಸ್ ಇದ್ದರೆ, ೧೯೮೬ಕ್ಕೆ ೧,೦೭೧ ಮರ್ಡರ್ಸ್ ಆಗಿದೆ. ಸುಮಾರು ೭೦ ಮರ್ಡರ್ಸ್ ಜಾಸ್ತಿಯಾದಂತೆ ಆಯಿತು. ಆದ್ದರಿಂದ, ಈಗ ತಾವು ಅದನ್ನು ಓದುವುದು ಬೇಡ. ಈಗ ತಾವು ಕಂಪೇರಿಟೀವ್ ಸ್ಟೇಟ್‌ಮೆಂಟ್ ಕೊಡುವುದು ಬೇಡ. ತಾವು ಕಡಿಮೆಯಾಗಿದೆ ಎಂದು ಹೇಳುತ್ತೀರಿ, ರಿಪೋರ್ಟ್‌ನಲ್ಲಿ ನೋಡಿದರೆ ಜಾಸ್ತಿಯಾಗಿದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಜಾಸ್ತಿಯಾಗಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇವೊತ್ತು ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಹೊರಗಿನಿಂದ ಬರುವವರ ಜನಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಆ ಜನರ ಮೇಲೆ ಒತ್ತಡಗಳು ಬರುತ್ತಿವೆ. ಪೋಲೀಸರಿಗೂ ಒತ್ತಡ ಇರುತ್ತದೆ. ಆ ಸನ್ನಿವೇಶ ಬಂದಾಗ ಇಂತಹ ಸಿಚ್ಯುಯೇಷನ್ ಉಂಟಾಗುತ್ತದೆ. ಕಳೆದವರ್ಷ ನಮ್ಮಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಇದರಲ್ಲಿ ಒಂದು ದೊಡ್ಡ ಸಮ್ಮೇಳನ ಆಯಿತು. ಯಾವುದೇ ಗಲಾಟೆ ಆಗಲಿಲ್ಲ, ಇನ್ನು ಕಳೆದಸಾರಿ ನಮ್ಮ ಪ್ರಧಾನಮಂತ್ರಿಗಳು ಬಂದಿದ್ದರು. ಆ ಸಂದರ್ಭದಲ್ಲಿಯೂ ಸಹ ಯಾವ ವಿಧವಾದ ಗಲಾಟೆ ಇಲ್ಲದಂತೆ ಪೋಲೀಸರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಅದರ ಬಗ್ಗೆ ಅವರು ಮೆಚ್ಚಿಕೊಂಡರು ತಾವು ಮೆಚ್ಚಿಕೊಂಡಿದ್ದೀರಿ. ಅದು ಆದಮೇಲೆ ಸಾರ್ಕ್ ಬಂತು. ಅವರು ಬಹಳಷ್ಟು ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಈಗ ತಾವು ಹೇಳುವುದು ಏನಾಗುತ್ತದೆ ಎಂದರೆ ಅಡುಗೆ ಮಾಡಿದ್ದು ಅದು ಏನೋ ಮಾಡಿದಂತಾಗುತ್ತದೆ. ಮೈಸೂರಿನಲ್ಲಿ ಆಗಲಿ, ಬೆಂಗಳೂರಿನಲ್ಲಿ ಆಗಲಿ, ನಡೆದಂಥ ಅನೇಕ ಇಂಟರ್‌ನ್ಯಾಷನಲ್ ಸಮ್ಮೇಳನ ಏನು ನಡೆದವು, ಅದರಲ್ಲಿ ಪೋಲೀಸರು ಅತ್ಯಂತ ಯಶಸ್ವಿಯಾಗಿ ಧಕ್ಷತೆಯಿಂದ ಕೆಲಸ ಮಾಡಿದ್ದಾರೆ. ಮಾನ್ಯ ಶ್ರೀನಿವಾಸ್ ಅವರು ಕೊನೆಯಲ್ಲಿ ಸೇರಿಸಿರುವುದನ್ನು ಓದಿ ಹೇಳಿದರು. ಇವೊತ್ತು ನಾಲ್ಕು ಕೋಟಿ ಜನರು ಇರುವಾಗ ಅಪರಾಧಗಳು ಆಗುವುದಿಲ್ಲ ಎಂದು ಹೇಳಲಿಕ್ಕೆ ಆಗುವುದಿಲ್ಲ. ಎಷ್ಟು ಕಡಿಮೆ ಮಾಡಲಿಕ್ಕೆ ಸಾಧ್ಯ ಅಷ್ಟು ಮಾಡಿದ್ದಾರೆ. ಬೆಂಗಳೂರಿನಲ್ಲಿ ಡಕಾಯಿತಿ ನಡೆಯಿತು, ಡಕಾಯತಿ ವಿಷಯದಲ್ಲಿ ನಾವು ಈಗಾಗಲೇ ಕ್ರಮ ತೆಗದುಕೊಂಡಿದ್ದೇವೆ. ಒಂದೇ ರಾಜ್ಯದವರಲ್ಲ, ಬೇರೆ ಬೇರೆ ರಾಜ್ಯದವರು ಸೇರಿಕೊಂಡು, ಉತ್ತರ ಭಾಗದವರು ಬಂದು ಮಾಡಿದ್ದಾರೆಂದು ಕಂಡುಹಿಡಿದಿದ್ದಾರೆ. ಸಿಒಡಿ ರಿಪೋರ್ಟ್‌ನಲ್ಲಿ ಅನೇಕ ಅಂಶಗಳನ್ನು ಹೇಳಿದ್ದಾರೆ. ಅವರು ಮಾಡಿರತಕ್ಕ ಕೆಲಸವನ್ನು ಮೆಚ್ಚಬೇಕು. ಇವೊತ್ತು ತಾವು ಕೈಯಲ್ಲಿ ಆಗದೇ ಇದ್ದವರನ್ನು ಬೇಡದೇ ಇದ್ದವರನ್ನು ಹಾಕಿದ್ದೀರಿ ಎಂದು ಹೇಳಿದ್ದೀರಿ. ಸಿಒಡಿಗೆ ಹಾಕಿರತಕ್ಕ ಅಧಿಕಾರಿಗಳ ಹೆಸರು ಹೇಳಿದರೆ ತಮಗೆ ಗೊತ್ತಾಗುತ್ತದೆ. ಇವೊತ್ತು ಐಜಿಪಿ ಆಗಲಿ, ಡಿಐಜಿ ಆಗಲಿ, ಅವರು ತಮ್ಮ ಸೇವೆಯಲ್ಲಿ ಒಳ್ಳೆಯ ಹೆಸರನ್ನು ಪಡೆದುಕೊಂಡಿದ್ದಾರೆ. ಶ್ರೀಧರನ್ ಸ್ಪೆಷಲ್ ಐ.ಜಿ. ಯಾಗಿ ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಡಿಐಜಿ, ಸಿಒಡಿಯಲ್ಲಿ ಚಂದೂಲಾಲ್ ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇನ್ನು ನಾಲ್ಕು ಜನ ಪೋಲೀಸ್ ಎಸ್.ಪಿ. ಅವರು ಅಲ್ಲಿ ಉತ್ತಮವಾದ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದಾರೆ. ನಾಲ್ಕು ಸ್ಕ್ವಾಡ್‌ಗಳನ್ನು ನೋಡಿದಾಗ, ಹೋಮಿಸೈಡ್ಸ್ ಬಗ್ಗೆಯಾಗಲಿ, ಫ್ರಾಡ್ಸ್ ಬಗ್ಗೆಯಾಗಲಿ, ಕೊಲೆಯಾಗಿರತಕ್ಕದ್ದು, ಇಂಥದ್ದು ಕಂಡುಹಿಡಿದಿರತಕ್ಕ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡರೆ, ಉತ್ತಮವಾದಂಥ ಕೆಲಸ ಮಾಡಿದ್ದಾರೆ. ಅವರು ಮಾಡಿರತಕ್ಕ ಉತ್ತಮ ಕೆಲಸಕ್ಕೆ ನಮ್ಮಿಂದ ಒಳ್ಳೆಯ ಮೆಚ್ಚುಗೆಯ ಮಾತು ಬಂದರೆ ಅವರಿಗೆ ಇನ್ನೂ ಸ್ಫೂರ್ತಿಯಿಂದ ಕೆಲಸಮಾಡಲಿಕ್ಕೆ ಸಾಧ್ಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಈಗ ಸ್ವಲ್ಪಮಟ್ಟಿಗೆ ಇಂಪ್ರೂವ್‌ಮೆಂಟ್ ಆಗಿದೆಯೆಂದು ಹೇಳುತ್ತಿದ್ದೀರಿ. ೧೯೮೫ನೇ ಇಸವಿಯಲ್ಲಿ ಮರ್ಡರ್ ಆಗಿರತಕ್ಕದ್ದು ೧೦೦೨ ಇದ್ದರೆ ೧೯೮೬ರಲ್ಲಿ ೧೦೭೧ ಆಗಿದೆ. ಡಕಾಯಿತರಲ್ಲಿ ೮೫ನೇ ಇಸವಿಯಲ್ಲಿ ೧೬೫ ಆಗಿದ್ದರೆ ೮೬ನೇ ಇಸವಿಯಲ್ಲಿ ೨೩೯ ಆಗಿದೆ. ಅದೇರೀತಿ ರಾಬರಿ ೮೫ರಲ್ಲಿ ೪೩೧ ಪ್ರಕರಣಗಳಾಗಿದ್ದರೆ ೮೬ರಲ್ಲಿ ೪೭೫ ಪ್ರಕರಣಗಳಾಗಿವೆ ಪ್ರತಿಯೊಂದು ವಿಚಾರದಲ್ಲೂ ಜಾಸ್ತಿಯಾಗುತ್ತಾ ಹೋಗುತ್ತಿದೆ. ಅಂದಮೇಲೆ ಇದನ್ನು ನೀವು ಯಾವ ರೀತಿ ಸಮರ್ಥನೆ ಮಾಡಿಕೊಳ್ಳುತ್ತೀರಿ ?

ಅಧ್ಯಕ್ಷರು.—ಇಂಪ್ರೂವ್‌ಮೆಂಟ್ ಆಗಿದೆಯೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ನೀವು ಬೇಕಾದರೆ ಇಂಪ್ರೂವ್‌ಮೆಂಟ್ ಆಗಿಲ್ಲವೆಂದು ಹೇಳಿ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಖರ್ಗೆಯವರಿಗೆ ಇದು ಸರಿಯಾಗಿ ಗೊತ್ತಾಗುತ್ತಿಲ್ಲವೆಂದು ಕಾಣುತ್ತದೆ. ಹಿಂದಿನ ವರ್ಷಕ್ಕಿಂತ ಈ ವರ್ಷ ಹೆಚ್ಚು ಕೊಲೆಗಳು, ಹೆಚ್ಚು ದರೋಡೆಗಳು, ಹೆಚ್ಚು ಮಾನಭಂಗ ಪ್ರಕಾರಣಗಳಾಗಿವೆ. ಅಂದಮೇಲೆ ಇದು ಇಂಪ್ರೂವ್‌ಮೆಂಟ್ ಅಲ್ಲವೆ ?

ಶ್ರೀ ಆರ್.ಎನ್. ನಾಯಕ್.—ಸ್ವಾಮಿ, ಪೋಲಿಸ್ ಸ್ಟೇಷನ್‌ಗಳಿಗೆ ದೂರು ತೆಗೆದುಕೊಂಡು ಹೋದರೆ ಅದನ್ನು ರಿಜಿಸ್ಟರ್ ಮಾಡಿಕೊಳ್ಳುವುದಿಲ್ಲ, ಅಲ್ಲಿ ರೆಕಾರ್ಡ್ ಆಗುವುದಿಲ್ಲ...

ಅಧ್ಯಕ್ಷರು.—ದಯವಿಟ್ಟು ನೀವು ಕೂತುಕೊಳ್ಳಿ ನೀವು ಯಾರು ಏನೇ ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ. ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಅವರು ಮಾತನಾಡುವುದನ್ನು ಮಾತನಾಡಿದ್ದಾರೆ. ಬಹುಶಃ ಅದು ರೆಕಾರ್ಡ್ ಆಗಿದೆ...

ಶ್ರೀ ಆರ್.ಎನ್. ನಾಯಕ್.—ಸ್ವಾಮಿ ಡಿಮ್ಯಾಂಡ್ ಪಾಸ್ ಆಗುವಾಗ ಬಹಳ ಲವಲವಿಕೆಯಿಂದ ಆಗಬೇಕು. ತಾವು ನಿಧಾನವಾಗಿ ಉತ್ತರ ಕೊಡಿ.

ಅಧ್ಯಕ್ಷರು.—ಮಾನ್ಯ ನಾಯಕರೆ ದಯವಿಟ್ಟು ಕೂತುಕೊಳ್ಳಿ ನಾನು ನೀವು ಪದೇಪದೇ ಎದ್ದು ನಿಂತು ಮಾತನಾಡುತ್ತಿದ್ದರೆ ನೀವು ಏನು ಹೇಳಿದ್ದೀರಿ ಅದನ್ನೆಲ್ಲಾ ಎಕ್ಸ್‌ಪಂಜ್ ಮಾಡಿಸುತ್ತೇನೆ. ಕೊನೆಯಲ್ಲಿ ಕ್ಲಾರಿಫಿಕೇಷನ್ ಕೇಳುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಇವತ್ತಿಗೆ ೬ ದಿವಸಗಳಿಂದಲೂ ತಾವು ಶಾಂತವಾಗಿಯೇ ಇದ್ದಿರಿ: ನಾವೂ ಶಾಂತವಾಗಿಯೇ ಇದ್ದೆವು...

ಅಧ್ಯಕ್ಷರು.—ಇವತ್ತೂ ಶಾಂತವಾಗಿಯೆ ಇರಿ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಇಷ್ಟೊಂದು ಡಿಮ್ಯಾಂಡ್‌ಸನ್ನೂ ಒಂದೇ ದಿವಸ ಹಾಕಿ ಉತ್ತರ ಕೊಡಿಸಿದ್ದೀರಿ. ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳಿದರೆ ನೀವು ಕೂತುಕೊಳ್ಳಿ, ನೀವು ಕೂತುಕೊಳ್ಳಿ ಎಂದು ಹೇಳುವುದಾದರೆ ಇದು ಏನು ಅನ್ಯಾಯ ಸ್ವಾಮಿ ?

ಅಧ್ಯಕ್ಷರು.—ಸಾಮಾನ್ಯವಾಗಿ ಸಂಪೂರ್ಣವಾಗಿ ಮಾತನಾಡಲು ಸದಸ್ಯರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಈಗ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾಳೆಯದಿವಸ ಮಾನ್ಯ ಮುಖ್ಯ ಮಂತ್ರಿಗಳ ಡಿಮ್ಯಾಂಡ್ಸ್ ಇವೆ. ಬೆಳಿಗ್ಗೆ ೮.೩೦ ರಿಂದ ೧೦.೩೦ರ ವರೆಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟು ಅನಂತರ ಅವರಿಂದ ಉತ್ತರ...

ಶ್ರೀ ಬಿ. ರಾಚಯ್ಯ.—ಕೆಲವುಕಡೆ ಗೋಲಿಬಾರ್‌ಗಳು, ಕೊಲೆಗಳು ಸ್ವಲ್ಪಮಟ್ಟಿಗೆ ಹೆಚ್ಚಾಗಿ ಆಗಿರಬಹುದು. ಆದರೆ ಉಳಿದ ಕಡೆಗಳಲ್ಲಿ ಇಂಥ ಪ್ರಕರಣಗಳು ಕಡಿಮೆಯಾಗಿದ್ದು ಎಲ್ಲೆಲ್ಲೂ ಶಾಂತ ವಾತಾವರಣ ಇದೆ ಎಂದು ನಾನು ಮೊದಲೇ ಹೇಳಿದ್ದೇನೆ. ಆದರೂ ಇದರ ಬಗ್ಗೆ ಮಾನ್ಯ ಸದಸ್ಯರು ಕಾಮೆಂಟ್ ಮಾಡುತ್ತಿದ್ದಾರೆ ಬಹುಶಃ ಅವರು ಈಗ ಹೊಸ ಗೋಲಿಬಾರ್‌ನ್ನು ನಿರೀಕ್ಷಣೆ ಮಾಡುತ್ತಿದ್ದಾರೋ, ಏನೋ ? ಗೊತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ತಾವು ಸುಮ್ಮನೆ ಕೂಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ.—ನಾನು ಆ ಮಾನ್ಯ ಸದ್ಯಸರಿಗೆ ಉತ್ತರವನ್ನು ಕೊಡುತ್ತಿದ್ದೆ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಾಮಿ, ತಿಂಗಳಿಗೆ 29 ಕಡೆ ಫೈರಿಂಗ್ ಮಾಡಿಸಿದ್ದೀರಿ. ಇದಕ್ಕಿಂತ ಇನ್ನೂ ಹೆಚ್ಚಿಗೆ ಏನು ಬೇಕು ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸ್ವಾಮಿ, ನೀವೇ ನೋಡಿ, ನಾವು ಏನನ್ನೂ ಕೇಳುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ. ನಾವು ಕೇಳಿದ್ದಕ್ಕೆ ಅವರು ಸರಿಯಾದ ಉತ್ತರವನ್ನೇ ಕೊಡುತ್ತಿಲ್ಲ. ಯಾವುದೋ ಅಂಕಿಸಂಖ್ಯೆಗಳನ್ನು ಅವರ ಜೊತೆಯಲ್ಲಿಟ್ಟುಕೊಂಡು ಬೇರೆ ಬೇರೆ ರಾಜ್ಯಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಉದಾಹರಣೆಗಳನ್ನೂ ಹೇಳುತ್ತಿದ್ದಾರೆ.ಹಾಗಾದರೆ ನಾವು ಇಲ್ಲಿ ವಿಚಾರಗಳನ್ನು ಏತಕ್ಕಾದರೂ ಪ್ರಸ್ತಾಪ ಮಾಡಬೇಕು ?

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರೇ, ಇದು ಒಳ್ಳೆಯದಲ್ಲ. ನೀವು ಸೀನಿಯರ್ ಪೋಸ್ಟ್ ಮೆಂಬರ್. ನಿಮ್ಮದನ್ನೂ ಕೂಡ ರೆಕಾರ್ಡ್ ಮಾಡಬೇಡಿ ಎಂದು ನಾನು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಲ್ಲಾ ಸ್ವಾಮಿ, ಪೋಲಿಸ್‌ಸ್ಟೇಷನ್‌ಗೆ ಹೋಗಿ ಕಂಪ್ಲೆಂಟ್ ಕೊಟ್ಟರೆ ಅಲ್ಲಿ ಕೇಸು ರಿಜಿಸ್ಟರ್ ಮಾಡಿಕೊಳ್ಳುವುದಿಲ್ಲ ನಮಗೆ ಅಲ್ಲೂ ರೆಕಾರ್ಡ್ ಇಲ್ಲ ಇಲ್ಲಿ ಮಾತನಾಡುವುದಕ್ಕೆ ಹೋದರೆ ಇಲ್ಲೂ ರೆಕಾರ್ಡ್ ಮಾಡುವುದಿಲ್ಲ ಎಂದು ಹೇಳುತ್ತೀರಿ. ಅಂದರೆ ನಮ್ಮದು ಅಲ್ಲೂ ರೆಕಾರ್ಡ್ ಆಗುವುದಿಲ್ಲ, ಇಲ್ಲೂ ರೆಕಾರ್ಡ್ ಆಗುವುದಿಲ್ಲ. ಇದಕ್ಕೆ ನಾವು ಏನು ಮಾಡಬೇಕು ?

ಶ್ರೀ ಬಿ. ರಾಚಯ್ಯ.—ಈ ಒಂದು ಕೊಲೆ ಮತ್ತು ದರೋಡೆ, ಲೂಟಿ ಈ ವಿಷಯಗಳಲ್ಲಿ ಸ್ವಲ್ಪ ಹೆಚ್ಚಾಗಿದೆ. ಎಂದು ಮೊದಲೇ ಒಪ್ಪಿಕೊಂಡಿದ್ದೇನೆ. ಮಿಕ್ಕ ವಿಷಯಗಳಲ್ಲಿ ಬಹಳ ಕಡಿಮೆಯಾಗಿದೆ. ಬಲತ್ಕಾರ ರೇಪ್ಸ್ ಇವುಗಳು ಗಮನಾರ್ಹವಾಗಿ ಕಡಿಮೆಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಮ್ಮ ಕಾಲದಲ್ಲಿ 1078 ರೇಪಿಂಗ್ಸ್ ನಡೆದಿದೆ. ಕಡಿಮೆ ಎಲ್ಲಾಗಿದೆ. ಜಾಸ್ತಿಯಾಗಿದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಖಾರ್ಗೆಯವರು ದಯವಿಟ್ಟು ತಾವು ಶಾಂತ ರೀತಿಯಿಂದ ಮಾನ್ಯ ಸಚಿವರು ಕೊಡತಕ್ಕಂಥ ಉತ್ತರವನ್ನು ಕೇಳಿ,

ಶ್ರೀ ಬಿ. ರಾಚಯ್ಯ.—ಸುಮ್ಮನೇ ರೇಗಿಸಿಬಿಟ್ಟರೆ ಮುಂದೆ ಓದಲಿಕ್ಕೆ ಆಗದಿರಲಿ ಎಂದು ಅವರು ಮಧ್ಯೆ ಮಧ್ಯೆ ಹೇಳುತ್ತಿರುತ್ತಾರೆ. ಮಟ್ಕ, ಜೂಜು ಕಡಿಮೆಯಾಗಿದೆ, ಬೀದಿ ಜೂಜು ಕಡಿಮೆಯಾಗಿದೆ. ವೇಶ್ಯಾವಾಟಿಕೆಗಳು ಕಡಿಮೆಯಾಗಿವೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಈ ರೀತಿ ಪ್ರಶ್ನೆಗಳನ್ನು ಹಾಕಿದರೆ ಮೊನ್ನೆ ಏನಾಯಿತು ಎನ್ನುವುದು ಗೊತ್ತಿದೆ ನಿಮಗೆಲ್ಲರಿಗೂ ಅವಕಾಶವನ್ನು ಕೊಡುತ್ತೇನೆ. ದಯವಿಟ್ಟು ಮಾನ್ಯ ಸಚಿವರ ಉತ್ತರವನ್ನು ಶಾಂತರೀತಿಯಿಂದ ಕುಳಿತುಕೊಂಡು ಕೇಳಿ. ಅವರು ಹೇಳಿದಮೇಲೆ ಬೇಕಾದರೆ ವಿವರಣೆಯನ್ನು ಕೇಳಿ. ನೀವು ಈ ರೀತಿ ಹೇಳುತ್ತಿದ್ದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಆರ್. ಎ. ನಾಯಕ್.—ಮಾನ್ಯ ಸಚಿವರು ಹೇಳುವುದು ರೆಕಾರ್ಡ್ ಆಗಬಹುದು, ನಾವು ಹೇಳುವುದು ರೆಕಾರ್ಡ್ ಆಗಬಾರದೇಕೆ ?

ಶ್ರೀ ಕೆ.ಹೆಚ್ ಶ್ರೀನಿವಾಸ್.—ಕೆಲವು ಅಂಕಿಅಂಶಗಳು ತಪ್ಪಿರುತ್ತದೆ. ಅದನ್ನು ತಿದ್ದಿಕೊಳ್ಳದೇ ಹೋದರೆ...

ಅಧ್ಯಕ್ಷರು.--ಒಬ್ಬೊಬ್ಬರು ಮಧ್ಯೆ ಮಧ್ಯೆ ಇಂಟರ್‌ಫೀಯರ್ ಆಗಬೇಕೆಂದು ಮಾತನಾಡಿಕೊಂಡು ಬಂದಿರುತ್ತೀರಾ ?

ಶ್ರೀ ಬಿ. ರಾಚಯ್ಯ.--ಹೆಣ್ಣು ಮಕ್ಕಳ ವಿಷಯದಲ್ಲಿ ಸ್ವಲ್ಪ ಸಮಾಧಾನವಾಗಿದೆ. ಆದರೂ ಸಾಕಷ್ಟು ಪೋಲೀಸ್ ಸಿಬ್ಬಂದಿಯವರು ರಕ್ಷಣೆ ಕೊಡುತ್ತಿಲ್ಲವೆಂದು ೩-೪ ಜನ ಮಹಿಳಾ ಶಾಸಕಿಯರು ಹೇಳಿರುತ್ತಾರೆ. ಬಹುಶಃ ಅಂಕಿಅಂಶಗಳನ್ನು ಕೊಟ್ಟರೆ ಅವರು ಸಮಾಧಾನ ಪಟ್ಟುಕೊಳ್ಳಬಹುದು. ೧೯೮೩ಕ್ಕೆ ಸುಮಾರು ೨,೦,೧೩೧ ಶಿಕ್ಷೆಗೆ ಒಳಗೊಂಡಿದ್ದು, ೧೯೮೪ಕ್ಕೆ ೪೮, ೧೯೮೬ಕ್ಕೆ ೨೩, ೧೯೮ ಕ್ಕೆ ೨೨, ಹಾಗೆಯೇ ವರದಕ್ಷಿಣೆಗೆ ಸಂಬಂಧಪಟ್ಟ ಹಾಗೆ ೧೯೮೩ರಲ್ಲಿ ವರದಕ್ಷಿಣೆ ಕಿರುಕುಳ ಕೊಟ್ಟಿದ್ದು ೨೦, ೧೯೮೪ರಲ್ಲಿ ೩೨, ೧೯೮೫ರಲ್ಲಿ ೯೧, ೧೯೮೬ರಲ್ಲಿ ಕಿರುಕುಳ ಕೊಟ್ಟದ್ದು ೨೬೬. ಬಲಾತ್ಕಾರ ಸಂಭೋಗ ವಿಷಯದಲ್ಲಿ ವರದಿ ಆದುದು. ೧೯೬೧ರಲ್ಲಿ ೧೦೩, ಪತ್ತೆಯಾದದು ೫೫, ೧೯೮೨ರಲ್ಲಿ ವರದಿಯಾದುದು ೧೦೬ ಪತ್ತೆಯಾದುದು ೮೧, ೧೯೮೫ರಲ್ಲಿ ನಡೆದುದು ೭೯ ಪತ್ತೆಯಾದುದು ೭೫. ಮತ್ತೆ ವರದಕ್ಷಿಣೆಯ ವಿಚಾರದಲ್ಲಿ ದೂರು ಬಂದುದು ೧೯೮೩ರಲ್ಲಿ ೧೧೯ ಪತ್ತೆಯಾದು ೨೪, ೧೯೮೪ರಲ್ಲಿ ದೂರು ಬಂದುದು ೧೩೩ ಪತ್ತೆಯಾದುದು ೩೩, ೧೯೮೫ರಲ್ಲಿ ದೂರು ಬಂದುದು ೧೪೫ ಪತ್ತೆಯಾದುದು ೩೩ ೧೯೮೫ರಲ್ಲಿ ದೂರು ಬಂದುದು ೧೪೫ ಪತ್ತೆಯಾದುದು ೫೦, ೧೯೮. ರಲ್ಲಿ ದೂರು ಬಂದುದು ೧೩೩ ಪತ್ತೆಯಾದುದು ೫೫, ಇದಾದಮೇಲೆ ಬಹುಶಃ ವರದಕ್ಷಿಣೆಯ ಸಂಬಂಧಪಟ್ಟ ವಿಷಯದಲ್ಲಿ ಸಾವಾಗಿರತಕ್ಕಂಥ ಒಬ್ಬರ ಬಗ್ಗೆ ಡಾಕ್ಟರರು ಶವಪರೀಕ್ಷೆ ಮಾಡಬೇಕೆಂದು ಆಜ್ಞೆ ಹೊರಡಿಸಿರತಕ್ಕಂಥ ನಾನು ಬಂದಮೇಲೆ ವರದಕ್ಷಿಣೆ ಸಮಸ್ಯೆಯ ಬಗ್ಗೆ ದೂರು ಬಂದಿರತಕ್ಕಂಥ ಹೆಣ್ಣುಮಕ್ಕಳ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕೆಂದು ಆಜ್ಞೆ ಮಾಡಿರತಕ್ಕ ವಿಷಯದಲ್ಲಿ ಹೆಣ್ಣು ಮಕ್ಕಳ ವಿಷಯದಲ್ಲಿ ಯಾವುದೇ ಫಿರ್ಯಾದು ಬಂದಲ್ಲಿ ಆ ಫಿರ್ಯಾದನ್ನು ರಿಜಿಸ್ಟರ್ ಮಾಡಿಕೊಂಡು ದಾಖಲೆ ಮಾಡಿಕೊಂಡು ಅದರ ಪ್ರಕಾರ ಇನ್‌ವೆಸ್ಟಿಗೇಷನ್ ಮಾಡಿಸಿದ್ದೇವೆ. ಅದರ ಪ್ರಕಾರ ಕೋರ್ಟಿನಲ್ಲಿ ಚಾರ್ಜ್‌ಶೀಟ್ ಹಾಕಿ ವಿಚಾರಣೆಯಲ್ಲಿಯೂ ಕೂಡ ಇದೆ.

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.--ಇಲ್ಲಿ ಮಾನ್ಯ ಸಚಿವರು ಕೊಟ್ಟಿರುವ ಅಂಕಿಅಂಶಗಳೇ ಒಂದಾಗಿದ್ದರೆ ಅವರು ಹೇಳುತ್ತಿರುವುದೇ ಒಂದಾಗಿರುತ್ತದೆ. ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗದ ಬಗ್ಗೆ ಏನೂ ಹೇಳುತ್ತಿಲ್ಲ.

ಅಧ್ಯಕ್ಷರು.--ತಮಗೆ ಮಾತನಾಡಲಿಕ್ಕೆ ಅವಕಾಶ ಆಮೇಲೆ ಕೊಡುತ್ತೇನೆ, ಮಾತನಾಡಿ.

ಶ್ರೀ ಎಂ.ಎಸ್. ಕೃಷ್ಣನ್.--ತಾವು ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ಬಿ. ರಾಚಯ್ಯ.--ವರದಕ್ಷಿಣೆ ವಿಷಯಕ್ಕೆ ಸಂಬಂಧಪಟ್ಟಹಾಗೆ ಸತ್ತಿರತಕ್ಕಂಥವರ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ನಿಮ್ಮ ವರ್ಗದ ವಿಷಯದಲ್ಲಿ ಕೊಟ್ಟಿಲ್ಲ.

೬-೩೦ ಪಿ.ಎಂ.

ಗೂಂಡಾ ಕಾಯಿದೆ ಪ್ರಕಾರ ಕ್ರಮ ಕೈಗೊಂಡಿರುವ ಬಗ್ಗೆ ಕಳೆದ ಸಾರಿ ಹೇಳಿದ್ದೇನೆ. ಈಗ ಅದಕ್ಕೆ ತಿದ್ದುಪಡಿ ಕೂಡ ಮಾಡಿ ಕಳುಹಿಸಿದ್ದೇವೆ. ಅದಕ್ಕೆ ರಾಷ್ಟ್ರಪತಿಯವರ ಒಪ್ಪಿಗೆ ಆದಮೇಲೆ ಹೆಚ್ಚಿನ ಕ್ರಮ ಕೈಗೊಳ್ಳುತ್ತೇವೆ ಆದಕ್ಕೆ ಅಂಕಿ ಅಂಶ ಕಳೆದ ಸಾರಿ ಕೊಟ್ಟಷ್ಟೆ ಇದೆ. ಹೊಸದಾಗಿ ಹೇಳತಕ್ಕದ್ದು ಏನೂ ಇಲ್ಲ. ಕಾಫಿಪೋಸ್ ಆ್ಯಕ್ಟ್ ವಿಷಯದಲ್ಲಿ ಬಂಧನಕ್ಕೆ ಒಳಗಾಗಿರತಕ್ಕವರು ೧೭೩ ಜನ, ಬಂಧನದ ಆಜ್ಞೆಯ ನಂತರ ಬಂಧಿಸಲ್ಪಟ್ಟವರು ೧೧೯ ಮಂದಿ, ಉಚ್ಚನ್ಯಾಯಾಲಯಿಂದ ಆದೇಶದ ಪ್ರಕಾರ ಬಿಡುಗಡೆ ಆದವರು ೪೧ ಜನ, ಸಲಹಾ ಮಂಡಳಿಯ ಅಭಿಪ್ರಾಯದಂತೆ ಬಿಡುಗಡೆ ಹೊಂದಿದವರು ೧೯ ಮಂದಿ, ಬಂಧನದ ನಂತರ ಸರ್ಕಾರವೇ ಸ್ವಯಿಚ್ಛೆ ಮೇರೆಗೆ ಬಿಡುಗಡೆ ಮಾಡಿದ್ದುದು ೩ ಜನ, ತಪ್ಪಿಸಿಕೊಂಡವರು ೧೪ ಮಂದಿ, ಈಗ ಬಂಧನದಲ್ಲಿರುವವರು ೩೫ ಜನ, ಬಂಧನದ ಆಜ್ಞೆಯ ಕಾಲಾವಧಿ ಮುಗಿದ ನಂತರ ನಂತರ ಬಿಡುಗಡೆ ಆದವರು ೭ ಜನ, ಬಂಧಿಖಾನೆಯಿಂದ ತಪ್ಪಿಸಿಕೊಂಡವರು ಒಬ್ಬರು. ಕ್ರೈಟೀರಿ ಯಾವನ್ನು ಫುಲ್‌ಫಿಲ್ ಮಾಡದೆ ಇರುವುದರಿಂದ ೩ ಜನರನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಆಜ್ಞೆ ಮಾಡಿದೆ. ಮಿಕ್ಕವೆಲ್ಲಾ ಕ್ರಮಬದ್ಧವಾಗಿವೆ ಸರ್ಕಾರ ಆಜ್ಞೆ ಮಾಡಿ ಬಂಧನದಲ್ಲಿಟ್ಟಿದೆ. ತನಿಖಾ

ಆಯೋಗದ ಬಗ್ಗೆ ಮಾನ್ಯ ಸದಸ್ಯರು ಮಾತನಾಡುವಾಗ ಪ್ರಸ್ತಾಪ ಮಾಡಿದ್ದಾರೆ. ಗೋವಿಂದರಾಜು ತನಿಖಾ ಆಯೋಗ ೧೯೮೦ರಲ್ಲಿ ಸಾಧು ಲಕ್ಷ್ಮಣಗಿರಿ ಸಾವಿನ ಬಗ್ಗೆ ವರದಿ ನೀಡಿದೆ, ಕೆಂಪೇಗೌಡ ತನಿಖಾ ಆಯೋಗ ನವಲಗುಂದ ಮತ್ತು ನರಗುಂದದಲ್ಲಿ ಆದಂತಹ ಗೋಲೀಬಾರ್ ವಿಷಯದಲ್ಲಿ ವರದಿ ನೀಡಿದೆ. ೧೯೮೧ರಲ್ಲಿ ಕಂದೂರು ತನಿಖಾ ಆಯೋಗ ವೀನಸ್ ಸರ್ಕಸ್ ದುರಂತದ ಬಗ್ಗೆ ಅಪಾಯಿಂಟ್ ಆಗಿತ್ತು, ಆರ್.ಜಿ. ದೇಸಾಯಿ ಆಯೋಗ ಸಾರಾಯಿ ದುರಂತದ ಬಗ್ಗೆ ನೇಮಕವಾಗಿತ್ತು. ೧೯೮೩ ರಿಂದೀಚೆಗೆ ರಂಗನಾಥಚಾರಿ ಅಗ್ನಿಹೋತ್ರಿ ತನಿಖಾ ಆಯೋಗ ಬೆಗಳೂರು ವಿವೇಕನಗರ ಮತ್ತು ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಕ್ರಮವಾಗಿ ೪-೨-೧೯೮೨ ಮತ್ತು ೧೫-೯-೮೨ರಲ್ಲಿ ನಡೆದ ಗೋಲೀಬಾರ್ ಪ್ರಕರಣಕ್ಕೆ ಸಂಬಂಧಪಟ್ಟದ್ದು. ಮಹಮಂದ್ ಆಸೀಫ್ ತನಿಖಾ ಆಯೋಗ ಶಿವಮೊಗ್ಗದ ನಾಗಸಮುದ್ರದಲ್ಲಿ ೨೫-೨-೮೫ರಲ್ಲಿ ಮತ್ತು ಹಾಸನ ಜಿಲ್ಲೆಯ ದೊಡ್ಡಹಳ್ಳಿಯಲ್ಲಿ ೨೬-೯-೧೯೮೨ರಲ್ಲಿ ನಡೆದ ಗೋಲೀ ಬಾರ್ ಪ್ರಕರಣಕ್ಕೆ ಸಂಬಂಧಪಟ್ಟದ್ದು. ಎಸ್.ಎಂ. ಬ್ಯಾಡಗಿ ತನಿಖಾ ಆಯೋಗ ಬಳ್ಳಾರಿಯಲ್ಲಿ ೧೬-೨-೮೩ರಲ್ಲಿ ನಡೆದ ಪೋಲೀಸ್ ಗೋಲಿಬಾರ್‌ಗೆಸಂಬಂಧಪಟ್ಟದ್ದು. ಟಿ ಕೆ. ಶ್ಯಾಮ ಸುಂದರ್ ತನಿಖಾ ಆಯೋಗ ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ೧೩-೫-೮೩ ರಂದು ಗೋಲೀಬಾರ್‌ನಡೆದ ವಿಷಯಕ್ಕೆ ಸಂಬಂಧಿಸಿದ್ದು. ಬಾಲಸುಬ್ರಮಣ್ಯಂ ತನಿಖಾಆಯೋಗ ೨೨-೬-೮೩ರಲ್ಲಿ ಕೆ.ಜಿ.ಎಫ್.ನಲ್ಲಿ ನಡೆದ ಪೋಲೀಸ್ ಗೋಲೀಬಾರ್ ಬಗ್ಗೆ ತನಿಖೆ ನಡೆಸಲು ರಚಿತವಾಗಿದೆ. ಎಸ್.ಡಿ. ವೆಂಕಟೇಶ್ ಆಯೋಗ ಪಾವಗಡದ ಶಾಸಕರಾದ ಶ್ರೀ ಉಗ್ರನರಸಪ್ಪನವರ ಅಪಹರಣದ ಬಗ್ಗೆ ವಿಚಾರಣೆ ನಡೆಸುತ್ತಿದೆ ಪಿ.ಎ. ಕುಲಕರ್ಣಿ ಆಯೋಗ ಬೆಂಗಳೂರಿನ ಕೆಲವು ಕಡೆಗಳಲ್ಲಿ ಪೋಲೀಸ್ ಗೋಲೀಬಾರ್ ಪ್ರಕರಣದ ಬಗ್ಗೆ ತನಿಖೆ ನಡೆಸಲು ಅಪಾಯಿಂಟ್ ಮಾಡಿದ್ದೇವೆ. ಆರ್.ಜಿ. ವೈದ್ಯನಾಥ ತನಿಖಾ ಆಯೋಗ ಹುಬ್ಬಳ್ಳಿಯಲ್ಲಿ ನಡೆದ ಗೋಲೀಬಾರ್ ಬಗ್ಗೆ ವರದಿ ಕೊಟ್ಟಿದೆ. ಹುನಗುಂದ್‌ಗಲ್ಲಿ ನಡೆದ ಗೋಲೀಬಾರ್ ಬಗ್ಗೆ ಜ. ಡಿ. ಪಿ. ಹಿರೇಮಠ್ ಅವರು ವರದಿ ಕೊಟ್ಟಿದ್ದಾರೆ. ಎ.ಬಿ. ಮುರಗೋಡ್ ತನಿಖಾ ಆಯೋಗ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಯಲ್ಲಿ ನಡೆದ ಗೋಲೀಬಾರ್ ಪ್ರಕರಣದ ಬಗ್ಗೆ ವರದಿ ಕೊಟ್ಟಿದೆ. ಪಿ.ಪಿ. ಬೋಪಣ್ಣ ತನಿಖಾ ಆಯೋಗ ೧೮-೭-೮೫ರಲ್ಲಿ ರೆಕ್ಟಿಫೈಡ್‌ಸ್ಪಿರಿಟ್ ಬಗ್ಗೆ ವರದಿ ಕೊಟ್ಟಿದೆ. ದಿನಾಂಕ ೧೯-೧-೧೯೮೬ ರಂದು ಚನ್ನಪಟ್ಟಣದಲ್ಲಿ ನಡೆದ ಪೋಲೀಸ್ ಗೋಲೀಬಾರ್ ಬಗ್ಗೆ ಎಸ್.ವಿ. ತುಲ್‌ಗುಲ್ ತನಿಖಾ ಆಯೋಗವನ್ನು ೧೯೮೬ರಲ್ಲಿ ನೇಮಿಸಿತ್ತು. ಅದು ವಿಚಾರಣೆಯಲ್ಲಿದೆ. ಜೆ. ಚನ್ನವೀರಪ್ಪ ತನಿಖಾ ಆಯೋಗ-ಇದನ್ನು ಚಂದ್ರಗುತ್ತಿಯಲ್ಲಿ ದಿನಾಂಕ ೨೦-೩-೮೬ರಲ್ಲಿ ನಡೆದ ಪ್ರಕರಣದ ಬಗ್ಗೆ ನೇಮಿಸಿತ್ತು. ಅವರು ವರದಿ ಕೊಟ್ಟಿದ್ದಾರೆ. ಎಸ್.ಡಿ. ಉಗಾರ್ ತನಿಖಾ ಆಯೋಗ-ಗುಲ್ಬರ್ಗ ಜಿಲ್ಲೆ ಆಳಂದದಲ್ಲಿ ನಡೆದ ಗೋಲೀಬಾರ್ ಪ್ರಕರಣಕ್ಕೆ ಸಂಬಂಧಿಸಿದಂತೆ ನೇಮಿಸಿತ್ತು. ಅದರ ವರದಿ ಬಂದಿಲ್ಲ. ಡಿ.ಪಿ. ಹಿರೇಮಠ್ ತನಿಖಾ ಆಯೋಗ-ರಾಮನಗರದಲ್ಲಿ ದಿನಾಂಕ ೨೨, ೨೩, ೨೪ ಮತ್ತು ೨೭ರಲ್ಲಿ ನಡೆದ ಪೋಲೀಸ್ ಗೋಲೀಬಾರ್ ಬಗ್ಗೆ ಆಗಿತ್ತು. ಅದು ತನಿಖೆ ನಡೆಸುತ್ತಿದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಒಟ್ಟು ಎಷ್ಟು ರಿಪೋರ್ಟ್‌ಗಳು ಬಂದಿವೆ ?

ಶ್ರೀ ಬಿ. ರಾಚಯ್ಯ.—ಈಗ ಮೂರು ರಿಪೋರ್ಟ್‌ಗಳು ಬಂದಿವೆ. ಅದರ ಬಗ್ಗೆ ತೀರ್ಮಾನ ವನ್ನು ತೆಗೆದುಕೊಂಡು ಶಾಸನಸಭೆ ಮುಂದೆ ಇಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.– ಕೆಲವು ವರದಿಗಳನ್ನು ಸಭೆಯ ಮುಂದೆ ಇಟ್ಟಿದ್ದೀರಿ. ಸ್ಪಿರಿಟ್ ಸ್ಕ್ಯಾಂಡಲ್ ಬಗ್ಗೆ ನೇಮಿಸಿದ್ದ ಬೋಪಣ್ಣ ಕಮಿಷನ್ ವರದಿಯನ್ನು ಇಟ್ಟಿದ್ದೀರಿ ಬೈರೇಗೌಡ ಟೇಪಿನ ಪ್ರಕರಣದ ಬಗ್ಗೆ ಏನಾಯಿತು ಎಂಬ ಬಗ್ಗೆ ತಾವು ಏನೂ ಹೇಳಲಿಲ್ಲ. ಇಲ್ಲಿಯವರೆಗೆ ಅದರ ರಿಪೋರ್ಟ್ ಬಂದಿಲ್ಲ. ನನಗೆ ಗೊತ್ತಿರುವ ಹಾಗೆ ಈಗಾಗಲೇ ಅವರು ರಿಪೋರ್ಟ್ ಕೂಡ ಕೊಟ್ಟಿದ್ದಾರೆ. ಆದರೆ ಈ ಸದನದ ಮುಂದೆ ಇನ್ನೂ ಅದನ್ನು ಇಟ್ಟಿಲ್ಲ. ಎರಡು ತಿಂಗಳು ಆಯಿತು. ರಿಪೋರ್ಟ್ ಬಂದು ಎಂದು ಗೊತ್ತಾಗಿದೆ. ಅದರ ಬಗ್ಗೆ ಇಲ್ಲಿಯವರೆಗೆ ಹೇಳಲಿಲ್ಲ.

ಶ್ರೀ ಬಿ. ರಾಚಯ್ಯ.—ವರದಿ ಇನ್ನೂ ಬಂದಿಲ್ಲ. ಅದಕ್ಕೋಸ್ಕರವಾಗಿ ಬರದೇ ಇರುವುದ ಹೇಳುವುದಕ್ಕಾಗಲಿಲ್ಲ,

ಅಧ್ಯಕ್ಷರು.—ವರದಿ ಬಂದಕೂಡಲೇ ಸಭೆಯ ಮುಂದೆ ಇರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಂದಿದೆ.

ಶ್ರೀ ಕೆ ಎಚ್. ಶ್ರೀನಿವಾಸ್.—ವರದಿ ಹೇಳುತ್ತಿದ್ದೀರಿ. ತಪ್ಪಿತಸ್ಥರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ.

ಶ್ರೀ ಬಿ. ರಾಚಯ್ಯ.—ಮೂರು ವರದಿಗಳ ಬಗ್ಗೆ ತೀರ್ಮಾನ ಮತ್ತು ಸಾರಾಂಶವನ್ನು ಸಭೆಯ ಮುಂದೆ ಇಟ್ಟಿದ್ದೇವೆ ಎಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಕ್ಯಾಬಿನೆಟ್ ಮುಂದೆ ಇದೆಯೋ ? ಪ್ರಿಂಟ್ ಆಗಿಲ್ಲವೋ ? ನಮಗೆ ಹಂಚುವುದಕ್ಕೆ ವರದಿ ಸಿಕ್ಕಿಲ್ಲವೋ ? ಈಗಾಗಲೇ ವರದಿ ಒಪ್ಪಿಸಿದ್ದಾರೆ ಎಂಬ ವದಂತಿ ಬಂದಿದೆ. ಆದರೆ ಅವರು ಹೇಳುತ್ತಿದ್ದಾರೆ ರಿಪೋರ್ಟ್ ಕೊಟ್ಟಿಲ್ಲ ಎಂದು. ಕ್ಯಾಬಿನೆಟ್ ಮುಂದೆ ಇದೆಯೆ ? ಅಥವಾ ಇನ್ನೂ ಅವರು ರಿಪೋರ್ಟ್ ಸಬ್‌ಮಿಟ್ ಮಾಡಿಲ್ಲವೆ ?

ಶ್ರೀ ಬಿ. ರಾಚಯ್ಯ.—ಕ್ಯಾಬಿನೆಟ್ ಮುಂದೆ ಬಂದಿಲ್ಲ. ನಾನು ಮರೆತುಬಿಟ್ಟಿದ್ದೆ, ಜಿಲ್ಲಾ ಪರಿಷತ್ ಚುನಾವಣೆ ಸಮಯದಲ್ಲಿ ಮತ್ತು ಚುನಾವಣೆಗೆ ಮುಂದೆ...

ಶ್ರೀಮತಿ ಮುಂಕ್ತರುನ್ನೀಸಾ.—ಸಾರ್...

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ ನಾನು ಅಲೋ ಮಾಡುವುದಿಲ್ಲ,

ಶ್ರೀಮತಿ ಮುಂಕ್ತರುನ್ನೀಸಾ.—ಇಲ್ಲ...

ಅಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಿ ಹೇಳುತ್ತೇನೆ.

ಶ್ರೀಮತಿ ಮುಂಕ್ತರುನ್ನೀಸಾ.— ನಮ್ಮ ಊರಿನ ವಿಷಯ ಕೇಳಬೇಕು ನಾವು.

ಅಧ್ಯಕ್ಷರು.—ಇವತ್ತು ಏತಕ್ಕೆ ತಾವು ಪೇಷೆನ್ಸ್ ಕಳೆದುಕೋಡಿರಿ ನೀವು ?

ಶ್ರೀಮತಿ ಮುಂಕ್ತರುನ್ನೀಸಾ.—ಎಷ್ಟು ಜನ ಸಸ್ಪೆಂಡ್ ಆಗಿದ್ದಾರೆ ? ಎಷ್ಟು ಜನ...

ಅಧ್ಯಕ್ಷರು.—ನೋಡಿ ನಿಮಗೆ ಉತ್ತರ ಬೇಕೋ ಬೇಡವೊ ?

ಶ್ರೀ ಬಿ. ರಾಚಯ್ಯ.—ಜಿಲ್ಲಾ ಪರಿಷತ್ತಿನ ಚುನಾವಣೆಗೆ ಮುಂಚೆ ಮತ್ತು ಚುನಾವಣೆಯ ಸಮಯದಲ್ಲಿ ಪೋಲೀಸರಿಗೆ ಬಂದಂಥ ಫಿರ್ಯಾದಿ ಬಗ್ಗೆ ಮೊದಲು ನಾನು ಹೇಳಬೇಕಾಗಿತ್ತು. ಅದನ್ನು ಹೇಳಲಿಲ್ಲ ಅದಕ್ಕೋಸ್ಕರ ತಮ್ಮ ಕ್ಷಮೆ ಕೇಳಿ ಹೇಳಬೇಕೆಂದು ನಿಂತಿದ್ದೇನೆ. ಮೈಸೂರಿನಲ್ಲಿ ಚುನಾವಣೆಗೆ ಮುಂಚೆ ೭ ಫಿರ್ಯಾದಿಗಳು ಬಂದಿದ್ದವು. ಚುನಾವಣೆ ಸಮಯದಲ್ಲಿ ೯ ಬಂದಿದ್ದವು. ಚುನಾವಣೆ ನಂತರ ೫೧ ಬಂದಿದ್ದವು. ಇದು ಮೈಸೂರು ಜಿಲ್ಲೆಗೆ ಸಂಬಂಧಿಸಿದ್ದುದು ತಾಲ್ಲೂಕುವಾರು ಹೇಳಬೇಕಾದರೆ ಸ್ವಲ್ಪ ತಡವಾಗುತ್ತದೆ. ಇಡೀ ೨೦ ಜಿಲ್ಲೆಗಳಲ್ಲಿ ಚುನಾವಣೆಗಿಂತ ಮುಂಚೆ ೧೯೯, ಚುನಾವಣೆ ಸಮಯದಲ್ಲಿ ೨೯೧, ಮತ್ತು ಚುನಾವಣೆ ನಂತರ ೪೮೦ ಕೇಸುಗಳು ರಿಜಿಸ್ಟರ್ ಆಗಿವೆ ಅವು ತನಿಖೆಯಲ್ಲಿವೆ. ಕರ್ನಾಟಕ ರಾಜ್ಯದ ಸಿ.ಓ.ಡಿ. ಗುಪ್ತ ದಳದ ವಿಷಯದಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಾ ಬಹುಮಟ್ಟಿಗೆ ಅಲ್ಲಿ ಹಾಕಿರತಕ್ಕ ಅಧಿಕಾರಿಗಳ ವಿಷಯದಲ್ಲಿ ಒಂದು ರೀತಿಯಲ್ಲಿ ಅವರಿಗೆ ಅತೃಪ್ತಿಯಾಗುವ ರೀತಿಯಲ್ಲಿ ಮಾತನಾಡಿದ್ದಾರೆ. ಅಲ್ಲಿ ಕೆಲಸಕ್ಕೆ ಬಾರದೇ ಇದ್ದವರನ್ನು ಬೇಡವಾದವರನ್ನು ಹಾಕಿದ್ದಾರೆ ಎಂಬ ರೀತಿಯಲ್ಲಿ ಹೇಳಿದರು. ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಉತ್ತಮವಾದ ಅಧಿಕಾರಿಗಳನ್ನು ಹಾಕಿದ್ದೇವೆ. ಡಿವೈ.ಎಸ್.ಪಿ. ಪೋಲೀಸ್ ಇನ್‌ಸ್ಪೆಕ್ಟರ್, ಸಬ್-ಇನ್‌ಸ್ಪೆಕ್ಟರ್ ಲೆವೆಲ್‌ನಲ್ಲಿ ಸ್ವಲ್ಪಮಟ್ಟಿಗೆ ಕಡಿಮೆ ಬದಲಾವಣೆಗಳನ್ನು ಮಾಡುತ್ತಿದ್ದೇವೆ. ಇವತ್ತು ಕೂಡ ಹಿರಿಯ ಅಧಿಕಾರಿಗಳನ್ನು ಬದಲಾವಣೆ ಮಾಡಿದ್ದೇವೆ. ಈ ವರ್ಷ ಸಿ ಓ.ಡಿ.ಗೆ ರೆಫರ್ ಮಾಡಿದ ವಿಷಯದಲ್ಲಿ ಅಲ್ಲಿನ ಸ್ಕ್ವಾಡ್‌ಗೆ ಮೂರು ಜನ ಎ.ಎಸ್.ಪಿ.ಯವರನ್ನು ಹಾಕಿದ್ದೇವೆ. ಪಿ.ಐ ಗಳನ್ನು ೦ ಜನ, ಪಿ.ಎಸ್.ಐ.ಗಳನ್ನು ೬ ಜನ ಹಾಕಿದ್ದೇವೆ.

ಆದರೆ ಅವರಿಗೆ ರೆಫರ್ ಮಾಡಿರತಕ್ಕ ಕೇಸುಗಳ ವಿಷಯವನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಕೊಲೆಗೆ ಸಂಬಂಧಪಟ್ಟ ಕೇಸುಗಳು. ೧೯೮೧ರಲ್ಲಿ ೬ ಕೇಸುಗಳನ್ನು ಅವರಿಗೆ ರೆಫರ್ ಮಾಡಿದ್ದೆವು. ಅದೇ ರೀತಿ ೧೯೮೨ರಲ್ಲಿ ೬, ೧೯೮೩ರಲ್ಲಿ ೧೫, ೧೯೮೪ರ ೧೨, ೧೯೮೫ರಲ್ಲಿ ೧೧, ೧೯೮೬ರಲ್ಲಿ ೧೪ ಹಾಗೂ ೧೯೮೭ರಲ್ಲಿ ೩ ಕೇಸ್‌ಗಳನ್ನು ಅವರಿಗೆ ರೆಫರ್ ಮಾಡಿದ್ದೇವೆ. ಅದೇ ರೀತಿ ವರದಕ್ಷಿಣೆ ಸಾವಿನ ಬಗ್ಗೆ ಅವರಿಗೆ ರೆಫರ್ ಮಾಡಿರತಕ್ಕ ಕೇಸುಗಳ ಬಗ್ಗೆ ಹೇಳುವುದಾದರೆ,

೧೯೬೩ರಲ್ಲಿ ೩೦೩, ೧೯೬೪ರಲ್ಲಿ ೧೭, ೧೯೬೫ರಲ್ಲಿ ೨೨, ೧೯೬೬ರಲ್ಲಿ ೨೦ ಹಾಗೂ ೧೯೬೭ರಲ್ಲಿ ೭ ಕೇಸುಗಳನ್ನು ಅವರಿಗೆ ರೆಫರ್ ಮಾಡಿದ್ದೇವೆ. ಅದೇ ರೀತಿ ವರದಕ್ಷಿಣೆ ಕಿರುಕುಳದ ಬಗ್ಗೆ ೧೯೬೩ರ ೨೫, ೧೯೬೪ರಲ್ಲಿ ೧, ೧೯೬೫ರಲ್ಲಿ ೧, ೧೯೬೬ರಲ್ಲಿ ೨ ಕೇಸುಗಳನ್ನು ಅವರಿಗೆ ರೆಫರ್ ಮಾಡಿದ್ದೇವೆ. ಈಗ ಡಕಾಯಿತಿಗೆ ಸಂಬಂಧಪಟ್ಟ ಕೇಸುಗಳನ್ನು ಸಿ.ಓ.ಡಿ.ಗೆ ರೆಫರ್ ಮಾಡಿದ್ದರ ಬಗ್ಗೆ ಹೇಳುವುದಾದರೆ, ೧೯೬೧ರಲ್ಲಿ ೨ ೧೯೬೨ರಲ್ಲಿ ೩, ೧೯೬೩ರಲ್ಲಿ ೨ ಮತ್ತು ೧೯೬೬ರಲ್ಲಿ ೧೦ ಕೇಸುಗಳನ್ನು ಅವರಿಗೆ ರೆಫರ್ ಮಾಡಿದ್ದೇವೆ, ನಂತರ ಮೋಸ ವಂಚನೆ ಹಣ ದುರುಪಯೋಗ ಇತ್ಯಾದಿ ಕೇಸುಗಳ ಬಗ್ಗೆ ೧೯೬೧ರಲ್ಲಿ ೧೯, ೧೯೬೨ರಲ್ಲಿ ೨೦ ೧೯೬೩ರಲ್ಲಿ ೭೯. ೧೯೬೪ರಲ್ಲಿ ೨೬, ೧೯೬೫ರಲ್ಲಿ ೭, ೧೯೬೬ರಲ್ಲಿ ೧೨, ೧೯೬೭ರಲ್ಲಿ ೨ ಕೇಸುಗಳನ್ನು ಅವರಿಗೆ ರೆಫರ್ ಮಾಡಿದ್ದೇವೆ. ನಂತರ ಜೀನಸ್ ಬರ್ಗಲರ್ ಕೇಸುಗಳ ಬಗ್ಗೆ ಹೇಳುವುದಾದರೆ, ೧೯೬೧ರಲ್ಲಿ ೬. ೧೯೬೨ರಲ್ಲಿ ೬. ೧೯೬೩ರಲ್ಲಿ ೩, ೧೯೬೪ರಲ್ಲಿ ೧, ೧೯೬೫ರಲ್ಲಿ ೨, ೧೯೬೬ರಲ್ಲಿ ೩ ಕೇಸುಗಳನ್ನು ನಾವು ಅವರಿಗೆ ರೆಫರ್ ಮಾಡಿದ್ದೇವೆ, ಅದೇ ದೊಂಬಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ ೧೯೬೩ರಲ್ಲಿ ೨೧. ೧೯೬೩ರಲ್ಲಿ ೧೦. ೧೯೬೪ರಲ್ಲಿ ೨ ಹಾಗೂ ೧೯೬೫ರಲ್ಲಿ ೩ ಕೇಸುಗಳನ್ನು ನಾವು ಅವರಿಗೆ ರೆಫರ್ ಮಾಡಿದ್ದೇವೆ. ಅದೇ ರೀತಿ ಕಳ್ಳನೋಟಿಗೆ ಸಂಬಂಧಪಟ್ಟಂತೆ ೧೯೬೧ರಲ್ಲಿ ೧೭೬, ೧೯೬೩ರಲ್ಲಿ ೧೩೦, ೧೯೬೪ರಲ್ಲಿ ೨೯೯, ೧೯೬೫ರಲ್ಲಿ ೪೫೫, ೧೯೬೬ರಲ್ಲಿ ೩೧೩ ಹಾಗೂ ೧೯೬೭ರಲ್ಲಿ ೩೨ ಕೇಸುಗಳು (ಇಲ್ಲಿವರೆಗೆ) ನಾವು ಅವರಿಗೆ ರೆಫರ್ ಮಾಡಿದ್ದೇವೆ. ಅಸ್ವಾಭಾವಿಕ ಮರಣಗಳು ಶಸ್ತ್ರಾಸ್ತ್ರ ಕಾಯಿದೆ ಪ್ರಕಾರ ೧೯೬೪ರಲ್ಲಿ ೩, ೧೯೬೫ರಲ್ಲಿ ೩ ಕೇಸುಗಳನ್ನು ನಾವು ಅವರಿಗೆ ರೆಫರ್ ಮಾಡಿದ್ದೇವೆ. ಅಸ್ವಾಭಾವಿಕ ಮರಣಗಳು ೧೯೬೨ರಲ್ಲಿ ೨, ೧೯೬೩ರಲ್ಲಿ ೨, ೧೯೬೪ರಲ್ಲಿ ೩, ೧೯೬೫ರಲ್ಲಿ ೭, ೧೯೬೬ರಲ್ಲಿ ೧೧ ಮತ್ತು ೧೯೬೭ರಲ್ಲಿ ೭ ಕೇಸುಗಳನ್ನು ನಾವು ಅವರಿಗೆ ರೆಫರ್ ಮಾಡಿದ್ದೇವೆ. ಈ ರೀತಿ ಅವರಿಗೆ ರೆಫರ್ ಮಾಡಿರತಕ್ಕಂತಹ ಒಟ್ಟು ಕೇಸುಗಳ ಬಗ್ಗೆ ಹೇಳುವುದಾದರೆ, ೧೯೬೧ರಲ್ಲಿ ೩೬೩ ೧೯೬೨ರಲ್ಲಿ ೨೩೬, ೧೯೬೩ರಲ್ಲಿ ೩೦೪, ೧೯೬೪ರಲ್ಲಿ ೩೧೪, ೧೯೬೫ರಲ್ಲಿ ೫೧೫, ೧೯೬೬ರಲ್ಲಿ ೩೬೯ ಕೇಸುಗಳನ್ನು ನಾವು ಅವರಿಗೆ ರೆಫರ್ ಮಾಡಿದ್ದೇವೆ. ಅದರಲ್ಲಿ ಡಿಟೆಕ್ಟ್ ಆಗಿರುವಂತಹದ್ದನ್ನು ತಮ್ಮ ಗಮನಕ್ಕೆ ತರುವುದಾದರೆ. ೧೯೬೨ ರಿಂದ ೧೯೬೭ರವರೆಗೆ ೯೬ ಕೇಸುಗಳನ್ನು ವರದಕ್ಷಿಣೆ ಸಾವಿಗೆ ಸಂಬಂಧಪಟ್ಟ ಹಾಗೆ ಅವರು ತನಿಖೆ ಮಾಡಿದ್ದಾರೆ. ಅದರಲ್ಲಿ ಚಾರ್ಜ್‌ಷೀಟ್ ಆಗಿರತಕ್ಕಂತಹದ್ದು ೬೩. ಮತ್ತೇ ಸಾಬೀತಾಗಿರತಕ್ಕಂತಹದ್ದು ೧೯. ಮತ್ತೆ ವಿಚಾರಣಾ ಹಂತದಲ್ಲಿರತಕ್ಕಂತಹದ್ದು ೪೬, ತನಿಖಾ ಹಂತದಲ್ಲಿರತಕ್ಕಂತಹದ್ದು ೧೪, ಶಿಕ್ಷೆಗೆ ಒಳಪಟ್ಟಿರತಕ್ಕಂತಹದ್ದು ೨ ಕೇಸುಗಳು ಮಾತ್ರ. ಸಿ.ಓ.ಡಿ. ತನಿಖೆಗಾಗಿ ನ್ಯಾಯಾಲಯದಲ್ಲಿರುವ ಪ್ರಕರಣಗಳು, ೬ ವರ್ಷಕ್ಕಿಂತಲೂ ಮೇಲ್ಪಟ್ಟು ಪೆಂಡಿಂಗ್ ಇರತಕ್ಕಂತಹ ಕೇಸುಗಳು ೨೩೫. ನಂತರ ೫ ವರ್ಷಕ್ಕಿಂತ ಮೇಲ್ಪಟ್ಟು ಇರತಕ್ಕಂತಹ ಕೇಸುಗಳು ೨೦, ೪ ವರ್ಷಕ್ಕೂ ಮೇಲ್ಪಟ್ಟು ಪೆಂಡಿಂಗ್ ಇರತಕ್ಕ ಕೇಸುಗಳು ೧೩, ೩ ವರ್ಷಕ್ಕೂ ಮೇಲ್ಪಟ್ಟು ಪೆಂಡಿಂಗ್ ಇರತಕ್ಕಂತಹ ಕೇಸುಗಳು ೯೫. ಎರಡು ವರ್ಷಕ್ಕೂ ಮೇಲ್ಪಟ್ಟು ಪೆಂಡಿಂಗ್ ಇರತಕ್ಕಂತಹ ಕೇಸುಗಳು ೩೨. ಒಂದು ವರ್ಷಕ್ಕೂ ಕಡಿಮೆ ಪೆಂಡಿಂಗ್ ಇರತಕ್ಕ ಕೇಸುಗಳು ೬೦. ಒಟ್ಟು ೪೯೭ ಪ್ರಕರಣಗಳಲ್ಲಿ ವಿಚಾರಣೆಗಾಗಿ ತನಿಖೆಗಾಗಿ ಚಾರ್ಜ್‌ಷೀಟ್‌ಗಾಗಿ ಇಟ್ಟಿದ್ದಾರೆ. ಮಧುಗಿರಿ ಪೋಲೀಸ್ ಠಾಣೆಯಲ್ಲಿ ಅಪರಾಧಿ ಸಂಖ್ಯೆ ಪದ್ದಿ ಅಲಿಯಾಸ್ ಪದ್ಮನಾಭ ಎಂಬುವರ ಕೊಲೆಯಾಗಿ ಹೊರಗೆ ಹಾಕಿ ಬಿಟ್ಟಿದ್ದಾರೆ. ಅಂತಹದ್ದು ಪತ್ತೆಯಾಗಿ ಪೋಲೀಸ್ ಅಧಿಕಾರಿಗಳಾದ ಡಿವೈಎಸ್‌ಪಿ., ಪಿಎಸ್‌ಐ., ಹೆಡ್ ಕಾನ್‌ಸ್ಟೇಬಲ್ ಎಲ್ಲಾ ಸೇರಿ ಒಟ್ಟು ೧೩ ಜನರ ಮೇಲೆ ಈ ಕೊಲೆಗೆ ಅವರೇ ಕಾರಣಕರ್ತರೆಂದು ತಿಳಿದುಬಂದಿದ್ದು ಆ ಪ್ರಕರಣ ತುಮಕೂರಿನ ಸೆಷನ್ ನ್ಯಾಯಾಲಯದಲ್ಲಿದೆ. ಪೋಲೀಸ್ ಅಧಿಕಾರಿಗಳು ಮಾಡಿರತಕ್ಕ ಅಪರಾಧದ ಮೇಲೆ ನಾವು ತೆಗೆದುಕೊಂಡಿರತಕ್ಕ ಕ್ರಮ ಇದು. ನಂತರ ಮಡಿಕೇರಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಅಲ್ಲಿಯ ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷರಾದ ಶ್ರೀ ಎಚ್. ಎಸ್. ವೆಂಕಟಪ್ಪನವರನ್ನು ಕೊಲೆ ಮಾಡಿ ಮುಚ್ಚಿಬಿಟ್ಟಿದ್ದರು. ಅದನ್ನು ಸಿ.ಓ.ಡಿ.ಗೆ ಕಳುಹಿಸಿದ ಮೇಲೆ ಕೊಲೆಗಾರರನ್ನು ಕಂಡುಹಿಡಿದು, ಅವರಿಂದ ಬಂದೂಕು ಟಾರ್ಚ್‌ನ್ನು ವಶಪಡಿಸಿಕೊಂಡಿದ್ದಾರೆ. ಆ ಪ್ರಕರಣ ಇಂದು ನ್ಯಾಯಾಲಯದ ಮುಂದಿದೆ. ಜನವರಿ ಮತ್ತು ಫೆಬ್ರುವರಿ ೧೯೬೬ರಲ್ಲಿ ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತ ನಡೆದ ೯ ಅಮಾನುಷ ದರೋಡೆಗಳಲ್ಲಿ ೬ ಜನರು ಕೊಲ್ಲಲ್ಪಟ್ಟು ಸಾವಿರಾರು ರೂಪಾಯಿಗಳು ಮತ್ತು ಬೆಲೆ ಬಾಳುವ ಸಾಮಾನುಗಳು ದೋಚಲ್ಪಟ್ಟವು. ಈ ಘಟನೆಗಳನ್ನು ಪತ್ತೆ ಹಚ್ಚುವಲ್ಲಿ ಯಾವುದೇ ಸುಳಿವೂ ಸಹ ಸಿಗಲಿಲ್ಲ. ಇದು ವೃತ್ತಿ ಡಕಾಯಿತರಿಂದ ನಡೆದದ್ದೆಂದು ತಿಳಿದು ಬಂದಿತು. ಈ ಎಲ್ಲಾ ೯ ಡಕಾಯಿತಿ ಪ್ರಕರಣಗಳನ್ನು ಸಿ.ಓ.ಡಿ.ಯು ತನಿಖೆಗಾಗಿ ತೆಗೆದುಕೊಂಡಿತು. ಸಿ.ಓ.ಡಿ. ವಿಭಾಗದ ಕೆಲವು ದಕ್ಷ ಅಧಿಕಾರಿಗಳ ಪರಿಶ್ರಮದ ಫಲವಾಗಿ

ಆಗ್ರ ಜಿಲ್ಲೆಯ ಫತೇಪುರ್ ಸಿಕ್ರಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಬಡಾಕೋಯ್ ಎಂಬ ಗ್ರಾಮದ ರಾಮಸ್ವರೂಪ್ ಬವೇರಿಯಾ ಎಂಬುವನ ಬೆರಳಚ್ಚು ದರೋಡೆ ನಡೆದ ಸ್ಥಳದಲ್ಲಿನ ಬೆರಳಚ್ಚಿಗೆ ಹೋಲಿಕೆಯಾಯಿತು. ಅನಂತರ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ತನಿಖೆಯನ್ನು ಕೈಗೊಂಡು ರಾಮಸ್ವರೂಪ್ ಬವೇರಿಯಾನ ಮೂವರು ಅನುಯಾಯಿಗಳನ್ನೂ ಸಹ ವಿಚಾರಿಸಿದಾಗ ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತ ನಡೆದ ೬ ಡಕಾಯಿತಿ ಪ್ರಕರಣಗಳಲ್ಲಿ ಇವರುಗಳ ಕೈವಾಡವಿದ್ದುದು ನಿಸ್ಸಂಶಯವಾಗಿ ಕಂಡುಬಂದಿತು. ಬೆಂಗಳೂರು ನಗರದಲ್ಲಿ ನಡೆದ ಅಮಾನುಷ ಕೃತ್ಯವನ್ನು ಪತ್ತೆ ಹಚ್ಚುವುದರಲ್ಲಿ ನಮ್ಮವರು ಇಷ್ಟು ಸಫಲರಾಗಿರುವುದರ ಬಗ್ಗೆ ನನಗೆ ಸಂತೋಷವಾಗುತ್ತದೆ.

ಇನ್ನು ಕೋಲಾರ ಪುರಸಭೆಯ ಶ್ರೀಮಂತಿ ಮೀನಾಕ್ಷಿ ಎಂಬುವರು ದಿನಾಂಕ ೨೨-೪-೧೯೮೫ರಂದು ಕೊಲ್ಲಲ್ಪಟ್ಟು ಆಕೆಯ ಸಾವಿಗೆ ಕಾರಣ ಆಕೆಯ ಗಂಡ ಮತ್ತು ಪೋಲೀಸ್ ಕಾನ್‌ಸ್ಟೇಬಲ್ ಶ್ರೀ ಮುನಿವೆಂಕಟಪ್ಪ ಮತ್ತು ಆತನ ತಂದೆ ತಾಯಿಗಳು ಎಂಬುದು ಸಿ.ಓ.ಡಿ. ತನಿಖೆಯಿಂದ ದೃಢಪಟ್ಟಿದ್ದು ಈಗಾಗಲೇ ಅವರುಗಳೆಲ್ಲರ ಮೇಲೆ ಚಾರ್ಜ್ ಷೀಟ್ ಹಾಕಲಾಗಿದ್ದು ಇದು ವಿಚಾರಣೆಯ ಹಂತದಲ್ಲಿದೆ.

ದಿನಾಂಕ ೨೬-೭-೧೯೮೪ರಂದು ರಾಜಾಜಿನಗರದ ಆರಕ್ಷಕ ಠಾಣೆಯ ಪಿ.ಎಸ್.ಐ., ಇಬ್ಬರು ಎಚ್.ಸಿ. ಮತ್ತು ಇಬ್ಬರು ಪಿ.ಸಿ.ಗಳು ಶ್ರೀ ವೆಂಕಟರಾಮಯ್ಯ ಎಂಬುವರನ್ನು ವಿನಾಕಾರಣ ಠಾಣೆಯಲ್ಲಿ ಅಕ್ರಮವಾಗಿ ಬಂಧನದಲ್ಲಿಟ್ಟು ಅವರ ಮೇಲೆ ಹಲ್ಲೆ ಮಾಡಿದರೆಂಬ ವಿಷಯದ ಬಗ್ಗೆ ಸಿ.ಓ.ಡಿ ಯು ತನ್ನ ತನಿಖೆಯಿಂದ ಸಿದ್ಧಮಾಡಿ ತೋರಿಸಿತು. ಈ ಎಲ್ಲಾ ಪೋಲೀಸು ಅಧಿಕಾರಿಗಳ ಮೇಲೆ ಆರೋಪವನ್ನು ಹೊರಿಸಿ ಚಾರ್ಜ್ ಷೀಟ್ ಅನ್ನು ಸಲ್ಲಿಸಲಾಗಿದೆ ಈ ಪ್ರಕರಣವು ವಿಚಾರಣೆಯ ಹಂತದಲ್ಲಿರುತ್ತದೆ. ಈ ಎಲ್ಲಾ ವಿಷಯಗಳನ್ನು ನೋಡಿದಾಗ, ಮೋಸ ಮತ್ತು ವಂಚನೆ. ನಕಲಿ ಮಾರ್ಕ್ಸ್‌ಕಾರ್ಡ್ ಮತ್ತು ಪಿ.ಯು.ಸಿ. ಪ್ರಮಾಣಪತ್ರಗಳಿಗೆ ಸಂಬಂಧಪಟ್ಟಂತಾಗೆ, ನಕಲೀ ಮಾರ್ಕ್ಸ್ ಕಾರ್ಡ್ ಮತ್ತು ಉತ್ತರ ಪತ್ರಿಕೆಗಳನ್ನು ಸೇರಿಸುವ ಪ್ರಕರಣಗಳು, ಹೀನಾಯವಾಗಿ ಮನೆ ಮುರಿದು ನಡೆಸಿದ ಕಳ್ಳತನ ಇವುಗಳ ಬಗ್ಗೆ ದೂರುಗಳು ಬಂದಿದ್ದು ತನಿಖೆ ನಡೆಯುತ್ತಿವೆ. ಇಂತಹ ವಿಷಯಗಳಲ್ಲಿ ಸಿ.ಓ.ಡಿ. ಇಲಾಖೆ ಅತ್ಯಂತ ದಕ್ಷ ರೀತಿಯಲ್ಲಿ ಕೆಲಸ ಮಾಡಿ ಪ್ರಕರಣಗಳನ್ನು ಪತ್ತೆ ಹಚ್ಚಿರುತ್ತದೆ. ಕನಕಪುರದಲ್ಲಿರುವ ಅಪೆಕ್ಸ್ ಬ್ಯಾಂಕಿನಿಂದ ಸುಮಾರು ೩.೫ ಲಕ್ಷ ಬೆಲೆ ಬಾಳುವ ಚಿನ್ನದ ಒಡವೆಗಳನ್ನು ದಿನಾಂಕ ೨೭-೧-೧೯೮೪ರ ರಾತ್ರಿ ಕದಿಯಲ್ಪಟ್ಟಿತು. ಈ ಬಗ್ಗೆ ಆರೋಪಿಗಳ ಮೇಲೆ ಚಾರ್ಜ್‌ಷೀಟ್ ಹಾಕಲಾಗಿದ್ದು ಪ್ರಕರಣವು ವಿಚಾರಣೆಯ ಹಂತದಲ್ಲಿದೆ. ಖೋಟಾ ನೋಟು ನಿರ್ಮಾಣ ಪ್ರಕರಣದ ಬಗ್ಗೆ ಹೇಳುವುದಾದರೆ, ದಿನಾಂಕ ೧೩-೧೨-೧೯೮೧ರಂದು ಮೋಹನ್‌ರಾಯ್ ಎಂಬುವರು ಅಲಸೂರಿನ ಸೇಂದಿ ಅಂಗಡಿಯೊಂದರಲ್ಲಿ ನೂರು ರೂಪಾಯಿಗಳ ಖೋಟಾ ನೋಟೊಂದನ್ನು ನೀಡುವಾಗ ಸಿಕ್ಕಿಬಿದ್ದರು. ಈ ಸಂಬಂಧವಾಗಿ ೭ ಮುದ್ರಿಸುವ ಬ್ಲಾಕ್‌ಗಳನ್ನು, ೨ ಪ್ರಿಂಟಿಂಗ್ ಪ್ರೆಸ್‌ಗಳನ್ನು, ಅದಕ್ಕೆ ಬೇಕಾದ ಬಣ್ಣವನ್ನು ಮತ್ತು ಇನ್ನಿತರ ಸಲಕರಣೆಗಳನ್ನು ವಶಪಡಿಸಿಕೊಂಡು ಎಲ್ಲಾ ಆರೋಪಿಗಳ ಮೇಲೆ ದಿನಾಂಕ ೨೬-೮-೧೯೮೨ರಲ್ಲಿ ಚಾರ್ಜ್‌ಷೀಟ್ ಹಾಕಲಾಯಿತು. ಈ ಪ್ರಕರಣಗಳು ನ್ಯಾಯಾಲಯದ ವಿಚಾರಣೆ ಹಂತದಲ್ಲಿರುತ್ತದೆ.

ಹೀಗೆ ಅನೇಕ ಸಂದರ್ಭದಲ್ಲಿ ಸಿ.ಓ.ಡಿ.ಗೆ ಕಳುಹಿಸಿಕೊಟ್ಟ ಪ್ರಕರಣಗಳನ್ನು ಪತ್ತೆ ಹಚ್ಚಿ ನಮ್ಮವರು ಒಳ್ಳೆಯ ಕೆಲಸ ಮಾಡಿದ್ದಾರೆ. ಆ ದೃಷ್ಟಿಯಲ್ಲಿ ಅಲ್ಲಿಗೆ ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕ ಹಿರಿಯ ಅಧಿಕಾರಿಗಳನ್ನು ಹಾಕಿದ್ದೇವೆ. ಬಹುಶಃ ಈ ವಿಷಯದಲ್ಲಿ ಕೆಳಗಿನ ಮಟ್ಟದಲ್ಲಿ ಕೆಲವು ಬದಲಾವಣೆ ಮಾಡುವುದರಿಂದ ಅಲ್ಲಿ ಒಳ್ಳೆಯ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಇನ್ನು ಪೋಲೀಸ್ ಇಲಾಖೆಯಲ್ಲಿ ಬೇಕಾಗಿರತಕ್ಕ ವೈರ್‌ಲೆಸ್ ಸೆಟ್ ಆಗಲೀ ಅಥವಾ ಅವರಿಗೆ ಬೇಕಾಗಿರತಕ್ಕ ಉಪಕರಣಗಳಾಗಲೀ ಏನಿವೆ ಅವನ್ನು ಹೆಚ್ಚು ಮಾಡುವುದಕ್ಕೋಸ್ಕರವಾಗಿ ಕ್ರಮ ಕೈಗೊಳ್ಳಲಾಗಿದೆ. ಹೆಚ್ಚು ದಕ್ಷತೆಯಿಂದ ಕೆಲಸ ಮಾಡುವುದಕ್ಕಾಗಿ ವೈರ್‌ಲೆಸ್ ಆಗಲೀ, ವಾಕಿ ಟಾಕಿಯಾಗಲೀ ಕೊಂಡುಕೊಳ್ಳಲು ಕೇಂದ್ರ ಸರ್ಕಾರ ಸಹಾಯಧನ ಕೊಡುತ್ತದೆ. ಕಳೆದ ವರ್ಷ ಈ ಬಗ್ಗೆ ೪೫ ಲಕ್ಷ ರೂಪಾಯಿ ಅವರು ಕೊಟ್ಟಿದ್ದು ನಾವು ೨೫ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೆವು. ಈ ವರ್ಷ ಇನ್ನೂ ಹೆಚ್ಚು ಸಹಾಯ ನಮಗೆ ಬೇಕೆಂದು ಕೇಳಿದ್ದು ನಾವು ೨೦ ಲಕ್ಷ ಕೊಟ್ಟಿರುವುದರಿಂದ, ಅವರೂ ೨೦ ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಈ ಉಪಕರಣಗಳನ್ನು ಇನ್ನೂ ಹೆಚ್ಚು ಪ್ರಮಾಣದಲ್ಲಿ ಕೊಳ್ಳಲು ಪ್ರಯತ್ನಿಸುತ್ತೇವೆ. ಇನ್ನು ಕಂಪ್ಯೂಟರ್ ಬಗ್ಗೆ ಹೇಳುವುದಾದರೆ, ಅಪರಾಧ ಮತ್ತು

ಅಪರಾಧಿಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಕ್ರೋಢೀಕರಿಸುವಲ್ಲಿ ಗಣಕ ಯಂತ್ರದ ವಿಭಾಗವು ವಿಶೇಷವಾದ ಸೇವೆಯನ್ನು ಸಲ್ಲಿಸುತ್ತಿದೆ.

ವೈರ್‌ಲೆಸ್, ವಿ.ಎಚ್.ಎಫ್. ಸಂಪರ್ಕ ವ್ಯವಸ್ಥೆ, ಟೆಲಿಪ್ರಿಂಟರ್, ಹಾಟ್‌ಲಿಂಕ್ ಸಂಪರ್ಕ ವ್ಯವಸ್ಥೆಯಲ್ಲಿ ನಗರ ನಿಯಂತ್ರಣ ಮತ್ತು ಪಟ್ಟಣ ನಿಯಂತ್ರಣ ಕೊಠಡಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆ. ಇವುಗಳ ಮೂಲಕ ದಕ್ಷತೆಯಿಂದ ಕೆಲಸ ಮಾಡಿ ಅದರ ಮುಖಾಂತರ ಜನರಿಗೆ ಅನುಕೂಲ ಆಗುವ ರೀತಿಯಲ್ಲಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇಲ್ಲಿ ಮಾತನಾಡಿದ ಹೆಚ್ಚು ಸಂಖ್ಯೆಯ ಸದಸ್ಯರು ಹೆಚ್ಚಾಗಿ ಪೋಲೀಸ್ ಇಲಾಖೆಯಲ್ಲಿ ಕೆಳ ದರ್ಜೆಯಲ್ಲಿರುವ ಅಧಿಕಾರಿಗಳಿಗೆ ಮುಖ್ಯವಾಗಿ ವಸತಿ ಮನೆಗಳನ್ನು ಕೊಡುವುದರ ಬಗ್ಗೆ, ಕಡಿಮೆ ಸಂಬಳ ಬರುವವರಿಗೆ ಹೆಚ್ಚು ಸಹಾಯ ಮಾಡಬೇಕೆಂದು ಹೇಳಿದ್ದಾರೆ. ಕಡಿಮೆ ಸಂಬಳ ಬರುವವರಿಗೆ ಹೆಚ್ಚು ಸಹಾಯ ಆಗುತ್ತದೆಂದು ಹೇಳಿ ೪೬ ಸಾವಿರ ಜನರು ಇರತಕ್ಕ ಈ ಪೋಲೀಸ್ ಅಧಿಕಾರಿಗಳಲ್ಲಿ ಇವತ್ತಿನ ದಿವಸ ೧೯ ಸಾವಿರ ಜನರಿಗೆ ಮಾತ್ರ ಮನೆಗಳನ್ನು ಕೊಟ್ಟಿದ್ದೇವೆ. ಸುಮಾರು ೪೬ ಪರ್ಸೆಂಟ್ ಮನೆಗಳನ್ನು ಕಟ್ಟಿದ್ದೇವೆ. ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ಮಂಡಳಿ ಆದಮೇಲೆ ಈ ವರ್ಷ ಹೌಸಿಂಗ್ ದೆವಲಪ್‌ಮೆಂಟ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ೧೩೦ ಲಕ್ಷ ರೂಪಾಯಿಗಳನ್ನು ಯೂನಿಟ್ ಟ್ರಸ್ಟ್, ಆಫ್ ಇಂಡಿಯಾದಿಂದ ೨೧೪ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ. ಈಗ ಖರ್ಚಾಗಿರತಕ್ಕದ್ದು ಸ್ವಲ್ಪಮಟ್ಟಿಗೆ ಆಗಿದೆ, ಅದು ಅಷ್ಟೊಂದು ತೃಪ್ತಿದಾಯಕವಾಗಿಲ್ಲ. ಈ ಮನೆಗಳನ್ನು ಕಟ್ಟಿಸುವುದು ಅಷ್ಟೆ ಅಲ್ಲದೆ, ಬೇರೆ ಬೇರೆ ಜಾಗಗಳಲ್ಲಿ ಗೃಹ ನಿರ್ಮಾಣ ನಿಗಮದಿಂದ ಈ ಕೆಳಗೆ ಕಂಡಂತಹ ಜಾಗಗಳಲ್ಲಿ ಮನೆಗಳನ್ನು ಕಟ್ಟುತ್ತಿದ್ದೇವೆ. ಆ ವಿವರ ಕೆಳಕಂಡಂತಿದೆ.—

ಬೆಂಗಳೂರು ನಗರ	ಕಾನ್‌ಸ್ಟೇಬಲ್ಸ್‌ಗಳಿಗಾಗಿ	೧೪೪
ಜಯನಗರ, ನೀಲಸಂದ್ರ	ಸಬ್ ಇನ್ಸ್‌ಪೆಕ್ಟರ್	೨೪
ಬೆಂಗಳೂರು ಜಿಲ್ಲೆ	ಎಸ್‌ಐ	೧೨
ರಾಮನಗರ	ಕಾನ್‌ಸ್ಟೇಬಲ್	೨೪
ಚನ್ನಪಟ್ಟಣ	,,	೨೪
ತುಮಕೂರು ಜಿಲ್ಲೆ	,,	೪೮
ಮೈಸೂರು ಜಿಲ್ಲೆ		
ಮೈಸೂರು	,,	೯೬
ಶಿವಮೊಗ್ಗ ಜಿಲ್ಲೆ	,,	೯೬
ಚಿತ್ರದುರ್ಗ ಜಿಲ್ಲೆ		
ದಾವಣಗೆರೆ	,,	[illegible]
ಬೀದರ್ ಜಿಲ್ಲೆ		
ಸಂತಾಪುರ	,,	[illegible]
ಹಳ್ಳಿಖೇಡ್	,,	[illegible]
ಬೆಳಗಾವಿ ಜಿಲ್ಲೆ		
ಬೆಳಗಾವಿ	,,	೯೬
ದಕ್ಷಿಣ ಕನ್ನಡ ಜಿಲ್ಲೆ		
ಮಂಗಳೂರು	,,	೪೮
		೭೦೮

೧೮ ಮನೆಗಳು ಈಗ ತಯಾರಾಗುತ್ತಾ ಇದೆ. ಅದೂ ಅಲ್ಲದೆ ರಾಜ್ಯ ಪೋಲೀಸ್ ಗೃಹ ನಿರ್ಮಾಣ ಮಂಡಳಿಯವರು ಈಗಾಗಲೇ ಪ್ರಾರಂಭಿಸಿರುವ ವಸತಿಯೇತರ ಕಾಮಗಾರಿಗಳ ವಿವರ ಹೇಳುವುದಾದರೆ ಅದು ಈ ರೀತಿ ಇದೆ.—

ಬೆಂಗಳೂರು ನಗರ		
ಚಿಕ್ಕಪೇಟೆ	ಆರಕ್ಷಕ ಠಾಣೆ	೧
ತರಗುಪೇಟೆ	,,	೧
ಬನಶಂಕರಿ ೨ನೇ ಹಂತ	,,	೧
ಮಹಾತ್ಮಗಾಂಧಿ ರಸ್ತೆ	ವೈರ್‌ಲೆಸ್ ಹೆಡ್ ಕ್ವಾರ್ಟರ್ಸ್	೧
ರಿಚ್‌ಮಂಡ್ ರಸ್ತೆ	ಅಧಿಕ ಕೊಠಡಿಗಳು	೨
ಸಲೈವಾನ್ ಪೋಲೀಸ್ ಗ್ರೌಂಡ್ಸ್	ಅಧಿಕಾರಿಗಳ ಭೋಜನ ಶಾಲೆಯು ಮೊದಲನೆ ಮಹಡಿ	೧
ಯಲಹಂಕ	ಡಾರ್ಮಿಟರಿ ಪೋಲೀಸ್ ಡ್ರೈವಿಂಗ್ ಸ್ಕೂಲ್	೧
ಬೆಂಗಳೂರು ಜಿಲ್ಲೆ		
ಅತ್ತಿಬೆಲೆ	ಆರಕ್ಷಕ ಠಾಣೆ	೧
ಸಾತನೂರು	,,	೧
ದಕ್ಷಿಣ ಕನ್ನಡ ಜಿಲ್ಲೆ		
ಮಂಗಳೂರು	ಡಿಐಜಿಯವರ ಕಛೇರಿ	೧
ಮಂಡ್ಯ ಜಿಲ್ಲೆ	ಜಿಲ್ಲಾ ಪೋಲೀಸ್ ಕಛೇರಿ	೧
ಮೈಸೂರು ಜಿಲ್ಲೆ		
ಚಾಮರಾಜನಗರ	ಡಿಎಸ್‌ಪಿಯವರ ಕಛೇರಿ	೧
	ಒಟ್ಟು	೧೩

ಶ್ರೀಮತಿ ಮುಕ್ತರುನ್ನೀಸಾ.—ಮೈಸೂರು ಸಿಟಿಗೆ ಎಷ್ಟು ಕೊಟ್ಟಿದ್ದೀರಿ ?

ಶ್ರೀ ಬಿ. ರಾಚಯ್ಯ.—ನಾನು ಆಗಲೇ ಹೇಳಿದ್ದೇನೆ. ಪೋಲೀಸ್ ಕಾನ್‌ಸ್ಟೇಬಲ್‌ಗಳಿಗಾಗಿ ೯೦ ಮನೆಗಳನ್ನು ಕಟ್ಟುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮೈಸೂರು ಜಿಲ್ಲೆಯ ಚಾಮರಾಜನಗರಕ್ಕೆ ಏನು ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಡಿಎಸ್‌ಪಿಯವರ ಕಛೇರಿ ಕಟ್ಟಡ_೧ ಕೊಟ್ಟಿದ್ದೇವೆ. ಇನ್ನು ಅಗ್ನಿಶಾಮಕ ದಳದ ವಿಷಯದಲ್ಲಿ ಯಾರೂ ಮಾತನಾಡಲಿಲ್ಲ. ಅದರ ಅವಶ್ಯಕತೆ ಇಲ್ಲವೆಂದು ಹೇಳಿದರೂ ಸಹ ಅಗ್ನಿಶಾಮಕ ದಳ ೩೨ ಇವೆ. ಅದರಲ್ಲಿ ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗೆ ಮಂಜೂರು ಮಾಡಿದ್ದೇವೆ. ಅದು ಇಷ್ಟರಲ್ಲಿ ಆಗುತ್ತದೆ. ಬೆಳಗಾಂ ಜಿಲ್ಲೆಯ ಬೈಲಹೊಂಗಲದಲ್ಲಿ ಸ್ಥಳ ಕೊಟ್ಟಿದ್ದಾರೆ. ಅದಕ್ಕೆ ವಾಹನ ಕಳುಹಿಸಿ ಕೊಡಿಯೆಂದು ಹೇಳಿದ್ದಾರೆ. ವಾಹನ ಕಳುಹಿಸಿ ಕೊಡುವುದಕ್ಕೆ ಪತ್ರ ಬರೆದಿದ್ದೇನೆ.

ಇನ್ನು ರಾಷ್ಟ್ರೀಯ ಪೋಲೀಸ್ ವಿಷಯದಲ್ಲಿ ಮಾನ್ಯ ಚಿಕ್ಕಬೋರಯ್ಯನವರು ಶ್ರೀನಿವಾಸ್‌ರವರು ಮತ್ತು ಆರ್. ವೆಂಕಟರಾಮಯ್ಯನವರು ರಾಷ್ಟ್ರೀಯ ಪೋಲೀಸ್ ಆಯೋಗದ ಕಾಪಿಗಳು ಸಿಗುವುದಿಲ್ಲ, ಅವುಗಳನ್ನು ಪ್ರಿಂಟ್ ಮಾಡಿ ಸಂಕ್ಷಿಪ್ತವಾದ ವರದಿಯನ್ನು ಕೊಡಿಯೆಂದು ಮಾನ್ಯ ಶ್ರೀನಿವಾಸ್‌ರವರು

ಹೇಳಿದರು. ಈಗಾಗಲೇ ರಾಷ್ಟ್ರೀಯ ಪೋಲೀಸ್ ಆಯೋಗ ವರದಿಯನ್ನು ಕೊಟ್ಟಿದೆ. ಎರಡನೇ ಆಯೋಗವನ್ನು ೧೯೭೭ರಲ್ಲಿ ರಚಿಸಿದ್ದು. ಮೂರನೇ ಆಯೋಗವನ್ನು ೧೯೮೩ರಲ್ಲಿ ರಚಿಸಲಾಗಿದ್ದು ಅವರು ೧೯೮೫ರಲ್ಲಿ ವರದಿಯನ್ನು ಕೊಟ್ಟಿದ್ದಾರೆ. ೧೯೭೯ ರಿಂದ ೧೯೮೧ರವರೆಗೆ ೮ ವರದಿಗಳನ್ನು ಕೊಟ್ಟಿದ್ದಾರೆ. ಆ ಮೊದಲನೆಯ ವರದಿಯಲ್ಲಿ ಹಿರಿಯ ಅಧಿಕಾರಿಗಳ ಆರ್ಡರ್ಲಿ ಪದ್ಧತಿ ಏನಿತ್ತು, ಇದುವರೆಗೆ ಪೋಲೀಸ್ ಅಧಿಕಾರಿಗಳ ಮನೆಯಲ್ಲಿ ಪೋಲೀಸ್ ಕಾನ್‌ಸ್ಟೇಬಲ್‌ಗಳು ಕೆಲಸ ಮಾಡಬೇಕಾಗಿತ್ತು ಅವರನ್ನು ಕೆಟ್ಟ ಮಾತುಗಳಿಂದ ಬೈಯುತ್ತಾರೆ, ಅದು ಅಭ್ಯಾಸಬಲ ಅವರು ಮನೆಗೆ ಹೋದಾಗಲೂ ಅದೇರೀತಿ ನಡೆದುಕೊಳ್ಳುತ್ತಾರೆಂದು ಹೇಳಿದಾಗ ಕಾನ್‌ಸ್ಟೇಬಲ್‌ಗಳು ಮಾಡತಕ್ಕ ಕೆಲಸವನ್ನು ರದ್ದುಪಡಿಸಿ ಅದರ ಬದಲು ಸಹಾಯಕರನ್ನು ನೇಮಿಸಲು ಸರ್ಕಾರ ಒಪ್ಪಿದೆ.

ಸಬ್-ಇನ್‌ಸ್ಪೆಕ್ಟರ್ ಮತ್ತು ಡಿವೈಎಸ್‌ಪಿ. ಹುದ್ದೆಗಳಿಗೆ ನೇರ ನೇಮಕಾತಿಯನ್ನು ರದ್ದುಗೊಳಿಸಬೇಕೆಂದು ಹೇಳಿದ್ದರು. ಮೊದಲನೇ ವರದಿ ಪ್ರಕಾರ ನೇರ ನೇಮಕಾತಿಯನ್ನು ಡಿವೈಎಸ್‌ಪಿ. ಮತ್ತು ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ತಪ್ಪಿಸಿದರೆ ಹೊಸ ರಕ್ತ ಇಲಾಖೆಗೆ ಬರುವುದಕ್ಕೆ ಸಾಧ್ಯವಿಲ್ಲ ಕಾನ್‌ಸ್ಟೇಬಲ್‌ನಿಂದ ಹಿಡಿದು ಎಸ್.ಪಿ.ವರೆಗೆ ಮೇಲಕ್ಕೆ ಬರುವ ಅವಕಾಶ ಸಿಗಬೇಕೆಂದು ವರದಿಯಲ್ಲಿದೆ. ಅದಕ್ಕೋಸ್ಕರ ಎಸ್.ಎಸ್.ಎಲ್.ಸಿ ಆಗಿರತಕ್ಕವರನ್ನು ಪಿ.ಸಿ. ಆಗಿ ನೇಮಿಸಿದ ಮೇಲೆ ಅವರಿಗೆ ಸರಿಯಾದ ತರಬೇತಿ ಕೊಟ್ಟು ಅವರು ತರಬೇತಿಯಿಂದ ಮುಂದಕ್ಕೆ ಬಂದು ಅವರಿಗೆ ಬಡ್ತಿ ಅವಕಾಶ ದೊರೆಯಬೇಕೆಂದು ಹೇಳಿದ್ದರು. ನಮ್ಮ ನಿಯಮಾವಳಿ ಪ್ರಕಾರ ಮತ್ತು ಸರ್ಕಾರ ಮೊದಲಿನಿಂದ ಒಪ್ಪಿರುವ ಪ್ರಕಾರ ಹೆಚ್ಚು ಸಂಖ್ಯೆಯಲ್ಲಿ ನೇರ ನೇಮಕಾತಿ ಮಾಡುವ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಆದ್ದರಿಂದ ಇಲಾಖೆಯ ದಕ್ಷತೆಯನ್ನು ಚುರುಕುಗೊಳಿಸುವುದಕ್ಕೆ ಅವಕಾಶವಾಗುತ್ತದೆಂಬ ದೃಷ್ಟಿಯಿಂದ ಸಬ್ ಇನ್‌ಸ್ಪೆಕ್ಟರ್ ಮತ್ತು ಡಿವೈಎಸ್‌ಪಿ ಯವರ ನೇರ ನೇಮಕಾತಿಯನ್ನು ರದ್ದುಗೊಳಿಸುವುದಕ್ಕಾಗುವುದಿಲ್ಲ. ಈಗಿರತಕ್ಕ ಪದ್ಧತಿಯನ್ನೇ ಅನುಸರಿಸಿಕೊಂಡು ಹೋಗೋಣವೆಂದು ನಾವು ತೀರ್ಮಾನಿಸಿದ್ದೇವೆ. ಅತ್ಯಾವಶ್ಯಕ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಪೋಲೀಸ್ ಸಿಬ್ಬಂದಿಗೆ ನೀಡಲು ತಿಳಿಸಿದ್ದೇವೆ. ಪೋಲೀಸ್ ಕೋ-ಆಪರೇಟಿವ್ ಸೊಸೈಟಿಗಳು ಎಲ್ಲಿವೆ ಅಲ್ಲಿ ಅವರಿಗೆ ಸಹಾಯಧನ ಕೊಡುವುದಕ್ಕೆ ಮತ್ತು ಅವರಿಗೆ ಸಹಾಯ ಮಾಡತಕ್ಕ ತೀರ್ಮಾನಕ್ಕೆ ಬಂದಿದ್ದೇವೆ. ನಾಲ್ಕನೆಯದಾಗಿ ಕೆಳಹಂತದಲ್ಲಿರುವ ಎಲ್ಲಾ ಸಿಬ್ಬಂದಿ ವರ್ಗಕ್ಕೆ ವಸತಿ ಗೃಹಗಳನ್ನು ನೀಡುವ ಸಲುವಾಗಿ ಶಿಫಾರಸ್ಸು ಮಾಡಿದ್ದಾರೆ. ಅದನ್ನು ಒಪ್ಪಿದ್ದೇವೆ. ವರದಿ ಪ್ರಕಾರ ನೂರರಷ್ಟು ಸಿಬ್ಬಂದಿಗೂ ವಸತಿ ಗೃಹಗಳನ್ನು ನೀಡಬೇಕಾದಲ್ಲಿ ೨೫ ಸಾವಿರ ಗೃಹಗಳನ್ನು ಕಟ್ಟಬೇಕಾಗುತ್ತದೆ ಮತ್ತು ಅದಕ್ಕೆ ೧೫೮ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ೧೦ ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ ಮನೆಗಳನ್ನು ಕಟ್ಟತಕ್ಕ ಶಿಫಾರಸ್ಸನ್ನು ಒಪ್ಪಿದ್ದೇವೆ. ೨ನೇ ವರದಿಯಲ್ಲಿ ಕರ್ನಾಟಕ ರಾಜ್ಯದ ಪೋಲೀಸ್ ಸಿಬ್ಬಂದಿಗೆ ಕಲ್ಯಾಣ ಯೋಜನೆಗಳನ್ನು ಕೇಳಿದ್ದಾರೆ. ಬೆನವಲೆಂಟ್ ಫಂಡ್ ಮುಖಾಂತರ ಫ್ಯಾಮಿಲಿಗಳಿಗೆ ತರಬೇತಿ ಕೊಡತಕ್ಕದ್ದು, ಹೊಲಿಗೆ ಯಂತ್ರ ಕೊಡತಕ್ಕದ್ದು, ಗೃಹ ಕೈಗಾರಿಕೆ, ಟೈಪರೈಟಿಂಗ್ ಕಲಿಸತಕ್ಕದ್ದು ಈ ಎಲ್ಲಾ ಕಾರ್ಯಕ್ರಮಗಳನ್ನು ಮಾಡಿಸುತ್ತಿದ್ದೇವೆ. ಕಲ್ಯಾಣ ನಿಧಿಯಲ್ಲಿ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕೆ ಮತ್ತು ಕುಟುಂಬದಲ್ಲಿ ತೀರಿಹೋದ ಸಂದರ್ಭದಲ್ಲಿ ಧನಸಹಾಯ ಮಾಡುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಅವರಿಗೆ ಸಹಾಯ ಮಾಡುತ್ತಿದ್ದೇವೆ. ಗ್ರೂಪ್ ಇನ್‌ಶೂರೆನ್ಸ್ ಸ್ಕೀಂ ಅನ್ನು ಜಾರಿಗೊಳಿಸಬೇಕೆಂದು ಹೇಳಿದ್ದರು. ಅದನ್ನು ಜಾರಿಗೊಳಿಸುತ್ತಿದ್ದೇವೆ. ಬ್ಯಾಂಕುಗಳ ಮೂಲಕ ಕಂತುಗಳಲ್ಲಿ ವಾಹನಗಳನ್ನು ತಮ್ಮದೇ ಆಗಿ ಪಡೆದುಕೊಳ್ಳುವುದಕ್ಕೆ ಅವಕಾಶ ಮಾಡಿ ಎಂದು ಹೇಳಿದ್ದರು. ಬ್ಯಾಂಕುಗಳ ಮೂಲಕ ಸಾಲ ಪಡೆದು ಮೋಟಾರ್ ವಾಹನವನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿದ್ದೇವೆ ಬ್ಯಾಂಕಿನವರು ನಮಗೆ ಸಹಾಯ ಮಾಡುತ್ತಿದ್ದಾರೆ, ಆದರೆ ಬಡ್ಡಿ ಮಾತ್ರ ಕಡಿಮೆ ಆಗಿಲ್ಲ. ೪ ಪರ್ಸೆಂಟ್ ಬಡ್ಡಿಗೆ ಕೊಡಬೇಕೆಂದು ಕೇಳಿದ್ದೇವೆ. ಅವರೆಲ್ಲ ಕಡಿಮೆ ಸಂಬಳದವರಾದ್ದರಿಂದ ೧೫ ಪರ್ಸೆಂಟ್ ಬಡ್ಡಿ ಕೊಟ್ಟು ವಾಹನಗಳನ್ನು ಕೊಳ್ಳುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ಅದನ್ನು ಕಡಿಮೆ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಕೇಂದ್ರ ಹಣಕಾಸಿನ ಸಚಿವರು ಇದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತಾರೆಂದು ನಂಬಿದ್ದೇನೆ. ನ್ಯಾಯಾಲಯಗಳಿಗೆ ಜುಲ್ಮಾನೆ ವಿಧಿಸತಕ್ಕ ಅಧಿಕಾರ ಇದೆ. ಅದನ್ನು ಪೋಲೀಸ್ ಅಧಿಕಾರಿಗಳಿಗೆ ಕೊಡಬೇಕೆಂದು ಕೇಳಿದ್ದಾರೆ. ಇದನ್ನು ನಾವು ಇನ್ನೂ ಒಪ್ಪಿಲ್ಲ. ಇನ್ನು ಇಲಾಖೆಯನ್ನು ಆಧುನೀಕರಣಗೊಳಿಸುವಂತೆ ಆಯೋಗ ತಿಳಿಸಿದೆ. ಆ ವಿಷಯ

ದಲ್ಲಿ ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದೇವೆ, ನಮಗೆ ಹಣ ಒದಗಿದಾಗ ಆಧುನೀಕರಣಗೊಳಿಸುವುದಕ್ಕೆ ಪ್ರಾರಂಭ ಮಾಡುತ್ತೇವೆ. ನಿಯಮಗಳು ಮಾರ್ಪಾಡಾಗಬೇಕು. ೨೪ ಗಂಟೆಗಳಿಗಿಂತ ಹೆಚ್ಚು ಕಾಲ ಏನು ಬಂಧಿಸುತ್ತಿದ್ದಾರೆ ಅಷ್ಟು ಕಾಲ ಇಟ್ಟುಕೊಳ್ಳುವುದಕ್ಕೆ ಅವಕಾಶ ಇಲ್ಲ. ಅದನ್ನು ಬದಲಾವಣೆ ಮಾಡಬೇಕೆಂದು ಚಿಕ್ಕಬೋರಯ್ಯನವರು ಮತ್ತಿತರ ೩ ಮಂದಿ ಸದಸ್ಯರು ಹೇಳಿದ್ದಾರೆ ೨೪ ಗಂಟೆಗಳಿಗಿಂತ ಹೆಚ್ಚು ಕಾಲ ಅರೆಸ್ಟ್ ಮಾಡಿದ್ದು ತೋರಿಸದೆ ಹಾಗೆ ಇಟ್ಟುಕೊಂಡು ಕಿರುಕುಳ ಕೊಡುತ್ತಿದ್ದಾರೆಂದು ಹೇಳಿದ್ದಾರೆ. ಪೋಲೀಸರು ಅರೆಸ್ಟ್ ಮಾಡಿದ ತಕ್ಷಣ ಅರೆಸ್ಟ್ ತೋರಿಸಬೇಕು ಮತ್ತು ನ್ಯಾಯಾಲಯದ ಮುಂದೆ ಇಟ್ಟು ಅವರಿಗೆ ಬೇಲ್ ಮೇಲೆ ಬಿಡುವುದಕ್ಕೆ ಅಥವಾ ಪೋಲೀಸ್ ಕಸ್ಟಡಿಗೆ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಆಗಬೇಕೆಂದು ಹೇಳಿದ್ದಾರೆ. ಅದರ ಪ್ರಕಾರ ಕ್ರಮ ತೆಗೆದುಕೊಂಡಿದ್ದೇವೆ.

೭-೦೦ ಪಿ.ಎಂ.

ಮತ್ತೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಹೊಸ ಕಾಯಿದೆ ಮತ್ತು ಸಾಮಾಜಿಕ ನಿಯಮಗಳು ಹೆಚ್ಚು ಜಾರಿಗೆ ಬರುವಂತೆ, ಈ ದಿನಗಳಲ್ಲಿ ಕನಿಷ್ಟ ಜಿಲ್ಲಾಮಟ್ಟದಲ್ಲಿ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ಇನ್ನು ಹೆಣ್ಣುಮಕ್ಕಳಿಗೆ ಸಂಬಂಧಪಟ್ಟ ಹಾಗೆ ಒಂದು ಘಟಕವನ್ನು ಹಿರಿಯ ಪೋಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ಸಿ.ಓ.ಡಿ.ನಲ್ಲಿ ಇಡುತ್ತೇವೆಂದು ಹೇಳಿದ್ದೆವು. ಅದರಂತೆ ಈಗಾಗಲೇ ಆ ಒಂದು ಸೆಲ್‌ನ್ನು ರಚನೆ ಮಾಡಿದ್ದೇವೆ. ಶ್ರೀಮತಿ ನಾಗರತ್ನಮ್ಮನವರು, ಶ್ರೀಮತಿ ಬೇಗಂರವರು ಹೌಸ್ ಕಮಿಟಿ ಮಾಡಿ ಎಂದು ಕೇಳಿದ್ದಾರೆ. ಇದರ ಬಗ್ಗೆ ಹೆಣ್ಣುಮಕ್ಕಳ ಸಲಹಾ ಸಮಿತಿ ಮಾಡಿಕೊಳ್ಳಬಹುದು. ಈ ವಿಷಯಗಳಿಗೆ ಸಂಬಂಧಪಟ್ಟ ಹಾಗೆ, ಇದಕ್ಕೆ ಸಂಬಂಧಪಟ್ಟಂಥ ಅಧಿಕಾರಿ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಬೇಕಾಗುತ್ತದೆ. ಇದಕ್ಕೆ ಶಾಸನ ಸಭೆಯಲ್ಲಿ ಕಾನೂನು ಬದಲಾವಣೆ ಮಾಡಿ, ತಾವು ನಿಯಮಾವಳಿ ಪ್ರಕಾರ ಮಾಡಬಹುದೆಂದು ತಂದರೆ ನನ್ನದೇನೂ ಅಡ್ಡಿ ಇಲ್ಲ. ಇದರ ಬಗ್ಗೆ ವೈಯುಕ್ತಿಕವಾದ ವಿರೋಧ ಇಲ್ಲ ಎನ್ನುವುದನ್ನು ಈ ಮೂಲಕ ವ್ಯಕ್ತಪಡಿಸುತ್ತಿದ್ದೇನೆ. ಇಂತಹ ಅವಕಾಶಗಳು ಇಲ್ಲಿನ ಮಹಿಳಾ ಪ್ರತಿನಿಧಿಗಳಿಗೆ ಸಿಕ್ಕಿದರೆ ಬಹಳ ಒಳ್ಳೆಯದು. ಅವರು, ಅವರ ಕಷ್ಟವನ್ನು ಸಹಾನುಭೂತಿಯಿಂದ ಕೇಳುತ್ತಾರೆಂದು ಹೇಳಿ, ತಾವು ತಿದ್ದುಪಡಿ ತರುವುದಾದರೆ ನನ್ನ ಅಭ್ಯಂತರ ಏನೂ ಇಲ್ಲ.

ಇನ್ನು ಆಯೋಗದ ವರದಿ ಪ್ರಕಾರ ಎರಡು ಮಟ್ಟಗಳಲ್ಲಿ ಕಾನ್‌ಸ್ಟೇಬಲ್ ಮತ್ತು ಐ.ಪಿ.ಎಸ್. ದರ್ಜೆಯ ಅಧಿಕಾರಿಗಳಿಗೆ ಮಾತ್ರ ನೇರ ನೇಮಕಾತಿ ಇರಬೇಕೆಂದು ಹೇಳಿದ್ದಾರೆ. ಅದನ್ನು ಒಪ್ಪಿಲ್ಲ. ಐ.ಪಿ.ಎಸ್. ಅವರುಗಳಿಗೆ ನೇರ ನೇಮಕಾತಿ ಶೇಕಡ ಅರವತ್ತಮೂರು ಮೂರನೇ ಎರಡು ಹುದ್ದೆಗಳನ್ನು ತುಂಬುವುದು. ಮತ್ತು ರಾಜ್ಯ ಪೋಲೀಸ್ ಸೇವೆಯಿಂದ ಬಡ್ತಿ ನೀಡುವುದನ್ನು ಮುಂದುವರಿಸುವುದು. ಇದನ್ನು ಮುಂದುವರಿಸಿಕೊಂಡು ಬಂದಿದ್ದೇವೆ. ಐ.ಪಿ.ಎಸ್. ಹುದ್ದೆಗಳಿಗೆ ಅರವತ್ತಮೂರು ಮೂರನೇ ಎರಡು ಇದ್ದುದನ್ನು ಶೇಕಡ ೫೦ಕ್ಕೆ ಇಳಿಸಬೇಕೆಂದು ಹೇಳಿರುವುದನ್ನು ರಾಜ್ಯ ಸರ್ಕಾರ ಒಪ್ಪಿಲ್ಲ. ಇನ್ನು ರಾಜ್ಯದಿಂದ ಆಯ್ಕೆಯಾದ ಐ ಪಿ ಎಸ್. ಅಧಿಕಾರಿಗಳಿಗೆ ಅದೇ ರಾಜ್ಯಕ್ಕೆ ಹಾಕಬಾರದೆಂದು ಹೇಳಿರುವುದನ್ನು ನಾವು ಒಪ್ಪಿಲ್ಲ. ಸಂಕ್ಷಿಪ್ತವಾಗಿ ಈ ವರದಿಯನ್ನು ಓದಿ, ಇದಕ್ಕೆ ಒಂದು ತೀರ್ಮಾನ ತೆಗೆದುಕೊಂಡು, ಮಂತ್ರಿಮಂಡಲದ ಮುಂದೆ ಇಡಬೇಕೆಂದು ಹೇಳಿ. ಚೀಫ್-ಸೆಕ್ರೆಟರಿ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದೆವು. ಅವರು ವರದಿಯನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವು ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿಕೊಂಡಿದೆ. ಇನ್ನು ರಾಜ್ಯದ ಗೃಹಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಭದ್ರತಾ ಆಯೋಗವನ್ನು ರಚಿಸಬೇಕೆಂದು ಕೇಳಿದ್ದಾರೆ, ಇದನ್ನು ಸರ್ಕಾರ ಒಪ್ಪಿಲ್ಲ. ಮತ್ತು ಇಲಾಖಾ ಮುಖ್ಯಸ್ಥರನ್ನು ನಿಗದಿತ ನಾಲ್ಕು ವರ್ಷಗಳ ಕಾಲ ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೆ ಇದನ್ನು ತತ್ವಶಃ ಒಪ್ಪಿಲ್ಲ. ಈಗಿರುವ ಪದ್ಧತಿ ಸರಿಯಾಗಿದೆ. ನಾಲ್ಕು ವರ್ಷ ಇರತಕ್ಕಂಥ ವ್ಯವಸ್ಥೆಗೆ ಗ್ಯಾರಂಟಿ ಕೊಡುವುದಕ್ಕಾಗುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಈ ಇಲಾಖೆ ಬಹಳ ಸೂಕ್ಷ್ಮವಾದ ಇಲಾಖೆ. ಬಹುಶಃ ಅನೇಕ ಅಪರಾಧಗಳು ಆಗತಕ್ಕಂಥದ್ದನ್ನು ತಡೆಗಟ್ಟುವುದು, ಪತ್ತೆಮಾಡುವ ವಿಷಯದಲ್ಲಿ ನಾವು ಒಬ್ಬರನ್ನೇ ಬಹಳ ವರ್ಷಗಳ ಕಾಲ ಇಟ್ಟುಕೊಳ್ಳುವ ಪರಿಸ್ಥಿತಿ ಬಂದರೆ, ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಇದನ್ನು ಮಾಡಿಲ್ಲ. ಒಟ್ಟಿನಲ್ಲಿ ಮಾನ್ಯ ಸದಸ್ಯರು ಹೇಳುವಂಥ ವಿಷಯಗಳು ಏನಿವೆ, ಆ ಎಲ್ಲಾ ವಿಷಯಗಳ ಕಡೆಗೂ ಗಮನ

ಕೊಡುತ್ತಿದ್ದೇನೆ. ನೀವು ಮಾಡಿದ್ದೀರೆಂದು ಹೇಳಿ, ತೋರಿಸತಕ್ಕಂಥ ರೀತಿಯಲ್ಲಿ ಹೇಳುವುದಿಲ್ಲವೆಂದು ಬಹಳ ಜನ ತಿಳಿದುಕೊಂಡಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕಿಯರು).—ಅಧ್ಯಕ್ಷರೇ, ಇಷ್ಟು ಹೊತ್ತಿನ ತನಕ ನ್ಯಾಯಾಂಗ ತನಿಖೆಯ ಪಟ್ಟಿ ಹೇಳಿದರು. ಅದರಲ್ಲಿ ಎಷ್ಟು ರಿಪೋರ್ಟ್ ಬಂದಿದೆ ಎಂದು ಕೇಳಿದ್ದಕ್ಕೆ, ನಾಲ್ಕು ಐದರ ಬಗ್ಗೆ ಹೇಳಿದರು. ಈ ಆಯೋಗಗಳವರು ಬಂದು ಟೈಮ್ ಎಕ್ಸ್‌ಟೆಂಡ್ ಮಾಡಿ ಎಂದು ಕೇಳುತ್ತಾರೆ, ಅವರಿಗೆ ಏತಕ್ಕೆ ಟೈಮ್ ಒದಗಿಸಿಕೊಡುತ್ತೀರಿ ? ಇಷ್ಟು ಟೈಮ್ ಎಂದು ನಿಗದಿ ಮಾಡಿದ ಮೇಲೆ ಅಷ್ಟರ ಒಳಗೆ ಏತಕ್ಕೆ ರಿಪೋರ್ಟ್ ಬರುವುದಿಲ್ಲ, ಇನ್ನು ಪೋಲೀಸ್ ಸ್ಟೇಷನ್‌ಗಳಲ್ಲಿ ಇಷ್ಟು ಕೇಸ್‌ಗಳು ಆಯಿತು, ಐದು ಕೇಸ್ ಆಯಿತು, ಆರು ಕೇಸ್ ಆಯಿತು ಎಂದು ಹೇಳುತ್ತೀರಿ, ಅಲ್ಲಿ ಕೇಸ್ ರಿಜಿಸ್ಟರ್ ಆಗುವುದಕ್ಕೆ ಲಂಚ ಕೊಡಬೇಕು ಅದಕ್ಕೆ ಏನು ಹೇಳುತ್ತೀರಿ ನೀವು ? ಪೋಲೀಸ್ ಸ್ಟೇಷನ್‌ನಲ್ಲಿ ಕೇಸ್ ರಿಜಿಸ್ಟರ್ ಮಾಡಬೇಕಲ್ಲ ಅದಕ್ಕೆ ಫೀಸ್ ಕೊಡಬೇಕು, ರೆಕಮೆಂಡೇಷನ್ ಬೇಕು, ಇದಕ್ಕೆ ಏನು ಮಾಡಬೇಕು ? ಇದಕ್ಕೆ ಏನಾದರೂ ಔಷಧಿ ಕೊಡುತ್ತೀರಾ ಹೇಳಿ ? ಇನ್ನು ಸಸ್ಪೆನ್‌ಷನ್ ಬಗ್ಗೆ ಹೇಳುವುದಾದರೆ, ನೀವು ನಾನು ಇವರನ್ನು ಅಮಾನತ್ತಿನಲ್ಲಿ ಇಟ್ಟಿದ್ದೀನಿ, ಅವರನ್ನು ಅಮಾನತ್ತಿನಲ್ಲಿ ಇಟ್ಟಿದ್ದೀನಿ, ಎಂದು ಹೇಳುತ್ತೀರಿ ಸಸ್ಪೆನ್‌ಷನ್ ಪನಿಷ್‌ಮೆಂಟೇ ಎಂದು ನಾನು ತಿಳಿಯ ಬಯಸುತ್ತೇನೆ. ಸಸ್ಪೆನ್‌ಷನ್ ಮಾಡಿ ಅವರನ್ನು ಅಲ್ಲೇ ಇಟ್ಟು, ರೆಕಾರ್ಡ್ ತಿದ್ದುವುದಕ್ಕೆ ಅನುಕೂಲ ಮಾಡಿಕೊಟ್ಟು, ಆಮೇಲೆ ನಾನು ಸಸ್ಪೆಂಡ್ ಮಾಡಿಸಿದೆ, ಎನ್‌ಕ್ವೈರಿ ಮಾಡಿಸಿದೆ, ಅವರ ವಿರುದ್ಧವಾಗಿ ಏನೂ ಬರಲಿಲ್ಲ ಎಂದು ಹೇಳಿ ಪುನಃ ಅವರನ್ನು ಅಲ್ಲೇ ರೀಇನ್‌ಸ್ಟೇಟ್ ಮಾಡುವುದರಲ್ಲಿ ಅರ್ಥ ಉಳಿದಿದೆಯೇ ?

ಶ್ರೀ ಬಿ. ರಾಚಯ್ಯ.—ಸಸ್ಪೆನ್‌ಷನ್ ಪನಿಷ್‌ಮೆಂಟ್ ಎಂದು ನಾನು ಒಪ್ಪಿಕೊಳ್ಳುವುದಿಲ್ಲ. ನಿಷ್ಪಕ್ಷಪಾತವಾದ ವಿಚಾರಣೆ ಆಗುವುದಕ್ಕೆ ಇದು ಅನುಕೂಲವಾಗುತ್ತದೆ ಎಂದು ಸಸ್ಪೆಂಡ್ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದರಿಂದ ನಿಷ್ಪಕ್ಷಪಾತವಾದ ವಿಚಾರಣೆ ಆಗುವುದಿಲ್ಲ. ಸಸ್ಪೆಂಡ್ ಮಾಡಿ, ಅವರನ್ನು ಅಲ್ಲೇ ಬಿಟ್ಟು, ರೆಕಾರ್ಡ್ ಸೆಟ್‌ರೈಟ್ ಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟು ಅವರೆಲ್ಲಾ ಟೈಮ್ ತೆಗೆದುಕೊಂಡು, ವಿಚಾರಣೆ ಆದಮೇಲೆ ಅವರನ್ನು ರೀಇನ್‌ಸ್ಟೇಟ್ ಮಾಡಿ ಅದೇ ಸ್ಥಳದಲ್ಲಿ ಹಾಕಿದರೆ ಇದರಲ್ಲಿ ಏನಾದರೂ ಜಸ್ಟೀಸ್ ದೊರಕುತ್ತದೆಯೇ ?

ಶ್ರೀ ಬಿ. ರಾಚಯ್ಯ.—ಹಿಂದಿನಿಂದಲೂ ಅದೇ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ ಆ ಪ್ರಕಾರ ಸಸ್ಪೆಂಡ್ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವರು ಆ ಕಾಲದಲ್ಲಿ ಹುಟ್ಟಬೇಕಾಗಿತ್ತು. ಧರ್ಮ ರಾಯನ ಕಾಲದಲ್ಲಿ ಇವರು ಹುಟ್ಟಬೇಕಾಗಿತ್ತು, ಆಗಿನಿಂದ ಈ ಪದ್ಧತಿಯನ್ನು ಅನುಸರಿಸಿ ಕೊಂಡು ಬರುತ್ತಿದ್ದಾರಂತೆ, ಇವರು ಆ ಕಾಲದಲ್ಲಿ ಹುಟ್ಟಿದ್ದರೆ ಚೆನ್ನಾಗಿತ್ತು, ಇದು ಧರ್ಮರಾಯನ ಕಾಲ ಅಲ್ಲ.

ಶ್ರೀ ಬಿ. ರಾಚಯ್ಯ.—ಎಲ್ಲಿ ಅವರನ್ನು ವರ್ಗ ಮಾಡಿ ಎನ್‌ಕ್ವೈರಿ ಮಾಡಬೇಕು ಅಲ್ಲಿ ಮಾಡುತ್ತೇವೆ. ಮಾನ್ಯ ಶ್ರೀನಿವಾಸ್‌ರವರು ಕೇಳಿದ್ದಾರೆ, ಅಲ್ಲಿ ವರ್ಗ ಮಾಡಿಸಿ ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದ್ದೇನೆ. ಈಗಾಗಲೇ ಇದರ ಬಗ್ಗೆ ಸಿ. ಒ. ಡಿ. ತನಿಖೆ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಯಾವ ಡೇಟ್‌ನಲ್ಲಿ ಕಳುಹಿಸಿದ್ದೀರಿ ಎಂದು ಕೇಳುತ್ತಾರೆ ಎಂದು ಅದನ್ನೇ ಹುಡುಕುತ್ತಾ ಇದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಕೆಲವು ವಿಷಯಗಳನ್ನು ಹೇಳಿದರು. ಕ್ರೈಮ್ಸ್ ಡಿಕ್ರೀಸ್ ಆಗಿದೆ ಎನ್ನುವ ಒಂದು ಧಾಟಿಯಲ್ಲಿ ಹೇಳಿದರು. ಆದರೆ ೧೯೬೫ ಮತ್ತು ೬೭ರ ಅಂಕಿ ಅಂಶಗಳನ್ನು ಕಂಪ್ಯಾರಿಟೀವ್ ಆಗಿ ನೋಡಿದಾಗ ಕ್ರೈಮ್ಸ್ ಜಾಸ್ತಿಯಾಗಿದೆ. ಚೀಟಿಂಗ್, ಕೌಂಟರ್‌ಫಿಟ್ ಆಫ್ ಕಾಯಿನ್ಸ್ ಅಂಡ್ ಕರೆನ್ಸಿನೋಟ್ಸ್ ಇದನ್ನು ಬಿಟ್ಟು, ಕಿಡ್‌ನ್ಯಾಪಿಂಗ್ ಅಂಡ್ ಅಬ್‌ಜಕ್ಷನ್ ಇದನ್ನು ಬಿಟ್ಟು ಉಳಿದುದೆಲ್ಲಾ ಜಾಸ್ತಿಯಾಗಿದೆ. ಮರ್ಡರ್ಸ್ ೧೯೬೫ರಲ್ಲಿ ೧೦೦೦ ಇದ್ದರೆ ೧೯೬೭ರಲ್ಲಿ ೧೦೭೧ ಆಗಿದೆ. ಡಕಾಯಿತಿ ೧೯೬೬ರಲ್ಲಿ ೧೭೫ ಇದ್ದದ್ದು ೧೯೬೭ರಲ್ಲಿ ೨೩೯ ಆಗಿದೆ. ರಾಬರೀಸ್ ೧೯೬೫ರಲ್ಲಿ ೪೭೧ ಇದ್ದದ್ದು ೧೯೬೭ ರಲ್ಲಿ ೬೭೫ ಆಗಿದೆ. ಹೀಗೆ ಎಲ್ಲವೂ ಕೂಡಾ ಇನ್‌ಕ್ರೀಸ್ ಆಗಿದೆ, ಡಿಕ್ರೀಸ್ ಏನೂ ಇಲ್ಲ, ಇದಕ್ಕೆ ಇಂಪ್ರೂವ್‌ಮೆಂಟ್ ಎಂದು ಹೇಳುತ್ತೀರಾ ?

ಯಾವ ದೃಷ್ಟಿಯಿಂದ ಇಂಪ್ರೂವ್‌ಮೆಂಟ್ ? ಜಾಸ್ತಿ ಮರ್ಡರ್ ಆಗಿದ್ದು, ಜಾಸ್ತಿ ಡಕಾಯಿತಿ ಆಗಿದ್ದು ಜಾಸ್ತಿ ಥೆಫ್ಟ್ ಆಗಿದ್ದು ಇಂಪ್ರೂವ್‌ಮೆಂಟೇ ? ಅಥವಾ ಇದನ್ನು ಕಂಟ್ರೋಲ್ ಮಾಡುವುದು ಇಂಪ್ರೂವ್‌ಮೆಂಟೇ ? ಇದಕ್ಕೆ ಕಾರಣ ಏನು ಎಂದು ಸ್ಪಷ್ಟವಾಗಿ ಹೇಳಬೇಕು. ಇದನ್ನು ಯಾವ ರೀತಿಯಿಂದ ತಡೆಹಿಡಿಯುತ್ತೀರಿ. ಆಮೇಲೆ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್, ಇದರಲ್ಲಿ ಎಸ್.ಸಿ. ಮತ್ತು ಎಸ್.ಟಿ. ಮೇಲೆ ಆಗತಕ್ಕಂಥ ಅನ್ಯಾಯಗಳಿಗೆ ೧೯೮೬ ರಲ್ಲಿ ೭೩೪೪ ಕೇಸ್ ಆಗಿವೆ. ಇದನ್ನು ತಡೆಯುವುದಕ್ಕೆ ಯಾವ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಮತ್ತು ಇಂತಹ ಕ್ರೈಮ್ಸ್ ಕಡಿಮೆ ಮಾಡುತ್ತೀರಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ೪೬,೭೪೪ ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳು ಇದ್ದಾರೆ. ಇವರುಗಳಿಗೆ ಅನೇಕ ಕಡೆ ಹೌಸಿಂಗ್ ಕಾರ್ಪೊರೇಷನ್ ಮಾಡಿ, ಮನೆ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೀರಿ. ಕೆಲವು ಕಡೆ ಇದು ಜಾರಿಗೆ ಬರುತ್ತಿಲ್ಲ. ಹೈದರಾಬಾದ್ ಕರ್ನಾಟಕದಲ್ಲಿ, ಬಾಂಬೆ ಕರ್ನಾಟಕದಲ್ಲಿ ಹಿಂದುಳಿದ ಭಾಗಗಳಲ್ಲಿ ಮನೆಗಳೇ ಸಿಕ್ಕುತ್ತಿಲ್ಲ. ಅನೇಕ ಜನ ಸಬ್ ಇನ್‌ಸ್ಪೆಕ್ಟರುಗಳು, ವೈರ್‌ಲೆಸ್ ಅಧಿಕಾರಿಗಳು, ಕಾನ್‌ಸ್ಟೇಬಲ್‌ಗಳು ಮನೆಗಳು ಎಲ್ಲಿ ಸಿಕ್ಕುತ್ತವೆ ಅಲ್ಲಿಗೆ ಹೋಗುತ್ತಾರೆ. ರೆವಿನ್ಯೂ ಹೆಡ್‌ಕ್ವಾರ್ಟರ್‌ಗಳಲ್ಲಿ ಮನೆಗಳು ಇಲ್ಲದೇ ಹೋದರೆ, ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಿಗೆ ವಾಪಸ್ ಬರುತ್ತಾರೆ ಈ ಪರಿಸ್ಥಿತಿ ಇದೆ. ಹಂತ ಹಂತವಾಗಿ ಇವರಿಗೆ ಮನೆಗಳನ್ನು ಕಟ್ಟತಕ್ಕಂಥ ವ್ಯವಸ್ಥೆಗೆ ತಾವು ಹೌಸಿಂಗ್ ಕಾರ್ಪೊರೇಷನ್ ಮಾಡಿದ್ದೀರಿ. ಇದರ ಬಗ್ಗೆ ಎಲ್ಲಿ ಆದ್ಯತೆ ಕೊಡಬೇಕೋ ಅಲ್ಲಿ ಆದ್ಯತೆ ಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಬಿ ರಾಚಯ್ಯ.—ಆರು ವಲಯಗಳು ಇವೆ. ಈ ಆರು ವಲಯಗಳೂ ಕೂಡ ಹೆಚ್ಚು ಕಡಿಮೆ ಸ್ಥಳಾಭಾವ ಇರುವ ಕಡೆ, ಆದ್ಯತೆ ಮೇಲೆ ಮಾಡುತ್ತವೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುವುದೇನೆಂದರೆ, ಈ ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ರಾಜಕೀಯವಾಗಿ ಇಂಟರ್‌ಫಿಯರೆನ್ಸ್ ಮಾಡುವುದು ಸರಿಯಾದುದಲ್ಲ. ನಾನು ಕಳೆದ ಸಾರಿಯೂ ಹೇಳಿದ್ದೆ. ಇವತ್ತಿನ ದಿವಸ ಪತ್ರಿಕೆಯಲ್ಲಿ ಬಂದಿದೆ ತುಮಕೂರು ಎಸ್.ಪಿ.ಯವರು ಅಲ್ಲಿರುವಂಥ ಪಾರ್ಲಿಮೆಂಟ್ ಸದಸ್ಯರ ಮೇಲೆ ಮತ್ತು ಡೆಪ್ಯೂಟಿ ಸ್ಪೀಕರ್ ಮೇಲೆ ಪ್ರಾಸಿಕ್ಯೂಟ್ ಮಾಡುವುದಕ್ಕೆ ಪರ್ಮಿಷನ್ ಕೇಳಿದ್ದಾರೆ. ಪೊಲಿಟಿಕಲ್ ಇಂಟರ್‌ಫಿಯರೆನ್ಸ್ ಆಗುತ್ತಿದೆ. ಆ ರೀತಿ ಪ್ರಾಸಿಕ್ಯೂಟ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದೀರಾ ? ಈ ಪೊಲಿಟಿಕಲ್ ಇಂಟರ್‌ಫಿಯರೆನ್ಸ್ ತಡೆಯುವುದಕ್ಕೆ ಏನು ಸ್ಟೆಪ್ಸ್ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ರಾಚಯ್ಯ.—ಪತ್ರಿಕಾ ಹೇಳಿಕೆ ಕೊಟ್ಟಿರತಕ್ಕಂಥ ಇಬ್ಬರು ಅಧಿಕಾರಿಗಳನ್ನು ಈಗಾಗಲೇ ವಿವರಣೆ ಕೇಳಿದ್ದೇನೆ ನ್ಯಾಯಾಲಯಕ್ಕೆ ಹೋಗಿ, ಪಾರ್ಲಿಮೆಂಟ್ ಸದಸ್ಯರ ಮೇಲೆ ಮಾನನಷ್ಟ ಹಾಕುವುದಕ್ಕೆ ಅನುಮತಿ ಕೊಟ್ಟಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಎರಡನೆಯದು, ತಾವು ಅನೇಕ ಜನಗಳ ಮೇಲೆ, ಅನೇಕ ರೀತಿಯ ಕೇಸುಗಳನ್ನು ಹಾಕಿದ್ದೇವೆಂದು ಹೇಳಿದಿರಿ. ನಮ್ಮ ರಾಜ್ಯದಲ್ಲಿ ಅನೇಕ ಜನ ಮಾಲೀಕರು, ಫ್ಯಾಕ್ಟರಿ ಮಾಲೀಕರುಗಳು, ಕೈಗಾರಿಕಾ ವಲಯದ ಅಧಿಕಾರಿಗಳು ಮತ್ತು ಇತರೆ ಅಧಿಕಾರಿಗಳು ತಾವು ಕೊಟ್ಟಂಥ ಆಜ್ಞೆಗಳನ್ನು ಉಲ್ಲಂಘಿಸಿ, ನಡೆದುಕೊಳ್ಳುತ್ತಿದ್ದಾರೆ. ಎಷ್ಟೋ ಕಡೆ ಕೈಗಾರಿಕೆಗಳನ್ನು ಲಾಕ್‌ಔಟ್ ಮಾಡುತ್ತಿದ್ದಾರೆ. ಈ ತರಹ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುವ ಮಾಲೀಕರ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದೀರಿ, ಎಷ್ಟು ಜನರ ಮೇಲೆ ಕೇಸ್ ಹಾಕಿದ್ದೀರಿ ?

ಶ್ರೀ ಬಿ. ರಾಚಯ್ಯ.—ನೀವು ಕೇಳಿದಂಥ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಮಾಲೀಕರ ಮೇಲೆ ಕೇಸ್ ಹಾಕಿದ್ದೇವೆ. ಮತ್ತೆ ಕಾರ್ಮಿಕರ ಮೇಲೆ ಕೇಸ್ ಹಾಕಿದ್ದೇವೆ, ಕ್ರಿಮಿನಲ್ ಕೇಸ್ ಹಾಕಿದ್ದೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ನಿರ್ದಿಷ್ಟವಾದ ಪ್ರಕರಣಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಮತ್ತೆ ಸಚಿವರು ಹಾರಿಕೆ ಉತ್ತರವನ್ನೇ ಕೊಟ್ಟಿದ್ದಾರೆ. ಭದ್ರಾವತಿ ತಾಲ್ಲೂಕು ಜಂಜರಗಟ್ಟೆಯಲ್ಲಿ ಆದ ಅಮಾನುಷ ಕೊಲೆಯ ಬಗ್ಗೆ ಸಿ.ಓ.ಡಿ.ಗೆ ಒಪ್ಪಿಸಿದ್ದೀರಾ ? ಎಷ್ಟನೇ ತಾರೀಖು ಆರ್ಡರ್ ಮಾಡಿದ್ದೀರಿ. ಅಲ್ಲಿರತಕ್ಕ ಸ್ಥಳೀಯ ಪೋಲೀಸ್ ಅಧಿಕಾರಿ, ಹಳ್ಳಿಗಳಿಗೆ ಹೋಗಿ ಮೀಟಿಂಗ್ ಮಾಡುತ್ತಿದ್ದಾರೆ. ಅವರನ್ನು ಸಾಗು ಹಾಕುತ್ತಿರೋ ಅಥವಾ ಅಲ್ಲಿಯೇ ಇಟ್ಟು, ಸಿ.ಓ.ಡಿ.ಗೆ

ಕಳುಹಿಸಿದ್ದೀರಾ ? ಇದು ಒಂದು ವಿಚಾರ. ಅಮೇಲೆ ಜೈಲಿನ ಬಗ್ಗೆ ನಾನು ಹೇಳಿದೆ, ಅದರ ಬಗ್ಗೆ ಏನೂ ಹೇಳಿಲ್ಲ. ವರದಿ ತರಿಸುತ್ತೇನೆ, ವರದಿ ತರಿಸುತ್ತೇನೆ ಎಂದು ಹೇಳುತ್ತಾರೆ. ನಾನು ಈ ಸಭೆ ಪ್ರಾರಂಭವಾದಂದಿನಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಸಮಜಾಯಿಷಿ ತೆಗೆದುಕೊಳ್ಳುವುದಕ್ಕೆ ಸುಮಾರು ಎಷ್ಟು ತಿಂಗಳು ಬೇಕು ? ಸಮಜಾಯಿಷಿಗೆ ಬರುವುದಕ್ಕೆ ಎಷ್ಟು ದಿವಸಬೇಕು ೧೫–೨೦ ದಿವಸದ ಒಳಗಾಗಿ ಸಮಜಾಯಿಷಿಗೆ ಬರುವುದಕ್ಕೆ ಸಾಲದೇ ? ಅಲ್ಲಿ ಏನು ಮಾಡಿದ್ದಾರೆ ಎಂದರೆ ಯಾರನ್ನೋ ಇವರು ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳಿದರು. ಮತ್ತೆ ಮೂರು ದಿವಸದ ಒಳಗಾಗಿ ಅವನನ್ನು ರೀ–ಇನ್‌ಸ್ಟೇಟ್ ಮಾಡಿ ಅಲ್ಲಿಯೇ ಇಟ್ಟಿದ್ದಾರೆ. ಹೊಡೆತಬಡೆತ ತಿಂದವನನ್ನು ಬಳ್ಳಾರಿಗೆ ಟ್ರಾನ್ಸ್‌ಫರ್‌ಗೆ ಮಾಡಿದ್ದಾರೆ. ಅವರಿಂದ ಹೊಡೆತ ತಿಂದವನನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಮತ್ತೆ ಆ ಸಸ್ಪೆನ್ಸನ್‌ನ್ನು ರದ್ದು ಮಾಡಿ ಊರಿನಲ್ಲಿ ಮೆರವಣಿಗೆ ಮಾಡುತ್ತಾ ಇಟ್ಟುಕೊಂಡರೆ ನಿಮ್ಮ ಇಲಾಖೆಗೆ ಏನು ಗೌರವ ಬರುತ್ತದೆ ? ದಯವಿಟ್ಟು ಹೇಳಿ. ಪೋಲೀಸರನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂದು ಕೇಳಿದ್ದಾರೆ, ಅದನ್ನು ಕೊಡುತ್ತೀರಾ ? ಮಹಾ ನಿರೀಕ್ಷಕರಾದಂಥ ಹನುಮಂತಪ್ಪನವರೂ ಕೂಡ ಶಿಫಾರಸ್ಸು ಮಾಡಿದ್ದಾರೆ. ಪರ್ಮಿಷನ್ ಕೊಡಿ, ಪೋಲೀಸರ ಮೇಲೆ ಕ್ರಮ ಹಾಕುವುದಕ್ಕೆ, ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕುವುದಕ್ಕೆ ಅವಕಾಶ ಮಾಡಿ ಕೊಡಿ, ನಮ್ಮ ಮೇಲೆ ದಬ್ಬಾಳಿಕೆ ಮಾಡಿದ್ದಾರೆ, ಪರ್ಮಿಷನ್ ಕೊಡಿ ಎಂದು ಕೇಳಿದ್ದಾರೆ. ಅದನ್ನಾದರೂ ಮಾಡಿ. ನೀವು ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ, ಅದನ್ನೂ ಮಾಡುವುದಿಲ್ಲ ಎಂದು ಹೇಳಿದರೆ ಏನು ಅರ್ಥ ಇದೆ ? ಇನ್ನೊಂದು ಬಹಳ ಪ್ರಾಮುಖ್ಯವಾಗಿರತಕ್ಕಂಥದ್ದು ಎಂದರೆ ಇಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಈ ವರ್ಷದ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರ ಮೇಲಿನ ದೌರ್ಜನ್ಯದ ಪ್ರಕರಣಗಳ ಸಂಖ್ಯೆ ಹೆಚ್ಚಿದೆ ಎಂದು ಈ ವರದಿಯಲ್ಲಿದೆ. ಈ ರೀತಿಯ ವರದಿಯನ್ನು ಇಟ್ಟುಕೊಂಡು ಗೃಹ ಸಚಿವರು ಇನ್ನು ಏತಕ್ಕೆ ಇರಬೇಕೋ ನನಗಂತೂ ಅರ್ಥವಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಸ್ವಲ್ಪ ದಿವಸ ಹಾಗೆಯೇ ಇರೋಣ. ಬೇಗ ಬೇಗ ಕಳುಹಿಸಬೇಕು ಎಂದು ಪ್ರಯತ್ನ ಮಾಡುತ್ತಾರೆ. ಅಷ್ಟು ಸುಲಭವಾಗಿ ಹೋಗುವುದಕ್ಕೆ ಆಗುವುದಿಲ್ಲ ಎಂದು ಮೊದಲೇ ಹೇಳಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಏನು ಮಾಡಿದರೆ ಹೋಗುತ್ತೀರಿ ಎಂದು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಏನು ಪ್ರಾಮಿಸ್ ಮಾಡಿದೆ, ಅದೆಲ್ಲವನ್ನೂ ಕೈಗೂಡಿಸುತ್ತೇನೆ. ಹೊಳೆಹೊನ್ನೂರಿನ ಕೇಸ್‌ನಲ್ಲಿ ಸಿ.ಓ.ಡಿ. ತನಿಖೆಯ ಬಗ್ಗೆ ೧೯–೩–೧೯೭೦ರಲ್ಲಿ ಆರ್ಡರನ್ನು ಇಷ್ಯೂ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—೩ನೇ ತಾರೀಖು ಹೇಳಿದರೆ ೧೯ನೇ ತಾರೀಖು ಆರ್ಡರನ್ನು ಇಷ್ಯೂ ಮಾಡಿದ್ದೀರಿ. ಅಷ್ಟರೊಳಗಾಗಿ ಏನೇನು ತಿದ್ದುಪಡಿಯನ್ನು ಮಾಡಬೇಕೋ ಅಷ್ಟನ್ನೂ ಮಾಡಿದ್ದಾರೆ. ಅವತ್ತೇ ಹೇಳಿದ್ದ ಆ ರೀತಿಯಾಗುತ್ತದೆಂದು. ಅದೇ ರೀತಿಯಾಗಿ ಮಾಡಿದ್ದಾರೆ.

ಶ್ರೀ ಬಿ. ರಾಚಯ್ಯ.—ಶ್ರೀಕಂಠಯ್ಯ (ಪಿ.ಎ.) ಎಂಬುವವರು ಈಗಾಗಲೇ ಶಿವಮೊಗ್ಗಕ್ಕೆ ಹೋಗಿದ್ದಾರೆ ೨೨–೩–೧೯೭೦ರಲ್ಲಿ ಹೋಗಿದ್ದಾರೆ. ಆರ್ಡರನ್ನು ಇಷ್ಯೂ ಮಾಡಿದ್ದೇವೆ. ಇನ್‌ವೆಸ್ಟಿಗೇಷನ್‌ನ್ನು ಮಾಡಬೇಕು. ಬಹುಶಃ ಅವರು ಎಲ್ಲಾ ರೀತಿಯಲ್ಲೂ ಕೂಡಾ ಮಾಹಿತಿಯನ್ನು ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬೆಂಗಳೂರಿಗೂ ಶಿವಮೊಗ್ಗಕ್ಕೂ ಎಷ್ಟು ದೂರ ಇದೆ ? ಎಷ್ಟು ಮೈಲಿ ಇದೆ ? ಅಲ್ಲಿ ಏನೂ ಫೋನ್ ಇಲ್ಲವೇ ? ಜನಗಳನ್ನು ಕಳುಹಿಸುವುದಕ್ಕೆ ಆಗುವುದಿಲ್ಲವೇ ? ಒಂದು ಆರ್ಡರ್ ಇಷ್ಯೂ ಮಾಡಬೇಕಾದರೆ ಇಷ್ಟೊಂದು ದಿವಸ ಬೇಕೇ ? ಏನು ಇದು ? ನೀವೇನೂ ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ನೀವೇ ಹೇಳುತ್ತೀರಿ. ಅದಕ್ಕಾಗಿ ಡಿ.ಐ.ಜಿ.ಯವರಿಗೆ ಪವರ್ಸ್ ಡೆಲಿಗೇಟ್ ಮಾಡಿದ್ದೇವೆ. ನೇರವಾಗಿ ಇಲ್ಲಿಂದಲೇ ಆರ್ಡರ್ ಮಾಡಿದ್ದರೆ ಅವತ್ತೇ ಹೋಗುತ್ತಿದ್ದರು.

SMT. MUKTHARUNISSA.—In Mysore two months back an unexpected incident occured. At that time our Hon. Chief Minister and our Hon. Home Minister declared that they will conduct the judicial enquiry shortly. When it is going to be conducted ? Whether you have appointed a Judge ?

ಶ್ರೀ ಬಿ. ರಾಚಯ್ಯ.—ಹೈಕೋರ್ಟಿನ ನ್ಯಾಯಾಧೀಶರು ಈಗಾಗಲೇ ಅಪಾಯಿಂಟ್ ಆಗಿದ್ದಾರೆ. ಇನ್‌ವೆಸ್ಟಿಗೇಷನ್‌ನ್ನು ಪ್ರಾರಂಭ ಮಾಡುತ್ತಾರೆ.

SMT. MUKTHARUNNISSA.—Whether the compensation for the injured persons and to the persons who lost property was given ?

ಶ್ರೀ ಬಿ. ರಾಚಯ್ಯ.—ಈಗಾಗಲೇ ಅವರು ಕಾಲಿಂಗ್ ಅಟೆನ್ಷನ್ ಕೇಳಿದ ಸಂದರ್ಭದಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ನಷ್ಟವಾಗಿದೆ, ಎಷ್ಟೆಷ್ಟು ಹಣವನ್ನು ಕೊಡಬೇಕೆಂಬ ಬಗ್ಗೆ ಒಂದೊಂದಾಗಿ ಹೇಳಿದ್ದೇನೆ. ಇನ್ನು ಮುಂದೆ ಹೊಸ ಅರ್ಜಿಗಳು ಬಂದರೆ ಸಬ್‌ಇನ್ಸ್‌ಪೆಕ್ಟರ್, ತಹಸೀಲ್ದಾರ್ ಮತ್ತು ಎ.ಸಿ. ಇಷ್ಟು ಜನ ಹೋಗಿ ಮಹಜರ್ ಮಾಡಿ ಒಪ್ಪಿಸಿರುವ ಪಟ್ಟಿ ಏನಿದೆಯೋ ಆ ಪಟ್ಟಿ ಪ್ರಕಾರ ಪರಿಹಾರ ಕೊಟ್ಟಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಅಪರಾಧಿ ಎನಿಸಿಕೊಂಡವರನ್ನು ಪೋಲೀಸ್ ಸ್ಟೇಷನ್‌ಗಳಿಗೆ ಕರೆದುಕೊಂಡು ಹೋಗಿ ಅವರ ಮೇಲೆ ದೌರ್ಜನ್ಯ ನಡೆಸುವ ಉದಾಹರಣೆಗಳು ಬೇಕಾದಷ್ಟು ಇವೆ. ಆ ತರಹ ಇನ್ನು ಮುಂದೆ ಆಗದ ಹಾಗೆ ಪೋಲೀಸ್ ವ್ಯವಸ್ಥೆಯಲ್ಲಿ ಏನಾದರೂ ಬದಲಾವಣೆಯನ್ನು ರಾಚಯ್ಯನವರು ತರುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ ? ಇದು ಬಿಟ್ಟು, ಸುಮ್ಮಸುಮ್ಮನೆ ಉತ್ತರ ಕೊಟ್ಟರೆ ಪ್ರಯೋಜನ ಇಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಧರ್ಮವೀರ ಕಮಿಷನ್ ಈ ದಿಸೆಯಲ್ಲಿ ಏನೇನು ರೆಕಮಂಡೇಷನ್ಸ್ ಮಾಡಿತ್ತೋ ಅವಲ್ಲಿ ಒಂದನ್ನೂ ಇವರು ಒಪ್ಪಿಕೊಂಡಿಲ್ಲ.

ಶ್ರೀ ಬಿ. ರಾಚಯ್ಯ.—ಯಾರಾದರೂ ಕಂಪ್ಲೇಂಟ್ ಕೊಡಲು ಹೋದವರ ಮೇಲೆ ದೌರ್ಜನ್ಯ ನಡೆಸಬಾರದೆಂದು ಈಗಾಗಲೇ ಅಧಿಕಾರಿಗಳಿಗೆ ನಿರ್ದೇಶನ ಕೊಟ್ಟಿದ್ದೇವೆ. ಬಂದ ಜನರನ್ನು ಸೌಜನ್ಯದಿಂದ ಕಂಡು ಅವರು ಬರವಣಿಗೆಯಲ್ಲಿ ಫಿರ್ಯಾದು ಕೊಟ್ಟರೆ ಅದನ್ನು ರಿಜಿಸ್ಟರ್ ಮಾಡಿಕೊಳ್ಳಬೇಕು. ಒಂದು ಪಕ್ಷ ಬರವಣಿಗೆಯಲ್ಲಿ ಇಲ್ಲದಿದ್ದರೆ ಅವರು ಹೇಳಿದ್ದನ್ನು ಅವರ ಮುಂದೆ ಬರೆದು ಅದನ್ನು ಓದಿ ರುಜು ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಇದರ ಬಗ್ಗೆ ಸರ್ಕ್ಯುಲರ್ಸ್ ಹೋಗಿದೆ. ಅಲ್ಲದೆ ಲೀಲಾದೇವಿ ಆರ್ ಪ್ರಸಾದರವರು ಚಂದ್ರಗುತ್ತಿಯಲ್ಲಿ ಬೆತ್ತಲೆಸೇವೆ ನಿಷೇಧವನ್ನು ಪ್ರಸ್ತಾಪಿಸಿ, ಅಂಥದೇ ಬೆತ್ತಲೆ ಸೇವೆ ಹರಿಹರದಲ್ಲಿ, ಕುಣಿಗಲ್ ತಾಲ್ಲೂಕಿನ ಒಂದು ಕಡೆ ಸಿಡಿ ನಡೆಯುವುದೆಂದು ಪತ್ರಿಕೆಗಳಲ್ಲಿ ಬಂದಿದೆ ಎಂದರು. ಇದರ ಬಗ್ಗೆಯೂ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು.—ಈಗ ಪ್ರಸ್ತಾಪವನ್ನು ಮತಕ್ಕೆ ಹಾಕುತ್ತೇವೆ. ಪ್ರಸ್ತಾವವೇನೆಂದರೆ "೩೧-೩-೮೭ರ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧೨,೩೮,೬೯,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

(ಪ್ರಸ್ತಾವವು ಅಂಗೀಕೃತವಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ–೨೫ (ಗೃಹ ಇಲಾಖೆ)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂಬಂಧಿಸಿ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧೩,೩೮,೬೯,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಇನ್ನು ಮುಂದೆ ಸಾರಿಗೆ ಸಚಿವರಿಂದ ಚರ್ಚೆಗೆ ಉತ್ತರ.

ಶ್ರೀ ವೀರಣ್ಣ.—ಅಧ್ಯಕ್ಷರೇ ನಾನು ಜಾಸ್ತಿ ಹೊತ್ತು ಮಾತನಾಡುವುದಿಲ್ಲ. ಸಂಕ್ಷಿಪ್ತವಾಗಿ ಹೇಳುತ್ತೇನೆ. ಸಣ್ಣ ಉಳಿತಾಯ, ಸಾರಿಗೆ ಕೆ ಎಸ್ ಆರ್ ಟಿ ಸಿ ಗಳ ಬಗ್ಗೆ ಅನೇಕ ಸದಸ್ಯರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅವರಿಗೆ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಇನ್ನು ಕೆಲವು ಸದಸ್ಯರು ಟೀಕೆ ಮಾಡಿದ್ದಾರೆ, ಅವನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನು ಕೆಲವು ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಅವನ್ನು ಮೆಚ್ಚುತ್ತೇನೆ. ಮೊದಲು ನನ್ನ ಒರಿಜನಲ್ ಖಾತೆಯಾದ ಸಣ್ಣ ಉಳಿತಾಯದಿಂದ ಮಾತನಾಡುತ್ತೇನೆ. ಇದರ ಬಗ್ಗೆ ಲೀಲಾದೇವಿ ಆರ್. ಪ್ರಸಾದ್ ಅವರು ಯಡಿಯೂರಪ್ಪ ಮತ್ತು ಮಲ್ಲಪ್ಪನವರು ಹೇಳಿದ್ದಾರೆ. ಶ್ರೀಮತಿ ಲೀಲಾದೇವಿಯವರು ಕರ್ನಾಟಕ ಇಡೀ ದೇಶದಲ್ಲಿ ೨೮ನೇ ಸ್ಥಾನದಲ್ಲಿದೆ ಎಂದರು, ಅದು ಸರಿಯಲ್ಲ, ಕರ್ನಾಟಕ ೫ನೇ ಸ್ಥಾನವನ್ನು ಹೊಂದಿದೆ. ದಕ್ಷಿಣ ಭಾರತದಲ್ಲಿ ಮೊದಲನೇ ಸ್ಥಾನವನ್ನು ಹೊಂದಿದೆ. ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣವನ್ನು ಕೇಂದ್ರ ಬಿಡುಗಡೆ ಮಾಡಿಲ್ಲ ಎಂದು ಹೇಳಿದರು. ಅದು ತಪ್ಪು. ಕೇಂದ್ರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿಜವನ್ನು ನಿಜ ಎಂದು ಹೇಳೋಣ. ಕೇಂದ್ರದವರು ನಾವು ಸಣ್ಣ ಉಳಿತಾಯದಲ್ಲಿ ಎಷ್ಟು ಹಣ ಸಂಗ್ರಹ ಮಾಡುತ್ತೇವೋ ಅದರ ೨/೩ ಭಾಗದ ಹಣವನ್ನು ಬಿಡುಗಡೆ ಮಾಡುತ್ತಾರೆ ೮೫–೮೬ ರಲ್ಲಿ ಕರ್ನಾಟಕಕ್ಕೆ ೧೬೬ ಕೋಟಿ ಹಣವನ್ನು ಕೇಂದ್ರ ಬಿಡುಗಡೆ ಮಾಡಿದೆ. ೮೬–೮೭ ರಲ್ಲಿ ೧೬೭ ಕೋಟಿಯನ್ನು ಕೊಟ್ಟಿದ್ದಾರೆ. ಇನ್ನೂ ೧೩ ಕೋಟಿ ಕೊಡಬೇಕು. ಆಡಿಟ್ ರಿಪೋರ್ಟ್ ಹೋದ ತಕ್ಷಣ ಅದನ್ನು ರಿಲೀಸ್ ಮಾಡುತ್ತಾರೆ. ಮಾನ್ಯ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದರು. ನಾನು ಚಿಕ್ಕಮಂಗಳೂರಿಗೆ ಪುನಃ ಹೋದರೆ ಅಲ್ಲಿಯ ಜನ ನನ್ನನ್ನು ಬಿಡುವುದಿಲ್ಲ ಎಂದು. ನಾನು ಚಿಕ್ಕಮಂಗಳೂರಿಗೆ ಹೋದಾಗ ಅಲ್ಲಿನ ಪುರಸಭಾಧ್ಯಕ್ಷರು ಸದಸ್ಯರು, ಪ್ರಮುಖರು ಚಿಕ್ಕಮಂಗಳೂರಿಗೆ ಕುಡಿಯುವ ನೀರಿನ ತೊಂದರೆ ಬಹಳ ಇದೆಯೆಂದು ಹೇಳಿ, ಪಕ್ಕದ ಹೊನ್ನಮ್ಮನ ಹಳ್ಳದಿಂದ ನೀರನ್ನು ಸರಬರಾಜು ಮಾಡಬಹುದು. ಅದಕ್ಕೆ ೮೦ ಲಕ್ಷ ಅಂದಾಜಾಗಿದೆ. ಅದಕ್ಕೆ ಸಂಬಂಧಪಟ್ಟಹಾಗೆ ಸರ್ಕಾರ ೧೫ ಲಕ್ಷ ಹಣ ಕೊಡಬೇಕಾಗುತ್ತದೆ, ಮಿಕ್ಕ ಹಣವನ್ನು ಇನ್‌ಶೂರೆನ್ಸ್ ಡಿಪಾರ್ಟ್‌ಮೆಂಟಿನಿಂದ ಸಾಲದ ರೂಪದಲ್ಲಿ ತಗೆದುಕೊಳ್ಳುತ್ತೇವೆಂದು ಹೇಳಿದರು. ನಾನು ಅವರಿಗೆ ಹೇಳಿದೆ, ರಾಜ್ಯ ಸರ್ಕಾರದಲ್ಲಿ ಅನೇಕ ಯೋಜನೆಗಳಿವೆ, ನೀವು ಚಿಕ್ಕಮಂಗಳೂರಿನವರು ಪ್ರಯತ್ನ ಮಾಡಿದರೆ ಪೂರ್ತಿ ಹಣವನ್ನು ಸರ್ಕಾರದಿಂದಲೇ ಬಿಡುಗಡೆ ಮಾಡಿಸೋಣ, ಯಾವ ರೀತಿ ಎಂದರೆ ಸಣ್ಣ ಉಳಿತಾಯದಲ್ಲಿ ಆ ಜಿಲ್ಲೆಗೆ ಕೊಟ್ಟಿರುವ ಗುರಿಗಿಂತ ಜಾಸ್ತಿ ಮಾಡಿ ಸಂಗ್ರಹಿಸಿ ಕೊಟ್ಟರೆ ಈ ಯೋಜನೆಯನ್ನು ಮಾಡಿ ಮುಗಿಸುವ ಜವಾಬ್ದಾರಿ ಸರ್ಕಾರದ್ದು ಎಂದು ಹೇಳಿದೆ. ಆಹ್ವಾನವನ್ನು ಸ್ವೀಕರಿಸಿದ ಅಲ್ಲಿನ ಶಾಸಕರು ಪುರಸಭೆಯವರು, ಪ್ರಮುಖರು ಸಣ್ಣ ಉಳಿತಾಯ ಸಂಗ್ರಹಣೆಯಲ್ಲಿ ತೊಡಗಿದರು. ಮುಖ್ಯ ಮಂತ್ರಿಗಳೂ ಕೂಡ ಅಲ್ಲಿಗೆ ಭೇಟಿ ಕೊಟ್ಟು ಡಿಸೆಂಬರ್ ಒಳಗೆ ಗುರಿ ಮುಗಿಸಿದ್ದಕ್ಕೆ ಅವರ ಸಾಧನೆಯನ್ನು ಮೆಚ್ಚಿ ಹೊನ್ನಮ್ಮನ ಹಳ್ಳಿ ಯೋಜನೆಗೆ ಹಣ ಬಿಡುಗಡೆ ಮಾಡುವುದಾಗಿ ಹೇಳಿದರು. ಅದರಂತೆ ಈಗ ಆ ಯೋಜನೆಗೆ ಹಣ ಬಿಡುಗಡೆ ಮಾಡಲಾಗಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ as and when the grant is required, the government is going to release the grant for the completion of that project. ಆದ್ದರಿಂದ ಹಣವನ್ನು ಕೊಡದಿರುವ ಪ್ರಶ್ನೆ ಇಲ್ಲವೇ ಇಲ್ಲ.

೭-೩೦ ಪಿ. ಎಂ.

ಮತ್ತೆ ಮಾನ್ಯ ಬಾಲ್‌ಕಾಯಿಯವರು ಸಣ್ಣ ಉಳಿತಾಯದಲ್ಲಿ ಸ್ವಲ್ಪ ಬಲವಂತಮಾಡಿ ಸಂಗ್ರಹಣೆ ಮಾಡುತ್ತಾ ಇದ್ದಾರೆ ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಕೇಂದ್ರ ಸರ್ಕಾರದವರು ಅದರಲ್ಲೂ ವಿಶೇಷವಾಗಿ ಮಾನ್ಯ ಜನಾರ್ದನ ಪೂಜಾರಿಯವರು ಅನೇಕ ಪತ್ರಗಳನ್ನು ಸರ್ಕಾರಕ್ಕೆ ಬರೆಯುತ್ತಾ ಇದ್ದಾರೆ. ಏನೆಂದರೆ, ನೀವು ಯಾವಾಗಲೂ ನಗರ ಮತ್ತು ಪಟ್ಟಣಗಳ ಪ್ರದೇಶಗಳಲ್ಲಿ ಹಣ ಸಂಗ್ರಹಣೆ ಮಾಡುತ್ತಾ ಇದ್ದೀರಿ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಸಂಪನ್ಮೂಲವನ್ನು ಉಪಯೋಗಿಸಿಕೊಳ್ಳಬೇಕು, ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಲ್ಲಿ ಉಳಿತಾಯ ಮನೋಭಾವವನ್ನು ಬೆಳೆಸಬೇಕು, ಇದಕ್ಕಾಗಿ ಗ್ರಾಮಾಂತರದಲ್ಲಿ ಪ್ರಯತ್ನ ಪಡಬೇಕು ಎಂದು ಹೇಳಿದ್ದರ ಸಲುವಾಗಿ ನಾವು ತೀರ್ಮಾನ ಮಾಡಿದೆವು. ಯಾರುಯಾರಿಗೆ ದುಡಿಯುತಕ್ಕ ಶಕ್ತಿ ಇದೆ, ಅವರು ದುಡಿಯುತಕ್ಕದ್ದರಲ್ಲಿ ಸ್ವಲ್ಪವಾದರೂ ಉಳಿಸಬೇಕು ಎಂದು ಅವರ ಮನವೊಲಿಸಿ, ತನ್ಮೂಲಕ ರಾಜ್ಯಕ್ಕೆ ರಾಷ್ಟ್ರಕ್ಕೆ, ಅವರ ಭವಿಷ್ಯಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ಪ್ರತಿಯೊಂದು ದುಡಿಯುತಕ್ಕ ಕುಟುಂಬದಲ್ಲೂ ಸಣ್ಣ ಉಳಿತಾಯ ಮಾಡಬೇಕು ಎಂಬ ಕಾರ್ಯಕ್ರಮವನ್ನು ಮಾಡಿದ್ದೇವೆ. ಇದರಲ್ಲಿ ಬಲವಂತವಾಗಿ ಉಳಿತಾಯ ಮಾಡತಕ್ಕ ಪ್ರಶ್ನೆ ಇಲ್ಲ. ಮತ್ತೆ ಮಾನ್ಯ ಮಲ್ಲಪ್ಪನವರು ಇಂದಿರಾವಿಕಾಸ ಪತ್ರದ ಬಗ್ಗೆ ಹೇಳಿದ್ದಾರೆ. ಇದರಲ್ಲಿ ರಾಜ್ಯಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಕಾಂಪಿಟಿಷನ್ ಇಲ್ಲ, ಇದು ತಪ್ಪು ತಿಳಿವಳಿಕೆ ಎಂದು ಹೇಳುತ್ತೇನೆ. ಕೇಂದ್ರ ಸರ್ಕಾರದವರು ಇಂದಿರಾವಿಕಾಸ ಪತ್ರ ಯೋಜನೆ ತಂದು ಒಳ್ಳೆಯದು ಮಾಡಿದ್ದಾರೆ. ಮನುಷ್ಯನಿಗೆ ಏನಾದರೂ ಆದಾಯ ಹೆಚ್ಚಾದರೆ ಅದನ್ನು ಉಳಿತಾಯದಲ್ಲಿ ತೊಡಗಿಸತಕ್ಕಂಥದ್ದು ಅವನ ಹುಟ್ಟು ಗುಣ. ಎನ್.ಎಸ್.ಸಿ. ೬ನೇ ಇಷ್ಯು ತೆಗೆದುಕೊಂಡರೆ ೬ ವರ್ಷಗಳಲ್ಲಿ ಆ ಹಣ ದ್ವಿಗುಣವಾಗುತ್ತದೆ. ಇಂದಿರಾ ವಿಕಾಸ ಪತ್ರವನ್ನು ೫ ಸಾವಿರಕ್ಕೆ ತೆಗೆದುಕೊಂಡರೆ ೫ ವರ್ಷಗಳ ಅವಧಿಯಲ್ಲಿ ೧೦ ಸಾವಿರ ಆಗುತ್ತದೆ. ಇಂದಿರಾ ವಿಕಾಸ ಪತ್ರದ ಮೂಲಕ ಹಣ ಉಳಿತಾಯ ಮಾಡಿದರೆ ಅದರ ಮೂರನೇ ಎರಡು ಭಾಗವನ್ನು ಸಾಲದ ರೂಪದಲ್ಲಿ ಆಯಾ ರಾಜ್ಯಕ್ಕೆ ಬಿಡುಗಡೆಮಾಡುತ್ತಾರೆ. ಎನ್.ಎಸ್.ಸಿ. ೬ನೇ ಇಷ್ಯೂ ತೆಗೆದುಕೊಳ್ಳಬೇಕಾದರೆ ಅನೇಕ ಪ್ರೊಸೀಜರ್‌ಗಳನ್ನು ಅನುಸರಿಸಬೇಕಾಗಿತ್ತು. ನಾಲ್ಕೈದು ಕಡೆ ಸೈನ್‌ಗಳನ್ನು ಮಾಡಬೇಕಾಗಿತ್ತು. ಆ ಹಣವನ್ನು ವಾಪಸ್ ಪಡೆಯಬೇಕಾದರೆ ಸಿಗ್ನೇಚರ್ ಐಡೆಂಟಿಫೈ ಮಾಡಬೇಕಾದರೆ ತೊಂದರೆಯಾಗುತ್ತಿತ್ತು. ಈ ತೊಂದರೆಗಳನ್ನೆಲ್ಲಾ ನಿವಾರಣೆ ಮಾಡಿ ಸುಲಭ ರೀತಿಯಲ್ಲಿ ಹಾಗೂ ಸರಳ ರೀತಿಯಲ್ಲಿ ಇಂದಿರಾವಿಕಾಸ ಪತ್ರವನ್ನು ಮಾಡಿದ್ದಾರೆ ? ೫ ಸಾವಿರ ರೂಪಾಯಿಗಳನ್ನು ಪೋಸ್ಟ್ ಆಫೀಸಿಗೆ ಕೊಟ್ಟು ಇಂದಿರಾವಿಕಾಸ ಪತ್ರಗಳನ್ನು ಕೊಳ್ಳಲು ಯೋಜನೆ ಮಾಡಿದ್ದಾರೆ. ತೆಗೆದುಕೊಂಡರೆ ೫ ವರ್ಷಗಳ ಅವಧಿಯಲ್ಲಿ ಹತ್ತು ಸಾವಿರ ರೂಪಾಯಿಗಳು ಬರುತ್ತವೆ. ಆದುದರಿಂದ ನಾನು ಇದನ್ನು ಶ್ಲಾಘನೆ ಮಾಡುತ್ತಾ ಇದ್ದೇನೆ. ಈ ದಿಶೆಯಲ್ಲಿ ಕರ್ನಾಟಕದಲ್ಲಿ ಈಗಾಗಲೇ ೨೫-೩೦ ಕೋಟಿ ರೂಪಾಯಿ ಹಣ ಸಂಗ್ರಹಣೆಯಾಗಿದೆ. ಆದರೆ ಇಂದಿರಾವಿಕಾಸ ಪತ್ರಕ್ಕೆ ಇನ್‌ಕಂ ಟ್ಯಾಕ್ಸ್ ರಿಯಾಯಿತಿ ಕೊಟ್ಟಿಲ್ಲ. ಎನ್.ಎಸ್.ಸಿ. ೬ನೇ ಇಷ್ಯು ಪರ್ಚೇಸ್ ಮಾಡಿದರೆ ಇನ್‌ಕಂ ಟ್ಯಾಕ್ಸ್ ರಿಯಾಯಿತಿ ದೊರೆಯುತ್ತದೆ. ಎಂದು ಕೆಲವರ ಅಭಿಪ್ರಾಯ ಇಂದಿರಾ ವಿಕಾಸ ಪತ್ರವನ್ನು ಕೊಳ್ಳುವ ಸಮಯದಲ್ಲಿ ಆದಾಯ ತೆರಿಗೆ ವಿಷಯ ಬರುವುದಿಲ್ಲ. ಇಷ್ಟು ಸಣ್ಣ ಉಳಿತಾಯದ ಬಗ್ಗೆ ಸಾಕು ಎಂದು ನನ್ನ ಅಭಿಪ್ರಾಯ.

ಇನ್ನು ಪ್ರಿಸನ್ ಬಗ್ಗೆ ಯಾರೂ ಹೇಳಲಿಲ್ಲ, ಒಬ್ಬರು ಸದಸ್ಯರು ಮಾತ್ರ ಹೇಳಿದರು. ಜೈಲಿನಲ್ಲಿ ನಾವು ಅನೇಕ ಕೆಲಸಗಳನ್ನು ಮಾಡುತ್ತಾ ಇದ್ದಾಗ ಕೂಲಿ ಕೊಡುತ್ತೇವೆ. ಅದರಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಬೇದಭಾವ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆರೀತಿ ಬೇಧಭಾವ ಮಾಡಿಲ್ಲ, ಇಬ್ಬರಿಗೂ ಒಂದೇ ರೀತಿಯಾದ ಕೂಲಿಯನ್ನು ನಾವು ಕೊಡುತ್ತಿದ್ದೇವೆ, ಆಮೇಲೆ ಜೈಲಿನ ವಿಷಯದಲ್ಲಿ ಹೇಳಬೇಕಾದರೆ ಅವು ಮಾಡ್ರನೈಸ್ ಆಗಬೇಕು ಮತ್ತು ಅವುಗಳನ್ನು ರಿ ಆರ್ಗನೈಸ್ ಮಾಡಬೇಕು. ೯೪ ಜೈಲುಗಳ ಪೈಕಿ ೪೪ ಜೈಲುಗಳು ಇನ್ನೂ ಕಂದಾಯ ಇಲಾಖೆಯ ಆಡಳಿತದಲ್ಲಿವೆ. ಅವುಗಳ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲ. ಈ ೪೪ ಜೈಲುಗಳನ್ನು ನಮ್ಮ ಕಾರಾಗೃಹ ಇಲಾಖೆ ತೆಗೆದುಕೊಂಡರೆ ಬಹುಶ: ಅವುಗಳ ಆಡಳಿತ ಚೆನ್ನಾಗಿರುತ್ತದೆ. ಆದರೆ ಹಣದ ವಿಷಯ

ಬಂದಾಗ ತೊಂದರೆಯಾಗುತ್ತದೆ. ಆದ್ದರಿಂದ ಹಂತ ಹಂತವಾಗಿ ಪ್ರತಿ ವರ್ಷ ೧೫ ಸಬ್‌ಜೈಲುಗಳನ್ನು ಕಾರಾಗೃಹ ಇಲಾಖೆ ತೆಗೆದುಕೊಳ್ಳಲಿಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಜೈಲಿನ ವಿಷಯವನ್ನು ನಾನು ಮುಗಿಸುತ್ತೇನೆ.

ಇನ್ನು ಮೂರನೆಯದು ಸಾರಿಗೆ ಇಲಾಖೆ. ಸಾರಿಗೆ ಇಲಾಖೆ ಬಗ್ಗೆ ನಾನು ಎರಡು ಮಾತನ್ನು ಆಡಲು ಅಪೇಕ್ಷೆ ಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರಿಗೂ ಗೊತ್ತಿರುವ ರೀತಿಯಲ್ಲಿ, ಮತ್ತು ತಮಗೆ ಗೊತ್ತಿರುವ ರೀತಿಯಲ್ಲಿ ಸಾರಿಗೆ ಇಲಾಖೆ, ಆರ್.ಟಿ.ಒ. ಆಫೀಸ್ ಅಂದರೆ ಸಾರ್ವಜನಿಕರಿಗೆ ಕಿಸೆಯಲ್ಲಿ ಹಣ ತೆಗೆದುಕೊಂಡು ಹೋಗದೆ ಕೆಲಸ ಆಗಲಿಕ್ಕಿಲ್ಲ ಎನ್ನುವ ಭಾವನೆ ಇದೆ ಆ ಭಾವನೆಯನ್ನು ಹೊಡೆದೋಡಿಸಬೇಕು. ಆರ್.ಟಿ.ಒ. ಆಫೀಸಿಗೆ ಹೋಗಬೇಕಾದರೆ ಯಾವ ರೀತಿ ಹಣ ಇಲ್ಲದೆ ಕೆಲಸ ಆಗಬಹುದು ಎನ್ನುವ ಭಾವನೆ ಬರುವ ರೀತಿಯಲ್ಲಿ ಅನೇಕ ಕೆಲಸಗಳನ್ನು ನಾವು ಮಾಡಿದ್ದೇವೆ.

ಅದರಲ್ಲಿ ಮೊಟ್ಟಮೊದಲನೆಯದು ಎಂದು ಹೇಳಿದರೆ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ, ಈ ಆರ್.ಟಿ ಓ. ಲೆವೆಲ್‌ನಲ್ಲಿ, ಒಂದು ಡಿಸ್ಟ್ರಿಕ್ ಪಬ್ಲಿಕ್ ಗ್ರೀವಿಯೆನ್ಸಸ್ ಎಂದು ಪ್ರತಿಯೊಂದು ತಿಂಗಳಲ್ಲಿ ಮಾಡಬೇಕು ಎಂದು ಈ ನಿಯಮವನ್ನು ಮಾಡಿದ್ದೇವೆ. ಅದು ಬಹುಶಃ ನಮ್ಮ ಮೊಯಿಲಿಯವರ ಜಿಲ್ಲೆಯಲ್ಲಿ ಬಹಳ ಚೆನ್ನಾಗಿ ಕಾರ್ಯಗತವಾಗುತ್ತಿದೆ. ನಾನು ಮೊನ್ನೆ ಅಲ್ಲಿಗೆ ಹೋದಾಗ ವಾಹನ ಮಾಲೀಕರು ಇದರ ಬಗ್ಗೆ ಒಂದು ತೃಪ್ತಿಯನ್ನು ವ್ಯಕ್ತಪಡಿಸಿದರು. ಇದಲ್ಲದೇ ಆರ್.ಟಿ.ಒ. ಆಫೀಸಿಗಳಿಗೆ ಸಾರ್ವಜನಿಕರು ಬರತಕ್ಕಂಥದ್ದು ಕಡಿಮೆ ಮಾಡಬೇಕು, ಇದರ ಅರ್ಥ ಮನೆ ಬಾಗಿಲಿನಲ್ಲಿಯೇ ಅವರ ಕೆಲಸ ಆಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸಹಾ ಒಂದು ತಿಂಗಳಿಗೆ ಒಂದು ದಿವಸ ಆರ್.ಟಿ.ಒ.ಗಳು ತಾಲ್ಲೂಕು ಕೇಂದ್ರಕ್ಕೆ ಹೋಗಿ ಅಲ್ಲಿ ಸಂಬಂಧಪಟ್ಟ ಮೋಟಾರ್ ವೆಹಿಕಲ್ ಇನ್ಸ್‌ಪೆಕ್ಟರ್ಸ್, ಸಂಬಂಧಪಟ್ಟ ಅಧಿಕಾರಿಗಳು ರೆಕಾರ್ಡ್ ಸಮೇತ ಹೋಗಿ ತಾಲ್ಲೂಕು ಲೆವೆಲ್‌ನಲ್ಲಿ ಏನು ಫಿಟ್‌ನೆಸ್ ಸರ್ಟಿಫಿಕೇಟ್ ಕೊಡತಕ್ಕಂಥದ್ದು, ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಕೊಡತಕ್ಕಂಥದ್ದು, ಡ್ರೈವಿಂಗ್ ಲೈಸೆನ್ಸ್ ಕೊಡತಕ್ಕಂಥದ್ದು, ಕಂಡಕ್ಟರ್‌ಗೆ ಲೈಸೆನ್ಸ್ ಕೊಡತಕ್ಕಂಥದ್ದು ಅಲ್ಲಿಯೇ ಆ ಕೆಲಸವನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಅದು ತಾಲ್ಲೂಕು ಆಫೀಸ್ ಪ್ರೆಮಿಸಿಸ್‌ನಲ್ಲಿ ಆಗಬಹುದು, ಅಸಿಸ್ಟೆಂಟ್ ಕಮೀಷನರ್ ಆಫೀಸ್ ಪ್ರೆಮಿಸಿಸ್‌ನಲ್ಲಿ ಆಗಬಹುದು, ಜಾಗ ಎಲ್ಲೂ ಇಲ್ಲದೇ ಇದ್ದರೆ ಟಿ.ಬಿ. ಆವರಣದಲ್ಲಿ ಆ ಕೆಲಸ ಮಾಡಬೇಕು ಎಂದು ಸೂಚನೆ ನೀಡಿದ್ದೇವೆ ಮತ್ತೊಂದು ಹೊಸ ಪ್ರಯೋಗವನ್ನು ನಾವು ಮಾಡಿದ್ದೇವೆ, ಅದೇನೆಂದರೆ ನಮ್ಮ ವಾಹನಗಳಿ ನಾವು ಕೊಡತಕ್ಕಂಥ ತೆರಿಗೆ, ಆ ತೆರಿಗೆಯನ್ನು ಕಟ್ಟಲಿಕ್ಕೆ ಆರ್.ಟಿ.ಒ. ಆಫೀಸ್‌ಗೆ ಹೋಗಬೇಕಾಗಿತ್ತು. ಆರ್.ಟಿ.ಓ ಆಫೀಸಿಗೆ ಹೋದಾಗ ಅಲ್ಲಿ ದೊಡ್ಡದು ಕ್ಯೂ ನಿಂತುಕೊಂಡು ನಮ್ಮ ಹಣವನ್ನು ಕಟ್ಟಲಿಕ್ಕೆ ನಿಂತುಕೊಂಡು ಬೇಜಾರಾಗಿ ಮಧ್ಯವರ್ತಿಗಳ ಮೂಲಕ ನಮ್ಮ ಹಣವನ್ನು ಕಟ್ಟಲಿಕ್ಕೆ ಇದಕ್ಕೆ ಪುನಃ ನಮ್ಮ ಹಣವನ್ನು ಕೊಡತಕ್ಕಂಥ ವ್ಯವಸ್ಥೆ ಇತ್ತು. ಇದನ್ನು ನೋಡಿ ಏನಾದರೂ ಒಂದು ಇದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ಇದನ್ನು ಕರ್ನಾಟಕದಲ್ಲಿರತಕ್ಕಂಥ ನ್ಯಾಷನಲೈಸ್ಡ್ ಬ್ಯಾಂಕುಗಳ ಮೂಲಕ ಈ ತೆರಿಗೆಯನ್ನು ಕಟ್ಟಲಿಕ್ಕೆ ಒಂದು ಕಾನೂನನ್ನು ನಾವು ಜಾರಿಗೆ ತಂದಿದ್ದೇವೆ. ಈ ವಿಚಾರವನ್ನು ಹೇಳಲಿಕ್ಕೆ ಸಂತೋಷವಾಗುತ್ತದೆ. ಇದರ ಬಗ್ಗೆ ಮೊಯಿಲಿಯವರ ಜಿಲ್ಲೆಯಿಂದ ಅನೇಕ ಪತ್ರಗಳು ಬಂದಿವೆ. ಈ ಹೊಸ ವ್ಯವಸ್ಥೆಯಿಂದ ಅನುಕೂಲವಾಗುತ್ತದೆ, ಇದು ಒಳ್ಳೆಯ ವ್ಯವಸ್ಥೆ, ಇದೇ ರೀತಿಯಾಗಿರತಕ್ಕಂಥ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಮಾಡಿ ಎಂದು ಅವರವರ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಮಾನ್ಯ ಫರ್ನಾಂಡೀಸ್‌ರವರು ಒಳ್ಳೆಯ ಸಲಹೆಗಳನ್ನು ಕೊಟ್ಟರು. ಶ್ರೀಮತಿ ನಾರತ್ನಮ್ಮನವರು ಈ ಡ್ರೈವಿಂಗ್ ಲೈಸೆನ್ಸ್ ಬಗ್ಗೆ ಹೇಳಿದರು. ಡ್ರೈವಿಂಗ್ ಲೈಸೆನ್ಸ್ ಕೊಡಲಿಕ್ಕೆ ಅನೇಕ ವಿಧವಾದ ಟ್ರೈನಿಂಗ್ ಮತ್ತು ಟೆಸ್ಟನ್ನು ಪಾಸು ಮಾಡಿದಮೇಲೆ ಈ ಡ್ರೈವಿಂಗ್ ಲೈಸೆನ್ಸನ್ನು ನಾವು ಕೊಡುತ್ತಿದ್ದೇವೆ. ಮತ್ತು ಆರ್.ಟಿ.ಒ. ಆಫೀಸ್‌ನಲ್ಲಿ ಅನೇಕ ಜನಗಳಿಗೆ ಅನೇಕ ಸದಸ್ಯರಿಗೆ ಅನುಭವ ಉಂಟು, ಅದೇನೆಂದರೆ ಒಂದು ಕೆಲಸಕ್ಕೆ ಹೋದರೆ ಎರಡು ದಿವಸ, ಮೂರು ದಿವಸ, ನಾಲ್ಕು ದಿವಸ ಆಗತಕ್ಕಂಥದ್ದು. ಅದನ್ನು ತಪ್ಪಿಸಲಿಕ್ಕೆ ಪ್ರತಿಯೊಂದು ಕೆಲಸಕ್ಕೂ ಅದೇ ದಿವಸದಲ್ಲಿ, ಎಷ್ಟೇ ಗಂಟೆಗೆ ಆಯಾಯ ದಿವಸದಲ್ಲಿಯೇ ಮಾಡಿಕೊಬೇಕು ಎಂದು ಅದಕ್ಕಾಗಿ ಇನ್‌ಸ್ಟ್ರಕ್ಷನ್‌ನ್ನು ನಾವು ಕೊಟ್ಟಿದ್ದೇವೆ. ಮತ್ತು ಬೋರ್ಡನ್ನು ಸಹಾ ನಾವು ಹಾಕಿದ್ದೇವೆ. ಒಂದು ವೇಳೆ ಯಾರು ಆ ಕೆಲಸವನ್ನು ನಿರ್ದಿಷ್ಟವಾದ ದಿವಸದಲ್ಲಿ

ಮಾಡಲಿಲ್ಲ ಎಂದರೆ ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಇಷ್ಟೆಲ್ಲಾ ಆದಮೇಲೆ ಇನ್ನೂ ಸರಳವಾಗಿ ಮಾಡಬೇಕು ಎನ್ನುವ ದೃಷ್ಟಿಯಿಂದ ‘‘ಕೌಂಟರ್ ಸಿಸ್ಟಂ’’ನ್ನು ಜಾರಿಗೆ ತಂದಿದ್ದೇವೆ. ಬ್ಯಾಂಕಿಗೆ ಹೋದರೆ ತಾವು ಹಣವನ್ನು ಪಡೆಯ ಬೇಕಾದರೆ ಚೆಕ್‌ನ್ನು ಕೌಂಟರ್‌ನಲ್ಲಿ ಕೊಟ್ಟರೆ ೫–೧೦ ನಿಮಿಷದಲ್ಲಿ ಅದೇ ಕೌಂಟರಿನಲ್ಲಿ ನಿಮ್ಮ ಹಣ ಬರುತ್ತದೆ. ಅದೇ ರೀತಿಯಾಗಿ ಆರ್.ಟಿ.ಓ. ಆಫೀಸ್‌ನಲ್ಲಿ ಸಾರ್ವಜನಿಕ ಕಾರ್ಯ ವ್ಯವಸ್ಥೆಯನ್ನು ಮಾಡಿದ್ದೇವೆ. ಮೊದಲು ಆ ರೀತಿಯಲ್ಲಿ ಇರಲಿಲ್ಲ ಒಂದು ಕೆಲಸ ಮಾಡಬೇಕು ಎಂದರೆ ಪ್ರತಿಯೊಂದು ಗುಮಾಸ್ತರ ಹತ್ತಿರಕ್ಕೂ, ಪ್ರತಿಯೊಂದು ಟೇಬಲ್‌ಗೂ ಹೋಗಬೇಕಾಗಿತ್ತು. ಅದನ್ನು ತಪ್ಪಿಸಿ ಅದರಿಂದ ಭ್ರಷ್ಟಾಚಾರಕ್ಕೆ ಎಡೆಕೊಡಬಹುದು ಎನ್ನುವ ದೃಷ್ಟಿಯಿಂದ ಕೌಂಟರ್ ಸಿಸ್ಟಂನ್ನು ಜಾರಿಯಲ್ಲಿ ತಂದಿದ್ದೇವೆ. ಯಾರೂ ಕೂಡಾ ಗುಮಾಸ್ತರನ್ನು ಭೇಟಿ ಮಾಡಬಾರದು ಅವರನ್ನು ಸಂಪರ್ಕ ಮಾಡಬಾರದು, ಅವನ ಕೆಲಸಕ್ಕೆ ಕೌಂಟರಿನಲ್ಲಿ ಅರ್ಜಿ ಕೊಟ್ಟರೆ ಆ ಕೆಲಸವನ್ನು ತಕ್ಷಣ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಇದನ್ನು ಸಧ್ಯಕ್ಕೆ ನಾವು ಯಂಶವಂತ ಪುರ ಆರ್.ಟಿ.ಓ. ಆಫೀಸ್‌ನಲ್ಲಿ ಜಾರಿಗೆ ತಂದಿದ್ದೇವೆ. ಇದನ್ನು ಎಲ್ಲೆಲ್ಲಿ ನಮ್ಮ ಇಲಾಖಾ ವತಿಯಿಂದ ಈ ಕಟ್ಟಡಗಳನ್ನು ಕಟ್ಟಿದ್ದೇವೆ. ಆ ಎಲ್ಲಾ ಕಡೆ ಈ ಕೌಂಟರ್ ಸಿಸ್ಟಂನ್ನು ತರುತ್ತಿದ್ದೇವೆ. ಇನ್ನು ಆರು ತಿಂಗಳ ಒಳಗಾಗಿ ಇಡೀ ಕರ್ನಾಟಕದಲ್ಲಿಯೇ ಈ ರೀತಿಯಾದ ವ್ಯವಸ್ಥೆಯನ್ನು ನಾವು ಜಾರಿಗೆ ತರುತ್ತಿದ್ದೇವೆ. ಟ್ರಕ್ ಟರ್ಮಿನಲ್ ಬಗ್ಗೆ ಶ್ರೀಮತಿ ಲೀಲಾದೇವಿ ಪ್ರಸಾದ್‌ರವರು ಹೇಳಿದರು. ಇದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಯಲಹಂಕದಲ್ಲಿ ಜಮೀನನ್ನು ನಾವು ಕೊಟ್ಟಿದ್ದೇವೆ. ಇದರ ಬಗ್ಗೆ ಆದಷ್ಟು ಜಾಗ್ರತೆ ಕ್ರಮವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ.

ಇನ್ನು ಇಷ್ಟೆಲ್ಲಾ ಆದ ಮೇಲೆ ಇಂಡಿಯಾ ಟೂರಿಸ್ಟ್ ಪರ್ಮಿಟ್ ಬಗ್ಗೆ ಶ್ರೀಮತಿ ಮುಂಕ್ತರುನ್ನೀಸಾ ಬೇಗಂ ಮತ್ತು ಇನ್ನೂ ಅನೇಕ ಸದಸ್ಯರು ಮಾತನಾಡಿದ್ದಾರೆ. ಮೊದಲು ಈ ಆಲ್ ಇಂಡಿಯಾ ಟೂರಿಸ್ಟ್ ಪರ್ಮಿಟ್‌ಗೆ ತೆರಿಗೆ ೬ ತಿಂಗಳಿಗೆ ೫೦೦ ರೂಪಾಯಿ ಇತ್ತು ಈಗ ಅದನ್ನು ೨೫೦೦ ರೂಪಾಯಿಗೆ ಏರಿಸಿದ್ದಾರೆ ಎಂದು ಹೇಳಿದರು. ಈ ಬಗ್ಗೆ ಮಾನ್ಯ ಸದಸ್ಯರ ಅನಿಸಿಕೆ ನೋಡಿದಾಗ, ಇದು ಜಾಸ್ತಿಯಾಗಿದೆ ಎನ್ನುವ ಭಾವನೆ ಬಂದಿರುವುದರಿಂದ ಇದನ್ನು ಕಡಿಮೆ ಮಾಡಲಿಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಇಷ್ಟೆಲ್ಲಾ ಆದ ಮೇಲೆ ಈ ಕೆಎಸ್‌ಆರ್‌ಟಿಸಿ ಬಗ್ಗೆ ಇದರ ಕಾರ್ಯಾಚರಣೆ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಈ ಕೆಎಸ್‌ಆರ್‌ಟಿಸಿಯಲ್ಲಿ ಬಹಳ ನಷ್ಟವಾಗುತ್ತಾ ಇದೆ. ಮತ್ತು ಈ ಸಂಸ್ಥೆ ಇನ್ನೂ ಹೆಚ್ಚು ದಕ್ಷತೆಯಿಂದ ಕೆಲಸ ಮಾಡಬೇಕೆನ್ನುವುದರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ಒಂದು ಮಾತು ಹೇಳುತ್ತೇನೆ. ಈ ಸಂಸ್ಥೆ ಸಾರ್ವಜನಿಕರ ಸೇವಾ ಸಂಸ್ಥೆ ಈ ಸಂಸ್ಥೆಯ ಬಗ್ಗೆ ಹೇಳುವುದಾದರೆ ಲಾಭ ಮತ್ತು ನಷ್ಟದ ಬಗ್ಗೆ ಗಮನ ಕೊಡಬಾರದು. ಮಾನ್ಯ ಅಧ್ಯಕ್ಷರೇ, ಈ ಸಂಸ್ಥೆಯ ಮೂಲ ಉದ್ದೇಶ ಏನೆಂದರೆ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕೆನ್ನುವುದೇ ಉದಾಹರಣೆಗೆ ಹೇಳುವುದಾದರೆ ಅನೇಕ ಸದಸ್ಯರು ಹೇಳುತ್ತಾರೆ, ಪ್ರತಿ ದಿವಸವೂ ನನ್ನ ಕ್ಷೇತ್ರದಿಂದ ಬಸ್ಸಿಗೆ ನಾಲ್ಕಾರು ಕಿಲೋಮೀಟರ್‌ಗಳಷ್ಟು ನಡೆದುಕೊಂಡು ಬರಬೇಕಾಗಿದೆ ಎಂದು ಹೇಳುತ್ತಾರೆ, ಅಲ್ಲದೆ ೧೦–೧೫ ಊರುಗಳಿಗೆ ಸಾರಿಗೆ ಸೌಲಭ್ಯಗಳೇ ಇಲ್ಲ ಎಂದು ಹೇಳುತ್ತಾರೆ. ತಮಗೆಲ್ಲಾ ಇದು ಗೊತ್ತಿರುವ ವಿಚಾರ. ಅದಕ್ಕೆ ಅಲ್ಲಿಗೆ ನಾವು ಸಾರಿಗೆ ಸೌಲಭ್ಯಗಳ ವ್ಯವಸ್ಥೆಯನ್ನು ಮಾಡಿಕೊಡಲೇಬೇಕು. ಈ ಬಗ್ಗೆ ನಾನು ಒಂದು ವಿಚಾರವನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಒಂದು ಕಿಲೋ ಮೀಟರ್‌ಗೆ ೪–೫೦ ಪೈಸೇ ಅರ್ನಿಂಗ್ಸ್ ಬಂದರೆ ಲಾಭ ನಷ್ಟ ಇಲ್ಲದೇ ಬಸ್ಸನ್ನು ಓಡಿಸಬಹುದು. ಅಂದರೆ ಇದು ಎಣ್ಣೆ ಬತ್ತಿಗೆ ನೇರವಾಗಿರುತ್ತದೆ. ಒಂದು ಕಿಲೋ ಮೀಟರ್‌ಗೆ ೪–೫೦ ಪೈಸೇ ಮೇಲೆ ಖರ್ಚಾದರೆ ನಷ್ಟವಾಗುತ್ತದೆ. ಇಲ್ಲದೇ ಇದ್ದರೆ ಎಣ್ಣೆ ಜಾಸ್ತಿ ಇರುತ್ತದೆ ಇಲ್ಲವೇ ಬತ್ತಿ ಬತ್ತಿ ಹೋಗುತ್ತದ. ಅಂದರೆ, ಖರ್ಚು ಜಾಸ್ತಿಯಾದರೆ ನಷ್ಟವಾಗುತ್ತದೆ. ನಾವು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕೆನ್ನುವ ಮೂಲ ಉದ್ದೇಶ ಇರುವುದರಿಂದ ಇದರಲ್ಲಿ ನಷ್ಟದ ಪ್ರಶ್ನೆಯೇ ಬರುವುದಿಲ್ಲ. ಒಂದು ಕಿಲೋ ಮೀಟರ್‌ಗೆ ಉತ್ಪತ್ತಿ ಒಂದು ರೂಪಾಯಿಯೇ ಬಂದರೂ ಸಾರ್ವಜನಿಕರ ಹಿತದೃಷ್ಟಿಯಿಂದ ಸಾರಿಗೆ ಸೌಲಭ್ಯ ಕೊಡುತ್ತಿದ್ದೇವೆ. ಎರಡು ರೂಪಾಯಿಯೇ ಬರಲಿ ಎಲ್ಲರಿಗೂ ಕೂಡ ಸಾರಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕೆನ್ನುವುದೇ ನಮ್ಮ ಮೂಲ ಉದ್ದೇಶ. ಅಲ್ಲದೆ ಇದರ ಜೊತೆಗೆ ಲಾಭವನ್ನೂ

ಸಹ ಮಾಡಬೇಕೆನ್ನುವ ಉದ್ದೇಶ ಇದೆ. ಆದುದರಿಂದ ಲಾಭವನ್ನು ಗಳಿಸುವ ಉದ್ದೇಶದಿಂದ ನಾವು ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ಮುಖ್ಯವಾಗಿ ಅನೇಕ ಮಾನ್ಯ ಸದಸ್ಯರು ಬಾಡಿ ಬಿಲ್ಡಿಂಗ್ಸ್ ಬಗ್ಗೆ ಮಾತನಾಡಿದರು. ಸ್ವಂತವಾಗಿ ಕೆಎಸ್ಆರ್‌ಟಿಸಿಯುವರೇ ಬಾಡಿ ಬಿಲ್ಡಿಂಗ್ಸ್ ಮಾಡಿದರೆ ಪ್ರೈವೇಟ್ ಪರ್ಸನ್ಸ್‌ಗೆ ಕೊಡದೇ ನೀವೇ ಮಾಡಿದರೆ ೫೦ ಸಾವಿರದಿಂದ ಒಂದು ಲಕ್ಷದವರೆಗೂ ಕೂಡ ಲಾಭ ಬರುತ್ತದೆಂದು ಹೇಳಿದರು. ಈ ಕೆಲಸವನ್ನು ನೀವೇ ಏತಕ್ಕೆ ಮಾಡಬಾರದು ಎಂದು ಕೇಳಿದರು. ಇದರ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾದರೆ ನಾವು ಈಗಾಗಲೇ ಎರಡು ರೀಜನಲ್ ವರ್ಕ್‌ಷಾಪ್‌ನಲ್ಲಿ ಪ್ರತಿ ವರ್ಷವೂ ೯೬೦ ರಿಂದ ೧೦೦೦ದವರೆಗೆ ಬಾಡಿ ಬಿಲ್ಡಿಂಗ್ಸ್ ಮಾಡುತ್ತಿದ್ದೇವೆ. ಇದಲ್ಲದೆ ಕಿವ್ಕೋ ಸಂಸ್ಥೆಯುವರು ಪ್ರತಿ ವರ್ಷವೂ ಕೂಡ ೨೫ ರಿಂದ ೩೦ರವರೆಗೂ ಬಾಡಿ ಬಿಲ್ಡಿಂಗ್ಸ್ ಮಾಡುತ್ತಿದ್ದಾರೆ. ಇನ್ನು ಕೆಲವು ಮಾನ್ಯ ಸದಸ್ಯರು ಕೆಂಗೇರಿ ಭೂಮಿ ಬಗ್ಗೆ ಹೇಳಿದರು. ಇದು ಇದುವರೆಗೂ ಡಿಸ್ಪ್ಯೂಟ್‌ನಲ್ಲಿತ್ತು ಈಗ ತೀರ್ಮಾನವಾಗಿದೆ. ಲೇಲ್ಯಾಂಡ್‌ನವರ ಸಹಕಾರದಿಂದ ಇಂಟಿಗ್ರೇಟ್ ಕೋಚ್ ಬಿಲ್ಡಿಂಗ್ಸ್ ತೆಗೆದುಕೊಳ್ಳುತ್ತಿದ್ದೇವೆ. ಆದ್ದರಿಂದ ಇದಾದ ಮೇಲೆ ಯಾವ ಪ್ರೈವೇಟ್ ಪರ್ಸನ್ಸ್‌ಗೆ ಕೊಡತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ. ಕೆಎಸ್ಆರ್‌ಟಿಸಿಗೆ ಎಷ್ಟು ಬೇಕೋ ಅಷ್ಟನ್ನೂ ಕೂಡ ಇಲ್ಲೇ ಬಾಡಿ ಬಿಲ್ಡಿಂಗ್ಸ್ ಮಾಡುವ ವ್ಯವಸ್ಥೆ ಮಾಡುತ್ತಿದ್ದೇವೆ.

ಇನ್ನು ಎರಡನೆಯದಾಗಿ ಹೇಳಬೇಕಾದರೆ ನ್ಯಾಷನಲೈಸೇಷನ್ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ರಾಯಚೂರು ಜಿಲ್ಲೆಯ ನ್ಯಾಷನಲೈಸೇಷನ್ ಬಗ್ಗೆ ಏತಕ್ಕೆ ಆಗಲಿಲ್ಲ ಎಂದು ಕೇಳಿದರು. ಇನ್ನೂ ಕೆಲವು ಸದಸ್ಯರು ಇದರ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದರು, ಇದರಲ್ಲಿ ಏನೋ ಇರಬೇಕು, ಎನ್ನುವ ಮಾತನ್ನು ಹೇಳಿದರು. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ಈ ಸಂಸ್ಥೆಯ ಜವಾಬ್ದಾರಿ ವಹಿಸಿ ೮-೯ ತಿಂಗಳಾಯಿತು. ಇಲ್ಲಿಯುವರೆಗೂ ಯಾವ ಖಾಸಗಿ ಸಂಸ್ಥೆಯುವರಿಗೂ ಕೂಡ ನನ್ನ ಮನೆ ಬಾಗಿಲು ತಿಳಿದಿಲ್ಲ. ರಾಯಚೂರಿನ ಬಗ್ಗೆ ಒಂದು ಪ್ರಕರಣ ಇದೆ. ಇದರ ಬಗ್ಗೆ ಅಬ್ಜೆಕ್ಟರ್ಸ್ ಅಬ್ಜೆಕ್ಷನ್ಸ್ ಹಾಕಿದ್ದಾರೆ. ಈ ಪ್ರಕರಣವನ್ನು ಆದಷ್ಟು ಜಾಗ್ರತೆಯಾಗಿ ಕಾನೂನು ರೀತ್ಯ ತೀರ್ಮಾನ ಮಾಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೂ ಅನೇಕ ಸದಸ್ಯರು ಎಲ್ಲಾ ಜಿಲ್ಲೆಗಳನ್ನೂ ನ್ಯಾಷನಲೈಸ್ ಮಾಡಿದರೆ ಹೆಚ್ಚು ಲಾಭ ಬರುತ್ತದೆ ಎಂದು ಹೇಳಿದರು ಹಾಗೆ ಎಲ್ಲಾ ಜಿಲ್ಲೆಗಳನ್ನೂ ನ್ಯಾಷನಲೈಸ್ ಮಾಡುವುದಕ್ಕೆ ಏತಕ್ಕೆ ಸಾಧ್ಯವಾಗಿಲ್ಲ ಎಂದು ಕೇಳಿದರು. ಇದರಿಂದ ಹೆಚ್ಚು ರೆವಿನ್ಯೂ ಬರುತ್ತದೆ, ಏತಕ್ಕೆ ಮಾಡಬಾರದು ಎಂದರು. ತಮಗೆ ಹೇಳಬೇಕಾದರೆ ಸರ್ಕಾರದ ನೀತಿಯೂ ಹಾಗೆಯೋ ಇದೆ. ಇಡೀ ಕರ್ನಾಟಕವನ್ನೇ ರಾಷ್ಟ್ರೀಕರಣ ಮಾಡಬೇಕು. ಆದರೆ ಎಲ್ಲಾ ಜಿಲ್ಲೆಗಳನ್ನೂ ಒಂದೇ ಸಾರಿ ರಾಷ್ಟ್ರೀಕರಣ ಮಾಡುವುದಕಾಗುವುದಿಲ್ಲ. ಏತಕ್ಕೆಂದರೆ ಈ ಸಂಸ್ಥೆಯ ಸಂಪನ್ಮೂಲಗಳನ್ನು ಅವಲಂಬಿಸಿ ನಾವು ರಾಷ್ಟ್ರೀಕರಣ ಮಾಡಬೇಕೇ ಒಂದೇ ಸಾರಿ ರಾಷ್ಟ್ರೀಕರಣ ಮಾಡುವುದಕ್ಕಾಗುವುದಿಲ್ಲ. ನಾನು ಈಗಾಗಲೇ ಹೇಳಿದ್ದೇನೆ. ೧೯೮೭-೮೮ ರಲ್ಲಿ ತುಮಕೂರು ಜಿಲ್ಲೆ, ಮಂಡ್ಯ ಜಿಲ್ಲೆ, ಮತ್ತು ಬೆಂಗಳೂರು ರೂರಲ್ ಜಿಲ್ಲೆಗಳನ್ನು ರಾಷ್ಟ್ರೀಕರಣ ಮಾಡಲಿಕ್ಕೆ ತೀವ್ರ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು.

೧೯೮೫-೮೬ನೇ ಸಾಲಿನಲ್ಲಿ ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಬಸ್ ರಾಷ್ಟ್ರೀಕರಣ ಮಾಡಿದ್ದೇವೆ. ಇಲ್ಲಿಯುವರೆಗೆ ನಾವು ಒಟ್ಟು ೮ ಜಿಲ್ಲೆಗಳಲ್ಲಿ ಶೇಕಡಾ ನೂರರಷ್ಟು ಬಸ್ ರಾಷ್ಟ್ರೀಕರಣ ಮಾಡಿದ್ದೇವೆ. ಈಗ ನಾವು ಎಲ್ಲೆಲ್ಲಿ ಶೇಕಡ ನೂರರಷ್ಟು ಬಸ್ ರಾಷ್ಟ್ರೀಕರಣ ಮಾಡಿದ್ದೇವೆ, ಆ ಭಾಗದಲ್ಲಿ ಬರುವಂಥ ಪ್ರತಿ ಹಳ್ಳಿಗೂ ಸಾರಿಗೆ ವ್ಯವಸ್ಥೆ ಕಲ್ಪಿಸಿ ಕೊಡಬೇಕೆಂಬುದೇ ನಮ್ಮ ಗುರಿಯಾಗಿದೆ. ಈ ಭಾಗಗಳಲ್ಲಿ ನಮಗೆ ಲಾಭವಾಗಲೀ ಅಥವಾ ನಷ್ಟವಾಗಲೀ ನಾವು ಪ್ರತಿ ಹಳ್ಳಿಗೂ ಸಾರಿಗೆ ಸೌಲಭ್ಯ ಒದಗಿಸುತ್ತೇವೆ. ಸಾರಿಗೆಸೌಲಭ್ಯವನ್ನು ರಸ್ತೆ ಸಂಪರ್ಕವಿರುವ ಕಡೆಗಳಲ್ಲಿ ಈಗ ಕಲ್ಪಿಸಿದ್ದೇವೆ. ಈ ೮ ಜಿಲ್ಲೆಗಳಲ್ಲಿ ಬರುವಂತಹ ಸುಮಾರು ಹತ್ತು ಸಾವಿರ ಹಳ್ಳಿಗಳ ಪೈಕಿ ೮೫೦೦ ಹಳ್ಳಿಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸಿದ್ದೇವೆ. ರಸ್ತೆ ಸಂಪರ್ಕವಿಲ್ಲದ ಸುಮಾರು ಒಂದು ಸಾವಿರ ಹಳ್ಳಿಗಳಿಗೆ ಇನ್ನೂ ಸಾರಿಗೆ ಸೌಲಭ್ಯ ಒದಗಿಸಿಲ್ಲ. ರಾಷ್ಟ್ರೀಕರಣವಾಗದ ಜಿಲ್ಲೆಗಳಿಂದಲೂ ಸಹ ಬಸ್ ಸೌಲಭ್ಯ ಬೇಕು ಎಂದು ನಮಗೆ ಮನವಿಗಳು ಬರುತ್ತಿವೆ. ಆದರೆ ಈ ಭಾಗಗಳಲ್ಲಿ ಖಾಸಗಿಯುವರು ಬಸ್ ಓಡಿಸಲು ಪರ್ಮಿಟ್ ತೆಗೆದುಕೊಂಡಿರುವುದರಿಂದ ನಾವು ನಮ್ಮ ಬಸ್‌ಗಳನ್ನು ಅಲ್ಲಿ ಓಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಮಾನ್ಯ ಸದಸ್ಯರು ಖಾಸಗಿ ಸಂಸ್ಥೆಯುವರು ಲಾಭ ಮಾಡುವಾಗ ನೀವು ಏತಕ್ಕೆ ನಷ್ಟದಲ್ಲಿದ್ದೀರಿ ಎಂದು ಕೇಳಿದರು. ಇದಕ್ಕೆ ನಾನು ಒಂದು ಮಾತು ಹೇಳುತ್ತೇನೆ, ಏನೆಂದರೆ, ಖಾಸಗಿ ಸಂಸ್ಥೆಯುವರ

ಉದ್ದೇಶವೇ ಲಾಭ ಮಾಡಬೇಕು ಎಂದು ಇರುತ್ತದೆ. ಜನರಿಗೆ ಒಳ್ಳೆಯ ಸಾರಿಗೆ ಸೌಲಭ್ಯ ಒದಗಿಸಬೇಕೆಂಬ ಉದ್ದೇಶ ಇವರಿಗೆ ಇರುವುದಿಲ್ಲ. ಲಾಭ ಮಾಡಬೇಕೆಂಬುದೇ ಇವರ ಉದ್ದೇಶವಾಗಿದೆ. ಆದ್ದರಿಂದ ಇವರು ಆದಷ್ಟೂ ಲಾಭದಾಯಕವಾದಂಥ ರೂಟ್‌ಗಳಲ್ಲಿಯೇ ತಮ್ಮ ಬಸ್‌ಗಳನ್ನು ಓಡಿಸುತ್ತಾರೆ. ಇದರ ಬಗ್ಗೆ ಇನ್ನೂ ಒಂದು ಮಾತನ್ನು ಹೇಳುತ್ತೇನೆ. ಏನೆಂದರೆ, ಖಾಸಗಿಯವರಾದರೆ ಒಂದು ಬಸ್‌ಗೆ ಎರಡು ಅಥವಾ ಎರಡೂವರೆ ಜನರನ್ನು ಇಟ್ಟುಕೊಂಡು ಕಾರ್ಯಾಚರಣೆ ಮಾಡುತ್ತಾರೆ. ಅದೇ ನಮ್ಮ ಸಾರಿಗೆ ಸಂಸ್ಥೆಯಲ್ಲಿ ಒಂದು ಬಸ್‌ಗೆ ೭ ಅಥವಾ ಏಳೂವರೆ ಜನರು ಇರುತ್ತಾರೆ. ಅಂದರೆ ನಾವು ಹೆಚ್ಚು ಜನರಿಗೆ ಕೆಲಸ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಮತ್ತೆ ಮಾನ್ಯ ಕೃಷ್ಣನ್ ಅವರು ಒಂದು ಮಾತನ್ನು ಹೇಳಿದರು, ಏನೆಂದರೆ, ನಮ್ಮ ಸಾರಿಗೆ ಸಂಸ್ಥೆಗೆ ಒಳ್ಳೆಯ ಹೆಸರು ಬರಬೇಕಾದರೆ ಮತ್ತು ಅಲ್ಲಿನ ಸಿಬ್ಬಂದಿ ವರ್ಗ ದಕ್ಷತೆಯಿಂದ ಕೆಲಸ ಮಾಡಬೇಕಾದರೆ ಅಲ್ಲಿನ ನೌಕರರ ಬಗ್ಗೆ ನೀವು ಸಾಕಷ್ಟು ಕಾಳಜಿ ವಹಿಸಬೇಕು ಎಂದು ಹೇಳಿದರು. ಇದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಅವರು ಹೇಳಿದ ಮಾತು ಶೇಕಡ ನೂರರಷ್ಟು ಸತ್ಯವಾಗಿದೆ. ಈ ಸಂಸ್ಥೆಯ ಜೀವಾಳವೆಂದರೆ, ಕಂಡಕ್ಟರ್, ಡ್ರೈವರ್, ಮೆಕ್ಯಾನಿಕ್, ಹೆಲ್ಪರ್ ಮತ್ತು ಅಲ್ಲಿ ಕೆಲಸ ಮಾಡುತ್ತಿರುವ ೫೦೦ ಅಥವಾ ೬೦೦ ಜನ ಅಧಿಕಾರಿಗಳು ಏನಿದ್ದಾರೆ, ಅವರೂ ಸಹ ಈ ಸಂಸ್ಥೆಯ ಜೀವಾಳ ಎಂದು ಹೇಳಬಹುದು. ನಾನು ಸಾರಿಗೆ ಸಚಿವನಾದಮೇಲೆ ಈ ನೌಕರರಿಂದ ನನಗೆ ಒಂದೇ ಒಂದು ಬೇಡಿಕೆ ಬಂತು, ಅದೇನೆಂದರೆ, ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ನಾವು ಹಗಲು ರಾತ್ರಿ ಎನ್ನದೆ ದುಡಿಯುತ್ತೇವೆ, ಚಳಿ ಗಾಳಿ ಮಳೆ ಎನ್ನದೆ ದುಡಿಯುತ್ತೇವೆ, ನಮಗೆ ಎಷ್ಟು ಸಂಬಳ ಕೊಟ್ಟರೂ ಸಹ ಅದೆಲ್ಲಾ ಖರ್ಚಾಗಿ ಬಿಡುತ್ತದೆ, ನಾವು ಏನಾದರೂ ಮನೆಯನ್ನು ಬಾಡಿಗೆಗೆ ಕೇಳಲು ಹೋದರೆ ಯಾರೂ ಕೊಡುವುದಿಲ್ಲ, ಏಕೆಂದರೆ, ಡ್ರೈವರ್ಸ್ ಮತ್ತು ಕಂಡಕ್ಟರ್ಸ್ ಒಂದು ದಿನ ಈ ಊರಿನಲ್ಲಿದ್ದರೆ ಮತ್ತೊಂದು ದಿನ ಇನ್ನೊಂದು ಊರಿನಲ್ಲಿರುವ ಕಾರಣ ಬಾಡಿಗೆ ಸರಿಯಾಗಿ ಕೊಡುತ್ತಾರೋ ಅಥವಾ ಇಲ್ಲವೋ ಎಂಬ ಅನುಮಾನದಿಂದ ಯಾರೂ ಬಾಡಿಗೆಗೆ ಮನೆ ಕೊಡುವುದಿಲ್ಲ, ಈ ಕಾರಣದಿಂದ ನಮಗೆ ಸ್ವಂತ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಿ ಎಂದು ನೌಕರರು ನನ್ನ ಬಳಿ ಬಂದು ಕೇಳಿಕೊಂಡರು. ಆದ ಕಾರಣ ಈಗ ನಾವು ನಮ್ಮ ರಾಜ್ಯದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಒಂದು ಹೊಸ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಇಂತಹ ಯೋಜನೆಯನ್ನು ಈಗ ನಮ್ಮ ಭಾರತ ದೇಶದ ಬೇರೆ ಯಾವ ರಾಜ್ಯದಲ್ಲಿಯೂ ಜಾರಿಗೆ ತಂದಿಲ್ಲ. ಇಲ್ಲಿನ ನೌಕರರು ಸ್ವಂತ ಮನೆ ಕಟ್ಟಿಕೊಳ್ಳಲು ಅನುಕೂಲವಾಗುವಂತೆ ನಾವು ೧೬೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ, ಈಗಾಗಲೇ ತಮ್ಮ ಜಿಲ್ಲೆಯಲ್ಲಿ, ಬಿಜಾಪುರ, ಕೋಲಾರ, ಶಿವಮೊಗ್ಗ, ಹಾಸನ ಜಿಲ್ಲೆಗಳಲ್ಲಿ ಈ ಯೋಜನೆಯ ಕೆಲಸ ಪ್ರಾರಂಭವಾಗಿದೆ. ಈಗ ಎಲ್ಲೆಲ್ಲಿ ನಮ್ಮ ಬಸ್ ಡಿಪೋಗಳು ಇವೆ, ಎಲ್ಲೆಲ್ಲಿ ನಮ್ಮ ಸಾರಿಗೆ ಸಂಸ್ಥೆ ಕಛೇರಿಗಳು ಇವೆ. ಅಂತಹ ಕಡೆಗಳಲ್ಲಿ ಸಿಗುವಂತಹ ಸರ್ಕಾರದ ಜಮೀನನ್ನು ಸ್ವಾಧೀನಪಡಿಸಿಕೊಂಡು, ಅಲ್ಲಿ ಕೆ.ಎಸ್ ಆರ್.ಟಿ ಸಿ. ಕಾಂಪ್ಲೆಕ್ಸ್ ಎಂದು ಮಾಡಿ ಅಲ್ಲಿ ಈಗ ನಮ್ಮ ಸಾರಿಗೆ ಸಂಸ್ಥೆಯಲ್ಲಿ ೪೫ ಸಾವಿರ ನೌಕರರು ಏನಿದ್ದಾರೆ, ಇವರೆಲ್ಲರೂ ಸಹ ಸ್ವಂತ ಮನೆ ಕಟ್ಟಿಸಿಕೊಳ್ಳಲು ಸಾಲ ಕೊಡುವಂತಹ ವ್ಯವಸ್ಥೆ ಮಾಡಿದ್ದೇವೆ. ಇದರ ಜೊತೆಗೆ ಈ ನೌಕರರ ಮಕ್ಕಳಿಗೆ ವಿದ್ಯಾಭ್ಯಾಸ ಮತ್ತು ಆರೋಗ್ಯದ ಸೌಲಭ್ಯ ಒದಗಿಸಲು ಸಹ ನಾವು ಸಹಾಯ ಮಾಡುತ್ತಿದ್ದೇವೆ. ಈ ನಮ್ಮ ಸಾರಿಗೆ ಸಂಸ್ಥೆಯ ಮೂಲಕ ಸುಮಾರು ೪೦ ಸಾವಿರ ಕುಟುಂಬಗಳಿಗೆ ಅನುಕೂಲವಾಗಿದೆ. ಇಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಲುವಾಗಿ ಈ ಸಂಸ್ಥೆ ಇದೆ ಎಂಬ ಭಾವನೆ ಆ ನೌಕರರಲ್ಲಿ ಮೊದಲು ಬರಬೇಕು. ಇದರ ಜೊತೆಗೆ ಈ ಸಂಸ್ಥೆಯ ಬೆಳವಣಿಗೆಗೆ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು ಎಂಬ ಭಾವನೆ ಈ ನೌಕರರಿಗೆ ಬರಬೇಕು. ನಮ್ಮ ಕಂಡಕ್ಟರ್ಸ್ ಏನಿದ್ದಾರೆ ಅವರೆಲ್ಲರೂ ಪ್ರತಿದಿವಸ ೫೦ ರೂಪಾಯಿ ಸಂಸ್ಥೆಗೆ ಹೆಚ್ಚು ದೊರಕಿಸಿದರೆ ಒಂದು ದಿವಸಕ್ಕೆ ೭೫ಲಕ್ಷ ಜಾಸ್ತಿಯಾಯಿತು, ತಿಂಗಳಿಗೆ ೨ ಕೋಟಿ ಜಾಸ್ತಿಯಾಯಿತು. ವರ್ಷಕ್ಕೆ ೨೪ ಕೋಟಿ ಜಾಸ್ತಿಯಾಯಿತು. ಆದರೆ ಅದೇ ಕಂಡಕ್ಟರ್ ಪ್ರತಿದಿವಸ ೫೦ ರೂಪಾಯಿ ಜೇಬಿಗೆ ಇಲ್ಲದೆ ಮನೆಗೆ ಹೋಗುವುದಿಲ್ಲ ಎಂದರೆ ಒಂದು ದಿವಸಕ್ಕೆ ೭೫ ಲಕ್ಷ ಲಾಸ್ ಆಗುತ್ತದೆ, ತಿಂಗಳಿಗೆ ೨ ಕೋಟಿ ಲಾಸ್ ಆಗುತ್ತದೆ, ವರ್ಷಕ್ಕೆ ೨೪ ಕೋಟಿ ಲಾಸ್ ಆಗುತ್ತದೆ. ಆದುದರಿಂದ ನಮ್ಮ ನೌಕರರು ಇದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಲಾಭ ಬಂದರೆ ಸರ್ಕಾರಕ್ಕೆ ಒಂದು ಪೈಸೆ ಬಿಡಲಿಕ್ಕೆ ಸಾಧ್ಯವಿಲ್ಲ, ಲಾಭ ಬಂದರೆ ಎಲ್ಲಾ ನೌಕರರಿಗೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ ಎನ್ನುವುದನ್ನು ಅರ್ಥಮಾಡಿಕೊಂಡು ಸಾರ್ವಜನಿಕರಿಗೆ ಸೇವೆ

ಮಾಡುವ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಇನ್ನು ಚುನಾವಣೆ ಬಗ್ಗೆ ಮಾನ್ಯ ಕೃಷ್ಣನ್‌ರವರು ಎತ್ತಿದರು. ನಾನು ಈಗಾಗಲೇ ಆ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಏಪ್ರಿಲ್ ತಿಂಗಳಲ್ಲಿ ಚುನಾವಣೆ ಮಾಡುತ್ತೇವೆಂದು ಹೇಳಿದ್ದೇನೆ. ಒಂದುವೇಳೆ ಏಪ್ರಿಲ್ ತಿಂಗಳಲ್ಲಿ ಆಗದೇ ಇದ್ದರೆ ಖಂಡಿತವಾಗಿ ಮೇ ತಿಂಗಳ ಕೊನೆಯಲ್ಲಿ ಚುನಾವಣೆಯನ್ನು ಮಾಡಿಯೇ ಮುಗಿಸುತ್ತೇವೆ, ಇದು ಕಮಿಟ್‌ಮೆಂಟ್. ಎಲೆಕ್ಷನ್ ಮಾಡಿಯೇ ತೀರುತ್ತೇವೆ. ಮತ್ತೆ ಲಾಸ್ ಬಗ್ಗೆ ಅನೇಕ ಸದಸ್ಯರು ಹೇಳಿದ್ದಾರೆ. ಏತಕ್ಕೋಸ್ಕರ ಲಾಸ್ ಆಗುತ್ತದೆ ಎಂದು ಕೇಳಿದ್ದಾರೆ. ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ. ಲಾಸನ್ನು ಜಾಸ್ತಿ ಮಾಡತಕ್ಕಂಥಾದ್ದು ಸಂಸ್ಥೆಯ ಉದ್ದೇಶವಲ್ಲ. ಲಾಸ್ ಕಡಿಮೆ ಮಾಡತಕ್ಕಂಥಾದ್ದು ಸಂಸ್ಥೆಯ ಉದ್ದೇಶ. ೧೯೮೩-೮೪ರಲ್ಲಿ ೨೫ ಕೋಟಿ ಲಾಸ್ ಆಗಿದೆ, ೧೯೮೫-೮೬ರಲ್ಲಿ ೧೧ ಕೋಟಿ ಲಾಸಾಗಿದೆ. ೧೯೮೬-೮೭ರಲ್ಲಿ ಲಾಸನ್ನು ಏನಾದರೂ ಕಡಿಮೆಮಾಡಿ ಬಹುಶಃ ಒಂದೆರಡು ಕೋಟಿ ಲಾಭ ಮಾಡಬೇಕು ಎನ್ನತಕ್ಕಂಥ ಉದ್ದೇಶ ಸಂಸ್ಥೆಗೆ ಇತ್ತು. ಅದಕ್ಕಾಗಿ ಹಲವಾರು ಕ್ರಮಗಳನ್ನೂ ಕೂಡ ನಾವು ತೆಗೆದುಕೊಂಡೆವು. ಡ್ರೈವರ್ಸ್‌ಗೆ ಟ್ರೈನಿಂಗ್ ಕೊಟ್ಟು ಯಾವರೀತಿ ಡೀಸಲ್ ಬಳಸಬೇಕು ಎಂದು ಹೇಳಿದ್ದೇವೆ ಈ ಹಿಂದೆ ಒಂದು ಲೀಟರ್ ಡೀಸಲ್ ೪.೧೯ ಕಿ.ಮೀ. ಬಳಕೆ ಬರುತ್ತಿತ್ತು. ಅದನ್ನು ಈಗ ೪.೫೨ ಯಿಂದ ೫ ಕಿ.ಮೀ.ವರಗೆ ಬಳಕೆ ಬರುವಂತೆ ಮಾಡಿದ್ದೇವೆ. ಮತ್ತೆ ಟೈರ್ ಬಗ್ಗೆ ಹೇಳುವುದಾದರೆ ಹಿಂದೆ ಒಂದು ಟೈರ್ ೬೭ ಸಾವಿರ ಕಿಲೋಮೀಟರ್ ಉಪಯೋಗ ಬರುತ್ತಿತ್ತು, ಈಗ ೮೬ ಸಾವಿರ ಕಿಲೋಮೀಟರ್ ಉಪಯೋಗ ಬರುವ ರೀತಿಯಲ್ಲಿ ಮಾಡಿದ್ದೇವೆ. ಮತ್ತೆ ಆಕ್ಸಿಡೆಂಟ್ ಬಗ್ಗೆ ಹೇಳುವುದಾದರೆ, ಒಂದು ಬಸ್ ಆಕ್ಸಿಡೆಂಟ್ ಆಯಿತು ಅಂದರೆ ಡ್ಯಾಮೇಜಾಗಿರುವ ಆ ಬಸ್ಸನ್ನು ಸರಿ ಮಾಡಬೇಕು, ಸತ್ತವರಿಗೆ ಕಾಂಪನ್ಸೇಷನ್ ಕೊಡಬೇಕು. ನಾಲ್ಕೈದು ದಿವಸ ಅರ್ನಿಂಗ್ಸ್ ಕಡಿಮೆಯಾಗುತ್ತದೆ. ಇದನ್ನೆಲ್ಲಾ ಕಡಿಮೆ ಮಾಡುವ ದೃಷ್ಟಿಯಿಂದ ಡ್ರೈವರ್ಸ್‌ಗೆ ಟ್ರೈನಿಂಗ್ ಕೊಡತಕ್ಕಂಥಾದ್ದು ಇದೆ. ಮೊದಲು ಒಂದು ಲಕ್ಷ ಕಿಲೋಮೀಟರ್‌ಗೆ ಒಂದು ಆಕ್ಸಿಡೆಂಟ್ ಆಗುತ್ತಿತ್ತು. ಈಗ ೪ ಲಕ್ಷ ಕಿಲೋಮೀಟರ್‌ಗೆ ಒಂದು ಆಕ್ಸಿಡೆಂಟ್ ಆಗುತ್ತದೆ. ಮತ್ತೆ ರೈಟಾಫ್ ಬ್ರೇಕ್‌ಡೌನ್ ಕೂಡ ಕಡಿಮೆ ಮಾಡಿದ್ದೇವೆ. ಈ ರೀತಿ ವೆಚ್ಚವನ್ನು ಕಡಿಮೆಮಾಡಿಕೊಂಡು ಲಾಭದಲ್ಲಿ ಸಾರಿಗೆ ಸಂಸ್ಥೆಯನ್ನು ನಡೆಸಬೇಕು ಎನ್ನತಕ್ಕಂಥ ಉದ್ದೇಶ ಇದೆ ಈಗ ನಾವು ಏನಾದರೂ ಮಾಡಿ ಒಂದು ಕೋಟಿ, ಎರಡು ಕೋಟಿ ಲಾಭ ಮಾಡಬೇಕು ಎಂಬ ಉದ್ದೇಶದಿಂದ ಹೊರಟೆವು, ಹೇಳಿಕೆ ಕೂಡ ಕೊಟ್ಟೆವು. ಆದರೆ ನಮ್ಮ ದುರಾದೃಷ್ಟ, ಎಸ್ಟಿಮೇಟೆಡ್ ಲಾಸ್ ೧೯೮೬-೮೭ರಲ್ಲಿ ೫ ಕೋಟಿ, ಈ೫ ಕೋಟಿ ಲಾಸ್ ಆಗುತ್ತಾ ಇರಲಿಲ್ಲ. ಈ ೫ ಕೋಟಿ ಹೇಗೆ ಲಾಸ್ ಆಗುತ್ತದೆ. ಎನ್ನುವುದನ್ನು ಹೇಳುತ್ತೇನೆ. ೧೯೮೫-೮೬ರಲ್ಲಿ ಪ್ರತಿದಿವಸ ರೆವಿನ್ಯೂ ಅರ್ನಿಂಗ್ಸ್ ೬೬ ಲಕ್ಷ ಇತ್ತು, ಈಗ ೧೯೮೬-೮೭ರಲ್ಲಿ ೮೦ ಲಕ್ಷಕ್ಕೆ ಮುಟ್ಟಿದೆ. ವೆಂಕಟಸ್ವಾಮಿ ಆಯೋಗದ ವರದಿಯಿಂದ ಆದಂಥ ಗಲಾಟೆಯಿಂದ ಮತ್ತು ಬೆಳಗಾಂ ಆಜಿಟೇಷನ್ ಹಾಗೂ ಡೆಕ್ಕನ್ ಹೆರಾಲ್ಡ್ ಗಲಭೆಯಿಂದ ಈ ಸಂಸ್ಥೆಗೆ ಕನಿಷ್ಟಪಕ್ಷ ಐದು, ಐದೂವರೆ ಕೋಟಿ ರೂಪಾಯಿ ಲಾಸ್ ಆಗಿದೆ ಅದು ಇಲ್ಲದೇ ಹೋಗಿದ್ದರೆ ನಾವು ತೋರಿಸಿದಂಥ ೫ ಕೋಟಿ ಲಾಸ್ ಬರುತ್ತಾ ಇರಲಿಲ್ಲ. ಒಂದು ಕೋಟಿ ಲಾಭ ಮಾಡುವುದಕ್ಕೆ ಪ್ರಯತ್ನಪಟ್ಟೆವು ಈ ರೀತಿ ನಾವು ಈ ಸಂಸ್ಥೆಯ ಇಮೇಜ್ ಮತ್ತು, ದಕ್ಷತೆಯನ್ನು ಹೆಚ್ಚಿಸಲಿಕ್ಕೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಶ್ರೀಮತಿ ಲೀಲಾದೇವಿ ಪ್ರಸಾದ್ ಅವರು ರೇಟನ್ನು ೨೦-೩೦ ಪರ್ಸೆಂಟ್ ಏರಿಸಿದಿರಿ, ಏತಕ್ಕೋಸ್ಕರ, ನಿಮಗೆ ಲಾಭ ಬರಲಿ ಎನ್ನತಕ್ಕಂಥ ಉದ್ದೇಶದಿಂದ ಏರಿಸಿದ್ದೀರಾ ಎಂದು ಹೇಳಿದರು ಮತ್ತು ಇನ್ನೂ ಅನೇಕ ಸದಸ್ಯರು ಈ ಪ್ರಶ್ನೆಯನ್ನು ಎತ್ತಿದ್ದಾರೆ

ಮಾನ್ಯ ಅಧ್ಯಕ್ಷರೇ ನಾನು ಒಂದು ಮಾತನ್ನು ಹೇಳುತ್ತೇನೆ, ಯಾವಾಗ ರೇಟ್ ಹೆಚ್ಚಾಗುತ್ತದೆ ಆಗ, ರೇಟ್ ಹೆಚ್ಚಾದ ತಕ್ಷಣ ಅಷ್ಟೇ ಲಾಭ ಬರಲಿಕ್ಕೆ ಸಾಧ್ಯ ಇಲ್ಲ. ಇದಕ್ಕೆ ಕಾರಣ ಮನುಷ್ಯನ ಗುಣ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾವು ಪ್ರಯಾಣ ಮಾಡುವಾಗ ಯಾವ ಬಸ್‌ನಲ್ಲಿ ಎಂಟಾಣೆ ಕಡಿಮೆಗೆ ಕರೆದುಕೊಂಡು ಹೋಗುತ್ತಾರೆ, ಜನರು ಆ ಬಸ್‌ಗೆ ಹತ್ತುತ್ತಾರೆ, ಅದರಲ್ಲಿ ಎಷ್ಟೇ ರಶ್ ಇರಲಿ, ೬೦ ಜನ ಇರಲಿ, ೭೦ ಜನ ಇರಲಿ, ೮೦ ಜನ ಇರಲಿ ಅದೇ ಬಸ್‌ಗೆ ನಾವು ನುಗ್ಗುತ್ತೇವೆ. ಎಲ್ಲಿ ರೇಟ್ ಜಾಸ್ತಿ ಇದೆ ಅಲ್ಲಿಗೆ ಹೋಗುವುದಿಲ್ಲ, ಇದರಿಂದ ನಮ್ಮ ಬಸ್‌ಗಳು ಖಾಲಿ ಹೋಗುತ್ತವೆ. ಪ್ರೈವೇಟ್ ಬಸ್ ಟಾಪ್ ಮೇಲೆಲ್ಲಾ ಕುಳಿತುಕೊಂಡು ಹೋಗುತ್ತಾರೆ. ಇದು ರೂಢಿಯಾಗಿರುವವರೆಗೆ ೧೦ ಪೈಸೆ ರೇಟ್ ಜಾಸ್ತಿ ಮಾಡಿದರೆ ಲಾಭ ಬರುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದರು, ಅದೇನೆಂದರೆ, ಅನೇಕ ನಿಮ್ಮ ಅಧಿಕಾರಿಗಳಿಗೆ ಮನೆಯಿಂದ ಆಫೀಸ್‌ಗೆ ಬರಲಿಕ್ಕೆ

ಕಾರ್‌ಗಳೂ ಇವೆ, ಫೋನ್‌ಗಳಿವೆ, ಒಬ್ಬೊಬ್ಬರಿಗೆ ಆಫೀಸ್‌ನಲ್ಲಿ ೨-೩ ಫೋನ್‌ಗಳು ಇವೆ ಎಂದು ಹೇಳಿದರು, ಇದು ಸರಿಯಲ್ಲ ಎಂಬ ಮಾತನ್ನು ನಾನು ಹೇಳುತ್ತೇನೆ. ಯಾರು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಇದ್ದಾರೆ ಅವರಿಗೆ ಮಾತ್ರ ಒಂದು ಕಾರು ಮತ್ತು ಫೋನ್ ಸೌಲಭ್ಯ ಒದಗಿಸಿ ಕೊಟ್ಟಿದ್ದೇವೆ. ಏತಕ್ಕೆ ಇದನ್ನು ಒದಗಿಸಿಕೊಟ್ಟಿದ್ದೇವೆ ಎಂದರೆ, ನಮ್ಮಲ್ಲಿ ಹದಿಮೂರು ಡಿವಿಜನ್ ಗಳಿವೆ, ಅಲ್ಲಿಗೆ ಏನಾದರೂ ವಿಷಯ ತಿಳಿಸಬೇಕಾದರೆ, ಅಥವಾ ಇವರು ಅಲ್ಲಿಗೆ ಹೋಗಬೇಕಾದರೆ ಅನುಕೂಲ ಆಗಲಿ ಎಂದು ಒದಗಿಸಿಕೊಟ್ಟಿದ್ದೇವೆ, ಇವರ ಕಾರ್ಯಾಚರಣೆ ಇಡೀ ೭೫ ರಿಂದ ೭೭ ಡಿಪೋ ಇರಬೇಕಾದರೆ, ಅಲ್ಲೆಲ್ಲಾ ಯಾವ ಸಂದರ್ಭದಲ್ಲಿ ಯಾವ ವಿಷಯ ಬರುತ್ತದೆ ಎಂಬುದನ್ನು ತಿಳಿದುಕೊಂಡು ತಕ್ಷಣ ಹೋಗಬೇಕಾಗುತ್ತದೆ, ತಕ್ಷಣ ಕೆಲಸ ಮಾಡಬೇಕಾಗುತ್ತದೆ, ಅಂತಹ ಪರಿಸ್ಥಿತಿ ಉಂಟಾದಾಗ ಈ ಸೌಲಭ್ಯ ಬೇಕೆಂದು ಹೇಳಿ ಕೊಟ್ಟಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಹೇಳಿದ್ದಕ್ಕೆ ಕಾರಣ ಬರೆದು ಕೊಡುತ್ತೇನೆ, ತಾವು ಉತ್ತರ ಹೇಳುವ ಟೈಮ್‌ನಲ್ಲಿ ಈ ರೀತಿ ಹೇಳಿದರೆ ಹೇಗೆ ?

ಶ್ರೀ ವೀರಣ್ಣ.—ನನ್ನ ಉತ್ತರ ಆದು, ಏನು ಕ್ಲಾರಿಫಿಕೇಷನ್ ಬೇಕಾದರೂ ಕೇಳಿ, ಅದಕ್ಕೆ ಉತ್ತರ ಕೊಡುತ್ತೇನೆ. ಆಮೇಲೆ ದಕ್ಷತೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಅನೇಕ ಪೇಪರ್ ಗಳಲ್ಲಿ ಓದುಗರು ಬರೆಯುತ್ತಾರೆ. ಅದನ್ನು ಈ ಸಂದರ್ಭದಲ್ಲಿ ಓದಿದರೆ ಬಹಳ ಒಳ್ಳೆಯದು ಎಂಬ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು.—ದಕ್ಷ ಅಧಿಕಾರಿಗಳ ಮೇಲೆ ಆಸಿಡ್ ಹಾಕುತ್ತಾರೆ ಅದನ್ನು ಹೇಳಿ.

ಶ್ರೀ ವೀರಣ್ಣ.—ಈ ಸಂಸ್ಥೆ ಹೇಗೆ ಎಂದು ಹೇಳಿದರೆ, ಎರಡೂ ಕೈ ಸೇರಿದರೆ ಚಪ್ಪಾಳೆ. ಕೇವಲ ನೌಕರರಿಂದ ಮಾತ್ರ ದಕ್ಷತೆಯನ್ನು ಎಕ್ಸ್‌ಪೆಕ್ಟ್ ಮಾಡಬಾರದು. ಇಡೀ ಸಂಸ್ಥೆಯಲ್ಲಿ ಇರತಕ್ಕ ಎಲ್ಲರಿಂದ ದಕ್ಷತೆಯನ್ನು ನಿರೀಕ್ಷಣೆ ಮಾಡಬೇಕು, ಅದೇ ರೀತಿ ಸಾರ್ವಜನಿಕರು ಸಹಕಾರ ಕೊಡಬೇಕು ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸಾರ್ವಜನಿಕರಿಂದ ಬಂದ ಪತ್ರವನ್ನು ಓದುತ್ತೇನೆ.

"The public image of service in Govt, Offices is often disterted. I had pleasant experiences in connection with routeline transactions/complaints in the Regional Transport Office (Rajajinagar Zone), Karnataka Electricity Board (Vijayanagar) and Life Insurance Corporation (near Town Hall) on several occassions. The response from the staff in these offices was courteous, prompt and efficient. The motto seems to be 'Walk in with your problem and walk out with satisfaction.' Yet another duty conscious official I often met belongs to the Bangalore Transport Service Traffic Inspector at Vijayanagar. The remarkable precision with which he conducts the movement of buses and commuters is indeed commendable. I am sure there are many more honest and efficient persons in different walks of Life.

—T. S. SRIDHAR.

ಇದು ಡೆಕನ್ ಹೆರಾಲ್ಡ್‌ನಲ್ಲಿ ಬಂದಿರತಕ್ಕದ್ದು. ಮಾನ್ಯ ಅಧ್ಯಕ್ಷರೇ, ಐದು ಬೆರಳೂ ಒಂದೇ ಸಮವಾಗಿದೆ ಎಂದು ನಾನು ಒಪ್ಪಿಕೊಳ್ಳುವುದಿಲ್ಲ, ಎಲ್ಲಾ ಆಫಿಸರ್‌ಗಳೂ ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ನಾನು ಒಪ್ಪಿಕೊಳ್ಳುವುದಿಲ್ಲ. ಕೆಲವರು ಒಳ್ಳೆಯ ಅಧಿಕಾರಿಗಳೂ ಇದ್ದಾರೆ, ಸರಿಯಾಗಿ ಕೆಲಸ ಮಾಡದಿರತಕ್ಕಂಥ ಅಧಿಕಾರಿಗಳೂ ಇದ್ದಾರೆ. ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ, ಸಂಸ್ಥೆ ಮತ್ತು ಸರಕಾರ ಪ್ರಯತ್ನ ಪಡುತ್ತದೆ ಎಂಬ ಮಾತನ್ನು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಸಬ್ ಸ್ಟೇಜ್ ಬಗ್ಗೆ ಹೇಳಲಿಲ್ಲ. ಅದು ಹಳ್ಳಿಯ ಜನರಿಗೆ ಉಪಯೋಗವಾಗುತ್ತದೆ.

ಇನ್ನು ಸ್ಪ್ಲಿಟಿಂಗ್ ಆಫ್ ಕೆಎಸ್‌ಆರ್‌ಟಿಸಿ ಬಗ್ಗೆ ಹಲವಾರು ಮಾನ್ಯ ಸದಸ್ಯರು ಹೇಳಿದ್ದಾರೆ. ಬಿ.ಟಿ.ಎಸ್. ಸಪರೇಟ್ ಮಾಡಬೇಕೆಂಬ ಬಗ್ಗೆಯೂ ಹೇಳಿದ್ದಾರೆ. ಇವೊತ್ತು ಕೆಎಸ್‌ಆರ್‌ಟಿಸಿ ಮೂರು ನಾಲ್ಕು ರೀಜನ್ ಮಾಡಬೇಕೆಂದು ಹೇಳಿದ್ದರೂ ಸಹ, ಅದರ ಬಗ್ಗೆ ಪರಿಶೀಲನೆಯಲ್ಲಿದೆ. ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ಅದು ಸಾಧ್ಯವಾಗತಕ್ಕ, ಮಾಡತಕ್ಕ ಕಾರ್ಯ ಅಲ್ಲ. ಏಕೆಂದರೆ, ಮೊದಲು ನಮ್ಮ ದೃಷ್ಟಿಯಲ್ಲಿರತಕ್ಕದ್ದು ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಡಿಪೋ ಕೊಡತಕ್ಕದ್ದು ಆಗಬೇಕು, ಅಲ್ಲಿಗೆ ಮೊದಲು ಡಿಪೋಗಳನ್ನು ಕೊಟ್ಟು, ಅಲ್ಲಿಯ ಕಾರ್ಯಾಚರಣೆ, ದಕ್ಷತೆಯನ್ನು ಹೆಚ್ಚಿಸಿ, ಅನಂತರ ಡಿವಿಜನ್ ಮಟ್ಟದಲ್ಲಿ ದಕ್ಷತೆಯನ್ನು ಹೆಚ್ಚಿಸಿ, ಅನಂತರ ಸರಿ ಹೋಗದೇ ಇದ್ದರೆ ಈ ರೀತಿ ಮಾಡತಕ್ಕ ಕಾರ್ಯಕ್ರಮ ಇದೆಯೋ ಹೊರತು ಬೇರೆ ಅಲ್ಲ, ಆದ್ದರಿಂದ ಅದರ ಬಗ್ಗೆ ಸರ್ಕಾರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇನೆ ಬಿ.ಟಿ.ಎಸ್. ಬಸ್‌ಗಳ ಬಗ್ಗೆಯೂ ಸಹ ಅಷ್ಟೆ. ಇವೊತ್ತು ತಮಗೆಲ್ಲಾ ಗೊತ್ತಿರುವ ಹಾಗೆ ಇದರಲ್ಲಿ ಲಾಭದಾಯಕ ಮಾಡುವಂಥಾದ್ದು ಬಹಳ ಕಷ್ಟ ಇದೆ. ಕಾರಣ ಏನೆಂದರೆ, ಸಾರ್ವಜನಿಕರಿಗೆ ಸಾರಿಗೆ ವ್ಯವಸ್ಥೆ ಮಾಡತಕ್ಕ ದೃಷ್ಟಿಯಿಂದ ಲಾಭ ಮಾಡಲಿಕ್ಕೆ ಕಷ್ಟವಾಗುತ್ತದೆ. ಸೆಪರೇಟ್ ಕಾರ್ಪೊರೇಷನ್ ಮಾಡಿದರೆ ಬಹುಶಃ ಲಾಸ್ ಆಗತಕ್ಕದ್ದೆಲ್ಲಾ ಸರ್ಕಾರದ ತಲೆಯ ಮೇಲೆ ಬರುತ್ತದೆ. ಆದ್ದರಿಂದ, ಅದರ ಬಗ್ಗೆ ಯೋಚನೆ ಮಾಡಿಲ್ಲ. ಇನ್ನು ಸ್ಟೇಜ್ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಅನೇಕ ದೂರುಗಳು ಸಹ ಬಂದಿವೆ. ಇದು ಯಾವ ರೀತಿ ಆಗುತ್ತದೆ ಎಂದರೆ ೬ ಕಿಲೋಮೀಟರ್‌ವರೆಗೆ ಒಂದು ಸ್ಟೇಜ್ ಮಾಡಿರುತ್ತೇವೆ. ಅನಂತರ ಆರೂವರೆ ಕಿಲೋಮೀಟರ್ ಮೇಲೆ ಆದರೆ ಆ ಸಂದರ್ಭದಲ್ಲಿ ಒಂದೂವರೆ ಪಟ್ಟು ಕೊಡಬೇಕಾಗುತ್ತದೆ. ಒಂದು ರೂಪಾಯಿ ಇದ್ದರೆ ಒಂದೂವರೆ ರೂಪಾಯಿ ಕೊಡಬೇಕಾಗುತ್ತದೆ. ಈಗ ಇಡೀ ರಾಜ್ಯ ಮಟ್ಟದಲ್ಲಿ ಅದರ ಬಗ್ಗೆ ವಿಚಾರ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಪರ್ಟಿಕ್ಯುಲರ್ ಆದಂಥ ಕಂಪ್ಲೇಂಟ್ ಬಂದರೆ ಅಲ್ಲಿ ಸರಿಪಡಿಸಲಿಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಇನ್ನು ಬಸ್ ಸ್ಟೇಷನ್‌ನಲ್ಲಿ ಶುಚಿ ಇರುವುದಿಲ್ಲ ಎನ್ನುವ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಈ ಬಗ್ಗೆ ೧೯೮೭-೮೮ನೇ ಸಾಲಿನಲ್ಲಿ ೫೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಎಲ್ಲಾ ಕೆಎಸ್‌ಆರ್‌ಟಿಸಿ ಬಸ್ ಸ್ಟೇಷನ್‌ನಲ್ಲೂ ಮಾಡರನ್ ಟಾಯ್‌ಲೆಟ್ ಪದ್ಧತಿಯನ್ನು ಜಾರಿಗೆ ತರಬೇಕೆಂದು ಈ ಸಂಸ್ಥೆ ತೀರ್ಮಾನ ಮಾಡಿದೆ. ಇನ್ನು ಮಾನ್ಯ ಮೊಯಿಲಿಯವರ ಜಿಲ್ಲೆ ಮತ್ತು ಉತ್ತರ ಕನ್ನಡ ಅಲ್ಲಿ ಟಾರ್ ಹಾಕಿದರೆ ನಿಲ್ಲಲಿಕ್ಕೆ ಸಾಧ್ಯವಿರುವುದಿಲ್ಲ. ಬರತಕ್ಕ ಮಾನ್‌ಸೂನ್ ಒಳಗಡೆ ಎಲ್ಲಾ ಬಸ್ ಸ್ಟೇಷನ್‌ನಲ್ಲೂ ಸಿಮೆಂಟ್ ಕಾಂಕ್ರೀಟ್ ಮಾಡತಕ್ಕದ್ದು ಇದೆ, ಮಾಡುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ಹೊಳೇನರಸೀಪುರಕ್ಕೆ ಹೋಗಿ ಬಂದಾಗ ನೀವು ಬಸ್‌ಸ್ಟ್ಯಾಂಡ್ ಕಟ್ಟುವುದು ಕಡಿಮೆ ಆದರೂ ಪರವಾಯಿಲ್ಲ, ಇರತಕ್ಕ ಬಸ್ ಸ್ಟ್ಯಾಂಡಿಗೆ ಟಾರ್ ಹಾಕತಕ್ಕ ವ್ಯವಸ್ಥೆ ಮಾಡಿ ಎಂದು ಹೇಳಿದ ಮೇಲೆ ಇಡೀ ಕರ್ನಾಟಕದಲ್ಲಿ ಎರಡು ವರ್ಷಗಳ ಅವಧಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸ್ಟೇಷನ್‌ನಲ್ಲಿ ಟಾರ್ ವ್ಯವಸ್ಥೆ ಮಾಡತಕ್ಕದ್ದು ಮಾಡುತ್ತೇವೆ. ಇದಕ್ಕಾಗಿ ೩ ಕೋಟಿ ೨೦ ಲಕ್ಷ ರೂಪಾಯಿಗಳ ಹಣವನ್ನು ಒದಗಿಸಿದ್ದೇವೆ. ಇನ್ನು ಮಾನ್ಯ ಸದಸ್ಯರು ಅನೇಕರು ನಮ್ಮ ಊರಿಗೆ ಬಸ್‌ಸ್ಟೇಷನ್, ಬಸ್ ಷೆಲ್ಟರ್ ಬೇಕೆಂದು ಕೇಳಿದ್ದಾರೆ. ಯಾವ ಶಾಸಕರು ಅವರ ತಾಲ್ಲೂಕಿಗೆ ಬಸ್‌ಸ್ಟೇಷನ್ ಬೇಕೆಂದು ಕೇಳುತ್ತಾರೆ ಅವರು ನಮಗೆ ಮೊದಲು ಜಮೀನನ್ನು ಫ್ರೀಯಾಗಿ ಕೊಡುತ್ತೇವೆ ಎಂದು ಮುಂದೆ ಬಂದರೆ ಆಗ ತಕ್ಷಣ ಬಸ್ ಸ್ಟೇಷನ್ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ. ಒಂದು ವೇಳೆ ನಾವು ಸಂಸ್ಥೆಯಿಂದ ಜಮೀನು ಕೊಂಡುಕೊಂಡು ಕೊಡಬೇಕೆಂದರೆ ಹಂತ ಹಂತವಾಗಿ ಸಂಪನ್ಮೂಲದ ಬಗ್ಗೆ ಯೋಚನೆ ಮಾಡಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇನ್ನು ಮಲ್ಲಪ್ಪನವರು ಸಬರಬನ್ ಸರ್ವಿಸಸ್ ಬಗ್ಗೆ ಹೇಳಿದ್ದಾರೆ, ಇನ್ನು ೧೫ ದಿವಸದಲ್ಲಿ ದಾವಣಗೆರೆಯಲ್ಲಿ ಒಂದು ತಪ್ಪಿದರೆ ಎರಡು ಸಬರ್‌ಬಸ್ ಸರ್ವೀಸ್ ಹಾಕಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವರು ಸಣ್ಣ ಉಳಿತಾಯ ಮಾಡುವ ಸಂಭ್ರಮದಲ್ಲಿ ಹಳ್ಳಿಗಳಲ್ಲಿ ವಿಡೋ ಪೆನ್‌ಷನ್, ಓಲ್ಡ್ ಏಜ್ ಪೆನ್‌ಷನ್ ಕೊಡತಕ್ಕದ್ದು ಏನಿದೆ, ಅದರಲ್ಲಿಯೇ ಮುರಿದುಕೊಂಡು ಕೊಡುವಂಥಾದ್ದು ಇದೆ. ಇವರು ಕೊಡುವಂಥ ಪೆನ್‌ಷನ್‌ನಲ್ಲಿಯೇ ಉಳಿತಾಯಕ್ಕೆ ಮುರಿದುಕೊಳ್ಳುವಂಥಾದ್ದು ಏನಿದೆ ಅದನ್ನು ಇನ್ನು ಮುಂದೆ ಮಾಡಬೇಡಿ ಎಂದು ತಾವು ಸೂಚನೆ ಕೊಡಬೇಕು. ಇನ್ನು ಎರಡನೆಯದಾಗಿ, ಈ ಬಸ್‌ನಲ್ಲಿ ಏನು ಲಾಭ ಬರುತ್ತದೆಯೋ, ಆ ಹಣವನ್ನು

ಈ ರೋಡ್ ಮೆಂಟೆನೆನ್ಸ್‌ಗೆ ಹಾಕಲಿಕ್ಕೆ ಏನಾದರೂ ದೇವೇಗೌಡರು ನಿಮಗೆ ಇದನ್ನು ವಹಿಸಲಿಕ್ಕೆ ಸಾಧ್ಯವೇ, ಇದರ ಬಗ್ಗೆ ತಾವಿಬ್ಬರೂ ಮಾತನಾಡಿಕೊಂಡು ರಸ್ತೆಗಳನ್ನು ಉತ್ತಮಪಡಿಸಿದರೆ ನಮ್ಮ ಕಾರುಗಳಾದರೂ ಉಳಿದುಕೊಳ್ಳುತ್ತವೆ. ಅದನ್ನು ನೀವು ಮಾಡಲಿಕ್ಕೆ ಸಾಧ್ಯವಿದ್ದರೆ ಮಾಡಬೇಕು.

ಶ್ರೀ ವೀರಣ್ಣ.—ನಾವು ಇರುವವರ ಹತ್ತಿರದಿಂದಲೇ ಹಣವನ್ನು ಉಳಿಸುತ್ತೇವೆ. ಕೊಳಚೆ ಪ್ರದೇಶದಲ್ಲಿ ಗುಡಿಸಲು ಕಟ್ಟಿಕೊಂಡಿರುವವರ ಹತ್ತಿರ ಹೋಗಿ ಹಣವನ್ನು ಉಳಿಸಿ ಉಳಿತಾಯದಲ್ಲಿ ಹಣವನ್ನು ತೊಡಗಿಸಿ ಅಂದರೆ ಅವರು ಎಲ್ಲಿಂದ ತರುತ್ತಾರೆ? ವಿಡೋ ಪೆನ್ಷನಲ್ಲಿ ಹಾಗೂ ವೃದ್ಧಾಪ್ಯ ವೇತನದಲ್ಲಿ ಸಣ್ಣ ಉಳಿತಾಯಕ್ಕೆ ಹಣವನ್ನು ಮುರಿದುಕೊಳ್ಳುತ್ತಿದ್ದಾರೆಂದು ಮಾನ್ಯ ವಿರೋಧಪಕ್ಷದ ನಾಯಕಿಯರು ಹೇಳಿದ್ದಾರೆ. ಇದರಲ್ಲಿ ನನ್ನ ಉದ್ದೇಶವೇನೆಂದರೆ ವಿಧವಾ ವೇತನ ಹಾಗೂ ವೃದ್ಧಾಪ್ಯ ವೇತನವನ್ನು ಕೊಡಿಸುವುದರಲ್ಲಿ ಮಧ್ಯವರ್ತಿಗಳ ಕಾಟ ಬಹಳ ಇದೆ. ಪೋಸ್ಟ್ ಆಫೀಸಿಗೆ ಮನಿಯಾರ್ಡರ್ ಬಂದು ೩-೪ ತಿಂಗಳಾದರೂ ಅವರಿಗೆ ಹಣವನ್ನು ಕೊಟ್ಟಿಲ್ಲದೇ ಇರುವುದನ್ನು ನಾನು ಪ್ರವಾಸ ಹೋದಂತಹ ಸಮಯದಲ್ಲಿ ಕಿಪಿಯಾರೆ ಕೇಳಿದ್ದೇನೆ. ಆದ್ದರಿಂದ ನಾನು ಅವರಿಗೆ ಏನು ಸೂಚನೆ ಮಾಡಿದ್ದೇನೆಂದರೆ, ವಿಧವಾ ವೇತನ ತೆಗೆದುಕೊಳ್ಳುವವರು ಹಾಗೂ ವೃದ್ಧಾಪ್ಯ ವೇತನವನ್ನು ತೆಗೆದುಕೊಳ್ಳುವವರು ಯಾರು ಇದ್ದಾರೆ. ಅವರು ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿರುವ ಯಾವುದಾದರೊಂದು ಪೋಸ್ಟಾಫೀಸಿನಲ್ಲಿ ಅಕೌಂಟ್‌ನ್ನು ಪ್ರಾರಂಭ ಮಾಡಿದರೆ, ಆಗ ಅವರ ಪೆನ್ಷನ್ ನೇರವಾಗಿ ಅವರ ಅಕೌಂಟ್‌ಗೆ ಜಮಾ ಆಗುತ್ತದೆ. ನಂತರ ಆ ಹಣವನ್ನು ಅವರು ಯಾವಾಗ ಬೇಕಾದರೂ ಬಂದು ತೆಗೆದುಕೊಂಡು ಹೋಗಬಹುದು ಎಂದು ಸಲಹೆ ಮಾಡಿದ್ದೇನೆ. ಮತ್ತೆ ವೃದ್ಧಾಪ್ಯ ವೇತನ ಹಾಗೂ ವಿಧವಾ ವೇತನದಲ್ಲಿ ಸಣ್ಣ ಉಳಿತಾಯಕ್ಕಾಗಿ ಹಣವನ್ನು ಮುರಿದುಕೊಳ್ಳುತ್ತಿದ್ದಾರೆಂದು ಏನು ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದ್ದಾರೆ. ಅದರಂತೆ ಅದರಲ್ಲಿ ಹಣವನ್ನು ಉಳಿತಾಯದಲ್ಲಿ ತೊಡಗಿಸುವುದು ಬೇಡ ಎಂಬುದಾಗಿ ನಾನು ಸಂಬಂಧಪಟ್ಟವರಿಗೆ ಸೂಚನೆ ಕೊಡುತ್ತೇನೆ. ಮತ್ತೆ ರಸ್ತೆಯ ಬಗ್ಗೆ ಹೇಳಿದ್ದಾರೆ. ಆ ವಿಚಾರದಲ್ಲಿ ನಾನು ಮಾನ್ಯ ದೇವೇಗೌಡರ ಹತ್ತಿರ ಮಾತನಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸಣ್ಣ ಉಳಿತಾಯದ ಬಗ್ಗೆ ಒತ್ತಾಯ ಮಾಡುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಬಗ್ಗೆ ನಮಗೆ ಅನೇಕ ನಿದರ್ಶನಗಳು ಬಂದಿದೆ. ಪತ್ರಗಳೂ ಬಂದಿವೆ. ಶಾಲಾ ಉಪಾಧ್ಯಾಯರಿಗೆ ಇಂತಿಷ್ಟು ಉಳಿತಾಯದಲ್ಲಿ ಹಣವನ್ನು ತೊಡಗಿಸಬೇಕೆಂದು ಟಾರ್ಗೆಟ್‌ನ್ನು ನಿಗದಿ ಮಾಡಿದ್ದಾರೆ. ಅವರು ಏನು ಮಾಡುತ್ತಿದ್ದಾರೆಂದರೆ, ಶಾಲಾ ಮಕ್ಕಳ ಮೂಲಕ ಅವರ ತಂದೆ ತಾಯಿಂಗಳಿಗೆ ಹೇಳಿ ಅವರಿಂದ ಒತ್ತಾಯಪೂರ್ವಕವಾಗಿ ವಸೂಲು ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟಬೇಕು. ಎರಡನೆಯದು ಅದೇನೆಂದರೆ, ನೀವು ಸಾರಿಗೆ ಸಂಸ್ಥೆಗೆ ಏನು ಸಾಲವನ್ನು ಕೊಟ್ಟಿದ್ದೀರಿ, ಅದನ್ನು ಈಕ್ವಿಟಿ ಷೇರನ್ನಾಗಿ ಕನ್ವರ್ಟ್ ಮಾಡಿದರೆ ಅದರಿಂದ ಆ ಸಂಸ್ಥೆಗೆ ಬಹಳ ಅನುಕೂಲವಾಗುತ್ತದೆ. ಅದರ ಬಗ್ಗೆ ತಾವು ಸಚಿವ ಸಂಪುಟದ ಬಗ್ಗೆ ಪ್ರಸ್ತಾಪ ಮಾಡಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ? ಮೂರನೆಯ ಪ್ರಶ್ನೆ ಬ್ಯಾಲೆಟ್ ಆಫ್ ರೆಕಗ್ನಿಶನ್ ಬಗ್ಗೆ ಚುನಾವಣೆಯ ಏಪ್ರಿಲ್‌ನಲ್ಲಿ ಮಾಡುತ್ತೇವೆ. ಅಥವಾ ಅದು ಆಗದಿದ್ದರೆ ಮೇ ತಿಂಗಳಲ್ಲಿ ಮಾಡಿಯೇ ಮಾಡುತ್ತೇವೆಂದು ಹೇಳಿದ್ದಾರೆ. ಇದರಿಂದ ನೀವು ಮಾತಿಗೆ ತಪ್ಪಿಸಿಕೊಂಡ ಹಾಗೆ ಆಗುತ್ತದೆ, ಏಪ್ರಿಲ್‌ನಲ್ಲೇ ಮಾಡಿದರೆ ಎಲ್ಲರಿಗೂ ಸಂತೋಷವಾಗುತ್ತೆ. ಅದನ್ನು ಬಿಟ್ಟು ಮೇ ತಿಂಗಳಲ್ಲೂ ಆಗುವುದಿಲ್ಲ ಜೂನ್ ತಿಂಗಳಲ್ಲಿ ಎಂದು ಹೇಳಬಹುದು. ಇದರ ಬಗ್ಗೆ ನಿಮ್ಮ ಲಾ ಆಫೀಸರ್ಸ್ ಅಭಿಪ್ರಾಯ ಕೂಡ ಬಂದಿದೆ. ಚುನಾವಣೆ ಮಾಡುವುದಕ್ಕೆ ಶೊಂದರೆ ಏನೂ ಇಲ್ಲ. ಒಂದೇ ತಿಂಗಳಲ್ಲಿ ೩ ರಾಜ್ಯಗಳಲ್ಲಿ ಚುನಾವಣೆ ಮಾಡಿದ್ದಾರೆ. ಏಪ್ರಿಲ್‌ನಲ್ಲೇ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾಲ್ಕನೆಯದಾಗಿ ಡಿಸಿಪ್ಲಿನರಿ ಪ್ರೊಸಿಡಿಂಗ್ಸ್ ಬಗ್ಗೆ ಮಾನ್ಯ ಮಂತ್ರಿಗಳು ಓದಿದ್ದಾರೆ. ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದರಲ್ಲಿ ತಜ್ಞರ ದರ್ಬಾರು ಬೇಡ. ಆ ಬಗ್ಗೆ ನಾನೊಂದು ಪ್ರಶ್ನೆಯನ್ನು ತಮಗೆ ಕೇಳಿದ್ದೇನೆ. ಇನ್ನೂ ಉತ್ತರ ಬಂದಿಲ್ಲ. ಕೊನೆಗೆ ಕೇಸುಗಳು ಕೋರ್ಟಿಗೆ ಹೋದಾಗ, ಹೋದಂತಹವು ಕೆ.ಎಸ್.ಆರ್.ಟಿ.ಸಿ.ಯ ವಿರುದ್ಧವೇ ತೀರ್ಮಾನವಾಗುತ್ತವೆ. ಆಗ ಅವರಿಗೆ ಹಿಂದಿನ ಸಂಬಳವನ್ನು ಕಟ್ಟಿಕೊಡಬೇಕು. ಅದರ

ಮೇಲೆ ಲಾಯರ್ ಫೀಸು ಎಷ್ಟಾಗುತ್ತದೆಯೋ ಅದನ್ನೂ ಕೂಡ ಕಟ್ಟಿಕೊಡಬೇಕು. ಆದ್ದರಿಂದ ಸುಮ್ಮಸುಮ್ಮನೆ ಕೇಸನ್ನು ಹಾಕತಕ್ಕಂತಹದ್ದು ಸರಿಯಾದುದಲ್ಲ. ಒಂದು ವೇಳೆ ಅವರು ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ನಾನು ಬೇಡ ಎಂದು ಹೇಳುವುದಿಲ್ಲ. ಆದ್ದರಿಂದ ಅನವಶ್ಯಕವಾಗಿ ಹಾಕಿರತಕ್ಕಂತಹ ಕೇಸುಗಳನ್ನು ಪುನರ್ವಿಮರ್ಶೆ ಮಾಡಿ ಆದಷ್ಟು ಬೇಗ ತೀರ್ಮಾನ ಮಾಡಿ ಪರಿಹಾರ ಮಾಡಬೇಕು. ಅದೇ ರೀತಿ ನಿಮ್ಮ ಸಂಸ್ಥೆಯ ಕೆಲವು ಅಧಿಕಾರಿಗಳ ಬಗ್ಗೆ ಮಾತನಾಡಿದ್ದೇನೆ. ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವೀರಣ್ಣ.—ಉಪಾಧ್ಯಾಯರ ಬಗ್ಗೆ ಹೇಳಿದ್ದಾರೆ. ಮಕ್ಕಳಲ್ಲಿ ಉಳಿತಾಯ ಮಾಡುವ ಮನೋಭಾವ ಬೆಳೆಸಬೇಕೆಂಬುದೇ ಇದರ ಉದ್ದೇಶ ಆದರೂ ಒತ್ತಾಯ ಮಾಡಬಾರದು ಎಂಬುದಾಗಿ ನಾನು ಸಂಭದಪಟ್ಟವರಿಗೆ ಸೂಚನೆ ಕೊಡುತ್ತೇನೆ. ಲೋನ್‌ನ್ನು ಈಕ್ವಿಟಿ ಷೇರನ್ನಾಗಿ ಪರಿವರ್ತಿಸುವ ಬಗ್ಗೆ ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಅಧಿಕಾರಿಗಳ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಬಾಡಿ ಬಿಲ್ಡಿಂಗ್‌ನ್ನು ಖಾಸಗಿಯವರಿಗೆ ಕೊಡಬೇಡಿ ನೀವೇ ಮಾಡಿ ಎಂದು ಹೇಳಿದ್ದೆ.

ಶ್ರೀ ವೀರಣ್ಣ.—ಅದರ ಬಗ್ಗೆಯೂ ಹೇಳಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಇಂಟರ್‌ಸ್ಟೇಟ್ ಪರ್ಮಿಟ್‌ನ್ನು ತೆಗೆದುಕೊಳ್ಳುವ ವಿಚಾರದಲ್ಲಿ ರೆಸಿಪ್ರೋಕಲ್ ಆಗಿ ಇರಬೇಕು. ಆಂಧ್ರ, ತಮಿಳುನಾಡಿನವರು ನಮ್ಮಲ್ಲಿ ಎಷ್ಟು ಮೈಲೇಜ್ ಓಡಿಸುತ್ತಿದ್ದಾರೋ ಅಷ್ಟೇ ನಾವು ಕೂಡ ಅವರ ರಾಜ್ಯದಲ್ಲಿ ನಮ್ಮ ಬಸ್ಸುಗಳು ಓಡಿಸಬೇಕು. ಇದರಲ್ಲಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ. ಇದನು ಸರಿಪಡಿಸಬೇಕು. ಸ್ಟೇಜ್ ಹಾಗೂ ಸಬ್ ಸ್ಟೇಜ್ ಬಗ್ಗೆ ದಯಮಾಡಿ ಇವತ್ತೇ ತೀರ್ಮಾನ ಕೈಗೊಳ್ಳಬೇಕು. ಆಮೇಲೆ ನಾವು ತಾಲ್ಲೂಕು ಆಫೀಸಿಗೆ ಹೋದಾಗಲೆಲ್ಲಾ ಶ್ರೀ ವೀರಣ್ಣನವರನ್ನು ಜ್ಞಾಪಕ ಮಾಡಿಕೊಳ್ಳಬೇಕಾಗುತ್ತದೆ. ಯಾವುದೇ ಕೆಲಸಕ್ಕೆ ಹೋದರೂ ಸಣ್ಣ ಉಳಿತಾಯ ಇಲ್ಲದೆ ಯಾವ ಕೆಲಸವೂ ಆಗುವುದಿಲ್ಲ, ಜನರನ್ನು ಇದಕ್ಕಾಗಿ ಬಲಾತ್ಕಾರ ಮಾಡುತ್ತಿದ್ದಾರೆ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಈ ಇಂಟರ್‌ಸ್ಟೇಟ್ ಬಗ್ಗೆ ಮಾನ್ಯ ವೆಂಕಟರಾಮಯ್ಯನವರು ಹೇಳಿದ್ದಾರೆ. ಈ ಸಾರಿಗೆ ಖಾತೆ ವಹಿಸಿಕೊಂಡ ತಕ್ಷಣ ಆಂಧ್ರ ಪ್ರದೇಶದ ಸಾರಿಗೆ ಸಚಿವರಾದ ಶ್ರೀ ಸತ್ಯನಾರಾಯಣರಾವ್ ಅವರನ್ನು ಕರೆಯಿಸಿ ಸಭೆ ಮಾಡಿ ಮಾತನಾಡಿದ್ದೇನೆ. ಇದರ ಬಗ್ಗೆ ಎರಡೂ ರಾಜ್ಯಗಳವರು ರೆಸಿಪ್ರೋಕಲ್ ಆಗಿ ಅಗ್ರಿಮೆಂಟಿಗೆ ಸಹಿ ಮಾಡಬೇಕಾಗುತ್ತದೆ. ಇದನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮ್ಮ ಕೆ.ಎಸ್.ಆರ್. ಟಿ.ಸಿ. ಮ್ಯಾನೇಜಿಂಗ್ ಡೈರೆಕ್ಟರ್‌ರವರು ವಿದೇಶ ಪ್ರಯಾಣ ಮಾಡುವುದಕ್ಕೆ ಹೋಗಿದ್ದರು. ಲೈಲ್ಯಾಂಡ್ ಕಂಪನಿಯ ಜೊತೆ ಬಾಡಿ ಬಿಲ್ಡಿಂಗ್ ಯೂನಿಟ್ ಬಗ್ಗೆ ಮಾಡಿಕೊಂಡಿದ್ದ ಒಪ್ಪಂದ ಏನು ಆಯಿತು? ಇದರ ಬಗ್ಗೆ ವಿವರ ಬೇಕು ಇಲ್ಲಿರುವಂಥ ಕೆ. ಎಸ್. ಆರ್. ಟಿ. ಸಿ. ಬಾಡಿ ಬಿಲ್ಡಿಂಗ್ ಯೂನಿಟ್ ಏನು ಇದೆ, ಇದರ ಬಗ್ಗೆ ಇನ್ನೂ ಲಾಭದಾಯಕವಾಗಿ ಇದನ್ನು ದೊಡ್ಡಪ್ರಮಾಣದಲ್ಲಿ ಮುಂದುವರಿಸುತ್ತೀರಾ? ಇಲ್ಲದೇ ಹೋದರೆ ಇದನ್ನು ಈಗಿರುವ ಸ್ಥಿತಿಯಲ್ಲಿ ಇಡುತ್ತೀರಾ? ಅಥವಾ ಮುಚ್ಚುವಂಥ ಯೋಚನೆ ಏನಾದರೂ ಇದೆಯೇ ಕೆ. ಎಸ್. ಆರ್. ಟಿ. ಸಿ. ಯಲ್ಲಿ ಕಾರುಗಳನ್ನು ಕೊಡುವ ಬಗ್ಗೆ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಾ ಹೆಚ್ಚಿನ ವಿವರಕ್ಕೆ ನಾನು ಹೋಗುವುದಿಲ್ಲ. ಇದನ್ನು ಪ್ರಸ್ತಾಪ ಮಾಡುವಂಥ ಉದ್ದೇಶ ಆ ಅಧಿಕಾರಿಗಳಿಗೆ ಒಂದು ಕಾರನ್ನು ಕೊಡುವಂಥ ವ್ಯವಸ್ಥೆ ಮಾಡುವ ಬದಲು ತಿಂಗಳಿಗೆ ಅವರಿಗೆ ಇಷ್ಟು ಎಂದು ಕೊಟ್ಟುಬಿಟ್ಟರೆ ಎಕ್ಸಿಕ್ಯೂಟಿವ್ ಲೈನ್‌ನಲ್ಲಿ ಹೊರಗಡೆ ಹೋಗುತ್ತಿರತಕ್ಕಂಥ ಅಧಿಕಾರಿಗಳಿಗೆ ಅಂಥವರಿಗೆ ಅನುಕೂಲವಾಗುತ್ತದೆ ಮತ್ತು ಇದು ಲಾಭದಾಯಕವಾಗಿಯೂ ಕೂಡಾ ನಡೆಯುತ್ತದೆ ಎಂದು ನಾನು ಸಲಹೆಯನ್ನು ಮಾಡುತ್ತೇನೆ.

ಶ್ರೀ ವೀರಣ್ಣ.—ಮ್ಯಾನೇಜಿಂಗ್ ಡೈರೆಕ್ಟರ್‌ರವರು ಅಶೋಕಾ ಲೈಲ್ಯಾಂಡ್ ಸಂಸ್ಥೆಯವರೊಡನೆ ಚರ್ಚೆ ಮಾಡಿಕೊಂಡು ಬಂದಿದ್ದಾರೆ. ಈ ಇಂಟಿಗ್ರಲ್ ಬಸಸ್ ಎಂದು ಏನು ಹೇಳುತ್ತೇನೆ

ಇದರ ಬಗ್ಗೆ ಕೆಂಗೇರಿಯಲ್ಲಿ ಜಮೀನನ್ನು ತೆಗೆದುಕೊಂಡಿದ್ದೇವೆ. ಅಲ್ಲಿ ಇಂಟಿಗ್ರೇಟ್ ಕೋಚ್ ಬಿಲ್ಡ್ ಮಾಡುತ್ತೇವೆ. ಪ್ರತಿ ವರ್ಷ ೧೫೦ ಬಸ್‌ನ್ನು ಮಾಡಬೇಕು, ಅದನ್ನು ಮಾಡುತ್ತೇವೆ. ಇನ್ನು ಕಾರುಗಳ ಬಗ್ಗೆ ಹೇಳಿದ್ದಾರೆ, ಅದನ್ನು ನಾನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಎನ್. ಎಸ್. ಖೇಡ್.—ಈ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಮತ್ತು ಅಶಿಕ್ಷಿತ ಜನರು ಇರತಕ್ಕಂಥ ಜಿಲ್ಲೆಗಳಾದ ಬಿಜಾಪುರ, ಬೆಳಗಾಂ ಇಲ್ಲಿ ಸತತವಾಗಿ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಲಾಭ ಮಾಡುತ್ತಾ ಗೌರವವನ್ನು ತಂದಿವೆ ಆದರೆ ಬೆಂಗಳೂರು ಮತ್ತು ಸುತ್ತಮುತ್ತ ಇರತಕ್ಕಂಥ ಅತ್ಯಂತ ಸುಶಿಕ್ಷಿತ ಶ್ರೀಮಂತ ಜಿಲ್ಲೆಗಳಲ್ಲಿ ಯಾವ ಪರಿಸ್ಥಿತಿ ಎಂದು ಗೊತ್ತಿದೆ. ಈ ಒಂದು ಪ್ರಯೋಜನ ಅಲ್ಲಿ ಇದ್ದರೂ ಕೂಡಾ ನಮ್ಮ ಮಂತ್ರಿಗಳು ಆ ಭಾಗಕ್ಕಾಗಿ ಏನಾದರೂ ಸ್ಪೆಷಲ್ ಸೌಲಭ್ಯಗಳನ್ನು ಬಸ್‌ಗಳನ್ನು ಹೆಚ್ಚಿಗೆ ಕೊಡತಕ್ಕಂಥ ಮತ್ತು ಅಲ್ಲಿರತಕ್ಕಂಥ ಬಸ್ ಸ್ಟಾಂಡನ್ನು ಕಟ್ಟಲಿಕ್ಕೆ ವ್ಯವಸ್ಥೆ ಮಾಡತಕ್ಕಂಥದ್ದು ಮಾಡಿ ಇದರ ಬಗ್ಗೆ ಒಂದು ಮಾತನ್ನು ಹೇಳಿದ್ದರೆ ನನಗೆ ಬಹಳ ಸಂತೋಷವಾಗುತ್ತಿತ್ತು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಸಂಸ್ಥೆಗಳ ನೀತಿ ಏನು ಇದೆ ಎಂದು ಹೇಳಿದರೆ ಯಾವ ಜಿಲ್ಲೆಯಲ್ಲಿ ನೂರಕ್ಕೆ ನೂರರಷ್ಟು ರಾಷ್ಟ್ರೀಕರಣ ಆಗಿರತಕ್ಕಂಥ ಜಿಲ್ಲೆಗಳಿಗೆ ಅಲ್ಲಿ ಆದ್ಯತೆಯ ಮೇಲೆ ಬಸ್‌ಸ್ಟಾಂಡನ್ನು, ಬಸ್‌ನ್ನು ಕೊಡತಕ್ಕಂಥದ್ದು ಇದೆ. ಬಿಜಾಪುರ ಜಿಲ್ಲೆಗೆ ನಾನು ಮೊಟ್ಟ ಮೊದಲನೆಯದಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಬಿಜಾಪುರ ಜಿಲ್ಲೆ ಮೊದಲಿನಿಂದಲೂ ಲಾಭದಾಯಕವಾಗಿ ನಡೆಯುತ್ತಿದೆ. ಮಾನ್ಯ ಸದಸ್ಯರು ಬಸ್‌ಸ್ಟಾಂಡ್ ಎಲ್ಲಿ ಇಲ್ಲ ಎಂದು ಹೇಳಿದರೆ ಅಲ್ಲಿ ಬಸ್ ಸ್ಟಾಂಡನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

> "೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೧೯, ೨೪, ೨೬ ಹಾಗೂ ೨೪ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ-19 ಸಣ್ಣ ಉಳಿತಾಯಗಳು

> "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೫೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ-24 ವಾಹನ ತೆರಿಗೆ

> "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೧೬,೦೬,೦೦೦ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ-26 ಜೈಲುಗಳು

“ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೭೦,೨೮,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ-28 ರಸ್ತೆಸಾರಿಗೆ

“ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೨೫,೪೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫,೦೭,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು”

ಪ್ರಕಟಣೆ

ಅಧ್ಯಕ್ಷರು.—ಈಗ ಒಂದು ಪ್ರಕಟಣೆ ಇದೆ.

ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಈ ದಿನ ಮಧ್ಯಾಹ್ನ ೩-೩೦ ಗಂಟೆಗೆ ಸಭೆ ಸೇರಿ ಈ ಕೆಳಕಂಡಂತೆ ಸದನದ ಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

೨೬-೩-೧೯೮೭	ಬೆಳಿಗ್ಗೆ ೮-೩೦	ಅ)	ಮುಖ್ಯ ಮಂತ್ರಿಯವರಿಗೆ ಸಂಬಂಧಿಸಿದ ಅನುದಾನಗಳ ಮೇಲಿನ ಬೇಡಿಕೆ ಬಗ್ಗೆ ಚರ್ಚೆ ನಡೆಸುವುದು.
	ಬೆಳಿಗ್ಗೆ ೧೦-೩೦ ಗಂಟೆಗೆ	ಆ)	ಚರ್ಚೆಗೆ ಮುಖ್ಯ ಮಂತ್ರಿಯವರಿಂದ ಉತ್ತರ
		ಇ)	ಅನುಪೂರಕ ಅನುದಾನಗಳ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಉತ್ತರ
	ಮಧ್ಯಾಹ್ನ ೩-೦೦ ಗಂಟೆಗೆ		ಶಾಸನ ರಚನೆ-ಧನವಿನಿಯೋಗ ಮತ್ತು ವಿತ್ತೀಯ ವಿಧೇಯಕಗಳನ್ನು ಮಂಡಿಸುವುದು ಹಾಗೂ ಅಂಗೀಕರಿಸುವುದು.
೨೭-೩-೧೯೮೭	...		ಶಾಸನ ರಚನೆ
		ಅ)	ವಿತ್ತೀಯ ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.
		ಆ)	ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಹಿಂದಿರುಗಿದ ವಿಧೇಯಕದ ಮರುಪರಿಶೀಲನೆ,
		ಇ)	ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಹಿಂದಿರುಗಿದ ವಿಧೇಯಕದ ಮರುಪರಿಶೀಲನೆ